ಅನಿ ಬೆಸೆಂಟ್

(ಆತ್ಮ ಚರಿತ್ರೆ - ಭಾಷಾಂತರ)

ಭಾಗ ೧

ಪ್ರೊ. ಎಸ್. [illegible].

[illegible] - [illegible].
1970.

ಭಾಗ - ೧

ಆನಿ ಬೆಸೆಂಟ್

(ಆತ್ಮ ಚರಿತೆ)

[ಭಾಷಾಂತರ]

ಎ. ಎಸ್. ಮೂರ್ತಿ

1970.

ಮೊದಲ ಭಾಗ.

(ಎಲ್ಲ ಹಕ್ಕುಗಳು ಕಾಯ್ದಿರಿಸಲ್ಪಟ್ಟಿವೆ.)

ವೆನ್ಕೂವರ್, ಬ್ರಿಟಿಷ್ ಕೊಲಂಬಿಯಾ,
ಕೆ ನ ಡಾ.

Donated on 4-11-1988
at Bangalore by the author
[illegible]

ಅನಿ ಬೆಸೆಂಟ್

ಆತ್ಮ ಚರಿತ್ರೆ

ಭಾಗ ೧

(ಈ ಭಾಷಾಂತರಕಾರನ ಮತ್ತು ಜಾರ್ಜ್ ಅರುಂಡೇಲನ
ಸತಿವಿಯೋಗ ಮುನ್ನುಡಿಗಳೊಡನೆ.)

[ಅನಿ ಬೆಸೆಂಟ್ ಇವರ ಬರಹಗಳ ಆಧಾರ
ದಿಂದ ಭಾಷಾಂತರ ಹಾಗೂ ವಿಚಾರಸಂಗ್ರಹ]

ಶ್ರೀ. ಮಾ. ಮತ್ತಣ್ಣ.

ಎಲ್ಲ ಹಕ್ಕುಗಳು ಕಾಯ್ದಿಟ್ಟಿವೆ.

ಹಸ್ತಪ್ರತಿ ಬರಹ - 1970

ಮೊದಲ ಮಾತು.

ಈ ಕೃತಿಯನ್ನು ನಾನು 1969-70 ರ ಕಾಲದಲ್ಲಿ ಕೆನಡಾದಲ್ಲಿದ್ದೆ. ನನ್ನ ಬಿಡುವಿನಲ್ಲಿ ಇರುತ್ತ ಬರೆದು ಇದರ ಹಸ್ತಪ್ರತಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಕಳುಹಿಸಿಕೊಟ್ಟೆನು. "ದಯವಿಟ್ಟು ಇದನ್ನು ಮುದ್ರಿಸಿರಿ" ಎಂದು ಕೇಳಿಕೊಂಡೆನು. ಅವರಾದರೋ ನನ್ನ ಶ್ರಮವನ್ನು ಪ್ರಶಂಸಿಸಿದರು, ಅತೀ ಬೇಗ ಮುದ್ರಿಸುತ್ತೇವೆ, ಎಂದೂ ಹೇಳಿದರು. ಅಲ್ಲಿಂದ ನಂತರ ಹದಿನೆಂಟು ವರ್ಷಗಳೇ ಕಳೆದು ಹೋದುವು. ಆ ಹಸ್ತಪ್ರತಿಯೆಲ್ಲಿದೆಯೋ ಏನಾಯಿತೋ ತಿಳಿಯೆನು. ಮತ್ತೆ ಅದನ್ನು ಹುಡುಕಿಸಿದೆನು; ಅದು ಪತ್ತೆಯಾಗಲಿಲ್ಲ.

ಇತ್ತೀಚೆಗೆ 1986 ರಲ್ಲಿ ನನ್ನಲ್ಲಿದ್ದ ಹಳೆ ಕರಡು ಪ್ರತಿಯನ್ನು ನಾನು ಕೈಗೆತ್ತಿಕೊಂಡು ನೋಡಿದೆನು. ಅದನ್ನೇ ಬೆಳೆಸಿದೆನು. ಎಲ್ಲಾ ಸೇರಿ ಈ ಗಾತ್ರಕ್ಕೆ ಬಂದಿದೆ. ಇದರಲ್ಲಿ ಏನೇನು ಹೇಳಲಾಗಿದೆಯೆಂದಿಲ್ಲ ಮುಂದಿನ ಪುಟಗಳಲ್ಲಿ ಹೇಗೂ ತಿಳಿಯುತ್ತದೆ.

ಇಲ್ಲಿ ನಾನು ಒಂದು ವಿಷಯವನ್ನು ಮತ್ತೊಮ್ಮೆ ಎಂಬಂತೆ ಹೇಳುತ್ತೇನೆ. ಆನಿ ಬಿಸೆಂಟ್ ಇವಳು ಒಬ್ಬ ಅಸಾಮಾನ್ಯ ವ್ಯಕ್ತಿ! ನಮ್ಮ ಇಂದಿನ 'ಮದರ್' ತೆರೆಸಾ ಇವಳು ಹೇಗೋ ಹಾಗೆಯೇ ಅಂದು ಬೇರೊಂದು ಕಾರ್ಯಕ್ಷೇತ್ರದಲ್ಲಿ 'ಮದರ್' ಬಿಸೆಂಟ್ ಇವಳು ಪ್ರಖ್ಯಾತಳಾದಳು. ಈ ಇಬ್ಬರು ಮಹಿಳೆಯರೂ ಅಂತರ್ರಾಷ್ಟ್ರೀಯ ಸೀಮಾದಾರಿಣಿಯರೂ ಹೌದು!

ನಮ್ಮ ಜನಕ್ಕೆ, ಅದೇನೋ ಹಿಂದುಸ್ಥಾನದವರು ನಾವೇ ಎಂಬಂತೆ, ಒಂದು ಬಗೆಯ ದೇಶಾಭಿಮಾನ! ಆದರೆ ನಮ್ಮೊಳಗಿನ ಮತ ಭೇದ, ಜಾತಿ ಭೇದ, ವರ್ಗ ಭೇದವೆಂದಿಲ್ಲ ಬಗೆಯ ವ್ಯಾಧಿಯೊಂದು ಬೇರೆ ಇದ್ದೇ ಇದೆ. ಆದರೆ ಆ ಭೇದಗಳನ್ನು ಕಾರ್ಯತಃ ಒಡೆದು ಹಾಕಲಿಕ್ಕೆ ಯತ್ನಿಸಿದವರು ಈ ಎರಡು ಯುರೋಪಿಯನ್ ಮಹಿಳೆಯರು. ಆದರೆ ಅವರ ಕಾರ್ಯಕ್ಷೇತ್ರ ಮತ್ತು ಅವರು ಇಲ್ಲಿ ತೋರ್ಪಡಿಸಿಕೊಂಡ ಕಾಲವಾದರೋ ಬೇರೆ; ಎಪ್ಪತ್ತು ವರ್ಷಗಳ ಅಂತರದಲ್ಲಿ!

ನಮ್ಮ ದೇಶದ ಜನಕ್ಕೆ ಒಂದುನೂರು ವರ್ಷಗಳಿಗೆ ಹಿಂದೆ ದೇಶೀಯ ಮಹಾತ್ಮರು ಬೇಕಾಗಿದ್ದರು. ಆನಿ ಬಿಸೆಂಟ್ ಇವಳಂಥಾ ಒಬ್ಬ ವಿದೇಶೀಯ ಮಹಿಳೆಯಲ್ಲ, ಎಂಬಂತೆ ಅಂದಿನ ಪರಿಸ್ಥಿತಿ! ಆಗ ಬಂದವರು ಗಾಂಧೀಜಿ. ತಮ್ಮ ಉಡುಪನ್ನು ಜನಕ್ಕೆ ಬೇಕಾದಂತೆ (ಆನಿಯನ್ನು ಅನುಸರಿಸಿ) ಮಾರ್ಪಡಿಸಿಕೊಂಡರು. ಆದರೆ ಗಾಂಧಿ ಯಾರು? ಉತ್ತರ: ಆನಿಯ ಶಿಷ್ಯನು. ಅದನ್ನವರು ವ್ಯಕ್ತವಾಗಿ ಅಲ್ಲದಿದ್ದರೂ ಅವ್ಯಕ್ತವಾಗಿಯಾದರೂ ಹೇಳಿದ್ದಾರೆ, ಯುವಕನಾಗಿದ್ದಾಗಲೇ ಗಾಂಧಿ ಆನಿಯನ್ನು ಅನುಸರಿಸಿದ್ದಾರೆ. ರಾಜ

ಭಾರತದಲ್ಲಿ ಸತ್ಯ, ಅಹಿಂಸೆ, ಸತ್ಯಾಗ್ರಹ, ರಾಷ್ಟ್ರೀಯ ವಿದ್ಯೆ, ಅಸ್ಪೃಶ್ಯತೆಯ ನಿವಾರಣೆ, ವಿದೇಶೀಯ ವಸ್ತು ಬಹಿಷ್ಕಾರ, ಸ್ವರಾಜ್ಯಕ್ಕೆ ಹೋರಾಟ - ಇವೇ ಎನಿಸಿದ ಅಂದಿನ "ಗಾಂಧಿಗಳು" ಹೇಳಿಕೊಂಡರೋ ಅದನ್ನೆಲ್ಲ ಆನಿಯು ಅವರಿಗಿಂತ ಮೂವತ್ತು ವರ್ಷಗಳ ಹಿಂದೆಯೇ, ಇಂಗ್ಲೆಂಡಿನಲ್ಲಿದ್ದಾಗಲೇ 1880ರ ದಶಕದಲ್ಲಿ ಚಾರ್ಲ್ಸ್ ಬ್ರಾಡ್ಲೋ ಎಂಬ ಮತ ಕ್ರಾಂತಿವೀರ ಪ್ರಬಲ ಹೋರಾಟಗಾರನೊಡನೆ ಸೇರಿ ಬಹಿರಂಗವಾಗಿ ಸಾಧಿಸಿದ್ದನ್ನೇ ಈ ದೇಶಕ್ಕೆ ಬಂದನಂತರವೂ ಮುಂದುವರಿಸಿದಳು!

ಆನಿಯ ಈ "ಆತ್ಮ ಚರಿತ್ರೆ"ಯು ಸಂಪೂರ್ಣವಲ್ಲ, ಇದರಲ್ಲಿ ಅವಳ ಮೊದಲ ನಲವತ್ತು ವರ್ಷಗಳ ಜೀವನ, ಅಕ್ಷರಶಃ ವೈಯಕ್ತಿಕವಾಗಿ, ಹೋರಾಟದ ಜೀವನದ ಬಗೆ, ವಿವರಣಾತ್ಮಕವಾಗಿ ಹೇಳಲಾಗಿದೆ. ಅನಂತರದ ಅವಳ ವಿವಿಧ ಚಟುವಟಿಕೆಗಳ ಬಗೆ ಹೇಳಲಾದ ಗ್ರಂಥಗಳಲ್ಲಿ Nethercot ಇವನ ಎರಡು ಸಂಪುಟದ ಕೃತಿಗಳು ತುಂಬಾ ಚೆನ್ನಾಗಿ ಇವೆ. ಅವುಗಳನ್ನು ಯಾರಾದರೂ ಕನ್ನಡಕ್ಕೆ ಇಳಿಸಿದರೆ ನಿಜಕ್ಕೂ ಉತ್ತಮವಿದೆ.

ಆ ಕಾಲದಲ್ಲಿ ಸ್ಥಳದಿಂದ ಸ್ಥಳಕ್ಕೆ, ದೇಶದಿಂದ ದೇಶಕ್ಕೆ, ಪ್ರಯಾಣಕ್ಕೆ ಕಷ್ಟವಿದ್ದಾಗ, ತುಂಬಾ ಸಮಯ ಹಿಡಿಯುತ್ತಿದ್ದಾಗ, ಆನಿ ಬೆಸೆಂಟ್ ಇವಳು ತನ್ನ ೬೦ರಿಂದ ೮೫ ವರ್ಷಗಳ ಆ ಪ್ರಾಯದ ವೃದ್ಧಿಯಲ್ಲೂ ಕಾರ್ಯಾರ್ಥವಾಗಿ ಪ್ರತಿ ವರ್ಷವೂ ಅಂತರ್ರಾಷ್ಟ್ರೀಯ ಪ್ರವಾಸವನ್ನು ಕೈಗೊಳ್ಳುತ್ತಾ ಅಗಾಧ ಸಾಧನೆಯನ್ನು ಸಾಧಿಸಿದ ವೀರಮಹಿಳೆಯೇ ಸರಿ! ನಮ್ಮ ಸ್ವಾತಂತ್ರ್ಯಪೂರ್ವ ದೇಶೀಯ ಮುಂದಾಳುಗಳು ತಮ್ಮ ಕಹಳೆಗಳನ್ನು ಊದಿಕೊಂಡಿದ್ದರಲ್ಲದೆ ದೇಶಕ್ಕೆ, ನಮ್ಮ ಜನಕ್ಕೆ, ನಿಜ ವಿಚಾರಗಳನ್ನು ತಿಳಿಸಲೇ ಇಲ್ಲ, ಎಂಬುದಕ್ಕೆ ಆನಿ ಬೆಸೆಂಟ್ ಇವಳ ಜೀವನವೇ ನಿದರ್ಶನವಾಗಿದೆ.

ನಮ್ಮ ಅಂದಿನ ಕಾಂಗ್ರೆಸ್ ಜನರು ತಾವು ಬರೆದ ಕಾಂಗ್ರೆಸ್ ಸಂಸ್ಥೆಯ ಚರಿತ್ರೆಯನ್ನು ಮಾತ್ರವಲ್ಲ, the history of the Congress rule written by Congress-men (or even by their hired mercenaries), is expected to be a huge fraud - ಎಂಬುದಾಗಿ "Mother-India" ಮಾಸಿಕದ ಪ್ರಸಿದ್ಧ ಸಂಪಾದಕನು 1970ರ ದಶಕದಲ್ಲಿ ಖೇದಪೂರ್ವಕವಾಗಿ ಹೇಳಿದ್ದನು.

ಏನಿದ್ದರೂ ಮಹಾತ್ಮ ಗಾಂಧೀಜಿ ಜೊತೆಯೊಂದಿಗೆ ಹೋರಾಡುತ್ತಿದ್ದ ಕಾಲದಲ್ಲಿ, ಮತ್ತು ಆ ಕಾಲದಲ್ಲಿ, ನಮ್ಮ ದೇಶದ ನೂರಾರು ಮುಂದಾಳುಗಳಿಗೆ ಮತ್ತು ಮಹಾತ್ಮ ಗಾಂಧೀಜಿಗೂ ಸಹ, ಮಾರ್ಗದರ್ಶಕಳಾದ, ಸ್ಫೂರ್ತಿದಾಯಕಳಾದ, ಆನಿ ಬೆಸೆಂಟ್ ಇವಳು ವಿದೇಶೀಯಳೆಂಬ ಕಾರಣದಿಂದ ನಮ್ಮ ಜನರು ತಮ್ಮ ಸಹಜ ಸ್ವಭಾವಕ್ಕನುಗುಣವಾದ ಕೃತಘ್ನತೆಯನ್ನು ಪ್ರದರ್ಶ

ಸದ್ದು ನಿಜಕ್ಕೂ ವಿಷಾದದ ವಿಷಯವಾಗಿದೆ. ಹೀಗೂ ಆ ಒಂದು ಕೊರತೆಯನ್ನು ನನಗೆ ಸಾಧ್ಯವಾದ ಮಟ್ಟಿಗೆ ಬಗೆಹರಿಸಬಹುದೇನೋ ಎಂದು ಯೋಚಿಸಿ ನಾನು ಆನಿ ಬೆಸೆಂಟ್ ಇವರನ್ನು ಕನ್ನಡಿಗರಿಗೆ ಪರಿಚಯ ಮಾಡುತ್ತಿರುವ ಈ ಎರಡು ಹೊತ್ತಿಗೆಗಳನ್ನೇ ಭಾಷಾಂತರಿಸಲು ತೊಡಗಿದೆನು. ಇದಕ್ಕೆ ಆಧಾರವಾಗಿ ನನ್ನ ಇಂಗ್ಲಿಷ್ ಬರಹ— Mother Besant & Mahatma Gandhi — ಎಂಬೀ ಮೂಲಪುಸ್ತಕ ಜೀವನ ಕಥೆಗಳು ಇನ್ನಷ್ಟು ವಿಚಾರವನ್ನು ಒದಗಿಸುತ್ತವೆಂದು ನಾನು ನಂಬಿದ್ದೇನೆ. ಆ ಹಸ್ತಪ್ರತಿಯೂ ಮುಂದಕ್ಕೆ ಬೆಳಕಿಗೆ ಪ್ರಕಟವಾಗಬೇಕಾಗಿದೆ. (ಅದು ಇತ್ತೀಚೆಗೆ ಪ್ರಕಟವಾಗಿದೆ.)

ಏನೇ ಇರಲಿ, ಇಬ್ಬರ ಮಹತ್ತಿಗೆ ಅಂತರರಾಷ್ಟ್ರೀಯ ವ್ಯಕ್ತಿತ್ವವನ್ನು ಒಂದಷ್ಟು ವರ್ಷಗಳಿಗೆ ಹೊಂದಿಯೂ ಬೆಳೆಸಿಕೊಂಡಿರುವ ಒಬ್ಬ ವಿಶ್ವಪ್ರೇಮಿಯಾಗಿ ವಿದ್ಯೆ, ಸಂಸ್ಕೃತಿ, ಸಮಾಜ ಹಾಗೂ ರಾಜಕೀಯದಲ್ಲಿ ಇಂಗ್ಲೆಂಡಿನಲ್ಲಿ ಮತ್ತು ಇಂಡಿಯಾದಲ್ಲಿ ನಿಷ್ಠೆಯಿಂದ ದುಡಿದ ಇನ್ನೊಬ್ಬ ಮಹಾಪುರುಷರನ್ನಾಗಲೀ ಸ್ತ್ರೀಯರನ್ನಾಗಲೀ ನಮ್ಮ ದೇಶದ ಎರಡು ಸಾವಿರ ವರ್ಷಗಳ ಚರಿತ್ರೆಯಲ್ಲಿಯೂ ಕಾಣುವುದಿಲ್ಲ. ಅಂಥಾ ಒಬ್ಬ ವ್ಯಕ್ತಿಯು ತನ್ನ ಜೀವನದ ಕಡೇ ನಲ್ವತ್ತು ವರ್ಷಗಳನ್ನು (1893-1933) ಈ ದೇಶದಲ್ಲಿ ತನ್ನ ಕ್ರಾಂತಿಕಾರಕ ಸಾಧನೆಗಳನ್ನು ವಿಸ್ಮಯಾದ್ಯಂತವಾಗಿ ಮೊಳಗಿಸುತ್ತಾ ಬದುಕಿದಳು; ಸಾಕಷ್ಟು ಸಾರ್ಥಕ್ಯವನ್ನೂ ಪಡೆದಿದ್ದಳು. ಅವಳ ಅಪೂರ್ವ ಸಾಹಸ, ಸೇವೆ, ಹೋರಾಟ ಇತ್ಯಾದಿಗಳ ಬಗ್ಗೆ ಮಹಾತ್ಮಾ ಗಾಂಧಿ ಮತ್ತು ಆರಂಭದ ಅಂದಿನ ರಾಜಕಾರಿಣಿಗಳು ಏನು ಹೇಳಿದರೆಂಬುದಾಗಿ ಮೇಲೆ ತಿಳಿಸಿರುವ ನನ್ನ ಆಂಗ್ಲ ಕೃತಿಯಲ್ಲಿ ಹೇಳಿರುವೆನಾದುದರಿಂದ ಇಲ್ಲಿ ಆ ಮಾತುಗಳ ಪುನರಾವರ್ತನೆ ಅವಶ್ಯವಿಲ್ಲವೆಂದೆಣಿಸಿ ನನ್ನ ಈ ಭಾಷಾಂತರ ಕೃತಿಯನ್ನು ಕನ್ನಡಿಗರಿಗೆ ಒಪ್ಪಿಸುತ್ತಿದ್ದೇನೆ.

(ಮೊದಲ ಪ್ರತಿ - ಬರೆದ - 1970 ರಲ್ಲಿ.)

ತಾ|| 1-10-1986.
ವೆನ್ಕೂವರ್, ಕೆನಡಾ!

ಇತಿ,
(ಪ್ರೊ. ಎಸ್. ಮೂರ್ತಿ.)
1/10/86.

ವಿಷಯ ಸೂಚಿಕೆ.

ಈ ಲೇಖಕನ ಮೊದಲ ಮಾತು — 15

ಜಾರ್ಜ ಫರ್ನಾಂಡೀಸ್ ಇವರಿಂದ — 103

— ಅನಿಯತ ಆತ್ಮಚರಿತ್ರೆ —

ಅಧ್ಯಾಯ ೧ — "ಎಲ್ಲಿಂದಲೋ ಅವತರಿಸಿ ಇಲ್ಲಿ ನಿಂದ" —

" ೨ — ಬಾಲ್ಯ —

" ೩ — ಯೌವನ —

" ೪ — ವಿವಾಹ

" ೫ — ಸಂದೇಹದ ಸರಣಿಗಳು —

" ೬ — ಚಾರ್ಲ್ಸ್ ಬ್ರಾಡ್ಲಾ —

" ೭ — ನಾನರಿತ ನಾನರುಹಿದ ನಿರೀಶ್ವರತೆ —

" ೮ — ಅವಿರತ ದುಡಿಮೆ —

" ೯ — ನಾಲ್ಟನನ ಹೊತ್ತಿಗೆ —

" ೧೦ — ಸುತ್ತೆಲ್ಲ ಹೋರಾಟದಲ್ಲಿ —

" ೧೧ — ಬ್ರಾಡ್ಲಾಯ ಸಾಹಸ —

" ೧೨ — ಇನ್ನೂ ಹೋರಾಟದಲ್ಲಿ —

" ೧೩ — ಸಮಾಜವಾದ —

" ೧೪ — ಚಂಡಮಾರುತದೊಡೆಯಿಂ ಶಾಂತಿ —

ಭಾಗ ೨ —

ಆತ್ಮಚರಿತ್ರೆಗೆ ಸಂಬಂಧಿಸಿ ಟಿಪ್ಪಣಿಗಳು —
(1889 - 1933 — ಡಾ. ಬೆಸೆಂಟ್ ಇವರ ಬರಹಗಳಿಂದ ಸಂಗ್ರಹಿಸಿದ ಮುಖ್ಯಾಂಶಗಳು!

ಸಮಾಪ್ತ —

ಈ ಗ್ರಂಥದ ಇಂಗ್ಲಿಷ್ ಪ್ರಕಟಣೆಯು —

ಪ್ರಥಮ	ಮುದ್ರಣ	—	1893 ರಲ್ಲಿ,
೨ ನೇ	"	—	1894 "
೩ ನೇ	"	—	1908 "
೪ ನೇ	"	—	1917 "
೫ ನೇ	"	—	1920 "
೬ ನೇ	"	—	1939 "

"Oh Hidden Life, vibrant in every atom,
Oh Hidden Light, shining in every creature,
Oh Hidden Love, embracing all in oneness,
May each who feels himself as one with Thee,
Know He is also one with every other."

* * * * *

" Dr. Annie Besant, a powerful writer, a superb orator and a born organiser, she made the bones in the Indian political valley instinct with life and planted the national banner on the mountain tops. She roused the national consciousness of Indians by her religious gospel and political crusade. While swinging in cradle in her seven, she recited Milton's "Paradise Lost". She launched G. Bernard Shaw in literary life----."

"Ere long I
hope to stand face
to face with you, I, to
whom India and the Indian
peoples seem nearer than the
nation to which by birth I belong.
In heart I am one with you, and to
you by my past I belong, Born last time
under the Western skies for work that
needs to be done, I do not forget
my true Motherland, and my inner
nature turns eastward ever
with filial longing, When
Karma opens the door
I will walk through
it, and we will meet
in body as we can
already meet in
mind! Farewell."

Annie Besant F.T.S. (1892.)

(In India - 1893 to 1933)

ಅನಿ ಬಿಸೆಂಟ್.

ಮುನ್ನುಡಿ - ಭಾಗ ೧

ಭಾರತದ ಇತ್ತೀಚಿನ ಚರಿತ್ರೆ, ಸ್ವಾತಂತ್ರ್ಯ ಇತಿಹಾಸ ಮತ್ತು ಈ ಶತಮಾನಾರಂಭ ಕಾಲದ ವರದಿಗಳನ್ನು ಬರೆಯುವವರು ಶ್ರೀಮತಿ ಅನಿ ಬಿಸೆಂಟ್ ಇವರನ್ನು ಕುರಿತು ಅಲ್ಲಲ್ಲಿ ಒಂದೆರಡು ವಾಕ್ಯಗಳನ್ನು ಹೇಳುವುದೂ ಇದೆ. ಕೆಲವರು ಮಹಾತ್ಮಾ ಗಾಂಧಿಯ ಸತ್ಯದಂಡದಿಂದ ಮಾತ್ರ ಈ ದೇಶವು ಉದಿಸಿತೆಂದು ಹೇಳಿದರೆ ಇನ್ನು ಕೆಲವರು ಹಾಗಲ್ಲ, ಹಿಂದೆಯೇ ಇದೆ, ಬಹು ಹಿಂದಿನಿಂದ ಈ ದೇಶದ ಸ್ವಾತಂತ್ರ್ಯಕ್ಕಾಗಿ ಹಲವಾರು ಜನ ಹೋರಾಡಿದ್ದಾರೆ ಎಂದೆನ್ನುತ್ತಾ, ಅಲ್ಲಲ್ಲಿ ನಾಲ್ಕಾರು ಜನರ ಹೆಸರುಗಳನ್ನು ಕೊಡುತ್ತಾರೆ. ಹಾಗೆ ಕೊಡುವಾಗ ಅವರ ಮಧ್ಯೆ ಅನಿ ಬಿಸೆಂಟ್ ಇವಳೂ ಇದ್ದಾಳೆಂಬುದಾಗಿಯೂ ಸೂಚಿಸುವುದೂ ಉಂಟು.

ಕ್ರಿ. ಶ. ೧೯ನೇ ಶತಮಾನದಿಂದೀಚಿನ ಹಿಂದೂಸ್ಥಾನದ ಚರಿತ್ರೆಯನ್ನು ಬರೆಯುವಾಗ ಆಂಗ್ಲ ಸರಕಾರದ ರಾಜನೀತಿಯನ್ನು ಕೆಲವು ದೇಶೀಯರು ಸ್ವಾತಂತ್ರ್ಯಕ್ಕಾಗಿ ಇತ್ತೀಚೆಗೆ ಹೋರಾಡಿದ ವಿಷಯವನ್ನು ಮಾತ್ರ ಹೇಳುವರಲ್ಲದೆ ಪಾಶ್ಚಾತ್ಯರು ಈ ದೇಶವನ್ನು ಸರ್ವಸಿದ್ಧಿಯಲ್ಲೂ ಅಭಿವೃದ್ಧಿಗೊಳಿಸಲು ಸಾಧಿಸಿದ್ದೇನು, ಎಂತು ಎಂಬುದು ವ್ಯಕ್ತವಾಗಿ ಹೇಳಲಿಕ್ಕೆ ಅಂದಿನ ಅಥವಾ ಇಂದಿನ ಹಲವು ಲೇಖಕರಿಗೆ ಕಷ್ಟವಾಗಿದೆ. ಯಾವುದೇ ಗ್ರಂಥವನ್ನು ನೋಡಿದರೂ ನಾಲ್ಕಾರು ಪುಟಗಳಷ್ಟಾದರೂ ಈ ವಿಷಯದ ಬಗ್ಗೆ ಇಲ್ಲ. ಪಾಶ್ಚಾತ್ಯರಲ್ಲಿ ಕೆಲವರು ಸಂಶೋಧಕರು; ಕೆಲವರು ಸಾಹಿತಿಗಳು, ಕೆಲವರು ಶಿಕ್ಷಣಾಧಿಕಾರಿಗಳು ಇತ್ಯಾದಿ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಮೊದಲ ಬಾರಿಗೆ ಹೋರಾಡಿದವರೂ ಅವರೇ ಆಗಿದ್ದಾರೆ. ಈ ಎಲ್ಲ ವಿಷಯಗಳು ಪರಿಪೂರ್ಣವಾಗಿ ನಮ್ಮ ಚರಿತ್ರಕಾರರು ಇನ್ನೂ ಹೇಳುತ್ತಿಲ್ಲ. ಅಲ್ಲಲ್ಲಿ ಕೆಲವೆಡೆ ಕೆಲ ಕೆಲವು ವಿಚಾರಗಳನ್ನು ಹೇಳಿದ್ದರೂ ಅವೇನೂ ಸಮರ್ಪಕವಾಗಿಲ್ಲ; ಸತ್ಯಪ್ರಾಮಾಣಿಕವಾಗಿಯೂ ಇಲ್ಲ.

<u>ಉತ್ಪ್ರೇಕ್ಷೆಯೂ ಅಲ್ಲ; ಉಪೇಕ್ಷೆಯೂ ಅಲ್ಲ!</u> — ಕ್ರಿ. ಶ. 18ನೆ ಮತ್ತು ೧೯ನೇ ಶತಮಾನದಲ್ಲಿ ಭಾರತೀಯ ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ಇತ್ಯಾದಿಗಳಿಗಿದ್ದ ಪುನರುದ್ಧಾರ ಕಾರ್ಯವು ಪಾಶ್ಚಾತ್ಯರಿಂದ ನಡೆಸಲಾಯಿತೆಂದು ಈ ಗ್ರಂಥಕರ್ತನು ತನ್ನ ಬೇರೊಂದು ಕೃತಿಯಲ್ಲಿ ಪ್ರತಿಪಾದಿಸಿರುವನು, 'ಅಂದಿನ ಭಾರತೀಯ

ಮುಂದಾಳುಗಳು, ವಿದ್ಯಾಭಿಮಾನಿಗಳು ಮತ್ತು ಸಾಹಿತಿಗಳೆಲ್ಲರೂ ಈ ವಿಷಯವಾಗಿ ಸಾಕಷ್ಟು ಪ್ರಶಂಸೆ ಬರೆದಿದ್ದಾರೆ. ಆದರೂ ಕೆಲವರು ಕೇವಲ ಸಂಕುಚಿತ ಮನೋಭಾವದಿಂದ ಪಾಶ್ಚಾತ್ಯರ ಸಾಧನೆಗಳನ್ನು ವಕ್ರದೃಷ್ಟಿಯಿಂದ ನೋಡಲು ಪ್ರಯತ್ನಿಸುತ್ತಿದ್ದಾರೆ. ಇದು ಸಹ ಅನಿವಾರ್ಯ, ಏಕೆಂದರೆ ಎಲ್ಲ ದೇಶಗಳಲ್ಲೂ ಈ ಮಾದರಿಯ ದ್ವೇಷಭಾವದ ಕೃತಘ್ನರು ಇದ್ದೇ ಇದ್ದಾರೆ.

ಪಾಶ್ಚಾತ್ಯರು ನಮ್ಮ ಅಳಿದುಳಿದ ಧರ್ಮ ಸಂಸ್ಕೃತಿಗಳನ್ನು ಪುನರುಜ್ಜೀವಗೊಳಿಸಲು ಬಂದ ಅವತಾರಿಗಳು ಎಂದರೆ ಅದು ಉತ್ಪ್ರೇಕ್ಷೆಯೇನೂ ಅಲ್ಲ. ಅವರು ಕ್ರಿ.ಶ. 12ನೇ ಶತಮಾನದಲ್ಲಿ ಈ ದೇಶಕ್ಕೆ ಪ್ರಯಾಣಿಕರಾಗಿ, ವ್ಯಾಪಾರಿಗಳಾಗಿ ಬಾರದೇ ಹೋಗಿದ್ದರೆ ನಮ್ಮ ಅಜ್ಞಾನಿಯರೆಲ್ಲ ಇಂದೇ ಮತಾಂಧಿಯರಾಗಿ ಹೋಗುತ್ತಿದ್ದರು. ನಾವು ಇಂದು ಹೇಳಿಕೊಳ್ಳುವ ಮತ್ತು ನಮ್ಮ ಮತಧರ್ಮಗಳ ಹೆಗ್ಗಳಿಕೆಯನ್ನು ತೋರಿಸಿಕೊಳ್ಳುವ ಹಿಂದೂ ಮತದವರಾಗಿ ಇಲ್ಲದೆ ಇಂದೇ ಅಳಿದು ಹೋಗುತ್ತಿದ್ದೆವು, ಎಂದರೆ ಇದು ಉತ್ಪ್ರೇಕ್ಷೆಯೂ ಅಲ್ಲ, ಉಪೇಕ್ಷೆಯೂ ಅಲ್ಲ; ಬದಲಾಗಿ ಇವೆಲ್ಲ ಚಾರಿತ್ರಿಕವಾಗಿ ಸತ್ಯವಾದ ವಿಚಾರವಾಗಿದೆ. ಇದರಿಂದ ನಾವು ಭಂಗಪಟ್ಟುಕೊಳ್ಳಬೇಕಾಗಿಲ್ಲ. ಇದಕ್ಕೆ ಸಂಕೋಚಪಡಬೇಕಾದ್ದೂ ಇಲ್ಲ. ಆದರೆ ಅಂದಿನ ಆ ಪರಿಸ್ಥಿತಿಯೊಡನೆ ಇಂದಿನ ನಮ್ಮ ಪರಿಸ್ಥಿತಿಯನ್ನು ಹೋಲಿಸಿ ಅಂದಿನ ಅವನತಿಯ ಹೆಜ್ಜೆಗಳು ಮುಂದಕ್ಕೆ ತೋರ್ಪಡದಂತೆ ನೋಡಿಕೊಳ್ಳುವುದು ನಮ್ಮ ರಾಜನೀತಿಯಾಗಬೇಕಾಗಿದೆ.

<u>ಅವರಲ್ಲಿ ವರ್ಗಗಳು ಮತ್ತು ಹಯೋಗಿನಿಯರು</u>:— ನಮ್ಮ ದೇಶದ ಧರ್ಮ ಸಂಸ್ಕೃತಿಗಳನ್ನು ಅನ್ವೇಷಿಸಿ ಅದಕ್ಕೆ ಜೀವಕಳೆಯನ್ನೀಯಲು ಪಾಶ್ಚಾತ್ಯರು ಕ್ರಿ.ಶ. 17ನೇ ಶತಮಾನದಲ್ಲಿಯೇ ಪ್ರಾರಂಭಿಸಿ ಕ್ರಮೇಣ 19ನೇ ಶತಮಾನಾಂತ್ಯಕ್ಕೆ ಸಾಕಷ್ಟು ಮುಗಿಸಿದರೆಂದು ಬೇರೆಡೆ ಹೇಳಲಾಗಿದೆ. ಆ ಕಾಲದಲ್ಲಿ ಇಲ್ಲಿ ಕಾಣಿಸಿಕೊಂಡ ಹಲವು ಯುರೋಪಿಯನ್ ರಸಿಕಮಣಿಗಳಲ್ಲಿ ರಾಜಕಾರಣಿಗಳೂ, ವಿದ್ಯಾತಜ್ಞರೂ, ವೇದಾಭ್ಯಾಸಿಗಳೂ, ಕಲಾರಾಧಕರೂ, ಸಮಾಜ ಸುಧಾರಕರೂ ಇದ್ದರು. ಅವರೆಲ್ಲ ಒಬ್ಬರಿಗಿಂತಲೂ ಒಬ್ಬರು ಮಿಗಿಲಾಗಿ ಎಂಬಂತೆ ಈ ದೇಶದಲ್ಲಿ ವಿವಿಧ ಕ್ಷೇತ್ರಗಳಲ್ಲಿ ದುಡಿದರು. ಅವರೆಡೆಯಲ್ಲಿ ಸುಮಾರು 1840ರಿಂದೀಚೆಗೆ ಕೆಲವರು ಪ್ರಚಂಡ ಭಾರತೀಯ ದೇಶಾಭಿಮಾನಿಗಳಾಗಿಯೂ ತೋರ್ಪಡಿಸಿಕೊಂಡರು. ಅಂಥ ನಾಲ್ಕಾರು ಜನ ಸೇರಿ ಕೆಲವು ಭಾರತೀಯ ವಿದ್ಯಾವಂತರನ್ನು ಸಂಘಟಿಸಿ ಅವರಿಗೆ ತಮ್ಮ ದೇಶದ ಬಗೆಗೆ ತಮ್ಮ ಕರ್ತವ್ಯವೇನೆಂಬುದನ್ನು ತಿಳಿಸಿದರು. ಅಂದಿನ ಹತ್ತಾರು ಭಾರತೀಯರಿಗೆ ತಮ್ಮ ದೇಶದ ಮೇಲೆ ಅಭಿಮಾನ ಹುಟ್ಟುವಂತೆ ಮಾಡಿದರು. ಅಂಥ ಕೆಲವು

ಪಾಶ್ಚಾತ್ಯ ಗಣ್ಯರು ಈ ದೇಶದ ಸ್ವಾತಂತ್ರ್ಯಕ್ಕಾಗಿ ಉಗ್ರವಾಗಿ ಹೋರಾಡುತ್ತಾ ಇಂದಿನ ಆಂಗ್ಲ ಅಧಿಕಾರಿಗಳನ್ನು ಆಶ್ಚರ್ಯಕ್ಕೊಳಗಾಗಿಸಿದರು. ಅಂತಹವರಲ್ಲಿ ಶ್ರೀಮತಿ ಆನಿ ಬೆಸೆಂಟ್ ಇವರೊಬ್ಬರು. ಆದರೆ ಇವರು ಜೀವನದಲ್ಲಿ ನಮಗೆ ಎಲ್ಲ ಕಾಲಕ್ಕೂ ಕಂಡುಬರುವ ಹಲವು ರಾಜಕಾರಿಣಿಗಳಂತೇನೂ ಇಲ್ಲ. ಇವರು ಅಕ್ಷರಶಃ ಜೀವನ ಮಹಾಯೋಗಿನಿಯೇ ಆಗಿದ್ದರು.

ಆನಿ ಬೆಸೆಂಟ್ ಇವರು ಕ್ರಿ.ಶ. 1847ರ ಸೆಪ್ಟೆಂಬರ್ ೧ರಲ್ಲಿ ಲಂಡನ್‌ನಲ್ಲಿ ಜನಿಸಿದರು. ಅವಳ ತಂದೆಯ ತಂದೆ ಮತ್ತು ಅವಳ ತಾಯಿಯು ಐರಿಷ್ ಜನಾಂಗದವರಾಗಿದ್ದರು. ಅವಳು ನಾಲ್ಕು ವರ್ಷದ ಮಗುವಾಗಿದ್ದಾಗ ಅವಳ ತಂದೆಯು ಮೃತನಾದುದರಿಂದ ಅವಳ ಮತ್ತು ಅವಳ ಸೋದರನ ಪಾಲನೆಯು ಅವರ ತಾಯಿಯ ಮೇಲೆ ಬಿತ್ತು. ಈ ತಾಯಿಯಾದರೋ ತುಂಬಾ ದೈವಭಕ್ತಿಯಿಂದಲೂ ಸ್ವಾಭಿಮಾನದಿಂದಲೂ ಕೂಡಿದ್ದಳು. ಕೇವಲ ಎಳೆ ಹುಡುಗಿಯಾಗಿದ್ದಾಗಲೇ ಆನಿಯು Pilgrim's Progress ಮತ್ತು Paradise Lost ಇಂಥಾ ಗ್ರಂಥಗಳನ್ನೆಲ್ಲ ಓದಿದ್ದಳು. ಚಿಕ್ಕಂದಿನಿಂದಲೇ ಅವಳ ಮನಸ್ಸು ಧಾರ್ಮಿಕ ವಿಚಾರಗಳಲ್ಲಿಯೇ ಮಗ್ನವಾಗಿದ್ದಿತು. ಇದಕ್ಕೆ ತಕ್ಕಂತೆ ಅವಳ ತಾಯಿಯು ಮತ್ತು ಕುಮಾರಿ ಮಾರ್ಯೆಟ್ ಎಂಬ ಅವಳ ದಾದಿಯು ಅವಳ ವಿಚಾರಜ್ಞಾನವನ್ನು ಮುಂದುವರಿಸುವುದರಲ್ಲಿ ಅವಳಿಗೆ ಸಹಾಯಕರಾದರು.

<u>ಸಾಂಸಾರಿಕ ಜೀವನ ಆನಿಗೆ ಹಿಡಿಸಲಿಲ್ಲ:</u>— ಬಾಲ್ಯದಿಂದಲೇ ಜೀವನ ಭಾವಜೀವಿಯಾಗಿ ತೋರ್ಪಡಿಸಿಕೊಂಡಿದ್ದ ಆನಿಯನ್ನು ಅವಳ ತಾಯಿಯು ಅತೀ ಮಮತೆಯಿಂದ ಸಲಹಿದಳು. "My darling mother certainly spoiled me----She never allowed a trouble of any kind to touch me and cared only that all worries should fall on her, all joys on me---." ಎಂಬುದಾಗಿ ಆನಿಯು ಸ್ಮರಿಸಿದಳು. ನಿತ್ಯವೂ ದೇವರ ಪ್ರಾರ್ಥನೆ, ದೇವರ ಸೇವೆ ಮತ್ತು ವಿಚಾರಪೂರ್ಣ ವಿಷಯ ಗ್ರಹಣದಲ್ಲಿಯೇ ತಲ್ಲೀನಳಾಗಿದ್ದ ಅವಳು ಇತರ ಸಾಮಾನ್ಯ ಜನರಂತೆಯೇ ವಿವಾಹ ಜೀವನಕ್ಕೂ ಕಟ್ಟುಬಿದ್ದಳು. ಕ್ರಿ.ಶ. 1866ರಲ್ಲಿ ಅವಳಿಗೆ ಜೀವ ತರುಣ ಅರ್ಚಕನೊಬ್ಬನ ಪರಿಚಯವಾಯಿತು. ಕೇಂಬ್ರಿಡ್ಜಿನ ಕ್ರೈಸ್ತಗುರು ಫ್ರಾಂಕ್ ಬೆಸೆಂಟ್ ಇವನನ್ನು ಇಲ್ಲಿಂದ ಹದಿನಾಲ್ಕು ತಿಂಗಳುಗಳನಂತರ ವಿವಾಹವಾದಳು. "I met and conquered my first religious doubt," ಎಂಬುದಾಗಿ ಆನಿಯು ಹೇಳಿದ್ದಳು.

ಆದರೇನು? ಅಲ್ಲಿ ಮಾನಸಿಕವಾಗಿ ಇಬ್ಬರಿಗೊಬ್ಬರಿಗೆ ಹಿಡಿಸದ ಮನೋವೃತ್ತಿಯೇ ಬೆಳೆಯಿತು. ಇದರೊಂದಿಗೆ ಅಸಂಗತ

ದಾಂಪತ್ಯದಂತೆ ತೋರಿತು. ಹಿಂದಿನಂತೆ ಮಕ್ಕಳನ್ನು ಆನಿಯು ಹಡೆದ ಳಾದರೂ ಅವಳ ಮನಸ್ಸು ವಿಶಾಲ ಜಗತ್ತಿನತ್ತ ಲೀನವಾಯಿತಲ್ಲದೆ ಸಾಂಸಾರಿಕ ಜೀವನದ ಸಂಕುಚಿತ ಆವರಣದೊಳಗಡೆಗಲು ಸಿಕ್ಕ ಲಿಲ್ಲ. ಅವಳಾದರೋ "I ought never to have married" ಎಂಬುದಾಗಿ ತನ್ನ ಮನೋಭಾವವನ್ನು ವ್ಯಕ್ತಪಡಿಸಿದಳು.

ದಿನದಿಂದ ದಿನಕ್ಕೆ ಆನಿಯ ಧಾರ್ಮಿಕ ಚಿಂತನೆಯು ಹೆಚ್ಚಿತು. ಲೋಕದಲ್ಲಿ ಕಾಣುವ ನಿರಂತರ ಕಷ್ಟ, ಅನ್ಯಾಯ, ಅಕ್ರಮಗಳನ್ನು ಪರ್ಯಾಲೋಚಿಸುತ್ತಾ ಇದ್ದು ಕಡೆಗೆ ದೇವರ ಅಸ್ತಿತ್ವದಲ್ಲಿಯೇ ಅವಳಿಗೆ ಸಂಶಯವು ಹುಟ್ಟಿತು. ದೇವರು ಇರುವನಾದರೆ ಅವನು ನಿಜಕ್ಕೂ ನಿರ್ದಯನು, ಹಾಗೂ ಕಠೋರನು ಎಂದು ಆನಿಯು ತೀರ್ಮಾನಿಸಿಕೊಂಡಳು, ಅವಳ ಮನೋವಾಙ್ಮಯದಲ್ಲಿ ಸಂದೇಹದ ಚಂಡಮಾರುತವೇ ಬೀಸಿತು,

ಹೀಗೂ ಸಾಂಸಾರಿಕವಾಗಿ ಹಲವು ಕಷ್ಟಗಳನ್ನನುಭವಿಸಿದ ಆನಿಯು ತನ್ನ ನಾಲ್ವತ್ತೈದು ವರ್ಷಗಳ ದಾಂಪತ್ಯ ಜೀವನದಿಂ ತರುವಾಯ ತನ್ನ ಪತಿ ಫ್ರಾಂಕ್ ಬೆಸೆಂಟ್‌ನಿಂದ ಬೇರ್ಪಟ್ಟಳು. ಆದರೊಡನೆಯೇ ಮತಧರ್ಮಗಳ ವಿರುದ್ಧವಾಗಿ ಎಲ್ಲೆಡೆಯೂ ಪ್ರಚಾರಾಂದೋಲನೆಗೆ ಪ್ರಾರಂಭಿಸಿದಳು, ತನ್ನ ತಾಯಿಯೊಡನೆಯೂ ವಾದಿಸಿದಳು, ಮಿ. ಕಾನ್‌ವೆ ಇವರ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿದಳು, ಕೃಷ್ಣ ಮತ್ತು ಕ್ರೈಸ್ತ ಇವರ ಹುಟ್ಟು ಮತ್ತು ಜೀವನದಲ್ಲಿರುವ ಸಾಮ್ಯತೆಗಳನ್ನು ಪರ್ಯಾಲೋಚಿಸಿದಳು, ಈ ರೀತಿಯಾಗಿ ದಿನದಿಂದ ದಿನಕ್ಕೆ ತನ್ನ ಬಾಲ್ಯದಿಂದಲೇ ಆನಿಯು ಲೌಕಿಕ ಮತ್ತು ಪಾರಮಾರ್ಥಿಕ ವಿಚಾರಗಳಲ್ಲಿ ಆಸಕ್ತಿಯನ್ನಿಟ್ಟಳು.

ಸತ್ಯ ಮತ್ತು ಧರ್ಮವೇ ದೈವವೆಂದು ನಂಬಿದಳು:— ಆನಿಗೆ ಯಾವಾಗಲೂ ಸತ್ಯವೇ ದೇವರು; ಧರ್ಮವೇ ದೇವರು! ಕ್ರೈಸ್ತ ಮತವೇ ಆಗಲಿ, ಬೇರಾವ ಮತಗಳೇ ಆಗಲಿ, ಜೀವನದ ಪರಿಶುದ್ಧ ರೀತಿ ನೀತಿಗಳನ್ನು ತಿಳಿಯುವುದರೊಡನೆ ಅಗೋಚರನಾದ ಸರ್ವಶಕ್ತನು ಯಾರೆಂಬುದನ್ನು ಅರಿಯಲೆತ್ನಿಸಿದಳು. ಅಜ್ಞಾನದಲ್ಲಿ ಬಳಲುವವರನ್ನು ಕಂಡು ಆನಿಯು ಮರುಗುತ್ತಿದ್ದಳು. ತೋರಿಕೆಗೆ ಅವಳೊಬ್ಬ ನಾಸ್ತಿಕಳಂತಿದ್ದರೂ ಅವಳು ಮಹತ್ತಾದ ಧಾರ್ಮಿಕ ಮನೋವೃತ್ತಿಯುಳ್ಳ ದೈವಭಕ್ತಳೇ ಆಗಿದ್ದಳು, ಸತ್ಯ ಪಾಲನೆಯಲ್ಲಿ ದೃಢಳಾಗಿದ್ದಳು. ತನ್ನ ತಾಯಿ ಆನಿಗೆ ಕ್ರೈಸ್ತ ಮತದ ಸಾಂಪ್ರದಾಯಿಕ ನಿಯಮಗಳನ್ನು ಅನುಸರಿಸಬೇಕೆಂದು ಮೊರೆಯಾಲೂರಿ ಕ್ರೂರವಾಗಿ ಅದು ಮನೋವೇದಕ ದೃಶ್ಯವೇ ಆದರೂ ತಾನು ಅಂಧಾಭಿಮಾನಿಯಾಗಿ ಇರೆನೆಂದು ಅವಳು ಹಟತೊಡುತ್ತಾಳೆ: Against harshness I had been rigid as steel, but it was hard to

remain steadfast when my darling mother, whom I loved as I loved nothing else on earth, threw herself on her knees before me, imploring me to yield. It seemed like a crime to bring such anguish on her; and I felt as a murderer as the snowy head was pressed against me. And yet, to live a lie? Not even for her was that shame possible----."

ಇಂಥ ದೃಢ ನಿರ್ಧಾರವನ್ನು ಸತ್ಯಧರ್ಮಗಳ ಪಾಲನೆಗೆ ಅನಿ ಬೆಸೆಂ ಛಲವ ತನ್ನ ಜೀವನದಲ್ಲಿ ತೋರಿಸಿದ್ದಾಳೆ. ಮಾತ್ರವಲ್ಲ, ಅಂಧ ಶ್ರದ್ಧೆಯನ್ನೆಲ್ಲ ಅವಳು ಖಂಡಿಸಿದಾಗ ಅವಳನ್ನು ನಾಸ್ತಿಕಳೆಂಬುದಾಗಿ ಆರೋಪಿಸಿದರಾದರೂ ಅವಳು ಎದೆಗುಂದಲಿಲ್ಲ. ಕ್ರೈಸ್ತ ಮತದಲ್ಲಿ ಕ್ರೈಸ್ತಸ್ತೋತ್ರಗಳಲ್ಲಿ ಕ್ರೈಸ್ತಸ್ತೋತ್ರರೀತಿಗಳಲ್ಲಿ ಇರುವ ಅನಾಚಾರ ಅವಿವೇಕಗಳನ್ನು ಖಂಡಿಸಿದರೆ ಅದೇ ನಾಸ್ತಿಕತೆಯೆಂದಾದರೆ ಅವಳು ಅದಕ್ಕೊಪ್ಪಿದಳು. ನಾಸ್ತಿಕತೆಯ ಬಗ್ಗೆ ಅವಳು ಹೀಗೆಂದಳು. "It is necessary to put briefly the Atheistic position, for no position is more continuously and more persistently misrepresented. Atheism is <u>without</u> God. It does assert <u>no</u> God, but it's said, "I know not what you mean by God; I am without idea of God; the word God is to me a sound conveying no clear or distinct affirmation. I do not deny God, because I cannot deny that of which I have no conception, and the conception of which, by its affirmer, is so imperfect that he is unable to define it to me."

ಆ ಕಾರಣದಿಂದ ಅನಿಯು ಶುದ್ಧ ನೈತಿಕ ಮನೋಧರ್ಮ, ಕರ್ಮಾನುಸರಣೆ, ಸತ್ಯ ಪ್ರತಿಪಾದನೆಗಳೇ ದೇವರಲ್ಲದೆ ಬೇರೇನೂ ಅಲ್ಲವೆಂಬುದನ್ನು ತನ್ನ ಮನೋವಾಕ್ಯಗಳಲ್ಲಿ ತೋರ್ಪಡಿಸುತ್ತಲೇ ಇದ್ದಳು. ಕಡೆಗಾದರೂ ಅವಳು ಈ ಲೋಕದಲ್ಲಿ ನಿಸ್ಸೀಮ ಭಕ್ತರೆಂದು ಅನಿಸಿಕೊಂಡವರಿಗಿಂತಲೂ ಮಿಗಿಲಾದ ದೇವಭಕ್ತಳಾಗಿಯೇ ಉಳಿದಳು, ಎಂಬುದಾಗಿ ಅವಳ ಈ ಹೇಳಿಕೆಯಿಂದ ತಿಳಿಯಬಹುದು:

"To a woman of my temperament, filled with a passionate desire for the bettering of the world, the elevation of humanity, a lofty system of ethics was of even more importance than a logical intellectual

conception of the Universe, and the total loss of all faith in a righteous God only made me more strenuously assertive of the binding nature of duty and the overwhelming importance of conduct---- No thought was more constantly in my mind than that of the importance of morale----."

<u>ಚಾರ್ಲ್ಸ್ ಬ್ರಾಡ್ಲೋ ಇವನು ಹಿಂದು ಪ್ರಬಲ ಶಕ್ತಿಯಾಗಿದ್ದನು</u>:- ಆ ಕಾಲದ ಇಂಗ್ಲೆಂಡಿನ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಚಾರ್ಲ್ಸ್ ಬ್ರಾಡ್ಲೋಯು ಬಿರ್ ಗಣ್ಯ ಹೋರಾಟಗಾರನಾಗಿ ಹಲವು ಪ್ರಗತಿಪರ ಸುಧಾರಣೆಗಳಿಗೆ ಕಾರಣನಾದನಾದರೂ ಇವನು ಹಿಂದೂ ನಾಸ್ತಿಕನೆಂದು ತೀವ್ರಗಾಮಿಯೆಂದೂ ಆಪಾದನೆಗೆ ಒಳಗಾಗಿದ್ದನು. ಇವನ 'Free-thought-movement' ಇಡೀ ಇಂಗ್ಲೆಂಡಿನಲ್ಲಿ ಪ್ರಭಾವವನ್ನು ಬೀರಿತು. ಅಷ್ಟೇ ಅಲ್ಲ, ಗಾಂಧಿಯ ಸಹಾನುಭೂತನಾಗಿದ್ದ ಚಾರ್ಲ್ಸ್ ಬ್ರಾಡ್ಲೋಯು ಕಳೆದ ಶತಮಾನದ ಇಂಗ್ಲೆಂಡಿನಲ್ಲಿ ಜನಜಾಗೃತಿಯನ್ನು ಹುಟ್ಟಿಸಲು ಮೂಲಕಾರಣನಾಗಿದ್ದನು. ಅಂಥ ಒಬ್ಬ ಮೇಧಾವಿಯ ಸ್ನೇಹವೂ ಸಹಕಾರವೂ ಅನಿ ಬೆಸೆಂಟ್ ಇವಳಿಗೆ ದೊರೆತುದು ಎಷ್ಟೋ ಪ್ರಯೋಜನವಾಯಿತು. ಅಂಧಶ್ರದ್ಧೆಗೆ ಒಳಗಾಗದಿದ್ದ ಇವರಿಬ್ಬರೂ ದೇವರಲ್ಲಿ ಭಕ್ತಿಯೆಂಬ ಕಪಟತನವನ್ನು ಪ್ರದರ್ಶಿಸದೆ ಸಮಾಜದ ಟೀಕೆ ನಿಂದನೆಗಳಿಗೆ ಎದೆಗೊಟ್ಟು ನೈತಿಕವಾಗಿ ಜೀವನವನ್ನು ಪರಿಶುದ್ಧಗೊಳಿಸಲು ಯತ್ನಿಸಿದ ಸಾಧಕರೆಂದೆನಿಸಿದರು. ಇವರ ಅಭಿಪ್ರಾಯದಂತೆ, "Existence of deity (God) is a matter of dispute. Morality should not be mixed up with this. Equality, liberty etc are the birthright of every man and woman," ಎಂಬ ವಿಷಯಗಳ ಬಗ್ಗೆ ಮಂಡಿಸಿ ಹೋರಾಡಿದರು. ಆನಿಗೆ ಸ್ಪೂರ್ತಿ ಮತ್ತು ಶಕ್ತಿಯನ್ನು ಒದಗಿಸಿದ ಬ್ರಾಡ್ಲೋಯ ವ್ಯಕ್ತಿತ್ವವನ್ನು ಕುರಿತಾಗಿ ಇವರ ಸಂಗಾತಿಯಾಗಿದ್ದ ಮತ್ತೊಬ್ಬ ಸಮಾಜವಾದಿ ಜಾರ್ಜ್ ಬರ್ನಾರ್ಡ್ ಷಾ ಇವನು ಇಂತೆಂದನು:—

"Of Charles Bradlaugh history has so far given every description except the only that fits him. He was quite simply a hero, a single champion of anti-Christendom against the seventy-seven champions of Christendom. He was a leader, he was a wonder whom men followed and obeyed," ಎಂಬುದಾಗಿ ವರ್ಣಿಸಿದನಲ್ಲದೆ ಅಂದಿನ ಬ್ರಾಡ್ಲೋಯು ಆನಿಗೆ ನೆರ

ವಾದನಿಂದ ಮೇಲೆ ಅವರೀರ್ವರೂ ಅಂದಿನ ಇಂಗ್ಲೆಂಡಿನ ಸಾಮಾಜಿಕ ಮತ್ತು ಧಾರ್ಮಿಕ ವಲಯಗಳಲ್ಲಿ ಪ್ರಬಲ ಶಕ್ತಿಯೇ ಆದರು. ಆನಿಯನ್ನು ಕುರಿತು ಹೇಳುವಾಗ, — "She was a wonder, a terrific opponent, had over-whelming personal force --- Before Bradlaugh and Besant (Mrs.), all looked like just pygmies," ಎಂದು ಅವರನ್ನು ಕುರಿತಾದ ಅಭಿಪ್ರಾಯವಾಗಿತ್ತು.

<u>ತನ್ನ ಜೀವನವನ್ನೇ ಲೋಕಕ್ಕಾಗಿಯೇ ಮೀಸಲಾಗಿಟ್ಟಳು:</u> — ಆನಿಯ ದಾಂಪತ್ಯವು ಅಷ್ಟೇನೂ ಸುಖ ಸಂತೃಪ್ತವಾಗಿ ಇರಲಿಲ್ಲ. ತನ್ನ ತಾಯಿಯಿಂದ ಅಷ್ಟು ತುಂಬಾ ಪ್ರೀತಿಯಿಂದಲೇ ಸಲಹಲ್ಪಟ್ಟಿದ್ದರೂ ತಾನೇ ತಾಯ್ತನಕ್ಕೆ ಬಂದಾಗ ಸಂಸಾರದ ಕಹಿಯನ್ನು ತುಂಬಾ ಅನುಭವಿಸಿದಳು. ತನ್ನ ಮಗಳು ಮೇಬಲ್ ಇವಳು ಕಾಯಿಲೆ ಬಿದ್ದಾಗ ಅವಳು ತುಂಬಾ ಮನೋವೇದನೆಗೆ ಸಿಕ್ಕಿದಳು. ಅನಂತರ ಕಾನೂನು ಬದ್ಧವಾಗಿ ತನ್ನ ಪತಿ ಫ್ರಾಂಕ್ ಬೆಸೆಂಟ್ ಇವನಿಂದ ಬೇರ್ಪಟ್ಟನಂತರ ತನ್ನ ಮಕ್ಕಳು, ಪುತ್ರ ಡಿಗ್ಬಿ, ಮತ್ತು ಪುತ್ರಿ ಮೇಬಲ್ ಇವರು ತನ್ನ ವಶಕ್ಕೆ ಬರಬೇಕೆಂದು ಫ್ರಾಂಕ್ ಬೆಸೆಂಟ್ ಇವನು ಹೂಡಿದ ವ್ಯವಹಾರದಲ್ಲಿ ಆನಿಗೆ ಎದುರಾಗಿ ರಾಜಕೀಯ ಪೇಕ್ಷೆಯು ಎದ್ದು ಕಾಣುತ್ತಿತ್ತು. ಹೀಗೂ ಕಡೇ ಬಾರಿಗೆ ಆನಿಯು ತನ್ನ ಎರಡು ಮಕ್ಕಳಿಂದ ಹೇಗೆ ಅಗಲಿದೆ ಎಂಬುದನ್ನು ವರ್ಣಿಸುತ್ತಾ ತನ್ನ ಸ್ವಂತ ಮಕ್ಕಳನ್ನು ಕಳೆದುಕೊಂಡ ತಾಯಿಯಾದ ನಾನು ಇನ್ನು ಮುಂದಕ್ಕೆ ಲೋಕದ ಮಕ್ಕಳಿಗೆ ತಾಯಿಯಾಗುವೆನು ಎಂದು ನಿರ್ಧರಿಸಿದನ್ನು ಈ ರೀತಿ ಉದ್ಗರಿಸುತ್ತಾಳೆ: Resolutely I turned my back on my children that I might spare them trouble, and determined that, robbed of my own, I would be a mother to all helpless children I could aid, and cure the pain at my own heart by soothing the pain of others."

ಇಂಥ ಕಹಿ ಅನುಭವವನ್ನಾದೇ ಯಾರೂ ತಮ್ಮ ಜೀವನದಲ್ಲಿ ಮಹತ್ಸಾಧನೆಯನ್ನೆಸಗಲಾರರು. ಕೇವಲ ವ್ಯಕ್ತಿತನದಲ್ಲಿಯೇ ಮಹಾ ಯೋಗಿನಿಯ ಸರ್ವ ಲಕ್ಷಣವನ್ನು ತೋರಿದ ಈ ಮಹಿಳೆಗೆ ತನ್ನ ಬಾಳು ತಕ್ಕುದಾದ ಹಾದಿಯನ್ನೇ ಕಲಿಸಿತು. ಸಂದರ್ಭ ಸನ್ನಿವೇಶಗಳು ಅವಳನ್ನು ಅಂಥಾ ಹಾದಿಯಲ್ಲಿ ಕೊಂಡೊಯ್ದವು. ಇಂಗ್ಲೆಂಡಿನಲ್ಲಿ ಕಾರ್ಮಿಕರ ಜೀವನಾಭಿವೃದ್ಧಿಗಾಗಿ ಹಗಲಿರುಳು ದುಡಿದಳು, ಚಾರ್ಲ್ಸ ಬ್ರಾಡ್ಲಗೆ ನೆರವಾಗಿ ಪ್ರವಚನಿಯಾಗಿ ಸಮಾಜದ ಪ್ರಗತಿಗೆ ನಿಷ್ಠೆಯಿಂದ ಶ್ರಮಿಸಿದಳು. ನೂರಾರು ಪ್ರತಿಕಾ ಲೇಖನಗಳೂ ಕಿರುಹೊತ್ತಿಗೆಗಳೂ ಮೊದಲಾಗಿ ಬರೆದು ಪ್ರಕಾ

ರಚಿಸಿದ ಗ್ರಂಥ ಲೇಖಕಿ, ಪ್ರಚಂಡ ವಾಗ್ಮಿ, ಮತ್ತು ಅದ್ವಿತೀಯ ಕಾರ್ಮಿಕ
ಕಾರ್ಯಕರ್ತೆಯೆಂದೂ ತನ್ನ ವ್ಯಕ್ತಿತ್ವದಲ್ಲಿ ಜನಜನಿತಳಾದಳು.

ಆನಿಯು ಅದ್ವಿತೀಯ ಕರ್ಮಯೋಗಿನಿಯಾಗಿ ಮಿನುಗಿ ಮೆರೆದಳು:— ತನ್ನ ಅಕ್ಷಯ ವ್ಯಕ್ತಿತ್ವದಿಂದ ಕರ್ಮ ಮತ್ತು ಜ್ಞಾನಯೋಗಗಳಲ್ಲಿ ನಿರತಳಾದ ಆ ಪಾಶ್ಚಾತ್ಯ ಹೆಣ್ಣು ಸಾಮಾನ್ಯಳಾಗಿರಲಿಲ್ಲವೆಂದು ಅವಳ ಜೀವನದ ಅಮೂಲ್ಯ ಸಾಧನೆಗಳ ಬಗ್ಗೆ ಗಮನಿಸಿದವರಿಗೆ ವೇದ್ಯವಾಗುವುದು. ಇಂಗ್ಲೆಂಡಿನಲ್ಲಿ ದಲಿತರನ್ನು ಮೇಲೆತ್ತಲು, ಕಾರ್ಮಿಕರ ಕಷ್ಟವನ್ನು ಪರಿಹರಿಸಲು, ಹೆಂಗಸರಿಗೆ ತಮ್ಮ ಸ್ವಸಮಾನಗಳನ್ನೀಯಲು ಆನಿಯು ತೀವ್ರದ ಉದ್ಯಮಗಳನ್ನು ಕೈಹಾಕಿದ್ದಳು. ತನ್ನ ವಾಗ್ಬಲದಿಂದ ಜನರನ್ನು ಹುರಿದುಂಬಿಸಿದಳು, ಮತ್ತು ಹರಿತವಾದ ಲೇಖನಿಯಿಂದ ಅವರನ್ನು ಕೆರಳಿಸಿದಳು. ಇದರ ಜತೆಗೆ ಧಾರ್ಮಿಕ ವಿಚಾರದಲ್ಲಿ ಜನತೆಯು ಅಂಧಾಭಿಮಾನವನ್ನು ಕಿತ್ತುಹಾಕಲು ತದೇಕಚಿತ್ತಳಾಗಿ ಪ್ರಯತ್ನಿಸಿದಳು. ಚಾರ್ಲ್ಸ್ ಬ್ರಾಡ್ಲೆ ಮತ್ತು ಅವಳು ಸೇರಿ ನಾಲ್ಟನ್‌ನ ಹೊತ್ತಗೆಯ ಪ್ರಕರಣದಲ್ಲಿ ಅದೆಷ್ಟು ಪ್ರಖರವಾಗಿ ಹೋರಾಡಿದರೆಂಬುದು ಅಂದಿನ ಇಂಗ್ಲೆಂಡಿನ ಜನಜಾಗೃತಿಯ ಒಂದು ಸಂಕೇತವಾಗಿದೆ.

ಇಷ್ಟೇ ಅಲ್ಲ. ಆನಿಯು ಎದೆಂಥ ಧೈರ್ಯಯುತಳಾಗಿದ್ದಳೆಂಬುದು ಅವಳು ಬರೆದು ಪ್ರಚಾರಪಡಿಸಿದ, 'A World Without God', 'Gospel of Atheism', 'The Christian Creed', 'Why I do not Believe in God?', 'Life, Death and Immortality," ಎಂಬ ಹಲವು ಕಿರುಹೊತ್ತಗೆಗಳಿಂದ ವ್ಯಕ್ತವಾಗುವುದು. ಕೋರ್ಟಿನ ಕಚೇರಿ ವ್ಯವಹಾರಗಳಲ್ಲಿ ಅವಳು ಹಲವು ಬಾರಿ ಬಾಧಿತಳಾಗಬೇಕಾಗಿತ್ತು. ಸಾಂಪ್ರದಾಯಿಕ ಮತ್ತು ಅಂಧ ಅಭಿಮಾನಕ್ಕೊಳಗಾದವರ ವಿರೋಧದಿಂದಲೂ, ತೀವ್ರಗಾಮಿಯಿಂದಲೂ, ಕಾರ್ಮಿಕರ, ಹೆಂಗಸರ, ಮಕ್ಕಳ ಪಕ್ಷಗಳಿಂದ ಅವಳು ಬ್ರಾಡ್ಲೆಯೊಡನೆ ಸೇರಿ ದುಡಿದಾಗಲೂ ಆನಿಯು ತನ್ನ ಸತ್ಯ ಮತ್ತು ಮನೋಧರ್ಮವನ್ನು ಬಿಟ್ಟುಕೊಟ್ಟಿದ್ದಿಲ್ಲ, ಅವಳು ಅದೆಷ್ಟು ನಿಷ್ಠೆಯ ಧರ್ಮನಿಷ್ಠಳಾಗಿದ್ದಳೆಂಬುದನ್ನು ಅವಳು ಈ ರೀತಿ ಹೇಳಿದ್ದಳು:—

"I dare not purchase peace with a lie. An imperious necessity forces me to speak the truth, as I see it, whether the speech pleases or displeases, whether it brings praise or blame."

ಮಹಾಂತ ಮಹಿಳೆಯಾದ ಆನಿ ಬೆಸೆಂಟ್ ಹೀಗೂ ಹೇಳಿದ್ದಳು:—

"Truth— I must keep stainless—— she may lead me into wilderness, yet I must follow her; she

may strip me of all love, yet I must pursue her --- My epitaph shall be this: "She Tried to Follow Truth"!

<u>ತತ್ತ್ವಜ್ಞಾನಕ್ಕೆ (Theosophy) ಆನಿಯು ಮಾರುಹೋದದ್ದು:—</u>

ಕ್ರೈಸ್ತಧರ್ಮದಲ್ಲಿ ಯಾವ ಉತ್ತರವೂ ಆನಿಗೆ ದೊರೆಯದಾಯಿತು. ನಾಸ್ತಿಕ್ಯ, ಧರ್ಮ ಮತ್ತು ಸೇವಾಭಾವದಲ್ಲಿಯೇ ದೇವರನ್ನು ಕಂಡಿದ್ದ ಆವಳು ನಾಸ್ತಿಕಳೆಂಬುದಾಗಿ ಜನರಿಂದ ಕರೆಯಲ್ಪಟ್ಟಿದ್ದರೂ ಆವಳು ಮತ್ತು ಚಾರ್ಲ್ಸ್ ಬ್ರಾಡ್ಲೋ ಇವರೀರ್ವರೂ ಎಲ್ಲಾ ದೇವಭಕ್ತರನ್ನು ಮೀರಿದ ಭಕ್ತರೂ ಆಸ್ತಿಕರೂ ಆಗಿದ್ದರೆಂದು ಹೇಳಬೇಕಿದೆ. ಹುಟ್ಟು, ಸಾವು, ಇಹ, ಪರ, ಜನ್ಮ, ಆತ್ಮ, ಯೋಗ, ಸಾಂಖ್ಯ ಇತ್ಯಾದಿಗಳ ಬಗ್ಗೆ ಬಹಿರಂಗವಾಗಿ ಚಿಂತಿಸಿ ನೂರಾರು ಲೇಖನಗಳನ್ನು ಆಗಲೇ ಆನಿಯು ಬರೆದಿದ್ದಳು. ಜನದ ಏಳಿಗೆಯ ಸಂವರ್ಧನೆಯಲ್ಲಿ ಆಗದೆ ಲೋಕದ ಉದ್ಧಾರವಾಗದು ಎಂದು ನಂಬಿ ಅದರಂತೆಯೇ ತನ್ನ ಜೀವನವನ್ನು ಜನಸೇವೆಗೆಂದೇ ಮೀಸಲಾಗಿಟ್ಟಿದ್ದಳು. ಅದಕ್ಕೆ ತಕ್ಕಂತೆ ತನ್ನ ಸೇವಾಕ್ಷೇತ್ರವನ್ನು ತನ್ನ ವಿಶಾಲದೃಷ್ಟಿಯಿಂದಲೇ ವಿಶಾಲವಾಗಿಸಿದ್ದಳು. ತನ್ನ ನಲವತ್ತು ವರ್ಷ ಪ್ರಾಯದೊಳಗಾಗಿಯೇ ಯುರೋಪು ಖಂಡದ ಎಲ್ಲಾ ದೇಶಗಳನ್ನು ಅಮೇರಿಕಾ ಖಂಡವನ್ನು ಸಂದರ್ಶಿಸಿದ್ದಳು, ಹಲವು ಅಂತರ್‌ರಾಷ್ಟ್ರೀಯ ಸಮ್ಮೇಳನಗಳಲ್ಲಿ ಕಾರ್ಮಿಕರ ಸಭೆಗಳಲ್ಲಿ ತಾತ್ವಿಕ ಗೋಷ್ಠಿಗಳಲ್ಲಿ ಆದಾಗಲೇ ಭಾಗವಹಿಸಿದ್ದಳು, ಇಂಗ್ಲಿಷ್, ಫ್ರೆಂಚ್, ಮತ್ತು ಜರ್ಮನ್ ಭಾಷೆಗಳಲ್ಲಿ ಏಕಸಮಾನವಾಗಿ ಮಾತಾಡುತ್ತಿದ್ದಳು, "Much indeed had been done but there was not real movement of self-sacrificing devotion, in which men worked for love's sake only, and asked but to give, not to take. Where was the material for the nobler social order, where the hewn stones for the building of the Temple of Man?" ಎಂಬುದಾಗಿ ಆವಳು ನ್ಯಾಯವಾಗಿಯೇ ಕೇಳಿದ್ದಳು.

ಹೀಗಿದ್ದ ಆನಿಗೆ ಸ್ಫೂರ್ತಿ ಪ್ರಮತ್ತ ಸನ್ನಿವೇಶದಲ್ಲಿ ಮತ್ತೊಂದು ದಿಶೆಯಿಂದ ದೊರೆತಿತ್ತು. 'ರಷ್ಯಾದೇಶದ ಮೇಡಂ ಬ್ಲಾವಟ್ಸ್ಕಿಯು ಪ್ರತಿಪಾದಿಸಿದ ತತ್ತ್ವಜ್ಞಾನ (Theosophy) ಪ್ರಚಾರವನ್ನು ಮಾಡುತ್ತಾ ಇದ್ದು ಕಡೆಗೆ ಇಂಗ್ಲೆಂಡಿಗೆ ಬಂದಿದ್ದ ಹೆಚ್. ಪಿ. ಬ್ಲಾವಟ್ಸ್ಕಿ ಇವರನ್ನು ಭೇಟಿಯಾಗುವ ಅವಕಾಶ ಆನಿಗೆ ದೊರೆಯಿತು. ತನ್ನ ನೆಚ್ಚಿನ ಮಿತ್ರರೂ ಸಹೋದ್ಯೋಗಿಗಳೂ ತನ್ನ ಬಾಳಿನ ಕಷ್ಟನಷ್ಟದಲ್ಲಿ ತನಗೆ ನೆರವಾದವರೂ ಆದ ಚಾರ್ಲ್ಸ್ ಬ್ರಾಡ್ಲೋ ಇವರಂಥ ವೀರ ಹೋರಾಟಗಾರನನ್ನು ಬಿಟ್ಟು

ಆನಿಯು ಬ್ಲಾವಟ್‌ಸ್ಕಿ ಇವಳ ತತ್ತ್ವಜ್ಞಾನ ಸಂದೇಶಗಳಿಗೆ ಮಾರುಹೋದ ಳು. ಇಂಥ ಒಂದು ನಿರ್ಣಯವನ್ನು ಬಹು ದುಃಖದಿಂದ ಮಾಡಿದ ಳಾದರೂ 'ಆದರಲ್ಲಿ ತನಗೆ ತೋರಿದ ಜೀವನವನ್ನು ಮಾಡುವ ಅವ ಕಾಶವಿದೆಯೆಂಬುದಾಗಿ ಅರಿತುಕೊಂಡಳು. ಆ ಕಾರ್ಯದಿಂದ "I knelt down before her (Madame Blavatsky) and clasped her hands in mine looking straight into her eyes. "Will you accept me as your pupil, and give me the honour of proclaiming you my teacher in the face of the world?" ಎಂಬುದಾಗಿ "ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್," ಎಂಬುದಾಗಿ ಆನಿಯು ಶ್ರೀಮತಿ ಹೆಲ್ಲೆನ್ ಬ್ಲಾವಟ್‌ಸ್ಕಿ ಇವಳ ಮರೆಹೊಕ್ಕಳು.

<u>ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಆನಿ ಬಿಸೆಂಟ್</u>:— ತನ್ನ ಜೀವನದ ತಾಯಿಯ ಕೊರಳನ್ನು ಮೀರಿ ಸತ್ತ್ವಧರ್ಮಗಳನ್ನು ಎತ್ತಿ ಹಿಡಿಯಲು, ತಾನು ನಾಸ್ತಿಕರಿಂದನ್ನಿಸಿಕೊಂಡಿದ್ದಳಿದೆ ಆಗ ತನ್ನ ನೆಚ್ಚಿನ ಮಿತ್ರರನ್ನು ಅಗಲಿ ತತ್ತ್ವಜ್ಞಾನ (Theosophy) ಸಂಸ್ಥೆಗೆ ಸೇರಿ ಜನರ ನಿಂದೆಗೆ ಪಾತ್ರಳಾದರೂ ಆನಿ ಬಿಸೆಂಟ್ ಇವಳು ತನ್ನ ಬಾಳಿನ ಧ್ಯೇಯವನ್ನು, ಧರ್ಮನೀತಿಗಳಲ್ಲಿದ್ದ ಶ್ರದ್ಧೆಯನ್ನು ಕಳೆದುಕೊಳ್ಳಲಿಲ್ಲ. ತತ್ತ್ವಜ್ಞಾನ ಸಂಸ್ಥೆಯ ಧ್ಯೇಯವೇನೆಂಬುದನ್ನು ಈ ರೀತಿ ಹೇಳಿದ್ದಳು:—

1) "To find a Universal Brotherhood without distinction of race or creed; 2) to forward a study of Aryan literature and philosophy, and 3) to investigate unexplained laws of nature and the physical powers latent in man."

ಈ ಉದಾತ್ತ ಧ್ಯೇಯಗಳನ್ನು ಸಾಧಿಸಲು ಆನಿಯು ಅಹೋರಾತ್ರಿ ಪ್ರಯತ್ನಿಸಿದಳು. ಆಯರ್ಲೆಂಡದಲ್ಲಿ ವಿಶೇಷ ಆಸಕ್ತಿಯನ್ನು ವಹಿಸತೊಡಗಿದಳು, ಅಜ್ಞಾನದಲ್ಲಿ ತೊಳಲುವ ಜಗತ್ತಿಗೆ ಈ Theosophy ಮುಖ್ಯವಾಗಿ ಬೇಕಾಗಿದೆಯೆಂದು ತನ್ನ ಗುರು ಬ್ಲಾವಟ್‌ಸ್ಕಿ ಇವಳಂತೆಯೇ ಪ್ರತಿಪಾದಿಸಲಾರಂಭಿಸಿದಳು. ತಾನು ಹಿಂದೆ ಕೈಗೊಂಡಿದ್ದ ಬಡಜನರ, ಕಾರ್ಮಿಕರ ಮತ್ತು ನಿರಾಶ್ರಿತರ ಸೇವೆಯ ನ್ನೇನೂ ಸ್ವಲ್ಪವೂ ಕಡಿಮೆ ಮಾಡಲಿಲ್ಲ, ಆದರೊಡನೆಯೇ ಆನಿಯು ತತ್ತ್ವಜ್ಞಾನದ ಬಗ್ಗೆ ಲೇಖನಗಳನ್ನು, ಭಾಷಣಗಳನ್ನು ಎಲ್ಲೆಲ್ಲೂ ಬಿತ್ತರಿಸಿದಳು: "Men— whether they really and seriously believe that throughout the mighty Universe, in which our little planet is but a tiny speck of sand

in the Sahara, this one planet only is inhabited by living things? Is all the Universe dumb save for our voices? Eyeless save for our vision? Dead save for our life? Such preposterous belief was well enough when Christianity regarded our world as the centre of the Universe---," ಎಂಬೀ ಬಗೆಯ ಗಹನವಾದ ವಿಚಾರಗಳನ್ನೆಲ್ಲ ಬಿಚ್ಚಿಟ್ಟು ಕ್ರೈಸ್ತ ಧರ್ಮಗುರುಗಳನ್ನೆಲ್ಲ ತಬ್ಬಿಬ್ಬಾಗಿಸಿದಳು.

ಕ್ರಿ.ಶ. 1893ರಲ್ಲಿ ಚಿಕಾಗೋ ನಗರದಲ್ಲಿ ನೆರೆದ ವಿಶ್ವಧರ್ಮ ಸಮ್ಮೇಳನದಲ್ಲಿ ಅನಿ ಬೆಸೆಂಟ್ ಇವಳು ಜಗತ್ತಿನ ತತ್ವಜ್ಞಾನ ಸಂಸ್ಥೆಗಳ ಪರವಾಗಿ ಭಾಗವಹಿಸಿದ್ದಳು. ಸ್ವಾಮಿ ವಿವೇಕಾನಂದರಂತೆ ಈ ಸಭೆಯಲ್ಲಿ ಮಾತಾಡಿ ಜನರ ಪ್ರಶಂಸೆಗೆ ಪಾತ್ರನಾದ ರೀತಿಯಲ್ಲಿಯೇ 'ಅನಿ ಬೆಸೆಂಟ್ ಇವಳು ಆ ಸಭೆಯನ್ನು ತನ್ನ ವಾಗ್ಬಲದಿಂದ ಮುಗ್ಧಗೊಳಿಸಿದಳೆಂದು ಹೇಳಲಾಗಿದೆ. "She presented theosophy to 3,000 audience ----and, rose to great heights of eloquence, so exhilerating were influences on the gathering."

<u>ತತ್ವಜ್ಞಾನ ಸಿದ್ಧಾಂತವು ಲೋಕವ್ಯಾಪಕವಾಯಿತು:</u>— ಅನಿ ಬೆಸೆಂಟ್ ಇವಳು ಸತತವಾಗಿ 1890 ರಿಂದ 1930 ರ ವರೆಗೆ, ಎಂದರೆ ನಲ್ವತ್ತು ವರ್ಷಗಳ ಕಾಲ, ಯುರೋಪಿನ ಎಲ್ಲ ರಾಷ್ಟ್ರಗಳನ್ನು, ಹಿಂದುಸ್ಥಾನ, ಆಸ್ಟ್ರೇಲಿಯಾ, ಚೀನಾ, ಅಮೇರಿಕಾದ ಸಂಯುಕ್ತ ಸಂಸ್ಥಾನಗಳನ್ನು ಸಂದರ್ಶಿಸುತ್ತ ತತ್ವಜ್ಞಾನ (Theosophy) ಸಂದೇಶಗಳನ್ನು ಎಲ್ಲೆಲ್ಲ ಬಿತ್ತಿದಳು. ಅವಳು ತನ್ನ ವಿದ್ವತ್ತಿನಿಂದ, ಜ್ಞಾನ ಪರಿಪೂರ್ಣತೆಯಿಂದ ಮತ್ತು ತನ್ನ ವಾಗ್ಬಲದಿಂದ ವಿವಿಧ ರಾಷ್ಟ್ರಗಳ ಜನರನ್ನು ಬೆರಗುಗೊಳಿಸಿದಳು. ಅದಕ್ಕೆ ತಕ್ಕಂತೆ ಅವಳ ಕಂಠಸ್ವರವೂ ಮಧುರವಾಗಿತ್ತು. ಆ ವರೆಗೆ ಯಾವ ಪಾಶ್ಚಾತ್ಯನೂ ಆ ರೀತಿಯಾಗಿ ಲೋಕಸಂಚಾರ ಮಾಡಿ ಅತಿ ಗಹನವಾದ ವಿಷಯಗಳ ಬಗ್ಗೆ ಜನಕ್ಕೆ ಬೋಧಿಸಿದ್ದೇ ಇಲ್ಲ. ಅವಳು ಹೇಳುತ್ತಿದ್ದ ವಿಷಯಗಳಾದರೋ ತತ್ವಶಾಸ್ತ್ರಕ್ಕೆ ಹೊಸವಾಗಿ ತುಂಬಾ ಮಹತ್ವದ್ದಾಗಿದ್ದವು. "The World's great Heads, Life after Death," The Building of the Cosmos, Pilgrimage of the Soul, India's place among the Nations, the insufficiency of Materialism, Man and his Destiny, Theosophy - the Science of the Soul, the Political Status of Women, ಎಂದೀ ಬಗೆಯ ವಿಚಾರಗಳ ಮೇಲೆ ಬೋಧಪ್ರದವಾದ ಭಾಷಣಗಳನ್ನು ಪ್ರಾರಂಭಿಸಿ ಕೊಡುತ್ತಿದ್ದಳು.

ಪರಿಣಾಮವಾಗಿ ಬ್ರಹ್ಮಜ್ಞಾನ ಸಂಸ್ಥೆ (Theosophical Society) ಇದು ಲೋಕವಿಖ್ಯಾತವಾಯಿತು. ಜಗತ್ತಿನ ನಾನಾ ಕಡೆಗಳಲ್ಲಿ ಇದರ ಶಾಖೆಗಳು ಮತ್ತು ಶಿಬಿರಗಳು ಸ್ಥಾಪಿತವಾದುವು. ಶ್ರೀಲಂಕಾದ ಕ್ಯಾಂಡಿ, ನ್ಯೂಜೀಲ್ಯಾಂಡಿನ ಆಕ್ಲಾಂಡ್, ಆಸ್ಟ್ರೇಲ್ಯಾದ ಸಿಡ್ನಿ, ಹಿಂದೂಸ್ಥಾನದ ಸಿಂಧ್, ಫಿನ್‌ಲ್ಯಾಂಡಿನ ಹೆಲ್‌ಸಿಂಕಿ, ಇಟಲಿಯ ಸುಂದರ ಮಿಲಾನ್, ಸಂಯುಕ್ತ ಸಂಸ್ಥಾನದ ಹಲವಾರು ನಗರಗಳಿಂದ ಹಿಡಿದು ಕ್ಯಾನಡಾದ ವ್ಯಾನ್‌ಕೂವರ್ ವರೆಗೂ ಬ್ರಹ್ಮಜ್ಞಾನ ಸಂಸ್ಥೆಯ ಶಿಬಿರಗಳು ತೆರೆಯಲ್ಪಟ್ಟುವು. ಆನಿ ಬೆಸೆಂಟ್ ಇವಳು ಇಲ್ಲಿ ಹಲವು ಬಾರಿ ಹೋದಳು, ತನ್ನ ಹಿರಿಯರಾದ ಬ್ಲಾವಟ್‌ಸ್ಕಿ, ಮತ್ತು ಸಂಸ್ಥೆಯ ಸ್ಥಾಪಕನೂ ಮೊದಲ ಅಧ್ಯಕ್ಷನೂ ಆದ ಕರ್ನಲ್ ಹೆನ್ರಿ ಆಲ್ಕಾಟ್ ಇವರನ್ನು ಮೀರಿದ ವಿಶ್ವವಿಖ್ಯಾತ ವ್ಯಕ್ತಿಯಾಗಿ ವಿರಾಜಿಸಿದಳು. ತತ್ವಜ್ಞಾನ ಸಂಸ್ಥೆಗೆ ಅವಳಿತ್ತ ಪ್ರಾರ್ಥನೆಯು ಹೀಗಿದೆ. —

"O Hidden Life, vibrant in every atom,
O Hidden Light, shining in every creature,
O Hidden Love, embracing all in One-ness,
May each who feels himself as one with Thee,
Know he is also one with every other."

ಭಾರತ ಭೂಮಿಯೇ ತನ್ನ ಜನ್ಮಭೂಮಿಯೆಂದು ಬಗೆದಳು:- ಆನಿ ಬೆಸೆಂಟ್ ಇವಳು ಭಾರತಖಂಡದತ್ತ ತನ್ನ ಆತ್ಮವು ಸೆಳೆಯುತ್ತಿದೆ; ಆರ್ಯ ಧರ್ಮವು ತನ್ನ ನರನಾಡಿಗಳಲ್ಲಿದೆ; ಹಿಂದೂ ಧರ್ಮವು ಪುರಾತನವಾದುದು, ಮಾತ್ರವಲ್ಲ ಸತ್ವಶಾಲಿಯೂ ಆಗಿದೆ. ಹಿಂದೂ ಮತವು ಅಳಿದರೆ ಭಾರತಖಂಡವು ಎಲ್ಲಿ ಇದೆ? ತನ್ನ ಯಾವುದೋ ಜನ್ಮಾಂತರಗಳ ಕರ್ಮಫಲದ ಫಲವಾಗಿ ತಾನು ಈ ದೇಶಕ್ಕೆ ಕಾಲಿಟ್ಟಿದ್ದೇನೆ, ಹಿಂದೂದೇಶವು ಜಗತ್ತಿಗೆ ಮಾರ್ಗದರ್ಶಕವಾಗಿ ಅದೆ; ಎಂದು ಮೊದಲಾಗಿ ಅವಳು ಸಾರಿ ನಿದ್ರಿಸಿದ್ದ ಜನವನ್ನು ಕ್ರಾಂತಿಕಾರಕವಾಗಿ ಬಡಿದೆಬ್ಬಿಸಿ ದೇಶಕ್ಕೆ ಜೀವಕಳೆಯನ್ನೊದಗಿಸಿದ ಕೀರ್ತಿಯು ಆನಿ ಬೆಸೆಂಟ್ ಇವಳಿಗೆ ಸಲ್ಲತಕ್ಕದಾಗಿದೆ, ಅವಳಿಗೆ ಹಿಂದೆ ಪ್ರಖ್ಯಾತ ಪಾಶ್ಚಾತ್ಯ ವಿದ್ವಾಂಸರು ಈ ಎಲ್ಲಾ ವಿಷಯಗಳನ್ನು ಸಾಹಿತ್ಯ ದೃಷ್ಟಿಯಿಂದ ಪರಿಶೀಲಿಸಿದ್ದಾರೆ, ಆದರೆ ಆನಿ ಬೆಸೆಂಟ್ ಬರೇ ಹೇಳಿದ್ದು ಮಾತ್ರವಲ್ಲ, ಬರೆದುದು ಮಾತ್ರವಲ್ಲ, ತಾನಾಗಿಯೇ ದೇಶದ ಉದ್ದಗಲಕ್ಕೂ ಹೋಗಿ ಜನತೆಯಲ್ಲಿ ವಿಚಾರಜ್ಞಾನವನ್ನು ಮೊಳಗಿಸಲು ಕಾರಣಳಾದಳು.

ಶ್ರೀಮತಿ ಬೆಸೆಂಟ್ ಇವಳು 1893ನೇ ವರ್ಷದ ನವಂಬರ್ 16ರಂದು ಬೆಳಿಗ್ಗೆ 10.24 ಗಂಟೆಗೆ ಭಾರತದ ಮಣ್ಣಿಗೆ ಕಾಲಿಟ್ಟಳು, ಶ್ರೀಲಂಕಾದಲ್ಲಿ ಕಾರ್ಯಕ್ರಮವನ್ನು ಮುಗಿಸಿಕೊಂಡು ಟ್ಯುಟಿಕಾರಿನ್

ನಲ್ಲಿ ಬಂದಿಳಿದಾಗ ಸ್ಥಳೀಯ ಜನರು ಅವಳನ್ನು ಸ್ವಾಗತಿಸಿದರು, ಅಲ್ಲಿಂದ ಬೆಂಗಳೂರು, ವಿಜಯವಾಡ ಮಾರ್ಗವಾಗಿ ಕೃಷ್ಣಾನದಿಯನ್ನು ದಾಟಿ ಬೇರೊಂದು ರೈಲು ಹತ್ತಿ ಡಿಸೆಂಬರ್ ೨೦ ರಂದು ತಮ್ಮ ತತ್ತ್ವಜ್ಞಾನ ಸಂಸ್ಥೆಯ ಅಂತರ್ರಾಷ್ಟ್ರೀಯ ಕೇಂದ್ರವಾದ ಅಡೆಯಾರನ್ನು ತಲುಪಿದಳು, ಅದರನಂತರ ಮದ್ರಾಸಿನಲ್ಲಿ ನಾಲ್ಕಾರು ತತ್ತ್ವಗರ್ಭಿತವಾದ ಭಾಷಣಗಳನ್ನು ಮಾಡಿದಳು. ಕ್ರಿ.ಶ. 1894 ರ ಜನವರಿ 7 ರಂದು ಅವಳು ಕಲ್ಕತ್ತಾಕ್ಕೆ ಹಡಗಿನಲ್ಲಿ ಹೋಗಿ ಆ ಮಾರ್ಗವಾಗಿ ಬನಾರಸ್ಸ(ಕಾಶಿ)ನ್ನು ತಲುಪಿದಳು. ಅಲ್ಲಿಲ್ಲ ನೋಡಿಕೊಂಡು ಆಗ್ರಾ ಮಾರ್ಗವಾಗಿ ಬೊಂಬಾಯಿಗೆ ತಲುಪಿ ಆ ವರ್ಷದ ಮಾರ್ಚ್ 15 ರಂದು ಯುರೋಪಿಗೆ ಹೋದಳು. ಅದೇ ವರ್ಷ ಆಸ್ಟ್ರೇಲ್ಯಾ, ನ್ಯೂಜಿಲ್ಯಾಂಡ್ ಪ್ರವಾಸವನ್ನು ಮುಗಿಸಿ ಆ ವರ್ಷಾಂತ್ಯದಲ್ಲಿ ಮದ್ರಾಸಿಗೆ ತಲುಪಿದಳು. ಹೀಗೆ ಈ ಮಹಿಳೆಯು ಅಧಿಕ ದೂರದ ಪ್ರಯಾಣವನ್ನೆಲ್ಲ ಆ ಕಾಲದಲ್ಲಿ ಕೈಕೊಂಡು ಜಗತ್ತಿನ ನೇತೃತ್ವ ಪ್ರತಿವರ್ಷವೂ ಬೆಳೆಸುತ್ತ ಕಡೆಗೆ ತನ್ನ ಪ್ರೀತಿಯ ಭಾರತಭೂಮಿಯಲ್ಲೇ ವಾಸಿಯೊಂದು ಭಾವಿಸಿ ಅಲ್ಲಿಂದನಂತರ ಬೆನಾರಸ್ ಅಥವಾ ಅಡೆಯಾರ್ ಎಂಬಂತೆ 1933 ರ ವರೆಗೂ ವಾಸಿಸಿದ್ದಳು.

ಭಾರತಖಂಡದ ಉದ್ಧಾರಕ್ಕೆ ದೀಕ್ಷೆಯನ್ನು ತೊಟ್ಟಳು:-

"India in the past was given by the Supreme the one great duty among the nations of the world, to be the mother of religion, to be the cradle of faith, to send out to all other peoples the truths of the spiritual life. That was the primary duty of India and all good things were here as long as she fulfilled her Dharma. As gradually she fell away from the position of the mighty imperial mother of the world's faith, she lost all else that had made her glorious in the past. Her wealth diminished, her independence was gradually undermined; lower and lower she sank, until her people well nigh lost their place among the nations. Other nations have trodden that path before. There were mighty civilizations in the older world, and nothing but their ruins remain today to mark where once they ruled, fought and lived ---- While nation after nation died and was buried, India, older than the oldest of these - is not

yet dead. Her dust is not yet on the funeral pyre. India still lives, breathing faint and low. India, the ancient mother, most ancient of all, still stands as Durga stands. Eternity lies behind the goddess, but she remains ever young, for, spirit knows no age, no birth, no dying. And where a nation stands as emblem of spirituality, she must live---."

ಇದೆಂಥ ಅಮರವಾಣಿ! ಉತ್ಕೃಷ್ಟವಾದ ನುಡಿಮುತ್ತು, ಇದರಿಂದ ಯಾವ ಭಾರತೀಯನೂ ಹೆಮ್ಮೆಯಿಂದ ಹಿಗ್ಗಬೇಕಿದೆ. ನಾನು "ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ" ಎಂಬ ಗ್ರಂಥವನ್ನು ಬರೆದಾಗ ಪಾಶ್ಚಾತ್ಯರು ಹಿಂದು ಜನಾಂಗಕ್ಕಾಗಿ ಈ ದೇಶದ ಧರ್ಮ ಸಂಸ್ಕೃತಿಗಳ ಪುನರುದ್ಧಾರವನ್ನು ಮಾಡಲು ಬಂದ ದೇವದೂತರು, ಮಹಾನುಭಾವರುಗಳು ಎಂದು ಮೊದಲಾಗಿ ಹೇಳಿದ್ದೆನು. ಅನಿ ಬೆಸೆಂಟ್ ಇವರು ಅಂಥವರಲ್ಲಿ ಓರ್ವರು. ಯಾವ ಭಾರತೀಯನನ್ನೂ ಮೀರಿದ ಭಾರತೀಯಳಾಗಿ ಇಲ್ಲಿ ನಲ್ವತ್ತು ವರ್ಷಗಳ ಕಾಲ ಹೋರಾಡಿದಳು. ನಿದ್ರಿತ ಜನಾಂಗವನ್ನು ಎಚ್ಚರಿಸಿದಳು. ಸರ್ ಓಕ್ಟೇವಿಯನ್ ಹ್ಯೂಮ್ ಇವರು ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಿ ನಮ್ಮ ಜನರನ್ನು ಸ್ವತಂತ್ರಗೊಳಿಸುವ ರೀತಿಯಲ್ಲಿಯೇ ಅನಿ ಬೆಸೆಂಟ್ ಇವಳೂ ದೇಶದಲ್ಲಿ ನವಜಾಗೃತಿಯನ್ನೆಬ್ಬಿಸಿದಳು:—

"The Mother (Durga), looking over the land and asking for someone to serve her (India), raised her eyes----and said, "Lo, I will take some of my children's souls----and send them forth to other nations; they shall be born among other peoples----and they, from many lands, have heard the Mother's call and have come across many oceans to her summoning voice, and they ask her own children----to be truer to India than those born on Indian soil------I tell you that the future that lies before you shall be greater than your past has been, mightier in spiritual knowledge, grander in spiritual achievement, more potent in spiritual life, that the very Rishis themselves who are without, standing, waiting, shall again find their home on Indian soil----."

<u>ಪುಣ್ಯಕ್ಷೇತ್ರ ಕಾಶಿಯಲ್ಲಿ ಅನಿಯ ಆತ್ಮವು ಇರುತ್ತಿತ್ತು!</u> — ಕ್ರಿ. ಶ. 1894ರಲ್ಲಿ ಅನಿಯು ಈ ದೇಶಕ್ಕೆ ಕಾಲಿಟ್ಟಂದಿನಿಂದ ಅವಳು ಪ್ರತಿವರ್ಷವೂ ಹಿಂದಿನ ಅಭ್ಯಾಸದಂತೆ ವಿಶ್ವಸಂಚಾರವನ್ನು ಮಾಡುತ್ತಾ ಪೌರಸ್ತ್ಯ ತತ್ವಶಾಸ್ತ್ರದ ಬಗ್ಗೆ ಹಲವು ದೇಶಗಳಲ್ಲಿ ಸಾರ್ವಜನಿಕವಾದ ಭಾಷಣಗಳನ್ನು ಕೊಡುತ್ತಿದ್ದರೂ ಅವಳ ಹೃದಯವು ಈ ದೇಶದಲ್ಲಿ ನೆಲೆಸಿತ್ತು. ಮೇಲೆ ಹೇಳಿದ ಅವಳ ಮಾತುಗಳಂತೆ ಭಾರತ ಮಾತೆಯ ಸೇವೆಗೆ ಸಾಗರಗಳನ್ನು ಬಳಸಿ ಬಂದ ವಿದೇಶೀಯರಲ್ಲಿ ಅನಿಯು ಗಣ್ಯಳು ಮಾತ್ರವಲ್ಲ, ಅಗ್ರಗಣ್ಯರಾದ ಕೆಲವೇ ಜನರಲ್ಲಿ ಅವಳೂ ಒಬ್ಬಳು. ದಕ್ಷಿಣ ಹಿಂದೂಸ್ಥಾನದಲ್ಲಿ ಅಡೆಯಾರ್ ಅವಳ ತತ್ವಜ್ಞಾನ ಶಿಬಿರಗಳ ಕೇಂದ್ರವಾದರೆ 'ಬೆನಾರಸ್' ಅಥವಾ ಕಾಶಿಯು ಅವಳಿಗೆ ಅಕ್ಷರಶಃ ಪುಣ್ಯಕ್ಷೇತ್ರವಾಗಿತ್ತು. ದೇವರುಗಳು, ತಪಸ್ವಿಗಳು, ಯೋಗಿ ಯೋಗಿನಿಯರು ನೆಲೆಸಿದ್ದ ಸ್ಥಳವಾಗಿತ್ತು. ಇಲ್ಲಿ ಅವಳು 'ಶಾಂತಿಕುಂಜ'ವೆಂಬ ತನ್ನ ಬಿಡಾರದಲ್ಲಿ ಪ್ರತಿವರ್ಷವೂ ಹೋಗಿ ಕೆಲವು ದಿನ ಇರುತ್ತಿದ್ದಳು. ತನ್ನ ಅಂತರ್ರಾಷ್ಟ್ರೀಯ ಪತ್ರವ್ಯವಹಾರಗಳನ್ನು ಇಲ್ಲಿಂದಲೂ ನಡೆಸುತ್ತಲೇ ಇದ್ದಳು. "I write in Kashi, in Benares, the city of many memories, of great sages and great saints, of learned philosophers and famous kings, – the city which is the very heart of Hinduism ----in that beloved city I am writing, in my old home, Shanti Kunja, at my old writing table----,"

ಈ ರೀತಿ ಅನಿಯು ಕಾಶಿಯನ್ನು ತನ್ನ ಭಾರತೀಯ ವಾಸಸ್ಥಾನವಾಗಿ ಪ್ರತಿವರ್ಷವೂ ಉಪಯೋಗಿಸಿದ್ದು ಮಾತ್ರವಲ್ಲ, ಅವಳು ಇಲ್ಲಿ ಹಿಂದು ಹಿಂದೂ ವಿದ್ಯಾರ್ಥಿಯರನ್ನು ಹುಡುಗಿಯರ ಶಾಲೆಯನ್ನು ಸ್ಥಾಪಿಸಿ ಈ ದೇಶದಲ್ಲಿ ರಾಷ್ಟ್ರೀಯ ವಿದ್ಯಾಭ್ಯಾಸದ ಯೋಜನೆಗೆ ತಳಹದಿಯನ್ನು ಹಾಕಿದಳು. ಅವಳು ಅಂತರ್ರಾಷ್ಟ್ರೀಯ ಖ್ಯಾತ ಪತ್ರಿಕೆಗಳು ತತ್ವಜ್ಞಾನ (Theosophy)ವನ್ನು ಅವಹೇಳಿಸುತ್ತಿದ್ದರೂ ಈ ದೇಶದ ಇಂದಿನ ಪರಿಸ್ಥಿತಿಗೆ ವಿದ್ಯೆಯೇ ಅತ್ಯಗತ್ಯವಾಗಿ ಬೇಕಾಗಿರುವುದೆಂದು ಮನಗಂಡಳು. ಅದರಂತೆ ಕಾಶಿವಿದ್ಯಾಪೀಠವನ್ನು ವಿಶ್ವವಿದ್ಯಾಲಯದ ಮಟ್ಟಕ್ಕೇರಿಸಿ ತನ್ನ ಮಡಿಲಲ್ಲಿ ಇದನ್ನಿಟ್ಟು ಪೋಷಿಸಿದಳು. ಉತ್ತಮ ವಿದ್ಯಾಕ್ರಮವೂ ತಜ್ಞ ಪ್ರಾಧ್ಯಾಪಕರೂ ಮೊದಲ್ಗೊಂಡು ಈ ಸಂಸ್ಥೆಯು ಪ್ರಸಿದ್ಧವಾಯಿತು, ಮಾತ್ರವಲ್ಲ, ಅನಿ ಬೆಸೆಂಟ್ ಇವಳ ಹೆಸರು ದೇಶದಲ್ಲಿ ಜನಜನಿತವಾಯಿತು.

<u>"ನನ್ನ ನಿಜವಾದ ಹುಟ್ಟಿನಾಡನ್ನು ಮರೆಯಲಾರೆನು,"</u>: ಕಳೆದ ಶತ

ಮಾನದಲ್ಲಿ ನೂರಾರು ಪಾಶ್ಚಾತ್ಯ ಋಷಿಗಳು ಭಾರತೀಯ ಧರ್ಮ, ತತ್ವಗಳ ಸಾರವನ್ನು ತಮ್ಮ ಪ್ರಚಾರ ಬರಹಗಳ ಮೂಲಕ ಪಶ್ಚಿಮ ವಿದೇಶಗಳಲ್ಲಿ ಹರಡಿದರು. ಆದರೆ ಆನಿ ಬೆಸೆಂಟ್ ಇವರಂತೆ ವಿದೇಶಗಳಲ್ಲಿ ಭಾರತೀಯ ಧರ್ಮವನ್ನು ತನ್ನ ವಾಗ್ಬಲದಿಂದ ಬಿತ್ತರಿಸಿದವರು ಯಾರೂ ಇಲ್ಲ. ಆಕೆ ಕರ್ಮಯೋಗಿ, ಜ್ಞಾನಯೋಗಿ. ಹಿಂದೂ ವಿಚಾರಗಳನ್ನು ಕುರಿತು ಉದ್ಬೋಧಕವಾದ ಭಾಷಣಗಳನ್ನು ಯುರೋಪ್, ಅಮೇರಿಕಾ, ಆಸ್ಟ್ರೇಲಿಯಾ, ಜಪಾನ್ ಮೊದಲಾದ ದೇಶಗಳಲ್ಲಿ ಕೊಡುತ್ತಲೇ ಇದ್ದಳು. ಆದರೆ ಮೇಲೆ ಹೇಳಿದಂತೆ ಆಕೆಯ ಆತ್ಮ ಈ ದೇಶದತ್ತ ಇತ್ತು. ತಾನು ಎತ್ತ ಹೋದರೂ ಭಾರತಖಂಡವು ಆಯಸ್ಕಾಂತದಂತೆ ತನ್ನನ್ನು ಆಕರ್ಷಿಸುತ್ತದೆ ಎಂಬುದಾಗಿ ಆನಿಯು ಹೇಳುತ್ತಲೇ ಇದ್ದಳು. ಆ ಕಾರಣದಿಂದಲೇ ಸತ್ವವಿಲ್ಲದೆ ಸೊರಗಿದ್ದ ಈ ದೇಶದ ಅಭಿವೃದ್ಧಿಗೆ, ಸುಧಾರಣೆಗೆ, ವಿದ್ಯಾಪ್ರಗತಿಗೆ ಮತ್ತು ಸ್ವಾತಂತ್ರ್ಯಕ್ಕೆ ಪ್ರಯಾಸಪಟ್ಟು ದುಡಿದಳು. ಪುನಃ ಸರ್ ಆಕ್ಟೇವಿಯನ್ ಹ್ಯೂಮ್ ಹೇಳಿದ ಮಾತುಗಳನ್ನು ಅಂದಿನ ಆ ನಿಜವಾದ ಪಾಶ್ಚಾತ್ಯ ದೇಶಸೇವಕರ ದೃಷ್ಟಿಕೋನ ಹೇಗಿತ್ತೆಂಬುದಕ್ಕೆ ಇಲ್ಲಿ ಕೊಡಲಾಗಿದೆ:-

"Whether in the individual or the nation, all vital progress must spring from within; and it is you, her most cultured and enlightened minds, her most favoured sons, that your country must look for the initiative. In vain many aliens like myself, love India ---- the real work must ever be done by the people of the country themselves. As I said before, you are the salt of the land. And, if amongst even you, the elite, fifty men cannot be found with sufficient power of self-sacrifice, sufficient love and pride in their country, sufficient, genuine and unselfish patriotism to take the initiative ---- then there is no hope for India."

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಈ ದೇಶದ ಜನವನ್ನು ಸಂಘಟಿಸಲು ಅವರು ಬಹು ಪ್ರಯಾಸಪಟ್ಟರು, ಅವರು ಈ ದೇಶದ ಧರ್ಮ, ಸಂಸ್ಕೃತಿ, ಸಾಹಿತ್ಯಗಳ ಪುನರುದ್ಧಾರಕ್ಕೆ ದೇವದೂತರಂತೆ ಬಂದರೆಂದು ಹೇಳಿದರೆ ಅತಿಶಯೋಕ್ತಿಯೇನೂ ಅಲ್ಲ. ಇದರ ಬಗ್ಗೆ ಕರ್ಮಯೋಗಿನಿಯಾದ ಆನಿಯು ಮಾಡಿದ ಸೇವೆ

ಯು ಚಿರಸ್ಮರಣೀಯವಾದುದು. ಆವಳು ಮೇಲಿನ ವಿಚಾರವನ್ನೇ ಇನ್ನ ಷ್ಟು ಸ್ಫೂರ್ತಿದಾಯಕವಾಗಿ ಈ ದೇಶದ ಜನಕ್ಕೆ ಹೇಳಿದ್ದು ತುಂಬಾ ಮನನೀಯವೂ ವಿಚಾರಪೂರ್ಣವೂ ಆಗಿದೆ:-

"India's salvation depends on herself---and, you, my brothers, are responsible for your own land. Ere long, I hope to stand face to face with you; I, to whom India and the peoples seem nearer than the nation to which by birth I belong. In heart I am one with you, and to you by my past I belong---I do not forget my true motherland, and my inner nature turns eastward ever with filial longing. When Karma opens the door I will walk through it, and we will meet in body as we can already meet in mind."

<u>ಸ್ವಾತಂತ್ರ್ಯಗಳಿಸುವುದೇ ದೇಶದ ಉದ್ಧಾರಕ್ಕೆ ದಾರಿಯೆಂದಳು</u>:- ಕ್ರಿ.ಶ. 1900ರ ಹೊತ್ತಿಗಾಗಲೇ ಆನಿಯು ಹಿಂದೂಸ್ಥಾನದ ಎಲ್ಲಾ ದೊಡ್ಡ ನಗರಗಳನ್ನು ಸಂದರ್ಶಿಸಿ ಅಲ್ಲಲ್ಲಿ ಹಿಂದೂಧರ್ಮ, ನೀತಿ, ಸಂಸ್ಕೃತಿಗಳನ್ನು ಕುರಿತಾಗಿ ಭಾಷಣಗಳನ್ನು ಮಾಡಿ ವಿಚಾರಜಾಗೃತಿಯನ್ನು ದೇಶದಲ್ಲಿ ಹುಟ್ಟಿಸಿದಳು. ಅವಳ ಭಾಷಣಗಳಿಗೆ ದೇಶೀಯ ರಾಜಮಹಾರಾಜರು, ದಿವಾನರು, ಮತ್ತಿತರ ಉನ್ನತ ಸ್ಥಾನದಲ್ಲಿರುವವರು ಸೇರುತ್ತಿದ್ದರು. ಅಡೆಯಾರದಿಂದ ಅಂತರ್‌ರಾಷ್ಟ್ರೀಯ ತತ್ವಜ್ಞಾನ ಸಂಸ್ಥೆಗಳ ಬಗ್ಗೆ ವ್ಯವಹರಿಸುತ್ತಲೇ ಇದ್ದಳು. ಬನಾರಸ್‌ನಲ್ಲಿ ಉಳಿದುಕೊಂಡು Central Hindu College ಇದರ ಬಗ್ಗೆ ವಿಶೇಷ ಆಸಕ್ತಿಯನ್ನು ವಹಿಸಿದ್ದಳು. ಅದರ ಅಭಿವೃದ್ಧಿಗೆ ಲಾರ್ಡ್ ಕರ್ಜನ್ ಇವನ ಮೂಲಕವಾಗಿ ಸರಕಾರದ ಸಹಾಯವನ್ನು ಯಥೇಷ್ಟವಾಗಿ ಪಡೆದಳು. ಹಿಂದೂಸ್ಥಾನವನ್ನು ಯಾವ ರೀತಿಯಲ್ಲಿ ಮುಂದಕ್ಕೆ ತರಬಹುದೆಂಬುದನ್ನು ಕುರಿತಾಗಿ ಹಗಲಿರುಳೂ ಚಿಂತಿಸುತ್ತಿದ್ದಳು. ಭಾರತೀಯ ನಾರಿಯನ್ನುಳ್ಳ ಭಾರತೀಯ ಶಾಸ್ತ್ರವಿಧಿಗಳನ್ನು ಅನುಸರಿಸುತ್ತ ಭಾರತೀಯರಂತೆ ಸೀರೆ ಉಟ್ಟು ಬರಿ ನೆಲದಲ್ಲಿ ಕುಳಿತುಕೊಂಡು ಭಾರತೀಯ ವೇದ ಪುರಾಣಾದಿಗಳನ್ನು ಪಠಿಸುತ್ತ ನಿತ್ಯವೂ ಸಾಧನೆಯಲ್ಲಿ ನಿರತಳಾಗುತ್ತಾ ಈ ಮಹಿಳೆಯು ಬಹು ಆದರ್ಶವಾದ ಕರ್ಮಯೋಗಿನಿಯಾಗಿ ಬಾಳಿ ಮೆರೆದಳು. "Do not imagine that because you are not learned----you cannot influence people---you can because they see your life----It is not words, it is

life that affects people."

ಇಂಥ ಉತ್ಕಟ ಧ್ಯೇಯದಿಂದ ಅವಳು ಮುಟ್ಟಿದ್ದೆಲ್ಲವೂ ಚಿನ್ನವಾಯಿತೆಂಬಂತೆ ಬಹುಮುಖವಾಗಿ ನಡೆದವು. ಹಿಂದೂಸ್ಥಾನದಲ್ಲಿ ಹಿಂದೂ ಸಂಸ್ಕೃತಿಯ ಪ್ರೀತಿ ಅವಿರತ ನಡೆಯುತ್ತ ಭಾಷಣಗಳನ್ನು ಕೊಡುತ್ತ, ಇದ್ದವರು ಸ್ವಾಮಿ ವಿವೇಕಾನಂದರನಂತರ ಈ ಆನಿ ಬೆಸೆಂಟ್ ಮಾತ್ರ! ಇದು ಎಂಬತ್ತು ವರ್ಷಕ್ಕೆ ಹಿಂದಿನ ಸಮಾಚಾರ. ಅವಳು ಕೈಗೊಂಡಿದ್ದ ಹಲವು ಚಳುವಳಿಗಳು ಈ ಪ್ರಬಲ ತತ್ವವನ್ನು ಆಧರಿಸಿತ್ತು: "No movement that is ignorant can live, and no movement that is ignorant ought to live."

ಕ್ರಿ. ಶ. 1894ರಲ್ಲಿ ಪ್ರಾರಂಭವಾದ ಆನಿಯ ಭಾರತೀಯ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಕ್ರಮದ ವೇಗವು ಬಹುಮಟ್ಟಿಗೆ ಸುಂಟರಗಾಳಿಯ ವೇಗವನ್ನು ಮೀರಿತ್ತು, ಎಂದರೆ ಅತಿಶಯೋಕ್ತಿಯೇನೂ ಅಲ್ಲ. ಈ ದೃಷ್ಟಿಯಿಂದ ಅವಳ ಜೀವನ ಚರಿತ್ರೆಯು ರೋಮಾಂಚಕರವಾಗಿದೆ. ಒಂದೆಡೆ ವಿದೇಶಗಳಲ್ಲೆಲ್ಲ ಓಡಾಟ, ಮತ್ತೊಂದೆಡೆ ಹಿಂದೂಸ್ಥಾನದ ಉದ್ದಗಲಕ್ಕೂ ಸಂಚಾರ! ಅವಳ ಜೀವನ ವೇಗದ ಕೆಲವು ವಿಷಯಗಳು ಹೀಗೆ ಉಕ್ತವಾಗಿವೆ:—

"During this year (1900 A.D.), Mrs. Besant again devoted her organizing talents to the building up of educational work and the recreation of India's greatness ---- In March she moved into Shanti Kunja, her beloved home for many years. She left India in April and arrived in Italy where she spoke in Naples, Rome, Florence and Venice, and reached England in May ---- In September she left for India and arrived in Benares, and then visited some of the towns in Northern India and began to stress some of the great teachings of Hindu theism --- the whole of this year (1901 A.D.) was spent in India --- She emphasised in her lectures the immense significance of Hinduism, and as she went from town to town, spoke frequently on Hinduism and Theosophy ---- Education was always to the fore in Besant's work, and for the sake of it she spent long periods at Benares consolidating the work of the Central Hindu College of which she was "the life and soul". What Col. Olcott did for Buddhism, she did for Hinduism ---."

ಜನತೆಯಲ್ಲಿ ಸ್ವಾಭಿಮಾನ ಸ್ವಗೌರವಗಳನ್ನು ಮೊಳೆಗಿಸಿದಳು:- ಸ್ವಲ್ಪ ಪ್ರತಿಮಾನದ ಹಲವು ಪಾಶ್ಚಾತ್ಯ ವಿದ್ವಾಂಸರುಗಳು ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಯ ಸೇವೆಗೆ ಪ್ರೇರಕವಾಗಿ ಹಲವು ದೇಶೀಯರನ್ನು ಆಯಾ ಸ್ಥಳಗಳಲ್ಲಿ ತರಬೇತುಗೊಳಿಸಿ ಮುಂದಕ್ಕೆ ತಂದರು, ಹ್ಯೂಮ್, ವೆಡೆರ್‌ಬರ್ನ್, ಮೊದಲಾದವರು ಈ ದೇಶದ ಸ್ವಾತಂತ್ರ್ಯಕ್ಕೆ ಕಾದಾಡುತ್ತಿದ್ದಾಗ ಅವರ ಬೆಂಬಲಕ್ಕೆ ದೇಶೀಯರು ಯೋಧರು ಬೇಕಾಗಿದ್ದರು, ಆ ಕಾರಣದಿಂದ 1885 ರಿಂದ ಕೆಲವು ಭಾರತೀಯರು "ಸಿಪಾಯಿ"ಗಳು ಅವರಿಗೆ ಸ್ವರಾಜ್ಯ ಚಳುವಳಿಯಲ್ಲಿ ಸಹಕರಿಸಲು ಮುಂದೆ ಬಂದರು. ಅದೇ ರೀತಿ ಆನಿಯು ಈ ದೇಶದ ಉದ್ಧಾರಕ್ಕೆ ತೊಟ್ಟ ತನ್ನ ದೀಕ್ಷೆಯನ್ನು ಫಲಕಾರಿಯಾಗಿಸಲು ಅವಳು ಕೆಲವು ದಕ್ಷ ದೇಶೀಯರನ್ನು ತನ್ನ ಬೆಂಬಲಿಗರಾಗಿ ಆರಿಸಿಕೊಂಡಿದ್ದಳು:

"Mrs. Besant was drawing into the work for India's regeneration the finest Indians in many walks of life, and winning at the same time Government approbation for the titanic task she had undertaken. She visited about thirty towns (in 1901 alone) in the North, West and East and stirred the people everywhere and induced them to take action especially in education----."

ಪ್ರತಿವರ್ಷವೂ ಇದೇ ರೀತಿ ಅವಳು ಈ ದೇಶದಲ್ಲಿ ಸಂಚರಿಸಿ ಹಿಂದೂಮತ, ವೇದ ಪುರಾಣಗಳು, ಉಪನಿಷತ್ತುಗಳು, ಪ್ರಾಚೀನ ವೈಭವ ಮತ್ತಿತರ ತಾತ್ವಿಕ ಮತ್ತು ಧಾರ್ಮಿಕ ವಿಚಾರಗಳನ್ನು ಕುರಿತಾಗಿ ಮಾತಾಡುತ್ತಾ, ಆವಾಗ ತುಂಬಾ ಸೊರಗಿದ ಈ ದೇಶದ ಜನರಲ್ಲಿ ಸ್ವಾಭಿಮಾನ ಸ್ವಗೌರವಗಳನ್ನು ಮೊಳೆಗಿಸಿದಳು, ಹಿಂದೂ ದೇಶದಲ್ಲಿ ಹೇಗೋ ಹಾಗೆಯೇ, ಅವಳ ಪ್ರವಾಸವು ದೇಶಾಂತರ ಮತ್ತು ಖಂಡಾಂತರವೆಂಬಂತೆ ಸಾಗುತ್ತಲೇ ಇದ್ದಿತು. ವಿಶ್ವವಿಖ್ಯಾತ ವಾಗ್ಮಿಯೂ ತತ್ವಶಾಸ್ತ್ರ ವಿಶಾರದೆಯೂ ರಾಜಕಾರಣಿಯೂ ಎಂಬುದಾಗಿ ಅಂದೇ ಅವಳು ಸರ್ವಮಾನ್ಯಳಾಗಿದ್ದಳು. ಭಾರತೀಯರಂತೂ ಅವಳನ್ನು ಓರ್ವ ದೇವಿ ಸ್ವರೂಪಳೋ ಅವತಾರಿಣಿಯೋ ಎಂದು ಭಾವಿಸಿದ್ದರು, ವಿದೇಶಗಳಲ್ಲೂ ಅದೇ ಅಭಿಪ್ರಾಯವು ಅವಳ ಬಗ್ಗೆ ಇದ್ದಿತು. ಇಂಗ್ಲೆಂಡಿನ ಜನರೂ ಅದೇ ರೀತಿಯಾಗಿ ಭಾವಿಸಿದ್ದರೆಂಬುದು ಅವಳಿಗೆ ತಿಳಿದುಬಂದಾಗ ಅವಳು ಹೇಳಿದ ಮಾತುಗಳು ಅವಳ ಅಸಾಧಾರಣ ಗುಣಸಂಪನ್ನತೆಯನ್ನು ತೋರಿಸುತ್ತದೆ. ಅವಳು ಹೇಳಿದಳು:-

"I am told, on what ought to be good authority,

that there is a growing tendency in the Theosophical Society in London to consider me as a sacrosanct personality, beyond and above criticism. Frankly, I cannot believe that any claim so wild and preposterous is set up, or that many know me so little as to imagine that, if it were set up, I would meet it with anything but the uttermost condemnation. Even a few people holding and acting on such a theory would be a danger to the society; if any considerable number held and acted on it, the Society would perish. Liberty of opinion is the life-breath of the Society; the fullest freedom in criticising opinions is necessary for the preservation of the growth and evolution of the Society---."

"ಭಾರತೀಯರಲ್ಲಿ ರಾಷ್ಟ್ರೀಯ ಭಾವನೆಯು ಹುಟ್ಟಬೇಕು:"— ಈ ರೀತಿಯಾಗಿ ಆನಿ ಬೆಸೆಂಟ್ ಇವರು ಈ ದೇಶಕ್ಕೆ ಕಾಲಿಟ್ಟಂದಿನಿಂದಲೇ ಆಲೋಚಿಸಿದ್ದರು. ಸುಮಾರು 1905 ರಿಂದ ಅವರು ಹಿಂದೂಸ್ಥಾನದ ರಾಜಕೀಯದ ಬಗ್ಗೆ ಆಳವಾಗಿ ಚಿಂತಿಸತೊಡಗಿದರು. ಅಂತರಾಷ್ಟ್ರೀಯ ತತ್ವಜ್ಞಾನ ಸಂಸ್ಥೆಯ ಕೇಂದ್ರವಾದ ಮದ್ರಾಸಿನ ಅಡೆಯಾರಿನಿಂದ ಮತ್ತು ರಾಷ್ಟ್ರೀಯ ಹಿಂದೂ ವಿಶ್ವವಿದ್ಯಾಲಯದ ಕಾಶಿಯ ಬನಾರಸದಿಂದ ಅವರು ಈ ದೇಶವನ್ನು ಧಾರ್ಮಿಕವಾಗಿ ಮೇಲಂದೊಯ್ಯಲು ದೀರ್ಘಾಲೋಚನೆಗಿಳಿದರು. ಸ್ವಾತಂತ್ರ್ಯ ರಾಜ್ಯಭಾರದ ಅವಧಿಯಲ್ಲಿ ಸಮಗ್ರ ಭಾರತವು ರಾಜಕೀಯವಾಗಿ ಒಂದಾಯಿತಾದರೂ ಸಾಂಸ್ಕೃತಿಕವಾಗಿ ಒಂದಾಗಬೇಕಿದೆ; ಆದರೆ ಅದು ಹೇಗೆ, ಎಂದೇ ಅವರ ಚಿಂತನೆಯಾಗಿತ್ತು. 1905 ರಲ್ಲಿ ಆನಿಯು ಬೊಂಬಾಯಿಯಲ್ಲಿ ಮಾತಾಡುತ್ತಾ ಹೀಗಂದರು:—

"One of the greatest difficulties that struck at the root of the unification was that that there had never been a united India in the past. Temporary unions there had been from time to time; but never was there the United India, a unified nation extending from the Himalayas to Cape Kanyakumari, from Bengal to Kathiawar----The task before India, therefore, was to make a self-sustaining and self-conscious nationality."

ಇಷ್ಟೇ ಅಲ್ಲ, ತಾವು ಒಂದೇ ಜನಾಂಗ, ಒಂದೇ ತಾಯಿಯ ಮಕ್ಕಳು,

ಎಂಬ ರಾಷ್ಟ್ರೀಯ ಭಾವನೆಯನ್ನು ಜನರಲ್ಲಿ ಹೆಚ್ಚಿಸಬೇಕು, ಅದಕ್ಕೆ ತಕ್ಕುದಾದ ವಿದ್ಯೆಯನ್ನು ಭಾರತೀಯ ತತ್ವಶಾಸ್ತ್ರ ಮತ್ತು ಗೀತೋಪನಿಷತ್ತುಗಳನ್ನು ಕುರಿತಾಗಿ ವಿಚಾರಜ್ಞಾನವನ್ನು ಧಾರಾಳವಾಗಿ ಜನಕ್ಕೆ ಕೊಡಬೇಕೆಂದು ಹೇಳುತ್ತಾ, ಅಂತೆಯೇ ನಡೆಯುತ್ತಾ ಈ ದೇಶದಲ್ಲಿ ಹಿಂದು ಸಾಂಸ್ಕೃತಿಕ ಕ್ರಾಂತಿಯನ್ನು ಅನಿ ಬೆಸೆಂಟ್ ಇವರು ಎಬ್ಬಿಸಿದರು. ಅದಕ್ಕಾಗಿ ಅವರು ಭಗವದ್ಗೀತೆ ಮತ್ತು ಹಿಂದೂ ಪೌರಾಣಿಕ ನೀತಿಗಳನ್ನೆಲ್ಲ ಇಂಗ್ಲೀಷನಲ್ಲಿ ಬರೆದು ಪ್ರಚಾರ ಮಾಡಿದರು. ತನ್ನ ಮಿತ್ರನೊಬ್ಬನಿಗೆ ಬರೆದ ಪತ್ರದಲ್ಲಿ ಅವರು ಹೀಗೆಂದರು:-

"The needs of India are, among others, the development of a national spirit, and an education founded on Indian ideals and enriched, not dominated, by the thought and culture of the West." ಇಂಥ ಹಿರಿಯ ಧ್ಯೇಯವಾದಿಯ ನೈತಿಕ ಮನೋಭಾವಕ್ಕೆ ಒಂದರಿನಂತಿದ್ದ ಅಂದಿನ ಭಾರತಕ್ಕೆ ದೊರಕಿದ್ದ ದೇಶದ ಸೌಭಾಗ್ಯವೆಂದೇ ಹೇಳಬೇಕಿದೆ, ಈ ದೇಶದಲ್ಲೂ ಅಂಥವರು ಇದ್ದರೆಂದು ಹೇಳುವವರು ಬಹುಜನವಿರಬಹುದು. ನಾನು ಅಂತೆಯೇ ಹೇಳುತ್ತೇನೆ, ಆದರೆ ಅನಿ ಬೆಸೆಂಟ್ ಇವರಂಥ ಹಿರಿಯ ವಿಶ್ವವಿಖ್ಯಾತರಾದ, ವಿಶ್ವಸಂಚಾರಿಯಾದ ಮತ್ತು ವಿಶ್ವಪ್ರೇಮಿಯಾದ ಪ್ರಬಲ ವ್ಯಕ್ತಿಯು ಈ ದೇಶದಲ್ಲಿ ಎಂದೂ ಇರಲಿಲ್ಲ.

ಅನಿಯು ಹೇಳದೇ ಇದ್ದ ವಿಚಾರಗಳು ಯಾವುದೂ ಇಲ್ಲ:- ಪ್ರತಿ ವರ್ಷವೂ ನಾಲ್ಕೈದು ತಿಂಗಳುಗಳ ಕಾಲ ವಿದೇಶಗಳಲ್ಲಿ ಯಾತ್ರೆಯನ್ನು ಕೈಕೊಂಡು ಆ ರಾಜ್ಯಗಳ ಪ್ರಮುಖ ಕೇಂದ್ರಗಳಲ್ಲೆಲ್ಲ ತತ್ವಜ್ಞಾನ ಸಂಸ್ಥೆ (Theosophical Society)ಯ ಶಾಖೆಗಳನ್ನು ಸ್ಥಾಪಿಸಿದ್ದಲ್ಲದೆ ಅದರೊಡನೆಯೇ ಹಿಂದೂ ಧರ್ಮವನ್ನು ಕುರಿತಾಗಿಯೂ ವಿಚಾರಪೂರ್ಣ ಭಾಷಣಗಳನ್ನು ಕೊಡುತ್ತಲೇ ಇದ್ದರು. ಅದೇ ರೀತಿ ಭಾರತದಲ್ಲೂ ತತ್ವಜ್ಞಾನವನ್ನು ವಿವಿಧ ರೀತಿಗಳಲ್ಲಿ ವಿವರಿಸುವುದರೊಡನೆಯೇ ಇತರ ರಾಷ್ಟ್ರೀಯ ವಿಚಾರಗಳ ಮೇಲೂ ಅತ್ಯಂತ ಸ್ಫೂರ್ತಿದಾಯಕ ರೀತಿಯಲ್ಲಿ ಬೋಧನೆಯನ್ನು ಕೊಡುತ್ತಿದ್ದರು. 1910ರಲ್ಲಿ ಮದ್ರಾಸಿನಲ್ಲಿ ನಡೆದ Prevention of Cruelty to Animals ಎಂಬುದಾಗಿ ಕೂಡಿದ್ದ ಸಭೆಯಲ್ಲಿ ಅನಿ ಬೆಸೆಂಟ್ ಇವರ ವಿಚಾರಪೂರ್ಣ ಭಾಷಣವನ್ನು ಕೇಳಿ ಬೆರಗಾಗಿ ಅಂದಿನ ಮದ್ರಾಸ್ ಗವರ್ನರ್ ಸರ್ ಆರ್ಥರ್ ಲಾಲಿ ಇವರು ಇಂತೆಂದರು:-

"Indeed what can I add to the stirring words of Mrs. Besant's, which we have just listened to? You know the quality of her matchless eloquence,

and it needs no reminder from me to remind you that her voice is never raised save to save her hearers to some nobler impulse, to some loftier ideals, to some higher plane of thought. In the name of the Society (for the prevention of cruelty to Animals) I should like to thank her for the splendid address which she delivered to us, and I hope that it will not only stir the hearts, and it must have done, of every man and woman in this Hall, who have heard it, but I hope that her voice will ring loud and clear far beyond the walls of this Hall---."

ಇಲ್ಲಿ ಹೇಳಿದ ಯಾವೊಂದು ಶಬ್ದವೂ ಉತ್ಪ್ರೇಕ್ಷೆ ಅಲ್ಲ. ಆನಿಯು ಜಗದ್ವಿಖ್ಯಾತ ವಾಗ್ಮಿಯಾಗಿದ್ದಳು. ತತ್ವಜ್ಞಾನ (Theosophy) ಸಂಸ್ಥೆಯ ಸ್ಥಾಪಕನೂ, ಪ್ರಥಮ ಅಂತರ್ರಾಷ್ಟ್ರೀಯ ಅಧ್ಯಕ್ಷನೂ ಆಗಿದ್ದ ಕರ್ನಲ್ ಆಲ್ಕಾಟ್ ಇವನು ಮೃತನಾದುದರಿಂದ ಆನಿಯು 1907 ರಿಂದ ಆ ಸ್ಥಾನಕ್ಕೆ ಆರಿಸಲ್ಪಟ್ಟು ಅವಳು ದೇಶವಿದೇಶಗಳಲ್ಲೆಲ್ಲ ಭರದಿಂದ, ಉತ್ಸಾಹದಿಂದ ಸಂಚರಿಸಿದಳು. ಭಾರತೀಯ ಉಡುಗೆಯನ್ನುಟ್ಟು ಅವಳು ತನ್ನ ಅವಿಶ್ರಾಂತ ದುಡಿಮೆಯಲ್ಲಿ ನಿರತಳಾಗಿರುತ್ತಿದ್ದಳು. ಅವಳಲ್ಲಿ ಅಪೂರ್ವ ತ್ಯಾಗಶೀಲತೆಯೂ ಸೇವಾಶಕ್ತಿಪೂರ್ಣತೆಯೂ ತುಂಬಿ ತುಳುಕಿದ್ದ ಭಾರತೀಯ ಮಹಿಳೆಯರಿಗಂತೂ ಅವಳೊಬ್ಬ ದೇವತೆಯೇ ಆದಳು. ಹಿಂದೂಸ್ತ್ರೀಯರನ್ನು ಮೊದಲ ಬಾರಿಗೆ ಜಾಗೃತಗೊಳಿಸಿದವಳು ಆನಿ ಬೆಸೆಂಟ್. ಅವಳಿಂದಲಾಗಿ ನಮ್ಮ ಸ್ತ್ರೀಯರು ತಮ್ಮ ಕೋಣೆಯ ಜೀವನವನ್ನು ಬಿಟ್ಟು ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆಯುವಂತಾದರು. ಪ್ರತಿಭಾ ವಾಗ್ಮಿಯಾದ ಅವಳು ಯುವಕರನ್ನು ಕುರಿತಾಗಿ ಭಾಷಣವನ್ನು ಮಾಡಿದಾಗ ಅವರಿಗೆ ಈ ರೀತಿ ಮನವಿ ಮಾಡಿದಳು:—

"The older members of the (Theosophical) Society, while continuing along the paths which suit them best, would not look coldly or disapprovingly on the new paths planned out by the youngers---- they should give a free hand to their juniors, and do nothing to discourage new ventures----The future is with the younger members, and their initiative and eagerness are valuable factors in the work. The younger members on their side, should remember that had it not been for the labours of the

older ones, carried on through times more difficult than the present, they would not be standing where they are today, and their enthusiasm should not be soiled with ingratitude---."

<u>ಅಡೈಯಾರ್ ಮತ್ತು ಕಾಶಿ ಆನಿಗೆ ಎರಡು ಕಣ್ಣುಗಳಾಗಿದ್ದುವು:</u>- ಶ್ರೀಮತಿ ಆನಿ ಬೆಸೆಂಟ್ ಇವರು ತನ್ನ ಪ್ರಚಂಡ ಹೋರಾಟದೊಡನೆಯಲ್ಲಿ ಯಾವಾಗ ಎಲ್ಲಿ ಇರುವರೆಂದೇ ತಿಳಿಯುವುದು ಕಷ್ಟವಾಗಿತ್ತು. ಬಹುಶಃ ಅವಳು ಇಂದಿನ ವಿಮಾನ ಸಂಚಾರದ ಕಾಲದಲ್ಲಿ ಇದ್ದಿದ್ದರೆ ಅವಳಿಗೆ ಈ ಲೋಕ ತೀರಾ ಚಿಕ್ಕದಾಗಿರುತ್ತಿತ್ತಲ್ಲದೆ ಅವಳೊಬ್ಬಳೇ ಸಂಯುಕ್ತ ರಾಷ್ಟ್ರಗಳ ಒಂದು ಲೋಕರಾಜ್ಯವನ್ನೇ ನಿರ್ಮಿಸುತ್ತಿದ್ದಳು. ಸಹಸ್ರಾರು ಮೈಲುಗಳ ದೂರದ ರೈಲು ಮತ್ತು ಹಡಗು ಪ್ರಯಾಣದಿಂದ ಸುತ್ತಾಡಿದ ಅವಳ ದೇಹಬಲ ಮತ್ತು ಆತ್ಮಬಲವು ಯಾರನ್ನೂ ಬೆರಗಾಗಿಸುವಂತದ್ದಾಗಿದ್ದುವು. ಪ್ರತಿವರ್ಷವೂ ಲೋಕಪ್ರವಾಸ, ಎಲ್ಲೆಲ್ಲಿ ಅಪೂರ್ವ ಸ್ವಾಗತ, ಸತ್ಕಾರ, ಸಭೆ, ಉಪನ್ಯಾಸ ಎಂದು ನಡೆಯುತ್ತಲೇ ಇದ್ದುವು. ಆನಿಗೆ ಎಲ್ಲ ರಾಜಧಾನಿಗಳಿಗೂ ಎಲ್ಲಾ ದೇಶಗಳಿಂದಲೂ ಆಹ್ವಾನವಿದ್ದೇ ಇತ್ತು. ಕ್ರಿ.ಶ. 1911 ರಲ್ಲಿ ಲಂಡನಿನಲ್ಲಿ ಐದನೇ ಜಾರ್ಜ್ ಇವನ ಸಿಂಹಾಸನಾರೋಹಣಕ್ಕೂ ಅವಳಿಗೆ ಆದರದ ಸ್ವಾಗತವಿದ್ದೇ ಇತ್ತು. ಅದೇ ರೀತಿ ಫ್ರಾನ್ಸ್, ಹಾಲೆಂಡ್, ಇಟಲಿ, ಇತ್ಯಾದಿ ರಾಜಧಾನಿಗಳಲ್ಲೆಲ್ಲ ಅವಳು ಇದ್ದೇ ಇರುತ್ತಿದ್ದಳಾದರೂ ಅವಳ ಹೃದಯವು ಹಿಂದೂಸ್ಥಾನದಲ್ಲಿ ನೆಲೆಸಿತ್ತು. ಬನಾರಸ್ ಮತ್ತು ಅಡೈಯಾರ್ ಅವಳಿಗೆ ಎರಡು ಕಣ್ಣುಗಳಾಗಿದ್ದುವು. ಅವಳ ಮಾತಿನಲ್ಲಿ ಹೇಳುವುದಾದರೆ;

"Benares was my first Indian home and it remains very dear to my heart, with many a glad and sacred memory, through which runs the golden thread of spiritual aspiration and spiritual life. And Benares is to become a University town, for there the Hindu University is to rear its stately head," ಎಂಬುದಾಗಿ ಆನಿಯು ಆಗಿಂದಾಗ್ಗೆ ಹೇಳುತ್ತಲೇ ಇದ್ದಳು. ಅವಳು ತನ್ನ ಆ ಇಚ್ಛೆಯಲ್ಲಿ ಸಿದ್ಧಿಯನ್ನು ಪಡೆದಳು.

ಅದೇ ರೀತಿ ಪ್ರತಿವರ್ಷವೂ ಅವಳ ತತ್ವಜ್ಞಾನ ಸಂಸ್ಥೆಯ (Theosophical Society) ವಾರ್ಷಿಕೋತ್ಸವದ ವೇಳೆಗೆ ಅವಳು ಜಗತ್ತಿನ ಯಾವ ಮೂಲೆಯಲ್ಲಿದ್ದರೂ ಅಡೈಯಾರಿಗೆ ಬಂದು ತಲುಪುತ್ತಿದ್ದಳು. ತನ್ನ ಆಪ್ತ ಸಹೋದ್ಯೋಗಿಗಳಾದ ಲೆಡ್‌ಬೀಟರ್, ಅರುಂಡೇಲ್, ವಾಡಿಯಾ, ಮೊದಲಾದವರ ಹಾರ್ದಿಕ ಸಹಕಾರದಿಂದ ಈ ಅಂತರಾಷ್ಟ್ರೀಯ ಬ್ರಹ್ಮಜ್ಞಾನ ಸಂಸ್ಥೆಯು

ಪ್ರಗತಿಯನ್ನು ಹೊಂದುತ್ತಲಿತ್ತು. ಅಡೆಯಾರ್‌ನಲ್ಲಿ ಆಗಿಂದಾಗ್ಗೆ ವಿವಿಧ ವಿಷಯಗಳ ಬಗ್ಗೆ ಸಭೆ ಸಮ್ಮೇಳನಗಳು ನಡೆಯುತ್ತಲೇ ಇದ್ದು ಶಾಶ್ವತವಾಗಿ ಅದು ಒಂದು ಸಾಂಸ್ಕೃತಿಕ ಕೇಂದ್ರವಾಯಿತು. ಹಲವು ಸಲ ಸಭೆಗಳು ಆ ಕೇಂದ್ರದ ಹೊರಾಂಗಣದಲ್ಲಿ ಆಲದ ಮರದ ಕೆಳಗೆ ನಡೆಯುತ್ತಿದ್ದವೆಂಬುದನ್ನು ಆನಿಯೇ ಹೀಗೆ ಹೇಳಿದ್ದಾಳೆ:-

"---Had the opening lectures of the (annual) convention on "Education as Service" to an audience estimated at 2500 by the "Madras Mail." The great banyan tree was the Hall, and its far-stretching branches the roof; the down-reaching roots, struck into the ground, were the pillars, while the red sky dyed by the setting sun gleamed rosily through the green leaves, and was as the coloured windows---."

<u>ವ್ಯಾಜ್ಯಗಳು ಮೇಲಿಂದ ಮೇಲೆ ಆನಿಯನ್ನು ಕಾಡಿಸಿದುವು</u>:- ಇಂಗ್ಲೆಂಡಿನಲ್ಲಿ ಆನಿ ಬೆಸೆಂಟ್ ಇವಳು ಚಾರ್ಲ್ಸ್ ಬ್ರ್ಯಾಡ್ಲೋನೊಡನೆ ರಾಜಕೀಯದ ಹೋರಾಟ, ಕಾರ್ಮಿಕರ ಹಿತವೆಲ್ಲ ಮತ್ತು ಕ್ರೈಸ್ತಧರ್ಮಕ್ಕೆ ವಿರೋಧವಾಗಿ ಹೋರಾಡಿದಾಗ ಹಲವು ಮೊಕದ್ದಮೆಗಳನ್ನು ಎದುರಿಸಬೇಕಾಯಿತು. ಕೋರ್ಟ್ ಕಚೇರಿಗಳಲ್ಲಿ ತನ್ನ ಹವಾಲನ್ನು ಆನಿಯು ತಾನೇ ವಾದಿಸುತ್ತಿದ್ದಳು. ಹಲವು ನ್ಯಾಯಾಧೀಶರುಗಳು ಅವಳ ವಾದ ಸಾಮರ್ಥ್ಯವನ್ನು ಕಂಡು ಬೆರಗಾದರು. ತನ್ನ ಸಾಕು ಮಕ್ಕಳಾದ ಕೃಷ್ಣಮೂರ್ತಿ ಮತ್ತು ನಿತ್ಯಾನಂದ ಇವರನ್ನು ಅವರ ತಂದೆಯು ವಾಪಾಸು ಪಡೆಯಬೇಕೆಂದು ಹೂಡಿದ್ದ ಕೋರ್ಟ್ ವ್ಯವಹಾರವು ಅಖಿಲ ಭಾರತ ಪ್ರಸಿದ್ಧವಾಯಿತಲ್ಲದೆ ಅವಳಿಗೆ ನ್ಯಾಯವು ದೊರೆಯಲು ಇಂಗ್ಲೆಂಡಿನ Privy Council ವರೆಗೂ ಹೋಗಬೇಕಾಯಿತು. ~~ಈ~~ ಉಚ್ಚನ್ಯಾಯಾಲಯಗಳಲ್ಲೆಲ್ಲ ಆನಿಯೇ ತನ್ನ ವಕಾಲತ್ತನ್ನು ವಹಿಸಿ ವಾದಿಸಿದಳು. ಶ್ರೀ ಅರುಂಡೇಲ್ ಇವರು ~~ಈ~~ ವ್ಯಾಜ್ಯವನ್ನು ಕುರಿತಾಗಿ ಹೀಗೆಂದರು:-

"In part the reflection took the shape of legal proceedings against Anne Besant, in respect of the guardianship she had assumed of Krishnamurti and his brother Nityananda. Their father sought to deprive her of this guardianship----She herself conducted her case with utmost brilliance----She created a sensation, not only because she was her own advocate, but also because no advocate----could have

presented even an intricate case, such as this was, with great legal acumen. I still remember how she surrounded herself with innumerable law volumes in her room at Adyar---I remember how she, Mr. Leadbeater and I, would day by day motor to the High Court – she full of her warrior spirit and the two of us vicariously fired with it. The books – volumes of them, had down before hand, but the precious documents, on which she was going to rely for her speeches, she clutched in her hand as she might have clutched jewels of great price in the midst of a robber band----then into the High Court--- she with books and papers in the Court-room stretched out in all directions far and wide, and her opposing counsel, Mr. (now Sir) C. P. Ramaswami Iyer, equally the centre of a library of literature----Juniors are buzzing about, and the room is full of the hush of a multitudinous expectancy."

ಹೀಗೆ ಆರಂಭವಾದ ಕೋರ್ಟಿನ ವ್ಯವಹಾರವು ತುಂಬಾ ಕಾತರತೆಯನ್ನು ಎಲ್ಲರಲ್ಲಿ ಹುಟ್ಟಿಸಿತು. ಹೀಗಿದ್ದಾಗ ಆ ನ್ಯಾಯಾಲಯಕ್ಕೆ ನ್ಯಾಯಾಧೀಶನು ಎಂದಿನಂತೆಯೇ ಬಂದನು: "---takes his seat as everybody rises, most of them perfunctorily, but she (Annie Besant) to the measure of her full height, gazing upon the judge with her piercing eyes and leonine appearence."

ಹೇಗೂ ಈ ಮೊಕದ್ದಮೆಯು ಆನಿ ಬೆಸೆಂಟಳಿಗೆ ವಿರೋಧವಾಗಿ ತೀರ್ಮಾನವಾಯಿತು; ಆದರೆ ಅವಳು ಸುಮ್ಮನಿರಲಿಲ್ಲಳು. ಉಚ್ಚ ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಾಗ ಅಲ್ಲಿಯೂ ತನ್ನ ವಾದವನ್ನು ಕಳೆದುಕೊಂಡಳು. ಆ ಪರಿಣಾಮವಾಗಿ ಅವಳು ಲಂಡನ್ನಿನ Privy Council ಇದಕ್ಕೆ ಮನವಿಯನ್ನು ಸಲ್ಲಿಸಿದಾಗ ಅವಳು ಕಟ್ಟಕಡೆಗೆ ಎಂಬಂತೆ ಜಯಶೀಲಳಾದಳು. ಆ ತೀರ್ಪಿನ ವಿಷಯವಾಗಿ ಬರೆಯುತ್ತಾ ಅನಿಯವಳು ಹೀಗೆಂದಳು:-

"---It established for India---that when minors came before a court of Chancery, it was their welfare that must govern the decision, and that no Court may

presume to give judgment concerning them which had not ascertained their wishes ---- which for this purpose is taken at fourteen years for boys. The result of that decision was that the whole long struggle came to an end and we finished up where we were at the beginning, with the exception of the large amount of money wasted."

ಆನಿ ಬೆಸೆಂಟ್ ಈ ದೇಶದ ರಾಜಕೀಯಕ್ಕೆ ಇಳಿದದ್ದು:— ಮೇಲೆ ಹೇಳಲ್ಪಟ್ಟ ಆ ವ್ಯಾಜ್ಯದಲ್ಲಿ ಶ್ರೀಮತಿ ಆನಿ ಬೆಸೆಂಟ್ ಇವರು ಅಸಾಮಾನ್ಯ ಸ್ತ್ರೀಯೆಂದು ಬಹಳ ವ್ಯಕ್ತವಾಯಿತಲ್ಲದೆ, ಆ ಮೂಲಕವಾಗಿ ಅವರ ಕೆಲವು ಉದಾತ್ತ ಗುಣಗಳು ವ್ಯಕ್ತವಾದುವು. ತನ್ನ ವಿರೋಧಿ ವಕೀಲನಾಗಿದ್ದ ರಾಮಸ್ವಾಮಿ ಅಯ್ಯರನ ಪ್ರತಿಭೆಯನ್ನು ಕಂಡು ಅವನನ್ನು ತನ್ನ ರಾಜಕೀಯ ಚಟುವಟಿಕೆಗಳಲ್ಲಿ ಸಹೋದ್ಯೋಗಿಯಾಗಿ ಸೇರಿಸಿ ಅವನನ್ನು ಮುಂದಕ್ಕೆ ತಂದಳು. ಅಲ್ಲಿಂದನಂತರ ಅವಳು ಈ ದೇಶದ ರಾಜಕೀಯ ಚಳುವಳಿಯಲ್ಲಿ ಸಕ್ರಿಯಾತ್ಮಕವಾಗಿ ಭಾಗವಹಿಸಿದಳು. The Madras Standard ಎಂಬುದಾಗಿ 1841 ರಿಂದಲೇ ಪ್ರಚಾರವಿದ್ದ ವಾರ್ತಾಪತ್ರಿಕೆಯನ್ನು ಅವಳು ಕೊಂಡು 'New India' ಎಂಬ ಹೆಸರಿನಿಂದ ನಡೆಸುತ್ತಾ, ತನ್ನ ಸ್ವರಾಜ್ಯ ಚಳುವಳಿಯ ಬಗ್ಗೆ ದೇಶದ ಜನರನ್ನು ಮುಂದಕ್ಕೆ ಇಳಿಯಲು ಪ್ರೇರೇಪಿಸಿದಳು. ಅಡ್ಯಾರ್‌ನಿಂದ ಹೊರಡುತ್ತಿದ್ದ The Theosophist — ಇದು ಪ್ರಪಂಚದ ನಾನಾಕಡೆಗಳಿಗೆ ತತ್ವಜ್ಞಾನಕ್ಕೆ ಕುರಿತಾದ ವಿಷಯಗಳನ್ನು ಕೊಂಡೊಯ್ಯುತಿತ್ತು, ಅದರ ಜತೆಗೆ The Adyar Times ಎಂಬುದಾಗಿ ಚಿಕ್ಕ ಒಂದು ಪತ್ರಿಕೆಯೂ ಇತ್ತು. ಒಂದೆರಡು ವರ್ಷಗಳನಂತರ ಆನಿಯು "Commonweal" ಎಂಬ ರಾಜಕೀಯ ಪತ್ರಿಕೆಯನ್ನು ನಡೆಸಲು ಮಾಡಿದಳು, ಅಂದಿನ ಹಿರಿಯ ವರ್ಗದ ರಾಷ್ಟ್ರೀಯ ದೇಶಾಭಿಮಾನಿಗಳಾದ ಹ್ಯೂಮ್, ಕಾಟನ್, ನಟ್ರ್, ವೆಡರ್‌ಬರ್ನ್ ಮೊದಲಾದವರೊಡನೆ ವಿಚಾರವಿನಿಮಯ ಮಾಡಿದಳು. ಕ್ರಿ.ಶ. 1915 ರ ಕಾಲಕ್ಕೆ ಆನಿ ಬೆಸೆಂಟ್ ಇವಳು ಈ ದೇಶದ ರಾಜಕೀಯದಲ್ಲಿ ಒಂದು ಪ್ರಬಲ ಶಕ್ತಿಯೇ ಆದಳು. ಆಗ ಇದ್ದ ದೇಶೀಯ 'ಹುಲಿ'ಗಳು, ನವರೋಜಿ, ಪಾಲ, ಮೆಹತಾ, ಗೋಖಲೆ ಮೊದಲಾದವರೆಲ್ಲರಿಗೆ ಆನಿಯು ಹಿರಿಯ ಸೋದರಿಯಂತೆ ತೋರ್ಪಡಿಸಿಕೊಂಡಳಲ್ಲದೆ ಅವರೆಲ್ಲರಿಗೂ ದಿಗ್ದರ್ಶಕಳಾಗಿ ಮುಂದೆ ಹಾಯ್ದಳು, ಗಾಂಧೀಜಿಯು ಆನಿ ಬೆಸೆಂಟ್ ಬಗ್ಗೆ ಬರೆಯುತ್ತಾ ಹೀಗೆಂದರು:—

"Annie Besant, within a few years, brought Home Rule within the consciousness of every Indian village, let alone the towns and cities. As had no other Indian worker, she embodied "Swaraj"—

(Self-rule for India) with the whole of her being. For over sixteen years she worked, literally day and night, for the cause which had been entrusted to her, and here again, she was at once the envy and the despair of her associates."

<u>1917ರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷೆಯಾದಳು:—</u> ಆನಿ ಬೆಸೆಂಟ್ ಇವಳು ಈ ದೇಶದ ಸಾಮಾಜಿಕ, ಧಾರ್ಮಿಕ ಮತ್ತು ವಿದ್ಯಾಕ್ಷೇತ್ರಗಳಲ್ಲಿ 1894 ರಿಂದ 1914ರ ವರೆಗೆ, ಎಂದರೆ ಇಪ್ಪತ್ತು ವರ್ಷಗಳ ಕಾಲ ಅವಿರತವಾಗಿ ದುಡಿದಳು. ಅದೇ ವೇಗದಲ್ಲಿ ಅವಳ ಕಾರ್ಯಭಾರವು ಯುರೋಪು ಮತ್ತು ಇತರ ಭೂಖಂಡಗಳಿಗೂ ಆವರಿಸಿತು. ಅಷ್ಟೇ ಅಲ್ಲ, ಅಂತರ್ರಾಷ್ಟ್ರೀಯ ಬ್ರಹ್ಮವಿದ್ಯಾಜ್ಞಾನ ಸಂಸ್ಥೆಯ (Theosophical Society) ಇದರ ಅಧ್ಯಕ್ಷತೆಯನ್ನು ಎರಡನೇ ಬಾರಿಗೆ ಪಡೆದಳು. ಅವಳ ಪ್ರವಾಸ, ಭಾಷಣ ಮತ್ತು ಬರವಣಿಗೆಗಳು ನಿರಂತರವಾಗಿ ಸಾಗುತ್ತಿದ್ದವು. 1914 ರಿಂದ ಆಕೆಯು ಈ ದೇಶದ ಸ್ವತಂತ್ರ ಚಳುವಳಿಗೆ ತನ್ನ ತನು ಮನ ಧನವನ್ನು ಧಾರೆಯೆರೆದಳು. ಭಾರತೀಯ ಮುಂದಾಳುಗಳಲ್ಲಿ ಗೋಪಾಲಕೃಷ್ಣ ಗೋಖಲೆಯು ಮೊದಲು ಅವಳಿಗೆ ವಿರೋಧ ಒಡ್ಡಿ ಮರಣಿಸಿತ್ತು. ಆಗ ಇತರ ಕೆಲವು ಭಾರತೀಯ ಸ್ವಾತಂತ್ರ್ಯ ಹೋರಾಟಗಾರರಿದ್ದರಾದರೂ ಸಕ್ರಿಯವಾಗಿ ಚಳುವಳಿಯ ವಿರೋಧ ಮುಂದಾಳು ವಹಿಸಿರಲಿಲ್ಲ. ಆಗ ಆನಿ ಬೆಸೆಂಟ್ ಇವಳು ಈ ದೇಶದ ರಾಜಕೀಯದಲ್ಲಿ ಒಂದು ಪ್ರಬಲ ಶಕ್ತಿಯೇ ಆದಳು. ಅವಳ ಚಟುವಟಿಕೆಗಳು ಆಂಗ್ಲ ಸರಕಾರವನ್ನು ತಲೆನೋವಿಗೆ ಈಡಾಗಿಸಿತು. ಮದ್ರಾಸು ಅಧಿಕೃತದ ಗವರ್ನರನು ಒಮ್ಮೆ ಆನಿಯನ್ನು ಕಂಡು ಮಾತಾಡಿದನ್ನು ಕುರಿತಾಗಿ ಜಾರ್ಜ ಅರುಂಡೇಲನು ಹೀಗೆಂದನು:—

"Mrs. Besant, you must stop your political work in its present form," while she replied, "Your Excellency, I must go on, and as I think best."

ಆನಿ ಬೆಸೆಂಟ್ ಇವಳು ತನ್ನ Commonweal ಎಂಬ ವಾರ ಪತ್ರಿಕೆಯಲ್ಲಿ ಮತ್ತು New India ಎಂಬ ದಿನಪತ್ರಿಕೆಯಲ್ಲಿ ಕ್ರಾಂತಿಕಾರಕ ವಿಚಾರಗಳನ್ನು ಪ್ರತಿಪಾದಿಸುತ್ತಿದ್ದಳು. ಕ್ರಿ. ಶ. 1880 ರಿಂದೀಚೆಗಿನ ರಾಜಕೀಯ ಚಳುವಳಿಯನ್ನು ಕುರಿತಾಗಿ How India Wrought for Freedom - ಎಂಬುದಾಗಿ ದಾಖಲೆ ಮಾಹಿತಿಗಳನ್ನು ಪ್ರಕಟಿಸಿದ್ದು ಅಧಿಕೃತವಾದ ಚಾರಿತ್ರಿಕ ಗ್ರಂಥವೇ ಆಯಿತು. 1917ರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷೆಯಾಗಿ ಅವಳನ್ನು ಆರಿಸಿದಾಗ ಅವಳು ಹೀಗೆಂದಳು:—

"My election as President of the National

Congress for the coming year gives me, I frankly say, great satisfaction, for it is the endorsement by India of the great Home Rule campaign---."

ಆ ವರ್ಷದ ಒಕ್ಟೋಬರ್ ೧ನೇ ದಿನ ತನ್ನ ಹುಟ್ಟುದಿನದ ಸಂ-
ದೇಶವಾಗಿ ಅನಿ ಬಿಸೆಂಟ್ ಇವಳು ಇಂತೆಂದಳು:—

"Will, Wisdom, Intellect – those are the Divine Trinity in men. Intellect to plan, Wisdom to inspire, and Will to execute."

<u>ಅನಿಯು ಅಧ್ಯಕ್ಷೆ—ಭಾಷಣವು ಅಮೋಘವಾಗಿತ್ತು!</u>— 1917ನೇ ವ-
ರ್ಷದಲ್ಲಿ ಆಂಗ್ಲ ಸರಕಾರವು ಅನಿ ಬಿಸೆಂಟ್ ಇವಳ ಮೇಲಿನ ತನ್ನ
ಕ್ರಮವನ್ನು ತೆಗೆದುಕೊಂಡರು. ಅವಳನ್ನು, ಅರುಂಡೇಲ್ ಮತ್ತು
ವಾಡಿಯ ಇವರನ್ನು, ಸರಕಾರವು ಬಂಧಿಸಿದಾಗ ಇಡೀ ಹಿಂದುಸ್ಥಾನ-
ವು ಪ್ರಚಂಡ ಹರತಾಳವನ್ನು ಕೈಗೊಂಡಿತು. ದೇಶದ ಎಲ್ಲಾ ನಗರ-
ಗಳಲ್ಲೂ ದೊಡ್ಡ ಕೋಲಾಹಲವೇ ಎದ್ದಿತು. ಹೆಂಗಸರು ಸಹ ತಮ್ಮ
ಮನೆಗಳಿಂದ ಹೊರಬಂದು ಸೆರೆಯಾದ ಮೂವರನ್ನು ಬಿಡಿಸಲೆಂ-
ದೆನ್ನುತ್ತಾ, ಬೀದಿಗಳಲ್ಲಿ ಮೆರವಣಿಗೆ ಹೋದರು. ಭಾರತೀಯ ಮ-
ಹಿಳೆಯರು ಸಾರ್ವಜನಿಕವಾಗಿ ಹೊರಬಿದ್ದಿದ್ದು ಈ ದೇಶದ
ಚರಿತ್ರೆಯಲ್ಲಿ ಅದೇ ಮೊದಲನೇ ಬಾರಿಗೆ ಆಗಿತ್ತು. ದೇಶದಲ್ಲಿ ಎ-
ಲ್ಲೆಡೆ ಎದ್ದ ಅಂದಿನ ಆಂದೋಲನವನ್ನು ನೋಡಿ ಅನಿ ಬಿಸೆಂಟ್
ಮತ್ತು ಅವಳ ಜತೆಯಿದ್ದವರನ್ನು ಬಿಡುಗಡೆ ಮಾಡಲು ಆಂಗ್ಲ
ಸರಕಾರ ನಿರ್ಧರಿಸಿತು. ಇದರಿಂದಾಗಿ ಅವಳು ಒಮ್ಮೆ ರಾಷ್ಟ್ರೀ-
ಯ ಧೀರೆಯೆಂದು ಗಣಿಸಿ ಆ ವರ್ಷದ ಕಾಂಗ್ರೆಸ್ ಅಧಿವೇಶ-
ನಕ್ಕೆ ಅವಳನ್ನು ಅಧ್ಯಕ್ಷೆಯನ್ನಾಗಿ ಮಾಡಿ ಆ ರೀತಿ ದೇಶವು ಅವ-
ಳನ್ನು ಸನ್ಮಾನಿಸಿತು. ಆ ವರ್ಷದ ಕಲ್ಕತ್ತಾ ಅಧಿವೇಶನದಲ್ಲಿ
ಅವಳು ಮಾಡಿದ ಭಾಷಣವಾದರೋ ಬಹು ಅಮೋಘವಾಗಿತ್ತು. ಎ-
ಚ್ಚೆತ್ತುಬಂದಿದ್ದ ಜಾಗೃತಿ, ಸರಕಾರಿಯ ಆಡಳಿತದ ಕೊನೆ, ಜನಸಾ-
ಮಾನ್ಯರ ಮತ್ತು ಹೆಂಗಸರ ಜಾಗೃತಿ ಮಾಡುವುದರ ಬಗ್ಗೆ ಹಲವು
ವಿಚಾರಗಳನ್ನೆಲ್ಲ ಒಳಗೊಂಡಿತ್ತು. ಅವಳ ಭಾಷಣದ ಸಾಲು ಹೀ-
ಗೆ ಹರಿಯುತ್ತದೆ:—

"While I was humiliated, you crowned me with honour, while I was slandered, you believed in my integrity and good faith, while I was crushed under the heal of bureaucratic power, you acclaimed me as your leader, while I was silenced and unable to defend myself, you defended me and won for me re-

release. I was proud to serve in lowliest fashion, but you lifted me up and placed me before the world as your chosen representative. I have no words with which to thank you, no eloquence with which to repay my debt. My deeds must speak for me, for words are too poor. I turn your gift into service to the Motherland---."

ದೇಶವು ಸ್ವತಂತ್ರವಾದಾಗ ಅದರ ರೂಪುರೇಷೆ ಹೇಗಿರಬೇಕೆಂಬುದನ್ನು ಆನಿಯು ವಿವರಿಸಿದಳು. ಆಂಗ್ಲೇಯರು ಇಂಗ್ಲೆಂಡಿನಲ್ಲಿ ಎಷ್ಟು ಸ್ವತಂತ್ರರಿದ್ದಾರೋ ಅಷ್ಟೇ ಸ್ವತಂತ್ರನಾಗಿ ಭಾರತೀಯನು ತನ್ನ ದೇಶದಲ್ಲಿ ಇರಬೇಕು; ತನ್ನದೇ ರಾಷ್ಟ್ರೀಯ ವಿದ್ಯೆಯನ್ನು ಪಡೆದಿರಬೇಕು; ತನ್ನದೇ ಸೇನಾಬಲ, ನೌಕಾಬಲದಿಂದ ತನ್ನ ರಾಷ್ಟ್ರವನ್ನು ಸುಭದ್ರವಾಗಿಸಬೇಕು, ಎಂದಿತ್ಯಾದಿಯಾಗಿ ಅವಳು ಮೇಲಿಂದ ಮೇಲೆ ಹೇಳಿದಳು. ಅವಳು ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ಮಾಡಿದ ತನ್ನ ಅಧ್ಯಕ್ಷ ಭಾಷಣದ ಕೊನೆಯ ಮಾತು ಹೀಗಿತ್ತು:-

"After a history of a millennia, stretching far back out of the ken of mortal eyes; having lived with but not died with the mighty civilizations of the past, having seen them rise and flourish and decay until only their sepulchres remained, deeply buried in earth's crust; having wrought and triumphed and suffered, and having survived all changes unbroken, India, who has been verily the crucified among Nations, now stands on this—her Resurrection morning---and India shall soon be seen, proud and self-reliant, strong and free, the radiant splendour of Asia, as the Light and Blessing of the World---."

<u>"ಹಿಂದುಸ್ಥಾನದ ಸ್ವಾತಂತ್ರ್ಯವೇ ನನ್ನ ಜೀವನದ ಧ್ಯೇಯವು"</u>:- ಕೀರ್ತಿಯಾಗಿ ಆನಿ ಬೆಸೆಂಟ್ ಇವಳು ಹೇಳುತ್ತಿದ್ದಳು. ಭಾರತೀಯರು ಮಹಿಳೆಯರಾದರೋ ಅವಳಿಗೆ ತುಂಬಾ ಋಣಿಯಾಗಿರಬೇಕು, ಏಕೆಂದರೆ ಅವಳು ದೇಶದಲ್ಲೆಲ್ಲ ಹಿಂದೂ ಮಹಿಳೆಯರಂತೆಯೇ ಉಡುಗೆಯನ್ನುಟ್ಟು ಹೆಂಗಸರ ಏಳಿಗೆಗಾಗಿ ದುಡಿದವರಲ್ಲಿ ಅವಳು ಭಾರತದ ಚರಿತ್ರೆಯಲ್ಲಿ ಪ್ರಾಮುಖ್ಯಳೆನಿಸಿದಳು. ಅವಳ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯು ಮಂಡಿಸಿದ ಹಿಂದೂ ಕೋ

ವು ಈ ರೀತಿಯಾಗಿತ್ತು:—

"Women possessing the same qualifications as are laid down for men in any part of the scheme (of Reforms), shall not be disqualified on account of sex."

ಆನಿ ಬೆಸೆಂಟ್ ಇವರನ್ನು ಬಂಧಿಸಿದ ಕಾರಣದಿಂದ ಅವರ ಶರೀರವು ತುಂಬಾ ಕೃಶವಾಯಿತು. ಹಾಗಿದ್ದರೂ ಅವರು ದೇಶ ವಿದೇಶಗಳಲ್ಲಿ ಸಂಚರಿಸುವ ತನ್ನ ಕಾರ್ಯಕ್ರಮವನ್ನು ನಿಲ್ಲಿಸಲಿಲ್ಲ. ಧರ್ಮ ಮತ್ತು ತತ್ವಜ್ಞಾನ ಪ್ರಚಾರಕ್ಕಾಗಿ ಅವರ ಉತ್ಸಾಹವು ದಿನ ದಿನಕ್ಕೆ ಹೆಚ್ಚುತ್ತಿದ್ದಿತಲ್ಲದೆ ಕಡಿಮೆಯಾಗಲಿಲ್ಲ. ಅವರು ಆಗಿಂದಾಗ್ಗೆ ಹೇಳುತ್ತಿದ್ದಾರೆ, "So many places have been visited, so many lectures given, so many people seen, that the meeting and parting in Calcutta (after the Congress sessions) can scarce be seen through the crowd of happenings. The work has been very heavy, and I fear that Lord Pentland and his three counsellors have permanently weakened my health by the unjust punishment they inflicted on me."

ಆದರೆ ಆನಿ ಬೆಸೆಂಟ್ ಇವರ ಜೀವನದ ಧ್ಯೇಯವಾದರೋ ಏನು? "India, the Mother of all the Indian races," ಎಂಬುದಾಗಿ ಅವರು ಪ್ರೀತಿಯಿಂದ ಮತ್ತು ಅಭಿಮಾನದಿಂದ ಕರೆಯುತ್ತಿದ್ದ ಈ ದೇಶದ ಸ್ವಾತಂತ್ರ್ಯವನ್ನು ದೊರಕಿಸಿದ್ದಾದರೆ ತಾನು ಧನ್ಯಳಾದೆನೆಂದು ಅವರು ಬಗೆದಿದ್ದರು. "---With the liberation of India, my political work will come to its natural end, I entered the field for that one purpose, and with its winning my work therein will be done."

ಇಂತಹ ಉದಾರ ಧ್ಯೇಯದಿಂದ ತನ್ನ ತತ್ವಜ್ಞಾನ (Theosophy) ವಿಚಾರವನ್ನು ಪ್ರಚಾರಪಡಿಸಲೆಂದು ಪ್ರತಿ ವರ್ಷ ಲೋಕವೆಲ್ಲ ಸುತ್ತಾಡುತ್ತಲೇ ಇದ್ದ ಈ ಅಸಾಮಾನ್ಯ ಮಹಿಳೆಯ ಮೂಲಕವಾಗಿ ಹಿಂದೂ ಧರ್ಮವು ಸಹ ಪಾಶ್ಚಾತ್ಯದೇಶಗಳಲ್ಲೆಲ್ಲ ಹಬ್ಬಿತು. ಅಷ್ಟೇ ಅಲ್ಲ, ಅವರಿಂದಾಗಿ ಹಿಂದೂಸ್ಥಾನದ ಪರಿಸ್ಥಿತಿಯು ಎಂಥದೆಂಬುದು ಇಂಗ್ಲೆಂಡಿನ ಜನಕ್ಕೆ ತಿಳಿಯಬಂತು. The Adyar Bulletin ಪತ್ರಿಕೆಯಲ್ಲಿ ಒಮ್ಮೆ ಹೀಗೆ ಹೇಳಲಾಗಿತ್ತು:—

"A great man in England, known all over the

English-speaking world, said that few realised how much the Theosophical Society had done to make India better understood in England. How glad our H. P. Blavatsky would have been to hear those words! For they are true. Few are the Theosophists (beginning from Blavatsky and Col. Henry Olcott) who do not look on India as the Holy Land, and their whole thought of India is coloured by their reverence for and their gratitude to the India of the Sages and Saints." (The Adyar Bulletin – June 1918)"

— × —

ಭಾಗ — ೨

"೧೯ ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ" ಎಂಬುದಾಗಿ ಬರೆದ ನನ್ನ ಗ್ರಂಥದಲ್ಲಿ ಅನಿ ಬೆಸೆಂಟ್ ಇವರನ್ನು ಕುರಿತಾಗಿ ಕೆಲವು ಪುಟಗಳನ್ನು ಬರೆದಿದ್ದೆನು. ಅಂದಿನ ಹಲವು ಸಾಹಿತಿಗಳೂ, ತತ್ವಜ್ಞಾನಿಗಳೂ, ಆದ ಪಾಶ್ಚಾತ್ಯರಲ್ಲಿ ಅನಿಯೂ ಒಬ್ಬರು! ಆ ಗ್ರಂಥವನ್ನು ಬರೆದಾಗ ಪಾಶ್ಚಾತ್ಯರನ್ನು ಹೊಗಳಿದ್ದು ತರವಲ್ಲ ಅಯುಕ್ತ, ಎಂಬುದಾಗಿ ಕೆಲವರು, ಬಹುಮಂದಿ ಬ್ರಾಹ್ಮಣರು, ಅದನ್ನು ಟೀಕಿಸಿದರು. ನಮ್ಮ ಜನಕ್ಕೆ ನಮ್ಮನ್ನೇ ಹೊಗಳಿಕೊಳ್ಳುವಿಕೆ, ನಮ್ಮವರೇ ಮೇಲು, ಬೇರಾರೂ ಇಲ್ಲ, ಎಂಬುದಾಗಿ ಕೆಲವರ ಮನಸ್ಸೋಭಾವ! ಹೀಗಾಗಿ ನಮ್ಮ ಜನದ ಜೀವನಕ್ರಮ, ಸಂಸ್ಕೃತಿ, ಕಲೆ, ನೀತಿ, ಖ್ಯಾತಿಯೆಲ್ಲವೂ ನಿಸ್ತೇಜವಾಗುತ್ತಾ ಬರುತ್ತಿದೆ. ಹಿಂದಿನದನ್ನು ಧಾರಾಳವಾಗಿ ಹೇಳಿಕೊಳ್ಳುತ್ತೇವಾದರೂ ಆ ರೀತಿ ವರ್ತಿಸುವುದಂತೂ ಇಲ್ಲ. ನಮ್ಮ ಧರ್ಮ, ಸಾಹಿತ್ಯ, ಸಂಸ್ಕೃತಿಗಳಲ್ಲಿ ಸದಭಿಮಾನವಂತೂ ಅಂದು ಇದ್ದಿಲ್ಲ, ಇಂದೂ ಕಾಣುತ್ತಿಲ್ಲ. ಅದೇನಿದ್ದರೂ ಅನಿ ಬೆಸೆಂಟ್ ಇವರನ್ನು ಕುರಿತಾಗಿ ನಾನು ಮೇಲೆ ಹೆಸರಿಸಿದ ನನ್ನ ಗ್ರಂಥದಲ್ಲಿ ಹೀಗೂ ಹೇಳಿದ್ದೆನು:—

"ಕಳೆದ ಶತಮಾನದಲ್ಲಿ ಈ ದೇಶದಲ್ಲಿದ್ದ ಯಾವ ಭಾರತೀಯನನ್ನೂ ಸ್ವೀಯರನ್ನೂ ಮೀರಿಸುವ ಅಗಾಧ ಕಾರ್ಯವನ್ನು ಸಾಧಿಸಿದ ಪಾಶ್ಚಾತ್ಯರಲ್ಲಿ ಶ್ರೀಮತಿ ಅನಿ ಬೆಸೆಂಟ್ ಇವರು ಪ್ರಮುಖರಾಗಿದ್ದರು. ಹುಟ್ಟು ವಾಗ್ಮಿ ಹಾಗೂ ಕ್ರಾಂತಿಕಾರಕ ಸ್ತ್ರೀಯಾಗಿ ಹುಟ್ಟಿ ಬಂದವಳು ---- ಬ್ರಹ್ಮವಿದ್ಯಾಜ್ಞಾನವನ್ನು ಇವರು ಉಗ್ರವಾಗಿ ಪ್ರತಿಪಾದಿಸಿದರು; ಭಾರತೀಯ ತತ್ವಶಾಸ್ತ್ರದ ಅನ್ವೇಷಣೆಯ ನಿಮಿತ್ತವಾಗಿ ಇವರು 1893-94ರಲ್ಲಿ ಲಂಡನ್ನಿನಿಂದ ಅಮೇರಿಕಾ ಮಾರ್ಗವಾಗಿ ಈ ದೇಶಕ್ಕೆ ಬಂದರು,

ಈ ದೇಶದಲ್ಲಿ ಮೊದಲ ಹದಿನೈದು ವರ್ಷಗಳ ಕಾಲ ಭಾರತೀಯರ ತತ್ವಶಾಸ್ತ್ರಗಳ ಅಭ್ಯಾಸದಲ್ಲಿ, ಸಮಾಜಸೇವೆ, ಧರ್ಮಪ್ರಚಾರ ಇತ್ಯಾದಿಗಳಲ್ಲಿ ನಿರತಳಾಗಿದ್ದಳು. ಸಂಸ್ಕೃತದಲ್ಲಿ ವಿದ್ವತ್ತನ್ನು ಪಡೆದು ವೇದಗಳ ಕೆಲವು ಸಂಹಿತೆಗಳನ್ನು ಇಂಗ್ಲೀಷಿಗೆ ಇಳಿಸಿದಳು. ಕಾಶೀ ವಿದ್ಯಾಪೀಠ ಮತ್ತು ಹಲವು ರಾಷ್ಟ್ರೀಯ ಶಾಲೆಗಳನ್ನು ಕಾಲೇಜುಗಳನ್ನು ಸ್ಥಾಪಿಸುವುದಕ್ಕೆ ನೆರವಾದಳು. ಭಾರತೀಯರ, ಮತ್ತು ಭಾರತೀಯ ಸ್ತ್ರೀಯರ ಏಳಿಗೆಗಾಗಿ ಶ್ರಮಿಸಿದಳು. ಕ್ರಿ.ಶ. 1914 ರಿಂದ 1930 ರ ವರೆಗೂ ಆನಿಯು ಈ ದೇಶದ ಗಣ್ಯ ಮುಂದಾಳಾಗಿ ಹೋರಾಡಿದಳು."

"<u>ಜನಜಾಗೃತಿಗೆ ಕ್ರಾಂತಿಕಾರಕ ಪ್ರಚೋದನವಿತ್ತ ಆನಿ ಬೆಸೆಂಟ್</u>:— ಡಾ. ಆನಿ ಬೆಸೆಂಟ್ ಇವಳು ಧರ್ಮ ತತ್ವಶಾಸ್ತ್ರ ವಿಶಾರದೆ, ಸಾಹಿತಿ, ಪತ್ರಿಕೋದ್ಯಮಿ, ವಾಗ್ಮಿ, ಇತ್ಯಾದಿಯಾಗಿ ಈ ದೇಶದಲ್ಲಿ ವಿರಾಜಿಸಿದಳು. ಸಮಾಜ ಸುಧಾರಣೆಗಾಗಿ ಮತ್ತು ದೇಶದ ವಿದ್ಯಾಭಿವೃದ್ಧಿಗಾಗಿ ಇವಳು ಕೈಗೊಂಡ ಪ್ರಯತ್ನದ ಪರಿಣಾಮವಾಗಿ ಇವಳಿಗೆ ದೇಶವಿದೇಶಗಳಿಂದ ಲಕ್ಷಾಂತರ ರೂಪಾಯಿಗಳ ಸಹಾಯಧನವು ಅಂಚೆಯ ಬರುತ್ತಿದ್ದವು. ಅದನ್ನೆಲ್ಲ ಅವಳು ಸ್ಥಾಪಿಸಿದ ವಿವಿಧ ಸಂಸ್ಥೆಗಳಿಗೆ ನೀಡಿ ಅವುಗಳ ಏಳಿಗೆಗೆ ನೆರವಾದಳು. ಇವಳು ಹಿಂದೂ ತತ್ವಶಾಸ್ತ್ರ, ಬ್ರಹ್ಮವಿದ್ಯಾ ಜ್ಞಾನ ಇತ್ಯಾದಿಗಳ ಬಗೆ ಬರೆದ ಗ್ರಂಥಗಳು ಲಕ್ಷಗಟ್ಟಲೆ ಪ್ರತಿಗಳಂತೆ ವಿವಿಧ ದೇಶಗಳಲ್ಲಿ ಪ್ರಚಾರವಾಗಿವೆ. ಭಗವದ್ಗೀತೆಯನ್ನು ಆನಿಯು ಭಾಷಾಂತರಿಸಿದ್ದು, ಅದರ ಪ್ರತಿಗಳು ಮಿಲಿಯಾಂತರವಾಗಿ ಮಾರಾಟವಾಗಿವೆ. ಇವಳ ತತ್ವಶಾಸ್ತ್ರ ವ್ಯಾಖ್ಯಾನವು ಬಹು ಪ್ರೌಢತರವಾಗಿದ್ದುದು ಮಾತ್ರವಲ್ಲ, ಅವಳ ಕೃತಿಗಳು ತುಂಬಾ ಜನಪ್ರಿಯವೂ ಆಗಿದ್ದುವು.

"ಡಾ. ಆನಿ ಬೆಸೆಂಟ್ ಇವಳು ಈ ದೇಶದ ಜನರಲ್ಲಿ ವಿಚಾರಜ್ಞಾನವನ್ನು ಮೊಳಗಿಸಲು 'New India' ಎಂಬ ಕ್ರಾಂತಿಕಾರಕವಾದ ಪತ್ರಿಕೆಯನ್ನು ನಡೆಸಿದಳು; ದೇಶದ ಉದ್ಧಾರಕ್ಕಾಗಿ ಹೋರಾಡಿ ತನ್ನ ವಾಗ್ಬಲದಿಂದ ಜನತೆಯನ್ನು ಸ್ವರಾಜ್ಯಕ್ಕಾಗಿ ಚಳುವಳಿಯಲ್ಲಿ ಧುಮುಕಲು ಹುರಿದುಂಬಿಸಿದಳು. ಈ ಶತಮಾನದ ಆರಂಭಕ್ಕೆ ಅವಳು ಸರ್ ಎಡ್ವಿನ್ ಮಾಂಟೇಗ್ ಇವನು ಹೇಳಿದಂತೆ ಧರ್ಮ ಮಹಾಕಾಳಿಯ ಅವತಾರದಂತೆ ತೋರ್ಪಡಿಸಿಕೊಂಡಿದ್ದಳು. ಅವಳ ಪತಿ ಫ್ರಾಂಕ್ ಬೆಸೆಂಟನು 1917 ರಲ್ಲಿ ಇಂಗ್ಲೆಂಡಿನಲ್ಲಿ ನಿಧನವಾದಾಗ ಆನಿಯು ಈ ದೇಶದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷೆಯಾಗಿ, "ಹೋಂ ರೂಲ್" ಚಳುವಳಿಯ ಮುಂದಾಳಾಗಿ, ಕೋರ್ಟು ಕಚೇರಿಗಳಲ್ಲಿ ಬ್ರಿಟಿಷ್ ಸರಕಾರವನ್ನು ಪ್ರತಿಭಟಿಸುವ ದೇಶಸೇವಿಕೆಯಾಗಿ, ಪ್ರಬಲ ವಾಗ್ಮಿಯಾಗಿ, ಭಾರತೀಯರಂತೆಯೇ ಜೀವಿಸಿದ ಆದರ್ಶವಾದಿಯಾಗಿ ಪ್ರಸಿದ್ಧಳಾದಳು. ಅವಳು ಆ ಕಾಲದಲ್ಲಿ ಹೇಳುತ್ತಿದ್ದ ರಾಜಕೀಯ ಮಂತ್ರ ಸೂತ್ರಗಳೆಲ್ಲ ಅವಳನಂತರದ ವರ್ಷಗಳಲ್ಲಿ ಹಿಂ

ದೊಂದು ರೀತಿಯಲ್ಲಿ ಕಾರ್ಯತಃ ತೋರಿಬಂದವು. ಅಂದಿನ ದೇಶದ ಹಿರಿಯ ರಾಜಕಾರಣಿಗಳಾಗಿದ್ದ ಶ್ರೀನಿವಾಸ ಶಾಸ್ತ್ರಿ, ಮೋತಿಲಾಲ ನೆಹರು, ಭಗವಾನ್‌ದಾಸ, ಮಹಮ್ಮದಾಲಿ ಜಿನ್ನಾ, ರಾಮಸ್ವಾಮಿ ಅಯ್ಯರ್ ಮೊದಲಾದವರು ಈ ಬಹುಶ್ರುತ ಮಹಿಳೆಯ ತತ್ವಬಲ ಮತ್ತು ವಾಗ್ಬಲಕ್ಕೆ ಮನ್ನಿಸಿದ ರಾಜಕೀಯ ಮುಂದಾಳುಗಳೆಂದೆನಿಸಿದರು, ಕೃಷ್ಣಮೂರ್ತಿ, ಕೃಷ್ಣಮೆನನ್, ಬೆನಗಲ್ ಶಿವರಾಯ ಮೊದಲಾದ ಇನ್ನೆಷ್ಟೋ ಜನವನ್ನು ತನ್ನ ಮಕ್ಕಳಂತೆ ಪೋಷಿಸಿ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸವನ್ನು ಕೊಡಿಸಿ ಅವರ ಪುರೋಭಿವೃದ್ಧಿಗೆ ನೆರವಾದಳು,

ಒಟ್ಟಾಗಿ ಶ್ರೀಮತಿ ಅನಿ ಬೆಸೆಂಟ್ ಇವರು ಈ ದೇಶದ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಅಭೂತಪೂರ್ವ ಸಾಹಸವನ್ನು ಮೀರಿ ಬೆಳೆದ ಇನ್ನೊಬ್ಬನು ಅಥವಾ ಇನ್ನೊಬ್ಬಳು ನಮ್ಮ ದೇಶದಲ್ಲಿ ಕಾಣುವುದೇ ದುರ್ಲಭವಾಗಿದೆ. ನಮ್ಮ ದೇಶವು ಈ ಮಹಾವ್ಯಕ್ತಿಗೆ ಕೊಡತಕ್ಕಷ್ಟು ಮನ್ನಣೆಯನ್ನು ಗೌರವವನ್ನು ಇನ್ನೂ ಕೊಡದೆ ಕೃತಘ್ನತೆಯಿಂದ ವರ್ತಿಸಿದೆ. ಆದರೆ ಮಹಾತ್ಮ ಗಾಂಧಿಯವರನಂತರ ಈ ಶತಮಾನದಲ್ಲಿ ಅಖಿಲ ಭಾರತ ಪ್ರತಿಭಾವಂತ ತತ್ವಜ್ಞಾನಿ ಮತ್ತು ರಾಜಕಾರಣಿಯು ಯಾರೆಂದು ಕೇಳಿದರೆ ಅದು ಶ್ರೀಮತಿ ಅನಿ ಬೆಸೆಂಟ್ ಇವರೆಂಬುದು ಸರ್ವವಿದಿತವಾಗಿದೆ, ಆದರೆ ಇವರು ವಿಲಾಯತಿಯಲ್ಲಿ ಹುಟ್ಟಿ ಬಂದ ಹಿರ್ವ "ಮಹಾಕಾಳಿ" ಎಂಬುದನ್ನು ನಾವು ನೆನೆಸಿಕೊಳ್ಳಬೇಕಾಗಿದೆ,

<u>ನಮ್ಮ ನಾಯಕರು ಅನಿಯನ್ನು ಕುರಿತಾಗಿ ಏನೆಂದಿದ್ದಾರೆ?</u>: ಅನಿ ಬೆಸೆಂಟ್ ಇವರನ್ನು ಕುರಿತಾಗಿ ಮೇಲಿನಂತೆ ನನ್ನ ಅಭಿಪ್ರಾಯವನ್ನು ನನ್ನ ಬೇರೊಂದು ಕೃತಿಯಲ್ಲಿ ಹೇಳಿದ್ದೇನೆ, ಇದಕ್ಕೆ ನೀವಂತೆ ಸ್ತ್ರೀಗೆ ಭಾರತೀಯರಿತ್ತ ಗೌರವವೇನು ? ನಮ್ಮ ಯಾವಾವುದು ಬಗೆಯ ರಾಜಕಾರಣಿಗಳನ್ನು ಚಿತ್ರಪಟಗಳು, ಪ್ರತಿಮೆಗಳು, ನಾಣ್ಯಗಳು ಕಲ್ಲಿನ ಬರಹಗಳು ಇತ್ಯಾದಿಗಳ ಮೂಲಕವಾಗಿ ನೆನೆಸಿಕೊಳ್ಳುತ್ತಾರೆ. ಸರಿ; ಆದರೆ ಯಾವುದೋ ದೇಶಗಳಿಂದ ಬಂದು ಈ ದೇಶದ ಸ್ವಾತಂತ್ರ್ಯಕ್ಕೆ, ಸಾಹಿತ್ಯಕ್ಕೆ, ಧರ್ಮಕ್ಕೆ, ಏಳಿಗೆಗೆ ಶ್ರಮಿಸಿದ ವಿದೇಶೀಯರ ಬಗ್ಗೆ ಅದೇಕೆ ಅಷ್ಟು ಕೃತಘ್ನತೆಯೋ, ತಿಳಿಯದು !

ಕ್ರಿ.ಶ. 1894 ರಿಂದ 1917ರ ವರೆಗೆ ಅನಿ ಬೆಸೆಂಟ್ ಇವರು ಈ ದೇಶದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲಿಯೇ ತತ್ವಜ್ಞಾನ ಹಾಗೂ ಬ್ರಹ್ಮವಿದ್ಯಾನೀತಿಯನ್ನು ಹರಡಲು ಜಯಪ್ರದವಾಗಿ ಸಾಧಿಸಿದಳು. ಆ 'ಥಿಯೋಸಫಿ' ತತ್ವಜ್ಞಾನಿಗಳ ತಂಡವು ಭಾರತವನ್ನು ತಮ್ಮ ಜನ್ಮಭೂಮಿಯೆಂದೇ ಬಗೆದು ಅದರ ಉದ್ಧಾರಕ್ಕಾಗಿ ದುಡಿದರೆಂಬುದು ಬ್ಲಾವಟ್‌ಸ್ಕಿ, ಅಲ್ಕಾಟ್ ಮತ್ತು ಅನಿ ಬೆಸೆಂಟ್ ಈ ಮೂವರ ಜೀವನವು ಸಂವ್ಯಕ್ತಗೊಳಿಸುತ್ತದೆ.

ಸುಮಾರು ಎಪ್ಪತ್ತು ವರ್ಷಗಳಿಗೆ ಹಿಂದೆ ಆರಂಭಿಸಿದ ಕಾಂಗ್ರೆಸ್ ಮುಂದಾಳುಗಳು ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯ ಚರಿತ್ರೆಯನ್ನು ಬರೆಯಬೇಕೆಂದು ನಿರ್ಧರಿಸಿದರು. ಡಾ. ಪಟ್ಟಾಭಿ ಸೀತಾರಾಮಯ್ಯನವರಿಗೆ ಆ ಜವಾಬ್ದಾರಿಕೆಯನ್ನು ಹೊರಿಸಿದರು. ಆದರೆ ಆ ಕೃತಿ ರಚನೆಗೆ ಆಧಾರವಾಗಿ ಬೇರೆ ಏನೂ ಕೃತಿಗಳಿರಲಿಲ್ಲ. ಆದರೂ ಡಾ. ಪಟ್ಟಾಭಿಯವರಿಗೆ ಆ ವಿಷಯವಾಗಿ ಬರೆಯಲು ಆನಿ ಬೆಸೆಂಟ್ ಇವರು ಬರೆದಿರುವ ವಿಶೇಷ ಸಹಾಯಕವಾಯಿತೆಂದು ಹೇಳಿದ್ದಾರೆ:-

"A graphic account of the first session of the Congress is given by Mrs. Besant in her publication, "How India Wrought For Freedom", and we are indebted to her for the following extracts therefrom---."

ಕಾಂಗ್ರೆಸ್ ಸಂಸ್ಥೆಯು ಮೊದಲ ಅಧಿವೇಶನದ ವೇಳೆಗೆ ಆನಿಯು ಈ ದೇಶದಲ್ಲಿ ಇರಲಿಲ್ಲ. ಹಾಗಿದ್ದರೂ ಅವರು ಇಪ್ಪತ್ತು ವರ್ಷಗಳನಂತರ ಆ ವಿಚಾರವೆಲ್ಲವನ್ನು ಸವಿಸ್ತಾರವಾಗಿ ಬರೆದಿರುವ ಕಾರ್ಯಭಾರ ಅವರದಾಯಿತು. "ಥಿಯೊಸಫಿಕಲ್" ಸಂಸ್ಥೆಯು ಈ ದೇಶಕ್ಕೆ ಎಷ್ಟು ಹಿತಕರವಾಗಿದೆ, ನಮ್ಮ ಗತವೈಭವವನ್ನು ನಮಗೆ ತಿಳಿಸಲು ಅದೆಷ್ಟು ಸಹಾಯಕವಾಗಿದೆ, ಎಂಬುದನ್ನೆಲ್ಲ ನಮ್ಮ ರಾಷ್ಟ್ರೀಯ ಮುಂದಾಳುಗಳು ಒಪ್ಪಿ ಪ್ರಶಂಸಿಸಿ ತಮ್ಮ ಕಾಂಗ್ರೆಸ್ ಇತಿಹಾಸದಲ್ಲಿ ಬರೆದದ್ದು ಆನಿ ಬೆಸೆಂಟ್ ಇವರು ಈ ದೇಶದಲ್ಲಿ ಸಾಧಿಸಿದ ಮಹತ್ಕಾರ್ಯಕ್ಕೆ ಒಂದು ಪ್ರಮಾಣವಾಗಿದೆ:—

"The Theosophical movement – while it extended its studies and sympathies to the wide world, laid special emphasis on a rediscovery as well as re-habitation of all that was great and glorious in the Oriental culture. It was this passion that led Mrs. Besant to start a College in Benares, the holy city of India."

<u>ಆನಿ ಬೆಸೆಂಟ್ ಇವರು ರಾಷ್ಟ್ರೀಯ ಮುಂದಾಳು ಅಧ್ಯಕ್ಷರು:-</u> ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದ ಹಿನ್ನೆಲೆಯೇನು ಎಂಬುದಾಗಿ ಕಾಂಗ್ರೆಸ್ ಚರಿತ್ರೆಯಲ್ಲಿ ವಿಶದವಾಗಿ ಪ್ರಸ್ತಾಪಿಸಲಾಗಿದೆ. ಸುಮಾರು 1910 ರ ವರೆಗೂ ನಮ್ಮ ದೇಶದ ರಾಜಕೀಯ ನಭದಲ್ಲಿ ಕಾಣುತಿದ್ದುದು ಒಂದೇ ಒಂದು ನಕ್ಷತ್ರವಾಗಿತ್ತು. ಅದು ಆನಿ ಬೆಸೆಂಟ್ ಇವರು, ಹಿಂದೆಯೇ ಹೇಳಿದಂತೆ, ಪ್ರಾರಂಭದ ಹಲವು ರಾಷ್ಟ್ರಗಳಲ್ಲಿ ಪ್ರತಿವರ್ಷವೂ ಸಂಚರಿಸುತಿದ್ದಾಗಲೂ, ಬರೆ ಕಾಯ, ರೈಲು, ಮತ್ತು ಹಡಗು ಪ್ರಯಾಣವಾದರೂ, ಈ ದೇಶದಲ್ಲಿ

ಅವರಷ್ಟು ಹಿರಿದ ಪ್ರಭಾವವು ಅನುಮಾನವಾಗಿತ್ತು. ಹ್ಯೂಮ್, ಸ್ಮಿತ್, ಕಾಟನ್, ಯೂಲ್ ಈ ಮೊದಲಾದವರ ಕಾಲ ಕಳೆದಿತ್ತು. ಅವರೆಲ್ಲ 1880 ರಿಂದ 1905 ರ ವರೆಗೆ ಇಪ್ಪತ್ತೈದು ವರ್ಷಗಳ ಕಾಲ ನಮ್ಮ ಜನಕ್ಕೆ ರಾಷ್ಟ್ರೀಯ ಸ್ವಾತಂತ್ರ್ಯ, ಅಥವಾ ಸ್ವರಾಜ್ಯದ ಬಗ್ಗೆ ಹುರುಳನ್ನು, ಉತ್ಸಾಹವನ್ನು ವಿಚಾರ ಜ್ಞಾನವನ್ನು ಹುಟ್ಟಿಸಿದ್ದರು. ಅವರೆಲ್ಲ ಒಬ್ಬರನಂತರ ಒಬ್ಬರಾಗಿ ಅಗಲಿದರು. ಅವರನಂತರ ಒಮ್ಮೆ ರಾಷ್ಟ್ರೀಯ ವ್ಯಕ್ತಿಯೊಬ್ಬ ದೇಶದ ನಾಯಕತ್ವವನ್ನು ವಹಿಸಲಿಕ್ಕಾಯಿತು. ಹಾಗಾದರೆ ನಮ್ಮವರೆಲ್ಲ ಎಲ್ಲಿ ಹೋದರು? ನವರೋಜಿ, ರಾನಡೆ, ಗೋಖಲೆ, ಮೆಹತಾ, ತಿಲಕ್ ಅಥವಾ "ಲಾಲ ಪಾಲ, ಬಾಲ" ಈ ಮೊದಲಾದವರೂ ಇದ್ದರು. ಇದ್ದರೆ ಏಕೆ? ಕಾಂಗ್ರೆಸ್ ಸಂಸ್ಥೆಯು ಅಧಿಕೃತ ಚರಿತ್ರೆಯು ಈ ರೀತಿ ಹೇಳಿದೆ:—

"--- From 1910 to 1915 the Congress was merely marking time. No material changes however took place for a time. When the Great War broke out in 1914, and Mrs. Besant inaugurated her great political movement, it was done under the auspicies of the All-India Home Rule League."

ನಮ್ಮ ದೇಶೀಯ ನಾಯಕರು ಪ್ರತಿ ವರ್ಷವೂ ನಡೆಯುತ್ತಿದ್ದ ಕಾಂಗ್ರೆಸ್ ಅಧಿವೇಶನಗಳಲ್ಲಿ ಭಯಂಕರ ಭಾಷಣಗಳನ್ನು ಮಾಡುತ್ತಿದ್ದರು. ಅವರಲ್ಲಿ ಕೆಲವರು ತಮ್ಮ ಮಾತುಗಳಿಂದ ನಾಯಕರಾಗಿದ್ದರಲ್ಲದೆ ಕರ್ತವ್ಯ ತತ್ಪರತೆಯುಳ್ಳವರಲ್ಲ ಎಂಬುದಕ್ಕೆ ಅನಿ ಬೆಸೆಂಟ್ ಇವರ ಚಟುವಟಿಕೆಗಳೇ ಸಾಕ್ಷಿಯಾಗಿವೆ. ಕಲ್ಕತ್ತಾ ಕಾಂಗ್ರೆಸ್ಸಿಗೆ ಹಿಂದೆ ನಮ್ಮ ದೇಶೀಯ ರಾಜಕೀಯ ಹೇಗಿತ್ತು ಎಂಬುದಕ್ಕೆ ಹೆಚ್ಚಿನದು ಹೇಳಬೇಕಾಗಿಲ್ಲ, ರಾಷ್ಟ್ರೀಯ ಕಾಂಗ್ರೆಸ್ ಚರಿತ್ರೆಯು ಆ ವಿಷಯವನ್ನು ಸರಿಯಾಗಿ ಈ ರೀತಿ ಹೇಳುತ್ತದೆ:—

"The Home Rule agitation led by Mrs. Besant, her internment, the scheme of Passive Resistance thought of jointly by the Congress and the Muslim League, the great speech of Mr. Edwin Montague and --- Mrs. Besant's release and her election as President of the Congress ---- form the background for the picture of the Calcutta Congress of 1917."

<u>ಭಾಷಾವಾರು ಪ್ರಾಂತಗಳ ರಚನೆಯನ್ನು ಅನಿ ವಿರೋಧಿಸಿದ್ದಳು:—</u>

ಬ್ರಿಟಿಷರು ಈ ದೇಶಕ್ಕೆ ಬರುವವರೆಗೂ ಇಡೀ ಭಾರತಖಂಡವು ಒಂದೇ ಒಂದು ವಿಶಾಲ ರಾಜ್ಯವಾಗಿ ಇದ್ದದ್ದೇ ಇಲ್ಲ. ಅಂದು ಅಸ್ತವ್ಯಸ್ತವಾಗಿದ್ದ ಈ ದೇಶವನ್ನು ಒಂದೇ ಸಾಮ್ರಾಜ್ಯವಾಗಿ ಕಟ್ಟಿದವರಲ್ಲಿ ಬ್ರಿಟಿ

ತ್ಯಕ್ತಿ ಮೊದಲು. ಅದಕ್ಕೆ ತಕ್ಕಂತೆ ಅವರು ಅಖಂಡ ಭಾರತ ಆದರ್ಶ ಪ್ರೇಮ, ಅಖಂಡ ಭಾರತದ ಚರಿತ್ರೆ, ಭೂಗೋಳ, ಭಾಷಾ ಸಮುದಾಯಗಳನ್ನೆಲ್ಲ ಒಂದಾಗಿ 'ನಿರ್ಮಿಸಿ ಒಂದು ಸಾಮ್ರಾಜ್ಯವನ್ನೆ ಕಟ್ಟಿದರು. ಆದರೆ ಭಾರತೀಯರು ಬಹು ಹಿಂದಿನಿಂದಲೇ ಅಷ್ಟು ವಿಶಾಲ ಮನೋಭಾವದಿಂದ, ಸಮಗ್ರ ದೇಶವು ಒಂದೇ ಎಂದು ಗಣಿಸಿ ವರ್ತಿಸಿದ್ದೇ ಇಲ್ಲ. ಮೊದಲಿಗ ಲ್ಲಿಲ್ಲ ಈ ದೇಶವು ಒಂದು, ಭರತಖಂಡ ಒಂದೇ ಒಂದು ದೇಶವೆಂದಿಲ್ಲ ಹೇಳಿದ್ದರೂ ಅದನ್ನು ಕಾರ್ಯತಃ ಒಂದಾಗಿಸಲು ಸಾಧ್ಯತೆಯೇ ಇಲ್ಲಿಗೆ ಬರಬೇಕಾಯಿತು. ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ನಮ್ಮ ನಾಯಕರು ಭಾಷಾವಾರು ಪ್ರಾಂತಗಳಾಗಬೇಕೆಂದು ಒಪ್ಪಿದ್ದರು. ಹಾಗಾಗಬೇಕೆಂಬ ವಾದವನ್ನು 1905 ರಿಂದಲೇ ಹೂಡಿದ್ದರು. ಆದರೆ ಆಗ ಸರಕಾರವು ಆಂಗ್ಲ ಸಂಕೀರ್ಣ ದೃಷ್ಟಿಯಿಂದ ದೇಶವನ್ನು ವಿಭಜಿಸಲು ಇಚ್ಛಿಸಲಿಲ್ಲ. ಹೇಗೂ ದೇಶಕ್ಕೆ ಸ್ವಾತಂತ್ರ್ಯ ದೊರೆಯುವ ಮುಂಚೆಯೇ ನಮ್ಮ ಜನರು ಭಾಷಾವಾರು ಪ್ರಾಂತಗಳಾಗಬೇಕೆಂದು ಹೇಳುತಿದ್ದರು. ಆನಿ ಬೆಸೆಂಟ್ ಇವರು ಆ ನೀತಿಗೆ ತೀವ್ರ ವಿರೋಧವಿದ್ದಳು.

ಅಖಂಡ ಭಾರತದ ಮಟ್ಟದಲ್ಲಿ ಸ್ಥಾಪಿಸಲಾದ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯನ್ನು ಒಡೆದು ಹಾಕಿದ ಸಾಹಸ ನಮ್ಮ ದೇಶೀಯರದು; ಅದು 1919ರಲ್ಲಿ. ಅದಕ್ಕೂ ಹಿಂದೆ ಅಖಂಡ ಭಾರತ "ಹೋಂ ರೂಲ್" ಸಂಸ್ಥೆಯನ್ನು ಒಡೆದು ಹಾಕಿದ್ದೂ ನಮ್ಮವರೇ! ಮಹಾರಾಷ್ಟ್ರ ಬ್ರಾಹ್ಮಣ, ತೀವ್ರಗಾಮಿ, ಗಣಿತ ಪ್ರಾಧ್ಯಾಪಕ, ಸೆರೆಮನೆಯಲ್ಲಿ 'ಗೀತಾ ರಹಸ್ಯ'ವನ್ನು ಬರೆದವನೂ ಆದ ಬಾಲ ಗಂಗಾಧರ ತಿಲಕ, ಹಾಗೆಯೇ ಇನ್ನು ಕೆಲವರಿಗೆ ಇಡೀ ದೇಶದ ವಿಶಾಲತೆಯತ್ತ ವಿಶಾಲ ಮನೋಭಾವವು ಇದ್ದಿತೋ ಎಂದು ಇನ್ನೂ ವ್ಯಕ್ತವಾಗಿಲ್ಲ. ಹೇಗೂ ಈ ಎರಡು ವಿಷಯಗಳನ್ನು ಕುರಿತಾಗಿ ಅಧಿಕೃತ ಕಾಂಗ್ರೆಸ್ ಚರಿತ್ರೆಯು ಏನು ಹೇಳುತ್ತೆಂಬುದನ್ನು ಇದರಿಂದ ತಿಳಿಯಬಹುದು:-

"It may be noted that Tilak had organised a separate Home Rule League in Maharastra in 1916---- The question of a separate Andhra Congress Province was indeed mooted earlier in 1915-16, and was accepted in 1917 by the Calcutta Session after vehement opposition by the President Dr. Annie Besant, and from some leading South Indian delegates---."

<u>ಸರ್ ಶಂಕರಂ ಮತ್ತು ಸರ್ ರಾಮಸ್ವಾಮಿ ಐಯ್ಯರ್ ಇವರು</u>:- ಆನಿ ಬೆಸೆಂಟ್ ಇವರು ವಿರೋಧಿಸಿದ ಕಾರಣದಿಂದ ಭಾಷಾವಾರು ಪ್ರಾಂತಗಳಾಗಬೇಕೆಂಬ ಠರಾವು ಸರ್ವರ ಒಪ್ಪಿಗೆಯನ್ನು ಪಡೆಯಲಿಲ್ಲ. ಆದರೆ ಅವರು ಅಂದಿನ ಕಾಂಗ್ರೆಸ್ ಕೂಟದಿಂದ ಬೇರ್ಪಟ್ಟನಂತರ ನಡೆದ

ಕಾಂಗ್ರೆಸ್ ಸಭೆಗಳಲ್ಲಿ ಸಮಗ್ರ ಭಾರತ ಒಂದೇ ಎಂಬ ಪ್ರವೃತ್ತಿಯನ್ನು ಇದರ ನೇತೃಗಳು ಒಂದಾಗಿದ್ದನ್ನು ಭಾಷಾವಾರು ಪ್ರಾಂತಗಳಿಗಾಗಿ ವಿಭಜಿಸಬೇಕೆಂದು ತೀರ್ಮಾನಿಸಿಕೊಂಡರು. "But the demands of Karnataka and Kerala had to wait till the general re-distribution of the Congress provinces in India into twenty-one after the Nagpur session of 1920 ---," ಎಂಬುದಾಗಿ ಕಾಂಗ್ರೆಸ್ ಚರಿತ್ರೆಯಲ್ಲಿ ಹೇಳಲಾಗಿದೆ.

ಈ ತೀರ್ಮಾನವು ಅಖಂಡವಾಗಿದ್ದ ಈ ದೇಶವನ್ನು ಖಂಡ ತುಂಡವಾಗಿ ಮಾಡಲು ನಾಂದಿಯಾಯಿತು. ನಮ್ಮ ರಾಜಕೀಯದ ದೂರದೃಷ್ಟಿಯಿಲ್ಲವು ಅಲ್ಲಿಂದನಂತರ ಈ ರೀತಿಯಾಗಿ ಹರಿಯಿತು. ಅನಿ ಬೆಸೆಂಟ್ ಇವರಿಗೆ ತನ್ನ ರಾಜಕೀಯ ನೀತಿಗೆ ಬೆಂಬಲವೀಯಲು ಕೆಲವು ಮೇಧಾವಿ ಭಾರತೀಯರು ಇದ್ದರು. ಅವರಲ್ಲಿ ಸರ್ ಸುಂದರಂ ಅಯ್ಯರ್ ಇವರೊಬ್ಬರು. ಅನಿಯವ 'ಹೋಂ ರೂಲ್' ಚಳುವಳಿಯು 1914 ರಿಂದಲೇ ಆರಂಭಿಸಿ, ಮೇಲ್ಪಟ್ಟಕ್ಕೇರಿತೆಂಬುದು ಅವನು ತನ್ನ "ಸರ್" ಪದವಿಯನ್ನು ತ್ಯಾಗಮಾಡಿದ್ದರಿಂದಲೇ ತಿಳಿಯುತ್ತದೆ. ಈ ವಿಷಯವಾಗಿ ಕಾಂಗ್ರೆಸ್ ಚರಿತ್ರೆಯು ಈ ರೀತಿಯಾಗಿ ಹೇಳಿದೆ:—

"Mr. P. R. Sundaram Iyer should have presided over the Congress in 1899, and was unable to do so as he was made a judge of the High Court, reverted to the Congress in 1914, and during the Home Rule agitation of Mrs. Besant, surrendered his Knighthood ---."

ಅನಿ ಬೆಸೆಂಟ್ ಇವರ ಮತ್ತೊಬ್ಬ ಮೇಧಾವಿ ಸಹೋದ್ಯೋಗಿಯು ಸರ್ ರಾಮಸ್ವಾಮಿ ಅಯ್ಯರ್ ಇವರು. ಅವರಿಗೆ ವಿರೋಧವಾಗಿ ಕೃಷ್ಣಮೂರ್ತಿ-ನಿತ್ಯಾನಂದ ಇವರಿಗೆ ಸಂಬಂಧಿಸಿದ ವ್ಯಾಜ್ಯದಲ್ಲಿ ವಕಾಲತ್ತನ್ನು ವಹಿಸಿದ್ದ ಅವನ ಪ್ರತಿಭೆಯನ್ನು ಕಂಡು ಅವನನ್ನು ತನ್ನ ಆಪ್ತವರ್ಗಕ್ಕೆ ಸೇರಿಸಿಕೊಂಡಾಗ ಅವಳ ಉದಾತ್ತ ಮನೋಭಾವದ ಅರಿವು ದೇಶಕ್ಕೆ ಉಂಟಾಯಿತು. ಕಾಂಗ್ರೆಸ್ಸ್ ಸಂಸ್ಥೆಯ ಕಾರ್ಯದರ್ಶಿಯಾಗಿ ಮತ್ತು Home Rule ಚಳುವಳಿಯಲ್ಲಿ ಒಬ್ಬ ಪ್ರಧಾನ ಕಾರ್ಯಕರ್ತನಾಗಿ ರಾಮಸ್ವಾಮಿ ಅಯ್ಯರನು ವಹಿಸಿದ ಪಾತ್ರವನ್ನು ಕುರಿತಾಗಿ ಕಾಂಗ್ರೆಸ್ ಚರಿತ್ರೆಯು ಹೀಗೆ ಹೇಳಿದೆ:—

"Sir C.P. Ramaswami Iyer signed the Passive Resistance pledge during the internment of Dr.

Besant. Between 1917 and 1919, Sir C.P. was the one star on the Congress firmament flooding the horizon of Indian politics with his radiance---"

ಹೀಗೆ 1919ರ ವರೆಗೂ ಇನ್ನೂ ಕೆಲವು ಮೇಧಾವಿಗಳು ಅನಿ ಬೆಸೆಂಟ್ ಇವರೊಡನೆ ನಿಷ್ಠೆಯಿಂದ ದುಡಿದಿದ್ದರು. ಅವರಲ್ಲಿ ಮಹಮ್ಮದಾಲಿ ಜಿನ್ನಾ, ತೇಜಬಹದ್ದೂರ್ ಸಪ್ರೂ, ಡಾ. ಭಗವಾನ್ ದಾಸ ಹೀಗೆ ಹಲವರು ಇದ್ದರು. ಅಷ್ಟರಲ್ಲಿ ಅನಿಗೆ ಪ್ರಾಯ ಎಪ್ಪತ್ತು ಮೀರಿತ್ತು; ನಮ್ಮ ದೇಶೀಯರ ಸ್ವಾರ್ಥ ರಾಜಕೀಯವು ಹೆಚ್ಚುತ್ತ, ಅದೆಲ್ಲದರ ನಡುವೆ ಯೋಗಸಹಿಸಿಕೊಂಡು ಮುಂದೆ ಬಂದವರು ಮಹಾತ್ಮಾ ಗಾಂಧಿ!

<u>ಅನಿಯ ರಾಜಕೀಯ ಮತ್ತು ರಾಷ್ಟ್ರೀಯ ವಿದ್ಯಾಯೋಜನೆಗಳು!</u>— ಕಾಂಗ್ರೆಸ್ ಸಂಸ್ಥೆಯ ಅಧಿಕೃತ ಚರಿತ್ರೆಯು ಅನಿ ಬಿಸೆಂಟ್ ಇವರ Home Rule ಮತ್ತು National Education ಯೋಜನೆಗಳನ್ನು ಕುರಿತಾಗಿ ಅಲ್ಲಲ್ಲಿ ಹೇಳಿದೆಯಾದರೂ ಅವರು ಅದರಲ್ಲಿ ಸಾಧಿಸಿ ಕೃತಾರ್ಥರಾದದ್ದೆಂಬುದನ್ನು ಸ್ಪಷ್ಟವಾಗಿ ಹೇಳದೇ ಇದ್ದುದು ಆ ಗ್ರಂಥಕರ್ತರ ಒಂದು ಕೊರತೆಯೆಂದೇ ಅನ್ನಬೇಕು. ಅನಿಯು ತನ್ನದೇ ಬರಹಗಳಲ್ಲಿ ಆ ವಿಷಯವನ್ನೆಲ್ಲ ಹೇಳಿರುವವಾದರೂ ನಮ್ಮ ಜನರು ಆ ವಿಷಯವಾಗಿ ಏನು ಹೇಳಿದರೆಂಬುದಕ್ಕೆ ಕಾಂಗ್ರೆಸ್ ಚರಿತ್ರೆಯಿಂದ ಈ ಪಂಕ್ತಿಗಳನ್ನು ಇಲ್ಲಿ ಉದಾಹರಿಸಬಹುದು:—

"Regarding the case of "New India", edited by Mrs. Besant, the Offg. Chief Justice of Madras, remarked "Section 3. (1) imposes a serious disability on persons desiring to keep printing presses." Mrs. Besant forfeited Rs. 20,000 altogether in 1917, under the Press Act."

ಶ್ರೀಮತಿ ಬಿಸೆಂಟ್ ಇವರ ರಾಜಕೀಯ ಚಳುವಳಿಗಳು ಎಷ್ಟು ಬಿರುಸಾಗಿ ನಡೆಯುತ್ತಿದ್ದವು ಅವರ ಕಾರ್ಯಕ್ರಮಗಳು ಯಾವಾವ ಯೋಜನೆಗಳನ್ನೊಳಗೊಂಡಿತ್ತೆಂದೂ ಇದರಿಂದ ವ್ಯಕ್ತವಾಗುತ್ತದೆ:—

"Mrs. Annie Besant, however, did not place the Indian problem on the basis of reward, but on the basis of right. She boldly demanded the application of the principle of Reciprocity at the Madras Congress (1914) urging that India should exclude imports from countries from which her people were excluded. Mrs. Besant inaugurated her great Home Rule movement during the days of Lord Pentland, the same old programme was

revived — Swadeshi, Boycott of foreign goods, National Education and Home Rule."

ಕ್ರಿ. ಶ. 1920 ರಿಂದೀಚೆಗಾಗಿ ನಮ್ಮ ದೇಶಾಭಿಮಾನಿಗಳು ದೇಶದ ಪರವಾಗಿ ಯಾವಾವ ರಾಜಕೀಯ ಮತ್ತು ಸಾಮಾಜಿಕ ಸಿದ್ಧಾಂತಗಳಿಗಾಗಿ ಹೋರಾಡುತ್ತಿದ್ದರೋ ಅವೆಲ್ಲಕ್ಕೂ ಅನಿ ಬೆಸೆಂಟ್ ಇವಳೇ ಅಡಿಪಾಯ ಹಾಕಿ ಹಿಂದೆಯೇ ಮೂಲಕಾರಣಳಾಗಿದ್ದಳೆಂದು ಅಧಿಕೃತ ಕಾಂಗ್ರೆಸ್ ಚರಿತ್ರೆಯಿಂದ ತಿಳಿದು ಬರುತ್ತದೆ. ಮುಂದಿನ ವರ್ಷಗಳಲ್ಲಿ 1917ರ ನಂತರದ ಘಟನೆಗಳನ್ನು ಕೆಳಗಿನಂತೆ ಹೇಳಲಾಗಿದೆ:—

"—— She (Annie Besant) disaffiliated her Theosophical Educational institution at Madanapalle from the Madras University, established a National High School at Adyar, established other such institutions in Sind and elsewhere and organised a Society for the promotion of National Education—— "New India" was the daily through which the Home Rule movement worked. The students became a great force in the agitation, and Lord Pentland promulgated the notorious G.O. 559, prohibiting them from taking part in politics. As usual, the agitation led to repression, and Mrs. Besant, Mr. Arundale and Mr. Wadia were interned in Ootacmund in June 1917."

<u>ದೇಶ ಸೇವಾ ನಿಮಿತ್ತವಾಗಿ ಆಶ್ರಮವನ್ನು ತೆರೆದಿದ್ದಳು:</u>— ಗೋಪಾಲಕೃಷ್ಣ ಗೋಖಲೆಯವರು The Servants of India Society ಎಂಬುದಾಗಿ ಹಿಂದೆ ಸಂಸ್ಥೆಯನ್ನು ಸ್ಥಾಪಿಸಿದ್ದು ಜನಪ್ರಿಯವಾಗಿತ್ತು ಇದ್ದಂತೆ, ಅನಿ ಬೆಸೆಂಟ್ ಇವಳು The Sons of India ಎಂಬುದಾಗಿ ಸೇವಾನಿರತರಾದ ಜನವನ್ನು ಕೂಡಿಸಿದ್ದಳು, ರಾಷ್ಟ್ರೀಯ ಕಾಂಗ್ರೆಸ್ ಚರಿತ್ರೆಯಲ್ಲಿ ಈ ವಿಷಯವಾಗಿ ಹೀಗೆ ಹೇಳಿದೆ:—

"As first member of the Servants of India Society, Gokhale may be regarded as the forerunner of the order of self-denying patriots established later by Mrs. Besant in "The Sons of India", and of the still more ascetical order of "Asram Vasis" established by Gandhiji in 1916, after the model of Gandhi Ashram since 1920"

ಅನಿ ಬೆಸೆಂಟ್ ಕೇವಲ ಸಾಮಾನ್ಯ ವರ್ಗದ ಕಾರ್ಯಕಾರಿಣಿಯಾಗಿರಲಿಲ್ಲವೆಂಬುದನ್ನು ಅವಳು ದಿನದಿನವೂ ತೋರ್ಪಡಿಸಿದ್ದಳು, 1898ರ ವೇಳೆಗೆ ದೇಶದಲ್ಲಿ ಹರಡಿದ್ದ ಪ್ಲೇಗ್ ರೋಗ ಮತ್ತು ಅಧಿಕಾರ ವರ್ಗದ ಅತ್ಯಾಚಾರಗಳನ್ನೆಲ್ಲ ಕಂಡು ಅವಳು ಅವಳ

ನ್ನು ಹಿಂದಿನ ತೀವ್ರಗಾಮಿ ರಾಜಕೀಯಕ್ಕೆ ಸೆಳೆಯುತ್ತೇವೆಂದು ಅವರು ಭಾವಿಸಿದ್ದರು. 1914 ರ ವರೆಗೂ ಕಾಂಗ್ರೆಸ್ ಸಂಸ್ಥೆಯಲ್ಲಿ ಮದನ ಮೋಹನ ಮಾಳವೀಯವರಂಥ ಮಂದಗಾಮಿಗಳು ಹಲವರಿದ್ದರು. ಆದರೆ ಆನಿ ಬಿಸೆಂಟ್ ಇವರು ಸ್ವಾತಂತ್ರ್ಯ ಚಳುವಳಿಯನ್ನು ತೀವ್ರವಾಗಿ ಮುಂದೊತ್ತಿದಾಗ ಅಂಥವರನ್ನೆಲ್ಲ ಅವರು ತನ್ನ ಪಕ್ಷಕ್ಕೆ ಸೆಳೆಯುವುದರಲ್ಲಿ ಜಯಪ್ರದರಾದಳು. How India Wrought for Freedom ಎಂಬ ಅವರ ಪುಸ್ತಕದಲ್ಲಿ ಅವರು 1885 ರಿಂದ 1914 ರ ವರೆಗಿನ ಕಾಂಗ್ರೆಸ್ ಚರಿತ್ರೆಯನ್ನು ವಿವರಣಾತ್ಮಕವಾಗಿ ಬರೆದಿದ್ದಾಳೆ. ಡಾ. ಪಟ್ಟಾಭಿ ಇವರು ಆನಿ ಬಿಸೆಂಟ್ ಇವರ ವಿಸ್ತೃತವಾದ ರಾಜಕೀಯವನ್ನು ಕುರಿತಾಗಿ 'ಕಾಂಗ್ರೆಸ್ ಚರಿತ್ರೆ'ಯಲ್ಲಿ ಈ ರೀತಿ ಹೇಳಿದ್ದಾರೆ:—

"Mrs. Besant had been working in the cause of the poor, the whole of her life-time, and of India even since the days of Mr. Bradlaugh. But it was in 1914 that she joined the Congress, and speaking of the question of Reciprocity, she said, "There had been a talk of a reward due to India's loyalty, but India does not chaffer with the blood of her sons and the proud tears of her daughters in exchange for so much liberty, so much right. India claims the right of a nation, to justice among the peoples of the Empire. India will ask for this before the war. India asks for it during the war but not as a reward, but as a right does she ask for it. On that there must be no mistake."

ಇಂಥ ಮಾತುಗಳಿಂದ ಆನಿಯು ಬ್ರಿಟಿಷ್ ಸರಕಾರವನ್ನು ಹೇಗೆ ಕಾಡಿಸಿದ್ದಳೆಂಬುದಾಗಿ ವ್ಯಕ್ತವಾಗುವುದು. ಇವರ ಮತ್ತು ಇವರಿಗಿಂತಲೂ ಹಿಂದಿದ್ದ ಯುರೋಪಿಯನ್ ಸ್ವಾತಂತ್ರ್ಯ ಪ್ರೇಮಿಗಳಿಂದಲೇ ನಮ್ಮ ಜನ ಸ್ಫೂರ್ತಿ ಹೊಂದಿದರಲ್ಲದೆ ಬೇರೆನೂ ಅಲ್ಲವೆಂಬುದಾಗಿ ಪುನಃ ಹೇಳಬೇಕಾಗಿದೆ.

<u>ಆನಿಯು ಭಾರತಕ್ಕೆ ನವ ಶಕ್ತಿ ಸ್ಫೂರ್ತಿಯನ್ನೊದಗಿಸಿದಳು:—</u> ಇದು ಎಲ್ಲರೂ ಒಪ್ಪುವ ವಿಚಾರವೇ ಆಗಿದೆ. ಗಾಂಧೀಜಿಯಿಂದ ಹಿಡಿದು ಕಾಂಗ್ರೆಸ್ ಇತಿಹಾಸಕಾರರ ವರೆಗಿನ ನಮ್ಮ ದೇಶದ ಜನರು ಆನಿ ಬಿಸೆಂಟ್ ಇವರ ಶ್ರದ್ಧೆ, ಭಾರತದಲ್ಲಿ ಅಭಿಮಾನ ಮತ್ತು ಅವರ ಸೇವಾ ಭಾವವನ್ನು ಕಂಠೋಕ್ತ ಮೆಚ್ಚಿದವರಾಗಿದ್ದಾರೆ. ಅವರ ವಿಷಯವಾಗಿ ರಾಷ್ಟ್ರೀಯ ಕಾಂಗ್ರೆಸ್ ಚರಿತ್ರೆಯು ಈ ರೀತಿಯಾಗಿ ಹೇಳಿದೆ:—

"When Mrs. Besant jumped from Theosophy and the High Court where she had to face a litigation relating to J. Krishnamurthi and his brother, to the Congress and the spacious atmosphere of the Beach, she brought new ideas, new talents, new resources and altogether a new method of organization and a new outlook into the field of the Congress. She was already a world character and had millions of followers in the East and the West, in the new hemisphere as well as the old. No wonder then that, with this mighty following and with her inexhaustible energy, she gave a new life to Indian politics."

ಅನಿ ಬೆಸೆಂಟ್ ಇವರನ್ನು ಕುರಿತಾದ ಸ್ಪಷ್ಟವಾದ, ಸತ್ಯವಾದ, ಸಮರ್ಪಕವಾದ ಚಿತ್ರಣವು ಇದಾಗಿದೆ. ಆದರೆ ಮೊದಲೇ ಹೇಳಿದಂತೆ ಅವರು ಥಿಯೊಸೊಫಿ ಸಂಸ್ಥೆಯಿಂದ ಹೊರಬರಲಿಲ್ಲ. ಬದಲಾಗಿ ಅದರ ಅಂತರಾಷ್ಟ್ರೀಯ ಅಧ್ಯಕ್ಷೆಯಾಗಿದ್ದುಕೊಂಡೇ ಅವರು ಈ ದೇಶದ ಸ್ವಾತಂತ್ರ್ಯಕ್ಕೆ ಅತ್ಯಂತ ಉಗ್ರವಾಗಿ, ದಿಟ್ಟವಾಗಿ ಮತ್ತು ಉತ್ಸಾಹದಿಂದ ಹೋರಾಡಿದರು. ಹೀಗಾಗಿ ಆ ಕಾಲದಲ್ಲಿ ಅವರು ವಿಶ್ವಮಾನ್ಯವಾದ ವ್ಯಕ್ತಿಯಾಗಿದ್ದರು. 1915 ರಲ್ಲಿ ಗೋಪಾಲಕೃಷ್ಣ ಗೋಖಲೆಯವರ ಅಕಾಲ ಮರಣವು ದೇಶದಲ್ಲಿ ನಿರಾಶೆಯನ್ನುಂಟುಮಾಡಿತು. ಕಾಂಗ್ರೆಸ್ ಚರಿತ್ರೆಯು ಮುಂದುವರಿಯುತ್ತಾ ಈ ರೀತಿ ಹೇಳಿದೆ:—

"The story of Mrs. Besant's unsuccessful attempts to bring the Moderates and Nationalists together in the Congress has first been told. Early in the year, India sustained a great loss in the premature death of Gokhale who passed away on the 19th Feb. 1915. Tilak's funeral oration said, "This is not a time for cheers; this is a time for shedding tears. This diamond of India, this jewel of Maharashtra, this prince of workers, is laid to rest on the funeral ground. Look at him and try to emulate him."

ಕ್ರಿ.ಶ. 1916 ರ ಕಾಲದಲ್ಲಿ ಅಖಿಲ ಭಾರತ ಖ್ಯಾತರಾದ ಮುಂದಾಳುಗಳು ಈ ದೇಶದಲ್ಲಿ ಯಾರೂ ಇರಲಿಲ್ಲ. ನವರೋಜಿ, ಮೆಹತಾ, ತಿಲಕ್, ಇಂಥ ಕೆಲವರು ಪ್ರಸಿದ್ಧರಾದರೂ, ಉಳಿದವರೆಲ್ಲ ಅವರವರ ಪ್ರಾಂತಗಳಲ್ಲಿ ಮಾತ್ರ ಮುಂದಾಳುಗಳೆಂದೆನ್ನಿಸಿದ್ದರು. ಆ ವೇಳೆಗೆ ಇದೇ

ಭಾರತದಲ್ಲಿ ಬಹು ತೇಜೋಮಾನವಾದ ಒಂದು ನಕ್ಷತ್ರವು ಪಾಶ್ಚಾತ್ಯ ದೇಶದಿಂದ ಹರಿಸಿತು. ಆ ಮಹಿಳೆ, ಆನಿ ಬೆಸೆಂಟ್, ಒಬ್ಬ ವಿಶಿಷ್ಟ ವ್ಯಕ್ತಿಯಾಗಿದ್ದಳು. ಡಾ. ಪಟ್ಟಾಭಿ ಇವರು ಹೀಗೆನ್ನುತ್ತಾರೆ:-

"India was then, in 1916, a Nation whose cause went unheeded and a whole leader remained yet to be found. It was at such a juncture that Mrs. Besant stepped into the trench. She jumped from religion to politics, from Theosophy to Home Rule. She started a daily "New India", and later a Weekly, "The Commonweal". She was first to popularise the cry of Home Rule and she carried on a raging, tearing propaganda."

<u>ಕಾಂಗ್ರೆಸ್ ಅಧಿವೇಶನಗಳಲ್ಲಿ ಆನಿ ಬೆಸೆಂಟ್ ಪ್ರಭಾವಳಿಕೆ:-</u> ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಆಗ ಹಿಡಿದ್ದ ಹುರುಪಾಗಲೀ ಪ್ರಭಾವವಾಗಲೀ ಇದ್ದಂತೆ ಆನಿ ಬೆಸೆಂಟ್ ಇವರಿಗೆ ತೋರಲಿಲ್ಲ. ಭಾರತೀಯರಲ್ಲಿ ಹಲವರು ಸಂದರ್ಭವಾದಿಗಳಾಗಿ ತೋರಿಬಂದಿತು. ಇನ್ನು ಹಲವರು ಬರೀ ಸ್ವಾರ್ಥದೃಷ್ಟಿಯಿಂದ ಕೂಡಿದ್ದರಿಂದ ನಿಜವಾದ ದೇಶಾಭಿಮಾನಿಗಳನ್ನು ಇವರಿಗೆ ಗುರುತುಹಚ್ಚುವುದೇ ಕಷ್ಟವಾಗಿತ್ತು. ಆ ಕಾರಣದಿಂದ ಇವರು ತಮ್ಮ Home Rule ಚಳುವಳಿಯನ್ನು ಇನ್ನಷ್ಟು ಬಿರುಸಾಗಿಸಿದರು, ರಾಷ್ಟ್ರೀಯ ಕಾಂಗ್ರೆಸ್ಸಿನ ಒಂದು ಶಾಖೆಯು ಇಂದಿ ಆಂಗ್ಲ ದೇಶಾಭಿಮಾನಿಗಳಿಂದ ಸ್ಥಾಪಿಸಲ್ಪಟ್ಟಿದ್ದರ ಜತೆಗೆ ಆನಿಯವರು ತಮ್ಮ "ಹೋಂ ರೂಲ್" ಸಂಸ್ಥೆಯ ಒಂದು ಶಾಖೆಯನ್ನು ಅಲ್ಲಿ ತೆರೆದು ಇಂಗ್ಲೆಂಡಿನ ಜನರನ್ನು ಜಾಗೃತಗೊಳಿಸುತ್ತಿದ್ದರು. ಬಾಲಗಂಗಾಧರ ತಿಲಕರು ಮಹಾರಾಷ್ಟ್ರಕ್ಕಾಗಿ ಪೂನಾದಲ್ಲಿ ಸ್ಥಾಪಿಸಿದ್ದ "ಹೋಂ ರೂಲ್" ಸಂಸ್ಥೆಯು ಇಡೀ ಹಿಂದೂಸ್ಥಾನಕ್ಕೆ ಅದರ ಕಾರ್ಯಕ್ಷೇತ್ರ ವ್ಯಾಪಿಸುವಂತೆ ಆನಿ ಬೆಸೆಂಟ್ ಇವರು ಮಾಡಿದರು, ರಾಷ್ಟ್ರೀಯ ಕಾಂಗ್ರೆಸ್ ಚರಿತ್ರೆಯು ಈ ಎಲ್ಲ ವಿಷಯಗಳನ್ನು ಕುರಿತಾಗಿ ಹೀಗೆ ಹೇಳಿದೆ:-

"Apparently Mrs. Besant was not satisfied with the tardy way in which Congress affairs were progressing. The British Committee of the Indian National Congress was no doubt attending to Congress work in England---- Mrs. Besant wanted a more dynamic body and organised an Auxiliary Home Rule League in London in June 1916---In India that League was founded in Madras at the

Gokhale Hall (founded by Mrs. Besant herself) in Sept. 1916 --- She christened Tilak's Poona League started in April that year as the All India Home Rule League."

ಇದರೊಡನೆಯೇ ಅನಿಯು ಈ ದೇಶದ ವಿವಿಧ ವರ್ಗದ ಜನವನ್ನು ತನ್ನ ರಾಜನೀತಿಯೊಳಗಡಗಿಸಿ ತನ್ನ ಕಾರ್ಯಕ್ರಮವನ್ನು ಮುಂದುವರಿಸಿದಳು. ಮಹಮ್ಮದೀಯರನ್ನು ಕಾಂಗ್ರೆಸ್ಸೊಳಗಡಗಿಸಿದಲ್ಲದೆ 1907 ರಿಂದ ಇಬ್ಭಾಗವಾಗಿದ ಕಾಂಗ್ರೆಸ್ ಸಂಸ್ಥೆಯನ್ನು ಒಂದಾಗಿಸಿದಳು. ಆ ಕಾಲದಲ್ಲಿ ಅವಳು ಹೇಳಿದ್ದೆಲ್ಲವೂ ಜಯಪ್ರದವಾಗಿ ನಡೆಯುತ್ತಿದ್ದುವು. ಡಾ. ಪಟ್ಟಾಭಿಯವರ ಅಧಿಕೃತ ಕಾಂಗ್ರೆಸ್ ಚರಿತ್ರೆಯಲ್ಲಿ ಲಕ್ನೋ ಕಾಂಗ್ರೆಸ್ ಅಧಿವೇಶನದ ಸಂದರ್ಭವನ್ನು ಕುರಿತಾಗಿ ಈ ರೀತಿ ಹೇಳಲಾಗಿದೆ:—

"The Lucknow session of the Congress was altogether a unique one for the fraternization of the Hindus and Muslims --- No less important was the re-union of the two wings of the Congress which had been separated since 1907. It was truly an enlivening spectacle to see Tilak and Khaparde sitting side by side with Dr. Rash Behari Ghose and S. N. Benerjie. Mrs. Besant was there with her two co-adjustors — Arundale and Wadia, the Muslim leaders including Muhammad Ali Jinnah. Gandhi and Polak were there, too."

<u>ಅನಿಯು ಬಂದಿದ್ದು ಆಂಗ್ಲ ಸರಕಾರವನ್ನು ದಿಗ್ಭ್ರಮೆಗೊಳಿಸಿತು</u>:— ಹಿಂದೆಯೇ ಹೇಳಿದಂತೆ ಆನಿ ಬೆಸೆಂಟ್ ಇವಳ ಸ್ವಾತಂತ್ರ್ಯ ಮತ್ತು ವಿದ್ಯಾಪ್ರಚಾರ ಕಾರ್ಯಕ್ರಮಗಳು ದೇಶದ ಎಲ್ಲೆಡೆಯೂ ತ್ವರಿತವಾಗಿ ಬಿತ್ತರಿಸಲ್ಪಟ್ಟುವು, ಜನರು ಬಹುಸಂಖ್ಯೆಯಲ್ಲಿ ಮುಂದೆ ಬಂದು ಅವಳಿಗೆ ಸಹಕರಿಸಿದರು, ಅವಳ ಆದೇಶವನ್ನೆಲ್ಲ ಅವಳ ಹಿಂಬಾಲಕರು ಪತ್ರಿಕೆಗಳು ದೇಶದ ಉದ್ದಗಲಕ್ಕೂ ಕೊಂಡೊಯ್ಯುತ್ತಿದ್ದುವು. ಮದ್ರಾಸ್ ಮತ್ತು ಬೊಂಬಾಯಿ ಪ್ರಾಂತಗಳು ಅನಿಯನ್ನು ಬಹಿಷ್ಕರಿಸಿದ್ದುವು. ಅವಳ ವಾಗ್ಬಲವು ಜನವನ್ನು ಮುಗ್ಧಗೊಳಿಸಿದುವು. ಕಾಂಗ್ರೆಸ್ ಚರಿತ್ರೆಯು ಈ ಪ್ರಸಂಗವನ್ನು ಕುರಿತಾಗಿ ಹೀಗೆ ಹೇಳಿದೆ:—

"On the sphere of self-Government and educative campaign, Congress undertook propaganda. The response to this call was marvellous. One province vied with another in carrying a propaganda, and Madras, under the immediate guidance of Mrs. Besant created a record for itself ---- Mrs. Besant

just then was under orders of externment from Berar and Bombay ---- Mrs. Besant who had a daily, "New India" and a weekly, "The Commonweal" was called to furnish security for her press and papers, and altogether she deposited and forfeited a sum of Rs. 20,000. In the meantime, the Home Rule idea was spreading like wild fire. "The strength of the Home Rule movement was rendered ten-fold greater," as Mrs. Besant pointed out in her presidential address in Calcutta---."

ಅನಿ ಬೆಸೆಂಟ್ ಇವಳನ್ನು ಬಂಧಿಸಿದಾಗ ದೇಶದಲ್ಲಿ ಉಂಟಾದ ಪರಿಣಾಮವನ್ನು ಆ ವರೆಗೂ ಆಗಲೀ ಅನಂತರವೂ ಬೇರಾವ ಭಾರತೀಯ ನೇತಾರನನ್ನು ಬಂಧಿಸಿದಾಗ ಉಂಟಾಗದೇ ಇದ್ದದ್ದು ಸ್ಪಷ್ಟವಾಗಿತ್ತು. ಇಡೀ ದೇಶವೇ ಹರತಾಳವನ್ನು ಆಚರಿಸಿತು. ಹೆಂಗಸರೂ ಸಹ ಅದೇ ಮೊದಲ ಬಾರಿಗೆಯೆಂಬಂತೆ ತಮ್ಮ ಮನೆಯೊಳಗಿಂದ ಬೀದಿಗೆ ಇಳಿದರು. ಸರಕಾರದ ನೀತಿಯನ್ನು ಖಂಡಿಸಿದರು, ಹ್ಯೂಮ್, ಯೂಲ್, ವೆಡರ್‌ಬರ್ನ್ ಮೊದಲಾದ ಹಿರಿಯ ಪಾಶ್ಚಾತ್ಯ ಸ್ವಾಭಿಮಾನಿಗಳ ಸಾಲಿನಲ್ಲಿ ಶ್ರೀಮತಿ ಅನಿ ಬೆಸೆಂಟ್ ಇವಳ ಬರುವಿಕೆಯಿಂದ ನೆನೆಸಲಾಯಿತಲ್ಲದೆ 1917ನೇ ವರ್ಷಕ್ಕೆ ದೇಶದಲ್ಲಿ ತೋರಿದ ಜನಜಾಗೃತಿಯಲ್ಲಿ ಸ್ತ್ರೀಯರಿಗೆ ಈ ದೇಶದಲ್ಲಿ ಆದಿಕಾಲದಿಂದಲೂ ಇದ್ದಂತಹ ಇನ್ನು ಬರೀ ಮಹತ್ವ ಪೂರ್ಣ ಪಾತ್ರ ಎಂಬುದನ್ನು ಪ್ರತಿಧ್ವನಿಸುವಂತಿತ್ತು. ಅಧಿಕೃತ ಕಾಂಗ್ರೆಸ್ ಚರಿತ್ರೆಯಲ್ಲಿ ಆ ಘಟನೆಯನ್ನು ಕುರಿತಾಗಿ ಹೀಗೆ ಹೇಳಿದೆ:—

"On June 1917, Mrs. Besant, Arundale and Wadia were served with a notice to choose one of six places mentioned where they should live in internment. Coimbatore and Ootacmund were the places chosen----It is an open secret that Mrs. Besant, despite Government orders and surveillance, was freely writing to her paper, "New India"---- The situation in India became tense, but the authorities in England would not relent. Mr. Montague in his Diary narrates a story and draws a lesson. "I particularly liked that Shiva who cut his wife into fifty-two pieces only to dis-

discover that he had fifty-two wives," and adds, "This really what happened to the Government of India when it interned Mrs. Besant."

ಮೊಂಟೆಗ್ಯು ಮತ್ತು ಚೆಮ್ಸಫರ್ಡ್ ಇವರ ದೊಡ್ಡ ಸಮಸ್ಯೆ:– ಹಿಂದೂಸ್ಥಾನದಲ್ಲಿ ರಾಜಕೀಯವೆಂದರೆ ಅದರಲ್ಲೆಂದೂ ಗರ್ವ, ಮಾನ, ನ್ಯಾಯ, ನೀತಿ, ಯಾವುದೂ ಇಂದು ಹೇಗೆ ಇಲ್ಲವೋ ಅಂದೂ ಇರಲಿಲ್ಲ. 1920 ರ ಕಾಲಕ್ಕೆ ದೇಶದಲ್ಲಿ ಹಲವು ಅನಿಷ್ಟ ಸಂಕೇತಗಳು ತೋರ್ಪಟ್ಟು ಅಲ್ಲದೆ ಸಾಕಷ್ಟು ವಿದ್ಯಾವಂತರಾಗಿದ್ದ ದೇಶೀಯ ಸಂದರ್ಭಸಾಧಕರು ರಾಜಕೀಯ ಅಧಿಕಾರಿಗಳ ವೇಷವನ್ನು ತೊಟ್ಟು, ತಮಗೆ ತೋರಿದ ರೀತಿಯಲ್ಲಿ ಮಾತಾಡಲಾರಂಭಿಸಿದರು. ಅಂದಿನವರೆಲ್ಲರನ್ನು ದೇಶಪ್ರೇಮಿಗಳೆಂದು ಜನರು ತಿಳಿದೋ ತಿಳಿಯದೆಯೋ ಕರೆದರು, ಅದಕ್ಕೆ ತಕ್ಕಂತೆ ಅವರು ಜುಬ್ಬ, ಪಂಚೆ, ಶಾಲುಗಳಿಂದ ಖಾದೀ ಬಟ್ಟೆಯ ಟೋಪಿಗಳಿಂದ ತೋರ್ಪಡಿಸಿಕೊಂಡಿದ್ದರು, ಅನಿ ಬೆಸೆಂಟ್ ಇವಳು ತನ್ನ Home Rule ತತ್ವದ ಬಗ್ಗೆ ತಕ್ಕ ವಿವೇಚನೆಯನ್ನೀಯಲು ಪ್ರಯತ್ನಿಸಿದ್ದಳು. ಅವಳು ಬ್ರಿಟಿಶ್ ಸರಕಾರಕ್ಕೆ ಒಂದು ಮುಳ್ಳೆನಿಸಿದ್ದಳು. ಮೊಂಟೆಗ್ಯು ಮತ್ತು ಅಂದಿನ ವೈಸರಾಯ ಚೆ[illegible]ರ್ಡ್ ಇವರು ಅನಿ ಬೆಸೆಂಟ್ ಬಗ್ಗೆ ಯಾವ ಅಭಿಪ್ರಾಯವನ್ನು ಹೊಂದಿದ್ದರೆಂದು ಕಾಂಗ್ರೆಸ್ ಚರಿತ್ರೆಯಲ್ಲಿ ಹೇಳಿದೆ, ವೈಸರಾಯ ಚೆಮ್ಸಫರ್ಡ್ ಇವನು ಅನಿಗೆ ಭೇಟಿಯನ್ನೀಯಲಿಕ್ಕೂ ಹಲವು ಸಾರೆ ತಿರಸ್ಕರಿಸಿದ್ದನು, ಅವಳ ನಾಲಗೆಯು ತುಂಬಾ ಹರಿತವಾಗಿದೆಯೆಂದು ಅವನು ಸೆಕ್ರೆಟರಿ ಆಫ್ ಸ್ಟೇಟ್ ಎಡ್ವಿನ್ ಮೊಂಟೆಗ್ಯು ಇವನಿಗೆ ಹೇಳಿದ್ದನು.

ಲಾರ್ಡ್ ಚೆಮ್ಸಫರ್ಡ್ ಇವನು ಅನಿ ಬೆಸೆಂಟಳಿಗೆ ಹೆದರುತ್ತಿದ್ದನೆಂದೂ, ಎಡ್ವಿನ್ ಮೊಂಟೆಗ್ಯು ಇವನು ಅವಳ ಮುಂದಾಳುತನವನ್ನು ಹೆಚ್ಚು ಲಕ್ಷಿಸುತ್ತಿರಲಿಲ್ಲವೆಂದು ಅಂದಿನ ಜನರು ಹೇಳುತ್ತಿದ್ದರಾದರೂ ಅವರಿಬ್ಬರೂ ಅವಳ ಸ್ವಾತಂತ್ರ್ಯ ಹೋರಾಟದ ರೀತಿಗೆ ಹೆದರಿದ್ದರೆಂದು ಹೇಳಲಾಗಿದೆ. ಅವಳು ಎಡ್ವಿನ್ ಮೊಂಟೆಗ್ಯು ಇವನಿಗೆ ಸಲ್ಲಿಸಿದ ವಚನವನ್ನು ಅವಳು ನಡೆಸಿಲ್ಲವೆಂದು ಅವನು ಆಪಾದಿಸಿದನು, "She has violated her pledges" ಎಂಬುದಾಗಿ ಅವನು ಹೇಳಿದಾಗ ಆ ಮಾತು ಅದೇನಾಗಿರಬಹುದು ಎಂಬುದಾಗಿ ಜನರು ಸಂದೇಹಪಟ್ಟರು. ಅಷ್ಟೇ ಅಲ್ಲ, ಅವನು 1917 ರಲ್ಲಿ ತಯಾರಿಸಿದ ಸುಧಾರಣಾ ಮಸೂದೆಗೆ ಭಾರತೀಯರು ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಅನಿಯು ಹೇಳಿದಳು. "ಮೊಂಟ್‌ಫರ್ಡ್ ವರದಿ" ಯೆಂದು ಕರೆಯಲ್ಪಡುತ್ತಿದ್ದ ಆ ಸುಧಾರಣಾ ಮಸೂದೆಯನ್ನು ಅನಿ ಬೆಸೆಂಟ್,

ಲೋಕಮಾನ್ಯ ತಿಲಕ್, ಗಾಂಧೀಜಿ ಮೊದಲಾದವರ ನಿಲುವಿನಂತೆ ಆಂಗ್ಲರ ಸರಕಾರ ತಯಾರಿಸಿತ್ತಾದರೂ ಅವರು ಅದನ್ನು ಕುರಿತಾಗಿ "--- The Montford Reform Scheme was unworthy of Britain to offer and of India to accept," ಎಂಬುದಾಗಿ ತಿಳಿಸಿದ್ದರು.

<u>ವಿವಿಧ ವರ್ಗದ ಜನಾಭಿಪ್ರಾಯವನ್ನು ಆನಿಯು ಒಂದಾಗಿಸಿದ್ದರು:-</u> ಅಂದಿನ ಭಾರತದ ಉದ್ದಗಲ ಎಷ್ಟೋ ತೀಕ್ಷ್ಣ ರೀತಿಯಲ್ಲಿ ಜನರಲ್ಲಿ ಅಭಿಪ್ರಾಯಬೇಧವಿದ್ದಿತು, ಹೊಸ ಪೀಳಿಗೆಯ ಮುಂದಾಳುಗಳಲ್ಲಿ ಮಾಳವಿಯ, ಮೋತಿಲಾಲ ನೆಹರು, ಚಿತ್ತರಂಜನ ದಾಸ, ವಿಠಲಭಾಯಿ ಪಟೇಲ, ಶ್ರೀನಿವಾಸ ಶಾಸ್ತ್ರಿ, ಸಿ.ಎಫ್. ಆಂಡ್ರ್ಯೂಸ್, ಆಲಿ ಸಹೋದರರು ಹೀಗೆ ಮೊದಲಾಗಿ ಕೆಲವರು ಕಾಣಿಸಿಕೊಂಡರು. ಇವರಲ್ಲಿ ಒಂದೇ ಸಮಸ್ಯೆಯನ್ನು ಕುರಿತಾಗಿ ವಿವಿಧ ರೀತಿಯಲ್ಲಿ ಮಾತಾಡುತ್ತಿದ್ದರು. ಹಾಗಿದ್ದಾಗ ಇವರಿರೆಯಲಿ ಆನಿ ಬೆಸೆಂಟ್ ಇವರು ಒಂದು ಶಕ್ತಿಯೇ ಆದರು. ಕಾಂಗ್ರೆಸ್ ಚರಿತ್ರೆಯಲ್ಲಿ ಈ ವಿಷಯವಾಗಿ ಈ ರೀತಿ ಹೇಳಿದೆ:-

"The presidentship of Mrs. Besant over the Calcutta session (of the Congress) brought nearer together the Congress and the Home Rule League ---- Indeed, the Home Rule League had already adopted and popularised the Tri-colour flag---."

ಕಲ್ಕತ್ತಾ ಕಾಂಗ್ರೆಸ್ಸಿನಲ್ಲಿ ಶ್ರೀಮತಿ ಬೆಸೆಂಟ್ ಇವರ ಅಧ್ಯಕ್ಷ ಭಾಷಣದ ಪ್ರಭಾವ ಮತ್ತು ಅವರ ಅಧ್ಯಕ್ಷತೆಯ ಪರಿಣಾಮ ದೇಶದಲ್ಲಿ ಎಚ್ಚರ ಮತ್ತಿಗೆ ಸ್ಫೂರ್ತಿಯನ್ನೀಯುತ್ತ, ಮತ್ತು ಭಾರತೀಯರಲ್ಲಿ ದೇಶಾಭಿಮಾನ ಮತ್ತು ದೇಶ ಸೇವಾ ಭಾವವನ್ನು ಬೇರೂರಿಸುವುದಕ್ಕೆ ಅವರು ಎಚ್ಚರ ಮತ್ತಿಗೆ ಕಾರಣಳಾದಳೆಂಬಿತ್ಯಾದಿಯಾಗಿ ಕಾಂಗ್ರೆಸ್ ಚರಿತ್ರೆಯಲ್ಲಿ ವಿವರಣಾತ್ಮಕವಾಗಿ ಹೇಳಲಾಗಿದೆ. ಡಾ. ಪಟ್ಟಾಭಿಯವರು ಆನಿ ಬೆಸೆಂಟರ ಧೀರೋತ್ಸಾಹವನ್ನು ಕುರಿತಾಗಿ ಹೀಗೆಂದಿದ್ದಾರೆ:-

"Mrs. Besant's presidential address is an elaborate thesis of India's self-Government. Her summary of the Military and Mercantile problems is comprehensive as well as detailed, and constitutes a splendid course of reference to students---- ---With Mrs. Besant, the presidentship of the Congress was not a passing show or a three-day festivity. It was a day-to-day responsibility and in that view Mrs. Besant was the first to claim Presidentship of the Congress throughout the succeeding year."

ಭಾರತೀಯ ಮಹಿಳೆಯರು ಶ್ರೀಮತಿ ಬೆಸೆಂಟ್ ಇವರ ಬಂಧನದ ವೇಳೆಗೆ ತಮ್ಮ ಮನೆಗಳಿಂದ ಬೀದಿಗಳಿಗಿಳಿದು ಪ್ರತಿಭಟನಾ ಮೆರವಣಿಗೆ, ಹರತಾಳ್ ಇತ್ಯಾದಿಗಳನ್ನು ಮಾಡಿ ಗಟ್ಟಿಯಾಗಿ ಅವಳನ್ನು ಸೆರೆಮನೆಯಿಂದ ಬಿಡುಗಡೆ ಮಾಡಬೇಕೆಂದು ದೇಶದ ಎಲ್ಲೆಡೆಯೂ ಕೇಳಿದ್ದು ಭಾರತದ ಮಹಿಳೆಯರ ಚರಿತ್ರೆಯಲ್ಲಿಯೇ ಮೊದಲನೇ ಘಟನೆಯಾಗಿದೆ. ಆಗ ದೇಶದಲ್ಲಿ ಹಿಂದು ಕ್ರಾಂತಿಯೇ ತಲೆದೋರಿದಂತಾಗಲು ಆ ಸನ್ನಿವೇಶವು ಬ್ರಿಟಿಷ್ ಸರಕಾರವನ್ನೇ ಆಶ್ಚರ್ಯಕ್ಕೊಳಪಡಿಸಿತು. ಕ್ರಿ.ಶ. 1918ರ ಮೊದಲಾರ್ಧದಲ್ಲಿ ಶ್ರೀಮತಿ ಕಸಿನ್ಸ್ ಮತ್ತು ಶ್ರೀಮತಿ ಜಿನರಾಜದಾಸ ಇವರೊಡನೆ ಆನಿಯು ದೇಶವೆಲ್ಲಾ ತಿರುಗಿ ಮಹಿಳೆಯರಿಗೆ ಮತಾಧಿಕಾರವನ್ನೀಯಬೇಕೆಂದೂ ಚಳುವಳಿಯನ್ನು ಎಬ್ಬಿಸಿದಳು. ಕಾಂಗ್ರೆಸ್ ಚರಿತ್ರೆಯಲ್ಲಿ ಇದರ ಬಗ್ಗೆ ಹೀಗೆ ಹೇಳಿದೆ:—

"The first five months of 1918 were a period of restless activity for Mrs. Besant. Mrs. Cousins and Mrs. Jinarajadasa (an European lady) addressed letters to her respecting the grant of franchise to women under the Congress – Home Rule League scheme."

<u>ಬ್ರಿಟಿಷ್ ಸಾಮ್ರಾಜ್ಯಾಧಿಪತ್ಯದ ನೇತೃತ್ವದಲ್ಲಿ ದೇಶ ಸ್ವತಂತ್ರವಾಗಬೇಕು:</u>— ಈ ರೀತಿ ಹೇಳುತ್ತಾ, ಆನಿ ಬೆಸೆಂಟ್ ಇವಳು ಭಾರತದ ಸ್ವಾತಂತ್ರ್ಯ ಚಳುವಳಿಗೆ ನಾಂದಿಯನ್ನು ಹಾಕಿದಳು. ಕ್ರಿ.ಶ. 1911 ರಿಂದ 1913ರ ವರೆಗೆ ಅವಳು ತನ್ನ ಮಕ್ಕಳ ಸಂಬಂಧವಾಗಿ ಹೂಡಿದ್ದ ವ್ಯಾಜ್ಯದ ವೇಳೆಗೆ ದೇಶದಲ್ಲಿ ವಿದ್ಯೆ, ಸಂಸ್ಕೃತಿ, ಧರ್ಮ ಪ್ರಚಾರ ಕಾರ್ಯಕ್ರಮಗಳೊಂದಿಗೆ ತನ್ನ ಥಿಯೊಸೊಫಿ ತತ್ವಗಳನ್ನು ಸೇರಿಸಿಯೂ ಬೋಧಿಸುತ್ತಿದ್ದಾಗ ಅವಳು ಹಲವು ತೀವ್ರವಾದ ಆರೋಪಣೆಗಳಿಗೆ ಗುರಿಯಾಗಬೇಕಾಯಿತು. ಆ ಸಂದರ್ಭದಲ್ಲಿ ಮದ್ರಾಸಿನಲ್ಲಿ ಹೇಗೋ ಹಾಗೆಯೇ ದೂರದ ಲಂಡನ್ನಿನಲ್ಲೂ ಅತಿ ಉಚ್ಚ ನ್ಯಾಯಾಲಯಗಳಲ್ಲಿ ತಾನಾಗಿಯೇ ತನ್ನ ವಕಾಲತ್ತನ್ನು ನಡೆಸಿ ಜಯಪ್ರದಳಾದುದು ಒಂದು ವಿಶೇಷ ಘಟನೆಯಾಯಿತಲ್ಲದೆ, "She was in complete clearence from all all falsehoods circulated," ಎಂಬುದಾಗಿ ವರದಿಯಾಯಿತು.

ಹಿಂದೂಸ್ಥಾನವು ಕೆಲ ಕಾಲ ಬ್ರಿಟಿಷ್ ಸಾಮ್ರಾಜ್ಯದ ಅಧೀನದಲ್ಲಿ ಇದ್ದು ಅದರ ಆಶ್ರಯದಡಿಯೇ ಸ್ವಾತಂತ್ರ್ಯವನ್ನು ಪಡೆಯಬೇಕೆಂಬುದು ಆನಿಯ ಅಭಿಮತವಾಗಿತ್ತು. ಅಂದಿನ ಕೆನಡಾ, ಆಸ್ಟ್ರೇಲಿಯಾ ಇತ್ಯಾದಿ ದೇಶಗಳಂತೆಯೇ ಭಾರತವು Dominion Status ಸ್ಥಾನವನ್ನು ಹೊಂದಬೇಕೆಂದು ಅವಳು ಪ್ರತಿಪಾದಿಸುತ್ತಿದ್ದಳು. ಅಂದಿನ ಪರಿಸ್ಥಿತಿಗೆ ಅನುವಾಗಿ ಆ ಅಭಿಪ್ರಾಯವು ಸೂಕ್ತ

ವಾಗಿತ್ತು, ಮತ್ತು ಹಲವರು ಅದಕ್ಕೆ ಒಪ್ಪಿದ್ದರು. ಅದೇ ದೃಷ್ಟಿಯಿಂದ ಆನಿಯವರು ತನ್ನ Commonwealth ತತ್ವವನ್ನು ಜನತೆಯ ಮುಂದಿಟ್ಟರು. ಅದರ ಬಗ್ಗೆ ತನ್ನ ಅಭಿಪ್ರಾಯವನ್ನೇ ಹೇಳುತ್ತಾ ಅವರು ~~ಈ~~ ರೀತಿಯಾಗಿ ಬರೆದಿದ್ದರು:—

"My chief job in India is that she may rise to her full stature, and a Free Nation may do for the world what none but she can do — pour out over the earth, from her place in the great Commonwealth, of which Britain is the centre — the priceless spiritual treasures conserved with this object for thousands of years."

<u>ಆನಿಯವರು ನಿಯೋಗಗಳೊಡನೆ ತಂಡದೊಡನೆ ಇಂಗ್ಲೆಂಡಿನಲ್ಲಿ</u>:— ಕ್ರಿ.ಶ. 1919ರಲ್ಲಿ ಕಾಂಗ್ರೆಸ್ ಮತ್ತು 'ಹೋಂ ರೂಲ್' ರಾಜಕೀಯ ಪಕ್ಷಗಳ ಪರವಾಗಿ ಹಲವು ಮುಖಂಡರು ಇಂಗ್ಲೆಂಡಿನಲ್ಲಿ Joint Parliamentary Committee ಇವರನ್ನು ಭೇಟಿಯಾಗಲು ಹಿಂದೂಸ್ಥಾನದಿಂದ ಹೋದರು. ಕಾಂಗ್ರೆಸ್ಸಿನ ಪರವಾಗಿ ವಿಠಲಭಾಯಿ ಪಟೇಲ್, ಬಾಲಗಂಗಾಧರ ತಿಲಕ, ಮತ್ತು ಖಾಪರ್ಡೆ ಇವರು ಇದ್ದರು. "ಹೋಂ ರೂಲ್" ಪಕ್ಷದ ಪರವಾಗಿದ್ದ ಜನ ಅದರ ಎರಡು ಭಾಗವನ್ನು ಪ್ರತಿನಿಧಿಸಿದ್ದರು. ಅದರ ಹಿಂದು ಗುಂಪಿನಲ್ಲಿ ಶಿವಸ್ವಾಮಿ ಅಯ್ಯರರು ಇದ್ದರು. ಆನಿ ಬೆಸೆಂಟ್ ಇವರು ತನ್ನ ಪಕ್ಷವನ್ನು National Home Rule League ಎಂದು ಕರೆದಿದ್ದಳು. ಇಂಗ್ಲೆಂಡಿಗೆ ತಲಪಿದ ನಂತರ ಕಾಂಗ್ರೆಸ್ ಪಕ್ಷದ ಪ್ರತಿನಿಧಿಗಳು ಅಲ್ಲಿದ್ದ British Committee of Congress ಇವರೊಡನೆ ಮಾತ್ರವಲ್ಲ, ಕಾಂಗ್ರೆಸ್ಸಿನ ನೀತಿಯನ್ನು ಆಗ ವಿರೋಧಿಸಿದ್ದ ಆನಿ ಬೆಸೆಂಟ್ ಇವರೊಡನೆಯೂ ಅವರು ಕಾದಾಡಿದ್ದಾಯಿತು.

ಹೀಗೆ ನಮ್ಮ ರಾಜಕೀಯ ಗುಂಪುಗಳು ಲಂಡನ್‌ನಲ್ಲಿ ಭೇಟಿಯಾಗಿ ಅಲ್ಲಿ ತಮ್ಮ ವಾಗ್ಯುದ್ಧದಲ್ಲಿ ನಿರತರಾದರು. ಎರಡು ಪಕ್ಷದವರೂ ಪರಸ್ಪರ ಅಪವಾದಗಳನ್ನು ಆರೋಪಣೆಗಳನ್ನು ಅತ್ತಿತ್ತ ಎಂಬಂತೆ ಹೊರಿಸಿದರು. ಇತ್ತಂಡದವರೂ ಕೂಗಿದರು. ಆನಿಯವರು ತನ್ನ ವಾದವನ್ನು ಇಂಗ್ಲೆಂಡಿನ "ಲೇಬರ್" ಪಕ್ಷದ ಮುಂದಿಟ್ಟರು. ಸೆಕ್ರೆಟರಿ ಆಫ್ ಸ್ಟೇಟ್ ಎಡ್ವಿನ್ ಮೊಂಟೆಗ್ಯೂ ಇವರ ಭಾರತೀಯ ಸುಧಾರಣಾ ಮಸೂದೆಯನ್ನು ಅವರು ಅನುಮೋದಿಸಿದರು. ಅವರು ಲಂಡನ್ನಿನಲ್ಲಿ ಸ್ಥಾಪಿಸಿದ್ದ ಭಾರತೀಯ "ಹೋಂ ರೂಲ್" ಸಂಸ್ಥೆಯ ಆಶ್ರಯದಲ್ಲಿ ಹಿಂದು ಸಭೆಯು ಆಲ್ಬರ್ಟ್ ಸಭಾಂಗಣದಲ್ಲಿ ನಡೆದಾಗ ಆನಿಯವರು ಎಡ್ವಿನ್ ಮೊಂಟೆಗ್ಯೂನ ಸುಧಾರಣಾ ಮಸೂದೆಯ ಪರವಾಗಿಯೇ ಮಾತಾಡಿದರು. ಆಗ ವಿಠಲಭಾಯಿ ಪಟೇಲರು ಅವರಿಗೆ ವಿರೋಧವಾಗಿ ಮಾತಾಡಲು

ಈ ಉಭಯ ಪಕ್ಷಗಳೊಳಗೆ ವಾಗ್ವಾದಗಳು ಬಿರುಸಾಗಿ ನಡೆದುವು. ಇದರ ಕಡೆಯಲ್ಲಿ ಕಾಂಗ್ರೆಸ್ ಪಕ್ಷದ ಖಾಪರ್ಡೆ ಇವರು ಎನಿ ಬಿಸೆಂಟ್ ಇವರಿಗೆ ಅಪಮಾನಕಾರಕವಾಗುವ ನುಡಿಗಳನ್ನು ಹೇಳಲು ಅವರು ಅದಕ್ಕೆ ತೀವ್ರ ಪ್ರತಿಭಟಿಸಿದರು. ಈ ಪ್ರಸಂಗವನ್ನು ಕುರಿತು ಅಧಿಕೃತ ಕಾಂಗ್ರೆಸ್ ಚರಿತ್ರೆಯಲ್ಲಿ ಡಾ॥ ಪಟ್ಟಾಭಿಯವರು ಬರೆದಿದ್ದಾರೆ:—

"At this distance of time and knowing as we do Mrs. Besant's great services to the Nation, we cannot help saying that the description (i.e. Mr. Khaparde's remarks) was unfortunate and undeserved in spite of Mrs. Besant's unconcealed antipathy to the Congress and its activities in London in 1919."

<u>ಕಾಂಗ್ರೆಸ್ ಪಕ್ಷದವರು ಎನಿ ಬಿಸೆಂಟ್ ಇವರಲ್ಲಿ ಸಂದೇಹಪಟ್ಟರು:—</u>

ಸರ್ ಎಡ್ವಿನ್ ಮೊಂಟೆಗ್ ಇವರ ಮನಸ್ಸಾದಿಯನ್ನು ಎನಿಯು ಪರೆ ಅನುಮೋದಿಸಿದಳೋ ಏನೋ ಎಂಬುದಾಗಿ ಭಾರತೀಯರು ಸಂದೇಹಪಟ್ಟರು. ಅವರು ದೇಶಕ್ಕೆ ಸಲ್ಲಿಸಿದ ಸೇವೆಯ ಬಗ್ಗೆ ಜನಕ್ಕೆ ತುಂಬಾ ಆದರಾಭಿಮಾನವು ಇದ್ದಿತಾದರೂ ಅವರು ತಳೆದಿದ್ದ ನಿಲುವನ್ನು ಕುರಿತಾಗಿ ಟೀಕಿಸಿದರು, ಅವರಾದರೋ ಕಾಂಗ್ರೆಸ್ ಪಕ್ಷದ ಧೋರಣೆಯನ್ನು ಖಂಡಿಸಿದರು. ಈ ಕಾರಣದಿಂದ ಶ್ರೀಮತಿ ಬಿಸೆಂಟ್ ಇವರು ಬ್ರಿಟಿಶ್ ರಾಜಕಾರಣಿಗಳು ಹೂಡಿದ್ದ ಬಲೆಯೊಳಗೆ ಬಿದ್ದಳೋ ಏನೋ ಎಂಬುದಾಗಿ ಸಂದೇಹಗ್ರಸ್ತರಾದರು:—

"It is to be feared that there was something worse which should account for this irrepressible anxiety on Mrs. Besant's part to support Mr. Montague."

ಎಂಬುದಾಗಿ ಪ್ರತಿಪಕ್ಷದ ಜನ ಹೇಳಿದರು. ಆದರೆ ಎನಿ ಬಿಸೆಂಟ್ ಇವರ ರಾಜನೀತಿಯನ್ನು ಭಾರತೀಯರು ಅರ್ಥಮಾಡಿಕೊಂಡಿರುತ್ತಿರಲಿಲ್ಲ. ಸುಮಾರು 1920 ರಿಂದ ಕಾಂಗ್ರೆಸ್ ಪಕ್ಷವು ದೇಶಕ್ಕೆ ಪೂರ್ಣ ಸ್ವರಾಜ್ಯ ಬೇಕೆಂದು ಹೇಳುತ್ತಿದ್ದರಾದರೂ ದೇಶದ ಪರಿಸ್ಥಿತಿಯು ಅದಕ್ಕೆ ತಕ್ಕಂತೆ ಇರಲಿಲ್ಲ. ಇದನ್ನು ಎನಿಯು ಆಗ ತಿಳಿದಿದ್ದಂತೆ ನಮಗೂ ಇಂದು ತಿಳಿಯುತ್ತದೆ. ಆದರೆ ನಮ್ಮ ದೇಶದಲ್ಲಿ ಅನೇಕ ಜಾತಿಗಳ ಹಾಗೆ ಹಲವು ಭಾಷೆಯು, ಹಲವು ಬಣ್ಣದ ಮತಾಂಧಾಲಗಳು ಅಲ್ಲಲ್ಲಿ ಕಾಣಿಸಿಕೊಂಡವು. ಸುಮಾರು 1925 ರ ಕಾಲಕ್ಕೆ ದೇಶದ ರಾಜಕೀಯವನ್ನೇ ಕಲಕಮೇಲೋಗರವಾಗಿ ಮಾಡಿದರು, "ಪೂರ್ಣ ಸ್ವರಾಜ್ಯ"ವು ಬೇಕೆಂದು ಹೇಳಿದಾಗ, ಆರೀತಿ ಕೊಟ್ಟಿದ್ದಾಗ, ದೇಶೀಯರು ಮೆಚ್ಚುತ್ತಿದ್ದರಾದರೂ ಎನಿ ಬಿಸೆಂಟ್ ಇವರು ಅಂದಿನ ಪರಿಸ್ಥಿತಿಯಲ್ಲಿ ಬೇಕಾಗಿದ್ದುದು ಅದಲ್ಲವೆಂಬುದನ್ನು

ಏಕಾಂಗಿಯಾಗಿ ನಿಂತರು ಎಂದು ಜನಕ್ಕೆ ಹೇಳಿದಳು. ದೇಶಕ್ಕಾಗಿ ಯಾವ ಬಗೆಯ ಸೇವೆಯನ್ನು ತ್ಯಾಗವನ್ನು ಮಾಡದ ಜನರು ಏನೋ ಗಟ್ಟಿ ಸ್ವತಂತ್ರಪತ್ತಿದರ ಬಗ್ಗೆ ಅವಳು ಬೇಸರಿಸಿದಳು. ಆದರೆ ತಾನು ಹಿಡಿದ ತತ್ವವನ್ನು ಸಾಧಿಸಲು ಹೆಣಗಿದಳು. ಅವಳ "ಹೋಂ ರೂಲ್ ಮಂತ್ರ"ವು ಗಾಂಧೀಜಿ ಹೇಳಿದಂತೆ 1915 ರಿಂದ ದೇಶದ ಎಲ್ಲೆಡೆಯೂ ಬೆಳಗಿ ಹೋಗಿತ್ತು. ಅದರ ಸಾಧನೆಗೆ ಹೇಗೆ ಯತ್ನಿಸಬೇಕೆಂಬುದನ್ನು ಹೇಳುತ್ತವಾಗಿ ಕಾಂಗ್ರೆಸ್ಸಿನ ನೀತಿಯನ್ನು ವಿರೋಧಿಸಿದಳು. ಅವಳ ನಿಲುವು ಈ ರೀತಿಯಾಗಿತ್ತು!—

"---To me, Independence is India's inevitable destiny. The first step to it is Dominion Status, Home Rule. For that, I helped to frame the Commonwealth of India Bill, which has been in the House of Commons since 1925----Now, I protest against this exaggeration of the Congress resolution. Independence, is too sacred and splendid a thing to be disregarded by professions unsupported by action. Mazzini passed weary years in exile for the Independence of Italy. O'Brient wore out years in penal servitude for the Independence of Ireland. What right have these, who sacrifice nothing, who risk nothing, to prostitute this glorious ideal, sanctified by suffering, immortalized by death?---.

"Let us at least be honest, honest with ourselves, honest with others. I say frankly that the great Rishi, who is the regent of India in the Inner Government of the World, has laid down, as the policy to be followed, the Freedom of India within the Federation of Free Nations linked by the British Crown. The two countries can do more for the world in union than in separation. And the good of the world is the supreme object. Incidentally and inevitably the good of India is thereby secured." (New India-15/11/1928).

ಕಾಂಗ್ರೆಸ್ ಜನರು ಇಂದು ಹೋಗಿರುವ ಹಾಗೆಯೇ ಬಂದು ನಡೆ:— ಶ್ರೀಮತಿ ಅನಿ ಬೆಸೆಂಟರ ಇವಳು ಎತ್ತಿ ಹಿಡಿದಿದ್ದ ಅವಳ ವಾದ ಸರಣಿಯು 1915 ರಿಂದ 1930 ರ ವರೆಗೂ ಪ್ರಚಾರವಿತ್ತು. "ಪೂರ್ಣ ಸ್ವರಾಜ್ಯ" ಬೇ

ಕು ಎಂದೂ ಅರಿಯುವುದು ಮೋತಿ ಹೇಳಿದಂತೆ ಅವಿವೇಕಿ ಹಾಗೂ ಅಜ್ಞಾನಿಗಳಾದ ಜನಕ್ಕೆ ಸ್ವರಾಜ್ಯವಾಗಿ ಕೊಡಿಸಬಹುದಾದರೂ ಅದು ಅಷ್ಟು ಸುಲಭವೂ ಅಲ್ಲ, ಮತ್ತು ದೇಶದ ಇಂದಿನ ಪರಿಸ್ಥಿತಿಯಲ್ಲಿ ಹಿತವೂ ಅಲ್ಲವೆಂಬುದಾಗಿ ಅನಿಯು ಇಂದೇ ಹೇಳಿದ್ದಳು. ಅಸಹಕಾರ ಚಳುವಳಿಯಲ್ಲಿರುವ ಅಪಾಯ ಮತ್ತು ಮತಧರ್ಮೀಯ ಹಕ್ಕು ಬಾಧ್ಯತೆಗಳ ಪ್ರಶ್ನೆ ಮೊದಲಾದುವನ್ನೆಲ್ಲ ಅವಳು ಇಂದೇ ತಿಳಿಸಿದ್ದಳು.

ಆದರೆ ಸಮಸ್ತ ದೇಶೀಯರು ಅವಳ ವಾದಕ್ಕೆ ಕಿವಿಗೊಡಲಿಲ್ಲ. ಹಳೆ ವರ್ಗದ ಭಾರತೀಯ ಮುಂದಾಳುಗಳು 1920 ರ ನಂತರ ಯಾರೂ ಉಳಿಯಲಿಲ್ಲ. ಅನಿಯು ಸಹ 1925 ರ ಕಾಲಕ್ಕೆ 78 ವರ್ಷ ಪ್ರಾಯದ ವೃದ್ಧೆಯಾಗಿದ್ದಳು. ಹಾಗಾಗಿ ದೇಶದ ರಾಜಕೀಯದಲ್ಲಿ ಗಾಂಧೀಜಿಯೇ ಪ್ರಧಾನ ಮುಂದಾಳಾದರು. ಉಳಿದವರೆಲ್ಲ "ಎದ್ದ ಎತ್ತಿನ ಬಾಲವನ್ನು ಹಿಡಿಯುವವ"ರಾದರು. ಅನಿಯಿಂದಲೇ ರಾಜಕೀಯದಲ್ಲಿ ಮುಂದೊಯ್ಯಲ್ಪಟ್ಟು ಅವಳನ್ನೇ ಅನುಸರಿಸಿದ್ದ ಹಲವರು ಈಗ ಗಾಂಧೀಜಿಯ ಜೊತೆ ಸೇರಿದರು. ಇಂಥಾ ಹಲವರಲ್ಲಿ ಮೋತಿಲಾಲ ನೆಹರು ಎಂಬುವರು ಒಬ್ಬರು!

ಆದರೆ ಅನಿಯ [illegible] ಮತ್ತು ಕಾಂಗ್ರೆಸ್ ಅಸಹಕಾರ ನೀತಿಯನ್ನು ಒಪ್ಪದೇ ಇದ್ದವರೂ ಇದ್ದರು. ಅಂಥವರು ತಟಸ್ಥರಾಗಿಯೇ ಉಳಿದರು. ಅವರಾರೂ ಬೀದಿಗಳಲ್ಲಿ ಗಲಾಟೆ ಎಬ್ಬಿಸುವ ವರ್ಗದವರಾಗಿರಲಿಲ್ಲ. ಅವರೆಲ್ಲರೂ ಅನಿಯು ಹೇಳುವುದರಲ್ಲಿ ಹುರುಳಿದೆಯೆಂಬುದನ್ನು ಮನಗಂಡರು. ಇಂಥವರಲ್ಲಿ ಸಿ. ಎಫ್. ಆಂಡ್ರ್ಯೂಸ್, ಕವಿ ರವೀಂದ್ರನಾಥ್ ಟಾಗೋರ್, ರಾಮಸ್ವಾಮಿ ಐಯ್ಯರ್, ಡಾ. ಭಗವಾನ್ ದಾಸ, ಸರ್ ಶ್ರೀನಿವಾಸ ಶಾಸ್ತ್ರಿ, ಮಹಮ್ಮದಾಲಿ ಜಿನ್ನಾ, ತೇಜ್ ಬಹದ್ದೂರ್ ಸಪ್ರೂ ಹೀಗೆ ಹಲವು ಹಿರಿಯ ಚಿಂತಕರು ಇದ್ದರು. ಅವರಲ್ಲಿ ಕೆಲವರು ಆದಾಗಲೇ ವೃದ್ಧರಾಗಿದ್ದರು. ಹಾಗಾದುದರಿಂದ ಅನಿ ಬೆಸೆಂಟ್ ಒಬ್ಬಳೇ ತನ್ನ ರಾಜನೀತಿ ಯೋಜನೆ, ಎಂತೆಂಬುದನ್ನು ಸಾರಬೇಕಾಯಿತು:—

"In 1926, a conference was held at Bombay and an Indian National party was formed. At this meeting, Pandit Motilal Nehru proposed a Committee to go into and report on Dr. Annie Besant's Commonwealth of India Bill, but this was turned down."

ಎಂಬುದಾಗಿ ಕಾಂಗ್ರೆಸ್ ಚರಿತ್ರೆಯಲ್ಲಿ ಹೇಳಲಾಗಿದೆ. ಈ Common-wealth of India ಮಸೂದೆಯನ್ನು ಲಕ್ನೋದಲ್ಲಿ ನಡೆದ ಮುಂದಾಳುಗಳ ಸಭೆಯೊಂದರಲ್ಲಿ, 1925 ರ ಏಪ್ರಿಲ್‌ನಲ್ಲಿ,

ಜಾರಿಗೊಳಿಸಲಾಗಿತ್ತು. ಅದು Dominion Status ರಾಜನೀತಿಯನ್ನು ಪ್ರತಿಪಾದಿಸುವ ಮಸೂದೆಯಾಗಿದ್ದರೂ ಅಂದಿನ ಪರಿಸ್ಥಿತಿಗೆ ಅದು ತುಂಬಾ ಉತ್ತಮವಾಗಿತ್ತೆಂದು ಹಲವರು ಹೇಳಿದರು.

ಸೈಮನ್ ಸಮಿತಿಯ ಭಾರತ ಸಂಚಾರಕ್ಕೆ ಅನಿಯ ವಿರೋಧ:—

ಅನಿ ಬೆಸೆಂಟ್ ಇವರು ಈ ದೇಶದ ಸ್ವಾತಂತ್ರ್ಯಕ್ಕೆ ಹೋರಾಡುವಾಗ ಇವರ ರೀತಿ ನೀತಿಗಳು ಕಾಂಗ್ರೆಸ್ ಧೋರಣೆಯಿಂದ ಬೇರ್ಪಟ್ಟಿದ್ದಿತ್ತಾದರೂ ಇವರು ಬಹು ಶ್ರದ್ಧಾಪೂರ್ವಕವಾದ ದೇಶಸೇವಿಕೆಯೆಂಬುದನ್ನು ತೋರ್ಪಡಿಸುತ್ತಲೇ ಇದ್ದರು. 1918 ರಿಂದಲೇ ಇವರು ಮಹಾತ್ಮಾ ಗಾಂಧಿಯವರ ಅನುಸರಿಸಿದ್ದ ನೀತಿಯನ್ನು ವಿರೋಧಿಸಿದ್ದರು. 1914 ರಿಂದ 1920 ರ ವರೆಗೂ ಇವರು ತುಂಬಾ ಜನಪ್ರಿಯರಾದ ಮುಂದಾಳಾಗಿದ್ದರು. ಲಾರ್ಡ್ ವಿಲ್ಲಿಂಗ್ಡನ್ ಇವರು ಅನಿಯನ್ನು ಅಂದಿನ ಬೊಂಬಾಯಿ ಆಧಿಪತ್ಯಕ್ಕೆ ಕಾಲಿಡದಂತೆ ಬಹಿಷ್ಕರಿಸಿದ್ದರು. ಆದರೆ ಗಾಂಧೀಜಿಯ ಅಸಹಕಾರ ಚಳವಳಿಯನ್ನು ಇವರು ವಿರೋಧಿಸಿದ್ದರಿಂದ ಸ್ವಲ್ಪಮಟ್ಟಿಗೆ ಜನತೆಯ ಬೆಂಬಲವನ್ನು ಕಳೆದುಕೊಂಡರು. ಆದರೂ ಇವರು ಧೃತಿಗೆಡಲಿಲ್ಲ. ತನ್ನ Commonwealth of India Bill ಇದನ್ನು ಬ್ರಿಟಿಷ್ ಶಾಸನ ಸಭೆಯ ಮುಂದೆ ಚರ್ಚೆಗೆ ತಂದರು.

ದೇಶೀಯ ಕಾಂಗ್ರೆಸ್ ಜನರು ಆವಾಗ ಅನಿಗೆ ವಿರೋಧವಾಗಿ ಎಷ್ಟೇ ಗಲಾಟೆ ಎಬ್ಬಿಸಿದರೂ ಅಂದಿನ ಸ್ವಾತಂತ್ರ್ಯ ಚಳವಳಿಗೆ ತನ್ನ ಪ್ರಭಾವವನ್ನು ಬೀರಲು ಇವರೇ ಮುಖ್ಯಕಾರಣರೆಂಬುದು ಎಲ್ಲರೂ ಒಪ್ಪುವ ವಿಷಯವಾಗಿದೆ. ಇಂಗ್ಲೆಂಡಿನಲ್ಲಿ ಇವರ ಹೆಸರು ಎಲ್ಲರ ಮನೆಮಾತಾಗಿತ್ತು. ತನ್ನ ಥಿಯಾಸಫಿ ಸಂಸ್ಥೆಯ ಲಂಡನ್ ಶಾಖೆಯೂ ತಾನು ಸ್ಥಾಪಿಸಿದ ಲಂಡನ್ನಿನ "ಹೋಂ ರೂಲ್" ಸಂಸ್ಥೆಯೂ ಭಾರತ ಸ್ವಾತಂತ್ರ್ಯದ ಬಗ್ಗೆ ಬ್ರಿಟಿಷ್ ಸರಕಾರಕ್ಕೆ ತಕ್ಕ ಸಲಹೆಗಳನ್ನೀಯುತ್ತಿದ್ದುವು.

1927 ರಲ್ಲಿ ಬ್ರಿಟಿಷ್ ಸರಕಾರವು ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಲು Simon Commission ಎಂಬ ಒಂದು ಸಮಿತಿಯನ್ನು ಈ ದೇಶಕ್ಕೆ ಕಳುಹಿಸಿತು. ಆಗ ಭಾರತದ ವೈಸ್ರಾಯಿಯಾಗಿದ್ದ ಲಾರ್ಡ್ ಇರ್ವಿನ್ ಇವರು ಅಂದಿನ ಭಾರತದ ಸಂಬಂಧವಾಗಿ ವ್ಯವಹರಿಸುತ್ತಿದ್ದ ಮಂತ್ರಿ ಲಾರ್ಡ್ ಬರ್ಕನ್ ಹೆಡ್ ಇವರಿಂದ ನೇಮಿತವಾದ ಆ ಸೈಮನ್ ಸಮಿತಿಗೆ ತಕ್ಕ ಪುರಸ್ಕಾರವನ್ನು ಕೊಡಬೇಕೆಂದು ಜನರನ್ನು ಕೇಳಿಕೊಂಡರು. ಆದರೆ ಭಾರತೀಯ ಮುಂದಾಳುಗಳು ಆ ಸಮಿತಿಯನ್ನು ಬಹಿಷ್ಕರಿಸಿದರು. ಅನಿ ಬೆಸೆಂಟ್ ಇವರು ತನ್ನ ವಿರೋಧವನ್ನು ಹೀಗೆ ವ್ಯಕ್ತಪಡಿಸಿದರೆಂದು ಕಾಂಗ್ರೆಸ್ ಚರಿತ್ರೆಯು ಹೀಗೆ ಹೇಳಿದೆ:—

"----But what was behind this sudden rush into hurried action?" asked Dr. Besant. It was the fear of general elections of 1929 in Great Britain. The Simon Commission was not wanted by any party. She said, "All the world will see and the world will remember that Lord Birkenhead was one of those who entered into a treasonable conspiracy, drilling an army and filling a treasury to fight His Majesty's troops in Northern Ireland. And now that a (Simon) commission is appointed in which India's immediate destiny is to be fixed and from which Indians are boycotted ---- Surely imitation is the sincerest flattery."

<u>ಭಾರತೀಯರ ಧರ್ಮ ಸಂಸ್ಕೃತಿಗಳಲ್ಲಿ ಉದಾರ ಆದರ</u>:— ಆನಿ ಬಿಸೆಂಟ್ ಇವಳು ಈ ದೇಶವನ್ನು ತನ್ನ ಮಾತೃಭೂಮಿಯೆಂದೇ ಬಗೆದು ಇಲ್ಲಿಯೇ ನೆಲೆಸಿ ಇಲ್ಲಿಯ ಆಚಾರ ವಿಚಾರವನ್ನು ಅನುಸರಿಸಿ ದೇಶದ ಸ್ವಾತಂತ್ರ್ಯಕ್ಕಾಗಿಯೂ ಅದೇ ದೃಷ್ಟಿಯಿಂದ ಹೋರಾಡಿದಳೆಂಬುದಕ್ಕೆ ಅವಳು ಭಾರತೀಯ ಸಂಸ್ಕೃತಿಯಲ್ಲಿ ಇಟ್ಟ ಅಭಿಮಾನವೇ ಕಾರಣವಾಗಿದೆ. ತನ್ನ ರಾಜಕೀಯದಲ್ಲೂ ಅವಳು ಆ ಅಭಿಮಾನವನ್ನು ಹೆಜ್ಜೆ ಹೆಜ್ಜೆಗೂ ತೋರ್ಪಡಿಸಿದಳು. ತನ್ನ Commonwealth of India Bill-ಮಸೂದೆಯನ್ನು ಇಂಗ್ಲೆಂಡಿನ ಶಾಸನ ಸಭೆಯ ಮುಂದಿಟ್ಟದ್ದಕ್ಕೂ ಅವಳ ನಿಜವಾದ ಭಾರತದಭಿಮಾನವೇ ಕಾರಣವಾಗಿದೆ. ಈ ದೇಶದ ಭವಿಷ್ಯದ ಬಗ್ಗೆ ಅವಳು ಹೀಗೆ ಉದ್ಗರಿಸಿದ್ದಳು:—

"The future of India, I hope, be united with that of Britain for the sake of both the Nations and for the sake of humanity at large, for, they supply each other's defects, and united can do for the world a service that neither can do alone. India in the past has shown that the highest spirituality does not prevent, but ensures, the greatness of achievement---- Under the shelter of her sublime religion she developed a literature of unparalleled and intellectual power, philosophical and metaphysical; her art flowered

into exquisite beauty, her dramas still purify and inspire----Let her have freedom to develop on her own lines and she will again rival her ancient glory and even excel it in the future. Robbed of liberty she is treading the path of death---.

Her salvation lies in "Swaraj," self-rule, Home Rule, and in that alone. Nothing else can preserve and renew her vitality."

ಈ ರೀತಿ ಹಲವು ಬಾರಿ ಹೇಳಿದ ಭಾರತೀಯ ಹಾಗೂ ಪಾಶ್ಚಾತ್ಯ ವಿದ್ವಾಂಸರು ಇಂದೂ ಇದ್ದಾರೆ. ಆ ಪರಂಪರೆಗೆ ಸೇರಿದ್ದ ಭಾರತೀಯ ದೇಶಾಭಿಮಾನಿಗಳಲ್ಲಿ ಆನಿ ಬೆಸೆಂಟ್ ಇವಳೇ ಕಡೆಯವಳೆನ್ನಬಹುದು. "If Hinduism goes there will be no India" ಎಂಬುದರ ಮಟ್ಟಿಗೆ ಅವಳು ಹಿಂದೂ ಧರ್ಮಾಭಿಮಾನಿಯಾಗಿದ್ದಳು. ಎಷ್ಟು ದೊಡ್ಡ ಧರ್ಮಾಭಿಮಾನಿಯೋ ಅಷ್ಟೇ ದೊಡ್ಡ ಪಾಲ್ಗೆಯಾಗಿ ಭಾರತದ ಪಾರತಂತ್ರ್ಯವನ್ನು ತೊಲಗಿಸಿಬಿಡಲು ಹೋರಾಡಲು ಕಾರಣಳಾದ ಬಹುದೊಡ್ಡ "ರಾಯಭಾರಿ" ಯಾಗಿಯೂ ಪ್ರಸಿದ್ಧಳಾದಳು!

ಆನಿ ಬೆಸೆಂಟ್ ಇವಳು ವಿಶ್ವಮಾನ್ಯಳಾಗಿಯೂ ವಿರಾಜಿಸಿದಳು! ಆನಿಯು ಥಿಯೊಸಫಿಕಲ್ ಅಂತರಾಷ್ಟ್ರೀಯ ಸಂಸ್ಥೆಯ ಅಧ್ಯಕ್ಷಳಾಗಿ ಪ್ರತಿವರ್ಷವೂ ಲೋಕ ಸಂಚಾರವನ್ನು ಕೈಗೊಂಡಿದ್ದಳು. ತನ್ನ 82ನೇ ವರ್ಷ ಪ್ರಾಯದಲ್ಲಿ, 1929ರಲ್ಲಿ, ಅವಳು ಅಮೇರಿಕಾದಲ್ಲಿದ್ದಳು. ತನ್ನ ಕರ್ಮವು ತನ್ನನ್ನು ಹೇಗೆ ಕೊಂಡೊಯ್ಯುತ್ತಿದೆ ಎಂದು ಅವಳು ಹೇಳುತ್ತಿದ್ದಳು. ಅವಳಿಗಾಗಿ ಒಂದು ವಿಮಾನವನ್ನು ಪ್ರತ್ಯೇಕ ಕಾದಿಟ್ಟುಕೊಂಡು 1925ರಲ್ಲಿ ಥಿಯೋಸಫಿ ಸಂಸ್ಥೆಯು ಆಚರಿಸಿತ್ತು. ಅಮೇರಿಕಾದಲ್ಲಿ ನಡೆದ ನಾಲ್ಕನೇ World Congress of Theosophical Society ಇದರ ಅಧ್ಯಕ್ಷತೆಯನ್ನು ಅವಳು ವಹಿಸಿದ್ದಲ್ಲದೆ 1929ರ ಸೆಪ್ಟೆಂಬರ್ 1ರಲ್ಲಿ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಹೂವರ್ ಇವನಿಗೆ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಬೇಕಾದ ಅವಶ್ಯಕತೆಯನ್ನು ಕುರಿತಾಗಿ ಈ ರೀತಿಯಾಗಿ ಬರೆದಳು:—

"To the President of the United States: We, the fourth World Congress of the Theosophical Society, pray Mr. Hoover, the President of the United States of America, who saw in Europe the devastation wrought by war, and who nobly devoted himself to the relief of its victims, to lead the Nations of the World to the out-law

of war, and to the establishment of arbitration for the decision of the international disputes."

ಇದೇ ರೀತಿಯಾಗಿ ಲಂಡನ್‌ನಲ್ಲಿ ನಡೆದ Anglo-American Congress ನಲ್ಲೂ ಅವರು ಜಗತ್ತಿನಲ್ಲಿ ಯುದ್ಧವು ಮುಂದಕ್ಕೆ ಎಂದೂ ನಡೆಯದಂತಾಗಬೇಕೆಂದು ಹೇಳುತ್ತಾ ಅವರು, "made a magnificent appeal to out-law war in their own hearts," ಎಂಬುದಾಗಿ ಮನವಿಯನ್ನು ಮಾಡಿದ್ದರು. ಅನಿ ಬೆಸೆಂಟ್ ಏನೇ ಹೇಳಲಿ, ಏನೇ ಮಾಡಲಿ, ಅವೆಲ್ಲವೂ ತತ್ತ್ವಬದ್ಧವಾಗಿರುತ್ತಿದ್ದವು. ವಿಶ್ವಮಾನ್ಯರಾದ ವೇದಾಂತಿ ರಾಜಕಾರಣಿ ಮತ್ತು ವಾಗ್ಮಿಯಾಗಿ ಅವರು ತುಂಬಾ ಪ್ರಸಿದ್ಧರಾಗಿದ್ದರು. ಯುರೋಪ್, ಅಮೇರಿಕಾ ಮತ್ತು ಆಸ್ಟ್ರೇಲಿಯಾ ಖಂಡಗಳಿಂದ ಅವರ ಥಿಯೊಸೊಫಿ ಸಂಸ್ಥೆಗೆ ಬರುತ್ತಿದ್ದ ಹೇರಳ ಹಣವನ್ನು ಅವರು ಈ ದೇಶದ ಮಕ್ಕಳ, ಯುವಜನರ ವಿದ್ಯಾಭಿವೃದ್ಧಿಗೆಂದು ವಿನಿಯೋಗಿಸಿದರು. ಅವರ ತ್ಯಾಗಶೀಲ ಸ್ವೀಯ ಧರ್ಮಕಾರ್ಯಗಳಿಗೆ ಎಣೆಯೇ ಇರಲಿಲ್ಲ. ಒಮ್ಮೆ ತನ್ನ ಹುಟ್ಟುದಿನ ಸಂದೇಶವಾಗಿ ದೇಶದ ಯುವಜನಕ್ಕೆ ಈ ರೀತಿ ಹೇಳಿದರು:—

ಭಾಗ — 3.

ಗಾಂಧೀಜಿ ಅನಿ ಬೆಸೆಂಟರನ್ನು ಮೊದಲ ಬಾರಿಗೆ ಕಂಡುದು!—

ಅನಿ ಬೆಸೆಂಟ್ ಇವರು ಇಂಗ್ಲೆಂಡಿನಲ್ಲಿ ಬಹುಮುಖವಾದ ಚಟುವಟಿಕೆಗಳಲ್ಲಿ ಭಾಗವಹಿಸಿ ರಾಜಕೀಯ ಮತ್ತು ಸಾಮಾಜಿಕ ವಲಯಗಳಲ್ಲಿ ಇಡೀ ಯುರೋಪು ಖಂಡದಲ್ಲಿಯೇ ಪ್ರಸಿದ್ಧರಾಗಿದ್ದರು. ಗಾಂಧೀಜಿಯು ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಚಾರ್ಲ್ಸ್ ಬ್ರಾಡ್ಲೆ ಮತ್ತು ಅನಿ ಬೆಸೆಂಟ್ ಇವರಿಬ್ಬರ ಹೆಸರುಗಳು ತುಂಬಾ ಜನಜನಿತವಾಗಿದ್ದುವು. ಬ್ರಾಡ್ಲೆಯು ಮೃತನಾದಾಗ ಇಂಗ್ಲೆಂಡಿನಲ್ಲಿ ಇದ್ದ ಭಾರತೀಯರು ಅವನ ಶವಸಂಸ್ಕಾರಕ್ಕೆ ನೆರೆದಿದ್ದರು. ವಿದ್ಯಾರ್ಥಿಯಾಗಿದ್ದ ಗಾಂಧೀಜಿಯೂ ಹೋಗಿದ್ದರು.

ಚಾರ್ಲ್ಸ್ ಬ್ರಾಡ್ಲೆಯು ಇದ್ದಾಗಲೇ ಅನಿ ಬೆಸೆಂಟ್ ಇವರು ಥಿಯೊಸೊಫಿ ತತ್ವವನ್ನೊಪ್ಪಿ ಅದಕ್ಕೆ ಸೇರಿದುದು ಇಂಗ್ಲೆಂಡಿನ ಸಾಮಾಜಿಕ ವಲಯಗಳಲ್ಲೆಲ್ಲ ಅಂದು ಗುಲ್ಲೆಬ್ಬಿಸಿದ್ದಿತು. ಅದರ ಪೂರ್ಣ ವಿವರವನ್ನು ಅವಳೇ ಹೇಳಿದ್ದಾಳೆ. ಗಾಂಧೀಜಿ ಆ ವಿಷಯವಾಗಿ ಹೀಗೆ ಬರೆದಿದ್ದಾರೆ:—

"Mrs. Besant was very much in the limelight, and she had turned to theism from atheism. I had read her book, "How I Became a Theosophist!"

ಗಾಂಧೀಜಿಯು 1892ರಲ್ಲಿ ಲಂಡನ್ನಿನಲ್ಲಿದ್ದಾಗ ಶ್ರೀಮತಿ ಬ್ಲಾವ

ಟ್‌ಸ್ಕೀ ಇವಳೂ ಅಲ್ಲಿ ತನ್ನ ತತ್ವಜ್ಞಾನ ಪ್ರಚಾರಾರ್ಥವಾಗಿ ನೆಲೆಸಿದ್ದಳು. ಬ್ಲಾವಟ್‌ಸ್ಕಿಯು ಬಹುಕಾಲ, ವಿವಿಧ ದೇಶಗಳಲ್ಲಿ ಸಂಚರಿಸಿ ಆದಾಗತ್ತೆ ಇಂಗ್ಲೆಂಡಿಗೆ ತಲುಪಿದ್ದಳು. ಅವಳ ಪ್ರಭಾವಕ್ಕೆ ಹಲವರು ತತ್ವಜ್ಞಾನಿ (Theosophists) ಗಳಾಗಿ ಪರಿವರ್ತನೆಗೊಂಡರು. ಆನಿ ಬೆಸೆಂಟ್ ಸಹ ಅದಕ್ಕೆ ಸೇರಿದ್ದು ಆಗ ದೊಡ್ಡ ವಾರ್ತೆಯಾಗಿತ್ತು. ಗಾಂಧೀಜಿಯು ಒಂದು ಬಾರಿ ಲಂಡನ್ನಿನ ಬ್ಲಾವಟ್‌ಸ್ಕೀ ಶಿಬಿರಕ್ಕೆ ಹೋದುದನ್ನೂ ಅಲ್ಲಿ ಅವಳೊಂದಿಗೆ ಮಾತಾಡಿದ್ದನ್ನು ನೆನೆಯುತ್ತಾ ಜೊತೆಗೆ ತಾನು ಆನಿ ಬೆಸೆಂಟ್ ಇವಳನ್ನೂ ಅಲ್ಲಿ ಕಂಡುದನ್ನು ಕುರಿತಾಗಿ ಹೀಗೆ ಬರೆದಿದ್ದಾರೆ:—

"Two Theosophist brothers took me to Blavatsky Lodge, and introduced me to Madame Blavatsky and Mrs. Besant. The latter had just then joined the Theosophical Society, and I was following with great interest the controversy about her conversion ----."

<u>೨೩ ವರ್ಷಗಳನಂತರ ಆನಿ ಬೆಸೆಂಟ್ ಮತ್ತು ಗಾಂಧೀಜಿ:—</u>

ಕ್ರಿ.ಶ. 1892ರಲ್ಲಿ ಆನಿ ಬೆಸೆಂಟ್ ಮತ್ತು ಗಾಂಧೀಜಿ ಇವರು ಇಂಗ್ಲೆಂಡಿನಲ್ಲಿ ಕೇವಲ ಪರಿಚಿತರಾಗಿ ಭೇಟಿಯಾಗಿದ್ದರು. ಆಗ ಆನಿಗೆ 45 ವರ್ಷ ಪ್ರಾಯವಾಗಿತ್ತು, ಗಾಂಧೀಜಿ ಬರೇ ೨೨ ವರ್ಷ ಪ್ರಾಯದ ತರುಣ! ಆ ಭೇಟಿಯನಂತರವೇ 1893ರಲ್ಲಿ ಆನಿ ಬೆಸೆಂಟ್ ಇವಳು ಮೊದಲ ಬಾರಿಗೆ ಹಿಂದೂಸ್ಥಾನಕ್ಕೆ ಪ್ರಯಾಣ ಬೆಳೆಸಿದಳು. ಅಷ್ಟರಲ್ಲಿ ಗಾಂಧೀಜಿಯವರೂ ತನ್ನ ಓದನ್ನು ಮುಗಿಸಿ ಸ್ವದೇಶಕ್ಕೆ ಹಿಂದಿರುಗಿ ಕೂಡಲೇ ದಕ್ಷಿಣಾಫ್ರಿಕಾಕ್ಕೆ ತನ್ನ ವಕೀಲಿ ವೃತ್ತಿಗೆಂದು ತೆರಳಿದರು. ಅದರನಂತರ ಅವರಿಬ್ಬರು ರಾಜಕೀಯ ರಂಗದಲ್ಲಿ ಭೇಟಿಯಾದುದು ೨೩ ವರ್ಷಗಳನಂತರ, ಎಂದರೆ 1915ರಲ್ಲಿ!

ಭಾರತಕ್ಕೆ ಬಂದನಂತರ ಆನಿಯು ಬನಾರಸದಲ್ಲಿ ನೆಲೆಸಿ ಈ ದೇಶದ ವಿದ್ಯೆ ಮತ್ತು ಸಂಸ್ಕೃತಿ ಪ್ರಚಾರಕ್ಕೆ ಕೈಕೊಂಡಳೆಂಬುದಾಗಿ ಮೊದಲೇ ಹೇಳಿದೆ. ಅವಳ ತತ್ವಜ್ಞಾನ (Theosophy) ವನ್ನು ಕುರಿತಾಗಿ ಭಾಷಣಗಳು, ಅವಳ ವಾಕ್ಪ್ರವಾಹವು ಅದೆಷ್ಟು ಅಮೋಘವಾಗಿ ತೋರುತ್ತಿತ್ತೆಂಬುದನ್ನು 1902ರ ವೇಳೆಗೆ ಬರೇ ಹದಿಮೂರು ವರ್ಷ ಪ್ರಾಯದ ಜವಾಹರಲಾಲ್ ನೆಹರು ಹೀಗೆಂದಿರುವನು:—

"I was deeply moved by her oratory and returned from her speeches dazed and as in a dream. I decided to join the Theosophical Society ----and, Mrs.

Besant herself performed the ceremony of initiation."

1893 ರಲ್ಲಿ ಚಿಕಾಗೋ ನಗರದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಭಾಗವಹಿಸಿದಾಗ ಅದೇ ಸಭೆಯಲ್ಲಿ ಶ್ರೀಮತಿ ಆನಿ ಬೆಸೆಂಟ್ ಇವಳೂ ಸಹ ಅಮೋಘ ಭಾಷಣವನ್ನು ಮಾಡಿದಳು. ಗಾಂಧೀಜಿ 1901 ರಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದಿದ್ದಾಗ ಅವರು ಕಲ್ಕತ್ತಾಕ್ಕೆ ಹೋದರು. ಅಲ್ಲ ರಲ್ಲಿ ವಿವೇಕಾನಂದರು ಬಾಯಿಲೆ ಬಿದ್ದುದರಿಂದ ಅವರನ್ನು ಕಾಣಲಿಕ್ಕಾಗದೆ ಹಿಂದಿರುಗಿದರು. ಆಗ ಬನಾರಸ್ಸನಲ್ಲಿದ್ದ ಆನಿ ಬೆಸೆಂಟ್ ಇವಳನ್ನು ಪುನಃ ಭೇಟಿಯಾದರೋ ಎಂಬುದು ವರದಿಯಾಗಿಲ್ಲ.

"I planned to go first to Benares to pay my respects to Mrs. Besant who was then ill."

ಎಂದಷ್ಟೇ ಹೇಳಿದರು. ಕ್ರಿ.ಶ. 1912 ರಲ್ಲಿ ತನ್ನ 65 ನೇ ವರ್ಷದ ಪ್ರಾಯದಲ್ಲಿ ಆನಿಯು ರಾಜಕೀಯದಲ್ಲಿ ಭಾಗವಹಿಸಲು ಪ್ರಾರಂಭಿಸಿದಳು. ಅವಳ ಲೇಖನಗಳು, ಪತ್ರಿಕೆಗಳು, ಗ್ರಂಥಗಳು, ಭಾಷಣಗಳು ಎಂಬುದಾಗಿ ಬಹುಮುಖ ಚಟುವಟಿಕೆಗಳು ಆರಂಭವಾದುವು. ಅದೇ ವೇಳೆಗೆ ಗಾಂಧೀಜಿಯು ದಕ್ಷಿಣ ಆಫ್ರಿಕಾದಲ್ಲಿ ತನ್ನ ಸತ್ಯ, ಅಹಿಂಸೆ ಇತ್ಯಾದಿಗಳ ಹಿನ್ನೆಲೆಯಲ್ಲಿ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿ ಜಯಪ್ರದರಾದ ಕೀರ್ತಿಯು ಎಲ್ಲೆಲ್ಲೂ ಹಬ್ಬಿತ್ತು.

ಆನಿ ಬೆಸೆಂಟ್ – ಗಾಂಧೀಜಿ ಇವರೊಳಗೆ ಭಿನ್ನಾಭಿಪ್ರಾಯಕ್ಕೆ ಆರಂಭ:–

ಗಾಂಧೀಜಿಯು 1914-15 ರಲ್ಲಿ ಈ ದೇಶಕ್ಕೆ ಹಿಂದಿರುಗಿದಾಗ ಆನಿ ಬೆಸೆಂಟ್ ಇವಳು ಈ ದೇಶದಲ್ಲಿ ರಾನಡೆ, ನವರೋಜಿ, ಗೋಖಲೆ, ಮೆಹತಾ, ತಿಲಕ್, ಈ ಮೊದಲಾದ ಹಿರಿಯರೊಡನೆ ಒಂದಲ್ಲ ಒಂದು ರೀತಿಯಲ್ಲಿ ಅವರಿಗೂ ಮುಂದಾಳು ಎನಿಸಿ ದುಡಿಯುತ್ತಿದ್ದಳು. ಅವಳ ಅಭಿಮಾನ ದೇಶಾಭಿಮಾನ ಮತ್ತು ಕರ್ತವ್ಯನಿಷ್ಠೆಯು ಇಡೀ ದೇಶವನ್ನೆ ಬೆರಗಾಗಿಸಿತ್ತು. ಆಗ ಗಾಂಧೀಜಿಯು ಗೋಖಲೆಯವ ಆದೇಶದಂತೆ ಒ ವರ್ಷ ರಾಜಕೀಯಕ್ಕೆ ಇಳಿಯದೆ ದೇಶದ ಪರಿಸ್ಥಿತಿಯೆಂತಿದೆಯೆಂದು ನೋಡುತ್ತಾ ಸಂಚರಿಸಿದರು. 1915 ರ ಏಪ್ರಿಲ್‌ನಲ್ಲಿ ಮದ್ರಾಸು ಮತ್ತು ಬೆಂಗಳೂರಿಗೂ ಬಂದರು. ಅಡೆಯಾರ್‌ಗೆ ಹೋಗಿ ಶ್ರೀಮತಿ ಬೆಸೆಂಟ್ ಇವಳನ್ನು ಕಂಡು ಅಲ್ಲಿ ನಗರದ ಸಭೆಗಳಲ್ಲಿ ಮಾತಾಡಿ ಅನಂತರ ಬೇರೆಡೆ ಹೋದರು.

ಹೀಗೂ 1916 ರ ಕಾಲಕ್ಕೆ ಆನಿ ಮತ್ತು ಗಾಂಧಿ ಇವರೊಳಗೆ ಭಿನ್ನಾಭಿಪ್ರಾಯಕ್ಕೆ ಪ್ರಾರಂಭವಾಯಿತು. ಬೆಂಗಳೂರಿನಲ್ಲಿ ಗಾಂಧೀಜಿಯು ಮಾಡಿದ ಭಾಷಣವೊಂದರ ಬಗ್ಗೆ 1915 ರಲ್ಲಿ ಆನಿಯು ಅಸಮಾಧಾನ ವ್ಯಕ್ತಪಡಿಸಿದಳು. ಅದಕ್ಕೆ ಉತ್ತರವಾಗಿ ಗಾಂಧೀಜಿಯು ಈ ರೀತಿಯಾಗಿ ಹೇಳಿದರು:—

"She (Mrs. Besant) has done me no justice whatsoever, 'on some misunderstanding of a speech.'" ಗಾಂಧೀಜಿಯವರಲ್ಲಿ ಆನಿಗೆ ವೈಯ್ಯಕ್ತಿಕವಾಗಿ ಗೌರವವಿದ್ದರೂ ಗಾಂಧೀಜಿಯ ಅಸಹಕಾರ ನೀತಿಯು ಒಪ್ಪುವಂಥದ್ದು ಆನಿಗೆ ಅನಿಸಿರಲಿಲ್ಲ. ತನ್ನ "New India" ಪತ್ರಿಕೆಯಲ್ಲಿ 1916 ರ ಫೆಬ್ರುವರಿಯಲ್ಲಿ "Prophet and Politician" ಎಂಬ ಶೀರ್ಷಿಕೆಯಲ್ಲಿ ಆನಿ ಬೆಸೆಂಟ್ ಇವಳು ಈ ರೀತಿಯಾಗಿ ಹೇಳಿದ್ದಳು:—

"The politician is a fighter with the qualities and defects of his Dharma. His work is not as lofty as that of the Prophet---- Politics are full of compromise, else his value is lost. The Politician must keep his eyes fixed on the ideal for his guidance, but he must build bridges over gulfs, and ladders up precipices. Mr. Gandhi feels that to consider time and place and surroundings is treason to truth. I, in the humbler role of the politician, regard them as factors in the great political game, the LILA of Nations---- In our different ways, he and I both try to serve "God and the People", and though we may differ in methods, we have but a single goal."

ಬಿನಾರಸ್ಸಿನ ಸಭೆಯಲ್ಲಿ ಆನಿ ಬೆಸೆಂಟ್ ಮತ್ತು ಗಾಂಧೀಜಿ:— ಮೇಲೆ ಹೇಳಿದಂತೆ ಆನಿ ಬೆಸೆಂಟ್ ಇವಳು ತನಗೆ ಗಾಂಧೀಜಿ ಅಪಮಾನಿಸಿದ್ದ, ತನ್ನ ಒಪ್ಪವಲ್ಲದ ನೀತಿ ರೀತಿಯು ಒಪ್ಪುತ್ತಿಲ್ಲವೆಂಬುದಾಗಿ ಹೇಳಿದ್ದಳು. ಅದರನಂತರ ಅವಳು ಗಾಂಧೀಜಿಯನ್ನು ಹಲವಾರು ಬಾರಿ ಟೀಕಿಸಿದಾಗ ಕೆಲವು ಜನ ಅವಳ ಮೇಲೆ ಮಾತ್ಸರ್ಯದ ಆರೋಪಣೆಯನ್ನು ಹೊರಿಸಿದ್ದರಾದರೂ ಅದು ನ್ಯಾಯವಾದ ರೀತಿಯಂತೆ ತೋರಿಬರಲಿಲ್ಲ. ಆಗ ಆನಿಗೆ 69 ವರ್ಷ, ಗಾಂಧೀಜಿಗೆ 46 ವರ್ಷ ಪ್ರಾಯವಾಗಿತ್ತು. ಆನಿ ಸ್ವಾತಂತ್ರ್ಯ ಸಮರಯೋಗಿನಿ, ಗಾಂಧೀಜಿ ಭಾರತೀಯ ನಿಷ್ಠಾಬದ್ಧ ಸೇವಕ! ಆನಿ ಲೋಕದ ಉದ್ಧಾರಕ್ಕೆ ಹಲವು ಬಾರಿ ಹೋರಾಡಿದ್ದಾಳೆ, ಹಲವು ವಿಶ್ವ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾಳೆ, ಆದರೆ ಗಾಂಧೀಜಿಯ ಪ್ರವಾಸ ಇಂಡಿಯಾ, ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ಮಾತ್ರ! ಆನಿ ಮತ್ತು ಗಾಂಧಿಯ ಜೀವನದ ಧ್ಯೇಯ ಸಾಧನೆ ಎಲ್ಲ ಒಂದೆಯಾದರೂ ಅವರಿಬ್ಬರೊಳಗೆ ವ್ಯತ್ಯಾಸವು ಇದ್ದೇ ಇತ್ತು. ಗಾಂಧೀಜಿ ಆನಿಯನ್ನು Mother Besant ಎಂದೇ ಸಂಬೋಧಿಸುತ್ತಿದ್ದರು. ಅವಳು ಬಂದಾಗ ಗಾಂಧೀಜಿ ಎದ್ದು ನಿಲ್ಲುವರು. ಅವಳಾದರೋ ತನ್ನ

ತಾಯ್ತನಕ್ಕೆ ತಕ್ಕುದಾದ ಗಾಂಭೀರ್ಯ, ವಿನಯ, ಸೌಹಾರ್ದವೃತ್ತಿ, ದೇಶಾಭಿಮಾನ, ಜನಾಭಿಮಾನ, ತತ್ತ್ವಾಭಿಮಾನಗಳಿಂದ ತುಂಬಿ ತುಳುಕುತ್ತಿದ್ದರು, ಗಾಂಧಿಯನ್ನು ಇವರ 'prophet' ಎಂದೇ ಜನದ ಎದುರಿಗೆ ಹೇಳುವರು. ಹಾಗಿದ್ದ ಅವರಿವರೊಳಗೆ ಮತ್ಸರಕ್ಕೆಡೆಯೇ ಇರಲಿಲ್ಲ. ಆದರೆ ರಾಜಕೀಯವಾಗಿ ಗಾಂಧೀಜಿಯ ಧೋರಣೆಯು ಸರಿಯಲ್ಲವೆಂದು ಅವರು ಜನವನ್ನು ಎಚ್ಚರಿಸಿದ್ದರು.

ಹೀಗೂ ಈ ಇಬ್ಬರು ಮುಖಂಡಾಳುಗಳು ಬನಾರಸದಲ್ಲಿ 1916ರಲ್ಲಿ ನಡೆದ ಒಂದು ಸಭೆಯಲ್ಲಿ ಒಂದೇ ವೇದಿಕೆಯಲ್ಲಿ ಒಟ್ಟು ಸೇರಿದರು. ಬನಾರಸ್ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಮತ್ತು ಆನಿ ಬೆಸೆಂಟ್ ಇವರು 1890ರ ದಶಕದಿಂದಲೇ ಸ್ಥಾಪಿಸಿ ಪೋಷಿಸಿ ಬೆಳೆಸಿದ್ದ ಸಂಸ್ಥೆಗೆ ಸಂಬಂಧಿಸಿದ ಸಭೆ ಅದಾಗಿತ್ತು. ಅದೊಂದು ಸಾಂಸ್ಕೃತಿಕ ಸಭೆ. ಬ್ರಿಟಿಶ್ ಅಧಿಕಾರಿಗಳೂ ದೇಶೀಯ ರಾಜರೂ ತಮ್ಮ ಆಡಂಬರಗಳನ್ನು ಅಲ್ಲಿ ಪ್ರದರ್ಶಿಸಿದ್ದರು. ಜನಸಾಮಾನ್ಯರೂ, ವಿದ್ಯಾರ್ಥಿ ಮತ್ತು ಅಧ್ಯಾಪಕ ವರ್ಗವೂ ಬಹಳ ಸಂಖ್ಯೆಯಲ್ಲಿ ನೆರೆದಿದ್ದರು. ಸಭೆಯು ಹಲವರ ಭಾಷಣಗಳೊಂದಿಗೆ ಪ್ರಾರಂಭವಾದಾಗ ಗಾಂಧೀಜಿಯೂ ಬಂದು ವೇದಿಕೆಯ ಮೇಲೆ ಒಂದೆಡೆ ಕುಳಿತರು.

<u>ಗಾಂಧೀಜಿಯ ಭಾಷಣವು ಆನಿ ಬೆಸೆಂಟ್‌ಗೆ ಹಿಡಿಸಲಿಲ್ಲ:</u>— "I want to think audibly this evening. I do not want to make a speech---- Our language is the reflection of ourselves---- The charge against us is that we have no initiation----His Highness who had presided over yesterday spoke about the poverty of India----I compare with the richly bedecked noblemen, the millions of the poor----There is no salvation for India unless you strip yourselves of this jewellery and hold it trust for your countrymen in India---".

ಹೀಗೆ ಗಾಂಧೀಜಿಯ ಭಾಷಣವು ಹರಿಯಿತು. ಆದರೆ ಇಲ್ಲಿ ಒಂದು ವಿಚಾರ ಆಲೋಚಿಸಬೇಕಿದೆ. ಅದೇನೆಂದರೆ ಅದು ರಾಜಕೀಯ ಸಭೆ ಅಲ್ಲ; ಧನಿಕರನ್ನು ಮಹಾರಾಜರನ್ನು ಹಳಿಯಲಿಕ್ಕಾಗಿ ಕರೆಸಿದ್ದ ಸಭೆ ಅಲ್ಲ. ಅದು ವಿದ್ಯಾಮಂದಿರ! ಅದನ್ನು ಧನಿಕರು, ರಾಜಮಹಾರಾಜರುಗಳ ಸಹಾಯಧನವನ್ನು ಕೊಡೇ ಆನಿಯು ನಡೆಸಿದ್ದಾಗಿದೆ. ಇದೀಗ ಅಂಥವರ ಸಹಾನುಭೂತಿಯನ್ನು ಪಡೆಯಲಿಕ್ಕೆಂದೇ ಕರೆಸಿದ್ದ ಸಭೆ ಅದಾಗಿತ್ತು.

ಇವರೆಲ್ಲ ತಮ್ಮ ಸಹಕಾರವನ್ನೀಯುತಿಂದೇ ಇಲ್ಲಿ ನೆರೆದಿದ್ದರು. ಇವರೆಲ್ಲ ತಮ್ಮ ಆಭರಣಾಲಂಕಾರಗಳಿಂದಲೇ ಇಲ್ಲಿಗೆ ಬಂದಿದ್ದರು. ಆನಿಯಾ ಹರೋ ಇಂದಿವರ ಸಹಾಯದಿಂದಲೇ ದೇಶದ ವಿದ್ಯೆ ಮತ್ತು ಸಂಸ್ಕೃತಿಯು ಪುನರ್ಜೀವಗೊಳಿಸಲು ಇದಕ್ಕಿಂತ ಇಪ್ಪತ್ತು ವರ್ಷಗಳಿಗಿಂತ ಹಿಂದಿನಿಂದಲೇ ಈ ದೇಶದಲ್ಲಿ ನಿರಂತರ ದುಡಿದಿದ್ದಳು.

ಇದೇ ದೃಷ್ಟಿಯಿಂದ ಈ ಸಭೆಯನ್ನು ಬನಾರಸಿನಲ್ಲಿ ಕರೆದಿಲಾಗಿತ್ತು. ದಕ್ಷಿಣ ಆಫ್ರಿಕಾದಲ್ಲಿ ರಾಜಕೀಯ ಚಳುವಳಿಯಲ್ಲಿ ಭಾಗವಹಿಸಿ ಪ್ರಸಿದ್ಧರಾದ ಗಾಂಧೀಜಿಯವರನ್ನೂ ಈ ಸಭೆಯಲ್ಲಿ ಭಾಗವಹಿಸಲೆಂದೇ ಆಹ್ವಾನಿಸಿದರು. ಆದರೆ ಇದು ಸಂಸ್ಥೆಗಳಲ್ಲಿ ಸಲ್ಲಿಸ್ಸಿಸುವ ರಾಜಕೀಯ ಸಭೆಯಲ್ಲವೆಂದು ತಿಳಿದುಕೊಳ್ಳದೆ ಗಾಂಧೀಜಿಯವರು ಮೇಲೆ ಹೇಳಿದಂತೆ ಮಾತಾಡಿದ್ದು ಸರಿಯೇ ಎಂದು ನಿಸ್ಸಂದೇಹವಾಗಿ ಆಲೋಚಿಸಬೇಕು. ಗಾಂಧೀಜಿ ಇದೇನೋ ತಿಳಿದುಕೊಂಡು ಈ ರೀತಿಯಾಗಿಯೂ ಹೇಳಿದರು!—

"---If we trust and fear God, we shall have to fear no one, no Maharajas, not Viceroys, not the detectives, not even King George. I honour the anarchist for his love of the country; I honour him for his bravery in being willing to die for his country; but I ask him, "Is killing honourable?---I have been told, "Had we not done this, had not some people not thrown bombs, we should never have gained what we have got."

ಗಾಂಧೀಜಿಯವರ ಉದ್ರೇಕ ಹಾಗೂ ಅಸಂಬಂಧ ನುಡಿಗಳು ಹಾಗೆ ಹಠದವು. ಇದೇಕೆ? ಆ ಸಭೆಯ ಉದ್ದೇಶವೇನು? ಮಾತಾಡಬೇಕಿದ್ದುದೇ ಬೇರೆ ವಿಚಾರ. ರಾಜ ಮಹಾರಾಜರನ್ನೂ ವೈಸ್ರಾಯಿಗಳನ್ನೂ ಇಲ್ಲಿ ಬೈಯುವುದಂತಾದರೆ ಇವರೇಕೆ ಆ ಸಭೆಗೆ ಬರಬೇಕಿತ್ತು? ಇವರ ಮೇಲೆ ಆಕ್ರಮಣ ಮಾಡಿ ಗಾಂಧೀಜಿ, "I honour the anarchist," ಎಂಬುದಾಗಿ ಹೇಳುತ್ತಾ ಇದಾವ ಹಿಂಸಾವಾದಕ್ಕೆ ನೀರೆರೆಯುತ್ತಿದ್ದಾರೆ? ಹೀಗೂ ಕೇವಲ ಅಸಂಬಂಧ ವಿಷಯಗಳನ್ನು ಆ ಸಭೆಯಲ್ಲಿ ಹೇಳುತ್ತಾ, ಹೊಸದಾಗಿ ಈ ದೇಶಕ್ಕೆ ಇಪ್ಪತ್ತು ವರ್ಷಗಳನಂತರ ಬಂದ ಗಾಂಧೀಜಿಯು ತನ್ನ ನಲ್ವತ್ತರ ವರ್ಷ ಪ್ರಾಯದ ಯೌವನದ ಹುಮ್ಮಸ್ಸನ್ನು ಜನಕ್ಕೆ ತೋರಿಸಿದರಲ್ಲದೆ ಮತ್ತೇನು? ಆದರೆ ಭಾರತೀಯ ರಾಜಕೀಯದಲ್ಲಿ ಪಳಗಿದ್ದ 69 ವರ್ಷ ಪ್ರಾಯದ Mother Besant ಇವಳಿಗೆ ಗಾಂಧೀಜಿಯ ಭಾಷಣವು ಹಿಡಿಸಲಿಲ್ಲ. ಇವಳು ನ್ಯಾಯವಾಗಿಯೇ, "please stop it" ಎಂಬುದಾಗಿ ವೇದಿಕೆಯ ಹಿಂಬದಿಯಿಂದ ಉದ್ಗರಿಸಿದಳು.

ಆನಿ ಮತ್ತು, ಗಾಂಧಿ ಇವರೊಳಗಿನ ಭಿನ್ನಾಭಿಪ್ರಾಯವು ಹೆಚ್ಚಿತು:—

ಶ್ರೀಮತಿ ಆನಿ ಬೆಸೆಂಟ್ ಇವರು ಸಭಾಧ್ಯಕ್ಷರಾಗಿ ನೋಡಿ "please stop it" ಎಂಬುದಾಗಿ ಹೇಳಿದರು. ಆದರೆ ಗಾಂಧೀಜಿ ಹಾಗೆ ಭಾವಿಸಲಿಲ್ಲ. ಹಾಗೆ ಅವರು ತನಗೆ ನೇರವಾಗಿ ಹೇಳಿದ್ದರಿಂದ ತಿಳಿದು ತಾನು "ಸಭಾಧ್ಯಕ್ಷರ ಆಜ್ಞೆಗೆ" ಕಾಯುತ್ತೇನೆಂದು ಮಾತಿನ ಮಧ್ಯೆ ಹೇಳಿದರು. ಅಷ್ಟರಲ್ಲಿ ಸಭೆಯಲ್ಲಿದ್ದ ಯುವಕರ ತಂಡವು ಅದರಿಂದ ತಮಗೆ ಆವೇಶವುಂಟಾಯಿತೆಂದು ಭಾವಿಸಿ ಗಾಂಧೀಜಿಗೆ "go on" ಎಂದು ಕೂಗಿಟ್ಟರು. ಆಗ ವೇದಿಕೆಯಲ್ಲಿ ಕುಳಿತಿದ್ದ ಹಲವು ರಾಜರು ಮತ್ತು ಅಧಿಕಾರ ವರ್ಗದವರೆಲ್ಲ ಅಲ್ಲಿಂದ ಎದ್ದು ಹೋದರು. ಆ ರೀತಿಯಾಗಿ ಸಭೆಯು ಅನವಶ್ಯಕವಾಗಿ ಗೊಂದಲಕ್ಕೀಡಾಯಿತು.

ಇದು ಅವಶ್ಯವಿತ್ತೇ? "I honour the anarchist" ಎಂಬುದಾಗಿ ಹೇಳಿದ ಗಾಂಧಿ ತಾನೇ ಒಬ್ಬ anarchist ಎಂಬುದಾಗಿ ತೋರ್ಪಡಿಸಿಕೊಂಡರು. ಹಾಗಾದರೆ ಅವರ ಅಹಿಂಸಾವಾದದ ಪರಿಮಿತಿ ಯಾವುದು? Eric H. Ericson ಇವನು ಗಾಂಧಿಯ ಅಹಿಂಸೆಯು "militant non-violence" ಎಂಬುದಾಗಿ ಹೇಳುತ್ತಾನೆ. ಆನಿ ಬೆಸೆಂಟ್ ಆದರೋ ಪ್ರಾರಂಭದಿಂದಲೇ ಯಾವ ಕಾರ್ಯಗಳನ್ನು ಘಟನಾತ್ಮಕವಾಗಿ (constitutionally) ನಡೆಯಬೇಕೆಂದು ಪ್ರತಿಪಾದಿಸುತ್ತಾ ಬಂದಿದ್ದಳು. ಬನಾರಸ್ ಸಭೆಯಲ್ಲಿ ಆ ದಿನ ಗಲಭೆಯೆಬ್ಬಿಸಿದ ಕೆಲವು ಹುಡುಗರನ್ನು ತಾತ್ಕಾಲಿಕವಾಗಿ ಹೊರಗೊಯ್ಯಲಾಯಿತು. ಗಾಂಧೀಜಿಯ ಇಂಥ ಪ್ರೇರಕ ಮಾತುಗಳನ್ನಾಲಿಸಿ ಯುವಕರು ಹಿಂಸಾತ್ಮಕವಾಗಿಯೇ ವರ್ತಿಸಿದರು. ನಿಜಕ್ಕೂ ಇಲ್ಲಿ ಗಾಂಧೀಜಿ ತಪ್ಪಿದರು. ಆ ರೀತಿ ಮಾತಾಡಲು ಅವರಿಗೆ ಬೇರೆಡೆ ಜಾಗವಿತ್ತು. ಅಂಥ ಪವಿತ್ರ ವಿದ್ಯಾಕ್ಷೇತ್ರದಲ್ಲಿ ರಾಜಕೀಯ ಬೇಕಾಗಿರಲಿಲ್ಲ. ಹೀಗೂ ಒಬ್ಬರು ಆ ವಿಚಾರವಾಗಿ ಅನಂತರ ಹೀಗೆಂದರು:—

"Mrs. Besant later called the gun-powder mood of his (Gandhi's) young audience, seething with anger over the internment for the day of some fellow students."

ಆದರೆ ಗಾಂಧೀಜಿ ಹಾಗೆಣಿಸಲಿಲ್ಲ. ತಾನು ಸಭೆಯಲ್ಲಿ ಮಾತಾಡುವಾಗ ಆನಿಯು ಮಧ್ಯೆ ಬಾಯಿಹಾಕದೇ ಹೋಗಿದ್ದರೆ ಗಲಭೆಗೆ ಅವಕಾಶವಿರಲಿಲ್ಲವೆಂದು ಹೇಳಿದರು. ಅದು ನಿಜವಿರಬಹುದು! ಆದರೆ ಅವರು ಆಗ ಆಡಿದ ಮಾತಿಗೆ ಅವಳಲ್ಲವಾದರೂ ಇತರರು ಮಧ್ಯೆ ಬಾಯಿಹಾಕುತ್ತಿದ್ದರೆಂದು ಅವರು ತಿಳಿಯಬೇಕಿತ್ತು. ಏನೂ ತಿಳಿಯದ ಆ ಜನಸ್ತೋಮ ಆ ಸಭೆಯಲ್ಲಿ ಗಾಂಧೀಜಿಯ ಅನವಶ್ಯಕ ಮಾತುಗಳಿಗೆ ಶಹಬ್ಬಾಸ್ ಹೇಳಿರಬಹುದಾದರೂ ಶ್ರೀಮತಿ ಬೆಸೆಂಟ್ ಇವಳ ನಿಲುವು ಇಂದಿಗೂ ಸರಿ

ಸರಿಯಾಗಿಂದೇ ಹಲವರ ಅಭಿಪ್ರಾಯವಾಗಿದೆ. ಅವಳಿಗೆ ಆ ತರಹದ ಗುಲ್ಲು ಗೊಂದಲಗಳು ರಾಜಕೀಯವು ಅಲ್ಲಿ ಬೇಕಾಗಿರಲಿಲ್ಲ. ಅವಳಿಗೆ ಗಾಂಧೀಜಿಯಲ್ಲಿ ವಕ್ರದೃಷ್ಟಿ, ಅಸೂಯೆ ಎಂದು ಮೊದಲಾಗಿ ಅವಳಲ್ಲಿ 'ಅಸೂಯಾಪರರಾದ ಆಂಗ್ಲ ಗೂಢಚಾರಿಗಳು ಹೇಳಿರಬಹುದಾದರೂ ಆ ಮಾತಿನಗಿಂತ ಎಲ್ಲಕ್ಕೂ ಹಿಂದೆ ಅವಳು ಗಾಂಧೀಜಿಯ ರಾಜಕೀಯತೆಯನ್ನು ವಿರೋಧಿಸಿದ್ದು ಇಡೀ ದೇಶವೇ ತಿಳಿದಿದೆ,

"She was strictly an advocate of constitutional change of India's position within the Empire" ಎಂಬ ವಿಷಯವು ಅದಕ್ಕಿಂತ ಹಿಂದೆಯೇ ಸರ್ವಮಾನ್ಯವಾಗಿತ್ತು.

<u>ಗಾಂಧೀಜಿಯ ಅಸಹಕಾರ ಚಳುವಳಿಯನ್ನು ವಿರೋಧಿಸಿದಳು:-</u> 1917 ನೇ ವರ್ಷದಲ್ಲಿ ಆನಿ ಬೆಸೆಂಟ್ ಇವಳ Home Rule ಚಳುವಳಿಯು ಹಿಂದೂಸ್ತಾನದ ಪ್ರತಿಯೊಂದು ಮನೆಯಲ್ಲೂ ಪ್ರತಿಧ್ವನಿಸಿತು. "Home Rule' became a '<u>Mantra</u>' in every cottage" ಎಂಬುದಾಗಿ ಗಾಂಧೀಜಿಯವರು ಆಗ ಹೇಳಿದರು. ಆ ವರ್ಷದ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ಆನಿ ಬೆಸೆಂಟ್ ಇವಳು ತನ್ನ ಅಧ್ಯಕ್ಷ ಸ್ಥಾನದಿಂದ ವಿಚಾರಪೂರ್ಣ ಭಾಷಣವನ್ನು ಮಾಡಿದಲ್ಲದೆ ದೇಶದ ಮುನ್ನಡೆಗೆ ಅನುಸರಿಸಬೇಕಾದ ಕ್ರಮವನ್ನು ಕುರಿತು ಸೂಕ್ತ ಸಲಹೆಯನ್ನು ಇತ್ತಳು. ಆ ವರ್ಷದ 'ಹೋಂ ರೂಲ್' ಚಳುವಳಿಯನ್ನು ಸಿ.ಪಿ. ರಾಮಸ್ವಾಮಿ ಐಯ್ಯರನು 'sprang <u>to</u> the front, and kept the movement strictly within constitutional limits,' ಎಂಬಂತೆ ವಿಧಾಯಕವಾಗಿ ನಡೆಸಿದ್ದನು.

ಮದ್ರಾಸ್ ಸರಕಾರವು ಆನಿಯನ್ನು ಬಂಧಿಸಿದಾಗ ಗಾಂಧೀಜಿಯು ಅವಳ ಬೆಂಬಲಿಗರಿಗೆ ಸಹಾನುಭೂತಿಯನ್ನು ಇತ್ತರಲ್ಲದೆ ಶಂಕರಲಾಲ್ ಬ್ಯಾಂಕರನೊಡನೆ ಆ ಬಗ್ಗೆ ಒಂದು ಸತ್ಯಾಗ್ರಹವನ್ನು ನಡೆಸಲು ನಿರ್ಧರಿಸಿದ್ದರು. "Be prepared for mountains of suffering" ಎಂದು ಹೇಳುತ್ತಾ ಗಾಂಧೀಜಿ ಬೊಂಬಾಯಿಯಿಂದ ಆನಿಯ ಬಂಧನದ ಬಿಡುಗಡೆಯ ವರೆಗೂ ಪ್ರತಿಭಟನಾ ಮೆರವಣಿಗೆಯನ್ನು ನಡೆಸುವೆನೆಂದು ಸರಕಾರಕ್ಕೆ ಹೇಳಿದರು. ಇದೇ ವೇಳೆಗೆ ದೇಶದ ಸಹಸ್ರಾರು ಗಂಡಸರು ಹೆಂಗಸರಾದಿಯಾಗಿ ಅವಳ ಬೆಂಬಲಿಗರು ಪ್ರತಿಭಟನಾ ಹರತಾಳಗಳನ್ನು ನಡೆಸಿದರು.

1917ರ ಕಾಂಗ್ರೆಸ್ ಸಭೆಯಲ್ಲಿ ಆನಿಯು ಭಾರತಕ್ಕೆ "ಹೋಂ ರೂಲ್" ಇದನ್ನು ಹತ್ತು ವರ್ಷಗಳ ಒಳಗಾಗಿ ಕೊಡಬೇಕೆಂದು ಹೇಳಿದಾಗ ಕಾಂಗ್ರೆಸ್ಸಿನ ಜನವು "at an early date" ಎಂಬುದಾಗಿ ಹೇಳಿದರು. 1918ರಲ್ಲಿ Montague-Chelmsford ಸುಧಾರಣೆಗಳು ಪ್ರಕಟವಾದಾಗ ಬೊಂಬಾಯಿಯಲ್ಲಿ ಸೇರಿದ ಕಾಂಗ್ರೆಸ್ ಸಭೆಯು ಆ ಸುಧಾ

ರಕ್ಷಣೆಗಳು "inadequate, unsatisfactory and disappointing," ಎಂಬುದಾಗಿ ತಿಳಿಸಲಾಗಿತ್ತು. ಅದರಿಂದ ಅಸಮಾಧಾನಗೊಂಡ ಕಾಂಗ್ರೆಸ್ ಪಕ್ಷವೇ ಎರಡಾಗಿ ಒಡೆಯಿತು, ಗಾಂಧಿ, ತಿಲಕ್ ಮತ್ತಿತರ ತೀವ್ರಗಾಮಿಗಳು ಹೇಳುತ್ತಿದ್ದುದು ಹಿಂಸಾತ್ಮಕ ಮಾತುಗಳಂತೆ ಧ್ವನಿಸಿದ್ದುವು. ಅವರ ಆಚಾರ ವಿಚಾರಗಳೂ ಹಿಂಸಾತ್ಮಕವಾಗಿಯೇ ಕೊನೆಗೊಂಡಿತು. ಆನಿಯು ಈ ವಿಚಾರವಾಗಿ ಹೀಗೆ ಹೇಳಿದ್ದಳು:—

"The Amritasar Congress sessions of 1919 was the last attended by the representatives of the Liberal and National Home Rule Leagues. I had myself separated from Mr. Gandhi when he proposed and began civil disobedience in the spring of 1919 in a very harmless way, selling pamphlets without printer's name. But his "Hartal" having led to violence, he abandoned his campaign, confessing his (Himalayan) miscalculations. In 1920, the real fight began between Reformers and revolutionaries --- The brunt of fighting against the non-cooperation movement fell on Mr. V. S. Srinivasa Sastri and myself, probably because we foresaw, more fully than others, the inevitable dangers of the downward path to anarchy."

ಕಾಂಗ್ರೆಸ್ ಚರಿತ್ರೆಯಲ್ಲಿ ಆನಿ ಮತ್ತು ಗಾಂಧಿ ಇವರನ್ನು ಕುರಿತು:—

ಭಾರತೀಯ ಕಾಂಗ್ರೆಸ್ ಸಂಸ್ಥೆಯ ಚರಿತ್ರೆಯನ್ನು 1935 ರ ನಂತರದ ಗಾಂಧಿ ಪಕ್ಷದ ಕಾಂಗ್ರೆಸ್ಸಿನವರು ಸೇರಿ ಡಾ. ಪಟ್ಟಾಭಿಯವರಿಂದ ಬರೆಸಿದರಾದರೂ ಅದರಲ್ಲಿ ಹಿಂದಿನ ಘಟನೆಗಳು ಎಲ್ಲಾ ವಿಷಯಗಳನ್ನು ಸರಿಯಾಗಿ ಹೇಳಿದಂತೆ ತೋರುವುದಿಲ್ಲ. ಆನಿ ಬೆಸೆಂಟ್ ಇವಳ ಹೋಂರೂಲ್ ಚಳವಳಿಯು ದೇಶವಿಡೀ ಭಯಂಕರವಾಗಿ ವ್ಯಾಪಿಸಿದ್ದಾಗ ಗಾಂಧೀಜಿಯು ಬಿಹಾರಿನ ಚಂಪಾರಣ್ಯದಲ್ಲಿ ನೀಲಿ ಉತ್ಪಾದಕ ಕಾರ್ಮಿಕರ ಸಮಸ್ಯೆ ಪರಿಹಾರದ ಬಗ್ಗೆ ಹೋಗಿದ್ದರು, ಆದರೆ ಅವರ ಆ ಸಮಯವನ್ನು ತಮ್ಮ ಕೆಲಸಕ್ಕೆ ಉಪಯೋಗಿಸಿಕೊಂಡರು, ಅವರೂ ಸಾರ್ವಜನಿಕ ಚಳುವಳಿಗೆ ಸೇರಿ ಅವಳಿಗೆ ಸಹಕರಿಸಲಿಲ್ಲವೆಂಬುದಿಲ್ಲ ಆ ಕಾಂಗ್ರೆಸ್ ಚರಿತ್ರೆಯಲ್ಲಿ ಇಲ್ಲ. ಗಾಂಧೀಜಿಯ ಅನುಯಾಯಿಗಳು ಅವರು ಹೇಳುತ್ತಿದ್ದ ಅಹಿಂಸೆಯು ಹಿಂಸೆಯಲ್ಲಿ ಪರ್ಯವಸಾನವಾಗುತ್ತದೆಂದು ಖಂಡಿತವಾಗಿ ಹೇಳಿ ಅದನ್ನು ಆಗದಂತೆ ತಡೆಯಲು ಯತ್ನಿಸಿದ್ದ ವಿಷಯದಲ್ಲಿ ಆನಿ ಬೆಸೆಂಟ್ ಇವಳೊಬ್ಬಳೇ!

"There was a joint session of the All India Congress Committee and the Council of Muslim League at Allahabad at which there was a general concensus of opinion that the question of Passive Ressistance should be dropped. Mrs. Besant herself was against the idea of Passive Resistance, and the youngmen were greatly disappointed at this."

ವಿಧಾಯಕವಾಗಿ ಚಳವಳಿಯನ್ನು ನಡೆಸಿ ಬೀಸೆಂಟರ ಅಹಿಂಸಾತ್ಮಕವಾಗಿ ಆಲ್ಲದಿದ್ದಿಂದಾಗ ಆನಿಯು ಮುಂದಕ್ಕೆ "ಮಹಾತ್ಮ" ಎಂದು ಕರೆಯಲ್ಪಟ್ಟ ಗಾಂಧೀಜಿಗೆ ಹಲವು ಬಾರಿ ಹೇಳಿದರು. ಆವರ ಅಹಿಂಸಾತ್ಮಕ "ಹೋಂ ರೂಲ್" ಚಳವಳಿಯಿಂದ ದೇಶಕ್ಕೆ ಅನೇಕ ಸತ್ಪರಿಣಾಮಗಳು ದೊರೆತವು. ಆವರ ಪ್ರಭಾವಕ್ಕೆ ಆಂಗ್ಲ ಅಧಿಕಾರಿಗಳು ಅಂಜಿ ಹೆದರಿದ್ದರು. ಆವರನ್ನು ಸೆರೆಮನೆಯಿಂದ ಬಿಡುಗಡೆ ನಂತರ "Soon after her release, she repudiated Passive Resistance." ಆನಿ ಬೆಸೆಂಟ್ ಅಹಿಂಸಾ ಚಳವಳಿಯನ್ನು ಪ್ರತಿಭಟಿಸಿದರೆಂದು ಮಾತ್ರ ಕಾಂಗ್ರೆಸ್ ಚರಿತ್ರೆಯಲ್ಲಿ ಹೇಳಿದೆ.

ಅಹ್ಮದಾಬಾದಿನಲ್ಲಿ ನಡೆಸಿದ ಆನಿಯ ಬೆಸೆಂಟ್ ಕಾರ್ಯಕ್ರಮಕ್ಕೆ 1918 ರಲ್ಲಿ ಗಾಂಧೀಜಿ ಅಧ್ಯಕ್ಷರಾಗಿದ್ದರು. ಅವರು ವಿಧಾಯಕ ಚಳವಳಿಯನ್ನು ಕೈಗೊಳ್ಳಬೇಕು. ಮೊದಲು Dominion Status ಇದನ್ನು ಪಡೆದು ಅನಂತರ "ಪೂರ್ಣ ಸ್ವರಾಜ್ಯ" ದೊರೆಯುವಂತೆ ಪ್ರಯತ್ನಿಸಬೇಕು ಎಂದು ಹೇಳಿದರು. ಗಾಂಧಿ ಮತ್ತು ಅವರ ಶಿಷ್ಯರಾದ ತೀವ್ರಗಾಮಿಗಳಿಗೆ ಹಿಡಿಸಲಿಲ್ಲ. ಶ್ರೀಮತಿ ಬೆಸೆಂಟ್ ಇವರ ಹಿತಶತ್ರುಗಳು ಈಕೆ ಅಂದಿನ "ಗಾಂಧಿಗಳಿಗೆ" ಕಂಟಕಳಾಗಿ ತೋರುತ್ತಿತ್ತು. ಹಾಗಿದ್ದರೂ ಗಾಂಧೀಜಿ ತನ್ನ ಕೃತಜ್ಞತೆಯನ್ನು ತೋರಿಸುತ್ತಾ ಹೀಗೆಂದರು: "No matter if she commits hundreds of mistakes; we shall honour her."

<u>ತೀವ್ರ ಬಿನ್ನಾಭಿಪ್ರಾಯವುಳ್ಳ ರೌಲಟ್ ಶಾಸನಗಳು:</u>— ಅಹ್ಮದಾಬಾದಿನಲ್ಲಿ ಗಿರಣಿ ಕೆಲಸಗಾರರು ಮುಷ್ಕರ ಹೂಡಿ ದೊಂಬಿಯೆಬ್ಬಿಸಿದಾಗ ಗಾಂಧೀಜಿ ಗಿರಣಿಮಾಲೀಕರ ನಿಲುವನ್ನು ವಿರೋಧಿಸಿ ಉಪವಾಸ ವ್ರತವನ್ನು ಹೂಡಿದರು. ಆಗ ಆನಿ ಬೆಸೆಂಟ್ ಇವರು ಮದ್ರಾಸಿನಿಂದ ಒಂದು ತಂತಿಯನ್ನು ಕಳುಹಿಸಿ, "Do not sacrifice a great man to a small cause." ಎಂದು ಹೇಳಿದರು.

1918 ಮತ್ತು 1919 ರ ಮಧ್ಯೆ ಹೊಸ ರಾಜಕೀಯ ಸನ್ನಿವೇಶಗಳು ತಲೆದೋರಿದುವು. ರೌಲಟ್ ಶಾಸನವನ್ನು ಬ್ರಿಟಿಷ್ ಸರಕಾರವು ಜಾರಿಗೆ ತಂದಿತು. ಜನ: ಅದನ್ನು ವಿರೋಧಿಸಿ

ಚಳುವಳಿಯನ್ನು ಎಬ್ಬಿಸಲಾಯಿತು. 1919ರ ಮಾರ್ಚ 18ರಂದು ಆ ರೌಲಿಟ್ Criminal law Emergency powers ಎಂಬ ಅತ್ಯಾಚಾರಕ್ಕೆಡೆಗೊಳಿಸುವ ಕಾನೂನು ಎಂದೂ, ನ್ಯಾಯ ಮತ್ತು ಸ್ವಾತಂತ್ರ್ಯಕ್ಕೆ ಮುಚ್ಚುಗೋಲು ಹಾಕುವಂಥ ಕ್ರೂರ ವಿಧಿಯೆಂದೂ ಕಾಂಗ್ರೆಸ್ಸು ಅದನ್ನು ವಿರೋಧಿಸಿತು. ಗಾಂಧೀಜಿಯವರೋ ತಮ್ಮ ಅಸಹಕಾರ ಚಳುವಳಿಯನ್ನು ಉದ್ಘಾಟಿಸಲು ಇದೇ ಒಂದು ಸಂದರ್ಭವೆಂದೂ ತಾನು ದಕ್ಷಿಣ ಆಫ್ರಿಕಾದಲ್ಲಿ ಜಯಪ್ರದವಾಗಿ ಕೈಗೊಂಡ ಅಹಿಂಸಾತ್ಮಕ ಅಸಹಕಾರ ಚಳುವಳಿಯನ್ನು ಇಲ್ಲಿಯೂ ನಡೆಯಿಸಬಹುದೆಂದೂ ಪಣತೊಟ್ಟರು. ಅವರ ಧ್ಯೇಯಕ್ಕೆ ಸ್ವರಾಜ್ಯವನ್ನು ಪಡೆಯುವ ಮಹತ್ವವಾದ ಪ್ರಶ್ನೆಯು ತಮ್ಮ ಮುಂದಿದ್ದಾಗ ಈ ರೌಲಿಟ್ ಬಿಲ್ಲನ್ನು ವಿರೋಧಿಸುವ ಚಿಕ್ಕ ಒಂದು ಕಾರ್ಯಕ್ಕಾಗಿ ದೊಡ್ಡ ಅಸಹಕಾರ ಚಳುವಳಿಯನ್ನು ಹೂಡಬೇಕೆಂದು ಜನಕ್ಕೆ ತಿಳಿಯಲಾಗಿಲ್ಲ. ಅದು ಏನೇ ಇರಲಿ, ನಮ್ಮ ಜನರ ಮನೋಗತವನ್ನು ಚೆನ್ನಾಗಿ ತಿಳಿದಿದ್ದ ಡಾ. ಆನಿ ಬೆಸೆಂಟ್ ಇವರಾದರೋ ಗಾಂಧೀಜಿಯವರನ್ನು ಆ ಕಾರ್ಯಕ್ರಮವು ಹಿಂಸೆಗೆ ಅವಕಾಶವೀಯುವುದೆಂದು ಎಚ್ಚರಿಸಿದಳು. ಕಾಂಗ್ರೆಸ್ಸಿನ ಅಧಿಕೃತ ಚರಿತ್ರೆಯಲ್ಲಿ ಹೀಗೆ ಹೇಳಿದೆ:—

"Believing as he does in the superiority of "soul force" over material might, Mr. Gandhi was led to believe that it was his duty to employ against the Rowlett Act that weapon of Passive Resistance which he had used effectively in South Africa ---- Some moderate members publicly affirmed their apprehension as to the consequences of such a step. Mrs. Besant, with her remarkable knowledge of the psychology of the Indian temperament, warned Gandhi in the most solemn manner that any such movement as he contemplated would result in the release of forces whose potentialities for evil were quite incalculable."

<u>ಆನಿ ಬೆಸೆಂಟ್ ಹೇಳಿದ್ದು ನಿಜವಾಗಿ ಕಂಡುಬಂದುದು:</u>—ಕಾಂಗ್ರೆಸ್ ಪಕ್ಷದ ಚರಿತ್ರೆಯನ್ನು ಬರೆದವರ ಅಭಿಪ್ರಾಯದಂತೆ ಆನಿ ಬೆಸೆಂಟ್ ಬರೇ Home Rule ಮಾತ್ರ ಕೇಳಿದ್ದಳು; ತಾವು ಪೂರ್ಣ ಸ್ವರಾಜ್ಯವಾಗಬೇಕೆಂದು ಕೇಳಿದೆವು, ಆದುದರಿಂದ ತಾವೇ ಧೀರರು ಎಂಬುದಾಗಿ ಹೇಳಿಕೊಂಡಂತಿದೆ. "Indeed, her vision had

not travelled beyond the conception of Home Rule, as understood in those days.---In any case, Mrs. Besant was soon feeling out of tune both with Government and with the people."

ಈ ಹೇಳಿಕೆಯು ಸರಿಯಲ್ಲ. ಶ್ರೀಮತಿ ಬೆಸೆಂಟ್ ಇವರು ಅಂದಿನ ಪರಿಸ್ಥಿತಿಗನ್ನನುಸರಿಸಿ Home Rule, Dominion Status ಇದನ್ನು ಪ್ರಾರಂಭದಲ್ಲಿ ಬಯಸಿದರು ಅನಂತರ ಪೂರ್ಣ ಸ್ವರಾಜ್ಯವಾಗಬೇಕೆಂದು ಗಾಂಧೀಜಿಗಿಂತ ನಲ್ವತ್ತು ವರ್ಷಗಳಿಗೆ ಹಿಂದಿನಿಂದಲೇ ಹೇಳುತ್ತಾ ಬಂದಿದ್ದಳು. ಇದನ್ನು ಕುರಿತಾಗಿ ಚಾರ್ಲ್ಸ್ ಬ್ರಾಡ್ಲಾ ಇವರೊಡನೆ ಇದ್ದಾಗಲೇ, 1870 ರ ದಶಕದಲ್ಲಿ ಇಂಗ್ಲೆಂಡಿನಲ್ಲಿ ಹೇಳಿದ್ದಳು ಹಾಗೂ ಬರೆದಿದ್ದಳು. ಆಗ ಈ "ಕಾಂಗ್ರೆಸ್ ಚರಿತ್ರೆ"ಯನ್ನು ಬರೆದವರೂ ಬರೆಯುವವರೂ ಹುಟ್ಟಿದ್ದಿರಲಿಕ್ಕಿಲ್ಲ.

ಕಾಂಗ್ರೆಸ್ ಚರಿತ್ರೆಯನ್ನು ಬರೆಯುವದು ಅಂದಿನ ಪ್ರಕಾರಗಳು ಆನಿ ಬೆಸೆಂಟ್ ಪ್ರಾಯವಾದಂತೆ ಜನಪ್ರಿಯತೆಯನ್ನು ಕಳೆದುಕೊಂಡಳು ಎಂಬುದಾಗಿ ಹೇಳುತ್ತಾರೆ. ಅದು ಸಹ ಸರಿಯಲ್ಲ. ಅವಳಿಗೆ ಆಗ ಸುಮಾರು 78 ವರ್ಷ ಪ್ರಾಯ. ಹಾಗೆ ಅವಳು ಜನಪ್ರಿಯತೆಯನ್ನು ಕಳೆದುಕೊಂಡಿದ್ದರೆ ಅದು ಅವಳು ಗಾಂಧೀಜಿಯ ಅಸಹಕಾರ ಚಳುವಳಿಯನ್ನು ವಿರೋಧಿಸಿದ ಕಾರಣಕ್ಕಾಗಿ ಗಾಂಧಿಯ ಕಡೆ ಜನ ಹಾಗೆ ಹೋಗುತ್ತಾ ಬಂದರು. ಹೇಗೂ ಗಾಂಧೀಜಿಯು ಅಹಿಂಸಾತ್ಮಕ ಚಳುವಳಿಯು ಹಿಂಸಾತ್ಮಕವಾಗಿ ಕೊನೆಗೊಂಡುದನ್ನು ಇದೀಗ ಹೇಗಾದರೂ ನೋಡಿದೆ, ಗಾಂಧೀಜಿಯು ಅದು ತಪ್ಪಾಯಿತೆಂದು ಒಪ್ಪಿದ್ದಾರೆ. ಅದೇನಿದ್ದರೂ ಆನಿ ಬೆಸೆಂಟ್ ಹೇಳಿದ್ದು ನಿಜವಾಯಿತು. ಅವಳು ಗಾಂಧೀಜಿಯನ್ನು ಟೀಕಿಸಿದ್ದು ನ್ಯಾಯವಾಯಿತು! ಹಲವು ಜನ ಅಂದು ಸರಕಾರದ ಅತ್ಯಾಚಾರಕ್ಕೆ ಬಲಿಯಾದರು.

ಅದಲ್ಲ ಬಾಲಕರನ್ನು ಮಾರಿ ಜನವನ್ನು ಹಿಂಸಾಚಾರಕ್ಕೆ ಇಳಿಸುವ ಪ್ರಯತ್ನವೆಂದು ಆನಿ ಅಂದೇ ತಿಳಿದಿದ್ದಳು. ಬಾಯಲ್ಲಿ "ಅಹಿಂಸೆ"ಯೆಂಬುದಾಗಿ ಹೇಳಿಕೊಂಡರೆ ಸಾಕೇ? ಹಿಂಸಾತ್ಮಕವಾಗಿ ವರ್ತಿಸುವವರ ಮೇಲೆ ಸರಕಾರವು ನಡೆಸಿದ ದಂಡನೆಗಳನ್ನು ಉಪಯೋಗಿಸಿದರೆ ತಪ್ಪೇನೂ ಇಲ್ಲವೆಂದು ಆನಿಯು ಹೇಳಿದಾಗ ನಮ್ಮ ನಾಡಿನ "ಅಹಿಂಸಾ" ಪ್ರತಿಪಾದಕರು ಅವಳ ಮೇಲೆ ರೇಗಿಬಿದ್ದರು. ಅವಳಿಗೆ ಅನ್ವಯಿಸುವಂತೆ "bullets for brickbats" ಎಂಬ ನುಡಿಗಳನ್ನು ಹಾಸ್ಯರೂಪದಲ್ಲಿ ಬೀದಿಗಳಲ್ಲಿ ಆಡುತ್ತಿದ್ದರು.

ಹೇಗೂ ಗಾಂಧೀಜಿಯು ರಾಜಕೀಯ ಅಹಿಂಸಾತ್ಮಕವಲ್ಲ; ಅದರಿಂದ ದೇಶಕ್ಕೆ ಕ್ಷೇಮವಿಲ್ಲ, ಎಂಬುದಾಗಿ ಗೋಖಲೆ, ಟಾಗೋರ್, ಜಿನ್ನಾ ಹೀಗೆ ಹಲವಾರು ಪ್ರಾಜ್ಞರು ಹಲವು ಬಾರಿ ಹೇಳಿದ್ದಾರೆ. ಆನಿ

ಬೆಸೆಂಟ್ ಇವರ್ಯಾದರೋ ಆವರೆಲ್ಲರಿಗಿಂತಲೂ ವಿಸ್ತೃತವಾದಿಂದ ದೇಶಕ್ಕೆ ಎಚ್ಚರವನ್ನಿತ್ತಿದ್ದಳು. ಆದರೇನು ಎಂತೆಲ್ಲ, ಆಂಗ್ಲರ ಹಲವು ಸಂದರ್ಭ ಸಾಧಕ ದೇಶೀಯರು ಯಾವೊಂದೂ ವಿಚಾರವಿಲ್ಲದೆ ಬರೀ ತಮ್ಮ ಸ್ವಾರ್ಥ ವೃತ್ತಿಯಿಂದ ಗಾಂಧೀಜಿಯವನ್ನು ಹಿಂಬಾಲಿಸಿದರು. ಆಂತೆಯೇ ಚರಿತ್ರೆಗಳನ್ನು ಬರೆಯಿಸಿದರು!

<u>ಆನಿ ಬೆಸೆಂಟ್ ಇವರ ಬಗ್ಗೆ ಕಾಂಗ್ರೆಸ್ ಚರಿತ್ರೆ ಏನೂ ಹೇಳಲಿಲ್ಲ:-</u>

ಚರಿತ್ರೆಗಳನ್ನು ಬರೆಯುವವರು ಪಕ್ಷಪಾತಿಗಳಾಗಿದ್ದರೆ ಅಂದಿನ ಹಾಗೂ ಮುಂದಿನ ಜನಾಂಗವೆಲ್ಲವನ್ನು ಅವರು ವಂಚಿಸಿದಂತಾಗುತ್ತದೆ. ಕಾಂಗ್ರೆಸ್ ಸಂಸ್ಥೆ ಗಾಂಧೀಜಿಯ ನಂತರ ತುಂಬಾ ಸಾಧಿಸಿತು, ಬೇರಾರೂ ಸಾಧಿಸಲಿಲ್ಲವೆಂಬ ಅಭಿಪ್ರಾಯವನ್ನು "ಕಾಂಗ್ರೆಸ್ ಚರಿತ್ರೆ"ಯು ಹೇಳಿದಂತಿದೆ. ಗಾಂಧೀಜಿಯು 1915 ರಲ್ಲಿ 'ದೇಶಸೇವೆ'ಗೆಂದು ಆಫ್ರಿಕಾವನ್ನು ಬಿಟ್ಟು ಬಂದಾಗ ಅವರು ತನಗಿಂತ ೨-೩ ವರ್ಷಗಳಿಗೂ ಹಿರಿಯವರಾದ ತತ್ವಜ್ಞಾನಿ ಆನಿ ಬೆಸೆಂಟ್ ಇವರೊಡನೆ ಕಾಂತಿ ಪಡೆದಿದ್ದರೆ ಪರಿಸ್ಥಿತಿ ನಿಜಕ್ಕೂ ಹಿಂಸಾತ್ಮಕವಾಗಿ ಮಾರ್ಪಡುತ್ತಿರಲಿಲ್ಲ. ಗಾಂಧೀಜಿಯ ರಾಜಕೀಯ ನೀತಿಯನ್ನು ಕಂಡು ತುಂಬಾ ನಿರಾಶನಾದ ಮತ್ತು ಗಾಂಧಿಯನ್ನು ತನ್ನ Servants of India Society ಎಂಬ ಸಂಸ್ಥೆಗೆ ಸದಸ್ಯನಾಗಲು ಬಿಡದ ಶ್ರೇಷ್ಠ ವಿದ್ವಾಂಸ ರಾಜಕಾರಣಿ ಗೋಪಾಲಕೃಷ್ಣ ಗೋಖಲೆಯು ಇನ್ನೊಂದು ನಾಲ್ಕಾರು ವರ್ಷಗಳ ಕಾಲ ಬದುಕಿದ್ದರೆ ಗಾಂಧೀಜಿಯು ಈ ದೇಶದಲ್ಲಿ ನಿಲ್ಲದೆ ಪಾಪಾಸು ದಕ್ಷಿಣ-ಆಫ್ರಿಕಾಕ್ಕೆ ಹೋಗುವ ಪರಿಸ್ಥಿತಿ ನಿಜಕ್ಕೂ ಉಂಟಾಗುತ್ತಿತ್ತು. ಆದರೆ ದೈವೇಚ್ಛೆಯು ಬೇರೆಯಾಯಿತು.

ಅಷ್ಟೇ ಅಲ್ಲ, ಆನಿ ಬೆಸೆಂಟ್ ಅವರು ನಡೆಸಿದ್ದ New India, Commonweal ಮತ್ತು The Theosophist -- ಈ ಪತ್ರಿಕೆಗಳನ್ನೆಲ್ಲ ಇಂದು ಪುನರ್ಮುದ್ರಣ ಮಾಡಿದರೆ ಅವರ ರಾಜಕೀಯವೆಂತಿತ್ತು, ಗಾಂಧೀಜಿಯ ಪ್ರಭಾವಿತ ರಾಜಕೀಯವು 1919 ರಲ್ಲಿ ಕಾಂಗ್ರೆಸ್ಸನ್ನು ಹೇಗೆ ಎಳೆದಾಗಿಸಿತೆಂಬುದೆಲ್ಲ ವ್ಯಕ್ತವಾಗುತ್ತದೆ. ಕಾಂಗ್ರೆಸ್ ಚರಿತ್ರೆಯಲ್ಲಿ ~~ಆನಿ~~ ಬೆಸೆಂಟರ ವಿಷಯವಾಗಿ ಹೀಗೂ ಹೇಳಿದೆ:-

"Gandhi was doubtless greatly shocked by the unexpected turn of events had taken, and admitted that he made 'a blunder of Himalayan dimensions" which had enabled ill-disposed persons, not true passive resistors at all, to perpetuate disorders ----Now was the turn of Government to restore order---- Mrs. Besant who had all along been fighting Gandhi (?)

said that the Rowlett Bills contained nothing which an honest citizen should object to, and wrote that "When the mob begins to pelt them (soldiers) with brickbats, it is more merciful to order the soldiers to fire a few volleys of buck-shot."

"This gave rise to the expression "Bullets for Brickbats" associated since then her name, and Mrs. Besant virtually at the nadir of her popularity since that time ---- Sir Dinshaw Wacha "declared himself convinced that Government was justified in the attitude it had assumed towards the Indemnity Bill." A definite cleavage of parties came thus into existence since April 1919. Gandhi announced the suspense of Passive Resistance."

ಇದಿಷ್ಟೇ ಅಲ್ಲ; ಈ ಕಾಂಗ್ರೆಸ್ ಚರಿತ್ರೆ ಪೂರ್ತಿ ವಿಚಾರ ಹೇಳುತ್ತಿಲ್ಲ. ಕಾಂಗ್ರೆಸಿನೊಳಗೇನೇ ಒಡಕುಂಟಾದುದು ಮಾತ್ರವಲ್ಲ. ಹಲವು ದೇಶೀಯರು ಹಿರಿಯರು ಮುಂದಾಳುಗಳು ಹಳೆ ರಾಷ್ಟ್ರೀಯ ಕಾಂಗ್ರೆಸ್ಸಿನಿಂದ ದೂರವಾದರು. ಆನಿಯಾದರೋ ಏಕಾಂಗಿಯಾಗಿ ತನ್ನ ತತ್ವವನ್ನು ಹಿಡಿದು ಗಾಂಧೀಜಿಯ ಅಸಹಕಾರ ನೀತಿ, ಪೂರ್ಣ ಸ್ವರಾಜ್ಯ ನೀತಿಗಳಿಗೆ ಸಮ್ಮತಿಯುವಲ್ಲವೆಂದು ಹೇಳುತ್ತಲೇ ಇದ್ದಳು. ಬಾಲಗಂಗಾಧರ ತಿಲಕ್, ದಾದಾಭಾಯಿ ನವರೋಜಿ, ಫಿರೋಜ್ ಶಾ ಮೆಹತಾ ಮೊದಲಾದವರು ಆ ವೇಳೆಗೆ ಮೃತರಾಗಿದ್ದರು. ಪರಿಸ್ಥಿತಿ ಹಾಗಿದ್ದಾಗ ಗಾಂಧಿಯು ತನ್ನ ಪಕ್ಷಕ್ಕೆ ಹೊಸದಾಗಿ ಸೇರಿದ ಸಂದರ್ಭಸಾಧಕ ರಾಜಕಾರಣಿಗಳನ್ನು ಹೊಗಳುತ್ತಾ, ಅವರನ್ನೆಲ್ಲ ದೇಶಕ್ಕೆ ಪರಿಚಯ ಮಾಡಿಸುತ್ತಾ ಇದ್ದನು. ಹಾಗೆ ಸೇರಿದವರಲ್ಲಿ ಮೋತಿಲಾಲ ನೆಹರು ಇವನು ಪ್ರಮುಖನು.

<u>ದೇಶವು ತಪ್ಪು ದಾರಿಯನ್ನು ಹಿಡಿದು ಸಾಗುತ್ತಿದೆ ಎಂದಳು:—</u>

1947ರಲ್ಲಿ ದೇಶಕ್ಕೆ ಸ್ವರಾಜ್ಯ ದೊರಕಿತಷ್ಟೆ! ಆದರೆ ಅದೆಂಥಾ ಸ್ವಾತಂತ್ರ್ಯ? ಶೇಕಡ ೩೦ರಷ್ಟು ವಿಶಾಲ ಭೂಭಾಗವು ಬೇರೆಯಾದ ದೇಶವಾಗಿ ಒಡೆದು ದೊರೆತ ಸ್ವಾತಂತ್ರ್ಯವದೇತರದ್ದು? ಆನಿ ಬೆಸೆಂಟ್ ಇದ್ದಿದ್ದರೆ ಅವಳು ಅದಕ್ಕೆ ಒಪ್ಪುತ್ತಿದ್ದಳೇ? ಏನನ್ನುತ್ತಿದ್ದಳು ಅವಳು? ಆಗ ಅವಳು ಹೇಳಿದ ಒಂದು ಮಾತು ಇಂತಿದೆ:— "A little handful of us stood against non-cooperation programme, against the crowd of Muslims supported by the Hindu extremists."

ಅಷ್ಟೇ ಅಲ್ಲ, 1922ರ ಜೂನ್ 30ರಲ್ಲಿ ಆನಿಯಳು ತನ್ನ "New

India" ಪತ್ರಿಕೆಯಲ್ಲಿ ಈ ದೇಶದ ಮಹಮ್ಮದೀಯರು ಮತ್ತು ಹಿಂದೂ ಜನಗಳ ಸಂಘಟನೆಯು ಹೇಗೆ ಮುರಿದು ಹೋಯಿತೆಂಬುದನ್ನು ಬಹಳ ಬೇಸರದಿಂದಲೇ ಉದ್ಗರಿಸಿದ್ದಾರೆ:—

"Now that, after 37 years (from 1882) of constitutional struggle for freedom, India has won the Reform Act of 1919, which gave much power and by which we shall win Home Rule— there is arising anew the old tendency to disintegration that enabled the East India Company to acquire rule over India, and this is the greatest danger which threatens India today. Hindu and Muslim had been drawn together into a political union by the patient work of patriots belonging to both great religions. On the Congress platform in Lucknow in 1916, B. G. Tilak and Madan Mohan Malaviya together stood side by side with Muslim leaders from all parts of India. For the first time the Vedas and Al Quran spoke as a united India, together claimed Self-Rule."

ಹಾಗೆ ನಡೆದುಕೊಂಡು ಬಂದ ಭಾರತೀಯರ ಜನಜಾಗೃತಿಯು ಪರಂಪರೆಯು ಅದೇಕೋ 1920 ರಿಂದ ಕಡಿದು ಹೋಯಿತು. ಮಹಮ್ಮದೀಯರು ಹಿಂದೂ ತೀವ್ರಗಾಮಿಗಳೊಡನೆ ಸೇರಿ ಹಿಂಸಾತ್ಮಕ ರೀತಿಯಲ್ಲಿ ವರ್ತಿಸಿದರು, ಅನಿ ಬೆಸೆಂಟ್ ಇವರ ಆಚಾರ್ಯರು ದಂತೆ ಗಾಂಧೀಜಿಯೂ ಓರ್ವ ಹಿಂದೂ ತೀವ್ರಗಾಮಿಯೇ ಆಗಿದ್ದರು, ತನ್ನದೇ ಆದ ಚಳವಳಿ ನೀತಿಯನ್ನು ಸಾಧಿಸಲು ಅನಿ ಬೆಸೆಂಟ್, ಟಾಗೋರ್, ಆಂಡ್ರ್ಯೂಸ್, ಬಿಪಿನ್ ಪಾಲ, ರಾಮಸ್ವಾಮಿ ಮೊದಲಿಯರ್, ಜಿನ್ನಾ, ಸಪ್ರೂ, ಶ್ರೀನಿವಾಸ ಶಾಸ್ತ್ರಿ ಇಂಥ ಪ್ರಭಾವಿತರ ಮಾತನ್ನು ಕೇಳದೆ ಗಾಂಧೀಜಿಯವರು ಮಹಮ್ಮದೀಯರ 'ಜಾತೀಯವಾದಿಗಳಾದ ಮಹಮ್ಮದಾಲಿ ಮತ್ತು ಶೌಕತ್ ಆಲಿ ಎಂಬ ಸಹೋದರರನ್ನು ಕೂಡಿಕೊಂಡು ಅದೇಕೋ ಪರರ ಖಿಲಾಫತ್ ಚಳವಳಿಗೆ ಸಹಾನುಭೂತಿಯನ್ನು ತೋರಿಸಿ ದೇಶದ ಮಹಮ್ಮದೀಯರನ್ನು ಆ ರೀತಿಯಾಗಿ ಕೆರಳಿಸಿ ಅದರನಂತರ ಹಿಂದೂ ಮತ್ತು ಮುಸಲ್ಮಾನರು ಹೊಂದಾಣಿಕೆಯಿಂದ ಪ್ರಯತ್ನಿಸಿದಾಗ ಅದು ಹೊಂದದು ಬಿಟ್ಟು ಮತ್ತೆ ದೊಡ್ಡ ಹೋರಾಟಗಳಾಗಿ ಕಡೆಗೆ 1937ರ ಶಾಸ್ತ್ರೋಕ್ತ ಸರಕಾರವನ್ನು ಭಾರತೀಯರಿಗಿತ್ತಾಗ ಅದು ಇನ್ನಷ್ಟು ಬಿಗಡಾಗಿ ತೋರ್ಪಡಿಸಿಕೊಂಡಿತು, ಅನಿ ಬೆಸೆಂಟ್

ಇವರು 1922ರಲ್ಲಿಯೇ ಇದನ್ನೆಲ್ಲ ಅದೆಷ್ಟು ಸ್ಪಷ್ಟಪಡಿಸಿದ್ದಾರೆಂ ಬುದು ಇದರಿಂದ ವ್ಯಕ್ತವಾಗುತ್ತದೆ:—

"Since then (the Lucknow Congress of 1916) has been revived the old Muslim fanaticism, which declares itself Islamic more than Indian and which places its centre outside India. The fair peace that had been made was broken, and Hindu threatened with subjection to the Mussalman."

ಈ ಮಾತು ಎಷ್ಟು ಸತ್ಯವಾಗಿ ಪರಿಣಮಿಸಿತೆಂದು 1937ರಿಂದ 1947ರ ಮಧ್ಯಕಾಲದ ಚರಿತ್ರೆಯನ್ನು ತಿಳಿದವರಿಗೆ ಮತ್ತು ದೇಶವೇ ಎರಡಾಗಿ ಒಡೆದು ಹೋದುದರ ದುರಂತವನ್ನು ನೋಡಿದವರಿಗೆ ತಿಳಿಯಬಹುದು.

ಮುಸಲ್ಮಾನರ ಸಖ್ಯಕ್ಕೆ ಯತ್ನಿಸಿದಾಗ ದೇಶವು ಹಿಂದಾಗುತ್ತದೆ:—

ಗಾಂಧೀಜಿಯವರು ಗೋಪಾಲಕೃಷ್ಣ ಗೋಖಲೆಯವರನ್ನು ಗುರುವೆಂದು ಕಂಡಿದ್ದರಂತೆ! ಆದರೆ 'ಗುರು'ವಿಗೆ ಈ ಶಿಷ್ಯನ ರಾಜಕೀಯ ರೀತಿ ನೀತಿಯಲ್ಲಿ ಏನೊಂದು ಅಭಿಮಾನವಿದ್ದಿಲ್ಲವೆಂದು ಹಿಂದೆಯೇ ಹೇಳಿದೆವಷ್ಟೆ! ಹೇಗೂ 1915ರ ನಂತರ ಗಾಂಧೀಜಿಯವರು ಆನಿ ಬೆಸೆಂಟರನ್ನೂ ಅಂತೆಯೇ ಕಾಣಬಹುದಿತ್ತು ಎಂದು ಖಂಡಿತ ಹೇಳಬಹುದು. ಹೇಗೂ ಗೋಖಲೆಯವರ ನಂತರವೇ ಗಾಂಧೀಜಿಯವರು ಮುಸಲ್ಮಾನರ ಸಖ್ಯ ಯತ್ನಿಸಿದರೆಂಬುದು ಅವರ 1916ರ ಬನಾರಸ್ ಭಾಷಣ, 1917ರ ಆನಿಯವರ 'ಹೋಂ ರೂಲ್' ಚಳವಳಿಯ ವೇಳೆಗೆ ಗಾಂಧೀಜಿ ಅದರಿಂದ ಹಿಂದು ಚಂಪಾರಣ್ಯದ ನೀಲಿಗೆ ಹೋದುದು; 1918ರಲ್ಲಿ ಕೇವಲ ನಿರ್ಲಕ್ಷ್ಯ ಕಾರಣಕ್ಕೆ ಅಹಮದಾಬಾದ್ ಕಾರ್ಮಿಕರ ಪರವಾಗಿ ಉಪವಾಸ ಹೂಡಿದುದು, 1919ರಲ್ಲಿ ಹಿರಿಯ ಮುಂದಾಳುಗಳ ಮಾತನ್ನು ಕೇಳದೆ ರೌಲೆಟ್ ಕಾನೂನನ್ನು ವಿರೋಧಿಸಿ ದೇಶದಲ್ಲಿ ಹಿಂಸಾಚಾರಕ್ಕೆ ಅವಕಾಶವಿತ್ತುದು, 1920ರಲ್ಲಿ ಮೃದು ಹೃದಯದ ಮಹಮ್ಮದೀಯರ ವಿಶ್ವಾಸವನ್ನು ಸಂಪಾದಿಸಲು ದೂರದ ಟರ್ಕಿ ದೇಶದ ಖಿಲಾಫತ್ ಚಳವಳಿದ ಗುಲ್ಲೆಬ್ಬಿಸಿದ್ದು, ಅಲಿಯರು ಅಂಗಭೂತ ಮಾರ್ಗದರ್ಶಿಯಾಗಿದ್ದುದರಿಂದ ಗಾಂಧೀಜಿ ದಕ್ಷಿಣ ಹಿಂದುಸ್ಥಾನದಲ್ಲಿ ಸಹ ತಮ್ಮ ಗುಜರಾತೀ 'ಅಧಿಮಾ ಹಿಂದೀ' ಭಾಷೆಗಳಲ್ಲಿ ಭಾಷಣಗಳನ್ನು ಕೊಡುತ್ತಿದ್ದುದು, ಕೇವಲ ಅಶಿಕ್ಷಿತ ನಿರಕ್ಷರ ಜನಸಾಮಾನ್ಯರನ್ನು ಸಂತೃಪ್ತಿಗೊಳಿಸಲು ಅರೆಬೆತ್ತಲೆಯಿಂದ ಕಾಣಿಸಿಕೊಂಡಿದ್ದು ಇತ್ಯಾದಿ ಘಟ್ಟಗಳೆಲ್ಲ ಕೇವಲ ತಾನೇ ದೇಶದ ಮುಂದಾಳು ಎನಿಸಿಕೊಳ್ಳಲು ಅನುಸರಿಸಿದ ತಂ

ತ್ರವೆಂದು ಅಂದೇ ಜನ ತಿಳಿದಿದ್ದರು. ಅದಕ್ಕೆ ಬದಲಾಗಿ ಕಾಂಗ್ರೆಸ್ಸಿನ ಬಗ್ಗೆ ಸತ್ಯವನ್ನು ಅಂತೆಯೇ ಕಾಪಾಡಿ ಅನಿ ಬೆಸೆಂಟ್ ಇವರನ್ನು ಪ್ರಸನ್ನಗೊಳಿಸಿದ್ದರೆ ಚರಿತ್ರೆಯೇ ಬೇರೆಯಾಗುತ್ತಿತ್ತು. ಈಗ ಆಗಿಹೋದುದಕ್ಕಿಂತಲೂ ಎಷ್ಟೋ ಉತ್ತಮವಾಗುತ್ತಿತ್ತು.

ನಮ್ಮ ಜನರು ಚೆನ್ನಾಗಿ ತಿಳಿಯದೇ ಇದ್ದ ವಿಷಯಗಳು ಹಲವು ಇವೆ. ಅನಿಯು ಸರ್ವ ಧರ್ಮಯೋಗಿನಿ, ಸತ್ಯ ಮತ್ತು ಅಹಿಂಸೆಯನ್ನು ನಿಷ್ಠೆಯಿಂದ ಪಾಲಿಸಿದವಳು; ಕ್ರೈಸ್ತ ಧರ್ಮದ ಅಂಧಶ್ರದ್ಧೆಯನ್ನೆಲ್ಲ ಖಂಡಿಸಿ ತತ್ವಜ್ಞಾನಿಯಾಗಿ ಮಾರ್ಪಟ್ಟು, ಯಾವನಿಷ್ಠ ಹಿಂದೂ ಯೋಗಿಯನ್ನು ಮೀರಿದ ಮಹಾವಿದುಷಿಯಾಗಿ, ಪ್ರತಿ ವರ್ಷವೂ ಪ್ರಾರಂಭದ ಉದ್ದಗಲಕ್ಕೂ ಆ ಕಾಲದಲ್ಲಿ ಕಾರ್ಯಾಸಕ್ತವಾಗಿ ಸಂಚರಿಸುತ್ತಾ ಇದ್ದ ವಿಶ್ವವಿಖ್ಯಾತ ವಾಗ್ಮಿ ಮತ್ತು ಕವಯಿತ್ರಿಯಾಗಿದ್ದಳು. ಗಾಂಧೀಜಿಯವರೇ ತಾನು ದಕ್ಷಿಣಾಫ್ರಿಕಾದಲ್ಲಿ ಹಾಗೆ ಮಾಡಿದೆ ಹೀಗೆ ಮಾಡಿದೆ ಎಂದೆನ್ನುತ್ತಾ, ಈ ದೇಶದಲ್ಲೂ ಅದೊಂದು ತರಹದ ರಾಜಕೀಯವನ್ನು ತಂದರು. "ಸತ್ಯಶೋಧನೆ"ಯೆಂಬ ತಮ್ಮ ಗ್ರಂಥದಲ್ಲೂ ಅವರು ಎಲ್ಲ ವಿಷಯವನ್ನು ಹೇಳಲಿಲ್ಲ. ಹೇಳದೇ ಬಿಟ್ಟುದು ಅದೆಷ್ಟೋ ಇವೆ.

ಅನಿಯು ವಿರೋಧಿಯಾಗಿ ವರ್ತಿಸುವ ಅವಶ್ಯವೇನೂ ಗಾಂಧೀಜಿಗೆ ಬೇಕಾಗಿರಲಿಲ್ಲ. ಅವಿವೇಕಿ ಜನಕೋಟಿಯು ಸಂತಾಪಕ್ಕೆ ತಕ್ಕಂತೆ ರಾಜಕೀಯವನ್ನು ಹೂಡುವ ಅಗತ್ಯವಿದ್ದಿಲ್ಲ. ಅನಿಯು ಹೇಳಿದ Dominion Status ಸ್ವಾತಂತ್ರ್ಯಕ್ಕೆ ಮೊದಲ ಹೆಜ್ಜೆಯೆಂಬುದನ್ನು ಗಾಂಧೀಜಿ ಮತ್ತು ಅವರ ಕಡೆ ಸೇರಿದ ಜನ ಅದನ್ನು ಕಡೆಗಣಿಸಬೇಕಾಗಿರಲಿಲ್ಲ; ಏನೇ ಇರಲಿ! ಹೀಗೆ ಮುಂದಾಳ್ತನಕ್ಕೆ ಹೋರಾಗಿದಾಗ ದೇಶವು ಬಡವಾಗುತ್ತದೆ. ಅದಾಗಲೇ ಆಗಿಹೋಗಿದೆ!

<u>ಕಾಂಗ್ರೆಸ್ ಚರಿತ್ರೆಯಲ್ಲಿ ಗಾಂಧೀಜಿಯ ಚರಿತ್ರೆ ಮಾತ್ರ ಇದೆ:—</u> ತನ್ನ New India ಪತ್ರಿಕೆಯಲ್ಲಿ ತಾನು ಪ್ರತಿಪಾದಿಸಿದ್ದ Home Rule ಇದರ ಅರ್ಥವೇನೆಂಬುದನ್ನು ಅನಿ ಬೆಸೆಂಟ್ ಹೀಗೆ ವ್ಯಕ್ತಪಡಿಸಿದ್ದಾಳೆ:—

"The Congress passed a resolution that the goal of India is Independence, and that is obvious. No one can suppose that India is to be for ever a subject Nation. Dominion status would place India in a position of equality in the Commonwealth of Free Nations linked together by the British crown---- To me, Independence is India's inevitable destiny. The first step to it is Dominion Status, Home Rule. For that I

I helped to frame the Commonwealth of India Bill, which has been in the House of Commons since 1925."

ನಮ್ಮ ಚರಿತ್ರೆಯು ಈ ರೀತಿಯಾಗಿ ಅವಿಭಾಜ್ಯ ಭಾರತವಾಗಿ ಇರಬಹುದಾಗಿದ್ದಂಥಾ ದಾರಿಯನ್ನು ತಪ್ಪಿಸಿಕೊಂಡಿತು. ಡಾ. ಪಟ್ಟಾಭಿಯವರಿಂದ ಗಾಂಧೀಜಿ ಮತ್ತು ಇತರರು ಸೇರಿ ಬರೆಸಿದ ಕಾಂಗ್ರೆಸ್ ಚರಿತ್ರೆಯಲ್ಲಿ ಗಾಂಧೀಜಿ ತನ್ನದೇ ದಾರಿ ಹಿಡಿದಿದ್ದು, ಆನಿ ಬೆಸೆಂಟ್ ಇವಳ ನಿಲುವನ್ನು ಪೂರ್ತಿ ಹೇಳದೇ ಬಿಟ್ಟಿದ್ದು ಮತ್ತು ಇತರ ಅನಗತ್ಯ ವಿಷಯಗಳು ಮಾತ್ರ ಇವೆ. ಗಾಂಧೀಜಿಯೇ ಕಾಂಗ್ರೆಸ್ಸಿನ ಮಹಾ ಶಕ್ತಿಯೆಂಬಂತೆ ವಿಚಾರಗಳನ್ನು ಹೇಳಲಾಗಿದೆ. ಅಷ್ಟೇ ಅಲ್ಲ, ಗಾಂಧೀಜಿ ಮಾಡಿದ್ದೇ ಎಲ್ಲಾ ಸರಿ, ಗಾಂಧೀಜಿಯ ವಿರೋಧಿಗಳೆಲ್ಲ ಪಾಪಿಗಳು ಎಂಬಂತೆ ಚರಿತ್ರೆಯನ್ನು ಬರೆಯಲಾಗಿದೆ:—

"Gandhi always treated her (Mrs. Besant) with reverence and was always in the habit of rising from his seat to receive her---- but she treated him and the Congress contemptuously even till 1930."

ಹೌದು, 1924ರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿ ಅಧ್ಯಕ್ಷರು. ವೇದಿಕೆಯ ಮೇಲಿದ್ದಾಗ್ಯೂ ಆನಿ ಬೆಸೆಂಟ್ ಬಂದಳು. ಗಾಂಧೀಜಿ ಗೌರವಾರ್ಥವಾಗಿ ಎದ್ದು ನಿಂತರು; ಆಗ ಇಡೀ ಸಭೆಯೇ ಎದ್ದು ನಿಂತಿತು. ಸರಿ! ಆದರೆ ಅವಳ ಹೇಳಿಕೆಯನ್ನು ತಿರಸ್ಕರಿಸಿ ತನ್ನ ಮೊಂಡುತನವನ್ನು ಸಾಧಿಸಲು ಗಾಂಧೀಜಿಯು ಕಾಂಗ್ರೆಸ್ಸಿನಲ್ಲಿ ತನ್ನದೇ ಪಕ್ಷವನ್ನು ನಿರ್ಮಿಸಿಕೊಂಡು ನಡೆಸಿದ ವ್ಯವಹಾರವು ದೇಶಕ್ಕೆ ಹಿತವಾಗಲಿಲ್ಲವೆಂಬುದನ್ನು ಇತ್ತೀಚಿಗಿನ ಜನವು ಕಂಡು ನೋಡಿದ್ದೇ ಆಗಿದೆ.

ಆನಿ ಬೆಸೆಂಟ್ ಇವಳು ಗಾಂಧೀಜಿಯನ್ನಾಗಲೀ ಅವರ ಕಾಂಗ್ರೆಸ್ಸನ್ನಾಗಲೀ ಮೂದಲಿಸಿದ್ದಿಲ್ಲ; ಬದಲಾಗಿ ದೇಶದ ನಾಯಕರು [illegible] ಯಾರಾರು ಎಂದು ತಿಳಿದುಕೊಳ್ಳಲಾರದ ಹಳ್ಳಿಯ ಜನವನ್ನು ಹಳಿದಳು. ಗಾಂಧೀಜಿ 1915ರಿಂದ 1921ರ ವರೆಗೆ ಅನುಸರಿಸಿದ ಅವರ ರಾಜಕೀಯವು ತಪ್ಪಿತ್ತು, ದೇಶದ ಜನಕ್ಕೆ ಅದನ್ನು ತಿಳಿಯುವ ಶಕ್ತಿಯಿರಲಿಲ್ಲ. ಆದರೆ ಭಾರತ ರಾಜಕೀಯದಲ್ಲಿ ನುರಿತಿದ್ದ ಆನಿ ಬೆಸೆಂಟ್ ಇವಳಿಗೆ ಎಲ್ಲಾ ವಿಷಯ ತಿಳಿದಿತ್ತು. ಈ ಎಲ್ಲ ವಿಷಯವನ್ನು ಕಾಲದಿಂದ ಕಾಲಕ್ಕೆ ಬಲ್ಲವರು ಹೇಳುತ್ತಾ ಬಂದಿದ್ದಾರೆ.

ಗಾಂಧೀಜಿ ತನಗೆ ಬೇಕಾದಂತೆ ತನ್ನ ಜನವನ್ನು ಹೊಗಳಿದರು:—

ಕ್ರಿ. ಶ. 1920ರಿಂದ ಕಾಂಗ್ರೆಸ್ಸಿನ ಅಧ್ಯಕ್ಷರಾದವರೆಲ್ಲ ಗಾಂಧೀಜಿಯ ಅನುಯಾಯಿಗಳು, ಸಹಚರರು, ಸಂದರ್ಭಸಾಧಕರು, ಇತ್ಯಾದಿ! ಅವರಲ್ಲಿ ಹಲವರು ದೇಶಾಭಿಮಾನಿಗಳೇನೂ ಅಲ್ಲ. ಆದರೂ ಗಾಂಧೀಜಿ ಅವ

ರನ್ನೆಲ್ಲ ಜನಶಕ್ತಿ ತೋರಿಸಿದರು. ಆಗ ಅವರಲ್ಲಿ ಹಲವರು ಧೋತ್ರವನ್ನು ಹೊದ್ದುಕೊಂಡ ವೇಷಧಾರಿಗಳಾದರು. ಆನಿ ಬೆಸೆಂಟ್ ಇವಳಿಗೆ ಪ್ರಾಯ ಮೀರಿತೆಂದೂ ಇನ್ನು ಅವಳ ಹಿಂದೆ ಓಡಾಡಿ ಪ್ರಯೋಜನವಿಲ್ಲವೆಂದೂ ಭಾವಿಸಿ ಗಾಂಧೀಜಿಯ ಜತೆ ಸೇರಿದವರು ಇನ್ನು ಹಲವರು.

ಮೋತಿಲಾಲ್ ನೆಹರುರವರಿಗೆ ದೇಶಸೇವೆಯ ಹಾದಿ ತೋರಿಸಿದ್ದು ಆನಿ ಬೆಸೆಂಟ್ ಇವಳು. ಅವನು 1918 ರಿಂದ ಗಾಂಧಿಯನ್ನು ಸೇರಿದನು. ಕೊನೆಗೆ ಅವನನ್ನು ಗಾಂಧೀಜಿಯು ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷನನ್ನಾಗಿ ಮಾಡಿದನು. ಅಷ್ಟೇ ಅಲ್ಲ, ಅವನೊಬ್ಬ ಭಾರಿ ಐಶ್ವರ್ಯವಂತ ವಕೀಲ; ಅವನು ದೇಶಕ್ಕಾಗಿ ಮಾಡಿದ ತ್ಯಾಗ ಅಪಾರ ಎಂದೆಲ್ಲ ಹೇಳಿದನು. ಆ ಕಾಲದಲ್ಲಿ ಅಣಬೆಗಳಂತೆ ಹಲವು ಬಗೆಯ ಹಲವು ಬಣ್ಣದ "ದೇಶ ಸೇವಕರ" ಸೃಷ್ಟಿಯು ಆಗುತ್ತಿತ್ತು.

ಈ ಮೋತಿಲಾಲನ ಮಗನೇ ಜವಾಹರಲಾಲ ನೆಹರು! ಇವನೂ ಬನಾರಸ್, ಅಲ್ಲಹಾಬಾದ್‌ಗಳಲ್ಲಿ ಆನಿ ಬೆಸೆಂಟಳ ಪ್ರಭಾವಕ್ಕೆ ಒಳಗಾಗಿದ್ದನು. ಇವನು ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಹೋದನು. ಆಗಲೇ ಏನೇನೋ ಬಗೆಯ ರಾಜಕೀಯ ತಲೆಯಲ್ಲಿ! ಅಲ್ಲಿಂದಲೂ ತಂದೆಗೆ ಪತ್ರಗಳು. 1908 ರ ಕಾಲದಲ್ಲಿ ತಂದೆ ಮೋತಿಲಾಲ ನೆಹರು ಮಗನಿಗೆ ಅವನ ರಾಜಕೀಯದ ಮೋಹ ತನಗೆ ಹಿಡಿಸುವುದಿಲ್ಲವೆಂದೂ ತಿಳಿಸಿದನು. ಆ ಜವಾಹರಲಾಲನು ಭಾರತಕ್ಕೆ ಹಿಂದಿರುಗಿ ಯಾವೊಂದು ವೃತ್ತಿಯಲ್ಲಾಗಲೀ ತನ್ನದೇ ವಕೀಲತನ ವೃತ್ತಿಯಲ್ಲಾಗಲೀ ಯಶಸ್ವಿಯಾಗಲಿಲ್ಲ. ತಂದೆ ಮೋತಿಲಾಲನಿಗೆ ಅದೊಂದು ದೊಡ್ಡ ತಲೆನೋವಾಗಿತ್ತು. ಅವರ ಅಲ್ಲಹಾಬಾದ್ ಮನೆಯಲ್ಲಿ ತಂದೆ ಮತ್ತು ಮಗ ಇವರೊಳಗೆ ಯಾವಾಗಲೂ ಆ ಕಾರಣದಿಂದ ಕಾದಾಟ ನಡೆಯುತ್ತಿತ್ತು.

1924 ರಲ್ಲಿ ಗಾಂಧೀಜಿಯು ಜವಾಹರಲಾಲನಿಗೆ ಒಂದು ಪತ್ರ ಕೊಡುವವನೋ ಕೋಟಿಜನ ಆಧ್ಯಾತ್ಮಿಕ ಬುದ್ಧಿಯನ್ನು ತಿದ್ದಲು ಪ್ರಯತ್ನಿಸುವಂತೆ ಹೇಳಿದರು. ಆದರೆ ಜವಾಹರಲಾಲನ ಅಭಿರುಚಿಯೇ ಬೇರೆ! ರಾಜಕೀಯವೇ ತಲೆಯಲ್ಲಿ ಹೆಚ್ಚು ಇರುತ್ತಿದ್ದಿತು. ಹೀಗೂ ಗಾಂಧೀಜಿ ಅವನನ್ನು ತನ್ನ ರೆಕ್ಕೆಯ ಅಡಿಯಲ್ಲಿಟ್ಟು ಪೋಷಿಸಿದ್ದಂತೆ ತೋರಿತು. ಈ ಜವಾಹರಲಾಲನೂ ಮಹಾ ದೇಶಸೇವಕ, ಒಳ್ಳೆಯ ವ್ಯಕ್ತಿ, ವಜ್ರದಂಥಾ ಸ್ವಚ್ಛ ಹೃದಯ ಎಂದೆಲ್ಲ ಹೊಗಳುತ್ತಾ ಜನದ ಮುಂದೆ ಇಟ್ಟಾಗ ಆ ಜವಾಹರಲಾಲನೂ ಒಬ್ಬ "ಮೋಟಾ ಮಹಾತ್ಮ" ನೆನಿಸಿದನು. 1920 ರ ದಶಕದಲ್ಲಿ ಗಾಂಧೀಜಿಯು ಬಹುಮತಕ್ಕಾಗಿ ತನ್ನ ರಾಜಕೀಯ ನೀತಿಯನ್ನು, ಅಹಿಂಸಾ ಧೋರಣೆಯನ್ನು ಸಾಧಿಸಲು ಈ ಬಗೆಯ ಹಲವು ವ್ಯಕ್ತಿಗಳನ್ನು ತನ್ನ ಜತೆಗೆ ಸೇರಿಸಿಕೊಂಡರು. ಅವರ ಪೈಕಿ ಹಿಂದೆಯೇ ಹೇಳಿದ ಮಹಮ್ಮದಾಲಿ-ಶೌಕತ್ತಾಲಿ ಸಹೋದರರು; ಕೇವಲ ಮಹಮ್ಮದೀಯ ಮತಾಂಧರು, ಇವರೂ ಇದ್ದರು!

'ಕಾಂಗ್ರೆಸ್ ಚರಿತ್ರೆಯನ್ನು ತಮಗೆ ಬೇಕಾದಂತೆ ಬರೆಸಿದರು:—

ಕಾಂಗ್ರೆಸ್ ಸಂಸ್ಥೆಯ ಚರಿತ್ರೆಯನ್ನು ಬರೆದವರು ಈ ಮೇಲಿನ ವಿಷಯ ಯಾವುದನ್ನೂ ಹೇಳಿಲ್ಲ. ಜವಾಹರಲಾಲರು ಸಹ ತನ್ನ ಆತ್ಮಚರಿತ್ರೆಯಲ್ಲಿ ತಮ್ಮ ವಿಚಾರವಾಗಿ ಹೇಳದೆ ಬೇರೆ ಏನೇನೋ ಬರೆಯುತ್ತಾ ಹೋಗಿದ್ದಾನೆ. ತಾನು ಇಂಗ್ಲೆಂಡಿನಿಂದ ಬಂದು ನಿರುದ್ಯೋಗಿಯಾಗಿದ್ದುದು, ಅಲ್ಲಹಾಬಾದ್ ನಗರಸಭಾ ಚುನಾವಣೆಯಲ್ಲಿ ಸೋತುದು, ಕೆಲಕಾಲ ಕಾಂಗ್ರೆಸ್ ಕೆಲಸಗಾರನಾಗಿ, ಕಾರ್ಯದರ್ಶಿಯಾಗಿದ್ದ ವರ್ಷಗಳನ್ನು ಕುರಿತ ವಿಚಾರವೇನೂ ಇದರಲ್ಲಿಲ್ಲ. ತನ್ನ ತಂದೆ ಗಾಂಧಿಗೆ ಹೇಳಿ ಜವಾಹರಲಾಲನನ್ನು 1928 ರಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ವರಿಸಿದ್ದರೆಂಬ ವಿಷಯವೂ ಇದರಲ್ಲಿಲ್ಲ. ಕಾಂಗ್ರೆಸ್ಸಿಗೆ youth and dynamism ಬೇಕೆಂಬ ಕಾರಣದಿಂದ ಇತರ ಹಿರಿಯರನ್ನು ಹಿಂದಿಟ್ಟು ಮಗನನ್ನು ಆ ಸ್ಥಾನಕ್ಕೇರಿಸಿದ ಮೋತಿಲಾಲನ "ಪುತ್ರ ಪ್ರೇಮ"ದ ವಿಷಯವಾಗಿಯೂ ಏನನ್ನೂ ಹೇಳಿಲ್ಲ.

ಅದಕ್ಕೆ ಬದಲಾಗಿ ಬೇಕಾದಷ್ಟು ನಿಜವಲ್ಲದ ವಿಚಾರಗಳನ್ನು ಹೇಳಿದ್ದಾರೆ. 1928 ರಲ್ಲಿ ಅವರೇ ಈ ಗುರಿ ಸಾರಿದರು ಎಂಬುದಾಗಿ ಕಾಂಗ್ರೆಸ್ ಚರಿತ್ರೆಯಲ್ಲಿ ಹೇಳಿದೆ, "This Congress declares the goal of the Indian people to be complete National Independence." ಆದರೆ ಇದೇ ಮಾತುಗಳನ್ನು ಅದಕ್ಕಿಂತ ನಲವತ್ತೆರಡು ವರ್ಷಗಳಿಗೆ ಹಿಂದೆಯೇ, ಕಾಂಗ್ರೆಸ್ಸ್ ಸಂಸ್ಥೆ 1880 ರಲ್ಲಿ ಸ್ಥಾಪನೆಯಾಗುವ ಹಿಂದೆಯೇ ಕೆಲವು ಭಾರತೀಯ ಸ್ವಾತಂತ್ರ್ಯವಾದಿಗಳೂ ಅನಿ ಬೆಸೆಂಟ್ ಇವರುಗಳೂ ಹೇಳಿದ್ದಾರೆ, ಹೇಳುತ್ತಾ ಬಂದಿದ್ದಾರೆ! ಹಾಗಿದ್ದರೂ ಡಾ. ಪಟ್ಟಾಭಿಯವರು (ಇವರು ಮದ್ರಾಸಿನ ಡಾಕ್ಟರು) ತಮ್ಮ ಪಕ್ಷದ ಕಾಂಗ್ರೆಸ್ ಜನವನ್ನು ತೃಪ್ತಿಪಡಿಸಲಿಕ್ಕಾಗಿ ಆ ಕಾಂಗ್ರೆಸ್ ಚರಿತ್ರೆಯನ್ನು ಅವರ ಆಶೋತ್ತರದಂತೆ ಬರೆದಂತಿದೆ.

ಆದರೆ ಜವಾಹರಲಾಲನ ಮೇಲಿನ ಹೇಳಿಕೆಗೆ ಅನಿ ಬೆಸೆಂಟ್ ಇವರೂ ಸಹ ಅಭಿಮಾನದಿಂದ "dignified and clear statement of India's goal" ಎಂಬುದಾಗಿ ಹೇಳಿದ್ದರೆಂದು ಬರೆಯಲಾಗಿದೆ. ಆದರೆ ಅವರ ಅಭಿಮತವಿದ್ದುದು ಮೊದಲು Dominion Status ಪಡೆದು ಅನಂತರ ಕ್ರಮೇಣ ಪೂರ್ಣ ಸ್ವಾತಂತ್ರ್ಯ ಪಡೆದರೆ ಭಾರತ ರಾಷ್ಟ್ರ ಸುಭದ್ರವಾಗಿರುವುದು ಎಂಬುದಾಗಿತ್ತು. ಅದೇನೇ ಇರಲಿ, ಅಂದಿನ ಹೊಸ ಕಾಂಗ್ರೆಸ್ ಜನ ಹಿಡಿದ್ದ ಗಾಂಧೀಜಿಯ ಅಸಹಕಾರ ಸತ್ಯಾಗ್ರಹ ಕ್ರಮದಲ್ಲಿ ಮಾತ್ರ ಅನಿಗೆ ಹಿಂದಿನಷ್ಟು ಶ್ರದ್ಧೆಯಿರಲಿಲ್ಲ. ಆಗ ಸರಕಾರವು ಸೆರೆಮನೆಗೆ ಕಳುಹಿಸುತ್ತಿದ್ದ ಜನವೆಲ್ಲಾ ದೇಶಸೇವಕರೇನೂ ಅಲ್ಲ, ಕೇವಲ law-breakers ಎಂಬುದಾಗಿ ಬಗೆದಿತ್ತು. ನಮ್ಮ ಬಹುಜನ ಗಾಂಧಿ ಹಿಂಬಾಲಕರು ಅಂಧರಾಗಿದ್ದರು. ಅನಿ ಬೆಸೆಂಟ್‌ಗೆ ಆ ಎಲ್ಲಾ

ವಿಷಯ ಚೆನ್ನಾಗಿ ತಿಳಿದಿತ್ತು. 1929ರಲ್ಲಿ, ಆಗ 82 ವರ್ಷ ಪ್ರಾಯದ ಮುದುಕಿಯಾದರೂ ಯೂರೋಪು, ಅಮೇರಿಕಾಗಳಲ್ಲಿ ಸುತ್ತಾಡಿ ಹಿಂದಿರುಗಿದನಂತರ ತನ್ನ New India ಪತ್ರಿಕೆಯಲ್ಲಿ ಹೀಗೆಂದಳು:-

"----I am against the empty profession of Independence. I am against the severance of the connection with Britain----The adoption by the Congress of Mr. Gandhi's non-cooperation methods, which I have opposed from their inception in India, would have compelled me, in honour, to stand apart from it. Harmonious cooperation is impossible between people divided on question of principle."

<u>ಆನಿ ಬೆಸೆಂಟ್ ಮತ್ತು ಗಾಂಧೀಜಿ: ಇವರು ಯಾರಾರು?</u>- ಆನಿ ಬೆಸೆಂಟ್ ಇವಳು ಅಸಾಧಾರಣ ಮಹಿಳೆಯೆಂಬುದನ್ನು ಕಳೆದ ಪುಟಗಳು ತೋರಿಸಿಕೊಟ್ಟಿದ್ದರೆ, ಇವಳ ಹೇಳಿಕೆಗಳಲ್ಲಿ ದ್ವಂದ್ವಯದಲ್ಲಿ ಅಪ್ರಸ್ತುತವಾದದ್ದು ಏನೂ ಇಲ್ಲ. ಹೆಚ್ಚು ವಿಸ್ತೃತವಾಗಿ ಇದ್ದರೇ ಸಾಕೆ, 1930ರಲ್ಲಿ ಗಾಂಧೀಜಿಯು ಮತ್ತೊಮ್ಮೆ ಅಸಹಕಾರ ಚಳುವಳಿಯನ್ನು ಹೂಡಿದಾಗ ಆಗ 83 ವರ್ಷ ಪ್ರಾಯದ ಆನಿಯು ಫಲದಾಯಕವಾಗಿ ಇಲ್ಲದ ಚಳುವಳಿಯನ್ನು ಬರೀ "mock-fight" ಎಂದು ಹಾಸ್ಯಮಾಡಿ ಹೇಳಿದಳು. ಗಾಂಧೀಜಿಯ ಆ ಚಳುವಳಿಗಳು ಆಂಗ್ಲ ಸರಕಾರವನ್ನೇನೂ ಕದಲಿಸಲಿಲ್ಲ. ನಮ್ಮ ಸ್ವಾತಂತ್ರ್ಯಕ್ಕೆ ಜರ್ಮನಿಯ ಹಿಟ್ಲರನಂತಹವನ ಕರಾಳ ಶಕ್ತಿಯು ಬೆಂಬಲವು ಬೇಕಾಗಿ ಬಂತು; ಮಹಾಯುದ್ಧವೊಂದು ಬ್ರಿಟಿಷ ರಾಜಕೀಯವನ್ನು ಬದಲಿಸಿತು.

ಗಾಂಧೀಜಿಯ ಅಸಹಕಾರ ಚಳುವಳಿ (passive resistance) ಇದರ ಪರಿಣಾಮವಾಗಿ ಆನಿ ಬೆಸೆಂಟ್ ಇವಳನ್ನು 1917ರಲ್ಲಿ ಸರಕಾರವು ಸೆರೆಮನೆಯಿಂದ ಪಾರಾಗಿಸಿತು, ಎಂದು 1937ರಲ್ಲಿ ಅಂದಿನ ಕಾಂಗ್ರೆಸ್ಸಿನವರು ಹೇಳಿಕೊಂಡಾಗ ಅವರಿಗೆ ಇಪ್ಪತ್ತು ವರ್ಷಗಳಿಗೆ ಹಿಂದಿದ್ದ ಆ ಪರಿಸ್ಥಿತಿಯೇ ಬೇರೆಯೆಂಬ ವಿಷಯ ತಿಳಿದಂತೆ ತೋರುವದಿಲ್ಲ. ಪ್ರತಿ ಬಾರಿ ಬೊಂಬಾಯಿ, ದೆಹಲಿ, ಲಾಹೋರಗಳಲ್ಲಿ ಪ್ರಯತ್ನವಸಾನಗೊಳ್ಳುತ್ತಿದ್ದ ಗಾಂಧೀಜಿಯ ಅಸಹಕಾರ ಚಳುವಳಿ ಪ್ರಾರಂಭವಾದುದು 1919ರ ರೌಲತ್ ಆಕ್ಟ್ ಮಸೂದೆಗೆ ವಿರೋಧವಾಗಿ! ಆದರೆ ಕಾಂಗ್ರೆಸ್ ಚರಿತ್ರೆ ಇಂಥ ವಿಷಯಗಳಲ್ಲಿ ನಿಜವಾದ ವಿಚಾರಗಳನ್ನು ಬಚ್ಚಿಟ್ಟಂತೆ ತೋರುತ್ತದೆ. ಹೇಗೂ ಗಾಂಧೀಜಿಯ ಕಾಂಗ್ರೆಸ್ಸು ಆಗಿಂದಾಗ್ಗೆ "mock-fight"ಗಳನ್ನು ನಡೆಸಿದ್ದೇನೋ ನಿಜ! ಆದರೆ ಆ ಕಾರಣದಿಂದ ಆಂಗ್ಲ ಸರಕಾರ ಅಗಲಿತು ಎಂದು ಹೇಳಿಕೊಂಡರೆ ಅದೊಂದು ಕನಸು, ಅಷ್ಟೆ!

ಆನಿಯ ಬಾಲ್ಯಕ್ಕೂ ಗಾಂಧೀಜಿಯ ಬಾಲ್ಯಕ್ಕೂ ಅಜಗಜಾಂತರ

ವ್ಯತ್ಯಾಸವಿದೆ. ಆನಿಯು 1847ರಲ್ಲಿ ಜನಿಸಿ 1867ರಲ್ಲಿ ವಿವಾಹವಾಗಿ ಎರಡು ಮಕ್ಕಳನ್ನು ಹಡೆದ ನಂತರ ಸ್ವಪ್ನ ಬ್ರಹ್ಮಚರ್ಯವನ್ನು ಕೈಕೊಂಡು ದೈವಾನ್ವೇಷಣೆಗೆ ತೊಡಗಿದಳು. ಅವಳದು ಆಗಲೇ ಹಿಂದು ಹೋರಾಟದ ಬದುಕು. ಗಾಂಧೀಜಿ 1869ರಲ್ಲಿ ಜನಿಸಿ, ಕೇವಲ ಎಳೆ ಹುಡುಗನಾಗಿದ್ದಾಗಲೇ ವಿವಾಹವಾಗಿ ನಾಲ್ಕು ಮಕ್ಕಳನ್ನು ಪಡೆದು 1906ರ ಕಾಲದಲ್ಲಿ ಬ್ರಹ್ಮಚರ್ಯನಿಗಾಗಿ ಇದ್ದರು. ಆ ವರೆಗೂ ಅವರಿಗೆ ಜೀವನದಲ್ಲಿ ಏನೂ ತಾತ್ಪರ್ಯವಿರಲಿಲ್ಲ.

ಆನಿಯೂ ತನ್ನ ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು ತನ್ನ ತಾಯಿ ಮತ್ತು ದಾದಿಯರ ಆಶ್ರಯದಲ್ಲಿ ಬೆಳೆದಳು. ಕ್ರೈಸ್ತ ಧರ್ಮವು ಅವಳಿಗೆ ಸ್ಫೂರ್ತಿ ನೀಡಲಿಲ್ಲ. ಸತ್ಯ, ಧರ್ಮ, ನ್ಯಾಯಗಳೇ ಮೇಲು ಎಂಬುದನ್ನು ಮನಗಂಡಳು. ಗಾಂಧೀಜಿಯು ದೇಶೀ ತನ್ನ ನಾಡಿನ ಹಿರಿಯ ಪ್ರಬಲ ಅಧಿಕಾರಿಯ ಮಗ, ಬಾಲ್ಯದಲ್ಲಿಯೇ ವಿದ್ಯೆಗಾಗಿ ಇಂಗ್ಲೆಂಡಿಗೆ ಕಳುಹಿಸಲ್ಪಟ್ಟರು, ಆದರೆ ಅವರ ಒಲವು ಹೆಚ್ಚಾಗಿ ಜನಸೇವೆಯ ಕಡೆಗೆ ಆಗಲೇ ಹರಿದಿತ್ತು.

ಆನಿಯು 1847ರಲ್ಲಿ ಜನಿಸಿ ಸರಿ ನೂರು ವರ್ಷದಲ್ಲಿ, ಎಂದರೆ 1947ಕ್ಕೆ, ಭಾರತವು ಸ್ವಾತಂತ್ರ್ಯವನ್ನು ಪಡೆಯಿತು. ಆದರೆ ಆ ಸ್ವಾತಂತ್ರ್ಯವು ಅವಳು ಇಚ್ಛಿಸಿದಂತದ್ದೇನೂ ಅಲ್ಲ. ಅವಳು ಈಗ ಇದ್ದಿದ್ದರೆ ಬಹುಶಃ! ಅದನ್ನು ಖಂಡಿಸುತ್ತಿದ್ದಳು. ಆದರೆ ಗಾಂಧೀಜಿಯು ಕಡೆ ದಿನಗಳು ಚಿಂತಾಜನಕವಾಗಿ ತೋರಿತು. ಅವರ ಶಿಷ್ಯವರ್ಗಕ್ಕೆ ಅವರು ಹೇಳಿಕೊಂಡಿದ್ದ ಸತ್ಯ ಅಹಿಂಸೆಗಳ ಮಹತ್ವ ಬಿದ್ದಿರಲಿಲ್ಲ. ಅದನ್ನೆಲ್ಲ ಅವರ ಅನುಯಾಯಿಗಳೇ ತಿಳಿದುಕೊಂಡರು. ಹಾಗಾಗಿ ಅವರಿಗರಿಯದೆಯೇ ಜವಾಹರಲಾಲ, ವಲ್ಲಭಭಾಯಿ ಮೊದಲಾದವರು ತಮ್ಮ ಅಧಿಕಾರ ದಾಹದಿಂದ ಆಂಗ್ಲ ಅಧಿಕಾರಿಗಳೊಡನೆ ದೇಶವನ್ನು ವಿಭಜಿಸಲು ಒಪ್ಪಿ ಪಡೆದ ಆ ಸ್ವಾತಂತ್ರ್ಯವೇ ಗಾಂಧೀಜಿಗೆ ಸಾವನ್ನು ತಂದಿತು. ಈ ಎಲ್ಲಾ ವಿಚಾರಗಳು ಈ ಗ್ರಂಥಕರ್ತನ ಇತರ ಬರಹಗಳಲ್ಲಿ ಸಾಕಷ್ಟು ವಿವರವಾಗಿ ಹೇಳಲಾಗಿದೆ.

<u>ದೇಶದ ವಿಧಾಯಕ ಕಾರ್ಯಕ್ರಮಗಳಿಗೆ ಆನಿಯ ಮೊದಲು!—</u>

ಹೆಂಗಸರ ಮತ್ತು ಹರಿಜನರ ಪುರೋಭಿವೃದ್ಧಿಗಾಗಿ ಈ ದೇಶದಲ್ಲಿ ಮೊದಲು ಸಾಧಿಸಿದ್ದು ಆನಿ ಬೆಸೆಂಟ್ ಇವಳು.

"The terrible treatment of our brothers, the untouchables, —those who treat human beings as untouchables, are themselves rendered truly untouchable---"

ಎಂದು ಆನಿ ಬೆಸೆಂಟ್ ಇವಳು ಗಾಂಧೀಜಿಗಿಂತ ಎಷ್ಟೋ ಹಿಂದೆ ಹೇಳಿದ್ದು ಮಾತ್ರವಲ್ಲ, ಎಷ್ಟೋ ಪಂಚಮ ಶಾಲೆಗಳನ್ನು ತೆರೆದಳು. ಹರಿ

ಗೆಯರ ವಿದ್ಯಾಭ್ಯಾಸದ ಬಗೆಯೂ ದುಡಿದಳು,

ಆನಿ ಬೆಸೆಂಟ್ ಇವಳ ಮತ್ತೊಂದು ಸಾಧನೆಯೆಂದರೆ ರಾಷ್ಟ್ರೀಯ ಶಾಲೆಗಳು ಮತ್ತು ಕಾಲೇಜುಗಳ ಸ್ಥಾಪನೆ. ದೇಶದ ಹಲವಾರು ನಗರಗಳಲ್ಲಿ ಪಟ್ಟಣಗಳಲ್ಲಿ National Colleges and Schools ಇವು ತೆರೆಯಲ್ಪಟ್ಟವು. ಗಾಂಧೀಜಿಯವರೂ ಹತ್ತಿಪ್ಪತ್ತು ವರ್ಷಗಳನಂತರ 1936 ರಲ್ಲಿ ತಮ್ಮ Basic Education Scheme ಇದರ ಬಗ್ಗೆ ಸಾಕಷ್ಟು ಪ್ರಚಾರಮಾಡಿದರಾದರೂ ಕಾರ್ಯತಃ ಹೆಚ್ಚೇನೂ ಆಗಲಿಲ್ಲ.

ತನ್ನ ಜೀವನದಲ್ಲಿ ಆನಿಯು ಪವಿತ್ರ ಚಿನ್ನದಂತೆ ಪರಿಶುದ್ಧೆಯಾಗಿದ್ದಳು. ವೈಜ್ಞಾನಿಕ ವಿಷಯದಲ್ಲಿ ಹಠವಾದಿಯಾಗಿ ಯಾವ ನ್ಯಾಯಾಧೀಶನನ್ನು ಮೀರಿದ ನ್ಯಾಯವಾದಿಯಾಗಿ ಅವಳು ಸರ್ವಮಾನ್ಯಳಾಗಿದ್ದಳು, ಈ ದೇಶದಲ್ಲಿ ಅವಳು ಭಾರತೀಯ ಉಡುಗೆಯಲ್ಲಿ ತಿರುಗಾಡಿಕೊಂಡಿದ್ದಳು. ಆ ಕಾರಣದಿಂದ ಬಹುಶಃ ಗಾಂಧೀಜಿಯು ತನ್ನ "ವೇಷ"ವನ್ನು ಆ ರೀತಿ ಮಾರ್ಪಡಿಸಿದ್ದಿರಬಹುದು, ಎಂಬುದಾಗಿ ಜನ ಆ ಕಾಲದಲ್ಲಿ ಹೇಳುತ್ತಿದ್ದರು,

ಆನಿ ಬೆಸೆಂಟ್ ಇವಳು ನಿಜಕ್ಕೂ ಉತ್ತಮ ವಾಗ್ಮಿ; ಗಾಂಧೀಜಿ ಅಂತೇನೂ ಇಲ್ಲ. ಆನಿಗೆ ಇಂಗ್ಲಿಷ್ ಭಾಷೆ ಮಾತ್ರ "ಆಯುಧ." ಆ ಕಾರಣದಿಂದ ಗಾಂಧೀಜಿಯು ಜನಾನುರಾಗಿಯು; ಹಿಂದೀ ಭಾಷೆಯ ಪರಿಚಯವಿಲ್ಲದ ಊರುಗಳಲ್ಲೂ ಹೋಗಿ ನಮಗೆ ಸ್ವಭಾಷೆಯೇ ಮೇಲು, ಇಂಗ್ಲಿಷ್ ಪರಭಾಷೆಯೆಂದೆನ್ನುತ್ತಾ ಹಿಂದಿಯಲ್ಲೋ ಗುಜರಾತಿಯಲ್ಲೋ ಮಾತಾಡುತ್ತಾ ಈ ದೇಶವನ್ನು ಭಾಷಾವಾರು ಪ್ರಾಂತಗಳನ್ನಾಗಿ ವಿಭಜಿಸಲು ಪರೋಕ್ಷವಾಗಿ ಕಾರಣರಾದರು,

ರಾಜಕೀಯ ಚಾಣಾಕ್ಷತೆಯಲ್ಲಿ, ಭವಿಷ್ಯ ನೋಟದಲ್ಲಿ, ನಿಶ್ಚಿತ ನಿಲುವಿನಲ್ಲಿ, ಸರ್ವಸ್ವ ಹೇಳಿಕೆಯಲ್ಲಿ ಮತ್ತು ನಿಶ್ಚಲ ದೇಶಾಭಿಮಾನದಲ್ಲಿ ಆನಿ ಬೆಸೆಂಟ್ ಇವಳೇ ಈ ದೇಶದಲ್ಲಿ ಇಂದಿಗೂ ಅಗ್ರಗಣ್ಯಳು, ಇತರರು ಹಗರಣಗಳು ಎತ್ತುವಲ್ಲಿ ಬಹಳ ದೊಡ್ಡ ಮಾತುಗಳನ್ನಾಡಿಕೊಂಡಿರಬಹುದು. ಆದರೆ ಆನಿಯು ಅದೆಷ್ಟು ಪ್ರಖ್ಯಾತಳಾದ ಅಂತರಾಷ್ಟ್ರೀಯ ವ್ಯಕ್ತಿಯೋ ಅಷ್ಟೇ ನಿಷ್ಠೆಯ ಭಾರತೀಯಳಾಗಿಯೂ ವಿರಾಜಿಸಿದಳು. ಅವಳ ಸಾಧನೆಗಳನ್ನು ನಮ್ಮ ಹೆಚ್ಚು ಬರಹಗಾರರು, ರಾಜಕಾರಣಿಗಳು ಅವಳು ವಿದೇಶೀಯಳೆಂಬ ಕಾರಣದಿಂದ ತೃಣೀಕರಿಸುತ್ತಾ ನಮ್ಮ ದೇಶೀಯ ಅಧಿಕಾರಿಗಳೇ ಸರ್ವವನ್ನೂ ಸಾಧಿಸಿದರು ಎಂದು ಊದುತ್ತಿದ್ದಾರೆ! ಸರಿ, ಆದದ್ದು! ಇರಲಿ!

ಭಾಗ — 4.

ಡಾ. ಪಟ್ಟಾಭಿಯವರಂಥ ಕಾಂಗ್ರೆಸ್ ಚರಿತ್ರಕಾರರು ಮತ್ತು ಇನ್ನೂ ಹಲವು ಬಾರಿಗೆ ಬರಹಗಾರರು ತಮ್ಮ ಕೃತಿಗಳನ್ನು ಮೊಳ

ಗಿದಲು ತಮಗೆ ತೋರಿದಂತೆ ಬರೆದಿದ್ದರೂ ಇಂದಿನ ಚರಿತ್ರಕಾರರು ಹಾಗೂ ಮುಂದಿನ ತಾತ್ವಿಕರು ಅವರೆಲ್ಲರ ಅಂಬೋಣವನ್ನು ಬಹಳ ಸ್ಪಷ್ಟವಾಗಿ ಪರಿಶೀಲಿಸಬೇಕಿದೆ. ಅಂದಿನ ಸಮಕಾಲೀನರೊಬ್ಬರ ಹೇಳಿಕೆಯಂತೆ!—

"---Between these, and the curious political irresponsibility of Mr. Gandhi (Mahatma) which even in its often spectacular futility naturally fascinated the crowd, Annie Besant ploughed a very lonely furrow, for neither could she waste time as the politicians were wasting it, nor could she participate in the activities of Mr. Gandhi, much as she admired his devastating sincerity, for she knew that these would sooner or later plunge India into bloodshed and delay India's achievements of Home Rule," ಎಂಬುದಾಗಿ ಆನಿಯು ನಿಕಟವರ್ತಿಯಾಗಿದ್ದ ವಿದ್ವಾಂಸ ರಾಜಕಾರಣಿಯೊಬ್ಬರು ಖೇದಪೂರ್ವಕವಾಗಿ ಹೇಳುತ್ತಾರೆ. ಆನಿ ಬೆಸೆಂಟ್ ಇವಳು ಕೇವಲ ಆಕಸ್ಮಿಕವಾಗಿ ನಮ್ಮಂತೆ ಇಲ್ಲಿ ಹುಟ್ಟಿ ಭಾರತೀಯಳಾಗಿ ನಿಂತಿದ್ದವಳಲ್ಲ. ಅವಳು ತನ್ನ ಎಷ್ಟೋ ಜನ್ಮಗಳ ತಪಸ್ಸಿನ ಫಲವಾಗಿ ಸಾಧನೆಯಿಂದ ತಾತ್ವಿಕವಾದ ಹಾದಿ ಹಿಡಿದು ಮಾರ್ಗವನ್ನು ಅಪ್ಪಿ ಅತ್ತ ನಿಂತಿರುವ ಯೋಗಿನಿಯು. ಅವಳು ವಿಶ್ವದಾದ್ಯಂತವಾಗಿ ಸಂಚರಿಸುತ್ತಿದ್ದಾಗಲೇ ~~ಈ~~ ದೇಶದಲ್ಲಿ ಅವಳು ಬೀರಿದ ಪ್ರಭಾವ, ಕೈಗೊಂಡ ಸೇವೆ ಮತ್ತು ನಿಷ್ಠೆಯ ಅಭಿಮಾನವೆಲ್ಲವೂ ಅಸಾಧಾರಣವಾಗಿದ್ದವು. ಗಾಂಧೀಜಿಯ ಬರುವಿಕೆಯಿಂದ ಕೆಲವು ಸ್ವಾರ್ಥಿಗಳು ಅವರನ್ನು ಹಿಂಬಾಲಿಸಿದ್ದರೂ ಆನಿಯ ನಿಸ್ಪೃಹತೆ ಮತ್ತು ನಿಷ್ಕಲ್ಮಶತೆಯ ಸೇವಾಪ್ರಭಾವವನ್ನು ಅರಿತುಕೊಳ್ಳುವಷ್ಟು ಜನ ಮುಂದುವರಿದಿರಲಿಲ್ಲ. ಅಸಹಕಾರ ಚಳುವಳಿಯು ಹಿಂಸಾತ್ಮಕವಾಗಿಯೇ ಕೊನೆಗೊಳ್ಳುತ್ತದೆಂದು ಆನಿ ಬೆಸೆಂಟ್ ಇವಳು ಹೇಳುತ್ತಲೇ ಇದ್ದಳು.

"Only three years after 1917 (after her internment) she (Annie Besant) stood alone against one-thousand in Lahore Congress in 1920 against Gandhiji's plan of non-cooperation with the Government — the fruits of which she prophetically knew would not only be bloodshed but wretchedness for the poor."

ಈ ಹೇಳಿಕೆಯ ಗೂಢಾರ್ಥವನ್ನರಿಯಲು ಅಂದಿನ ನಮ್ಮ ದೇಶ

ದ ನಾಯಕರಿಗೆ ಬಹಳ ವರ್ಷಗಳೇ ಬೇಕಾಗಿದ್ದುವು. ಅವುಗಳು ಮನ್ನತ್ಯಾದನಂತರ ಅವರಲ್ಲಿ ಅವಳು ಹೇಳಿದ್ದನ್ನು ನಿರಾಕರಿಸಿದರು ಹೇಳಿಕೊಂಡಿರು; ಬಹಳ ವರ್ಷಗಳವರೆಗೂ ಹೇಳಿದರು.

ಸರಿ, ಗಾಂಧೀಜಿಗಾದರೋ ಹಿಂದು ಧರ್ಮ, ಮಹಾತ್ಮರು, ಯೋಗಿಗಳು, ಎಂದಾದ ಮೇಲೆ ಇತರರ ಮಾತನ್ನು ಕೇಳಬೇಕೆ? ಜನವನ್ನು ಅಲ್ಲಿಲ್ಲಿ ಸಂಘಟಿಸಿ ಆಗಿಂದಾಗ್ಗೆ ಸತ್ಯಾಗ್ರಹ ಹೂಡುವುದು, ಅಂದಿನ ಬೆಳವಣಿಗೆ ವಿವಿಧ ಹೆಗ್ಗಳಲ್ಲಿರುತ್ತಿದ್ದ ನಾಯಕರು ಮಹಾತ್ಮರೇನೂ ಅಲ್ಲ. ಹಲವರು ದಳ್ಳಾಳಿಗಳು, ಹಲವರು ನಿರುದ್ಯೋಗಿಗಳು, ದೇಶಸೇವೆಯೆಂದೆನ್ನುತ್ತಾ ಕಾಂಗ್ರೆಸ್ಸಿಗೆ ಸೇರಿ ತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಂಡ ವಕೀಲರು, ವಿದ್ಯಾಭಿಯಂಥ ಡಾಕ್ಟರರು, ರಾಜೇಂದ್ರ ಪ್ರಸಾದನಂಥ ಸಾಧುಗಳು, ರಾಜಾಜಿಯಂಥ ಅಧಿಕಾರಪ್ರಿಯರು, ಜವಾಹರಲಾಲನಂಥ ನಿರುದ್ಯೋಗಿಗಳು, ವಲ್ಲಭ ಭಾಯಿಯಂಥ ಪ್ರತಿಷ್ಠಿತ ವ್ಯಕ್ತಿಗಳು, 'ಅನಿಯಂತ್ರಿತ ತಾನೂ ವಕೀಲಗಿರಿಬಾರದು ಎಂದು ಭಾವಿಸಿದ್ದ ಸರೋಜಿನಿ ನಾಯುಡು, ಮತ್ತು ಬಂಗಾಳದ ಬೋಸರು, ದಾಸರು, ಘೋಷರು, ಗುಪ್ತರು ಇತ್ಯಾದಿ, ಅವರುಗಳ ಕೆಲವರನ್ನು ಅಖಿಲ ಭಾರತೀಯ ವ್ಯಕ್ತಿಗಳಾಗಿ ಮಾಡಲು ಗಾಂಧೀಜಿಯು ಅವರಿಗೆಲ್ಲ 'ನಾಲ್ಕಾರು ಹೊಗಳಿಕೆಯ ನುಡಿಗಳನ್ನು ಬಿತ್ತರಿಸಿ ಎಲ್ಲೆಲ್ಲೂ ಹಂಚಿದರು. ಹಿಂದು ಸಂಗಡವನ್ನೇ ಈ ರೀತಿ ನಿರ್ಮಿಸಿದರು.

ಗಾಂಧೀಜಿಯ ಅಹಿಂಸಾತ್ಮಕ ಅಸಹಕಾರ ಚಳವಳಿಯ ಪ್ರತಿ ಬಾರಿಗೂ ಹಿಂಸೆಯಲ್ಲಿ ಕೊನೆಗೊಳ್ಳುತ್ತಿತ್ತು. ಶಾಲಾ ಕಾಲೇಜು ಹುಡುಗರಿಗೆ ಶಾಲೆ ಬಿಟ್ಟು ಹೊರನಡೆಯಿರಿ; ವಕೀಲರೆಲ್ಲ ತಮ್ಮ ಕಚೇರಿಗಳಿಂದ ಹೊರನಡೆಯಿರಿ, ರೈತರೆಲ್ಲ ಸರಕಾರಕ್ಕೆ ಕಂದಾಯವನ್ನು ಸಲ್ಲಿಸದಿರಿ, ಎಂದು ಮೊದಲಾಗಿ ಹೇಳುತ್ತಾ ಅರಾಜಕತೆ (ಅವರು ಹಿಂದೆಯೇ ಹೇಳಿದ್ದ anarchy) ಯನ್ನು ಹುಟ್ಟಿಸುತ್ತಾ ಅಹಿಂಸೆಯನ್ನು ಹೇಳುತ್ತಾ ಪರೋಕ್ಷವಾಗಿ ಹಿಂಸೆಯನ್ನೇ ಮೆಟ್ಟಿದ್ದಂತೆ ಕಂಡುಬಂದಿತು. ಚೌರಿಚೌರಾ, ಚಂಪಾರಣ್ಯ, ಜಲ್ಯನ್‌ವಾಲ್ ಬಾಗ್ ಇತ್ಯಾದಿ ಹಿಂಸಾತ್ಮಕ ಕೃತ್ಯಗಳಿಗೆ ಕಾರಣರು ಯಾರು? ಹೇಗೆ? ಇದನ್ನೆಲ್ಲ ತಿಳಿಯಬೇಕಾದರೆ ಆನಿ ಬೆಸೆಂಟ್ ಇವರಿಂದಲೇ ತಿಳಿಯಬೇಕು. ಗಾಂಧೀಜಿಗೆ ಬುದ್ಧಿ ಹೇಳಲು ಆಗ ಅವರೊಬ್ಬರೇ ಇದ್ದದ್ದು, ಆದರೆ ಅವರ ಮಾತನ್ನು ಯಾರೂ ಕೇಳದಾದರು, ಅದರೆ:—

"Gandhiji himself described his civil disobedience as of 'Himalayan miscalculation', 'grave erros", and so on. ಅಂದಿನ ಎಲ್ಲ ಹಿರಿಯ ಮುಂದಾಳುಗಳು ಗಾಂಧೀಜಿಯ ಈ ಚಳವಳಿಯನ್ನು ಒಪ್ಪಿದ್ದೇ ಇಲ್ಲ. ಈ

ವಿಷಯವಾಗಿ ಅವರಿಬ್ಬರ ಸಾರ ಹೇಳಲಾಗಿದೆ:-

"----(Apart from Gokhale, Srinivasa Sastri, Muhammad Ali Jinnah, Balgangadhar Tilak and others), Ravindranath Tagore and Charles Andrews disagreed with Gandhi on some of his techniques, they thought that the negative aspect of the non-cooperation movement was acting as a stumbling block to the synthesis of what is good in the East and the West ---- When the Moplah riots broke out in Malabar, Andrews warned Gandhi that the Congress and the Khilafat leaders were responsible to it to a large extent. The burning of foreign cloth was meaningless to both Tagore and Andrews ---- When Gandhi attacked the Christian missionaries for their work in India, Andrews felt hurt and wrote strongly to Gandhi --";

ಹೀಗೆ ಕ್ರಿಸ್ತೀಯ ಮಿಷನರಿಗಳನ್ನು ಟೀಕಿಸಬಹುದು, ಗಾಂಧಿಯು ತಾನು ಏನಾದರೊಂದು ಮಾಡಬೇಕು, ತನ್ನ ಚಳುವಳಿಯನ್ನು ಯಾವುದಾದರೊಂದು ರೀತಿಯಲ್ಲಿ ಹಬ್ಬಿಸಬೇಕೆಂದು ಆತುರಿಸುತ್ತಿದ್ದ ವ್ಯಕ್ತಿಯಾಗಿದ್ದಂತೆ ತೋರುತ್ತದೆ. ಗಾಂಧಿಗೆ ಹೇಗೂ ಆನಿ ಬೆಸೆಂಟ್‌ಗೆ ಇದ್ದಷ್ಟು ದೂರದರ್ಶಿತ್ವ ಇರಲಿಲ್ಲದಂತೆ ತೋರುತ್ತದೆ. ದೇಶದ ಭವಿಷ್ಯವನ್ನು ದೂರದೃಷ್ಟಿಯಿಂದ ಪರಿಶೀಲಿಸುವ ಮುಂದಾಳು ಗಾಂಧಿಯಾಗಿರಲಿಲ್ಲವೆಂಬಂತೆ ಅವರ ಖಿಲಾಫತ್ ಚಳುವಳಿಯಂತ, ಹಲವು ಬಗೆಯ ನಿರ್ಧಾರ ಚಳುವಳಿಗಳಿಂದ ತಿಳಿಯಬಹುದು, ಡಾಕ್ಟರ್ ಅರುಂಡೇಲನು 1939ರಲ್ಲಿ ಈ ರೀತಿಯಾಗಿ ಬರೆದಿದ್ದನು:-

"If Mr. Gandhi had had the vision to join hands with Annie Besant, as he might have, instead of pursuing his own not infrequently disastrous policies, India would today have been a self-governing nation."

ಹೇಗೂ 1947ರಲ್ಲಿ ದೇಶಕ್ಕೆ ದೊರಕಿತು ಸ್ವಾತಂತ್ರ್ಯವು ಕೇವಲ ಖಂಡಿತವಾದ ಸ್ವಾತಂತ್ರ್ಯ. ಅಷ್ಟು ವಿಶಾಲವಾಗಿ ಸುಭದ್ರವಾಗಿ ಕಟ್ಟುತ್ತಿದ್ದ ದೇಶವನ್ನು ಈ ಗಾಂಧಿ, ನೆಹರೂರಂಥವರು ಅಧಿಕಾರ ದಾಹದ ಫಲವಾಗಿ ಎರಡಾಗಿ ಒಡೆದು ಹಾಕಿದ ಸ್ವ

ತಂತ್ರ್ಯವು ಕೇವಲ ಗತಿಗೇಡಿನ ನಾಚಿಕೆಗೇಡಿನ ಸ್ವಾತಂತ್ರ್ಯವಾಯಿತು.
ಆನಿ ಬೆಸೆಂಟ್ ಇವರ ಮಾತಿನಲ್ಲಿ ಹೇಳುವುದಾದರೆ ಇದು ಕೇವಲ
ದುರವಸ್ಥೆಯ ಸ್ವಾತಂತ್ರ್ಯ. ಅವರು ಈ ಬಗೆಯ ಸ್ವಾತಂತ್ರ್ಯ
ಕ್ಕಾಗಿ ಈ ದೇಶದ ದಿವ್ಯಾಭಿಮಾನ ಮತ್ತು ತತ್ವ ಸಂಸ್ಕೃತಿಗಳಿಗೆ
ಮಾರಕ ಹೋಗಿ ಕಾದಾಡಬೇಕಾಗಿರಲಿಲ್ಲ.

ಗಾಂಧೀಜಿಯ ರಾಜಕೀಯ ತೀರಾ ತಾಂತ್ರಿಕ. ಉದಾಹರಣೆಗೆ
1917ರಲ್ಲಿ "ಹೋಂ ರೂಲ್" ಚಳವಳಿಯು ಇಡೀ ದೇಶದಲ್ಲಿ ಬೆಂಕಿಯಂ
ತೆ ದಗದಗನೆ ಹೊತ್ತುತ್ತಿದ್ದಾಗ ಗಾಂಧೀಜಿ ಅದರಲ್ಲಿ ಸಕ್ರಿಯರಾ
ಗಿ ಭಾಗವಹಿಸದೆ ಬೀಹಾರಿನ ಎನ್ನೋ ಚಂಪಾರಣ ಕಾರ್ಯಕ್ಷೇತ್ರವಾಗಿ
ಹೋಗಿದ್ದರೆಂದು ಹಿಂದೆಯೇ ಹೇಳಿದೆವಷ್ಟೆ. ಅದೇ ರೀತಿ ಮೂ
ವತ್ತು ವರ್ಷಗಳ ನಂತರ ದೇಶವು ಅವರ ತಾಂತ್ರಿಕ ರಾಜಕೀಯ
ದಿಂದ ಸಿಡಿದು ಹೋದಾಗ, ಮತ್ತು ಬೇರೇನೂ ಉಪಾಯವಿಲ್ಲವೆಂ
ದಾದಾಗ ಗಾಂಧೀಜಿಯು ದೂರದ ನೌಕಾಲಿ ಎಂಬಲ್ಲಿಗೆ ಹೋಗಿ
ಅಲ್ಲಿ ಎನ್ನೋ 'ಹಿಂದೂ"ದೊಡ್ಡ ಸೇವೆ"ಗೆ ತೊಡಗಿದ್ದುದೆಲ್ಲ ನಿ
ಜಕ್ಕೂ ವಿಷಾದನೀಯ ವಿಷಯಗಳಾಗಿದ್ದುವು.

ಗಾಂಧೀಜಿಯವರೇ ಹೀಗಾದ ಮೇಲೆ ಇತರ ಕಾಂಗ್ರೆಸ್ ಜನ
ಗಳ ತಾತ್ವಿಕರಾಹಿತ್ಯದ ರಾಜಕೀಯವನ್ನಂತೂ ಹೇಳುವುದೇ ಬೇ
ಡವೆಂಬಂತೆ ಆಗ ತೋರುತ್ತಿತ್ತು. ಹೀಗೂ ಆನಿ ಬೆಸೆಂಟ್ ಇವರ
ವಿಷಯವಾಗಿ ನಮ್ಮ ಕಾಂಗ್ರೆಸ್ ಜನವು ದಿಟ್ಟತನದಿಂದ ಹೇಳ
ಬೇಕಾದುದನ್ನು ಹೇಳದೆ ತಮ್ಮ ವಿಚಾರಗಳನ್ನು ಹೊಳೆಸುವಗಾ
ರಿಗಳ ಮೂಲಕ ಹೇಳುವುದರಲ್ಲಿ ನಿರತರಾದರು. 'ಶ್ರೀಪ್ರಕಾಶ್',
ರಾಮಸ್ವಾಮಿ ಐಯ್ಯರ್, ಜಮನಾದಾಸ್ ದ್ವಾರಕಾದಾಸ್ ಹೀಗೆ
ಕೆಲವರು ಮಾತ್ರ ಆನಿಯ ವಿಷಯವಾಗಿ ಬರೆದಿದ್ದಾರೆ. ಅದರೆ
ಅಷ್ಟು ಸಾಲದು; ಅವರ ಎಲ್ಲ ಬರಹಗಳ ಪುನಸ್ಸಂಶೋಧನ
ಮತ್ತು ಪುನರ್ಮುದ್ರಣವಾಗಬೇಕು. ಅವರ ವಾದಗಳು,
ತತ್ವಗಳು, ನಿಲುವುಗಳೆಲ್ಲ ಗಂಭೀರವಾಗಿವೆ, ಸತ್ವಪೂರ್ಣವಾಗಿವೆ
ಸತ್ಯಾರ್ಹವಾಗಿವೆ! ಹಿಂದೆ Statesman ಪತ್ರಿಕೆಯು
(1970) ದ್ವಾರಕಾದಾಸರ ಗ್ರಂಥವನ್ನು ವಿಮರ್ಶಿಸುತ್ತ ಹೀಗೆ ಹೇಳಿತು:

"---- Mr. J. Dwarakadas was a close associate of not only Mahatma Gandhi, but also of Balgangadhar Tilak, and above all, Mrs. Annie Besant whose theosophist movement and the Home Rule League he joined when he was 22. Of all these three leaders, who left behind a lasting stamp on his career and character, Mr. Dwarakadas writes with warmth

and affection; particularly readable is pen-portrait of Mrs. Annie Besant----."

ಶ್ರೀಮತಿ ಬೆಸೆಂಟ್ ಇವರ ಶಿಷ್ಯವರ್ಗವು ಜಗತ್ತಿನಾದ್ಯಂತ ಇದ್ದಾರೆ. ಒಂದು ಕಾಲದಲ್ಲಿ ಈ ದೇಶದಲ್ಲಿ ಅವರು ಹೊಂದಿದ್ದ ಉಪ ಶಿಂದಾಗಿ ಮುಂದಕ್ಕೆ ಬಂದು ಅನಂತರ ಗಾಂಧೀಜಿಯವರ ಪಕ್ಷವನ್ನು ಸೇರಿದ್ದ ನಮ್ಮ ಹಿಂದಿನ ತಲೆಮಾರಿನ ರಾಜಕಾರಣಿಗಳೆಲ್ಲ ಅವರನ್ನು ಗಾಂಧೀಜಿಯವರನ್ನು ಮರೆತಿದ್ದಾರೆ. ಇದಕ್ಕೇ ನಮ್ಮ ಮಾನವತ್ವ! ಇದಕ್ಕಿಂತ ಹೆಚ್ಚು ಮೇಲ್ಮಟ್ಟಕ್ಕೆ ಹೋಗಿದೆ. ಆನಿ ಬೆಸೆಂಟ್ 1919ರಲ್ಲಿ ಈ ರೀತಿಯಾಗಿ ಹೇಳಿದ್ದಳು:—

"While I stand by the Montague-Chelmsford proposals with the modifications passed by the special Congress in Bombay----I have refused to go further, as the majority in the Delhi Congress desired, and have become a black sheep. I cannot help it----Nonetheless, with my native obstinacy I cannot give way, though I acknowledge that the country is, for the moment, with them, not with me. But majorities change and therein lies my hope----I have added to my sins by objecting to Mr. Gandhi's pledge to break laws ----and by urging that such breaking of laws was likely to produce disastrous results on casual crowds, and it is likely to lead to riot and bloodshed, whatever its promoters might say. My prophecy unfortunately proved to be true, another grave offence-- --Meanwhile, bodies of sturdy portends have gathered and have organised themselves into a National Home Rule League, for continuing on the lines originally suggested by me---."

ಗಾಂಧೀಜಿಯವರ ಪ್ರಾಬಲ್ಯ ನನ್ನ ಈ ದೇಶದಲ್ಲಿ ಹೀಗೆ ಆರಂಭವಾಯಿತು. ಆದರೆ ಆ ದಿನಗಳು ಶತಮಾನದಿಂದಲೂ ದೇಶಕ್ಕೆ ತೋರಲಿಲ್ಲ. ಇಂದಿನ ಜನಮನಸ್ಸು ತಿಳಿದಿರುವ ಪಾಶ್ಚಾತ್ಯ ಯೋಗಿನಿಯ ಬದಲಾಗಿ ಹುಟ್ಟು ಸ್ವದೇಶೀ ಯೋಗಿ ಮೋಹನದಾಸ್ ಈ "ಗಾಂಧೀ ಜೀ" ಎಂಬ ಜನಪ್ರಿಯ ನಾಮವನ್ನು ಪಡೆದಿದ್ದಾರೆ ಈ ಸ್ವದೇಶೀ ಯೋಗಿಯು ಹೇಳುತ್ತಿದ್ದ ಸತ್ಯ ಅಹಿಂಸೆಗಳೆಲ್ಲ ಕೇವಲ ಅನಿತ್ಯ ಎನ್ನುತ್ತಾ ಹಿಂದೆಗಳಲ್ಲಿ ರಾಜಕಾರಣಿಗಳೆಲ್ಲರೂ

ತಿಳಿದ್ದದನ್ನು ಜನಸಾಮಾನ್ಯರಿಂದ ತಿಳಿಯಲಾಗಿತಿಲ್ಲ. ಹೀಗೂ ಅನಿ ಬೆಸೆಂಟ್ ಇವರು ಈ ದೇಶದಲ್ಲಿ 1893 ರಿಂದ 1933 ರ ವರೆಗೆ ನಲ್ವತ್ತು ವರ್ಷಗಳ ಕಾಲ ತನ್ನ ಪರಿಪೂರ್ಣವಾದ ಮತ್ತು ಪವಿತ್ರವಾದ ಜೀವನವನ್ನು ಕಳೆದಿರು ಕೃತಾರ್ಥಳಾದಳು. ಅದರೊಂದನೆಯೇ ತನ್ನ ಕಡೆ ದಿನದ ವರೆಗೂ ಅಂತರ್ರಾಷ್ಟ್ರೀಯ ಥಿಯೋಸೊಫಿ ಸಂಸ್ಥೆಯ ಅಧ್ಯಕ್ಷೆಯಾಗಿ 1906 ರಿಂದ ಇಪ್ಪತ್ತೇಳು ವರ್ಷಗಳ ಕಾಲವಿದ್ದು ಭಾರತೀಯ ಸನಾತನ ವೇದಾಂತ ಸಂಸ್ಕೃತಿಯನ್ನು ಜಗತ್ತಿನಾದ್ಯಂತ ಹಾಗಿ ಬಿತ್ತರಿಸಿದಳು.

ಗಾಂಧೀಜಿ ಸತ್ಯಾಗ್ರಹ, ಅಹಿಂಸೆ, ಇತ್ಯಾದಿಗಳನ್ನೆಲ್ಲ ನಿಜ್ಜಮಿಂದ ನಡೆಸಿದರು ಎಂದು ಹೇಳುವ ಜನ ಕೆಲವು ವಿಷಯಗಳನ್ನು ಆಲೋಚಿಸಬೇಕು. ಅನಿ ಬೆಸೆಂಟ್ ಇಂಗ್ಲೆಂಡಿನಲ್ಲಿ 1880 ರ ದಶಕದಲ್ಲಿ ಚಾರ್ಲ್ಸ್ ಬ್ರ್ಯಾಡ್ಲೋರನ ಜೊತೆ ನಡೆಸಿದ್ದ ಆಂದೋಲನಗಳ ಚಳವಳಿ, ಸರಕಾರಕ್ಕೆ ಮೊದಲೇ ತಿಳಿಸಿ-ಅಟರಿಸುವ ಸತ್ಯಾಗ್ರಹವೆಲ್ಲವನ್ನು ಮೊದಲ ಬಾರಿಗೆ ನಡೆಸಿದ್ದಲ್ಲದೆ ಆ ಎಲ್ಲ ವಿಷಯಗಳನ್ನು ಗಾಂಧೀಜಿ ಅವರಿಂದ ಕಲಿತುದೆಂದು ತಿಳಿಯಬೇಕು. ಅಂತೆಯೇ ಅನಿ ಮತ್ತು ಹೆನ್ರಿ ಅಲ್ಕಾಟ್ ಇವರ ಹೀನಮಾನಿತ್ತ, ಅಸ್ಪೃಶ್ಯ ನಿವಾರಣೆ, ರಾಷ್ಟ್ರೀಯ ವಿದ್ಯಾಭ್ಯಾಸ, ಸ್ವದೇಶೀ ಭಕ್ತಿ, ವಿದೇಶೀಯ ವಸ್ತುಗಳ ಬಹಿಷ್ಕಾರ ಇತ್ಯಾದಿಗಳನ್ನು ಗಾಂಧೀಜಿಯು ಅವರಿಂದ ಕಲಿತದ್ದಲ್ಲದೆ ಅವರ ಆದರ್ಶ ಅನುಸರಿಸಿ ಮೊದಲಿಗರಲ್ಲ. ಅನಿ ಬೆಸೆಂಟ್ ಕ್ರಿ. ಶ. 1870 ರ ಹೊತ್ತು ಹಿಂದೆಯೇ ತನ್ನ ಹೃದಯವನ್ನು ಈ ದೇಶದ ಮೇಲಿಟ್ಟಿದ್ದಳು:—

"In the political struggle of that time, when the Beaconsfield Government was in full swing, with its policy of annexation and aggression, I played my part with tongue and pen, and my articles in defence of an honest and liberty-loving policy in India, against the invasion of Afghanistan and other outrages, laid in many an Indian heart a foundation of affection for me, and seem to me now a preparation for the work among Indians to which much of my time and thought today are given. Last year, in 1878, I wrote a book on, "England, India and Afghanistan," and with this there came many warm letters of thanks."

ಹೀಗೆ ಬಹಳ ಉಚ್ಚಪ್ರದೇಶದಿಂದ, ಮತ್ತು ಅವಳ ಹಲವು ಜನರುಗಳ ಸಮರ್ಪಣೆಯ ಬಲದಿಂದ ಈ ದೇಶದಲ್ಲಿ ಬಂದು ನೆಲೆನಿಂತುಕೊಂಡ ಅನಿ ಬೆಸೆಂಟ್ ಇವಳ ರಾಜಕೀಯ ಚಟುವಟಿಕೆಗಳನ್ನು ಇಲ್ಲಿ ದಿಗ್ದರ್ಶನಾರ್ಥವಾಗಿ ಮಾತ್ರ ಕೊ

ಕಲಾಗಿದೆ. ಅವಳ ಕಡೆ ನಲ್ವತ್ತು ವರ್ಷಗಳ ಜೀವನ ಚರಿತ್ರೆಯು ಹಿಂದೂ ಧರ್ಮದ ಮತ್ತು ಹಿಂದೂ ಸಂಸ್ಕೃತಿಯ ಹಿಂದು ಭಾಗವಾಗಿ ಹೋಗಿದೆ. ಆ ದೃಷ್ಟಿಯಿಂದಲೂ ಅವಳದು ಹಿಂದು ಕೃತಾರ್ಥ ಜೀವನ.

ಆದರೆ ಹಿಂದೆಯೇ ಹೇಳಿದಂತೆ ಅವಳು ಬಾಳಿನಲ್ಲಿ ತುಂಬಾ ಕಷ್ಟ ನಷ್ಟಗಳನ್ನು ಹೊತ್ತು ಬೆಳೆದಿದ್ದಳು. ಅವಳಿಗೆ ಕ್ರೈಸ್ತಧರ್ಮವು ಮಾನಸಿಕವಾಗಿ ಸಂತೃಪ್ತಿಯನ್ನೀಯಲಿಲ್ಲ. ಅವಳ ದಾಂಪತ್ಯ ಜೀವನವು ಸುಖಮಯವಾಗಲಿಲ್ಲ. ಅವಳ ಮಕ್ಕಳು ಇಬ್ಬರ ಪ್ರೀತಿಯೂ ಅವಳ ಪಾಲಿಗೆ ಒದಗಲಿಲ್ಲ. ಅವಳಂತೆ ಕೋರ್ಟು ಕಚೇರಿಗಳಿಗೆ ಹಲವು ಬಾರಿ ಹೋಗಿ ತನ್ನ ವ್ಯಾಜ್ಯವನ್ನು ತಾನೇ ವಾದಿಸಿ ಕಾರ್ಯವನ್ನು ಸಾಧಿಸುತ್ತಿದ್ದ ಇನ್ನೊಬ್ಬ ಹೆಣ್ಣು ಲೋಕದಲ್ಲಿ ಇಂದೂ ಇಲ್ಲ. ಅನ್ಯಾಯ, ಅಕ್ರಮ, ಅತ್ಯಾಚಾರಗಳನ್ನೆಲ್ಲ ಅವಳು ಹತ್ತು ಗಂಡಸರ ಶಕ್ತಿಯನ್ನು ಮೀರಿ ಎದುರಿಸಿದ್ದಳು. ಅದು ಅವಳ ಬಾಳನ್ನು ಇನ್ನಷ್ಟು ವಿರಸಗೊಳಿಸಿತು.

ಅನಿಯ ಮಗ ಡಿಗ್ಬಿ ಬೆಸೆಂಟ್ ಇವನು ಇಂಗ್ಲೆಂಡಿನಲ್ಲಿ ವಿಮಾ ಸಂಸ್ಥೆಯ ತಜ್ಞನಾಗಿ ಉದ್ಯೋಗದಲ್ಲಿದ್ದನು. ಮಗಳು ಮೇಬಲ್ ಬೆಸೆಂಟ್ ಇವಳು ಕೆಲವು ವಿಷಯಗಳಲ್ಲಿ ಮತ್ತು ಕೃತಿಯಲ್ಲಿ ತನ್ನ ತಾಯಿಯಂತೆಯೇ ತೋರ್ಪಡಿಸಿಕೊಂಡಿದ್ದಳು.

ಅನಿ ಬೆಸೆಂಟ್ ಇವಳು ತನ್ನ ಕರ್ತವ್ಯ ಕ್ಷೇತ್ರದಲ್ಲಿ ಕೆಲವು ಬಾರಿ ತಪ್ಪದೆಯೂ ಇರಲಿಲ್ಲ. "ನಡೆಯುವರೆಡಹದೆ ಕುಳಿತಿಹರೆಡಹುವರೇ?" ಎಂದಂತೆ ಅವಳು ತನ್ನ ಉತ್ಸಾಹಬಲದಿಂದ ತಪ್ಪಿದ್ದಳು. ಬನಾರಸದಲ್ಲಿದ್ದಾಗ ಥಿಯೊಸೊಫಿ ಸಂಸ್ಥೆಯ ಲೆಡ್‌ಬೀಟರನ ಮೇಲೆ ಜನರು ರೇಗಿದ್ದರು. ಆಗ ಅನಿಯು ಅವನ ಪರವಾಗಿ ವಾದಿಸಿ ತನ್ನ ಜನಪ್ರಿಯತೆಯನ್ನು ಕಳೆದುಕೊಂಡಳು; ಮಾತ್ರವಲ್ಲ, ತಾನೇ ಸ್ಥಾಪಿಸಿದ ಹಿಂದೂ ವಿಶ್ವವಿದ್ಯಾಲಯದಲ್ಲಿ ತನ್ನ ಸ್ಥಾನವನ್ನು ಬಿಡಬೇಕಾಯಿತು. ಅನಿಯು ವಿಪರೀತ ಉತ್ಸಾಹಿ ಕೆಲಸಗಾರ್ತಿಯೋ ಅಷ್ಟೇ ಹಠವಾದಿಯೂ ಆಗಿದ್ದಳು. ಎಡ್ವಿನ್ ಮೊಂಟೆಗ್ಯೂ, ಚೆಮ್ಸ್‌ಫರ್ಡ್, ಚಿತ್ತರಂಜನ ದಾಸ, ಮಹಮ್ಮದಾಲಿ ಜಿನ್ನಾ ಮೊದಲಾದವರು ಅವಳ sharp tongue- ಇದರ ಬಗೆ ಆಗಿಂದಾಗ ಟೀಕಿಸಿದ್ದರು.

ಅನಿ ಬೆಸೆಂಟಳು ತನ್ನ ನಾಟಕೀಯ ವ್ಯಕ್ತಿಮತ್ವವನ್ನು ಬಿಳಿ ದೈವ ಸ್ವರೂಪದಿಂದ ಲೋಕಕ್ಕೆ ತೋರಿಸುತ್ತಿದ್ದಳು. ಅದೇನೋ ತಮಾಷೆಯೋ ಎಂದು ಜನ ಭಾವಿಸಿದ್ದರು. ಮದ್ರಾಸಿನ ಬ್ರಾಹ್ಮಣೇತರ ಪಕ್ಷದ ಡಾ| ಟಿ.ಎಂ. ನಾಯರ್ ಇವನು ಅವಳಿಗೆ ರಾಜಕೀಯ ವಿಷಯದಲ್ಲಿ ಪ್ರಬಲ ವೈರಿಯಾಗಿದ್ದನು. ಅವಳ ಪ್ರತಿಷ್ಠೆಗೆ ಭಂಗ ಬರುವ ರೀತಿಯಲ್ಲಿ ಹಿಂದು ಹೊತ್ತಿಗೆಯನ್ನೇ ಪ್ರಕಟಿಸಿದನು. ಅದರ ಮೇಲೆ ಅವಳು ಯಾವ

ಶ್ರೀಮತಿಯವರನ್ನು ಮಾನಸಪುತ್ರಿಯನ್ನಾಗಿ ಕೈಗೊಳ್ಳುವ ಸಮರ್ಥಳಾದಳು. ಆದೇ ನಿಷ್ಠರಾಗಿ ಅವರು ಅಂತರರಾಷ್ಟ್ರೀಯ ರಾಜಕಾರಣಿ, ವಾಗ್ಮಿನಿ, ಲೇಖಕಿ ಇತ್ಯಾದಿಯಾಗಿ ಶೋಭಿಸಿದ್ದು ವಿವಿಧ ಕ್ಷೇತ್ರಗಳಲ್ಲಿ ಪ್ರಖ್ಯಾತರಾದರು. 1933ರ ಸೆಪ್ಟೆಂಬರ್ ೨೦ರಂದು ಅನಿ ಬೆಸೆಂಟ್ ಇವರು ನಿಧನರಾದಾಗ ಭಾರತದ ವೈಸ್‌ರಾಯ್ ಇವರಿಂದ ಹಿಡಿದು, ಬ್ರಿಟಿಷ್ ಸರಕಾರದ ಹಲವು ಪ್ರಮುಖರು, ದೇಶೀಯ ಮಹಾರಾಜರುಗಳು ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಅವರನ್ನು ಕುರಿತಾಗಿ ಇಂಗ್ಲೆಂಡ್, ಅಮೇರಿಕಾ ಮತ್ತು ಹಲವು ರಾಷ್ಟ್ರಗಳ ಪತ್ರಿಕೆಗಳು ಪ್ರಶಂಸಾಪೂರ್ವಕವಾಗಿ ಬರೆದುವು. 1933ರ ಸೆಪ್ಟೆಂಬರ್ ೨೧ರ ಲಂಡನ್ನಿನ ಪ್ರಖ್ಯಾತ 'The Times' ಪತ್ರಿಕೆಯು ಅವರ ವಿಷಯವಾಗಿ ಸವಿಸ್ತಾರ ಬರೆದ ಸಂಪಾದಕೀಯದಿಂದ ಕೆಲವು ಪಂಕ್ತಿಗಳನ್ನು ಹೆಕ್ಕಿ ಇಲ್ಲಿ ಕೊಡಲಾಗಿದೆ:—.

"Not many years ago the death of Mrs. Besant, the President of Theosophical Society, would have been an event of importance in Indian politics, the chief field of her agitation and propaganda. Her influence there had waned, but she remained the spiritual leader of numbers of people all over the world. Throughout her varied career------she possessed eloquence of a most exceptional kind, with organising ability and no slight literary talent, shown in her numerous books and pamphlets.

"Annie Wood was born on 1st October, 1847, the only daughter of an Irish mother Emily Morris, and of a father, William Barton Persee Wood, who was half Irish on his mother's side. The elder branch of this family included Lord Chancellor Hatherley, Field Marshal Sir Evelyn Wood and others---

"------Her education was entrusted to Miss Marryat, sister of the novelist. She married in 1867, the Rev. Frank Besant, afterwards, Vicar of Sibsey, Lincolnshire and had two children, a boy and a girl. She lost her religious faith in 1873, and she left Sibsey. She was legally separated from her husband, who survived till 1917. Soon she met Charles Bradlaugh and became co-editor of the National Reformer, and Vice-President of National Secular Society------In 1878, the author of "The Gospel of Atheism" and champion of Neo-Malthusianism, that Annie was deprived by the courts of the custody of her little daughter, but both her children when they grew up returned to her. In 1885, Mrs. Besant suddenly joined the Fabian Society and the Social Democratic Federation. Socialism was now the one and the only gospel. She was present at the Trafalgar Square riots, was elected to the London School Board and with Herbert Borrows, organised the strike of the match-makers and founded their union.

Again with dramatic suddenness, Mrs. Besant in 1889, announced her conversion to Theosophy and tenets of Mme. Blavatsky. On the latter's death in 1891, Mrs. Besant promptly became her successor and one of the two 'heads' of the inner Theosophical Organization called the Esoteric Section------Mrs. Besant visited India for the first time in 1893, and immediately declared that she had often been incarnated before in that sacred land-----.

"In 1895, Mrs. Besant became absolute head of the inner Organizat-

Organization and director of the movement, while Colonel Olcott, the founder-President, became a mere figure-head------The Central Hindu College which she founded in Benares in 1898 was modelled on missionary lines- the Hinduism taking place of Christianity. From Benares she strove to spread the religious type of education among the Hindus, and founded schools in many places for both boys and girls. Her support of Leadbeater in the unpleasant controversy of which he was the origin weakened her authority-----."

After leaving Benares, she spent her time at Adyar, near Madras, and gained enormous popularity by her constantly proclaimed faith in the superiority of the whole Hindu system to the vaunted civilization of the West. Hindus were welcomed to the Theosophical fold without being required to renounce their ancient faiths------With her remarkable power of seizing the psychological movement, she fastened on the catch-word of HOME-RULE for India- quite early in the war, and formed a league for its promotion----It was during this wave of fervour that "the old lady of Adyar", as she was called, was denied access to some of the Indian Provinces------and that the Government of Madras decided to intern her. This meant little more than that her residence and most of her activities were transferred to Ootacmund where she hoisted her Home Rule flag on her house, and still directed her movement for Swaraj. The internment however was made a subject of vehement agitation, not only in India, but by the groups interested in Mrs. Besant in this country (England)------.

When Montague-Chelmsford report was published, Mrs. Besant rejected the proposals as inadequate and gave evidence to this effect before the Joint Standing Committee of Parliament. But her star was already waning before that of Mr. Gandhi, and she had to deplore in her paper 'the hatred' of her Tamil Brethren (and that included an outspoken exposure by Dr. T.M. Nair, the leader of the non-Brahmin parties in Madras)------.

In 1923, Mrs. Besant arranged a round-table conference of Indians of various schools of thought to draw up an Indian Constitution which led to the framing of a Commonwealth of India Bill by members of the Labour Party. In this country she joined that party------Her vigour of mind was extraordinary. She was accustomed to rise at 4 a.m. and to keep her intellectual powers on the stretch until late night------while her diet was scanty and strictly vegetarian. At an advanced age she did not hesitate to take long journey by air both in India abroad------She spent her days in retirement at Adyar. Her son Mr. A.D.Besant, is a distinguished actuary.

* * * * *

ಬೇರ್ಕದ ಹಲವು ಜನ ಕೇವಲ ಸ್ವಾತಂತ್ರ್ಯ ದೃಷ್ಟಿಯಿಂದ ದೇಶದ ನಾಯಕತ್ವಕ್ಕೆ ಹೋರಾಡುವಾಗ ಆನಿ ಬೆಸೆಂಟರು ಜನಸೇವೆ ಮತ್ತು ದೇಶಸೇವೆಯನ್ನೇ ತನ್ನ ಬಾಳಿನ ಧ್ಯೇಯವಾಗಿಟ್ಟು ತನ್ನ ಕಡೇ ದಿನದ ವರೆಗೂ ದುಡಿದರು. 1890 ರಿಂದ 1930 ರ ವರೆಗಿನ ನಲವತ್ತು ವರ್ಷಗಳ ಕಾಲದ ಚರಿತ್ರೆಯನ್ನು ತಿಳಿಯಬೇಕಾದರೆ ಆನಿಯವರ ಸಾಧನೆಗಳನ್ನು ಪರಿಶೀಲಿಸದರೆ ಕಂಡುಬರುತ್ತದೆ. ಅವರ New India ಮತ್ತು Commonweal ಪತ್ರಿಕೆಗಳು ಅವರ ಗ್ರಂಥಗಳು ಇವನ್ನು ಪ್ರಕಟವಾಗುತ್ತಿತ್ತು, ನಮ್ಮ ದೇಶದ ನಾಯಕರು ಆದರ್ಶಪ್ರಾಯ ಹಲವು ವಿಷಯಗಳನ್ನು ಹೇಳುತ್ತಿದ್ದಾರೆ. ಹೇಳಿದ ಹಲವು ವಿಷಯಗಳಲ್ಲಿ ನಿಜವಲ್ಲದ ವಿಚಾರಗಳು ಅಡಗಿರುವುವು. ಅವರು

ಈ ದೇಶದ ಸ್ವಾತಂತ್ರ್ಯಕ್ಕೆ ನಿಷ್ಠೆಯಿಂದ ದುಡಿದ ತೇಜೋಪೂರ್ಣ ವ್ಯ
ಕ್ತಿಯಾಗಿದ್ದಳು, ಎಂಬುದನ್ನು ಅವಳ ಕಾರ್ಯಕಲಾಪಗಳು ಪ್ರತಿಪಾದಿ
ಸುವೆ. ಹಿಂದೂ ಧರ್ಮ ಪ್ರಚಾರ, ಭಾರತೀಯ ವಿದ್ಯಾಪ್ರಚಾರ, ಬಾಲಚ
ಮೂ (Scout movement) ದಳದ ಸ್ಥಾಪನೆ, ಸ್ತ್ರೀಯರ ಏಳಿಗೆ, - ಹೀ
ಗೆ ಇನ್ನೂ ಹಲವು ಅವಳ ಕಾರ್ಯಕ್ರಮಗಳು ಕ್ರಾಂತಿಕಾರಕವಾಗಿದ್ದುವು,
ಅವಳ ತತ್ವಬಲ ಹಾಗೂ ವಾಗ್ಬಲವು ಅಸಾಧಾರಣವಾದುದಾಗಿತ್ತು.

ಹಾಗಿದ್ದರೂ ಅವಳ ಬಹುಸ್ತುತಿ ಸೇವೆಯನ್ನು ಭಾರತೀಯ
ರು ಸದುಪಯೋಗಪಡಿಸಿಕೊಳ್ಳಲಿಲ್ಲ. ಇದಕ್ಕೆಲ್ಲ ಮೂಲಕಾರಣ ನಮ್ಮ
ಅಹಂಕಾರ ಮತ್ತು ಕೃತಘ್ನತಾ ಭಾವನೆ, "ನಮ್ಮ ಮತ ಧರ್ಮ
ವಿದ್ಯೆ ಇತ್ಯಾದಿಗಳನ್ನು ಕುರಿತಾಗಿ ಹೇಳಲು ಇವಳಾರು?" ಎಂಬ ಸಂ
ದು ಮನೋವ್ಯಾಧಿಯು ನಮ್ಮ ಅವಿವೇಕಿ ಜನವನ್ನು ತುಂಬಾ ಬಾಧಿಸಿತ್ತು.
ಆದರೆ ಅದರಿಂದ ಆನಿಯು ಧೃತಿಗೆಡಲಿಲ್ಲ.

ನಮ್ಮ ಜನ ಅದೇಕೋ ಆನಿಯು ಹೇಳುತ್ತಿದ್ದುದಕ್ಕೆ ಒಪ್ಪದೆ
ತಮ್ಮದೇ ರಾಜಕೀಯವನ್ನು ನಡೆಸಿದರು; ಆನಿಯು ಸೆರೆವಾಸಕ್ಕೆ
ಹೋದಾಗ ಗಾಂಧಿಯು ಲಂಗಿಯಲ್ಲಿ ಕಾಣಿಸಿಕೊಂಡರು; ಆನಿಯು
ನಿರಂಕುಶ ಪ್ರಭಾವವನ್ನು ಖಂಡಿಸುತ್ತಿದ್ದಾಗ ಗಾಂಧಿಯು ಬಹು ಮೆ
ಲ್ಲಗೆ ನಿಧಾನವಾಗಿ ಮಾತಾಡುತ್ತಿದ್ದರು. ಆನಿಯು New India ಪತ್ರಿ
ಕೆಯನ್ನು ನಡೆಸುತ್ತಿದ್ದಾಗ ಗಾಂಧಿ Young India ಪತ್ರಿಕೆಯನ್ನು
ನಡೆಸಿದರು. ಆನಿಯು ಅಸಹಕಾರ ಚಳವಳಿ ಹಿಂಸಾತ್ಮಕವಾದುದು
ಎಂದು ಹೇಳಿದಾಗ ಗಾಂಧಿ ಅದನ್ನು ಶನೈಃ ಶನೈಃ ನಡೆಸುವ ಹಠ
ತೊಟ್ಟರು. ಅದೇ ರೀತಿ ಗಾಂಧೀಜಿ ತನ್ನ ಖಿಲಾಫತ್ ಚಳವಳಿ, ಉಪ್ಪಿ
ನ ಸತ್ಯಾಗ್ರಹ, ಆಗಿಂದಾಗ್ಗೆ ಉಪವಾಸ ಮೊದಲಾದುವನ್ನೆಲ್ಲ ಕೆ
ಲವು ಜನರಿಂದ ತಾನು ಅದನ್ನೆಲ್ಲ ನಡೆಸಬಲ್ಲೆನೆಂದು, ಮತ್ತು
ಸರಕಾರಕ್ಕೆ ತಾನೇ ಜನದ ನಾಯಕನೆಂದು, ತೋರ್ಪಡಿಸಲು
ಅದನ್ನೆಲ್ಲ 1945ರ ವರೆಗೂ ಒಂದಲ್ಲ ಒಂದು ರೀತಿಯಲ್ಲಿ ನಡೆಸು
ತ್ತಲೇ ಇದ್ದರು.

ಇದೆಲ್ಲವನ್ನು ನೋಡಿದ ಮತ್ತು ಹಲವು ಕಹಿ ಅನುಭ
ವಗಳನ್ನು ತನ್ನ ಕರ್ಮಫಲವೆಂದೆನ್ನುತ್ತಾ ನುಂಗಿಕೊಂಡ
ಆನಿ ಬೆಸೆಂಟ್ ಇವಳಿಗೆ ತನ್ನ ನಿಸ್ವಾರ್ಥತತ್ಪರತೆಗೆ ಅವಳ್ಳ ಶೋ
ಚಕವಾದುದು ಮೃತ್ಯುವಿಂದು ಇತರರು ಮನಗಂಡರು. ಭಾರತೀ
ಯ ಸರಕಾರವು ಈ ವರೆಗೂ ಈ ಮಹಾವ್ಯಕ್ತಿಯನ್ನು ಗೌ
ರವಪೂರ್ಣವಾಗಿ ನೆನೆಯಲಿಲ್ಲ. ಒಂದೆರಡು ಬಾರಿ ಅವಳ ಸ್ಮಾ
ರಕವಾಗಿ ಅಂಚೆ ಚೀಟಿಗಳನ್ನು ಹೊರಡಿಸಿದ್ದುಂಟು. ಅಂತಹುದೆ
ಸ್ವಾತಂತ್ರ್ಯಯುದ್ಧವನ್ನು ಸಾಧಿಸುತ್ತಾ ಓಡಾಡಿದ ಕೆಲವರನ್ನು ಅದೇ
ವೇ ಬಹುಜನವನ್ನು, ಬಹು ದೊಡ್ಡ ರೀತಿಯಲ್ಲಿ, ಪ್ರತಿಮೆಗ
ಳು ಎಂದು ಮನೆಮನೆ ರೀತಿಯಲ್ಲಿ ಸನ್ಮಾನಿಸಿದ್ದುಂಟು. ಇರಲಿ!

ಆದರೆ ನಮ್ಮ ದೃಷ್ಟಿಯು ಇನ್ನೂ ವಿಶಾಲವಾಗುತ್ತಿರುತ್ತದೆ. ಇಂಥ ವಿಷಯಗಳಲ್ಲಿ ಇನ್ನಷ್ಟು ಆಸಕ್ತಿದಾಯಕವಾಗಿ ತೋರುತ್ತಿರುತ್ತದೆ, ಎಂದಷ್ಟೇ ಇಲ್ಲಿ ಹೇಳಬಹುದಾಗಿದೆ.

ಈ ಗ್ರಂಥದಲ್ಲಿ ಆನಿಯು ಜೀವನದ ಬಹುವ್ಯಾಪಕ ಕಾರ್ಯಕ್ಷೇತ್ರದ ಪರಿಚಯವನ್ನು ಮಾಡಲು ಅವಳ ಆತ್ಮ-ಚರಿತ್ರೆಯಿಂದಲೂ ಜಾರ್ಜ್ ಅರುಂಡೇಲರ ಹೇಳಿಕೆಯನ್ನೂ ಇದರಲ್ಲಿ ಅಳವಡಿಸಿದ್ದೇನೆ. ಅವಳ ಕಾರ್ಯಸಾಧನೆಯ ಪೂರ್ತಿ ವಿವರಗಳಿಗೆ ಅವಳ ನೂರಾರು ಪುಸ್ತಕಗಳು ಜನಪ್ರಿಯವಾದವು ಮತ್ತು ಅವಳನ್ನು ಕುರಿತಾಗಿ ಇತ್ತೀಚೆಗೆ ಬರೆದ ಗ್ರಂಥಗಳು ಜನರ ಕೈಗಳಿಗೆ ಕಾಯುತ್ತಿರುವವು. ಅಂತಾಗಲಿ ವರಿಗೆ ಕನ್ನಡಿಗರಿಗೆ ಈ ನನ್ನ ಪ್ರಯತ್ನವು ಸಾಕಷ್ಟು ವಿಷಯಜ್ಞಾನವನ್ನು ಒದಗಿಸಬಹುದೆಂದು ನಂಬುತ್ತೇನೆ. ಆನಿ ಬೆಸೆಂಟ್ ಇವಳೆಂಥಾ ಒಂದು ವ್ಯಕ್ತಿತ್ವ ಯಾವಾಗಲೂ ತೋರಿಸುವದು! ಅವಳು ಒಂದೆಡೆ ಹೀಗೆಂದಿದ್ದಾಳೆ:—

"To be chosen to bear the standard is the good Karma which grows out of a life that has never shrunk from sacrifices for Freedom's sake. Turned out my home because I would not pretend to believe in a Christianity which I had rejected ; winning my way on press and platform as a soldier of political liberty; fighting besides Charles Bradlaugh for the right of Free speech and Free thought, and then for the right of Free discussion on social matters; fighting beside him for his right to the seat he had won; fighting for decent life for match-girls, for dockers, for the unskilled and helpless, for Free Speech again in the last great London struggle; fighting against the treatment of India, the invasion of Afghanistan the theft of Egypt; for Ireland in the early dangerous days when Home Rule was "the march to the dismemberment of the Empire through rapine", for internationalism and Socialism in France, in Holland, in Britain-, I have won the right to fight again in the van of Free Speech in India.

"I am not wont to boast of my past, nor to claim to lead when the way is easy; but in the days of peril, when Liberty, my life's mistress, calls, I claim my place in the front of the struggle. The old love for me in England is still mine; I tested it when last in England I spoke on India's wrongs, and it rang true and earnest as of yore."

ತಾ. ೬-೪-೧೯೭೦
ಬ್ರಿಟಿಷ್ ಕೊಲಂಬಿಯಾ
ಕೆನಡಾ.—

ವಿ. ಮ. ಮುತಾಲಿಕ.
6/4/'70

ಆನಿ ಬೆಸೆಂಟ್

ಜಾರ್ಜ್ ಎಸ್. ಅರುಂಡೇಲ್ — ಇವರು — ಆನಿಯ ಆತ್ಮಚರಿತ್ರೆಗೆ ಬರೆದ ಮುನ್ನುಡಿ।

ಡಾ. ಆನಿ ಬೆಸೆಂಟ್ ಇವರ ಈ ಅನುಪಮವಾದ ಹಾಗೂ ಈ ಹೊಸ ಆತ್ಮಚರಿತ್ರೆಯನ್ನು ಎರ್ನೆಸ್ಟ್ ಬೆನ್ನ್ ಪ್ರಕಟಣಾ ಸಂಸ್ಥೆಯಿಂದ ಥಿಯೊಸೊಫಿಕಲ್ ಪ್ರಕಟಣಾ ಮಂದಿರವು ಪ್ರಕಟಿಸಿ ಗೌರವಾನ್ವಿತವಾಗಿದೆ, ಮಾತ್ರವಲ್ಲ, ಅದಕ್ಕೊಂದು ಮುನ್ನುಡಿ ಹೇಳುವುದು ನನಗೆ ಇನ್ನಷ್ಟು ಹೆಮ್ಮೆಯೆನ್ನುತ್ತಿದೆ.

ನಮ್ಮ (ಥಿಯೋಸಫೀ) ಪ್ರಕಟಣಾ ಮಂದಿರವು ಇತ್ತೀಚೆಗೆ ಹೊರತಂದ "ಬೆಸೆಂಟ್ ಭಾವನೋಲ್ಲಾಸ"*, ಎಂಬ ಮೂರು ಕಾಂಡಗಳ ಗ್ರಂಥಕ್ಕೆ ಮುನ್ನುಡಿಯನ್ನು ಬರೆಯುತ್ತಾ ನಾನು ಅವರ ಜೀವನವನ್ನು ಕುರಿತಾಗಿ ಸಿಂಹಾವಲೋಕನವನ್ನು ಮಾಡಿದ್ದೇನೆ. ಅವರ ವಿವಿಧ ಚಟುವಟಿಕೆಗಳನ್ನು ನಾನು ಅವರೊಡನೆ ಮೂವತ್ತು ವರ್ಷ ದುಡಿದು ಬಹು ಸಮೀಪದಿಂದ ಅವಲೋಕಿಸಿದ್ದೇನೆ. ಆನಿ ಬೆಸೆಂಟರ ಮಾನವೀಯ ಸ್ವಭಾವದ ಉತ್ತಮ ಆದರ್ಶಗಳನ್ನು ತಿಳಿಯಲಿಚ್ಛಿಸುವವರು ನಾನು ಅವರನ್ನು ಕುರಿತಾಗಿ ಬರೆದ ಆ ವಿವರಣೆಗಳಿಂದ ತಿಳಿದುಕೊಳ್ಳಬಹುದು.

ಆನಿ ಬೆಸೆಂಟರ ಮಾನವೀಯ ಗುಣಗಳನ್ನು ಅವರ ಆತ್ಮಕಥೆಯು ಚಿತ್ರಿಸುತ್ತದೆ, ಮಾತ್ರವಲ್ಲ, ಇತರ ಎಲ್ಲಾ ವಿಶಿಷ್ಟತೆಗಳನ್ನು ಮೀರಿ ಬೆಳಗಿದ ಅವರ ಉನ್ನತವಾದ ಜೀವನದ ಆದರ್ಶವನ್ನು ಭವ್ಯಗೊಳಿಸಲು ಆ ಗುಣಗಳು ಆಧಾರಪ್ರಾಯವಾಗಿದ್ದುವೆಂಬುದನ್ನು ಅದು ಎತ್ತಿ ತೋರಿಸುತ್ತದೆ.

ನಾವು ನಮ್ಮ ಜೀವನವನ್ನು ಹೇಗೆ ಆರಂಭಿಸಲಿಚ್ಛಿಸುತ್ತೇವೋ ಅದೇ ರೀತಿಯಲ್ಲಿ ಡಾ. ಬೆಸೆಂಟ್ ಇವರೂ ತನ್ನ ಜೀವನವನ್ನು ನಿರ್ವಹಿಸಲು ತೊಡಗಿದರು. ಅವರು ತನ್ನ ಉದಾತ್ತ ಗುಣದ ತಾಯಿಯಿಂದ ಬೆಳೆಸಲ್ಪಟ್ಟರು, ಮತ್ತು ಅವರ ಆಶ್ರಯಕ್ಕೊಳಗಾಗಿದ್ದರು. ಶ್ರೀಮ್ಯ ಗುರುವಿನ ಆಶ್ರಯದಿಂದ ಅವರು ಶಾಲೆಯನ್ನು ಕಲಿಯುವುದರ ಬದಲಾಗಿ ವಿದ್ಯೆಯನ್ನೆ ಪಡೆದರು. ಒಂದು ವಿಧದಲ್ಲಿ ಅವರು ಈ ಜಗತ್ತಿನ ಜೀವನವನ್ನು ಸಾಗಿಸಲು ಅರ್ಹಳಾಗಿರಲಿಲ್ಲವೆಂದರೂ ಸರಿ. ಆದರೆ ಇನ್ನೊಂದು ವಿಧದಲ್ಲಿ ಅವರ ಮಾತೆ ಮತ್ತು ಗುರುವು ಪ್ರಪಂಚದ ಹಾಗೂ ಅವರ ಆತ್ಮ

---

* "ಬೆಸೆಂಟ್ ಭಾವನೋಲ್ಲಾಸ" (The Besant Spirit) ಇದು ಡಾ. ಬೆಸೆಂಟ್ ಬರವಣಿಗೆಗಳ ಸಂಕಲನ. ಭಾಗ 1 (ವಿವಿಧ ವಿಷಯಗಳು), ಭಾಗ 2 (ವಿದ್ಯೆ), ಭಾಗ 3 (ಭಾರತ), ಭಾಗ 4 (ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷ ಭಾಷಣ), — ಹೀಗೆ ಪ್ರತಿಯೊಂದು ಭಾಗವೂ ಸುಮಾರು 120 ಪುಟಗಳು. —

ಯು ಸಂಸ್ಕಾರಬಲದ ದುರಂತಕಾರಕವಾದ ಮತ್ತು ಪ್ರಶಾಂತವಾದ ಆಳ ಹಾಗೂ ಉನ್ನತಿಯನ್ನು ಸಾಲಬದಲ್ಲಿ ಅರಿಯಲು ತಕ್ಕ ಸೀಕಯರ್ಯವನ್ನು ಕಲ್ಪಿಸಿ ಪ್ರಾರಂಭಿಸಲ್ಪಡುತ್ತದೆ.

ಕಾಲಗಣನಾಕ್ರಮವಾಗಿ ಮತ್ತು ಸಾಂಪ್ರದಾಯಿಕವಾಗಿ ವೈವಾಹಿಕ ಜೀವನಕ್ಕೆ ಕಾಲಿಟ್ಟ ಅವಳು ಕ್ರೈಸ್ತ ಗೃಹಸ್ಥನಿಯಾಗಿ ಇರಲು ಒಲ್ಲದೆ ಸತ್ಯಾನ್ವೇಷಣೆಯ ಕಾತರತೆಯ ಮನೋಪ್ರವೃತ್ತಿಗಳಿಗಾಗಿ ಅವಳ ಕಣ್ಣಂಚಿಂದಿಯಂತೆ ಕಾದಾಟದ ವೇಗಕೊಳಗಾದ್ದರಿಂದಾಗಿದು ಅತ್ಯಲ್ಪ ಸಮಯದಲ್ಲಿಯೇ ವ್ಯಕ್ತವಾಯಿತು. ಈ ಸತ್ಯಾನ್ವೇಷಣೆಯ ದಾಹವೆಂಬ ವಿದ್ಯುಚ್ಛಕ್ತಿಯು ಎಳೆಯಲ್ಲಿ ಹಲವು ಹಿಂದಿನ ಜನ್ಮಗಳ ಹವಳ ಮತ್ತುಗಳ ಮಾಲೆ ಅವಳಲ್ಲಿ ಸಮಾವೇಶಗೊಂಡಿತ್ತೆಂದು ಆ ಮೇಲೆ ತೋರಿಬಂತು.

ಆ ಹಿಂದಿನ ಜನ್ಮಗಳ ಎಳೆಯಲ್ಲಿ ಬೆಳೆದು ಬಂದ ಸಂಸ್ಕಾರಬಲದಲ್ಲಿ ತಾನೂ ಒಂದು ಅಂಶವೆಂಬುದನ್ನು ಆನಿ ಬೆಸೆಂಟಳು ತನ್ನ ಆತ್ಮಚರಿತ್ರೆಯಲ್ಲಿ ಕಾಣಿಸಿರುವಳು, ಅಷ್ಟೇ ಅಲ್ಲ, ವೈವಾಹಿಕ ಜೀವನದ ಸಂಕೀರ್ಣತೆಯಲ್ಲಿ ಸಿಲುಕಿಬಿದ್ದ ಅವಳು ಅಂದಿನ ಸ್ಥಿತಿಗೆ ತಕ್ಕಂತೆ ನಿಷ್ಠೆಯು ಕ್ರೈಸ್ತಗಿರುವ ತನ್ನ ಮತ, ಅಂದಿನ ಕ್ರೈಸ್ತವಂಶದ ಹಠವಾದ ಮತ್ತು ಅಸಹನೆ, ಇತ್ಯಾದಿ ಹಲವು ಜನ್ಮಗಳಲ್ಲಿ ಸ್ವಾತಂತ್ರ್ಯ, ಸತ್ಯ ಮತ್ತು ನ್ಯಾಯ ಪ್ರತಿಪಾದನೆಗೆ ಹೋರಾಡುತ್ತಿದ್ದ ಅವಳಿಗೆ ತನ್ನ ಜೀವನದಾವರ್ತನೆ ಅದರಿಂದ ಸಾಧನರಂಗವಾಗಿ ಕಂಡುಬಂತು.

ಈ ದುರ್ಗಮವಾದ ಅವಸ್ಥೆಯಲ್ಲಿ ಶನೈಃ ತನ್ನ ಸುಪ್ತವಾದುದನ್ನು ತಾಳಿ ಎಚ್ಚತ್ತು ಬರಲು ದೈವಾನುಗ್ರಹವು ಆನಿ ಬೆಸೆಂಟಳಿಗೆ ತಕ್ಕ ಸನ್ನಿವೇಶವನ್ನು ಕಲ್ಪಿಸಿದೆಯೆಂಬುದಕ್ಕೆ ಸಂದೇಹವಿಲ್ಲ. ಅಂತೆಯೇ ಆ ನರಕಸದೃಶವಾದ ಅನುಭವಗಳನ್ನು ಶನೈಃ ಸಿಸಿದಳೋ ಎಂಬಂತೆ ಮತ್ತು ಏಕಾಂತವಾದ ಕತ್ತಲಗೂಡಿನಲ್ಲಿರುವಂತೆ ಅವಳು ಎಚ್ಚತ್ತು ಬಂದಳು. ಆದರೆ ಅವಳ ಜಾಗೃತಾವಸ್ಥೆಯಲ್ಲಿ ತೋರುವ ದಿವ್ಯಶಕ್ತಿ ಬರೇ ಭಾವೋತ್ಪಾದಕವಾಗಿಲ್ಲದೆ ಪ್ರಾಜ್ಞ ಅನುಭವಬಲದಿಂದ ಕೂಡಿಬಂದುದೆನಿಸಬಹುದಾಗಿದೆ. ಸತ್ಯಕ್ಕೆ ಮಾರುಹೋದ ಅವಳು ಆ ಕಾಲದ ಸಾರ್ವಜನಿಕ ಮನೋಭಾವವನ್ನು ಗಣಿಸದೆ ವಿವಾಹವಿಚ್ಛೇದನವನ್ನು ಕೈಗೊಂಡಳು. ಧೈರ್ಯದಿಂದ ತನ್ನ ಪ್ರೀತಿಯ ಮಕ್ಕಳನ್ನು ಸಹ ತ್ಯಜಿಸುವ ಹೃದಯವಿದ್ರಾವಕವಾದ ಪ್ರಸಂಗಕ್ಕೆ ಒಳಗಾದಳು, ತನ್ನ ಸ್ವಾಭಾವಿಕ ಹಾಗೂ ಆಧ್ಯಾತ್ಮಿಕವಾದ ಸತ್ಯ, ದಯೆ, ಸೋದರಭಾವಾದಿ ಗುಣಗಳಿಂದ ಆನಿ ಬೆಸೆಂಟ್ ಇವಳು ಏಕಾಂಗಿಯಾಗಿ ಲೋಕವನ್ನು ಎದುರಿಸಿದಳು. ತನ್ನ ಹಲವು ಜನ್ಮಗಳಲ್ಲಿ ಕಷ್ಟನಿಷ್ಠುರಗಳನ್ನು ಅನುಭವಿಸಿದ್ದ ಅವಳು ಯಾವ ಅಕ್ರಮ ಅನ್ಯಾಯಕ್ಕೂ ಜಗ್ಗದೆ ಮುನ್ನಡೆಯುವ ಧೈರ್ಯ ಮತ್ತು ಸ್ಥಿತಪ್ರಜ್ಞತೆಯನ್ನು ಒಡಗೂಡಿ ತಂದು ಪ್ರದರ್ಶಿಸಿದಳು. ಆ ರೀತಿ ಅವಳ ಜಾಗೃತಿ

ಗಳು ಅವರಲ್ಲಿ ಹೊಂದುತ ಜೀವನ ವಿಕಾಸವಾಗುತ್ತಾಯಿತು. ಅಂತೆಯೇ ಅವಳ ಸ್ವಾತಂತ್ರ್ಯತೆಗೆ ತಕ್ಕ ಸನ್ನಿವೇಶವನ್ನು ಕಲ್ಪಿಸಲಾಯಿತು.

ಇಂದಿನ ಹಲವು ಜನಾಂಗಗಳ ಸ್ವಾತಂತ್ರ್ಯವು ಅವಳಿಂದ ಏನೂ ಇಲ್ಲವಾಗಿದ್ದರೂ ತಾನು ಜನಾಂತರಗಳಲ್ಲಿ ನಡೆಸಿದ ಮಹತ್ವಪೂರ್ಣ ಎಲ್ಲವನ್ನೂ ಎತ್ತಿಕೊಂಡು ಅನಿಯು ಕರ್ತವ್ಯ ನಿರತಳಾದಳು. ನರಕ ಸದೃಶವಾದ ಭುವದಲ್ಲಿ ದುರ್ದೈವ ದುರಂತಗಳು ಅವಳ ಸೇವೆಗೆ ಸದವಕಾಶವನ್ನು ಶೀಘ್ರದಲ್ಲಿ ಕಲ್ಪಿಸಿತು. ಅದಕ್ಕನುಸಾರವಾಗಿ ಅವಳು ದೀನದಲಿತರ ಉದ್ಧಾರಕ್ಕೆ ಅಂದಿನ ಕಾಲದ ಅವಸ್ಥೆಯನ್ನು ಕಡೆಗಣಿಸಿ ಯಾವ ಕಾಲಕ್ಕೂ ಶ್ಲಾಘನೀಯವೆನ್ನುವಂತೆ ಬಹು ಪ್ರಬಲ ರೀತಿಯಲ್ಲಿ ಮತ್ತು ಅವಿರತವಾಗಿ ಹೋರಾಡಿದಳು.

ದೀನ ದಲಿತರ ಗೆಳತಿಯಾದ ಅನಿ ಬೆಸೆಂಟ್ ಇವಳು ಜನಕ್ಕಾಗಿ ದುಡಿಯುವಳೆಂಬುದನ್ನು ಬಗೆದು ಹಲವು ವರ್ಷಗಳ ಕಾಲ ಹಾಗೆಯೇ ಕಳೆದಿಸಿಕೊಂಡಾಗ ಜನರು ಅವಳನ್ನು ಆದರ ಹಾಗೂ ಕೃತಜ್ಞತಾ ಭಾವದಿಂದ ಕಾಣುತ್ತಿದ್ದರು. ಲಂಡನ್ ನಗರದ ಅಲ್ಬರ್ಟ್ ಹಾಲಿನಲ್ಲಿ ಕಿಕ್ಕಿರಿದು ನೆರೆದಿದ್ದ ಸಭೆಯನ್ನು ನಡೆಸಲು ಒಂದು ವೇದಿಕೆಯಲ್ಲಿ ಮೊದಲಿಗೆ ಬೀದಿ ಉದ್ದಕ್ಕೂ ನಡೆಯುತ್ತಿದ್ದಾಗ ಸಹಸ್ರಾರು ಜನರು, "ಮಾನಿನಿ, ತಾಯ್ತನದ ನಮ್ಮ ಅನಿ" ಎಂಬುದಾಗಿ ಉದ್ಘೋಷಿಸಿದರು. ಆ ಧ್ವನಿಯು ಅವಳ ಹೃದಯತಂತಿಯನ್ನು ಮೀಟಿತು. ಆ ಜನಸಮೂಹದ ಹೃದಯಾಂತರಾಳದಿಂದ ಹೊಮ್ಮಿದ ಅವಳ ಗೆಳೆಯ ಗೆಳತಿಯರ ಕೃತಜ್ಞತಾಪೂರ್ವಕವಾದ ಉದ್ಗಾರವಾಗಿತ್ತು. ಅವಳ ಸೇವೆಯು ಸಂಪತ್ತಿನಿಂದ ಕೇವಲ ತೋರಿಕೆಗೆ ಮಾತ್ರ ಕೆಲವರು ಸ್ವಾರ್ಥ ಉದ್ದೇಶದಿಂದ ಮಾಡುವ ರೀತಿಯಂತಲ್ಲವೆಂಬುದನ್ನು ಗಮನಿಸಬೇಕಾಗಿದೆ.

ಜನತೆಯ ಕಷ್ಟಸುಖಗಳನ್ನರಿಯುವುದರಲ್ಲಿ ಮತ್ತು ಅವರನ್ನು ಪ್ರೀತಿಯಿಂದ ಕಾಣುವುದರಲ್ಲಿ ಅನಿ ಬೆಸೆಂಟ್ ಇವಳು ಅವರಂತೆ ಮತ್ತು ಅವರಲ್ಲಿ ಒಬ್ಬಳಾಗಿ ವಿರಾಜಿಸಿದಳು. ಆದರೆ ಸಂದೇಹವಿಲ್ಲ ಅವಳು ಅದಕ್ಕಿಂತ ಎತ್ತರ ಮೇಲಾಗಿದ್ದಳು. ಏಕೆಂದರೆ ಗಂಟಲುಗಳಿಂದ ಉಕ್ಕಿ ಬರುವ ಉದ್ಗಾರ ತೋರಿಸುವಂತೆ ಅವಳು ಒಂದು ದೈವತ್ವವನ್ನು ಪಡೆದುಕೊಂಡು ಹರಿದು ಬಂದಳು. ಅವಳು ಜನತೆಯಲ್ಲಿ ಒಬ್ಬಳಾಗಿದ್ದಳು. ಅಷ್ಟೇ ಅಲ್ಲ, ಅವರ ನಂಬಿಕೆಗೆ ಪಾತ್ರಳಾಗಿ ಅವರಿಗೆ ಧೈರ್ಯ ವಿಶ್ವಾಸಗಳನ್ನು ಕೊಡುವ ಬಲ್ಲವಳೂ ಆಗಿದ್ದಳು. ಅವಳ ಪ್ರಾರಂಭದ ಜೀವನವನ್ನು ಆ ರೀತಿ ಕಳೆದಳು. ಆದರೆ ಜನಸೇವೆ ಮತ್ತು ಜನಸಂರಕ್ಷಣೆಗೆಂದು ತನ್ನ ಜೀವವನ್ನೇ ಮೀಸಲಾಗಿಟ್ಟ ಹಲವು ಉತ್ಸಾಹಿಗಳಿಂದ ಅವಳು ಕೂಡಲೇ ಸುತ್ತುವರಿದಳು. ಅಂಥವರ ಪೈಕಿ ಎಲ್ಲ ಕಾರ್ಯವೂ ಉತ್ತಮ ಹಾಗೂ ತತ್ವಬದ್ಧವಾಗಿರಬೇಕೆಂಬುದಾಗಿ ಸದಾ ನಿರ್ದೇಶಿಸುವಂತೆ ಅವಳಿಗೆ ಸಹಕರಿಸಿದ ಚಾರ್ಲ್ಸ್ ಬ್ರಾಡ್ಲೋಯಂಥ ಧೀಮಂತ ಸೇವಾನಿರತನೂ

ಶಿಷ್ಯನಾಗಿದ್ದನು. ಈ ಚಾರ್ಲ್ಸ್ ಬ್ರ್ಯಾಡ್ಲೋರನ್ನು ತಾನು ಹಿಂದಿನ ಜನ್ಮಗಳಲ್ಲಿ ತಿಳಿದ ಸ್ನೇಹವನ್ನು ಈ ಜನ್ಮದಲ್ಲೂ ಮುಂದುವರಿಸಿದೆನೆಂದು ಆನಿಯು ತನ್ನ ಕಡೆ ದಿನಗಳವರೆಗೂ ಹೇಳುತ್ತಿದ್ದಳು. ಕಾಶಿಯಲ್ಲಿದ್ದ ಅವಳ ಮನೆಯ ಮಲಗುವ ಕೋಣೆಯ ಗೋಡೆಗಳಲ್ಲಿ ಬ್ರ್ಯಾಡ್ಲೋಯ ಹಲವು ಚಿತ್ರಗಳು ಇದ್ದುವಲ್ಲದೆ ಅವಳು ತನ್ನ ದೈನ್ಯಗರ್ವಕ್ಕನುವಾಗಿ ಅವನನ್ನು ರಾಜನೀತಿಜ್ಞನೂ ಅಸಮಾನ ಹೋರಾಟಗಾರನೂ ಎಂದು ಪ್ರಶಂಸಿಸುತ್ತಿದ್ದಳು,

ಆಶ್ಚರ್ಯಕಾರಕವಾದ ಅವಳ ಜೀವನದ ಈ ಅವಧಿಯು ದೀನದಲಿತರ ಸೇವೆಯೇ ಮುಂತಾದ ಚಟುವಟಿಕೆಗಳಿಂದ ತುಂಬಿದ್ದು ಹಲವು ಕುತೂಹಲಕರವಾದ ಘಟನೆಗಳಿಂದ ಕೂಡಿದೆ. ಅವಳ ಹರಿತವಾದ ಲೇಖನಿಯಿಂದ ಹೊಮ್ಮಿದ "ಹಿಂದೂಸ್ಥಾನ ಮತ್ತು ಅಫ್ಘಾನಿಸ್ಥಾನ-(1878)" ಎಂಬ ಕಿರುಹೊತ್ತಿಗೆಯೂ "ಫ್ರೆಂಚ್ ವಿಪ್ಲವ"ವನ್ನು ಕುರಿತಾದ ಅವಳ ಗ್ರಂಥವೂ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ, ಇದರಿಂದ ಅವಳ ದೇಶಾಭಿಮಾನ ತನ್ನ ಇಂಗ್ಲೆಂಡಿಗೆ ಮಾತ್ರವಲ್ಲವೆಂಬುದನ್ನು ತೋರಿಸುತ್ತದೆ. ಇದು ಅವಳ ಜೀವನದ ದ್ವಿತೀಯ ಹಾದಿಯ ಆರಂಭವೆಂದು ಸ್ಪಷ್ಟವಾಯಿತು. ಇಂದು ಸರ್ವರ ಮನ್ನಣೆಗೆ ಪಾತ್ರಳಾದವಳೂ ಪ್ರಸಿದ್ಧ ರಹಸ್ಯಶಾಸ್ತ್ರಜ್ಞಳೂ ಆದ ಶ್ರೀಮತಿ ಹೆಚ್. ಪಿ. ಬ್ಲಾವಟ್ಸ್ಕಿ ಇವಳನ್ನು ಆನಿ ಬೆಸೆಂಟ್ ಇನ್ನೂ ಭೇಟಿಯಾಗಲಿಕ್ಕಿದ್ದಳು. ಆನಿಯು ಈ ಆತ್ಮಚರಿತ್ರೆಯನ್ನು ಬರೆದ ಕಾಲದಲ್ಲಿ ತಾವೇ ಆ ಕಾಲದಲ್ಲಿ ಮೋಸಗಾತಿಗಳೆಂದು ಭಾವಿಸಿದ್ದ ಹಲವು ಜನರ ನಿಂದೆಗೆ ಶ್ರೀಮತಿ ಬ್ಲಾವಟ್ಸ್ಕಿಯು ಪಾತ್ರಳಾಗಿದ್ದಳು. ಆನಿ ಬೆಸೆಂಟಳು ಬ್ಲಾವಟ್ಸ್ಕಿಯನ್ನು ಭೇಟಿಯಾದ ಸಂದರ್ಭದ ವಿವರಣೆಯ ಆ ಭಾಗವು ಈ ಆತ್ಮಚರಿತ್ರೆಯ ಬಹು ಹಾರ್ದಿಕವಾದ ಮತ್ತು ಚೇತೋಹಾರಿಯಾದ ಆಂಗ್ಲ ಶೈಲಿಯಾಗಿದೆ. ಆ ಭೇಟಿಯು ಆನಿ ಬೆಸೆಂಟಳ ಇಡೀ ಜೀವನವನ್ನು ರೂಪಿಸಿದ ಮತ್ತು ಹಿಂದಿನ ಹಲವು ಜನ್ಮಗಳಲ್ಲಿ ತಾವು ಒಡಗೂಡಿ ಎಸಗಿದ ಸಾಧನೆಗಳಿಗೆ ಎಳೆಯುತ್ತಂತೆ ಮಾಡಿದ ಒಂದು ಘಟನೆಯಾಗಿದೆ,

ಬ್ಲಾವಟ್ಸ್ಕಿಗೆ ಹಿಂದಿನ ಕಾಲಾವಧಿಯು ಮುಂದೆ ಬರಲಿದ್ದ ಮಹತ್ತಾದ ಜೀವನವನ್ನು ರೂಪಿಸಲು ತಕ್ಕ ಎಚ್ಚರಿಕೆಯನ್ನೀಯುವಂತಿತ್ತು. ತನ್ನ ಜೀವನದ ಪ್ರತಿಯೊಂದು ಹಂತವನ್ನೂ ಜೀವನ ಯಾತ್ರೆಯ ಚೌಕವನ್ನೂ ಆನಿ ಬೆಸೆಂಟಳು ಜಯಪ್ರದವಾಗಿ ಹಾದು ಮುಂದುವರಿದಿದ್ದಳು. ಅವಳೊಬ್ಬ ಶ್ರೇಷ್ಠ ವ್ಯಕ್ತಿಯೆಂಬುದು ಅವಳನ್ನು ಸರದಾರ ಪದವಿ (Knight-hood) ಇತ್ತು ಗೌರವಿಸುವ ಅವಶ್ಯವಿಲ್ಲವಾದರೂ ಹಿಂದೆಯೇ ಅವಳಿಗೆ "ಸರ್" ಪದವಿಯನ್ನಿತ್ತು ಸರಕಾರವು ಸನ್ಮಾನಿಸದಾಗಲೇ ಎಲ್ಲರಿಗೂ ತಿಳಿದಿತ್ತು. ಅವಳ ಜೀವನವೆಲ್ಲ ಅವಳಿಗಿತ್ತ ಸನ್ಮಾನಕ್ಕೆ ತಕ್ಕಂತೆ ಉದಾತ್ತವಾಗಿತ್ತು. ಸತ್ಯ, ನ್ಯಾಯ ಮತ್ತು ಸ್ವತಂತ್ರ ಮನೋಭಾವಗಳನ್ನು ತನ್ನ ಹಲವು ಜನ್ಮಗಳಲ್ಲೂ ಎತ್ತಿ

ಹಿಡಿದ ಸೇವಾತತ್ಪರಳಾಗಿದ್ದಳು. ಹೆಚ್. ಪಿ. ಬ್ಲಾವಟ್‌ಸ್ಕಿಯೊಡನೆ ಅವಳ ಗಾಢ ಪರಿಚಯವು ಆಧ್ಯಾತ್ಮಿಕ ಜಗತ್ತಿನಲ್ಲಿ ಒಂದರನಂತರ ಒಂದಾಗಿ ನಡೆದ ವಿಕಾಸಪರಂಪರೆಗಳಲ್ಲಿ ಒಂದಾಗಿದೆ. ⊛

ಹಾಗಿದ್ದರೂ ಬೇರೆಂತ ಸನ್ನಿವೇಶಗಳು ಅವಳನ್ನು ಕಾಡಿಸುತ್ತಲೇ ಇದ್ದುವು. ಬ್ರಹ್ಮವಿದ್ಯಾ ಸಂಸ್ಥೆಯ (Theosophical Society) ಸದಸ್ಯಳಾದ ಮೇಲೆ ಚಾರ್ಲ್ಸ್ ಬ್ರಾಡ್ಲೋ ಮತ್ತು ಆನಿಯು, ಮತ್ತು ಸಮಾಜವಾದಿಯಾಗಿದ್ದಾಗ ಅವಳೊಡನಿದ್ದ ಹಲವು ಮಿತ್ರರಲ್ಲಿ ಅತೃಪ್ತಿ ಬೇಸರಗಳುಂಟಾಯಿತು, ಹಾಗೆ ಬೇರ್ಪಟ್ಟ ಆ ಪ್ರಸಂಗವು ತುಂಬ ದುಃಖಮಯವಾಗಿತ್ತು. ಆನಿ ಬೆಸೆಂಟ್ ಹಿಡಿದ ಆ ಹೊಸ ದಾರಿಯನ್ನು ಅವರು ತಿಳಿಯದಾದರು, ತನ್ನ ಗೆಳೆಯರೊಡನೆ ಇದ್ದ, ಪರಸ್ಪರ ಒಡನಾಟ, ಪ್ರೀತಿಸ, ಸಹೃದಯತೆಯಿಂದ ತಮ್ಮ ಸಮಸ್ಯೆಗಳನ್ನು ಬಿಡಿಸಿಕೊಂಡ ಆನಿಯನ್ನು ಅವರು ತಿಳಿಯದಾದರು, ಅವಳನ್ನರಿಯಲು ಅಶಕ್ತರಾದರು; ತನ್ನ ಹೃದಯಾಂತರಾಳದಲ್ಲಿನ ಪ್ರಶಮನ ಶಾಂತಿಯನ್ನು ಬೇರಾವುದರಿಂದ ಹೇಗೆ ಅವರು ತಿಳಿಯಬಲ್ಲರು?

ಓದಿ ತಿಳಿಯಲು ಸಮರ್ಥರಾದವರ ಒಳಗಣ್ಣುಗಳನ್ನು ತೆರೆಸಿದ ಆನಿ ಬೆಸೆಂಟಳಿಗೆ ಗುರುವಾಗಿದ್ದ ಹೆಚ್. ಪಿ. ಬ್ಲಾವಟ್‌ಸ್ಕಿಯ ತಾಂತ್ರಿಕವಾದವೂ ಅವಳ "ರಹಸ್ಯ ನಿಯಮಗಳು" (Secret-Doctrines) ಇವು ಈ ಆಧಾರ ವಜ್ರದ ಕೋಟೆಯನ್ನು ಬಿಡುತ್ತಿದ್ದ ಆ ಮಹಿಳೆಯ ಪ್ರಬಲ ವ್ಯಕ್ತಿತ್ವದ ಹಲವು ರೂಪಾಂತರಗಳಿಗೆ ಕಾರಣವಾದುವು ಎಂಬುದನ್ನು ಒಂದೇ ಬಗೆಯ ಗುಣವನ್ನು ಮಾತ್ರ ಕಾಣಲು ಸಾಧ್ಯವಿರುವವರ ಕಣ್ಣುಗಳಿಗೆ ಹೇಗೆ ತಾನೇ ಕಾಣಬಲ್ಲುದು,

ತಾನಾರು? ತನ್ನ ವಿಶಿಷ್ಟ ವ್ಯಕ್ತಿತ್ವವೇನು? ತನ್ನ ಜನ್ಮಾಂತರಗಳ ತಪಸ್ಸಿದ್ಧಿಯೇನು? ಮುಂದೆ ತಾನು ಎಸಗಬೇಕಾದ ಅಪಾರ ಕಾರ್ಯಸಾಧನೆಗಳೇನೇನು, ಎಂಬುದಾಗಿ ಆನಿ ಬೆಸೆಂಟ್ಳು ಮೊದಲು ಆಗಲೇ ಊಹಿಸತೊಡಗಿದ್ದಳೆಂಬುದನ್ನು ಜನಸಾಮಾನ್ಯರಾದರೋ ಹೇಗೆ ತಿಳಿಯಬೇಕು?

⊛ ಆದರ್ಶ ಸರದಾರ (Knight) ಎನ್ನುವ "ಸರ್" ಪದವಿಯನ್ನು ಹೊಂದಿದವನೆಂತಿರುವನೆಂಬುದನ್ನು ಆನಿ ಬೆಸೆಂಟ್ ಈ ರೀತಿ ವಿವರಿಸಿರುವಳು: —

"ಆದರ್ಶ ಸರದಾರನು ಬಲಿಷ್ಠನೂ ಧೈರ್ಯಶಾಲಿಯೂ ಸರಳ ಹೃದಯನೂ ವಿನೀತ ಗುಣಸಂಪನ್ನನೂ ಆತ್ಮಸಂಯಮಿಯೂ ಆಗಿರುವನು. ತನಗಿಂತ ದುರ್ಬಲನಾಗಿರುವವನ ಮೇಲೆ ಅವನು ಕೈಯೆತ್ತಲಾರನು, ಮತ್ತೊಬ್ಬನನ್ನು ಅನ್ಯಾಯದಿಂದ ಕಸಿಯಲಾರನು; ಇನ್ನೊಬ್ಬನನ್ನು ಅವನ ಬೆನ್ನ ಹಿಂದೆ ತೆಗಳಲಾರನು; ಗೆಳೆಯರಿಗೆ ವಿಶ್ವಾಸಘಾತಕನಾಗಿ ಇರಲಾರನು. ಸ್ವಗೌರವ ಅವನ ನಿಯಮ! ಸಭ್ಯತೆಯೇ ಅವನ ಅಲಂಕಾರ; ಉದಾರಿ, ದಯಾಳು ಹಾಗೂ ಧೈರ್ಯಶಾಲಿ; ಅಪರಾಧಿಗಳಿಗೆ ಕ್ಷಮಾಶೀಲನು; ಗೆಲುವಿನಲ್ಲಿ ವಿನೀತ ಗುಣಗ್ರಾಹಿ ಮತ್ತು ಮಕ್ಕಳಿಗೆ, ಪ್ರಾಣಿಗಳಿಗೆ ದಯೆಯನ್ನು ತೋರಿಸುವವನಾಗಿರುವನು!"

ತಾವು ಹೊಂದಿದ ಮತ್ತು ಯುಗಾಂತರಗಳಿಂದಲೂ ಪಡೆಯುತ್ತಿರುವ ಈ ವಿವಿಧ ಜನ್ಮಗಳ ಅನುಭವನ್ನು, ಸ್ವಾಭಿಮಾನವನ್ನು, ಎಂಬುದರ ಜ್ಞಾನೋಪಾಸನೆಗೆ ತೊಡಗದ ಶಾಶ್ವತವಾದ ಮತ್ತು ಪುನಃ ಎಚ್ಚೆತ್ತು ಬಂದ ಆತ್ಮವೊಂದರ ಶಕ್ತಿಗೆ ತಾವು ನೋಡುತ್ತಿದ್ದೇವೆ ಎಂಬುದಾಗಿ ಅವರಾದರೋ ಅದೆಂತು ಊಹಿಸಲಾಪರು ?

—ಆನಿ ಬೆಸೆಂಟ್ ಇವರ ಎರಡನೇ "ಜನ್ಮ",
ಬ್ರಹ್ಮವಿದ್ಯಾಜ್ಞಾನ (Theosophy.)

ಸಹಿಸು, ಬಿರುಗಾಳಿ, ಉಗ್ರತರ ಆಘಾತಗಳಿಂದೊಡಗೂಡಿದ ಉನ್ನತ ಸ್ವರ್ಗ ಮತ್ತು ಆಳವಾದ ನರಕದಲ್ಲೊಡಗೂಡಿ ಹಿಂದಿನ ಸ್ಮೃತಿಗಳಿವೆ. ಇದೀಗ ಆನಿ ಬೆಸೆಂಟ್ ಇವರು ಆ ತನ್ನ ಎರಡನೇ ಜನ್ಮದ ಜಾಗ್ರತಾವಸ್ಥೆಗೆ ಕಾಲಿಟ್ಟರು. ಅವರು ಆ ದೈನಂದಿನ ಹೋರಾಟದಲ್ಲಿ ಅವರು ಎಂದೂ ಸೋತಿದ್ದಿಲ್ಲವೆಂಬ ಸತ್ಯವನ್ನು ಇಲ್ಲಿ ಗಮನಿಸಬೇಕಿದೆ. ತನ್ನ ವೀರಧ್ವಜದಿಂದೊಡಗೂಡಿ ನಡೆದ ಅವರು ಎಂದೂ ಹಿನ್ನೋಡಿದ್ದೇ ಇಲ್ಲ; ಎಂದೂ ಅವರು ಪರಾಜಯವನ್ನು ಕಂಡದ್ದೇ ಇಲ್ಲ. ತನ್ನ ಧ್ವಜವನ್ನು ಧ್ವಜಸ್ತಂಭದಲ್ಲಿ ಕೈಯ್ಯಿಂದ ಹಾರಿಸಿ ತನಗೆದುರಾದ ಆಪತ್ತುಗಳನ್ನು ಎದುರಿಸುತ್ತಾ ನಿಶ್ಚಲವಾಗಿ ನಡೆದರು,

ಇತರರ ಉತ್ತಮತೆಗಳನ್ನು ನೋಡಲು ಆಸಕ್ತರಾದವರು ಅವರು ಸೋತ ಸಂದರ್ಭಗಳೂ ಇವೆಯೆಂದು ಹೇಳಬಹುದು, ಅದಕ್ಕೆ ಆಧಾರವಾಗಿ ತನ್ನ ಜೀವಮಾನದಿನವನ್ನು ದಾಟಿ ಎರಡು ಹೋರಾಡಿದ ತಾನು ಭಾರತಕ್ಕೆ ಸ್ವಾತಂತ್ರ್ಯ ಲಭಿಸುವವನ್ನು ನೋಡಲಾರೆನು ಎಂದು ಅವರು ಬಗೆದಿದ್ದರು; ಹೌದು! ದೇಶವು ಸ್ವತಂತ್ರವಾಗುವ ಮುಂಚೆಯೇ ಅವರು ವಿಧಿವಶರಾದರು, ಅಲ್ಲಿಂದನಂತರ ಆರು ವರ್ಷಗಳವರೆಗೂ ಈ ವಿಷಯವಾಗಿ ಇಲ್ಲಿ ಈಗ ಬರೆಯುವ ವರೆಗೂ (1939) ದೇಶವು ಸ್ವತಂತ್ರವಾಗಲಿಲ್ಲ. (ಅದಕ್ಕಿನ್ನೂ ಎಂಟು ವರ್ಷಗಳಿದ್ದವು.) *

---

* ದೇಶವು 1947 ರಲ್ಲಿ ಸ್ವತಂತ್ರವಾಯಿತು. ಆದರೆ ಅದು ಆನಿ ಬೆಸೆಂಟರ ಕನಸಿನ ನಿಜವಲ್ಲ. ಅದೇನೋ ಅವರು ಹೇಳುತ್ತಿದ್ದಂತೆ ಕಾಂಗ್ರೆಸ್ mock-fight ನಿಂದಾಗಿ ದೊರಕಿದ ಸ್ವಾತಂತ್ರ್ಯವೆಂದೆನಿಸಿತು. ಹಿಂದೂಸ್ತಾನ ಎರಡೇ ಭಾಗವಾಗಿ ಹೋಳಾಯಿತು. ಪಾಕೀಸ್ತಾನ ಪಕ್ಕನೆ ಹುಟ್ಟಿಕೊಂಡಿತು.

ಇಲ್ಲಿ ಒಂದು ವಿಷಯ ಹೇಳಬಹುದು, ಮುಸಲ್ಮಾನರು ಪಾಕೀಸ್ತಾನವಾಗಬೇಕೆಂದು ಚಳವಳಿ ಹೂಡಿದಾಗ ಗಾಂಧೀಜಿ ಅದು ಸಾಧ್ಯವಿಲ್ಲ, ಅಂತಹ "ಪಾಕೀಸ್ತಾನ" ತನ್ನ ಮೃತದೇಹದ ಮೇಲೆ ಆಗಬೇಕಲ್ಲದೆ ಬೇರೆ ಅಲ್ಲ, ಎಂದು ಹೇಳಿದರು. ಆದರೇನು? ಪಾಕೀಸ್ತಾನವಾಯಿತು. ಗಾಂಧೀಜಿ ಇದ್ದರು. ಆನಿ ಬೆಸೆಂಟ್ ಭವಿಷ್ಯತ್ತಜ್ಞರು. ಇದನ್ನೆಲ್ಲ 'ನೋಡಲು ಅವರಿಲ್ಲದಿದ್ದುದು ಒಳ್ಳೆಯದಾಯಿತು.

ಆನಿ ಬೆಸೆಂಟ್ ಇವಳು ಸೋಲಲಿಲ್ಲ. ತನ್ನ ಬಾಳಿನ ಕಡೆಯ ದಿನದ ವರೆಗೂ ಅವಳು ಈ ದೇಶದ ಪುರೋಭಿವೃದ್ಧಿಯ ಕಡೆಗೆ ಲಕ್ಷ್ಯವಿತ್ತಿದ್ದಳು. ಬಾಹ್ಯ ಜಗತ್ತಿನಲ್ಲಿ ಮನಸ್ಸಿಗೆ ಸ್ವತಃ ಹೋರಾಡಲು ಅಶಕ್ತಳಾಗಿದ್ದರೂ ಅವಳು ತನ್ನ ಕಡೆಯ ದಿನದ ವರೆಗೂ ತನ್ನ ಮಾತೃಭೂಮಿಯಲ್ಲಿ ಅಪಾರ ಪ್ರೀತಿಯಿಟ್ಟು ವೀರಯೋಧ ರಂತೆಯೆ ದೇಶಕ್ಕಾಗಿ ತನ್ನ ಬಾಳನ್ನು ನಿವೇದಿಸಿ ಮಡಿದಳು.

ಹಿಂದೂಸ್ಥಾನವು ಸ್ವರಾಜ್ಯವನ್ನು ಪಡೆಯುವ ಮುಂಚೆಯೆ ಅವಳು ಮೃತಳಾದಳು. ಆದರೆ ಅವಳು ತನ್ನ ಆ ಕಲ್ಪನೆಯ ಸ್ವಾತಂತ್ರ್ಯಕ್ಕೆ ಹೋರಾಡುತ್ತಲೇ ಇದ್ದಳು. ಸ್ವತಂತ್ರವಾಗಿರುವ ಭಾರತಕ್ಕೆ ತಾನು ನಿರ್ಮಿಸಿದ ಕೆಂಪು ಮತ್ತು ಹಸಿರು ವರ್ಣದ ಆ ತನ್ನ ಸಂಕೇತಕಾರಕವಾದ ಧ್ವಜವನ್ನು ದೇಶದ ಹಲವು ಧ್ವಜಸ್ತಂಭಗಳಲ್ಲಿ ಹಾರಿಸಿದಳಲ್ಲದೆ ಪರದೇಶದ ಸರಕಾರವು ಅವಳನ್ನು ಉದಕಮಂಡಲದಲ್ಲಿ ಸೆರೆಯಲ್ಲಿಟ್ಟಿದ್ದಾಗ ಆ ತನ್ನ ಧ್ವಜವನ್ನು ತಾನಾಗಿಯೇ ಮೊಳೆ ಹೊಡೆದು ನೆಟ್ಟಿದಲ್ಲದೆ ಕಡೆಗೆ ಅದನ್ನು ತನ್ನ ಹೃದಯದ ಚಿತ್ತಿಯಲ್ಲಿ ಇರಿಸಿ ಹಾರಿಸಿದ ಅವಳು ಈ ದೇಶಕ್ಕಾಗಿ ಹಗಲಿರುಳು 'ದುಡಿದು ಸೊರಗಿ ಕೃಶಳಾಗಿ ಮಡಿದಿದ್ದಳು.

ಆನಿ ಬೆಸೆಂಟ್ ಮತ್ತು ಹೆಚ್. ಪಿ. ಬ್ಲಾವಟ್‌ಸ್ಕಿ ಇವರು ಎರಡು ವರ್ಷಗಳ ಕಾಲ ಮಾತ್ರ ಒಟ್ಟಿಗೆ ದುಡಿದರು. ಹಾಗಾಗಿ ಅವರು ಒಬ್ಬರನ್ನೊಬ್ಬರು ಬಹು ಗೌರವದಿಂದ ಕಂಡರು. ಅಲ್ಲದೆ ಅವಳು ಬ್ಲಾವಟ್‌ಸ್ಕಿಯು ನಿಗೂಢ ಕಾರ್ಯಕಲಾಪಗಳಲ್ಲಿ ವಿಶೇಷ ಶ್ರದ್ಧೆಯಿಟ್ಟು ದುಡಿಯಲನುವಾದಳು. *

---

* ಆನಿ ಬೆಸೆಂಟ್ ಇವಳ ಪ್ರಮುಖ ಕಾರ್ಯಕ್ರಮಗಳಲ್ಲಿ ಶ್ರೀಮತಿ ಬ್ಲಾವಟ್‌ಸ್ಕಿ ಸ್ಥಾಪಿಸಿದ್ದ ಪೌರಸ್ತ್ಯ ಬ್ರಹ್ಮವಿದ್ಯಾ ಸಂಸ್ಥೆಯ (The Eastern School of Theosophy) ಕಾರ್ಯಭಾರ ನಿರ್ವಹಣೆಯು ಪ್ರಧಾನವಾದುದಾಗಿತ್ತು. ಕರ್ನಲ್ ಆಲ್ಕಾಟ್ ಇವರಿಂದ ಅಂಗೀಕಾರವಾದ ಈ ಸಂಸ್ಥೆಯು "ರಹಸ್ಯ ಜ್ಞಾನ ಶಾಖೆ" (The Esoteric Section) ಇದು ರಹಸ್ಯ ಬ್ರಹ್ಮಜ್ಞಾನವನ್ನು ಬಹಳ ಆಳವಾಗಿ ಅಭ್ಯಸಿಸುವವರಿಗೆ ಮಾತ್ರ ತೆರೆಯಲಾಗಿತ್ತು. ಅದನ್ನು ಶ್ರೀಮತಿ ಬ್ಲಾವಟ್‌ಸ್ಕಿ ಇವಳೇ ಸ್ವತಃ ನಡೆಸುತ್ತಿದ್ದಳಲ್ಲದೆ ಅದಕ್ಕೆ ಸದಸ್ಯರನ್ನು ಸಹ ಅವಳೇ ಆರಿಸುತ್ತಿದ್ದಳು.

ಆನಿ ಬೆಸೆಂಟ್ ಅವಳ ಉತ್ತರಾಧಿಕಾರಿಯೆಂದೂ ತನ್ನ ಸಂಸ್ಥೆಯ ಭವಿಷ್ಯಕ್ಕೆ ಅವಳೇ ಆಧಾರವೆಂದೂ ಆ ರಹಸ್ಯ ಜ್ಞಾನ ಶಾಖೆಯನ್ನು ಬಹು ಆಳವಾಗಿ ಅಭ್ಯಸಿಸಿದ ತಜ್ಞರಾದ ಬ್ರಹ್ಮವಿದ್ಯಾ ಪಾರಂಗತರನ್ನು ತಯಾರಿಸಲು ನಿರ್ಮಾಣವಾದುದೆಂದೂ ಕ್ರಿ.ಶ. 1891 ರಲ್ಲಿ ಹೆಲನ್ ಬ್ಲಾವಟ್‌ಸ್ಕಿಯು ಬರೆದಳು. ಆ ಶಾಖೆಯ ಪ್ರಧಾನ

ಮಾನವೀಯತೆಯೂ ವೀರತೆಯೂ ಸಂಕಲ್ಪವೂ ಆದ ಆನಿ ಬೆಸೆಂಟ್ ಇವಳ ಆತ್ಮವು ಉದಾತ್ತ ನಿಷ್ಠೆಯ ಮಹತ್ಕಾರ್ಯಕ್ಕಾಗಿ ಪ್ರವೃತ್ತವಾಗಿ ದುಡಿದು ದಣಿದಂತಹ ಉದಾತ್ತ ಆ ದೇಹದಿಂದ ಬೇರ್ಪಟ್ಟು ಉನ್ನತವಾದ ಸ್ಥಿತಿಯನ್ನು ಪಡೆಯಿತು.

ಇವರಿಬ್ಬರೊಳಗೆ (ಬ್ಲಾವಟ್ಸ್ಕಿ ಮತ್ತು ಆನಿ) ಕೇವಲ ಎರಡು ವರ್ಷ ಮಾತ್ರ ವಿಶೇಷ ಬಾಂಧವ್ಯ ನೆಲೆಸಿತ್ತು. ಆ ಅವಧಿಯಲ್ಲಿ ಇವಳು ತನ್ನನ್ನೇ ತಾನಾಗಿಯೇ ನೀಡಿಕೊಂಡಿದ್ದಳು. ಈ ಮಾನವ ಆತ್ಮವನ್ನು ಮೀರಿದ ಮತ್ತು ತಾನು ಆವರೆಗೂ ಶ್ರದ್ಧೆಯಿಂದ ನಂಬಿ ಸೇವೆಯನ್ನು ಮಾಡಿದ ಆ ಅಗೋಚರ ಶಕ್ತಿಗಳ ಸೇವೆಯನ್ನು ಶ್ರದ್ಧೆಯಿಂದ ನಿರಂತರ ಮಾಡುವ ಸೌಲಭ್ಯವು ಒದಗಿತು. ಆ ಎರಡು ವರ್ಷಗಳ ಅವಧಿಯಲ್ಲಿ ಇವಳು ಬ್ರಹ್ಮವಿದ್ಯೆ, ದೈವಿಕ ಶಕ್ತಿ, ಜೀವನ ರೀತಿ ಇತ್ಯಾದಿಗಳ ಬಗ್ಗೆ ಚಿಂತಿಸಿದಳು. ಬ್ರಹ್ಮವಿದ್ಯಾ ಜ್ಞಾನವನ್ನು ಇವಳು ಹಿಂದೆಯೇ ಅರಿತಿದ್ದಳು. ಆದರೆ ಈಗ ಅದನ್ನು ಆಳವಾಗಿ ಅಭ್ಯಸಿಸಲು ನಿರ್ಧರಿಸಿದಳು. ಇಂಥ ಬಗೆಯ ಆಲೋಚನೆ ಇವಳಲ್ಲಿ ಮೂಡಿದಾಗ ಜೀವನದ ಧ್ಯೇಯದ ಬಗೆ ಮತ್ತು ಜಗತ್ತಿನ ಸಮಸ್ಯೆಯನ್ನು ಕುರಿತಾಗಿ ಬದಲಾವಣೆಯಾಗಬೇಕಾದ ಅಗತ್ಯವನ್ನು ಚಿಂತಿಸಿದಳು. ಪರಿಣಾಮವಾಗಿ ತನ್ನ ಜ್ಞಾನಪರಿಪಕ್ವತೆಯಲ್ಲಿ ತನಗಿದ್ದ ನಂಬಿಕೆಯನ್ನು ಇವಳು ಬೇರೊಂದು ರೀತಿಯಲ್ಲಿ ಕಾಣಲು ತೊಡಗಿದುದು ಆಶ್ಚರ್ಯವೇನೂ ಇಲ್ಲ. ಹೀಗೂ ಇವಳು ತನ್ನ ಬುದ್ಧಿಗತನಗಳನ್ನು ಇನ್ನೂ ಮೆರುಗುಗೊಳಿಸಲು ಶ್ರಮಿಸಿದಾಗ ತನ್ನ ಕೊನೆ ಮನ ದಿನವನ್ನೆಲ್ಲ ಯಾರಿಗಾಗಿ ಅರ್ಪಿಸಿದಳೋ ಆ ತನ್ನ ಮಿತ್ರರ ಮತ್ತು ಹಲವು ದೇಶಗಳ ಜನರ ಪ್ರೀತಿಗೆ ಇವಳು ಅಂತೆಯೇ ಪಾತ್ರಳಾದಳು.

ಕಾರ್ಯದರ್ಶಿಯಾಗಿ ಆನಿ ಬೆಸೆಂಟ್ ಇವಳನ್ನು ನೇಮಿಸಿ ಅನಂತರ ಪ್ರವಾಸಗಳಲ್ಲಿ, 1891 ರ ಮೇ ತಿಂಗಳ 8ನೇ ದಿನ ಮೃತಳಾದಳು. ಈಗ ಆ ಬ್ರಹ್ಮವಿದ್ಯಾ ಸಂಸ್ಥೆ ಮತ್ತು ಅದರ "ರಹಸ್ಯ ಜ್ಞಾನ ಶಾಖೆ"ಯು ಬೇರ್ಪಟ್ಟು ಎರಡು ಸ್ವತಂತ್ರ ಸಂಸ್ಥೆಗಳಾಗಿವೆ. ಅವು ಎರಡು ಒಂದೇ ವ್ಯಕ್ತಿಯ ಅಧೀನವಾದರೆ ಅದರೊಳಗೆ ಶಿಸ್ತು ಬೇಕಾದಷ್ಟಾಗಿ ಬರುವುದೆಂದು ಭಾವಿಸಿ ಬ್ಲಾವಟ್ಸ್ಕಿಯು ಇವೆರಡನ್ನು ಫೆಬ್ರವರಿ 1891ರಲ್ಲಿ ಪ್ರತ್ಯೇಕಿಸಿದಳು.

ಬ್ಲಾವಟ್ಸ್ಕಿಯ ನಂತರ ಈ ಬ್ರಹ್ಮವಿದ್ಯಾ ಸಂಸ್ಥೆಯು ಆನಿ ಬೆಸೆಂಟ್ ಮತ್ತು ಬ್ಲಾವಟ್ಸ್ಕಿಯ ಉಪಾಧ್ಯಕ್ಷನಾಗಿದ್ದ ಅಮೇರಿಕಾದ ಡಬ್ಲ್ಯೂ. ಕ್ಯೂ. ಜಡ್ಜ್ ಇವರಿಬ್ಬರ ನೇತೃತ್ವದಲ್ಲಿತ್ತು. ಕೆಲವೇ ವರ್ಷಗಳಲ್ಲಿ ಆ ಜಡ್ಜ್ ಇವನು ಆ ಜಂಟೀ ಕಾರ್ಯಭಾರವನ್ನು ನಿರಾಕರಿಸಿದ್ದರಿಂದ ಆನಿಯೇ ಜಗತ್ತಿನ ಎಲ್ಲೆಡೆಯೂ ಸ್ಥಾಪಿತವಾಗಿದ್ದ ಆ ಸಂಸ್ಥೆಯ ಪ್ರಧಾನ ಸಂಚಾಲಿಕೆಯಾದಳು.

ಇಂತಾದಾಗ ಅಂದಿನ ಸಮಾಜವಾದದ ಆನಿ ಬೆಸೆಂಟ್, ನಾಲ್ಟನನ ಕಿರುಹೊತ್ತಿಗೆಯ ಆನಿ ಬೆಸೆಂಟ್, ಕಾರ್ಮಿಕರ ಸಂಸ್ಥೆಯ ಆನಿ ಬೆಸೆಂಟ್ ಇವರನ್ನು ತಾವು ಕಲ್ಪಿಸಿಕೊಂಡಿರುವುದರಿಂದ ಜನ ಗುರ್ತಿಸಿರುವುದರಲ್ಲಿ ಅಭ್ಯಂತರವೇನೂ ಇಲ್ಲ. ನಿಜವಾಗಿ ಹೇಳುವುದಾದರೆ ಆನಿ ಬೆಸೆಂಟ್ ಇವರು ಬಹಳ ಆಳವಾದ ತತ್ವಾನ್ವೇಷಣೆಯ ಜೀವನಕ್ಕೆ ಕಾಲಿಟ್ಟಿದ್ದರು. ಅವರ ಬಾಲ್ಯದ ದಿನಗಳಲ್ಲಿ ಅಂದಿನ ಪರಿಸ್ಥಿತಿಯ ಬಗ್ಗೆ ಅಸಮಾಧಾನಗೊಂಡು ಅದನ್ನು ತೀವ್ರ ಪ್ರತಿಭಟಿಸಿದ್ದರು. ಅಂದಿನ ಅನ್ಯಾಯ ಅಕ್ರಮಗಳನ್ನು ಸರಿಗಟ್ಟಲು ಸಮಾಜವಾದ (socialism) ಇದೇ ತಕ್ಕುದಾದ ಕ್ರಮವೆಂಬ ಹೇಳಿಕೆಯಲ್ಲಿ ತಲ್ಲೀನರಾದರು. ನಾಲ್ಟನ್ನನ ಕಿರುಹೊತ್ತಿಗೆಯಲ್ಲಿ ಹೇಳಿದ ವಿಷಯಗಳು ಅಂದಿನ ಅವ್ಯವಹಾರಗಳನ್ನು ಬಗೆಹರಿಸತಕ್ಕ ಸೂತ್ರಗಳೆಂದು ಪ್ರತಿಪಾದಿಸಿದರು, ಅಷ್ಟೇ ಅಲ್ಲ ಯಾವ ಸಂದಿಗ್ಧ ಪರಿಸ್ಥಿತಿಗೊಳಗಾದರೂ ಸಿದ್ಧಾಂತಗಳನ್ನು ವಾದವಿವಾದಗಳ ಮೂಲಕ ಬಗೆಹರಿಸಿ ಸಾರ್ವಜನಿಕ ಜೀವನವನ್ನು ಉತ್ತಮಗೊಳಿಸಬಹುದೆಂದು ನಂಬಿದ್ದರು. ಬಹುಸಂಖ್ಯಾತ ಜನವು ಬಡತನದಿಂದ ನರಳುತ್ತಿರುವರೆಂದು ತಿಳಿದು ಅವರಿಗಾಗಿ ಮರುಗಿ ಅವರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಅವರು ಪಣತೊಟ್ಟರು.

ಆನಿ ಬೆಸೆಂಟ್ ಇವರು ಇನ್ನೂ ಅವರ ಅನಾದ್ಯನಂತವಾದ ಆತ್ಮದೊಡನೆ ಅನುವಾಗದೆ ಬರೀ ಈ ನಶ್ವರತೆಯಲ್ಲಿ ತೊಳಲಾಡುತ್ತಿರುವಾಗ ಅವರು ತನ್ನ ಆತ್ಮದ ರಹಸ್ಯವನ್ನರಿಯದವರಾಗಿ ಇದ್ದರು. ಆದರೂ ಆ ಭವ್ಯ ಆತ್ಮದ ಛಾಯೆಯು ಅವರ ಜೀವನದ ಮೇಲೆ ಪ್ರಭಾವವನ್ನು ಬೀರಿತ್ತು. ತನ್ನ ಧ್ಯೇಯ ಸಾಧನೆಗಾಗಿ ಹೋರಾಡಿಯಾದರೂ, ಹಲವು ಉತ್ತಮ ಯೋಜನೆಗಳನ್ನು ನಿರ್ಮಿಸಿದರು, ತಾನು ಸರಿಯೆಂದು ಕಂಡುದರ ಬಗ್ಗೆ ಉಗ್ರವಾಗಿ ಹೋರಾಡಿದರು, ಕರ್ತವ್ಯ ಸಾಧನೆಗಾಗಿ ಹಿತಶತ್ರುಕರ ಕಷ್ಟವು ಬರೀ ಕ್ಷಣಿಕವೆಂದೂ ಶೂನ್ಯವೆಂದೂ ನಂಬಿದ್ದರು. ತನಗೆ ಸರಿಯೆಂದು ತೋರಿದ ಸತ್ಯವನ್ನು ಎತ್ತಿಹಿಡಿಯಲು ಅವರು ತನ್ನ ಸರ್ವಸ್ವವನ್ನು ಮತ್ತು ತನ್ನ ಮಕ್ಕಳೊಡನೆ ಇರುವ ಸಂತೋಷವನ್ನು ತೊರೆದು ತನ್ನ ಕರ್ತವ್ಯದತ್ತ ನಿರತರಾಗಬಲ್ಲರು, ಕ್ರೈಸ್ತ ಸಂಘದ ನಿಯಮಿತ ಸಂಪ್ರದಾಯಗಳನ್ನು ಪಾಲಿಸಿ ಅಂತೆಯೇ ವರ್ತಿಸಬೇಕೆಂದು ಅವರ ತಾಯಿಯು ಮೊಣಕಾಲೂರಿ ಅವರನ್ನು ಕೇಳಿಕೊಂಡದ್ದು ಅವರ ಆತ್ಮಚರಿತ್ರೆಯಲ್ಲಿ ಪ್ರತಿಪಾದಿಸಲಾದ ಒಂದು ಮರ್ಮಭೇದಕವಾದ ವಿವರಣೆಯಾಗಿದೆ, ಅದು ಹೀಗಿದೆ:—

"ಹೋರಾಟದ ಎದುರಿಗೆ ನಾನು ಉಕ್ಕಿನಂತೆ ಕಠಿಣ

ಳಾಗಿದ್ದೆನು. ಆದರೆ ನಾನು ನನ್ನ ತಾಯಿಯನ್ನು ಮೀರಿ ಬೇರಾರನ್ನೂ
ಈ ಭೂಮಿಯಲ್ಲಿ ಪ್ರೀತಿಸದೇ ಇದ್ದಾಗ ಅಂಥ ನನ್ನ ತಾಯಿಯು
ನನ್ನ ಮೇಲಿಂದ ಮೋಹಕ್ಕಾಗಿ ನಾನು ಧರ್ಮ ಪರಂಪರೆಯನ್ನು
ಮೀರಿ ಹೋಗಬಾರದೆಂದು ಕೋರಿದಾಗ ಅಷ್ಟೇ ಕಠಿಣ ರೀತಿಯ
ಲ್ಲಿ ವರ್ತಿಸಲು ನನಗೆ ಅಸಾಧ್ಯವಾಗಿಯೇ ಕಂಡುಬಂತು. ಅವಳ
ನ್ನು ಆ ರೀತಿ ಶೋಕಭರಿತಳಾಗಿ ಮಾಡುವುದು ಮಹಾಪರಾಧ
ವೆಂದು ಎಣಿಸಿದೆನು, ಹಿಮದಂತೆ ಬಿಳಿದಾದ ಅವಳ ತಲೆಯು
ನನ್ನ ಮೊಣಕಾಲುಗಳನ್ನು ಮುಟ್ಟಿದಾಗ ನಾನೊಬ್ಬ ಕೊಲೆಗಾ
ತಕೆಯುವಂತೆ ನನಗೆ ತೋರಿತು. ಆದರೂ ನಾನು ಸ್ವಾರ್ಥಿಗಾರ್ತ
ಯಾಗಿ ಜೀವಿಸಲೆ? ನನ್ನ ತಾಯಿಗಾಗಿ ಅಂಥ ನಾಜೂಕಿನ
ಪ್ರಸಂಗದಲ್ಲಿ ಬಿಟ್ಟುಕೊಡುವದು ಅಸಾಧ್ಯ! ಅಂಥಾ ಕಠಿಣ
ಪ್ರೀತಿಯ ಶೋಕ ಹಾಗೂ ನಿರ್ದಿಷ್ಟ ಪರಿಸ್ಥಿತಿಯಲ್ಲಿ ನನ್ನ
ನಿರ್ಧಾರದ ಸತ್ಯವನ್ನು ಬಲವಾಗಿ ಒಪ್ಪಿಕೊಂಡೆನು."

ನಾಗರಿಕ ಸಮಾಜವೆಂದೆನಿಸಲ್ಪಟ್ಟಿದ್ದ ಆ ಕಾಲದಲ್ಲಿ
ಆನಿ ಬೆಸೆಂಟ್ ಇವಳು ಸಾರ್ವಜನಿಕ ಅಭಿಪ್ರಾಯ, ಕ್ರೈಸ್ತ ಪಂಥ
ಸಂಸಾರ, ತನ್ನ ವೈವಾಹಿಕ ಜೀವನ ಮುಂತಾದ ಗ್ರಂಥ ಗೌರವ
ಗಳನ್ನು ಆಕೆ ಬಾಳಿದ ತನ್ನ ಸಭ್ಯರಾದ ಪತಿ, ದುರ್ಬಲ
ಕೂಸುಗಳಿಗಾಗಿ ಬಹುದಾಗಿದ್ದ ತನ್ನ ಮಕ್ಕಳು, ಇವರನ್ನೆಲ್ಲ ಬಿಟ್ಟು
ಇನ್ನು ಸತ್ಯಾನ್ವೇಷಣೆಯಲ್ಲಿ ಮಗ್ನಳಾಗಿ ಸಮಾಜದ ಮತ್ತ
ವನ್ನು ಸಂಪ್ರದಾಯದಲ್ಲಿ ಪ್ರತಿಭಟಿಸಿದಾಗ ಇನ್ನೊಂದೆಡೆಯಲ್ಲಿ
ಸಮಾಜ ನಿಯಮ ಭಂಗವಾಗಿ ಬಹಳ ಎಚ್ಚರಿಕೆಯಿಂದ ಮತ್ತು
ಪ್ರೀತಿಯಿಂದ ಪೋಷಿಸಲ್ಪಟ್ಟ ಎಳೆ ಹರೆಯದ ಆ ಹೂವು ಆದಿಗ
ತೋರದಂತೆ ತಾನು ಸುವರ್ಣಳೇ ಎಂಬಂತೆ ಇದ್ದಳು. ಈ ಜೀವನದ
ಕೃತಕತೆ ಮತ್ತು ನಿಷ್ಠುರತೆಯನ್ನು ಕಂಡು ಅಶಾಂತಿಯಿಂದ
ಅಂತರಂಗದಲ್ಲಿ ಅಂತೆಯೇ ಕೊರಗಿದಳು, ಮನುವಿನ ಧರ್ಮ
ತತ್ವಗಳಿಂದ ಬೇರ್ಪಟ್ಟಂತೆ ಕಂಡ ಅಂದಿನ ಕ್ರೈಸ್ತ ಪಂಥದ
ಸಂಕೀರ್ಣತೆ, ದುರ್ಬಲ, ಹಿಂಸಾಕೃತ್ಯ ಇತ್ಯಾದಿಗಳನ್ನು ಅವಳು
ಉಗ್ರತರವಾಗಿ ಖಂಡಿಸಿದಳು. ಸಾರ್ವಜನಿಕ ಅಭಿಪ್ರಾಯವಾದ
ರೋ ಅಂದು ಕ್ರೈಸ್ತಧರ್ಮಕ್ಕೆ ವ್ಯತಿರಿಕ್ತವಾಗಿತ್ತು. ಅವಳ ಸಾಂಸಾ
ರಿಕ ಜೀವನವೆಲ್ಲ ಅಂದಿನ ಕ್ರೈಸ್ತ ಪಂಥದ ಕಠಿಣತನವನ್ನು
ಪ್ರತಿಬಿಂಬಿಸಿತು. ಅವಳ ತಾಯಿಯಾದರೋ ಅನಿವಾರ್ಯವಾಗಿ
ಕ್ರೈಸ್ತಳಾಗಿದ್ದಳು, ಅಂತೆಯೇ ಅವಳ ಮಕ್ಕಳು ಅಂದಿನ ಕ್ರೈ
ಸ್ತ ಧರ್ಮದ ಕ್ರೂರ ಹಾಗೂ ಕಠೋರ ಪರಿಸ್ಥಿತಿಯೊಳಗಿದ್ದ
ಟ್ಟಿದ್ದರು, ಕೆಲವು ಉತ್ತಮ ವಿಧಿ ನಿಯಮಗಳನ್ನು ಬಿಡದ ಪರಿಣಾ
ಮಾನುಗತಿಯಾಗಿ ಬಂದಿದ್ದ ಅಂದಿನ ಆಧ್ಯಾತ್ಮಿಕವಾದ ಮ

ತ್ತು ಮಾನವನ ಸ್ವರೂಪಕ್ಕೆ ಆಕಾರವನ್ನು ಮಾಡುವ ಆ ವಿಸ್ತೃತ ಕ್ಷೇತ್ರ ಕ್ರಮವಾದ ಅಧಃಪಾತದಲ್ಲಿ ಇಡೀ ಸಮಾಜವೇ ಮುಳುಗಿ ಹೋಗಿತ್ತು.

ಆದರೆ ಅಷ್ಟರಲ್ಲಿ ಇವರು ಯಾವ ಸಂಸ್ಥಾನಕ್ಕೂ ಒಳಪಡದಿರಲಿ, ಜಗದ ರೀತಿ ತೀವ್ರಗಾಮಿಯಾಗಿ ಪರಿವರ್ತನಗೊಂಡಿತು, ಅದಕ್ಕಾಗಿ ಅಸಂತೋಷವನ್ನು ನಿರ್ಭಾವಸ್ಥೆಯಿಂದ ಒಪ್ಪಿಸಿ ಚಿಂತನಗೊಳಿಸಲು ಆಗಿಂದಾಗ್ಗೆ ಬೇಕಾಗಿಬಹುದಾದ ನಿಸ್ಪೃಹ ತೀವ್ರಗಾಮಿಗಳಿರಬೇಕಿತ್ತು. ಅವರು ಹುಟ್ಟಿದರು. ದೈವ ವಿಧಿತ ಸಂಚಾಲಕರು ಜಗತ್ತಿನ ಕತ್ತಲನ್ನು ಹೋಗಲಾಡಿಸಲು ಎಲ್ಲಾ ಕಾಲಕ್ಕೂ ಬೇಕು! ಅದೇ ರೀತಿಯಲ್ಲಿ ಕ್ರಿ.ಶ. 18ನೇ ಶತಮಾನದ ಅಂತ್ಯ ಮತ್ತು 19ನೇ ಶತಮಾನದ ಮೊದಲಾರ್ಧದಲ್ಲಿ ಉದಿಸಿದ ಆ ಪ್ರಭಾವಶಾಲಿ ಬೈರನ್ ಮತ್ತು ಗಂಭೀರ ಮನೋಧರ್ಮದ ಶೆಲ್ಲಿ ಇವರಿಂತ ಕಳೆದ ಶತಮಾನದ ದೇವರಿಂದ ಕಳುಹಿಸಲ್ಪಟ್ಟ ಸಂದೇಶವಾಹಕರುಗಳು ಈ ಕತ್ತಲೆಯ ಜಗತ್ತಿಗೆ ಕ್ರಾಂತಿಯನ್ನು ಮಿಂಚಿಬಂದರು, ಬೈರನ್ ಮತ್ತು ಶೆಲ್ಲಿ ಇವರ ಪ್ರಗತಿಗಾಮಿ ವಾದವನ್ನು ಕ್ಯಾಲರ್‌ಕೋಲ್ಜ್ ಇವನು ಈ ರೀತಿ ವಾಕ್ಯದಲ್ಲಿ ವಿವರಿಸಿರುವನು.

"ಈ ವಿಶ್ವವು ಎಲ್ಲ ತಾಣಗಳ ಆರು ದಿನಗಳಲ್ಲಿ ಮಾತ್ರ ನಿರ್ಮಾಣವಾಯಿತೆಂಬ ಹೇಳಿಕೆಯನ್ನು ಸಂದೇಹದಿಂದ ಊಹಿಸುತ್ತಿರುವಲ್ಲಿ ಬೈರನ್ ಮತ್ತು ಶೆಲ್ಲಿ ಇವರು ಅಂದಿನ ಆ ಕಾಲದಲ್ಲಿ ಉತ್ಪತ್ತಿಕಾರಕವಾದ ಅಂಶವನ್ನೇ ಉಜ್ಜೀವನಗೊಳಿಸುತ್ತಿದ್ದರು. ಆಗ ಪರಂಪರೆಯನ್ನು ಲಕ್ಷಿಸುವವರ ದೂಷಣೆಗೆ ಅವರು ಒಳಗಾದರೂ ಅದು ಅವರ ಮಾನಸಿಕ ದಾರ್ಢ್ಯವನ್ನು ಸೂಚಿಸುತ್ತದೆ. ಅಷ್ಟೇ ಅಲ್ಲ, ಆ ಸಾಹಸವು ಪ್ರೊಮಿತ್ಯೂಸನ ಸಾಹಸಕ್ಕೆ ಸಮಾನವಾಗಿದೆ."

ಈ ಸಂದರ್ಭದಲ್ಲಿ ಪ್ರೊಮಿತ್ಯೂಸನು ಸಾರಿದ ಆ ಅಪರಿಮಿತ ಸಾಹಸವು ಆ ಎಳೆ ಶೆಲ್ಲಿ 'ಆಕ್ಸ್ಟನ್'ನಲ್ಲಿ ಕಂಡುದನ್ನು ಕುರಿತು ಪ್ರೊ|| ವೈಗಲ್ ಹೇಳಿದ್ದು ನೆನೆಯುತ್ತೇನೆ. ಅವನ ಹೇಳಿಕೆಯಂತೆ "ಕಂಗೆಟ್ಟು ಸರಿಯಾದಲ್ಲಿ ಉದ್ರೇಕಕ್ಕೊಳಗಾದ ಆ ಕಾಲದಲ್ಲಿ ಅಜಾಗ್ರತ ತಾತ್ವಿಕವಾದವನ್ನು ಭವ್ಯವಾಗಿ ತೋರುವ ಅವಿವೇಕ ಕಲ್ಪನೆಗಳನ್ನು ಶೆಲ್ಲಿ ಆಕ್ಸ್ಟನ್ನನು ಕ್ರಾಂತಿಯನ್ನು ಪ್ರತಿಪಾದಿಸುತ್ತಾ ತೋರಿಸಿದ್ದು ಆಶ್ಚರ್ಯಕರವಾದ ವಿಷಯವಾಗಿದೆ. ಮುಂದುವರಿಯುತ್ತಾ ಅವನು ಹೀಗೆಂದನು, "ಪ್ರೇಮದ ಹಂಬಲಿನಿಂದ ಬಿಡಿಸಲು ಎಸಿದು ಕ್ರಾಂತಿಕಾರಕವಾದ ತನ್ನ ರಾಜ್ಯವನ್ನು ಸೌಜನ್ಯದಿಂದ ಆಳಲು ಇಚ್ಛಿಸಿದ ಎಳೆ ಶೆಲ್ಲಿಯನ್ನು ಕಂಡು ಜನರು ನಕ್ಕಿರಬಹುದು." ಪ್ರೊ|| ಮಿಡ್ಲೀಸ್ ಎಗನ್ ಅವರ ಕ್ರಾಂತಿಕಾರಕ ಸಾಹಸೀ ಸುಧಾರಕರು ಕಾಲಕಾಲಕ್ಕೂ ಹುಟ್ಟಿದ್ದಾರೆ. ಅದೇ ರೀತಿ ಇತ್ತೀಚೆಗೆ, ಎಂದರೆ 19ನೇ

ಶತಮಾನದಲ್ಲಿ ಅದೇ ವರ್ಗಕ್ಕೆ ಸೇರಿದ್ದವರು ಎಂದರೆ ಚಾರ್ಲ್ಸ್ ಬ್ರ್ಯಾಡ್ಲಾ, ಹೆಚ್. ಪಿ. ಬ್ಲಾವಟ್ಸ್ಕಿ ಮತ್ತು ಅನಿ ಬೆಸೆಂಟ್ ಇವರು ಸತ್ಯಾನ್ವೇಷಣೆಯ ಹೋರಾಟದಿಂದ ಜಗತ್ತನ್ನು ಬೆರಗಾಗಿಸಲು ಬಂದರು.

ತಾನು ಎಲ್ಲ ತಿಳಿದಿರುವೆನು, ಎಂದು ಪಕ್ವತನದಿಂದ ತಾನಾಗಿ ಹೇಳುವ ಕಾಲವು ಚಾರ್ಲ್ಸ್ ಬ್ರ್ಯಾಡ್ಲಾಯು ಪಾಲಿಗೆ ಬಂದುದೇ ಇಲ್ಲ. ಆವನ ಪ್ರಚಂಡವಾದ ಜಾಗೃತ ಅವಸ್ಥೆಗೆ ಬಂದ ಜ್ಞಾನವು ವ್ಯಾಪಿಕ್ತವಾಗಿ ಇರಲಿಲ್ಲ. ಆದರೆ ತನ್ನ ಜೀವನ ಪೂರ್ಣವಾದ ಆಗಾಧ ಮನಸ್ಸಿಗೆ ಪರಿಸ್ಥಿತಿಯು ಅರಿವು ಆಗಿತ್ತು. ಆವನಿಗೆ "ತಿಳಿ"ದಿರಲಿಲ್ಲ ಎಂದೆನ್ನುವುದು ಸಾಮಾನ್ಯ ಭಾಷೆಯಲ್ಲಿ ಹೇಳುವುದಾದರೆ ಅದು ಆವನು ಕೈಗೊಂಡ ಸೇವೆಯು ಒಂದು ಭಾಗವೆಂದೆನ್ನಬಹುದು. ಬಡವಿಕ್ಕಿದ ಸಂತೋಷ ಮತ್ತು ದೈನಂದಿನ ದುಃಖದ ಮಧ್ಯೆ ಸೇತುವನ್ನು ಕಟ್ಟಿ ಆ ರೀತಿಯಾಗಿ ಜನಕ್ಕೆ ಸಹಕಾರಿಯಾದರೆ ಅದೇ ಆವನಿಗೆ ಸಂತೋಷವನ್ನೀಯುತ್ತಿತ್ತಲ್ಲದೆ ಇತರ ಗೂಢ ವಿಚಾರಗಳನ್ನು ತಿಳಿಯುವುದರಲ್ಲಿ ಇಲ್ಲ. ಆವನು ಮಾರ್ಟಿನ್ ಲೂಥರನಂತೆ ದುಡಿದನು, ಕ್ರಮಿಸಿದನು ಮತ್ತು ಸೆಣಗಿದನು, ಆ ಮೊದಲ ಮಾರ್ಗದ ಶ್ರಮಿಕನಂತೆ ಇವನಿಗೆ ಹೆಚ್ಚಿನದೂ ಮಾಡಲು ಇರಲಿಲ್ಲ. ಆಂದು ಸರ್ವಸಹೋದ್ಯೋಗಿಯು ಅನಿ ಬೆಸೆಂಟ್ ಇವನಿಗೆ ಆಮೂಲ್ಯವಾಗಿ ಕಂಡು ಬಂತಲ್ಲದೆ, ಆವನಂತೆ ಏನೂ ತಿಳಿಯದಿದ್ದರೂ ಉಚ್ಚ ಧ್ಯೇಯವನ್ನುಳ್ಳ ಹಲವರನ್ನು ತನ್ನ ನಿಕಟ ಮಿತ್ರರಂತೆ ಸೇರಿಸಿಕೊಂಡು ತನ್ನ ಕಾರ್ಯಭಾರವನ್ನು ಉತ್ಸಾಹದಿಂದ ಸಾಧಿಸಿದಳು.

ಜನಸಾಮಾನ್ಯರು ತಮ್ಮ ಜೀವನವನ್ನು ಹೇಗೆ ನಡೆಸಿದ್ದರೋ ಅದೇ ರೀತಿ ಅನಿಯೂ ಬ್ರ್ಯಾಡ್ಲಾಯೂ ಜೀವಿಸಿದ್ದರು. ಇವರ ಜೀವನವು ಮೇಲ್ಮಟ್ಟದ್ದಾಗಿದ್ದರೂ ಒಂದು ರೀತಿಯಲ್ಲಿ ಆವರು ಜನದ ಎಡೆಯಲ್ಲಿ ಚೆನ್ನಾಗಿಯೇ ಬಾಳಿದರು, ಜನವಾದರೋ ತಮ್ಮ ಮುಂದಾಳುಗಳು, ತಮ್ಮ ಆಪ್ತರು ಮತ್ತು ಸಹಕಾರಿಗಳು ತಮ್ಮಂತೆಯೇ ರಕ್ತ ಮಾಂಸದಿಂದ ಕೂಡಿದ್ದವರೆಂದು ಭಾವಿಸಿದ್ದರು. ಆಂದಿನ ಜನವು ಅನಿ, ಬ್ರ್ಯಾಡ್ಲಾ ಇವರಂತವರಿಂದ ಅನಿವಾರ್ಯವಾಗಿ ಬೇಕಾದ್ದುಗಳು ಆಂತಹವನ್ನು ಇವರು ಶ್ರೀಮಾದರಗಳಿಂದಲೇ ಕಂಡಿದ್ದರು.

ಸತ್ಯವನ್ನು ಅರಿಯಲು ಮತ್ತು ಅದರ ಗಹನವಾದುದನ್ನು ತಿಳಿಯುವ ಕಾತರತೆಯನ್ನು ಕೊನೆಗೊಳಿಸಲು ಅನಿ ಬೆಸೆಂಟ್ ಇವಳಿಗೆ ತಕ್ಕ ಸಮಯ ಸನ್ನಿಹಿತವಾಗಬೇಕಾಯಿತು. ಸಾಮಾನ್ಯ ವ್ಯಕ್ತಿಯಾಗಿದ್ದ ಅನಿ, ಮತ್ತು ಆತ್ಮಜ್ಞಾನವನ್ನು ಹೊಂದಿ ಆ ರೀತಿ ಸ್ವರ್ಗೀಯ ಭಾವೋಲ್ಲಾಸವನ್ನು ಪಡೆದು ಈಗ ಅದರ ನೆರಳಿನಂತೆ ಜನರೆಡೆಯಲ್ಲಿ ತೋರ್ಪಡಿಸಿಕೊಂಡಿರುವ ಅನಿ, — ಈ ಎರಡು ವ್ಯಕ್ತಿತ್ವಗಳನ್ನು ಲೀನವಾಗಿಸಿ ಆ ರೀತಿ ಅನಿ ಬೆಸೆಂಟಳಿಗೆ ಸಹ

ಕಾಣಿಸುವ ಅಪೂರ್ವ ಅವಕಾಶವು ಬ್ಲಾವಟ್‌ಸ್ಕಿಗೆ ಲಭಿಸಿತು. "ಒಂದು ನಿಶ್ಚಿತವಾದ ಜ್ಞಾನದ ಲಭ್ಯವಾದಂತಾಯಿತು ---- ಸ್ವತಃ ಪರಿಶ್ರಮದ ಫಲವಾಗಿ ಆತ್ಮದ ಅಸ್ತಿತ್ವವಾಗಿದೆ. ನನ್ನ ದೇಹವಲ್ಲ, ನನ್ನ ಆತ್ಮವೇ ನಾನು ----', ಎಂಬುದಾಗಿ ಆಕೆಯು ತನ್ನ ಆತ್ಮಚರಿತ್ರೆಯಲ್ಲಿ ಹೇಳಿರುವಳು. ಅಂತೆಯೇ ಆ ಜ್ಞಾನ ಹಾಗೂ ಸತ್ಯದ ಅಡಿಪಾಯಕ್ಕೆ ಅವಳು ತನ್ನ ಮೊದಲ ಸುಮಾರು ನಲ್ವತ್ತೈದು ವರ್ಷಗಳ ಕಾಲದ ನಿರಂತರ ಸೇವೆಯ ಭವ್ಯ ಕರ್ತೃತ್ವವನ್ನು ಪಡೆದ ಪರಿಣಾಮವಾಗಿ ಜಗತ್ತಿನ ಅನುಜೀವಕ್ಕೆಂದು ದುಡಿದ ಕ್ರಾಂತಿಕಾರಕ ವ್ಯಕ್ತಿಗಳಲ್ಲಿ ಒಬ್ಬರೆಂದೆನಿಸಿ ಪ್ರಸಿದ್ಧಳಾದಳು. ಅವಳ ಗ್ರಂಥದ ಕಡೇ ವಾಕ್ಯಬೃಂದದಲ್ಲಿ ಅವಳು ಕಟ್ಟಿದ ಆ ತಳಹದಿಯ ರೂಪುರೇಷೆಯಂತೆಂಬುದನ್ನು ಕುರಿತು ಅವಳು ಹೀಗೆ ಹೇಳಿದಳು:—

"ಆ ರೀತಿ ನಾನು ಬಿರುಗಾಳಿಯನ್ನು ಎದುರಿಸಿ ಶಾಂತಿಯನ್ನು ಹೊಂದಿದೆನು. ಆದರೆ ಬಲಿಷ್ಠ ಆತ್ಮವು ಇಚ್ಛಿಸುವ ಬಾಹ್ಯ ಜೀವನದ ಶಾಂತಿಸಾಗರದಲ್ಲಿ ಹೊಂದಬಹುದಾದ ಶಾಂತಿಯು ಅದಲ್ಲ; ಅದು ಬಾಹ್ಯಪರಿಸರದ ಬಾಧೆಗೆ ಎರವಾದ ಅಂತಃಕರಣದ ಶಾಂತಿಯಾಗಿದೆ. ಅದು ತಾತ್ಕಾಲಿಕವಾಗಿ ಇದ್ದು ಹೋಗತಕ್ಕದ್ದಲ್ಲ, ಬದಲಾಗಿ ಚಿರಂತನವಾಗಿ ಉಳಿಯತಕ್ಕದ್ದಾಗಿದೆ. ಜೀವನದ ಕೊನೆಗೆ ಎರವಾದ ಅತಿ ಆಳದಲ್ಲಿ ಹುದುಗಿರತಕ್ಕಂತಾಗಿದೆ. ಹಾಲ್ಸ್ ಬ್ಯಾಡ್ಲೆಯ ಸೇವೆಯು ಇನ್ನೂ ಬೇಕಾಗಿದ್ದರಿಂದ ನವೆಂಬರದಲ್ಲಿಯೇ 1891ರ ವಸಂತಕಾಲದಲ್ಲಿ ನಾವು ಅವನನ್ನು ಕಳೆದುಕೊಂಡಾಗ ಮತ್ತು ಬ್ಲಾವಟ್‌ಸ್ಕಿಯು ಶಾಶ್ವತ ವಿಶ್ರಾಂತಿಗೆ ಸ್ವರ್ಗದ ಹೆಬ್ಬಾಗಿಲು ತೆರೆಯಲ್ಪಟ್ಟಾಗ ಆ ಶಾಂತಿಯು ನನ್ನನ್ನು ಧೃತಿಗೆಡದಂತೆ ಸಲಹಿತು. ಬಹು ಜವಾಬ್ದಾರೀ ಕೆಲಸಗಳನ್ನು ಕಾತರತೆಯಿಂದ ಹೊರುವಾಗ ಆ ಶಾಂತಿಯೇ ನನ್ನನ್ನು ಮುಂದೊಯ್ದು ಕಾಪಾಡಿತು, ಪ್ರತಿಯೊಂದು ನೋವು ನನ್ನ ಶಾಂತತೆಯನ್ನು ಬಲಗೊಳಿಸಿತು; ಪ್ರತಿಯೊಂದು ಶ್ರಮವು ಅದನ್ನು ಇನ್ನಷ್ಟು ಗಂಭೀರವಾಗಿಸಿತು; ಪ್ರತಿಯೊಂದು ಬಾಧೆಯು ಅದನ್ನು ತೇಜಸ್ವಿಯಾಗಿ ಮಾಡಿತು; ಕಾತರತೆಯ ಭಯಭ್ರಾಂತ ಜೀವನಕ್ಕೆ ಅದು ಪ್ರಬಲವಾದ ಕಾವಲಾಗಿ ರಕ್ಷಿಸಿತು. ಹುಟ್ಟು, ಆ ಮೂಲಕ ಸಾವು, ಅಂತೆಯೇ ಹುಟ್ಟು – ಹೀಗೆ ಉಂಟಾದಾಗ ನಾನು ಆ ಮಹಾ ಭ್ರಾತೃತ್ವದ ಒಂದು ಸೇವಕಿಯಾಗಿದ್ದು ಆ ಚಿರಂತನ ಶಾಂತಿಯು ಜ್ಞಾಜಲ್ಯಮಾನವಾದ ಪ್ರಕಾಶದಿಂದ ಅನುನೀತರಾದ ಕಿಂಕರರಲ್ಲಿ ಒಬ್ಬಳಾಗಿ ಸೇರಿದೆನು ----."

ಕಡೇಗಾದರೂ ಆನಿ ಬೆಸೆಂಟ್ ಇವರಿಗೆ ತಿಳಿಯಿತು. ಅವಳು ಬ್ರಹ್ಮವಿದ್ಯಾ (Theosophy) ಸಂಘಕ್ಕೆ ಸೇರಿದಳು. ಹಲವು ದೇಶಗಳಲ್ಲಿ ಕಚೇರಿಗಳನ್ನು ಗಳಿಸಿದ ಮತ್ತು ಒಂದರನಂತರ ಒಂದಾಗಿ

ಹಿಂದಿನ ಜನ್ಮಗಳಲ್ಲಿ ತಾನು ಕಲಿತ ಆ ಸ್ವರ್ಗೀಯ ವಿದ್ಯೆಯಾದ ತತ್ವಜ್ಞಾನದಲ್ಲಿ ಮುಳುಗಿ ಲೋಕದ ಉದ್ಧಾರಕ್ಕಾಗಿ ಜನ್ಮತಾಳುತ್ತಿದ್ದಲ್ಲದೆ ಬ್ಲಾವಟ್ಸ್ಕಿಯ ಉತ್ತರಾಧಿಕಾರಿಯಾಗಿ ಆ ಬ್ರಹ್ಮವಿದ್ಯೆ ಹಾಗೂ ಚಿರಂತನ ಸತ್ಯವನ್ನು ಎತ್ತಿ ಹಿಡಿಯುವ ದೇವದೂತಿಕೆಯಾಗಿ ಇನ್ನೂ ಮರ್ಮ ತುಂಬಿರುವ ಈ ಜಗತ್ತಿನ ರಹಸ್ಯವನ್ನು ಬಿಚ್ಚಿಡುವ ಪ್ರಖರ ಪ್ರತಿಭಾವಂತೆಯಾದಳು.

ಕವನಗಳಲ್ಲಿ ವಿಶೇಷ ಅಭಿರುಚಿಯನ್ನು ತೋರಿಸಿದ್ದ ಆನಿಯು ಎಫ್. ಡಬ್ಲ್ಯು. ಹೆಚ್. ಮೈಯರ್ಸ್ ಇವರು ಸಂತ ಪಾಲ್ ಇವರ ಬಾಯಿಂದ ಹೇಳಿಸಿದ ಈ ಭಾವಪ್ರಚೋದಕವಾದ ಪದ್ಯವನ್ನು ಆಗಾಗ್ಗೆ ಆನಿಯು ಹೇಳುತ್ತಿದ್ದಳು.

"ಮನುಷ್ಯಮಾತ್ರನ ಮನಸ್ಸಿನ ಅರಿವಿನೊ ಜಗದಿ
ಕೇಳುವವು ಸಂಶಯಗಳೇನಿಲ್ಲದೆ ಒಪ್ಪುವನು
ಬಿಕ್ಕುರುಳಿಸಿದೊ ನೀನ್ ಜಗದಿ, ನೀನೊಪ್ಪದಿದ್ದೊಡೆ
ನಾವು ಕೇಳುತ್ತ ನೀನ್, ಇತ್ತಲಿಂತೆ ಅನಿಸಿಸು!"

"ಮುಂದೆ ಸಯ್ಯಾತರೆ ಭೂಮಿ ತಾನ್ ಸಂದೇಹಕೊಳ್ಳುವೆವು
ಧುರರಧುರರ್ಸ ಮತ್ತೆ ಜಡಿಯಿತು ಗಾಢದಿಂ ಪ್ರೀನಲ್ ಪರಿಯಿತು
ಕೇಳ್ ಅರವನು ಈ ವಿಶ್ವಗರ್ಭದಲಿ ನಿಲುವರೊದು
ಚಿತ್ರರಿಸುವನಾತ್ಮದಲಿ ದೇವರನು ನೀವ್ ಬೇರದಿ."

"ಹೋ ಖ್ಯಾತನಹನವನ ಅದೆಂತು ಕಂಡಿದೆ ನೀನ್ ಅಂದು!
ಕಂಗೆಟ್ಟು, ಧೃತಿಗೆಟ್ಟು, ಮತಿಗೆಟ್ಟು ಆನಿತೊರ್ವನಿರಲು
ದುರಂತದ ಆ ಕತೆಯ ಶಿಲುಬೆಯಲಿ ನೆಟ್ಟಿರಲು
ನರಿ, ಪಿಶಾಚಗತಾತಲಿಹರು ನರಕದಲಿ, ಅರಿತಿಹನು ಅದನು,"

ಸಾರ್ವಜನಿಕ ಕ್ಷೇತ್ರದಲ್ಲಿ ಆನಿಯು ಕಾಲಿಟ್ಟಾಗಿನಿಂದಲೇ ಅವಳ ಜೀವನದ ಧ್ಯೇಯವು ಇದೇ ಆಗಿದ್ದಿತು. ಆದರೆ ಹೆಚ್. ಪಿ. ಬ್ಲಾವಟ್ಸ್ಕಿಯನ್ನು ಭೇಟಿಯಾದನಂತರ ಅವಳ ಜೀವಿಗೆ ಒಂದು ಹೊಸ ಅರ್ಥ, ಹೊಸ ಶಕ್ತಿ ಮತ್ತು ಹೊಸ ಆದೇಶವು ಉಂಟಾಗಿ ಬಲವತ್ತರವಾಯಿತು. ಆ ವರೆಗೆ ಅವಳು ದಿವ್ಯ ಸಂದೇಶಕ್ಕಾಗಿ ಹಾತೊರೆದಿದ್ದಳು. ಬ್ಲಾವಟ್ಸ್ಕಿಯನ್ನು ಕಂಡನಂತರ ಅವಳ ನೋಟವು ಬಹು ನಿಗೂಢವಾಗಿಯೂ ಅಧಿಕಾರಪೂರ್ಣವಾಗಿಯೂ ತೇಜೋಮಾನವಾಗಿ ಬೆಳಗಿತು.

ಕರ್ನಲ್ ಹೆನ್ರಿ ಆಲ್ಕಾಟ್ ಇವರ ಸಹೋದ್ಯೋಗಿಯಾದ ಬ್ಲಾವಟ್ಸ್ಕಿ ಇವಳಿಂದ ಉಜ್ಜೀವನಗೊಳಿಸಲ್ಪಟ್ಟ, ಆಲ್ಕಾಟ್‌ನಿಂದ ತಕ್ಕ ರೂಪು ಮತ್ತು ಪ್ರಚಾರವನ್ನು ಪಡೆದ ಮತ್ತು ಆನಿ ಬೆಸೆಂಟಳ ಸತ್ಯಶಕ್ತಿ ಬೋಧನೆಗೆ ಒಳಗಾದ ಈ ಅಂತರಾಷ್ಟ್ರೀಯ ಬ್ರಹ್ಮವಿದ್ಯಾಸಂಸ್ಥೆಯ (Theosophical Society) ಸ್ಥಾಪಕನೂ

 1075

ಆದರ ಅಧ್ಯಕ್ಷನೂ ಆದ ಕರ್ನಲ್ ಆಲ್ಕಾಟ್ ಇವನ ಉತ್ತರಾಧಿಕಾರಿಯಾಗುವ ಕಾಲವು ಆದಾಗಲೇ ಅವಳಿಗೆ ಬಂತು,

ಬ್ರಹ್ಮವಿದ್ಯಾ ಸಂಸ್ಥೆಗೆ ಸೇರಿದ ಆ ಕ್ಷಣದಿಂದಲೇ ಆನಿ ಬೆಸೆಂಟ್ ಇವಳು ತನ್ನ ಹೊಸ ಕ್ಷೇತ್ರದಲ್ಲಿ ಬಿಡುವಿಲ್ಲದೆ ದುಡಿಯಲು ಪ್ರಾರಂಭಿಸಿ ತನ್ನ ಅಪಾರ ಭಕ್ತಿ, ಶ್ರದ್ಧೆ ಮತ್ತು ಬುದ್ಧಿಶಕ್ತಿಯನ್ನು ಆ ಸಂಸ್ಥೆಗೆ ಮೀಸಲಾಗಿಟ್ಟಲ್ಲದೆ ತನ್ನ ಆ ಕಾರ್ಯದಲ್ಲಿ ಚಾರ್ಲ್ಸ ಬ್ರಾಡ್ಲೋಯಂತೆ ತನಗೆ ದಿಗ್ದರ್ಶಕನಾಗಿದ್ದನೆಂಬುದನ್ನು ಆಗಿಂದಾಗ್ಗೆ ಅವಳು ಸ್ಮರಿಸುತ್ತಿದ್ದಳು,

ಕ್ರಿ.ಶ. 1891 ರಲ್ಲಿ ಅವಳು ಉತ್ತರ ಅಮೇರಿಕಾದ ದೇಶಗಳಲ್ಲಿ ಮೊದಲ ಬಾರಿಗೆ ಸಂಚರಿಸಿದಳು. ಅಲ್ಲೆಲ್ಲಾ ಬಹು ಉತ್ಸಾಹಪೂರ್ವಕವಾದ ಸ್ವಾಗತವನ್ನು ಪಡೆದಳು, ಪೂರ್ವಾರ್ಧಗೋಲ ಪೂರ್ವದಲ್ಲಿದ್ದರೂ ಪಶ್ಚಿಮಾರ್ಧಗೋಲವು ಪಶ್ಚಿಮದಲ್ಲಿದ್ದರೂ ನಿಜವಾದ ಮಹತ್ ಶಕ್ತಿಗೆ ಲೋಕದ ಪೂರ್ವ ಅಥವಾ ಪಶ್ಚಿಮ ಭಾಗಗಳೆಂಬ ಭೇದ ಯಾವುದೂ ಇಲ್ಲ!

ಆನಿ ಬೆಸೆಂಟಳ ಮೂರನೇ "ಜನ್ಮ".
ಹಿಂದೂಸ್ಥಾನ.

ಕ್ರಿ.ಶ. 1893 ರಲ್ಲಿ ಆನಿಯು ಅಂದಿನ ತನ್ನ "ಅವತಾರ"ದಲ್ಲಿ ಮೊದಲಿಂದಲೂ ಅವಳ ನಿಜದ ಮಾತೃಭೂಮಿಯಾಗಿದ್ದ ಹಿಂದೂಸ್ಥಾನವನ್ನು ಮೊದಲ ಬಾರಿಗೆ ಸಂದರ್ಶಿಸಿದಳು. ಭಾರತದೊಡನೆ ತನ್ನ ಸಂಪರ್ಕವನ್ನು ಬೆಳೆಸುವ ವರೆಗೂ ಅವಳು ಲಂಡನಿನಲ್ಲಿ ಜನಿಸಿದ್ದರೂ ತಾನು ಪೂರ್ಣ (ಐರಿಶ್) ಜನಾಂಗದವಳೆಂದೇ ಹೇಳುತ್ತಾ ಇದ್ದಳು. ತನ್ನ ಎರಡನೇ ಜನ್ಮದಲ್ಲಿ ಬ್ರಹ್ಮವಿದ್ಯಾ ಸ್ಮರಣೆಯನ್ನು ಪಡೆದಂತೆ ಇದೀಗ ಅವಳ ಭಾರತ ದರ್ಶನವನ್ನು ಅವಳ ಮೂರನೇ "ಜನ್ಮ"ವೆಂದು ಹೇಳಬಹುದು. ತಾನು ಐರಿಶ್ ಮಹಿಳೆಯೆಂಬ ಹೆಮ್ಮೆಯೊಡನೆಯೇ ಅದಕ್ಕಿಂತ ಹೆಚ್ಚಾಗಿ ಮತ್ತು ಭಾರತೀಯರೇ ತಮ್ಮ ಮಾತೃಭೂಮಿಯಲ್ಲಿಟ್ಟಿದ್ದ ಅಭಿಮಾನವನ್ನು ಮೀರಿ ಅವಳು ಭಾರತೀಯಳೆಂದೇ ತೋರುವುದಾಗಲನ್ನು ತೋರ್ಪಡಿಸಿಕೊಂಡಳು.

1893-94 ರಲ್ಲಿ ಅವಳು ಈ ದೇಶದಲ್ಲಿ ಸಾಧಿಸಿದ್ದ ತನ್ನ ಪ್ರಚಂಡ ಕಾರ್ಯಭಾರಕ್ಕೆ ತಕ್ಕ ತಳಹದಿಯನ್ನು ಹಾಕಿದಳು. ಅವಳು ಹೋದೆಡೆಯಲ್ಲೆಲ್ಲ ಜನರು ಅವಳನ್ನು ಉತ್ಸಾಹಪೂರ್ವಕವಾಗಿ ಸ್ವಾಗತಿಸಿದರಲ್ಲದೆ, ಕರ್ನಲ್ ಆಲ್ಕಾಟ್ ಇವನ ಜತೆಯಲ್ಲಿ ಭಾರತದ ಬ್ರಹ್ಮವಿದ್ಯಾ ಸಂಸ್ಥೆಯ (Theosophical Society) ಎಲ್ಲಾ ಶಾಖೆಗಳನ್ನು ಸಂದರ್ಶಿಸಿದಳು. ವಿವಿಧ ವಿಷಯಗಳ ಮೇಲೆ

ಮತ್ತು ತಾನು ಕ್ರಾಂತಿಕಾರಕವಾಗಿ ಅಭಿಮಾನವಿಟ್ಟಿದ್ದ ಹಿಂದೂಮತದ
ಮೇಲೆ ಉಪನ್ಯಾಸಗಳನ್ನು ಕೊಟ್ಟಳು. ಅವಳು ಹಿಂದಿನ 'ಜನ್ಮ'ಗಳ
ಕಾರ್ಯಕಲಾಪಗಳನ್ನು ನೋಡಿದಾಗ ಅವಳ ಪೂರ್ವ ಮತ ಪ್ರತಿಪಾ
ದನೆಗಳಾಗುವ ಚಿಹ್ನೆಯೂ ಅಂದೇ ತೋರಿತು. ಹಿಂದೂಗಳ ಪವಿತ್ರ
ಕ್ಷೇತ್ರ-ನಗರವಾದ ಮತ್ತು ಭೂಗರ್ಭದೊಳಗೆ ಹುಗಿದು ಹೋದರೂ
ಮೇಲೆತ್ತಿ ಹಿಂದಾಗಿ ನಿಂತ ಏಳು ನಗರಗಳಲ್ಲಿ ಮೇಲಂತಸ್ತಿನದೆಂದು
ಎಣಿಸಲ್ಪಟ್ಟ ಬನಾರಸ್ ಅಥವಾ ಕಾಶಿಯಲ್ಲಿ ಅವಳು 1895ರಲ್ಲಿ
ತನ್ನ ವಾಸದ ಮನೆಯನ್ನು ನಿರ್ಮಿಸಿ ನೆಲೆನಿಂತಳು. ಅವಳು ಕಾ
ಶಿಯನ್ನು ಪ್ರೀತಿಸಿದಷ್ಟು ತೀವ್ರವಾದ ಬೇರಾವ ಸ್ಥಳವನ್ನೂ ಪ್ರೀತಿಸಲಿ
ಲ್ಲವಾದುದರಿಂದ ಅದು ನಿಜವಾಗಿಯೂ ಅವಳ ಮಾತೃಸ್ಥಾನವಾಗಿ
ಯೇ ತೋರಿಬಂತು. ಆ ಮಹಾಪವಿತ್ರ ಹಿಂದೂಕ್ಷೇತ್ರದಲ್ಲಿಯೇ ಅವಳು
ಹಿಂದೂಮತವನ್ನು ಅಪ್ಪಿದಳೆಂದು ನಾನು ಭಾವಿಸುತ್ತೇನೆ. ಹಿಂದೂ
ಧರ್ಮದ ಪ್ರಕಾರ ಒಬ್ಬನು ಹಿಂದೂವಾಗಿ ಹುಟ್ಟಬೇಕಲ್ಲದೆ ಆ ರೀತಿಯಾ
ರನ್ನೂ ಮತಪರಿವರ್ತನೆ ಮಾಡಲಾಗುವುದಿಲ್ಲ. ಆ ಕಾರಣದಿಂದ ಅನಿಯು ಹಿಂದೂ
ಮಹಿಳೆಯಾಗಿಯೇ ಅಕ್ಷರಶಃ ಶುದ್ಧ ಸರಳ ಜೀವನವನ್ನು ನಡೆಸಿದ
ಳಾದರೂ ಅವಳು ತಾನು ಹಿಂದೂವೆಂದು ಕರೆದುಕೊಂಡುದೇ ಇಲ್ಲ.
ಆದರೆ ಹಿಂದೂಜನವು ಅವಳನ್ನು ಶುದ್ಧ ಹಿಂದೂ ಮಹಿಳೆಯೆಂದೇ,
ಭಾರತೀಯರಿಗಿಂತ ಮಿಗಿಲಾದ ಭಾರತೀಯಳೆಂದೇ ಅವಳನ್ನು
ಮುಕ್ತಕಂಠದಿಂದ ಪ್ರಶಂಸಿಸಿದರು. ಇದಕ್ಕೆ ಸಾಕ್ಷ್ಯವಾಗಿ ನಾನು
ಅವಳ ಹಿಂದೂ ನಿವಾಸವಾದ ಕಾಶಿಯ "ಶಾಂತಿಕುಂಜ" ಭವನದಲ್ಲಿ
ಅವಳೊಡನೆ ಬಹುಕಾಲ ವಾಸಿಸಿದ್ದಾಗ ಅವಳನ್ನು ಚೆನ್ನಾಗಿ ತಿಳಿದಿದ್ದೇ
ನು. ಅವಳ ದಿನಚರಿಯು ಎಲ್ಲಾ ವಿಧದಲ್ಲೂ ಸವರ್ಣ ಹಿಂದೂ
ಯೋಗಿನಿಯಂತೆಯೇ ಇದ್ದಿತು. ಅವಳು ಭಾರತೀಯ ಉಡುಪನ್ನು
ಧರಿಸಿದ್ದಳು, ಹಿಂದೂಗಳ ಭೋಜನಕ್ರಮವನ್ನೇ ಅನುಸರಿಸಿದ್ದಳು.
ಹಿಂದೂ ಪುರೋಹಿತರು ಅನುಸರಿಸುವ ಶುಚಿಕ್ರಮವನ್ನೇ ಪಾಲಿಸಿ
ದಳು; ಸಸ್ಯಾಹಾರಿಯಾಗಿದ್ದಳು. ರೀತಿನೀತಿಗಳಲ್ಲೂ ಭಾರತೀಯರಂ
ತೆಯೇ ಇದ್ದಳು. ತಾನು ಅನುಸರಿಸಿದ್ದ ಧರ್ಮದಲ್ಲಿ ಅವಳು ಇ
ಟ್ಟಿದ್ದ ಅಭಿಮಾನ ಶ್ರದ್ಧೆಗೆ ಸಾಕ್ಷ್ಯವಾಗಿ ಅವಳ ಸಹೋದ್ಯೋಗಿ
ಳು ಮತ್ತು ಹಿಂದೂ ವಿದ್ವಾಂಸರು, ಡಾ. ಭಗವಾನ್ ದಾಸ್,
ಉಪೇಂದ್ರನಾಥ ಬಸು, ಗೋವಿಂದ ದಾಸ ಮೊದಲಾದವರೊಡ
ಗೂಡಿ ಸನಾತನ ಧರ್ಮವನ್ನು ಕುರಿತಾಗಿ ಹಲವು ಕೈಹೊತ್ತಗೆ
ಗಳು, ಪ್ರಶ್ನೋತ್ತರ ಮಾಲಿಕೆಗಳು, ಜನಸಾಮಾನ್ಯರಿಗೂ ಉಚ್ಚ
ವರ್ಗದ ಜನರಿಗೂ ತಕ್ಕುದಾದ ಹಲವು ಗ್ರಂಥಗಳು ಇತ್ಯಾದಿ
ಬರೆದು ಮತ್ತು ಬರೆಯಿಸಿ ಅವನ್ನು ಧಾರಾವಾಹಿಯಾಗಿ ಪ್ರಕಟಿಸಿ
ಲು ಅವಳು ಪ್ರಮುಖ ಪಾತ್ರವನ್ನು ವಹಿಸಿದಳು.

ಸಾಂಪ್ರದಾಯಿಕ ಹಾಗೂ ವಿಧಿಬದ್ಧವಾಗಿ ತನ್ನ ಆಚರಣೆಯಲ್ಲಿ ಸನಾತನ ಧರ್ಮದ ವಿಶಿಷ್ಟತೆಗಳನ್ನು ಪುನರುಜ್ಜೀವನಗೊಳಿಸಲೆಳಸಿದ ಆನಿ ಬೆಸೆಂಟ್ ಇವರು ಸಾಹಸವೇ ಭಾರತೀಯ ಜೀವನವನ್ನನುಸರಿಸಲು ಪ್ರವೃತ್ತ ಮಾಡಿದ ಕಾಲಗಳಲ್ಲಿ ಮೊದಲನೆಯದಾಗಿತ್ತು.

ಆನಂತರ ಸ್ಮರಣೀಯವಾದ 1898ನೇ ವರ್ಷವು ಬಂತು. ಆ ವರ್ಷದ ಡಿಸೆಂಬರ್ ತಿಂಗಳಲ್ಲಿ ಕೇಂದ್ರ ಹಿಂದೂ ವಿದ್ಯಾಲಯವು (ಕಾಶಿಯಲ್ಲಿ) ಸ್ಥಾಪನೆಯಾಯಿತು. ಅವರು ತನ್ನ ಹಿಂದೂ ಸಹೋದ್ಯೋಗಿಗಳ ತಂಡದೊಂದಿಗೆ ಕೂಡಿ ಭಾರತೀಯ ವಿದ್ಯೆಗೆ ಭಾರತೀಯ ರೀತಿಯಲ್ಲಿ ಜೀವಕಳೆಯನ್ನೀಯಲು ಪ್ರಯತ್ನಿಸಿದರು. ಆಂಗ್ಲ ಸರಕಾರದೊಡನೆ ಅನಧಿಕೃತವಾಗಿ ಭಾಗಿಯಾಗಿದ್ದರೂ ಮಿಷನರಿಗಳಾದ ಕ್ರೈಸ್ತ ಮತಪ್ರವಾದಿಗಳ ಮೂಲಕವಾಗಿ ಹಿಂದೂಧರ್ಮವು ಸೊರಗಿತ್ತು. ಎಲ್ಲ ಕ್ರೈಸ್ತ ಸಂಸ್ಥೆಗಳಲ್ಲೂ ಹಿಂದೂಧರ್ಮವನ್ನು ತುಚ್ಛೀಕಾರದಿಂದ ಕಾಣುವ ಸಂದರ್ಭವನ್ನು ಕಲ್ಪಿಸಿದ್ದರು. ಆಂಗ್ಲ ಸರಕಾರವು ಆ ವಿಷಯದಲ್ಲಿ ಧರ್ಮನಿಷ್ಠವಾದರೂ ಸರಿ ಎಂಬಂತೆ ಮೌನದಲ್ಲಿತ್ತು. ಪರಿಣಾಮವಾಗಿ ಲೌಕಿಕದ ಎಲ್ಲಾ ಪತಿತಧರ್ಮಗಳಿಗೂ ಮಿಗಿಲಾದ ಮತ್ತು ಉತ್ತಮ ದೈನಿಕ ಜೀವನಕ್ಕೆ ಆದರ್ಶಪ್ರಾಯವಾದ ಹಿಂದೂಮತದಲ್ಲಿ ವಿಶ್ವಾಸವೇ ಇಲ್ಲದ ಜನಾಂಗ ಯುವಕರಿಗಳೇ ಒಂದಿರುವ ಆಗಿಹೋಯಿತು. ಪರಕೀಯತನ ಕನಿಕರಿಸುವಂತ ಹೋದುದನ್ನು ಮರಳಿ ತಂದಿರಿಸಲು ಪರಕೀಯಳಾದ ಆನಿ ಬೆಸೆಂಟ್ ಇವರೇ ಬಂದರು. ಹಿಂದೂ ಯುವಕರಿಗೆ ಹಿಂದೂಧರ್ಮದ ಮೂಲ ತತ್ವಗಳನ್ನು ತಿಳಿಯಲು ಅವರನ್ನು ಭಾರತೀಯರನ್ನಾಗಿ ಮಾಡುವ ವಿದ್ಯೆಯನ್ನೀಯಲು ಕಾಶಿಯಲ್ಲಿ Central Hindu College ಇದು ಕೇಂದ್ರವಾಗಿತ್ತು. ಭಾರತೀಯ ಪುರಾತನ ಧರ್ಮಶ್ರದ್ಧೆಗಳು ಮಾಯವಾಗಿ ಕೇವಲ ಪಾಶ್ಚಾತ್ಯಭಾವಕ್ಕೆ ಸಿಗುತ್ತಿದ್ದಿತು. ಪರಿಣಾಮವಾಗಿ ಬಿಳಿ ಜನರ, ಆಂಗ್ಲ ಸಾಮ್ರಾಜ್ಯಶಾಹಿಯ ಮತ್ತು ಪಾಶ್ಚಾತ್ಯ ವಾದ್ದೇಯರ ಗುಲಾಮರಾಗಿ ಜನರು ಪರಿವರ್ತನಗೊಂಡಿದ್ದಂತೆ ತೋರಿತು. ಈ Central Hindu College ಇದು ತುಂಬಾ ಪ್ರಬಲವಾಗಿ ಬೆಳೆಯಿತು ಬಂತು, ದೇಶದ ಎಲ್ಲ ಕಡೆಗಳಿಂದಲೂ ವಿದ್ಯಾರ್ಥಿಗಳು ಅಲ್ಲಿಗೆ ಬಂದರು; ಅಂತೆಯೇ ನುರಿತ ಅಧ್ಯಾಪಕರಲ್ಲಿ ಹಲವರು ಪಾಶ್ಚಾತ್ಯರಾಗಿದ್ದರು; ಪರಿಷತ್ತು, ಶಿಲಾತಾಂತ್ರದಲ್ಲಿ, ಆಟೋಟಗಳಲ್ಲಿ ಮತ್ತು ವಿದ್ಯಾರ್ಥಿಗಳ ಗುಣಾವಗುಣಗಳನ್ನು ಮೆರುಗುಗೊಳಿಸುವುದರಲ್ಲಿ ಈ ವಿದ್ಯಾಮಂದಿರವು ಸರ್ವರ ಪ್ರಶಂಸೆಗೆ ಪಾತ್ರವಾಗಿದ್ದುದರಿಂದ ಭಾರತೀಯ ವಿದ್ಯಾಭ್ಯಾಸ ಹಾಗೂ ದೇಶಾಭಿಮಾನವನ್ನು ಪಡೆಯಲು ವಿದ್ಯಾರ್ಥಿಗಳು ಅಲ್ಲಿಗೆ ಯಾತ್ರಾರ್ಥಿಗಳಾಗಿ ಹೋದರು. ಆ ಕಾಲಗತಿಯ ಚಟುವಟಿಕೆಗಳಲ್ಲಿ ಒಂದಾಗಿ ಆನಿ ಬೆಸೆಂಟ್ ಇವರು The Central Hindu College Magazine ಎಂಬ ಮಾಸಪತ್ರಿಕೆಯನ್ನು ಯುವಕರಿಗಾಗಿ ಹೊರಡಿಸಿದರು. ಈ ಪತ್ರಿಕೆಯ 15,000 ಕ್ಕೂ ಮಿಕ್ಕಿ ಪ್ರತಿಗಳು ಅಂದು ಇಡೀ ಹಿಂದೂಸ್ಥಾನದಲ್ಲೆಲ್ಲ ಪ್ರಚಾರವಿದ್ದುವೆಂಬುದು ಆಹ್ಲಾದನೀಯ ವಿಷಯವಾಗಿದೆ!

ಈ ಕೇಂದ್ರ ಹಿಂದೂ ಕಲಾಶಾಲೆಯನ್ನು ಅನಂತರ Benares Hindu University ಎಂದು ಕರೆಯಲ್ಪಡುತ್ತಿದ್ದಕ್ಕೆ ಮೂಲಕೇಂದ್ರ ಶಾಲೆಯಾಗಿ ಸೇರಿಸಿ ಅದನ್ನು 1913ರಲ್ಲಿ ಮದನ ಮೋಹನ ಮಾಳವೀಯರ ಮೇಲ್ವಿಚಾರಣೆಗೆ ಒಪ್ಪಿಸಲಾಯಿತು. ಅಲ್ಲಿಂದನಂತರ ಕಟ್ಟಡಗಳೂ ವಿದ್ಯಾರ್ಥಿಗಳೂ ಅಧ್ಯಾಪಕರೂ ಸಂಖ್ಯೆಯಲ್ಲಿ ಹೆಚ್ಚುತ್ತಾ ಬಂದು ಕಡೆಗೆ ಆ ವಿಶ್ವವಿದ್ಯಾಲಯವು ಜಯಶಾಲಿಗಳಾದ ವಿದ್ಯಾರ್ಥಿಗಳಿಗೆ ತನ್ನ ಸ್ವಂತ ಪದವಿಗಳನ್ನು (degrees) ಕೊಡುವ ಹಕ್ಕನ್ನು ಪಡೆಯಿತು.

ಭಾರತೀಯ ಜೀವನ ತತ್ವಗಳನ್ನು ಪುನರುಜ್ಜೀವನಗೊಳಿಸುವ ಆ ವಿಶ್ವವಿದ್ಯಾಲಯದ ಧ್ಯೇಯದಲ್ಲಿ ಪಾಶ್ಚಾತ್ಯ ವಿದ್ಯಾಭ್ಯಾಸದ ಸತ್ವ ಸಾರವನ್ನು ಕೊಡುವ ಕಾರ್ಯವು ಎರಡನೆಯದಾಗಿತ್ತು.

ಈ ತನ್ಮಧ್ಯೆ ಅನಿ ಬೆಸೆಂಟ್ ಇವಳು ಭಾರತದ ಹಲವು ಭಾಗಗಳಲ್ಲಿ ಸಂಚರಿಸಿ ತತ್ವಜ್ಞಾನ (Theosophy) ವನ್ನು ಕುರಿತು ಭಾಷಣಗಳನ್ನು ಕೊಡುತ್ತಾ ಆ ಸಂಸ್ಥೆಯ ಸದಸ್ಯತ್ವವನ್ನು ಹೆಚ್ಚಿಸಿದ್ದಲ್ಲದೆ ಹಿಂದೂ ಧರ್ಮ ಮತ್ತು ಪ್ರಪಂಚದಲ್ಲಿ ಭಾರತದ ಸ್ಥಾನ, ಎಂಬೀ ವಿಷಯಗಳನ್ನು ಕುರಿತಾಗಿಯೂ ಉಪನ್ಯಾಸಗಳನ್ನು ಕೊಡುತ್ತಲೇ ಇದ್ದಳು.

ಬನಾರಸ್ಸಿನ ಕೇಂದ್ರ ಹಿಂದೂ ಶಾಲೆಯನ್ನು ತನ್ನ ಮಟ್ಟಕ್ಕೆ ಏರಿಸಬೇಕಾಗಿದ್ದುದರ ಪ್ರಯುಕ್ತ ಅನಿ ಬೆಸೆಂಟಳು 1898 ರಲ್ಲಿ ಹಿಂದೂಸ್ಥಾನದಲ್ಲಿಯೇ ಇದ್ದಳು. ಅದರನಂತರ ಅವಳು ಖಂಡಾಂತರ ಪ್ರವಾಸವನ್ನು ಕೈಗೊಂಡಳು. 1902ನೇ ವರ್ಷವು ಸ್ಮರಣೀಯವಾಯಿತು, ಏಕೆಂದರೆ ಅವಳು ಗಂಡಸರ ಮತ್ತು ಹೆಂಗಸರುಗಳಿಂದೊಡಗೂಡಿದ ಫ್ರೆಂಚ್ ಗಣ್ಯಾಚಾರಿಗಳ ಮಂಡಳಿಯ ಸದಸ್ಯೆಯಾಗಿ ಸೇರಿದಳು. ಈ ಸಂಸ್ಥೆಯು ಗಂಡಸರಿಂದಲೇ ಕೂಡಿದ ಗಣ್ಯಾಚಾರಿಗಳ ಮಂಡಳಿಯ ಅಂಗೀಕಾರವನ್ನು ಪಡೆಯದಿದ್ದರೂ ಮಹಿಳೆಯರ ಹಕ್ಕಿಗಾಗಿ ಹೋರಾಡಿದ ಮೂರು ಜನ ಪ್ರಸಿದ್ಧ ಫ್ರೆಂಚ್ ಮಹಿಳಾ ಮುಂದಾಳುಗಳಾದ ಮೇರಿಯಾ ಡೆರೇಮಿ, ಮೇರೀ ಮತ್ತು ಜಾರ್ಜ್ ಮಾರ್ಟಿನ್ ಇವರಿಂದ ಸ್ಥಾಪಿಸಲ್ಪಟ್ಟಿದ್ದು ಅದು ಫ್ರಾನ್ಸಿನ ಜನಜೀವನದಲ್ಲಿ ಪ್ರಬಲ ಸ್ಥಾನವನ್ನು ಪಡೆದಿತ್ತು. ಆ ಸಂಸ್ಥೆಯೊಡನೆ ಅನಿ ಬೆಸೆಂಟಳ ಸಂಪರ್ಕವು ಅದಕ್ಕೆ ಹೊಸ ವಿಕಾಸವನ್ನು ಕೊಟ್ಟಂತಾಯಿತಲ್ಲದೆ ಮಾನವರಲ್ಲಿ ಸೋದರ ಭಾವವನ್ನು ಪ್ರತಿಪಾದಿಸುತ್ತಿದ್ದ ಆ ಸಂಸ್ಥೆಯ ಪ್ರಭಾವವು ಫ್ರೆಂಚ್ ಸಾಮ್ರಾಜ್ಯದಲ್ಲೆಲ್ಲ ಹಬ್ಬಿತು, ಅಲ್ಲದೆ ಪ್ರತಿಗಾಮಿ ಪಕ್ಷಗಳು ಪ್ರಗತಿಯನ್ನು ಹಿಂಡುತ್ತಿದ್ದ ಪ್ರಪಂಚದ ಕೆಲವೆಡೆ ಅಲ್ಲದೆ ಇತರ ದೇಶಗಳಲ್ಲೆಲ್ಲಾ ಈ ಸಂಸ್ಥೆಯು ಸ್ಥಾಪನೆಯಾಗಿ ಅದರ ಧ್ಯೇಯವನ್ನು ಸಾಧಿಸುತ್ತಲಿದೆ. ಕಾಲಕ್ರಮೇಣವಾಗಿ ಅವಳು ಆ ಸಂಸ್ಥೆಯಲ್ಲಿ

ಮೂವತ್ತಮೂರನೇ ಸ್ಥಾನಕ್ಕೆ ವಿಧಿಪೂರ್ವಕವಾಗಿ ಆರಿಸಲ್ಪಟ್ಟಳಲ್ಲದೆ ಅನಂತರ ಅದರ ಅಧ್ಯಕ್ಷ ಕಾರ್ಯಕಾರೀ ಮಂಡಳಿಯ ಹಿರಿಯ ಉಪಾಧ್ಯಕ್ಷೆಯಾಗಿಯೂ ನೇಮಿತಳಾದಳು. ಅವಳ ಮಗಳು, ಶ್ರೀಮತಿ ಮೇಬಲ್ ಬೀಸೆಂಟ್ ಸ್ಕಾಟ್ ಇವಳೂ ಆ ಸಂಸ್ಥೆಯ ಗಣ್ಯ ಸಕ್ರಿಯ ಸದಸ್ಯೆಯಾಗಿ ದುಡಿಯುತ್ತಾ ಇದ್ದು ಇತ್ತೀಚೆಗೆ ಅದಕ್ಕೆ ಅವಳು ರಾಜೀನಾಮೆಯನ್ನಿತ್ತಳು.

ಮೂರನೆಯದಾಗಿ, ಮತ್ತು ಆನಿಯು ತತ್ವಜ್ಞಾನ ವಿಚಾರ ಸಂಘ (Theosophical Society) ಇದರ ಅಧ್ಯಕ್ಷೆಯಾಗಿರುವ ಮಹಿಳೆ ಅವಳ ಹೃದಯಾಂತರಾಳದಲ್ಲಿ ನೆಲೆಸಿದ್ದ ಈ ಭರತ ಖಂಡದ ಉದ್ಧಾರದ ಬಗ್ಗೆ ಕೈಗೊಂಡ ಕಾರ್ಯಭಾರದಲ್ಲಿ ಬಹು ಮುಖ್ಯವಾದುದು ಥಟ್ಟನೆ ಅವಳ ದೃಷ್ಟಿಯನ್ನು ಆಕರ್ಷಿಸಿದ ಈ ದೇಶದ ಹೆಂಗಸರ ಪರಿಸ್ಥಿತಿಯನ್ನು ಕುರಿತೇ ಆಗಿದೆ. ಭಾರತೀಯ ಸ್ತ್ರೀಯರು ಈ ದೇಶದ ಜನಜೀವನದಲ್ಲಿ ಅತ್ಯವಶ್ಯರಾಗಿರುವರೆಂದೂ ಹೇಳುತ್ತಾ, ಪ್ರಾರಂಭದಿಂದಲೇ ಅವಳು ಮಹಿಳೆಯರ ಸ್ಥಾನವೆಂತೆಂದು ಪ್ರತಿಪಾದಿಸತೊಡಗಿದಳು. ಪ್ರಾಚೀನ ಭಾರತದಲ್ಲಿ ಹೆಂಗಸರು ಜನಜೀವನದ ಎಲ್ಲಾ ಶಾಖೆಗಳಲ್ಲೂ ಪ್ರಬಲ ಪಾತ್ರವನ್ನು ವಹಿಸಿದ್ದರೆಂಬುದನ್ನು ತನ್ನ ಭಾಷಣಗಳಲ್ಲಿ ಸ್ಪಷ್ಟಪಡಿಸಿದಳು, ಪ್ರಾಚೀನ ಶಾಸ್ತ್ರ ಮತ್ತು ಸಾಹಿತ್ಯದಲ್ಲಿ ಮಹಿಳೆಯರಿಗೆ ಕುಟುಂಬದಲ್ಲಿ ಮಾತ್ರವಲ್ಲ, ರಾಜ್ಯದಲ್ಲಿ ಸಹ ಪವಿತ್ರ ಸ್ಥಾನವು ಕೊಡಲ್ಪಟ್ಟಿತ್ತೆಂಬುದನ್ನು ವಿವರಿಸಿದಳು.

ಕ್ರಿ.ಶ. 19ನೇ ಶತಮಾನದ ಮೊದಲಾರ್ಧದಲ್ಲಿ ಪ್ರಸಿದ್ಧ ಸಮಾಜ ಸುಧಾರಕ ರಾಮಮೋಹನ ರಾಯರು ಭಾರತೀಯ ಸ್ತ್ರೀಯರ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಕುರಿತು ಬಹು ಶ್ರದ್ಧೆಯಿಂದ ಹೋರಾಡಿದರು. * ಪಂಡಿತ ವಿದ್ಯಾಸಾಗರರು ವಿಧವೆಯರ ಪುನರ್ವಿವಾಹ ಕಾನೂನನ್ನು 1860 ರಲ್ಲಿ ಜಾರಿಗೆ ತರುವುದಕ್ಕೆ ಜವಾಬ್ದಾರನಾಗಿದ್ದನು, ಕೇಶಬ್ ಚಂದ್ರಸೇನ ಮೊದಲಾದವರು ಭಾರತೀಯ ಮಹಿಳೆಯರು ಜೀವನದಲ್ಲಿ ಅನುಭವಿಸಿದ ಸ್ಥಾನಮಾನಗಳನ್ನು ಮರಳಿ ಪಡೆಯುವಂತೆ ತುಂಬಾ ಶ್ರಮಿಸಿದರು; ಮತ್ತು ಬ್ರಹ್ಮವಿದ್ಯಾ ಸಂಸ್ಥೆಯ ಸ್ಥಾಪಕ-ಅಧ್ಯಕ್ಷ ಕರ್ನಲ್ ಆಲ್ಕಾಟ್ ಇವರು ಭಾರತೀಯ ಸ್ತ್ರೀಯರ ರಾಷ್ಟ್ರೀಯ ಸಂಘವೊಂದನ್ನು ಸ್ಥಾಪಿಸುವ ಸಾಧ್ಯತೆಯನ್ನು ಕುರಿತು ಚರ್ಚಿಸಲು 1891 ರಲ್ಲಿ ಬೃಹತ್ಸಭೆಯನ್ನು ಕರೆದರು!

---

* ರಾಮಮೋಹನರಾಯ ಮತ್ತು ಅವನನಂತರದ ಭಾರತೀಯ ಸಮಾಜ ಸುಧಾರಕರೆಲ್ಲರೂ ಆಗ ಈ ದೇಶದಲ್ಲಿದ್ದ ಪಾಶ್ಚಾತ್ಯ ಮೇಧಾವಿಗಳೂ ಕ್ರೈಸ್ತ ವಿದ್ಯಾತಜ್ಞರೂ ಅಂದಿನ ಆಂಗ್ಲ ಸರಕಾರವನ್ನು ಒಪ್ಪಿಸಿ ಹಲವು ಅನಾಗರಿಕ ಪದ್ಧತಿಗಳನ್ನೆಲ್ಲ ಕಾನೂನುಬದ್ಧವಾಗಿ ಕಿತ್ತೊಗೆದರೆಂದು ಈ ಲೇಖಕನ "ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ" ಗ್ರಂಥದಲ್ಲಿ ಹೇಳಲಾಗಿದೆ!

"ಆಧ್ಯಾತ್ಮಿಕ ಜೀವನದಲ್ಲಿ ಪ್ರಾಚೀನ ತತ್ವಗಳು" ಎಂಬುದಾಗಿ ಕ್ರಿ.ಶ. 1900ರಲ್ಲಿ ಆನಿ ಬೆಸೆಂಟ್ ಇವರು ಬನಾರಸ್‌ನಲ್ಲಿ ಕೊಟ್ಟ ಭಾಷಣಮಾಲಿಕೆಯಲ್ಲಿ ಹಿಂದಿನ ವಿಷಯವು "ಸ್ತ್ರೀತ್ವ" ಎಂಬುದಾಗಿತ್ತು. ಇದರಲ್ಲಿ ಭಾರತೀಯ ಸ್ತ್ರೀಯರು ಸಮಾಜದಲ್ಲಿ ಮತ್ತು ರಾಷ್ಟ್ರೀಯ ಜೀವನದಲ್ಲಿ ತಕ್ಕ ಸ್ಥಾನವನ್ನು ಪಡೆಯದೆ ಹಿಂದೂಸ್ಥಾನವು ನಿಜವಾಗಿ ಸ್ವತಂತ್ರವಾಗಲಾರದು, ಎಂಬುದನ್ನು ಖಚಿತ ಸಮರ್ಥಿಸಿದಳು. ಇದಕ್ಕೆ ಆಧಾರವಾಗಿ ಅವಳು ಆರ್ಯನ ಜನಾಂಗದ ಸಮಾಜ ಶಾಸ್ತ್ರಜ್ಞನಾದ ಮನುವಿನ ಪ್ರಸಿದ್ಧ ಹೇಳಿಕೆಯಾದ "ಹೆಂಗಸರು ಎಲ್ಲಿ ಗೌರವಿಸಲ್ಪಡುವರೋ ಅಲ್ಲಿ ದೇವತೆಗಳು ಸಂತೋಷಗೊಳ್ಳುವರು; ಹೆಂಗಸರು ಎಲ್ಲಿ ಗೌರವಿಸಲ್ಪಡುವದಿಲ್ಲವೋ ಅಲ್ಲಿ ಕೈಗೊಂಡ ವಿಧಿ ನಿಯಮಗಳೆಲ್ಲ ವ್ಯರ್ಥ" ಎಂಬುದನ್ನು ಉದಾಹರಿಸಿದಳು.

ಹಿಂದೂಸ್ಥಾನದ ಸ್ವಾತಂತ್ರ್ಯಕ್ಕೆ ಪ್ರಚೋದಕವಾಗುವ ಜನಜಾಗೃತಿಯು ಭಾರತೀಯ ಸ್ತ್ರೀಯರ ಹೃದಯದ್ವಾರದಲ್ಲಿದೆಯೆಂಬುದನ್ನು ಆನಿಯು ಮನಗಂಡರು. ಇದಕ್ಕಾಗಿ ದುಡಿಯಲು ತೊಡಗಿದರು. ಅವಳ ಜೀವನದಲ್ಲಿ ಹಿಂದಿನ ವಿಶೇಷ ಘಟ್ಟವಾಗಿದೆ. ಈ ವಿಷಯದಲ್ಲಿ ಅವಳು ಬರೇ 27 ವರ್ಷದವಳಾಗಿದ್ದಾಗಲೇ ಸಮಾಜದ ಕಲ್ಯಾಣವು ಸ್ತ್ರೀಯರ ಏಳಿಗೆಯಲ್ಲಿದೆಯೆಂಬುದನ್ನು ಬಗೆದಿದ್ದು 1874ರಲ್ಲಿ ಲಂಡನ್ನಿನಲ್ಲಿ 'ರಾಜನೀತಿಯಲ್ಲಿ ಸ್ತ್ರೀಯರ ಸ್ಥಾನ' ಎಂಬುದರ ವಿಷಯವಾಗಿ ಭಾಷಣವನ್ನಿತ್ತಳು.

ಆನಿಯು ಚಟುವಟಿಕೆಗಳನ್ನು ಕ್ರಮವಾಗಿ ಧರ್ಮ, ವಿದ್ಯೆ, ಸಮಾಜ ಮತ್ತು ರಾಜಕೀಯ ಎಂಬುದಾಗಿ ವಿಭಾಗಿಸಬಹುದಾದರೂ ಈ ಪ್ರತಿಯೊಂದರಲ್ಲೂ ಭಾರತೀಯ ಸ್ತ್ರೀಯರ ಪಾತ್ರವೆಂಬುದರ ಬಗ್ಗೆ ಅವಳು ಈ ದೇಶಕ್ಕೆ ಕಾಲಿಟ್ಟಾಗಿನಿಂದಲೇ ಅರಿತಿದ್ದಳು. ಬನಾರಸ್‌ನಲ್ಲಿ ಕುಮಾರಿ ಫ್ರಾನ್ಸಿಸ್ಕಾ ಅರುಂಡೇಲ್ ಇವಳ ಉತ್ಸಾಹಪೂರ್ಣವಾದ ಮೇಲ್ವಿಚಾರಣೆಯಲ್ಲಿ ಅಭಿವೃದ್ಧಿಗೊಂಡ ಭಾರತೀಯ ಹುಡುಗಿಯರ ಶಾಲೆಯನ್ನು ಆನಿಯು 1904ರಲ್ಲಿ ಸ್ಥಾಪಿಸಿದಳು. ಈ ರೀತಿ ಸ್ತ್ರೀಯರ ಅಭಿವೃದ್ಧಿಗಾಗಿ ಕೈಗೊಂಡ ಅವಳ ಶ್ರಮವು ಅವಳು 1917ರಲ್ಲಿ ಕಲ್ಕತ್ತಾದಲ್ಲಿ ಸೇರಿದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷೆಯಾಗಿ ಆನಂತರ ಸ್ತ್ರೀಯರಿಗೆ ಮತಾಧಿಕಾರವನ್ನು ಕೊಡಬೇಕೆಂಬ ಠರಾವನ್ನು ಆ ಅಧಿವೇಶನದಲ್ಲಿ ಮೊದಲ ಬಾರಿಗೆ ತರುವವರೆಗೂ ಮುಂದುವರಿಯಿತು. ಅದೇ ವರ್ಷ ಅವಳ ಮುಂದಾಳುತನದಲ್ಲಿ ರಾಷ್ಟ್ರೀಯ ವಿಚಾರದಲ್ಲಿ ಮಹಿಳೆಯರಿಗೆ ತಕ್ಕ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಕೋರುವ ನಿಯೋಗವೊಂದು ಅಂದಿನ ಬ್ರಿಟಿಷ್ ಸರಕಾರದಲ್ಲಿ ಹಿಂದೂಸ್ಥಾನವನ್ನು

ಹಾಗಾಗಿ ರಾಜ್ಯಾಧಿಕಾರವನ್ನು ನಿರ್ವಹಿಸುತ್ತಿದ್ದ Secretary of State for India ಎಡ್ವಿನ್ ಎಸ್. ಮೊಂಟೇಗ್ ಇವನ ಸಮಕ್ಷಮಕ್ಕೆ ಹೋಯಿತು!

ಮದ್ರಾಸು ಸರಕಾರವು 1917ರಲ್ಲಿ ಆನಿ ಬೆಸೆಂಟ್ ಇವರನ್ನು ಸೆರೆಮನೆಯಲ್ಲಿಟ್ಟದ್ದಾಗ ಅದನ್ನು ಪ್ರತಿಭಟಿಸಿ ಭಾರತೀಯ ಸ್ತ್ರೀಯರು ದೇಶದ ಎಲ್ಲಾ ನಗರಗಳಲ್ಲಿ ಸಂಘಟನೆಗೊಂಡು ಬೀದಿಗಳಲ್ಲಿ ಮೆರವಣಿಗೆ ಹೋದುದು ಈ ದೇಶದ ಚರಿತ್ರೆಯಲ್ಲಿಯೇ ಮೊದಲ ಬಾರಿಗೆ ಸಂಭವಿಸಿದ ಘಟನೆಯಾಗಿದೆ. ಅವರು ತಮ್ಮ ಗಂಡಂದಿರೊಡಗೂಡಿ 'ದೇವಸ್ಥಾನಗಳಲ್ಲಿ, ಮಸೀದಿಗಳಲ್ಲಿ ಸರಕಾರವು ಆನಿ ಬೆಸೆಂಟ್‌ಗೆ ಶೀಘ್ರ ನ್ಯಾಯವನ್ನು ಸಲ್ಲಿಸುವಂತಾಗಲಿ' ಎಂದು ಪ್ರಾರ್ಥನೆಯನ್ನು ಸಲ್ಲಿಸಿದರು, ಅಲ್ಲಿಂದ ಮೊದಲ್ಗೊಂಡು ಭಾರತೀಯ ಹೆಂಗಸರು ರಾಷ್ಟ್ರೀಯ ಜೀವನದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸುವಂತಾದರು; ಮತಾಧಿಕಾರವನ್ನು ಕೇಳಿದರು; ಅವರಲ್ಲಿ ಕೆಲವರು ದೊಡ್ಡ ಸ್ಥಾನಮಾನಗಳನ್ನು ಅಲ್ಲಿಂದ ಮೊದಲ್ಗೊಂಡು ಏರುವಂತಾದರು.

ಭಾರತೀಯ ಸ್ತ್ರೀಯರ ಮಟ್ಟಿಗೆ ಜ್ಯೋತಿಷ್ಯ ಶಾಸ್ತ್ರಜ್ಞನಾಗಿ 1917ನೇ ವರ್ಷವು ಅದೇನೋ ಒಂದು ಸಂಬಂಧವನ್ನು ಕಲ್ಪಿಸಿದ್ದಿರಬಹುದು. ಏಕೆಂದರೆ ಅದೇ ವರ್ಷ ಮೇ ತಿಂಗಳ 8ನೇ ದಿನದಲ್ಲಿ "ಸ್ತ್ರೀಯರ ಭಾರತೀಯ ಸಂಸ್ಥೆ" ಇದು ಮದ್ರಾಸಿನಲ್ಲಿ ಕೆಳಗೆ ಕಾಣಿಸಿದ ಧ್ಯೇಯಗಳೊಡಗೂಡಿ ಸ್ಥಾಪಿತವಾಯಿತು!—

1) ಭಾರತಮಾತೆಯ ಪುತ್ರಿಯರಿಗೆ ಅವರ ಜವಾಬ್ದಾರಿಗಳೇನೇನು ಎಂಬುದನ್ನು ಸ್ಪಷ್ಟಪಡಿಸುವುದು,

2) ಪ್ರತಿಯೊಬ್ಬ ಹುಡುಗಿ ಮತ್ತು ಹುಡುಗನಿಗೆ ಧರ್ಮಬೋಧೆ ಸಮೇತವಾದ ಕಡ್ಡಾಯ ಶಿಕ್ಷಣಕ್ಕೆ ಅವಕಾಶ ಕಲ್ಪಿಸುವುದು,

3) ಬಾಲ್ಯ ವಿವಾಹ ಮತ್ತು ಇತರ ಸಾಮಾಜಿಕ ದುಷ್ಪದ್ಧತಿಗಳ ನಿರ್ಮೂಲನಕ್ಕೆ ಪ್ರಯತ್ನಿಸುವುದು,

4) ಪುರಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಈಗ ಇರುವಂತೆ ಮತ್ತು ಪುರುಷರಿಗೆ ವಿಧಿಸಬಹುದಾದ ರೀತಿಯಲ್ಲಿ ಮತಾಧಿಕಾರವು ಹೆಂಗಸರಿಗೂ ದೊರಕಿಸುವುದು,

5) ಪುರಸಭೆ, ತಾಲೂಕು ಮತ್ತು ಜಿಲ್ಲಾ ಬೋರ್ಡ್ ಮತ್ತು ನ್ಯಾಯ ವಿಧಾಯಕ ಸಭೆಗಳಲ್ಲಿ ಹೆಂಗಸರಿಗೂ ತಕ್ಕಷ್ಟು ಪ್ರಾತಿನಿಧ್ಯವು ದೊರೆಯುವಂತೆ ಪ್ರಯತ್ನಿಸುವುದು

6) ಮತಾಧಿಕಾರದ ಹಕ್ಕು ಅಲ್ಲದೆ ಹೆಂಗಸರಿಗೆ ರಾಜ್ಯ ಸಭೆಗಳಿಗೂ ಆರಿಸಲ್ಪಡುವ ಅವಕಾಶ ಕಲ್ಪಿಸುವುದು,

7) ಪುರುಷ ಮತ್ತು ಸ್ತ್ರೀಯರಿಗೆ ಸಮಾನ ಹಕ್ಕು

ಮತ್ತು ಶಿಲ್ಪಗಳು ಬೆಳೆಯುವಂತೆ ಯತ್ನಿಸುವುದು,

8) ಶಿಕ್ಷಕರಾಗಿ ಮತ್ತು ಮಾತೆಯರಾಗಿ ಹೆಂಗಸರು ದೇಶದ ಮುಂದಿನ ಜನಾಂಗದ ಆಳರಸರನ್ನು ಪೋಷಿಸುವ, ತರಬೇತುಗೊಳಿಸುವ ಮತ್ತು ಅವರ ಚಿಂತನವನ್ನು ಮೇಲ್ಮಟ್ಟಕ್ಕೇರಿಸುವ ಸಾಹಸವುಳ್ಳ ಅಧಿಕಾರದ್ದಾಗಿರುವುದರಿಂದ ಭಾರತದ ಭವಿಷ್ಯವು ಹೆಚ್ಚಾಗಿ ತಮ್ಮ ಕೈಯಲ್ಲಿದೆಯೆಂಬುದನ್ನು ಅವರಿಗೆ ತಿಳಿಸುವುದು,

9) ತಮ್ಮ ಅಭಿವೃದ್ಧಿ ಮತ್ತು ಸಮಾಜ ಸೇವಾ ನಿಮಿತ್ತ ಹೆಂಗಸರನ್ನು ತಂಡತಂಡವಾಗಿ ವಿಭಾಗಿಸುವುದಲ್ಲದೆ ಈ ಸಂಸ್ಥೆಯ ಉದ್ದೇಶಗಳನ್ನು ಮನ್ನಿಸಿ ಸಹಕರಿಸಲು ಒಪ್ಪುವವರನ್ನು ಸದಸ್ಯರಾಗುವಂತೆಯೂ ಕೇಳಿಕೊಳ್ಳುವುದು; ಈ ನಿಯಮಗಳನ್ನು ಪಾಲಿಸುವಂತವರು ಈ ಸಂಸ್ಥೆಯ ಇತರ ಶಾಖೆಗಳಲ್ಲಿ ಸದಸ್ಯತ್ವವನ್ನು ಪಡೆಯುವುದು!

"ಭಾರತೀಯ ಸ್ತ್ರೀಯರ ಸಂಸ್ಥೆ" ಎಂಬುದಾಗಿ ಕರೆಯಲು ನಾನು ಹಲವು ಬಾರಿ ಇಚ್ಛಿಸಿದ್ದ ಈ "ಸ್ತ್ರೀಯರ ಭಾರತೀಯ ಸಂಸ್ಥೆ"ಯು 1924ರ ಕಾಲಕ್ಕೆ 2700 ಸದಸ್ಯತ್ವವನ್ನು ಪಡೆದು 57 ಶಾಖೆಗಳೂ 18 ಕೇಂದ್ರಗಳಿಂದಲೂ ಕೂಡಿದ್ದಿತು. ಇದರ ಸದಸ್ಯರಲ್ಲಿ ಇರ್ವರು ಮೊದಲ ಬಾರಿಗೆ ಭಾರತೀಯ ಸ್ತ್ರೀ ವಕೀಲರಾದರು. ಹಲವರು ಸ್ಥಳೀಯ ನ್ಯಾಯವಿಧಾಯಕ ಸಭೆಗಳ ಸದಸ್ಯರಾಗಿಯೂ ಓರ್ವಳು ಗೌರವ ನ್ಯಾಯಾಧೀಶರಾಗಿಯೂ ನೇಮಿತರಾದರು. ಆನಿ ಬೆಸೆಂಟ್ ಇವರ ಶ್ರಮದ ಪರಿಣಾಮವಾಗಿ ಮತ್ತು ಭಾರತೀಯ ಹಾಗೂ ಪಾಶ್ಚಾತ್ಯ ಸಹೋದ್ಯೋಗಿಗಳಿಂದೊಡಗೂಡಿದ್ದ ಅವರ ಪ್ರಯತ್ನದ ಫಲವಾಗಿ ಇಂದು (1939ರಲ್ಲಿ) ಉತ್ತರ ಪ್ರದೇಶದಲ್ಲಿ ಓರ್ವ ಮಹಿಳಾ ಮಂತ್ರಿಯೂ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಓರ್ವ ಉಪಾಧ್ಯಕ್ಷಳೂ ದೇಶದ ಹಲವು ನ್ಯಾಯವಿಧಾಯಕ ಸಭೆಗಳಲ್ಲಿ ಮಹಿಳಾ ಸದಸ್ಯರೂ ಎಂದು ಮೊದಲಾಗಿ ಇರುವರು.

1927ರಲ್ಲಿ ಅಖಿಲ ಭಾರತ ಸ್ತ್ರೀಯರ ಸಮ್ಮೇಳನವು ಬರೋಡಾದ ಮಹಾರಾಣಿಯ ಅಧ್ಯಕ್ಷತೆಯಲ್ಲಿ ಮೊದಲ ಬಾರಿಗೆ ಪೂನಾದಲ್ಲಿ ಸೇರಿ ಸ್ತ್ರೀಯರ ಏಳಿಗೆಯಲ್ಲಿ ಹೆಚ್ಚಿನ ಅಭಿರುಚಿಯನ್ನು ಹುಟ್ಟಿಸಲಾಯಿತು.

1928ರಲ್ಲಿ ಎರಡನೇ ಬಾರಿಗೆ ಅದೇ ಸಮ್ಮೇಳನವು ಡಿಲ್ಲಿಯಲ್ಲಿ ಸೇರಿದ್ದಾಗ ಆನಿ ಬೆಸೆಂಟ್ ಇವರು ಅದರಲ್ಲಿ ಭಾಗವಹಿಸಲು ಸಾಧ್ಯವಾಯಿತು. ಈ ಸಮ್ಮೇಳನಕ್ಕೆ ಮಹದೀಯ ಮಹಿಳೆ ಭೋಪಾಲದ ರಾಣಿ ಬೇಗಂ ಇವರು ಅಧ್ಯಕ್ಷೆಯಾಗಿದ್ದು ಸಭೆಯ ಕಳೆಯನ್ನು ಹೆಚ್ಚಿಸಿದರು.

ನಲ್ಲದೆ ನಾನು ಅವಳ ಪ್ರತಿಭೆ ಮತ್ತು ಧೈರ್ಯವನ್ನು ಕಂಡು ಮೆಚ್ಚಿದೆನು. ಅವಳು ಹಿಂದೊಂದು ಬಾರಿ ತನ್ನ ಅಭಿಪ್ರಾಯಗಳನ್ನು ಕಠಿಣ ರೀತಿಯಲ್ಲಿ ಹೇಳುತ್ತಿದ್ದಳಾದರೂ ಅವಳ ಪ್ರತಿಪಾದನೆಯು ಸರಿಯೆಂಬುದನ್ನು ನಾನು ಒಪ್ಪಬೇಕಾಯಿತು. ಅವಳ ಭಾಷಣಗಳನ್ನು ಕೇಳಲು ನಾನು ಹಲವು ಬಾರಿ ಹೋದೆನಾದರೂ ಅವಳ ನಿಕಟಪರಿಚಯವನ್ನು ಪಡೆಯುವ ಅವಕಾಶವನ್ನೇನೂ ತೆಗೆದುಕೊಳ್ಳಲಿಲ್ಲ. ಅವಳ ಹೇಳಿಕೆಯನ್ನನುಸರಿಸಿ ನಾನು ಕರ್ನಲ್ ಇಂಗರ್ಸಾಲ್ ಇವರ ಗ್ರಂಥಗಳನ್ನು ಪರೀಕ್ಷಿಸಲು ತೊಡಗಿದಾಗ ಪ್ರಾರಂಭಿಕವಾಗಿ ಬಂದಂತೆ ಪ್ರತಿಪಾದಿಸಲ್ಪಟ್ಟ ಪುರಾತನ ತತ್ವಾವಲಂಬನೆಯಲ್ಲಿರುವ ಅಸಾಧ್ಯತೆಯ ಅರಿವು ನನಗಾಯಿತು, ಎಲ್ಲ ಮತಗಳಲ್ಲಿರುವಂತೆ ಕ್ರೈಸ್ತ ಮತದಲ್ಲೂ ಇರುವ ಮಹಾ ಸತ್ಯಾಂಶಗಳ ಮಟ್ಟಿಗೆ ನಾನೂ ನಂಬಿಕೆಯನ್ನಿಟ್ಟಿದ್ದೆನು, ಆದರೆ ಆ ನಂಬಿಕೆಯು ಅದೇನೋ ಅಂತೆಯೇ ಉಳಿದುಬಂದಿತ್ತಲ್ಲದೆ ಆ ತತ್ವವನ್ನು ಓದಿ ಅರಗಿಸಿಕೊಂಡಿದ್ದೇನೂ ಇಲ್ಲ, ಅವಳ ಬೋಧನೆಯು ನನ್ನನ್ನು ತತ್ವಜ್ಞಾನದ ಕಡೆಗೆ ಸೆಳೆದೊಯ್ಯಲು ನಿಜಕ್ಕೂ ಸಹಾಯಕವಾಯಿತು. ಇದರಲ್ಲಿ ಅವಳಿಗಿಂತ ಮುಂದಾಗಿ ನಾನು ಹಾಯ್ದು ಕಾರಣದಿಂದ ನನ್ನ ಕರ್ಮಫಲವು ಉತ್ತಮವಾಗಿದ್ದಿರಬೇಕು. ನಾನು 1883 ರಲ್ಲಿ "ತತ್ವಜ್ಞಾನ ಸಂಸ್ಥೆಯ (Theosophical Society) ಸದಸ್ಯನಾಗಿ ಸೇರಿದೆನು, 1889 ರಲ್ಲಿ "ರಹಸ್ಯ ತತ್ವಗಳು"* (Secret doctrines) - ಈ ಗ್ರಂಥದ ವಿಮರ್ಶೆಯ ಮೂಲಕವಾಗಿ ಆನಿಗೆ ಶ್ರೀಮತಿ ಬ್ಲಾವಟ್‌ಸ್ಕಿಯು ಪರಿಚಯವಾಗುವ ಮೊದಲೇ ನಾನು ಈ ಸಂಸ್ಥೆಯ ಮೂಲಕವಾಗಿ ಇಂಡಿಯಾಕ್ಕೆ ಕಳುಹಿಸಲ್ಪಟ್ಟಿದ್ದೆನು. ಪೂರ್ವ ದೇಶಗಳಲ್ಲಿ ನಾನು ಕೆಲಕಾಲ ಇರಬೇಕಾಗಿದ್ದ ಕಾರಣದಿಂದ ನನಗೆ ಅವಳೊಡನೆ ನಿಕಟ ಸಂಪರ್ಕವಿರಿಸಲು ಅವಕಾಶವಾಗಲಿಲ್ಲ. ಹೀಗೂ 1890 ರಲ್ಲಿ J. ಸಿನ್ನೆಟ್ಟ್ ಇವರ ನಿವಾಸದಲ್ಲಿ ಅವಳನ್ನು ಕಂಡಾಗ ಅವಳೊಡನೆ ಮಾತ್ರ ಮೊದಲು ಮಾತಾಡುವ ಸಂತಸದ ಭಾಗ್ಯವು ಒದಗಿತು. ಅಂದಿನಿಂದಲೇ ನಮ್ಮ ಸಂಸ್ಥೆಯ ವಿಖ್ಯಾತ ಅಧ್ಯಕ್ಷೆಯಾದ ಆನಿ ಬೆಸೆಂಟ್ ಇವಳು ದಯಾಭಾವದಿಂದಲೇ ನನ್ನನ್ನು ಕಂಡಿದ್ದಳು; ಅಲ್ಲದೆ ಅವಳ ಅಭಿಪ್ರಾಯದಂತೆ ನಾನು 1895 ರಲ್ಲಿ ನಮ್ಮ ಅವಿನ್ಯೂ ರಸ್ತೆ ವಸತಿಯ ನಿವಾಸಿಗಳಲ್ಲಿ ಒಬ್ಬನಾಗಿ ಸೇರಿದೆನು, ಹೀಗಾಗಿ ಅವಳೊಡನೆ ನಾನು ಬಹುಕಾಲ ವಾಸಿಸಿ

---

* ಸುಮಾರು 1886 ರನಂತರ ಆನಿ ಬೆಸೆಂಟ್ ಇವಳು ಶ್ರೀ ಸಿನ್ನೆಟ್ಟ್ ಇವರ ಗ್ರಂಥಗಳನ್ನು ಓದಿದ್ದಳಂತೆ. "ರಹಸ್ಯ ತತ್ವಗಳು" ಇದರ ಮೂಲಕ ಗೂಢವಿಚಾರಗಳನ್ನು ಪ್ರತಿಪಾದಿಸುವ ಮುಂಚೆಯೇ ಆನಿಯು ಸಿನ್ನೆಟ್ಟನ ಬರಹಗಳಿಂದ ಸ್ಫೂರ್ತಿಯನ್ನು ಹೊಂದಿದ್ದಳು.

ದ್ದೇನೆ, ಅಷ್ಟೇ ತಾತ್ವಿಕ ವಿಚಾರ ಅನ್ವೇಷಣೆಯಲ್ಲಿ ಇಂಗ್ಲೆಂಡಿನಲ್ಲೂ
ಅನಂತರ ಭಾರತದಲ್ಲೂ ಅವರೊಡನೆ ನೇರ ವಿಚಾರ ವಿನಿಮಯ
ನಡೆಸಿದ್ದೇನೆ. ಅಷ್ಟು ಪ್ರಸಿದ್ಧರಾದ ಹಿರಿಯ ವ್ಯಕ್ತಿಯ ಸೌಜನ್ಯ
ಭಾವವನ್ನು ಕುರಿತಾಗಿ ಈ ರೀತಿ ಪ್ರಶಂಸೆಯನ್ನೀಯುವುದು ನನ್ನ
ಉದ್ಧಟತನವಾದೀತು. ಆದರೂ ಅವರ ಪಾದಕ್ಕೆ ಧನ್ಯತೆಯಿಂದ
ನನ್ನ ಶ್ರದ್ಧಾಂಜಲಿಯನ್ನರ್ಪಿಸುವುದಕ್ಕೆ ಅನುಮತಿಯನ್ನು ಬೇ
ಡುತ್ತಿದ್ದೇನೆ. ಅವರಷ್ಟು ನಿಚ್ಚಳ, ಪರಹಿತಕಾರಿಯಾದ ಮತ್ತು
ದಯಾಭಾವದ ಸಹೋದ್ಯೋಗಿಯು ಯಾರಿಗೂ ದೊರಕಲಾರದು
ಎಂದಷ್ಟೇ ಹೇಳುತ್ತೇನೆ. ಅವರು ನಿತ್ಯವೂ ಗಂಭೀರರೂ ಸ
ಭ್ಯರೂ ಆಗಿದ್ದರಲ್ಲದೆ ಧೈರ್ಯಶಾಲಿಯೂ ಕರ್ತವ್ಯತತ್ಪರರೂ
ಆಗಿದ್ದರು. ಅವರು ಅದೆಷ್ಟು ಉತ್ತಮರೂ ಗುಣಗ್ರಾಹಿಯೂ
ಸತ್ಯವಾದಿಯೂ ವಿಷಯಗಳನ್ನೊಂದನ್ನೊಂದು ಕೂಡಲೇ ವಿಶ್ಲೇ
ಷಿಸಿ ತಿಳಿಯುವಂಥವರೂ ಅಲ್ಪ ವಿಷಯವನ್ನು ಸಹ ಗಮನ
ವಿಟ್ಟು ಸಾಧಿಸತಕ್ಕವರೂ, ಅಪಾರ ಕಾರ್ಯನಿರತರೂ ಶ್ರಮದಾ
ಯಕವಾದ ಕೆಲಸಗಳನ್ನು ಜಯಪ್ರದವಾಗಿ ಸಾಧಿಸಲು ಸಮ
ರ್ಥರೂ ಆಗಿದ್ದರೆಂಬುದು ಅವರನ್ನು ಚೆನ್ನಾಗಿ ತಿಳಿದಿದ್ದವರಿಗೆ
ಮಾತ್ರ ಗೊತ್ತಿದ್ದಿತು. ಈ ಎಲ್ಲಾ ಗುಣಗಳಲ್ಲಿ ಅವರಿಗೆ ಸಮಾನರಾದ
ವರು ಬಹುಶಃ ಶ್ರೀಮತಿ ಬ್ಲಾವಟ್ಸ್ಕಿಯನ್ನುಳಿದು ಯಾರನ್ನೂ ಈ
ವರೆಗೆ ನಾನು ಕಂಡಿದ್ದಿಲ್ಲ.

ಈ ತತ್ವಜ್ಞಾನ ಸಂಸ್ಥೆಗೆ ಅವರು ಅದೆಷ್ಟು ಸೇವೆ ಸಲ್ಲಿಸಿದ
ರೆಂಬುದು ನಾನು ಹೆಚ್ಚೇನೂ ಹೇಳಬೇಕಾಗಿಲ್ಲ. ಅವರ ಗ್ರಂಥಗಳು,
ಕಿರುಹೊತ್ತಗೆಗಳು ಮತ್ತು ಲೇಖನಗಳು ಸವಿಸ್ತಾರ ವ್ಯಾಪ್ತಿಯು
ಅವರು ತತ್ವಜ್ಞಾನ ಸಂಸ್ಥೆಗೆ ಸಲ್ಲಿಸಿದ ಸೇವೆಯ ಪ್ರಮಾಣವನ್ನು
ಸೂಚಿಸುತ್ತದೆ. ಅವರು ತಮ್ಮ ತನು ಮನವನ್ನು ಸಮಗ್ರವಾಗಿ ಎ
ಷ್ಟು ಸಮರ್ಪಿಸಿದ್ದರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಹಲವು
ವರ್ಷಗಳ ವರೆಗೂ ನಮ್ಮ ಅಂತರ್ಜೀವನದಲ್ಲಿ ಮಾರ್ಗದರ್ಶಕರೂ
ಸಹಾಯಕರೂ ಆಗಿದ್ದರು. ಈಚೆಗೆ ಕೆಲವು ವರ್ಷಗಳಿಂದ ತ
ನ್ನ ಗುರುವಿನ ಮಾತೃಭೂಮಿಯಾದ ಮತ್ತು ತಾನು ಪ್ರೀತಿಸಿದ ಹಿಂದೂ
ಸ್ಥಾನದ ಸೇವೆಗೆ ಯಾರೂ ಪ್ರಶಂಸಿಸದಂತಿದ್ದ ತನ್ನ ಅಮೂಲ್ಯ ವೇ
ಳೆಯ ಬಹುಭಾಗವನ್ನು ಅಂತೆಯೇ ಕಳೆದರು. ಭಾರತ ಸರಕಾರವು
ಬಹುಕಾಲ ಅವರನ್ನು ಸಂದೇಹ ದೃಷ್ಟಿಯಿಂದ ಅವರನ್ನೊಬ್ಬ ಚಳ
ವಳಿಗಾರ್ತಿ ಪ್ರತಿಗಾಮಿ ಎಂಬುದಾಗಿ ಭಾವಿಸಿದ್ದಿತು. ಕಡೆಗಾದರೂ
ಈಗ ಭಾರತದ ವೈಸ್ರಾಯ್ ಮತ್ತು ಪ್ರಾಂತಗಳ ಗವರ್ನರರೂ ಅ
ವರ ಜ್ಞಾನ ಮತ್ತು ದೂರದರ್ಶಿತ್ವವನ್ನು ಕಂಡುದರಿಂದ ಅವರು

ಈ ದೇಶದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದಿರುವಳು. ಅಲ್ಲದೆ ಭಾರತೀಯರ ಜೀವನ ಮತ್ತು ಸಂಸ್ಕೃತಿಯನ್ನು ಸಾಮೂಲಾಗ್ರವಾಗಿ ತಿಳಿದ ಅವಳೊಡನೆ ಆ ವಿಚಾರವಾಗಿ ಮಾತುಕತೆಯನ್ನು ಸಂತೋಷದಿಂದ ನಡೆಸುತ್ತಿದ್ದರು. ಇತ್ತೀಚೆಗೆ ಅವಳು ಇಂಗ್ಲೆಂಡಿಗೆ ಹೋಗಿದ್ದಾಗ ಬ್ರಿಟಿಷ್ ಸರಕಾರದ ಭಾರತ ಮಂತ್ರಿಯು ತನ್ನ ಸರಕಾರದ ಪರವಾಗಿ ಅವಳು ಹಿಂದೂಸ್ಥಾನಕ್ಕೆ ಸಲ್ಲಿಸಿದ ಸೇವೆಗಾಗಿ ವಂದನೆಯನ್ನರ್ಪಿಸಿದನು.

'ಆನಿ ಬೆಸೆಂಟಳ ವಿದ್ವತ್ತನ್ನ, ಬುದ್ಧಿವಂತಿಕೆ ಮತ್ತು ಭಾರತದ ಪರವಾಗಿ ಸರಕಾರವನ್ನು ಪ್ರತಿಭಟಿಸಿದ ಅವಳ ಧೈರ್ಯ, ನಿಸ್ವಾರ್ಥಗಳು ದೇಶಕ್ಕೆ ದೊರಕಿದನಂತರ 'ಬ್ರಿಟಿಷ್ ಸರಕಾರಕ್ಕೆ ಅವಳಿತ್ತ ಸಹಕಾರ ಮತ್ತು ಕಾರ್ಯಕ್ರಮಗಳನ್ನು ಕಾಯುತ್ತ: ಜೊತೆಗೆ ತರುಣ ಅವಳು ತೋರಿದ ದಾಕ್ಷಿಣ್ಯಕ್ಕೆ ಮತ್ತೊಬ್ಬ ಪ್ರಸಿದ್ಧ ಆಂಗ್ಲ ಅಧಿಕಾರಿಯು ತನ್ನ ಸರಕಾರದ ಪರವಾಗಿ ಮತ್ತು ತನ್ನ ಪರವಾಗಿ ಅವಳನ್ನು ವಂದಿಸಿದನು, ಅಷ್ಟೇ ಅಲ್ಲ, ಅವಳು ಹಿಂದೂಸ್ಥಾನಕ್ಕೆ ಹಿಂದಿರುಗಿದನಂತರ ಅವಳ ಸಲಹೆ ಸಹಕಾರಗಳು ಬ್ರಿಟಿಷ್ ಸರಕಾರಕ್ಕೆ ಮುಂದಕ್ಕೂ ದೊರಕುವುದೆಂದು ಆವನು ನಂಬಿದ್ದನು. ಅವಳು ಸಲ್ಲಿಸಿದ ಮಹತ್ತ್ವದ ಸೇವೆಯನ್ನು ನೀವೆಲ್ಲರೂ ಸಂತೋಷದಿಂದ ಮತ್ತು ಮನಃಪೂರ್ವಕವಾಗಿ ಪ್ರಶಂಸಿಸುವಿರೆಂದು ಭಾವಿಸುತ್ತೇನೆ, *

ಆನಿಯು ಮನಃಪೂರ್ವಕವಾಗಿ ಹಿಂಬಾಲಿಸಬಹುದಾದ ನೆಚ್ಚಿನ ಮುಂದಾಳೂ, ಬರಿ ಮಾತಿನಲ್ಲಿ ನಾವು ವರ್ಣಿಸಿ ಮುಗಿಸಲಾರದಷ್ಟು ಆದರಕ್ಕೆ ಪಾತ್ರಳಾದ ಗುರುವೂ ಮತ್ತು ಸಾಕಷ್ಟು ಕೃತಜ್ಞತೆಯನ್ನು ನಾವು ಎಂದೂ ತೋರಿಸಲಾಗದಷ್ಟು ತನ್ನ ಜೀವನ ಮತ್ತು ಸೇವೆಯ ಮೂಲಕ ಆದರ್ಶವನ್ನು ತೋರಿಸಿದವಳೂ ಆಗಿದ್ದಳು.

ಲೆಡ್‌ಬೀಟರನು ಮುಂದುವರಿಯುತ್ತಾ ಹೀಗೂ ಹೇಳಿದನು:—

---

* ಆನಿ ಬೆಸೆಂಟಳ "ಮಹತ್ತ್ವದ ಸೇವೆ"ಯನ್ನು ನಾವು ತಿಳಿದಂತೆ ಮನಃಪೂರ್ವಕವಾಗಿ ಪ್ರಶಂಸಿಸಿರುವರೋ ಎಂಬುದು ಸಂದೇಹಾಸ್ಪದವಾಗಿದೆ. ದೇಶದಲ್ಲಿ ಹಿಂಸಾಕೃತ್ಯಗಳಾಗದಂತೆ ನೋಡಿಕೊಳ್ಳುವುದರಲ್ಲಿ ಅವಳು ಸರಕಾರಕ್ಕೆ ನಿರಂತರವೂ ಸಹಾಯಕಳಾಗಿದ್ದಳು. ಆದ್ದರಿಂದ ಅವಳು ಭಾರತದಲ್ಲಿದ್ದಾಗ ಅವಳಿಂದ ಸರಕಾರಕ್ಕೆ ಹಿತವಾಗಿತ್ತೆಂದು ಅವರು ತಿಳಿದಿದ್ದರು. ಆದರೂ ಅವಳ ಸಲಹೆಗಳನ್ನು ಒಪ್ಪುವುದಕ್ಕಿಂತ ಒಪ್ಪದೇ ಇದ್ದ ಸಂದರ್ಭಗಳೇ ಹೆಚ್ಚಾಗಿದ್ದುವು; ಅಲ್ಲದೆ ಬ್ರಿಟಿಷ್ ಸರಕಾರಕ್ಕೂ ಅವಳಿಗೂ ತೀವ್ರ ಭಿನ್ನಾಭಿಪ್ರಾಯವಿತ್ತು. ಭಾರತಕ್ಕೆ ಜನತಾ ಸರಕಾರ ಲಭ್ಯವಾಗುವ ಕಾಲವು ಬಂದಿದೆಯೆಂದು ಆನಿಯು ಪೂರ್ತಿ ನಂಬಿದ್ದಳು. ಆದರೆ ದೇಶವು ಈಗ ಮಾತ್ರವಲ್ಲ, ಬಹುಕಾಲದ ವರೆಗೂ ಸ್ವರಾಜ್ಯವನ್ನು ಪಡೆಯಲು ಅರ್ಹವಾಗದೆಂದು ಆಂಗ್ಲರು ಅನ್ನುತ್ತಿದ್ದರು. ಸ್ವರಾಜ್ಯವನ್ನು ಪಡೆಯಲು ಭಾರತವು ಮುಂದುವರಿದಿದೆಯಾದರೂ ಇಂದು (1939ರಲ್ಲಿ) ಸಹ ಆಂಗ್ಲ ಸರಕಾರ ಅದಕ್ಕೆ ಒಪ್ಪುವ ಸಂಭವವೇ ತೋರುವುದಿಲ್ಲ.

"ಫಲದಿಂದ ಅವುಗಳ ರಹಸ್ಯವನ್ನರಿಯಬಹುದು," ಎಂಬ ಹೇಳಿಕೆಯಂತೆ. ನಮ್ಮ ಅಧ್ಯಕ್ಷೆಯನ್ನು ನಾನು ಚೆನ್ನಾಗಿ ತಿಳಿದಿರುವೆನು, ಅವಳು ತನ್ನ ಜೀವನವನ್ನು ನಿಸ್ವಾರ್ಥ ಸೇವೆಗಾಗಿ ಸಲ್ಲಿಸಿದ ದಿನಗಳನ್ನು ಬಲ್ಲೆನು, ಅವಳು ಬರೆದ ನೂರಾರು ಗ್ರಂಥಗಳನ್ನು, ಲೇಖನಗಳನ್ನು ನೋಡಿರುವೆನು. ಅವಳು ಇಚ್ಛಿಸಿದ್ದರೆ ಮತ್ತು ಬೇರೆ ಹಾದಿಯನ್ನು ಹಿಡಿದಿದ್ದರೆ ಅವಳು ಬಂಡಾಂತರದ ಲೋಕದಲ್ಲಿ ಉತ್ಕೃಷ್ಟ ಸ್ಥಾನವನ್ನು ಧಾರಾಳವಾಗಿ ಅಧಿಕಾರ ಪ್ರತಿಷ್ಠೆಯನ್ನೂ ಪಡೆಯಬಹುದಾಗಿದ್ದ ಅವಳ ಅಸಮಾನ ಪ್ರತಿಭೆ ಮತ್ತು ಉಜ್ವಲ ಶಕ್ತಿಯನ್ನು ತಿಳಿದಿರುವೆನು, ಆದರೆ ಅವಳು ತನ್ನ ಜನಪ್ರಿಯವಲ್ಲದ ಸೇವೆಯನ್ನು ಜಗತ್ಕಲ್ಯಾಣಕ್ಕಾಗಿ ಮೀಸಲಿಟ್ಟಳು; ಹೇಗೆಂದರೆ ಅವಳು ಯಾವಾಗಲೂ ದಲಿತರ ಹಿತಕ್ಕಾಗಿಯೇ ಹೋರಾಡಿದಳು, ಜನತೆಯನ್ನು ಉನ್ನತ ಮಟ್ಟದ ಸೌಜನ್ಯತೆಯ ಹಾಗೂ ತಮ್ಮ ಆತ್ಮೋನ್ನತಿಯ ಸಾಧನೆಗೆ ಹುರಿದುಂಬಿಸಲು ಯತ್ನಿಸಿದಳು, ಯಾವಾಗಲೂ ಜನಜೀವನವನ್ನು ಸ್ವಾರ್ಥದಿಂದ ಮೇಲೆತ್ತಲು ಹೆಣಗಿದಳು, ಇದು ಜನಪ್ರಿಯವಾದ ಕೆಲಸವಲ್ಲ. ಜನರು ಕೆಳಬ ಜೀವನವನ್ನೇ ಸಾಗಿಸಲು ನಿತ್ಯವೂ ಇಚ್ಛಿಸುವರು. ಅದಕ್ಕೆ ಅಡ್ಡಿಯಾಗುವಂತ ನಿಸ್ವಾರ್ಥ ಜೀವನವನ್ನು ಇಚ್ಛಿಸಲಾರರು. ಹೀಗೂ ಆನಿಯು ಕಾರ್ಯಭಾರವು ಜನಕ್ಕೆ ರುಚಿಸದಂತದ್ದೇ ಆಗಿತ್ತು."

ಹೆಚ್. ಪಿ. ಬ್ಲಾವಟ್‌ಸ್ಕೀ ಮತ್ತು ಇತರರ ಜತೆಯಲ್ಲಿ ಜಗತ್ಕಲ್ಯಾಣಕ್ಕಾಗಿ ದುಡಿದ ಬಹು ಹಿಂದಿನ ಸಹೋದ್ಯೋಗಿಗಳನ್ನು ಬಿಟ್ಟು ಈಗ ಆನಿ ಬೆಸೆಂಟಳೂ ಹಾಗೂ ಸಿ. ಡಬ್ಲ್ಯೂ. ಲೆಡ್‌ಬೀಟರನು ಇದ್ದನು, ಅವಳು ಹಿಂದೆಯೇ ಸೂಚಿಸಿದಂತೆ ಅವಳ ಹಿಂದಿನ ಹಲವು ಜನ್ಮಗಳೂ ಅನುಭವಗಳೂ ಅವಳನ್ನು ಮುಂದೊಯ್ಯಲು ಆಧಾರಪ್ರಾಯವಾಗಿದ್ದುದರ ಫಲವಾಗಿ ಇದೀಗ ಅವಳು ತನ್ನ ನಾಲ್ಕನೇ 'ಜನ್ಮ'ಕ್ಕೆ ಆರಂಭಿಸಿದ್ದಳು, ಮಾನಸಿಕ ಹಾಗೂ ಕರ್ತವ್ಯ ಕ್ಷೇತ್ರದಲ್ಲಿ ಆನಿ ಬೆಸೆಂಟ್ ಮತ್ತು ಲೆಡ್‌ಬೀಟರನು ಒಬ್ಬರಿಗೊಬ್ಬರು ವಿರೋಧವಿದ್ದರಾದರೂ ತಮ್ಮೊಳಗೆ ಅವರು ಪರಸ್ಪರ ಬೇಕಾದವರಾಗಿ ಆತ್ಮೀಯತೆಯಿಂದ ದುಡಿದರು, ಜನ್ಮಾಂತರಗಳ ಪದ್ಧತಿ ಹಲವಾರು ಶೋಧನೆಗಳು ಮತ್ತು ಅನುಭವದ ಸಂಶೋಧನೆಗಳ ಫಲವಾಗಿ ಅವರಿರ್ವರು ತಮ್ಮ ತಮ್ಮ ಕ್ಷೇತ್ರದಲ್ಲಿ ವಿಧಿಸಲ್ಪಟ್ಟ ಕೆಲಸಗಳನ್ನು ಜಯಪ್ರದವಾಗಿ ಸಾಗಿಸಿದರು, ಇರ್ವರೂ ಉನ್ನತ ಸಿದ್ಧಿಯನ್ನು ಪಡೆದಿದ್ದರು, ಆನಿಯು ರಾಜಕೀಯ ಮತ್ತು ನೈತಿಕ ಧ್ಯೇಯದ ಸಾಧನೆಗಳಲ್ಲಿ ನುರಿತಿದ್ದಳು, ಲೆಡ್‌ಬೀಟರನು ಬೋಧನಾಕೌಶಲನಾದ ಗುರುವೂ ವೈಜ್ಞಾನಿಕ ತತ್ವಜ್ಞನೂ ಆಗಿದ್ದನು. ಹೀಗೆ ಅವರಲ್ಲಿ ಭೇದವಿದ್ದಂತೆ ತೋರಿದರೂ ಆನಿಯು ಅಸಮಾನ ಗುರುವೂ ತತ್ವಜ್ಞಳೂ ಆಗಿದ್ದಳೆ ಲೆಡ್‌ಬೀಟರನ ನೀತಿ

ಯು ಕಾರ್ಯತಃ ಸಾಧಿಸಲು ಆ ಕ್ಷೇತ್ರಕ್ಕೆ ಯೋಗ್ಯವಾಗಿಲ್ಲವೆಂದು ತೋರಿದ್ದರೂ ರಾಜಕೀಯದಲ್ಲಿ ಮತ್ತು ಸಂಸ್ಥೆಗಳ ವ್ಯವಸ್ಥಾಪನೆಯಲ್ಲಿ ಅವನು ಕುಶಲನಾಗಿದ್ದನು. ಅವನು ವಿಷಯದ ಮೂಲವನ್ನು ಸರಿಯಾಗಿ ಚಿಂತಿಸುತ್ತಿದ್ದನಾದರೆ ಅವನು ಕಾರ್ಯಸಾಧನೆಗೆ ವಿಳಂಬವಾದರೂ ಸರಿ, ಯೋಗ್ಯ ರೀತಿಯಾವುದೆಂಬುದರ ಬಗ್ಗೆ ಆಸಕ್ತಿಯನ್ನು ವಹಿಸಿದ್ದನು.

ಆನಿ ಬೆಸೆಂಟಳ ಕಾರ್ಯಕ್ಷೇತ್ರವು ಜನಸಂಪರ್ಕವಾಗಿದ್ದಿತು. ಆದರೆ ಲೆಡ್ಬಿಟರನು ವ್ಯಕ್ತಿಗಳನ್ನು ಅವಲಂಬಿಸಿದ್ದನು. ಆನಿಯು ವ್ಯಕ್ತಿಗಳಿಗೆ ಸ್ಫೂರ್ತಿಯನ್ನೀಯಬಲ್ಲವಳಾದರೆ ಲೆಡ್‌ಬಿಟರನು ಜನಸಂಪರ್ಕವನ್ನು ತನ್ನೊಡನೆ ಒಯ್ಯಲು ಸಮರ್ಥನಾಗಿದ್ದನು. ಹೀಗೆ ಅವರಿರ್ವರ ಜಯಪ್ರದವಾದ ಕಾರ್ಯದಲ್ಲಿ ಅವರು ಒಬ್ಬರಿಗೊಬ್ಬರು ನೆರವಾಗಿ ನಡೆದರು. ಬಹು ಹಿಂದಿನ ಜನ್ಮದಲ್ಲಿ ಅವರು ಸಂಪಾದಿಸಿದ್ದ ಸ್ನೇಹವು ತಮ್ಮ ಈ ಜನ್ಮದಲ್ಲಿ ಚಿರಂತನ ಕಾರ್ಯ ವಿಸ್ತಾರವನ್ನು ಹಿಡಿದು ಹೋಗುತ್ತಿತು.

ಲೆಡ್ಬಿಟರನು ತನ್ನ ಆತ್ಮಚರಿತ್ರೆಯನ್ನು ಬರೆದುದಿಲ್ಲ. ರಹಸ್ಯ ಶಾಸ್ತ್ರಜ್ಞನು ಅಂಥದ್ದನ್ನು ಬರೆಯುವುದು ಅಸಂಭವ. ಆದರೆ ಬಹು ಬೇಗನೆ ಬರೆಯಬೇಕಾದ ಅವನ ಜೀವನ ಚರಿತ್ರೆಯನ್ನು ಮುಂದೆ ಪ್ರಕಟಿಸುವಾಗ ಅವನು ಮತ್ತು ಆನಿ ಬೆಸೆಂಟ್ ಇವರು ಎಷ್ಟರಮಟ್ಟಿಗೆ ತಮ್ಮ ಜೀವನದ ಕಾರ್ಯಕಲಾಪಗಳಲ್ಲಿ ಪರಸ್ಪರ ಹೊಂದಿಕೊಂಡು ಪ್ರಭಾವಿತರಾಗಿದ್ದರೆಂಬುದು ವ್ಯಕ್ತವಾಗುತ್ತದೆ.

ತನ್ನ ಪ್ರಸಿದ್ಧ ಸಹೋದ್ಯೋಗಿ ಲೆಡ್‌ಬಿಟರನನ್ನು ಕುರಿತು ಆನಿ ಬೆಸೆಂಟ್ ಇವರು ಪ್ರಶಂಸಿಸಿ ಹೇಳಿದ ಕೆಲವು ಮಾತುಗಳನ್ನು ಇಲ್ಲಿ ಎತ್ತಿ ಹೇಳುವುದು ಸೂಕ್ತವೆನಿಸುವುದು:—

"ಚಾರ್ಲ್ಸ್ ಲೆಡ್‌ಬಿಟರನು ಮಹತ್ವದ ವಿಷಯಗಳನ್ನು ಶ್ರದ್ಧಾಪೂರ್ವಕವಾದ ಕರ್ತವ್ಯ ತತ್ಪರತೆಯಿಂದ ಕೈಗೊಳ್ಳುತ್ತಿದ್ದನಲ್ಲದೆ ನಿರ್ಲಕ್ಷ್ಯದಿಂದ ಎಂದೂ ಕಂಡಿದ್ದಿಲ್ಲ. ಹೆಚ್. ಪಿ. ಬ್ಲಾವಟ್‌ಸ್ಕಿಯನ್ನು ಗುಪ್ತ ಶಾಸ್ತ್ರಜ್ಞಳೆಂದು ಮನಗಂಡು ಅವನು ನಿಷ್ಠೆಯಿಂದ ಅವಳನ್ನು ಅನುಸರಿಸಿ ಕಡೆಗೆ ಅವಳೊಡನೆ ಹಿಂದೂಸ್ಥಾನಕ್ಕೆ ಹೊರಟನು. ದಾರಿಯಲ್ಲಿ ಸ್ವಲ್ಪ ವಿಶ್ರಮಿಸಲೆಂದು ಈಜಿಪ್ಟಿನಲ್ಲಿ ಅವರು ಇಳಿದರು. ಒಂದು ದಿನ ಅವರಿರ್ವರೂ ಒಂದೆಡೆ ಕುಳಿತಿದ್ದಾಗ ಅಪರಿಚಿತ ವ್ಯಕ್ತಿಯೊಬ್ಬನು ಬಂದು ಬಹು ಕಟುವಾಗಿ ಅವಳೊಡನೆ ಮಾತಾಡತೊಡಗಿದನು. ಆಗ ಬ್ಲಾವಟ್‌ಸ್ಕಿಯು ಧಿಕ್ಕಾರ ವಾಣಿಯಿಂದ ಅವನೊಡನೆ ಮಾತಾಡಿದಳು. ಅವನು ಅಲ್ಲಿಂದ ಕಾಲ್ತೆಗೆದನು. ಏನೇ ಇರಲಿ, ಲೆಡ್‌ಬಿಟರನು ಒರ್ವ ಸಜ್ಜನ ಜೀವಿ, ನಿಷ್ಠೆಯ ಸೇವಕ; ಕಸಗುಡಿಸುವ ಕೆಲಸವೇ ಆಗಲಿ, ಲಕೋಟೆಯ ಮೇಲೆ ವಿಳಾಸ ಬರೆಯುವುದೇ ಆಗಲಿ,

ಬೇರೆನಾದರೂ ಆಡಳಿತಕ್ಕೆ ಸಂಬಂಧಪಟ್ಟ ಕೆಲಸವೇ ಆಗಲಿ, ಅವನು ತನ್ನ ಶಾಲಿನ ಸೇವೆಯನ್ನು ನಿಷ್ಠೆಯಿಂದ ಈ ದೇಶಕ್ಕೆ ಬಂದನು, ಆದರೆ ಅಂದಿನ ನಿತ್ಯಸತ್ಯದ ಪ್ರಕಾರ ಶಕ್ತಿಯನ್ನು ಬಹಳವಿನ ಇಟ್ಟುಕೊಂಡಂತೆ ತೋರುತ್ತಿಲ್ಲ, ಅವನ ಗುರುವು ತನ್ನ ಕೈಗಳನ್ನು ಅವಾಗಲೇ ಚಾಚಿದ್ದನು. ಯಾರು ಅವನನ್ನು ತನ್ನೆಡೆಗೆ ಕರೆದನೋ ಮತ್ತು ಯಾರು ಅವನನ್ನು ನಿರೀಕ್ಷಿಸಿದ್ದನೋ ಅವನಿಗೆ ಆಶ್ರಯದಾತನು ಎಲ್ಲವನ್ನೂ ಅರ್ಪಿಸಿದನು. ಸಹನೆ ಮತ್ತು ಶ್ರಮದಾಯಕವಾದ ಕೆಲಸದಿಂದ ಹೆಜ್ಜೆ ಹೆಜ್ಜೆಗೂ ತನ್ನ ತಜ್ಞತೆಯನ್ನು ಮೆರೆಯಗಾಗಿಸುತ್ತಾ ಯಾವುದನ್ನೂ ತಾನು ಪ್ರಯಾಸದಿಂದ ತೋರಗೊಳಿಸ ತಾನೇ ಹೇಳಿದಂತೆ ನಿಧಾನವಾದರೂ ನಿಶ್ಚಯದಿಂದ ಉನ್ನತ ಸ್ಥಾನಕ್ಕೆ ಏರಿ ಅವನು ಸರ್ವರಿಂದಲೂ ಬಹುಮಾನಿತನಾದನು.

× × × × ×

"ಇತರರ ಜ್ಞಾನಪ್ರಕಾಶವನ್ನು ಹೆಚ್ಚಿಸುವುದರಲ್ಲಿ ಹುಟ್ಟು ಚೋದಕನಾದ ಅವನು ಕಂಗೆಡದೆ ಮುಂದೆ ನಡೆದನು, ತಾನು ಬಾಯಲ್ಲಿ ಹೇಳಿದ ಒಂದು ನುಡಿಗೆ ಹಲವು ಲಿಖಿತ ಪುಟಗಳನ್ನು ಸೇರಿಸಿದನು. ಬಹು ವಿಚಾರಗರ್ಭಿತವಾದ ವಿಷಯಗಳ ಮೇಲೆ ವ್ಯಕ್ತವಾಗಿ ಬರೆಯಲ್ಪಟ್ಟ ಹಲವು ಕೃತಿಗಳು ಅವನ ಕೀರ್ತಿಯನ್ನು ಹೆಚ್ಚಿಸಿವೆ!"

× × × × ×

"ಕೆಲವರು ದ್ವೇಷದಿಂದ ಆಶ್ರಯದಾತನನ್ನು ಎದುರಿಸದೆ ಬಿಟ್ಟುಬಿಡುತ್ತಿದ್ದರು. ಆದರೆ ಅವರ ಅಸೂಯೆಯು ಮಿತಿಯನ್ನು ಮೀರಿತ್ತು. ಕೆಲವು ಸಂದರ್ಭಗಳಲ್ಲಿ ಅವರು ಅವನನ್ನು ಹತ್ತಿಕ್ಕಲು ನೋಡಿದಾಗ ಅದರ ಪ್ರತಿಕ್ರಿಯೆಯು ಅವರನ್ನೇ ಬಾಧಿಸಿತು. ಅವನಾದರೋ ಬೇರಾರಿಗೂ ವಿವರಣೆಯನ್ನು ಕೊಡುವ ಅನವಶ್ಯಕ ವಿಧಿಯಲ್ಲಿ ಮಗ್ನನಾಗದೆ, ಯಾರಿಗೂ ಹಾನಿಯನ್ನೆಸಗದೆ, ತನ್ನ ಸಾತ್ವಿಕ ಗುಣವನ್ನು ತನ್ನ ರಕ್ಷಣೆಗಾಗಿ ಬಳಸಿಕೊಳ್ಳುತ್ತಾ ತನ್ನದೇ ಆದ ಹಾದಿಯಲ್ಲಿ ನಡೆದನು."

"ಆರಂಭದ ಎತ್ತರೆಯೂ ಇದ್ದ ಅವನ ಸಹೋದ್ಯೋಗಿಗಳ ಪ್ರೀತಿ, ಸಹಕಾರ, ಕೃತಜ್ಞತೆಗಳಿಗೆ ಪಾತ್ರನಾಗಿ ಅವನ ಪಾಲಿಗೆ ಬಂದ ಕಾರ್ಯಕರ್ತಗಳನ್ನು ಯಶಸ್ವಿಯಾಗಿ ಕೈಗೊಂಡಿರುವವನು, ಬಹು ಕಷ್ಟದಿಂದ ಶ್ರೀಮಾನವನು ದೇವರಾಜ್ಯವನ್ನು ಸೇರುವನು, ಆ ಹಾದಿಯನ್ನು ಹಿಡಿಯುವುದು ಯೋಗ್ಯವಿದೆ; ಏಕೆಂದರೆ ಅದು ಹುಟ್ಟು ಸಾವುಗಳಿಲ್ಲದ ದಿವ್ಯ ಆತ್ಮಸ್ವಭಾವ ಸಾಧನೆಗೆ ಕಾರಣವಾದ ಚಿರಂಜೀವಿಗಳ ಜಗತ್ತಾಗಿದೆ."

"ಸಾವಿನಿಂದ ಕರೆಯಲ್ಪಡುವ ಈ ಅಸ್ತಿತ್ವದ ಪರದೆಯನ್ನೆತ್ತಿ, ಅಗೋಚರ ಶಕ್ತಿಯು ಪ್ರೀತಿಯೊಡಗೂಡಿ ಅಜ್ಞಾನದಿಂದ ಆವರಿಸಿರುವ ಈ ಶಾಂತಿ ಮತ್ತು ಕ್ಷೇಮದೊಡಗೂಡಿ ಜಗತ್ತಿನೆಡೆಗೆ ಕೈತೋರಿಸಿ ಆಶ್ರಯದಾತನಿಗಿಂತಲೂ ಹೆಚ್ಚಾಗಿ ಯಾರೂ ದುಡಿದುದಿಲ್ಲ; ಸಾವಿ

ರಾರು ಜನರು ತಮ್ಮ ಸಮೀಪ ಬಂಧುಗಳನ್ನು ಕಳೆದುಕೊಂಡಿದ್ದಾಗ ಅವನ ಸಹಾಯ, ಹಿತವಚನಗಳನ್ನು ಪಡೆದರಲ್ಲದೆ ದುಃಖಿತರನ್ನು ಸಂತಾಪಗೊಳಿಸಿ ಅವನು ಅದರಿಂದ ಭ್ರಾತೃಪ್ರೇಮದ ಪ್ರೀತಿಯನ್ನು ಪಡೆದನು. ತನ್ನ 64ನೇ ವರ್ಷವನ್ನು ಪೌರುಷ ಶಕ್ತಿಯಿಂದ ಹಗುರವಾಗಿ ಹೊತ್ತುದಲ್ಲದೆ ಎಳೆ ಹುಡುಗನಂತೆ ಟೆನ್ನಿಸ್ ಆಟವನ್ನು ಆಡುತ್ತಾನೆ. ಅಸಾಧ್ಯಾಕರವಾದ ದ್ವೇಷದಿಂದೊಡಗೊಂಡ ಅಪವಾದಗಳಿಂದ ಅವನ ವೈರಿಗಳು ಭಯಂಕರವಾದ ಕ್ರಿಯಾಶೀಲ ಜೀವನಕ್ಕೆ ಹಾನಿಯನ್ನು ತಂದೊಡ್ಡಲು ಜನರು ಯತ್ನಿಸಿದಾಗ ಅವನ ಸಾತ್ವಿಕತೆ, ಧೃತಿಪ್ರಜ್ಞತೆ, ಮತ್ತು ಪರಿಶುದ್ಧತೆಗಳೇ ಅವನ ಜೀವನವನ್ನು ವಿಕಾಸಗೊಳಿಸಿತು.

ಬಿಷಪ್ ಲೆಡ್ಬೀಟರರ 77ನೇ ವರ್ಷದ ವೇಳೆಗೆ ಡಾ. ಆನಿ ಬೆಸೆಂಟ್ ಇವರು ಈ ರೀತಿಯಾಗಿ ಹೇಳಿದರು:—.

"ಅವನ ಸಹೋದ್ಯೋಗಿಯಾದ ನಾನು ನಮ್ಮ ಅಭೇದ್ಯ ಸಂಪರ್ಕದಿಂದೊಡಗೊಂಡು ಬೇರಾರೂ ತಿಳಿಯದಷ್ಟು ಚೆನ್ನಾಗಿ ಅವನನ್ನು ತಿಳಿದ ನಾನು ಅವನ ಜೀವನದ ಬಿರುಗಾಳಿ, ಬಿಸಿಲು, ಹಿತಹಾಗೂ ಅಹಿತವಾದ ಹವಾಮಾನ, ಇತರರ ನಿಂದೆಗೆ ಅಳುಕದ ಮತ್ತು ಸ್ತುತಿ ಪ್ರಶಂಸೆಗಳಿಗೆ ಹಿಗ್ಗದ ಅವನಿಗೆ ನೆರವಾಗಿ ಇರುವೆನು, ನಮ್ಮ ಪ್ರಪಂಚವು ಬರೇ ಕ್ಷಣಿಕವಾದುದಲ್ಲ. ದೇಹ ಶಕ್ತಿ, ಮನಃಶಕ್ತಿ ಮತ್ತು ಉತ್ತಮ ಕ್ರಿಯಾಶೀಲತೆಯಿಂದೊಡಗೂಡಿದ ಜಗತ್ತಿಗೆ ನಾವೆಲ್ಲರೂ ಒಂದು ಸಂಸಾರದಲ್ಲಿ ಹರಿಯುವರಂತೆ ನಿಷ್ಕಳಂಕ ಸ್ವಾತಂತ್ರ್ಯಕ್ಕೆ ಇಚ್ಛಿಸಿ ಒಂದೇ ದೃಷ್ಟಿ ಸಂಕಲ್ಪದತ್ತ ಸಾಗುವ ದಾರಿಯಲ್ಲಿ ಇರುವೆವು."

× × × × ×

"ಇತರ ಲೋಕಗಳಲ್ಲಿ ಬಹುಕಾಲ ಕಳೆದು ಇಹಿಗ ಈ ಪ್ರಪಂಚದಲ್ಲಿ ಜ್ಞಾನಪ್ರಬೋಧಕನಾಗಿರುವವನೊಬ್ಬನು ದಿವ್ಯ ಮಾನವ ಶಿಶುವಾಗಿ 1847ನೇ ವರ್ಷ ಫೆಬ್ರುವರಿ 17ರಲ್ಲಿ ಹುಟ್ಟಿದನು, ಜಗತ್ಕಲ್ಯಾಣಕ್ಕಾಗಿ ಹೋರಾಡಿದ ಹಿಂದಿನ ಮಹಾಶಯರ ಶುಭಾಶಯಗಳು ಅವನನ್ನು ಕಾಪಾಡಿದ್ದುವು. ಬಾಲ್ಯದಲ್ಲಿ ತನ್ನ ಮಾತಾಪಿತೃರ ಮನೆಯಲ್ಲಿ ಅವನು ಗುಪ್ತಶಾಸ್ತ್ರಜ್ಞ ಬುಲ್ವರ್ ಲಿಟ್ಟನ್ ಇವನನ್ನು ಭೇಟಿಯಾದನು, ತನ್ನ ತಂದೆತಾಯಿಗಳೂ ಗುಪ್ತಶಾಸ್ತ್ರದಲ್ಲಿ ಅಭಿರುಚಿಯನ್ನಿಟ್ಟಿದ್ದರೋ ಎಂಬಂತೆ ಅಲ್ಲಿಯೋ ನೆಲದಲ್ಲಿ ಬಿದ್ದ ಗಾಳಿಗೆ ಅತ್ತಿತ್ತ ಕಂಪಿಸುತ್ತಿದ್ದ ಮತ್ತು ಇತರರಿಂದ ಮುಚ್ಚಲ್ಪಟ್ಟಿದ್ದ ಒಂದು ಪತ್ರವನ್ನು ಆಗ ಕಂಡುದನ್ನು ಅವನು ನೆನೆಯುತ್ತಿರುವನು, ಚಿಕ್ಕಂದಿನಲ್ಲಿ ತನ್ನ ತಂದೆ ಮತ್ತು ತಮ್ಮನೊಂದಿಗೆ ಬ್ರೆಜಿಲ್‌ಗೆ ಹೋದನು, ಅಲ್ಲಿ ಅವನ ಸಹೋದರನು ಶಿಲುಬೆಯ ಮೇಲೆ ಕಾಲಿಡಲು ನಿರಾಕರಿಸಿದ್ದರಿಂದ ಅಲ್ಲಿನ ಪ್ರತಿಗಾಮಿ ದಂಗೆಕೋರರು ಅವನನ್ನು ಕೊಂದರು. ಲೆಡ್ಬೀಟರನನ್ನೂ ಚಿತ್ರಹಿಂಸೆಗೆ ಒಳಪಡಿಸಿದರಲ್ಲದೆ ಒಂದು ಇಡೀ ರಾತ್ರಿ ಅವನನ್ನು ಒಂದು ಮರಕ್ಕೆ

ಕಟ್ಟುತ್ತಿದ್ದರು. ಅದೇ ವೇಳೆಗೆ ಅವನ ತಂದೆಯು ತೋಳುಗಳನ್ನು ಆ ಹಿಂದೂ ಕರು ಕಡಿದು ಗಾಯಗೊಳಿಸಿದರಲ್ಲದೆ ಅವನನ್ನು ಜೀವ ನಿಗ್ರಹ ಸೇವಕನು ಬದುಕಿಸಿದನು. ಲೆಡ್ಬೀಟರನು ಇಂಗ್ಲೆಂಡಿಗೆ ಹಿಂದಿರುಗಿ ಆಕ್ಸಫರ್ಡ ವಿದ್ಯೆಗೆ ತೊಡಗಿದನು. ಆದರೆ ತನ್ನ ಕುಟುಂಬದ ಆರ್ಥಿಕ ತೊಂದರೆಯ ಕಾರಣದಿಂದ ಅವನು ಅದನ್ನು ಬಿಡಬೇಕಾಯಿತು. ಅವನು ಇಂಗ್ಲೆಂಡಿನ ಮತೀಯ ಸಂಸ್ಥೆಯಲ್ಲಿ ಜೀವ ಪ್ರವರ್ತಕ ಬೋಧಕನಾಗಿ ಸೇರಿ ಅಲ್ಲಿಯ ಚರ್ಚ ಗ್ರಾಮದಲ್ಲಿ ತತ್ವಜ್ಞಾನದ ವಿಶಿಷ್ಟತೆಗಳನ್ನು ಅಭ್ಯಸಿಸಿದನು. ಎ. ಪಿ. ಸಿನ್ನೆಟ್ಟ ಇವನ ಗ್ರಂಥಗಳನ್ನು ಓದಿದನು, ತತ್ವಜ್ಞಾನ ಸಂಸ್ಥೆಗೆ (Theosophical Society) ಸೇರಿದನು, ಮತ್ತು ಶ್ರೀಮತಿ ಬ್ಲಾವಟ್‌ಸ್ಕಿ ಇವಳೊಡನೆ ಹಿಂದೂಸ್ಥಾನಕ್ಕೆ ಬಂದನು. ಇಲ್ಲಿ ಗುಪ್ತಶಾಸ್ತ್ರವನ್ನು ಕುರಿತು ಪ್ರಾಚೀನ ರೀತಿಯಲ್ಲಿ ಅಭ್ಯಸಿಸಲು ಇಷ್ಟಪಟ್ಟುದು ಬಿಕ್ಕವನ್ನು ಪರಿದಷ್ಟು ಪರಿಶ್ರಮವನ್ನು ಅನುಭವಿಸಿದನು. ಅಡೆಯಾರ್‌ನಲ್ಲಿ ತತ್ವಜ್ಞಾನ ಸಂಸ್ಥೆಗಾಗಿ ಅದರಲ್ಲೂ "Theosophist" ಎಂಬ ಮಾಸಿಕ ಸಂಚಿಕೆಯನ್ನು ನಡೆಸಲು ತುಂಬಾ ದುಡಿದನು, ಕರ್ನಲ್ ಆಲ್ಕಾಟನು ಶ್ರೀಲಂಕಾದಲ್ಲಿ ಸ್ಥಾಪಿಸಿದ್ದ ಬೌದ್ಧಶಾಲೆಗಳನ್ನು ಸಂದರ್ಶಿಸಲು ಅವನಿಂದ ಕಳುಹಿಸಲ್ಪಟ್ಟನು. ಅಲ್ಲಿ ಉಪಯುಕ್ತ ಕೆಲಸಗಳನ್ನು ಲೆಡ್ಬೀಟರನು ನಾಲ್ಕೈದು ವರ್ಷಗಳ ಕಾಲ ಮಾಡಿ ಎ. ಪಿ. ಸಿನ್ನೆಟ್ಟ ಇವನೊಡನೆ, ಅದರನಂತರ ನನ್ನೊಡನೆ ದಾರಿಯಲಿಂದು ಇಂಗ್ಲೆಂಡಿಗೆ ಬಂದನು. "ಗಾನೇ ಎವಿನ್ಯೂ ರಸ್ತೆ"ಯಲ್ಲಿ ವಾಸಿಸಿದ್ದ ಇವನು ತನ್ನ ಓದು ಬರಹಗಳಲ್ಲಿ ಮಾತ್ರವಲ್ಲ, ಬ್ರಹ್ಮಜ್ಞಾನ ಕೂಟಗಳನ್ನು (Theosophical Lodges) ಅಭಿವೃದ್ಧಿಗೊಳಿಸುತ್ತಲೂ ಇದ್ದನು. ಕೆಲಕಾಲಾನಂತರ ಅವನು ಅಮೇರಿಕಾಕ್ಕೆ ಹೋಗಿ ಅಲ್ಲಿಂದ 1905ರ ಅಡೆಯಾರ್ ಕೂಟ ಕತ್ತಿನ ಕಾಲಕ್ಕೆ ಭಾರತಕ್ಕೆ ಪುನಃ ಬಂದನು, 1906ರಲ್ಲಿ ಅವನು ಯುರೋಪಿಗೆ ಪ್ರಯಾಣ ಬೆಳೆಸಿದಾಗ ಅವನ ಅಮೇರಿಕಾದ ವಿರೋಧಿಗಳು ಅವನನ್ನು ಟೀಕಿಸತೊಡಗಿದರು, ಆದುದರಿಂದ ಅವನಿಗಿಂತಲೂ ಹಿಂದೆ ಬ್ಲಾವಟ್‌ಸ್ಕಿ ಇವಳಂತೆಯೇ ಲೆಡ್ಬೀಟರನೂ ಆ ಟೀಕೆಗಳನ್ನು ತಿರಸ್ಕರಿಸಿದಲ್ಲದೆ ತತ್ವಜ್ಞಾನ ಸಂಸ್ಥೆಯ ಸದಸ್ಯತ್ವಕ್ಕೆ ರಾಜಿನಾಮೆಯನ್ನು ಕೊಟ್ಟನು. ಅವನ ಕಾರ್ಯಕಲಾಪಗಳನ್ನು ಕುರಿತು ವಾದ ವಿವಾದ ವಿಚಾರಣೆಗಳು 1908ರ ವರೆಗೂ ನಡೆದುವು, 1906ರ ಅಡೆಯಾರ್ ಸಮ್ಮೇಳನಕ್ಕೆ ಕರ್ನಲ್ ಆಲ್ಕಾಟನು ತನ್ನ ಮರಣಶಯ್ಯೆಯಲ್ಲಿ ತನ್ನ ಉಕ್ತಲೇಖನದ ಮೂಲಕ ಬರೆಯಿಸಿದ್ದ ಅಧ್ಯಕ್ಷ ಭಾಷಣವನ್ನು ನಾನು ಸಭೆಯಲ್ಲಿ ಓದಿದೆನು. ಅದರಲ್ಲಿ ಅವನು ಲೆಡ್ಬೀಟರನಲ್ಲಿ ಇಟ್ಟಿದ್ದ ವಿಶ್ವಾಸವನ್ನು ಕುರಿತು ಮುಕ್ತಕಂಠದಿಂದ ಪ್ರಸ್ತಾಪಿಸಿದನಲ್ಲದೆ ಮುಂದುವರಿಯುತ್ತಾ ಅವನು ಹೀಗೆಂದನು:—

"ಲೆಡ್ಬೀಟರನ ಧ್ಯೇಯಗಳು ಪೂರ್ತಿ ಸದುದ್ದೇಶದಿಂದ

ಕೂಡಿವೆಯೆಂಬುದನ್ನು ನಾನು ನಿಶ್ಚಯವಾಗಿ ನಂಬಿರುವೆನು; ಅಲ್ಲದೆ ಆ ಬೋಧನೆಗಳು ಅವನ ಶಿಷ್ಯರಿಗೆ ಬಾಧಕವಾಗುವುದರ ಬದಲಾಗಿ ತುಂಬಾ ಉಪಯುಕ್ತವಾಗಿದ್ದುವು. ಅವನ ಅಭಿಪ್ರಾಯಗಳನ್ನು ತತ್ತ್ವಜ್ಞಾನ (Theosophy) ನೀತಿಗನುಗುಣವಾಗಿಲ್ಲವೆಂದು ನಾವು ಭಾವಿಸಿದ್ದರೂ ಅವನು ಈ ಸಂಸ್ಥೆಯಲ್ಲಿ ನಮಗೆ ಎಷ್ಟು ಆತ್ಮೀಯನಾಗಿದ್ದನೆಂಬುದನ್ನೂ ಅವನ ಬೋಧನೆಗಳು ಪಾಪಾಸ್ಪದವೆಂದೂ ನಾವು ಒಪ್ಪಿಕೊಂಡಿದ್ದರೂ ಅವನು ತನ್ನ ಬೋಧನಾ ಕ್ರಮವನ್ನು ನಮ್ಮ ಐಕ್ಯತೆಯ ದೃಷ್ಟಿಯಿಂದ ಕೊನೆಗೊಳಿಸುವನೆಂದು ನಿರೀಕ್ಷಿಸುತ್ತೇನೆ." ✱

ಲೆಡ್‌ಬೀಟರನು 1906 ರಿಂದ ಬ್ರಹ್ಮಚರ್ಯದ ಬಗ್ಗೆ ಬೋಧಿಸಿದ್ದೇ ಇಲ್ಲವೆಂದರೂ ಅವನ ವಿರೋಧಿಗಳಿಗೆ ತೃಪ್ತಿಯಾಗಲಿಲ್ಲ. ಅವನಿಗೆ ಆ ಬಗೆ ಆದ ಅನ್ಯಾಯವನ್ನು ಕುರಿತು ಕರ್ನಲ್ ಆಲ್ಕಾಟನು ತಂತಿ ಮೂಲಕ ವ್ಯಸನವನ್ನು ಸೂಚಿಸಿದಲ್ಲದೆ ಆ ಅಪವಾದವನ್ನು ಕಿತ್ತುಹಾಕುವ ಕೆಲಸ

✱ ಲೈಂಗಿಕ ಕ್ರಿಯೆಯನ್ನು ಮಿತಿಮೀರಿ ಎಸಗಿದ ತನ್ನ ಚಿಕ್ಕವರ ಶಿಷ್ಯರಿಗೆ ಲೆಡ್‌ಬೀಟರನು ಕೊಟ್ಟ ಸಲಹೆಗಳು ಆ ವರ್ಗದ ಜನರಿಗೆ ಯಾವ ಉತ್ತಮ ಗುರುವೂ ಕೊಡುವಂಥದ್ದೇ ಆಗಿತ್ತು. ಮಾದಕ ಪದಾರ್ಥಗಳ ಸೇವನೆಗೆ ಬಲಿಬಿದ್ದವನಿಗೆ ಅವನ ವೈದ್ಯನು ಎಂಥಾ ಯೋಗ್ಯ ಸಲಹೆಗಳನ್ನೀಯುವನೋ ಅದೇ ರೀತಿಯಲ್ಲಿ ಇದಾಗಿತ್ತು. ತಮ್ಮ ದೇಹವನ್ನು ಕೆಡಿಸಿಕೊಳ್ಳದೆ ಬ್ರಹ್ಮಚರ್ಯವನ್ನು ಹೇಗೆ ಸಾಧಿಸಬೇಕೆಂಬುದರ ಬಗ್ಗೆ ಅವನು ಹಿತನುಡಿಗಳನ್ನಿತ್ತಿದ್ದನು. ಈ ಬುದ್ಧಿವಾದಗಳನ್ನು ಅಕ್ಷರಶಃ ಪಾಲಿಸದಾಗ ಅಂಥ ಬೋಧನೆಯನ್ನಿತ್ತವನನ್ನು ಕಡೆಗಣಿಸಲು ಕೆಲವರು ಹೋಗಿದರೆ ಅವರು ಕುಟಿಲತೆಯನ್ನರಿಯದ [illegible]. ತಾವು ಗುಣಹೊಂದುವ ಬದಲಾಗಿ ತಮ್ಮನ್ನು ತಾವೇ ಕೊಲ್ಲುತ್ತಿರುವ ಅಜ್ಞಾನಿಗಳೂ ಸಂಕೀರ್ಣವಾದಿಗಳೂ ಆಗಿರುವರು.

ಲೆಡ್‌ಬೀಟರನು ನಿಷ್ಕಲ್ಮಷ ಮನದ [illegible] ವ್ಯಕ್ತಿಯಾಗಿದ್ದನು. ನನ್ನ ಬಾಲ್ಯದಿಂದಲೇ ಅವನನ್ನು ತಿಳಿದಿದ್ದ ನಾನು ಅವನ ಇತರ ಉತ್ತಮ ಗುಣಗಳಿಗಿಂತಲೂ ಆ ಸಹೃದಯತೆಗೆ ಸಾಕ್ಷಿಯಾಗಿರುವೆನು. ಬ್ರಹ್ಮಚರ್ಯದ ಬಗ್ಗೆ ಬೋಧಿಸಲು ಅವನು ತಕ್ಕವನಾಗಿದ್ದನು. ದೈಹಿಕ ಹಾಗೂ ಮಾನಸಿಕವಾಗಿ ಕಂಗೆಟ್ಟಿರುವವರಿಗೆ ಅವನು ಮಾರ್ಗದರ್ಶಕನಾಗಿದ್ದನು. ನಿಶಾಸೇವನೆಯಿಂದ ಕಂಗಾಲಾದವನಿಗೆ ಅದನ್ನು ಕ್ರಮಶಃ ನಿಲ್ಲಿಸಲು ಸಹಕರಿಸುವಂತೆ ಲೆಡ್‌ಬೀಟರನು ತನ್ನ ಶಿಷ್ಯರಿಗೆ ಲೈಂಗಿಕ ವಿಚಾರದಲ್ಲಿ ಬುದ್ಧಿವಾದವನ್ನಿತ್ತರೆ ಅದು ತಪ್ಪು ಎಂಬುದಾಗಿ ಹೇಳಿದರೆ ನಾನು ಒಪ್ಪಲಾರೆನು. ಮಾನಸಿಕವಾಗಿ ಶುದ್ಧವಾಗಿರುವವರು ಮಾತ್ರ ಆ ರೀತಿ ಬೋಧಿಸಲು ಅರ್ಹರೆಂಬುದನ್ನೂ ನಾನು ಒಪ್ಪಲಾರೆನು. ಈ ಕಲ್ಮಷ ಪ್ರಪಂಚಕ್ಕೆ ತನ್ನ ಎದುರಿಗೇನೇ ಇರುವ ಲೆಡ್‌ಬೀಟರನಂಥ ನಿಷ್ಕಲ್ಮ

ವನ್ನು ನನಗೆ ಒಪ್ಪಿಸಿದನು. ಅದರಂತೆ ನಾನು ತತ್ವಜ್ಞಾನ (Theosophy) ಸಂಸ್ಥೆಯ ಅಧ್ಯಕ್ಷೆಯಾಗಿ 1907ರಲ್ಲಿ ಆರಿಸಲ್ಪಟ್ಟನಂತರ ಈ ವಿಷಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಲು ಜಗತ್ತಿನ ಎಲ್ಲಾ ಶಾಖೆಗಳ ಮತ್ತು ಕಾರ್ಯಕರ್ತರ ಪ್ರತಿನಿಧಿಗಳಿಗೆ ಬರೆದೆನು. ಅವರೆಲ್ಲರೂ ಅಲ್ಲದೆ 1908ರ ಅಧ್ಯಕ್ಷೆ ಭಾಷಣದ ವೇಳೆಯಲ್ಲಿ ಆರಿಸಲ್ಪಟ್ಟ ಸಮಿತಿಯೂ ತಮ್ಮ ಮತವನ್ನೀಯಲಾಗಿ ಫಲಿತಾಂಶವು ಲೆಡ್‌ಬೀಟರನ ಪರವಾಗಿ ಬಹುಮತವಿದ್ದ ಕಾರಣ ಅವನು 1909ರಲ್ಲಿ ಪುನಃ ಸಂಸ್ಥೆಯ ಸದಸ್ಯನಾಗಿ ಸೇರಿದನು. ಹೀಗಿದ್ದರೂ ಅವನ ವಿರೋಧಿಗಳು ಅವನ ಮೇಲೆ ಅಪಪ್ರಚಾರವನ್ನು ಮಾಡುತ್ತಲೇ ಇದ್ದರು. ಆದರೆ ಅವನಿಂದ ಜ್ಞಾನವಿಕಾಸವನ್ನು ಪಡೆದಂಥಾ ಸಹಸ್ರಾರು ಜನರ ಆದರದಿಂದಲೂ ತತ್ವಜ್ಞಾನ ಸಂಘವು (Theosophical Society) ಅವನಲ್ಲಿಟ್ಟ ಪ್ರೀತಿ ವಿಶ್ವಾಸಗಳಿಂದಲೂ ಅವನು ಸ್ವತಮನಸ್ಕನಾಗಿ ಎದೆಗುಂದದೆ ಇದ್ದನು. ಈಗ ಲೆಡ್‌ಬೀಟರನು ಆಸ್ಟ್ರೇಲಿಯದ ಸಿಡ್ನೀ ನಗರದಲ್ಲಿ ಪ್ರವರ್ತ

ಕ ವ್ಯಕ್ತಿಯನ್ನು ನೋಡಲಿಕ್ಕೆ ಅಸಾಧ್ಯವಿದ್ದೇ ಇದೆ. ಆದುದರಿಂದ ಅವನ ಯೋಗ್ಯತೆಯನ್ನು ತಿಳಿಯದವರೊಡನೆ ಅವನನ್ನು ಹೋಲಿಸಿ ಬ್ರಹ್ಮಚರ್ಯದ ವಿಷಯವಾಗಿ ಬೋಧಿಸಲು ಹೋಗಿ ನಿಮಿತ್ತದಿಂದ ಕೆಲವರು ದುರುದ್ದೇಶವನ್ನು ಕಲ್ಪಿಸಿದರು. ಹೇಗೂ ಅವನು ಅಂಥಾ ಬೋಧನೆಗೆ ದೊರಕಿದ್ದು ದೈವಾನುಗ್ರಹವಾಗಿದೆ. ಆದರೆ ಅವನು ಅದರ ಫಲವನ್ನೂ ಅನುಭವಿಸಲೇ ಬೇಕಾಗಿತ್ತು. ತನ್ನೊಡನೆ ದುಡಿಯುತ್ತಿದ್ದವರ ಉದ್ದೇಶವನ್ನು ಮನ್ನಿಸಿ ಅವನು ಇತರರಿಗೆ ಕೊಡುತ್ತಿದ್ದ ಬೋಧನೆಯನ್ನು ನಿಲ್ಲಿಸಿದನು. ಅವನ ಪರವಾಗಿ ದುರಾಗ್ರಹ ಜಗತ್ತಿನೊಡನೆ ಹೋರಾಡಲು ಆ ತತ್ವಜ್ಞಾನ (Theosophy) ಸಂಸ್ಥೆಯು ಆಗ ಅಷ್ಟು ಬಲವತ್ತಾಗಿರಲಿಲ್ಲ. ಅದೇ ವಿಧ ಅಂಥಾ ಸಾಧಕರಾದ್ದ ಕೆಲಸಗಳ ದೃಷ್ಟಿಯಿಂದ ನಮ್ಮ ತತ್ವಜ್ಞಾನ ಸಂಘವೇ ಆಗಲಿ ಅದರ ಕಾರ್ಯಕರ್ತರೇ ಆಗಲಿ, ಲೋಕದ ಜನರ ಲೌಕಿಕ ಹಿಂಸಾನೀತಿಯನ್ನು ಪ್ರತಿಭಟಿಸಲು ಅಸಮರ್ಥರಿದ್ದರಿಂದ ಅನ್ಯಥೇ?

ಹೇಗೂ ದುರ್ದೈವದಿಂದ ನರಳುತ್ತಿದ್ದವರನ್ನು ಕಂಡು ಸಹ ಲೆಡ್‌ಬೀಟರನು ತನ್ನ ಬೋಧನೆಯನ್ನು ನಿಲ್ಲಿಸಬೇಕಾಯಿತು. ಅಲ್ಲಿಂದನಂತರ ಅವನು ಯಾರಿಗೂ ಯಾವ ಸಂದರ್ಭದಲ್ಲೂ ಬೋಧಿಸಲಿಲ್ಲವೆಂದು ನನಗೆ ಗೊತ್ತಿದೆ. ಆದರೆ ಅವನನ್ನು ತಿಳಿದವರಿಗೆ ಅವನ ಸಲಹೆಗಳು ಎಷ್ಟು ಅಮೂಲ್ಯವಾಗಿದ್ದುವೆಂದು ತಿಳಿದಿತ್ತು. ಲೋಕದ ಎಲ್ಲಾ ಮಹಾತ್ಮರಂತೆಯೆ ಲೆಡ್‌ಬೀಟರನೂ ತನ್ನ ಉತ್ತಮ ಕೆಲಸದ ಫಲವಾಗಿ ಅಜ್ಞಾನಿಗಳ ಆಕ್ರೋಶಕ್ಕೆ ಒಳಗಾಗಬೇಕಾಯಿತು. ಆದರೂ ಅವನು ಯಾರನ್ನೂ ನಿಂದಿಸದೆ, ಮನನೊಂದುಕೊಳ್ಳದೆ ತನ್ನ ಕಾಲವನ್ನು ಕಳೆದನು; ಅದೇ ಅವನ ಮಹತ್ವ!

ಗುರುತುಗಳ ಜನಪ್ರಿಯವಾದ ಕೇಂದ್ರದಲ್ಲಿರುವನು. ಆರನೇ ಉಪಜನಾಂಗವೆಂದೆನ್ನಲಾದ ಹೊಸದ ನಾಗರಿಕತೆಗೆ ಮೊದಲಿಗರಾದ ಸಹಸ್ರಾರು ಗಂಡಸು ಮತ್ತು ಹೆಂಗಸು ಮಕ್ಕಳ ಸಂಖ್ಯೆಯು ಈಗ ಹೆಚ್ಚುತ್ತಲಿರುವ ಅಮೇರಿಕಾ ಖಂಡವನ್ನು ಬಿಟ್ಟರೆ ವಿಶೇಷವಾಗಿ ಆಸ್ಟ್ರೇಲಿಯಾ ಆಗಿರುವುದರಿಂದ ಅವನು ಅಲ್ಲಿ ತನ್ನ ಸೇವೆಗೆ ಆರಂಭಿಸುವನು. ಆ ಜಗದ್ಗುರುವು ಈ ಹೊಸ ಜನಾಂಗಕ್ಕೆ ಉಪದೇಶವನ್ನು ಮಾಡಲು ಮತ್ತು ಅವರ ಸೇವೆಯನ್ನು ಕೈಗೊಳ್ಳಲು ಬರುವಾಗ ದೇವರು ಅವನನ್ನು ಸುತ್ತುವರಿಯುವರು."

× × × × ×

ತತ್ವಜ್ಞಾನ (Theosophy) ಸಂಘದ ಅಧ್ಯಕ್ಷೆಯಾಗಿ ಆರಿಸಲ್ಪಟ್ಟನಂತರ ಆನಿ ಬೆಸೆಂಟ್ ಇವಳು 20,000 ಮೈಲು ಭೂ-ಜಲ ಯಾತ್ರೆಯನ್ನು ಕೈಗೊಳ್ಳಲೆಂದು ಹೊರಟಳು. ಇದು ಅವಳ ಮುಂದಿನ ಇಪ್ಪತ್ತು ವರ್ಷಗಳ ಕಾಲ ಅವಳು ಎಡೆಬಿಡದೆ ಕೈಗೊಂಡ ಪ್ರವಾಸಕ್ಕೆ ನಾಂದಿಯಾಯಿತು. ಅವಳ ಅಧ್ಯಕ್ಷತೆ, ಕಾರ್ಯತತ್ಪರತೆ, ಸಹೋದ್ಯೋಗಿಗಳೊಡಗೊಂಡು ತೋರಿಸುವ ಕರ್ತವ್ಯದಕ್ಷತೆ ಮೊದಲಿಂದ ಚಂಡಮಾರುತಕ್ಕೆ ಸಮಾನವಾದ ಅವಳ ಚಟುವಟಿಕೆಯು ಬಹಳ ಬಿರುಸಾಗಿ ಪ್ರಾರಂಭವಾಯಿತು. ಒಂದು ಕಾರ್ಯಕ್ರಮವನ್ನು ಕೈಗೊಳ್ಳಲು ನಿರ್ಧರಿಸಿದನಂತರ ಅದರ ಸಾಧನೆಗೆ ಅವಳು ಉಗ್ರವಾದ ಮೋಹಾವೇಶ, ನಿರಂತರ ಪರಿಶ್ರಮ ಮತ್ತು ತನ್ನ ಪರಿಜನ ಮತ್ತು ಸಹೋದ್ಯೋಗಿಗಳನ್ನು ಬಿಗ್ಗುವ ಸೋಲಿಸುವಂಥಾ ಸಾಮರ್ಥ್ಯದಿಂದ ಅವಳು ಎಲ್ಲರನ್ನು ತನ್ನೆಡೆಗೆ ಸೆಳೆದಳು. ಅವಳೊಡನೆ ದುಡಿಯುವ ಸದವಕಾಶವನ್ನು ಪಡೆದವರು ಉತ್ತಮ ದೈಹಿಕ ಶಕ್ತಿಯುಳ್ಳವರೂ ಹಾಗು ಅವಳು ಬಹಳ ತೀವ್ರಗತಿಯಿಂದ ದುಡಿಯುವವರಾಗಿಯೂ ಎಲ್ಲಾ ಬಗೆಯ ಕೆಲಸಗಳನ್ನು ಮಾಡಲು ಅಸಾಮಾನ್ಯ ಚಾತುರ್ಯವನ್ನು ಹೊಂದಿದವರೂ ಉತ್ಸಾಹಿಗಳೂ ರಚನಾತ್ಮಕ ಕಲೆಯನ್ನುಳ್ಳವರು ಸಮರ್ಥರಾದವರೂ ಆಗಬೇಕಾಗಿತ್ತು.

ಆನಿ ಬೆಸೆಂಟಳ ಅವಿಶ್ರಾಂತ ಪರಿಶ್ರಮ ಮತ್ತು ಶಕ್ತಿಗೆ ಕೆಳಗೆ ತೋರಿಸಿದ ಅವಳ ಪ್ರವಾಸದ ಪರಿಮಿತಿಯೇ ಉದಾಹರಣೆಯಾಗಿದೆ. ಅವಳ ಸ್ಫೂರ್ತಿದಾಯಕವಾದ ಪರಿಶ್ರಮ ಮತ್ತು ತತ್ವಜ್ಞಾನ ಪ್ರಚಾರಕ್ಕೆ ಅವಳು ಕೈಗೊಂಡ ಪ್ರವಾಸಗಳು, ಜಗತ್ತಿಲ್ಲ ಹಬ್ಬಿದ ಅವಳ ವ್ಯಕ್ತಿತ್ವವು ಬರೀ ಮಾತಿನಿಂದ ವರ್ಣಿಸಲಶಕ್ಯವಾದುದಾಗಿದೆ. ಶ್ರೀ. ಬೆಸೆಂಟ್ ಇವಳ ಪ್ರವಾಸ ವರದಿಯು ಹೀಗಿದೆ:—

1891 — ಇಂಗ್ಲೆಂಡ್ ಮತ್ತು ಯುರೋಪ; ಮೊದಲ ಬಾರಿಗೆ ಅಮೇರಿಕಾದ ಸಂಯುಕ್ತ ಸಂಸ್ಥಾನಗಳಿಗೆ—

1893 — ಚಿಕಾಗೋದಲ್ಲಿ ನಡೆದ ವಿಶ್ವಧರ್ಮ ಪರಿಷತ್ತಿಗೆ ತತ್ವಜ್ಞಾನ (Theosophy) ಸಂಸ್ಥೆಯ ಪ್ರತಿನಿಧಿಯಾಗಿ; ಅನಂತರ ಶ್ರೀಲಂಕಾ ದಾರಿಯಾಗಿ ಹಿಂದೂಸ್ಥಾನದಲ್ಲಿ ಮೊದಲ ಬಾರಿಗೆ—

1894 — ಇಂಗ್ಲೆಂಡ್, ನಾರ್ವೆ, ಸ್ವೀಡನ್ ಇತ್ಯಾದಿ, ಅನಂತರ ಆಸ್ಟ್ರೇಲಿಯಾ ಮತ್ತು ನ್ಯೂಜೀಲ್ಯಾಂಡ್ ಪ್ರವಾಸ —
1895 — ಯೂರೋಪ್ —.
1896 — ಇಂಗ್ಲೆಂಡ್ ಮತ್ತು ಹಾಲೆಂಡ್ —.
1897 — ಅಮೇರಿಕಾ ಮತ್ತು ಯೂರೋಪ್ —.
1898 — ಯೂರೋಪಿನ ಕೆಲವು ದೇಶಗಳು —
1899 — ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿ —
1900 — ಯೂರೋಪಿನ ಕೆಲವು ದೇಶಗಳು —.
1902 — ಯೂರೋಪ್ (ಹಾಲೆಂಡ್, ಬರ್ಲಿನ್, ಪ್ಯಾರಿಸ್ ಇತ್ಯಾದಿ —.
1904 — ಯೂರೋಪಿನ ಕೆಲವು ದೇಶಗಳು —
1905 — ಯೂರೋಪ್ —
1907 — ಮ್ಯೂನಿಚ್‌ನ ಯೂರೋಪಿಯನ್ ಕಾಂಗ್ರೆಸ್, ಅನಂತರ ಇತರ ಯೂರೋಪಿಯನ್ ದೇಶಗಳು; ಅಮೇರಿಕಾ ಮತ್ತು ಪುನಃ ಯೂರೋಪ್; —
1908 — ಆಸ್ಟ್ರೇಲಿಯಾ, ಟಾಸ್ಮೇನಿಯಾ ಮತ್ತು ನ್ಯೂಜೀಲ್ಯಾಂಡ್ —
1909 — ಲಂಡನ್, ಬುಡಾಪೆಸ್ಟ್ (ಯೂರೋಪಿಯನ್ ಕಾಂಗ್ರೆಸ್‌ನ ಅಧಿವೇಶನ; ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ, ಮತ್ತು ಪುನಃ ಯೂರೋಪಿನಲ್ಲಿ ಪ್ರವಾಸ —.
1910 — ಹಿಂದೂಸ್ಥಾನದ ಉದ್ದಗಲಕ್ಕೂ —.
1911 — ಬರ್ಮಾ, ಇಂಗ್ಲೆಂಡ್, ಸ್ಕಾಟ್ಲೆಂಡ್, ಫ್ರಾನ್ಸ್ ಇತ್ಯಾದಿ —
1912 — ಯೂರೋಪ್ ಖಂಡದ ಉದ್ದಗಲಕ್ಕೂ —
1913 — ಸ್ಟಾಕ್‌ಹೋಂ (ಯೂರೋಪ್ಯನ್ ಕಾಂಗ್ರೆಸ್ ಅಧಿವೇಶನ.)
1914 — ಇಂಗ್ಲೆಂಡ್, ಫ್ರಾನ್ಸ್, ಸ್ಕಾಟ್ಲೆಂಡ್ ಇತ್ಯಾದಿ —
1915 — ಹಿಂದೂಸ್ಥಾನದ ಉದ್ದಗಲಕ್ಕೂ —
1919 — ಇಂಗ್ಲೆಂಡ್ ಮತ್ತು ವೇಲ್ಸ್ —
1920 — ಹಿಂದೂಸ್ಥಾನದಲ್ಲಿ —
1921 — ಯೂರೋಪ್ ಖಂಡದಲ್ಲಿ, ಪ್ಯಾರಿಸ್‌ನಲ್ಲಿ ತತ್ವಜ್ಞಾನ (Theosophy) ಸಂಸ್ಥೆಯ ಮೊದಲನೇ ವಿಶ್ವ ಸಮ್ಮೇಳನ —.
1922 — ಶ್ರೀಲಂಕಾ ಮತ್ತು ಆಸ್ಟ್ರೇಲಿಯಾ —
1924 — ವ್ಯಾಂಬರ್ಗ್‌ನಲ್ಲಿ ಜರ್ಮನ್ ತತ್ವಜ್ಞಾನ ಸಮ್ಮೇಳನ, ಆರ್ನಹೆಮ್‌ನಲ್ಲಿ ವಿಶ್ವ ತತ್ವಜ್ಞಾನ ಸಮ್ಮೇಳನ ಮತ್ತು ಸ್ಕಾಟ್ಲೆಂಡ್, ಇಂಗ್ಲೆಂಡ್ ಇತ್ಯಾದಿ ಸ್ಥಳಗಳಲ್ಲಿ —
1925 — ಇಂಗ್ಲೆಂಡ್ ಮತ್ತು ಉಮ್ಮೇನ್ (Ommen) —.
1926 — ಸ್ಕಾಟ್ಲೆಂಡಿನಲ್ಲಿ ಧರ್ಮ ಸಮ್ಮೇಳನ; ಹಾಲೆಂಡಿನಲ್ಲಿ; ಅಮೇರಿಕಾ (ಶಿಕಾಗೋದಲ್ಲಿ ಧರ್ಮ ಸಮ್ಮೇಳನ) ಓಜಾಯ್ (Ojai)
1927 — ಇಂಗ್ಲೆಂಡಿನಲ್ಲಿ ಧರ್ಮ ಸಮ್ಮೇಳನ; ಸ್ಕಾಟ್ಲೆಂಡ್,

ಹಾಲೆಂಡ್, ವಿಯೆನ್ನಾ, ಬುಡಾಪೆಸ್ಟ್ ಮತ್ತಿತರ ಯೂರೋಪಿಯನ್ ನಗರಗಳಲ್ಲಿ; ಪ್ರಾಗ್, ಪ್ಯಾರಿಸ್, ಲಂಡನ್, ವೇಲ್ಸ್;

1928 — ಇಂಗ್ಲೆಂಡ್ - (ಲಂಡನ್, ಮ್ಯಾಂಚೆಸ್ಟರ್ ಇತ್ಯಾದಿ)

1929 — ಇಂಗ್ಲೆಂಡ್, ಬುಡಾಪೆಸ್ಟ್‌ನಲ್ಲಿ ಧರ್ಮ ಸಮ್ಮೇಳನ; ಡಬ್ಲಿನ್, ಬೆಲ್‌ಫಾಸ್ಟ್, ಬ್ರಿಸ್ಟಲ್ ಇತ್ಯಾದಿ; ಅಮೇರಿಕಾ, ಚಿಕಾಗೋ ಧರ್ಮ ಸಮ್ಮೇಳನ. (ಅಮೇರಿಕದಲ್ಲಿದ್ದಾಗಲೇ ಕೆನಡಾದಲ್ಲೂ ಸಹ ಪ್ರವಾಸ.)

1930 — ಇಂಗ್ಲೆಂಡ್ ಮತ್ತು ಜಿನೀವಾ ಧರ್ಮ ಸಮ್ಮೇಳನ—

ಸಾಮಾನ್ಯವಾಗಿ ಪ್ರಯಾಣಿಕರು ಸ್ಥಳದಿಂದ ಸ್ಥಳಕ್ಕೆ ಪ್ರಯಾಣ ಮಾಡುವಾಗ ಪಡೆಯುವ ದೈಹಿಕ ಆಯಾಸವನ್ನು ಹೊರತು ಅವಳು ಹೀಗೆ ನಿರಂತರ ಪ್ರಯಾಣ ಬೆಳೆಸಲು ಕಾರಣವೆಂದರೆ ಅವಳು ಪ್ರಯಾಣವನ್ನು ಹಗುರವಾಗಿ ಕಾಣುತ್ತಿದ್ದುದೇ ಆಗಿದೆ. ರೈಲು, ಹಡಗು ಮತ್ತು ವಿಮಾನಗಳಲ್ಲಿ ಅವಳು ಇತರರನ್ನು ಸದಾ ಸಂತೋಷಪಡಿಸುತ್ತಾ ಹಸನ್ಮುಖಿಯಾಗಿಯೇ ಇರುತ್ತಿದ್ದಳು. ಅದರಲ್ಲೂ ವಿಮಾನ ಪ್ರಯಾಣವು ಶೀಘ್ರವಾಗಿ ಮತ್ತು ಅಲ್ಪ ಸಮಯದಲ್ಲಿ ಕೊಂಡೊಯ್ಯುವುದರಿಂದಲೂ ಗಗನಾಂಗಣದ ಉನ್ನತಿಯಲ್ಲಿ ಅವಳ ಮನಸ್ಸು ಅಷ್ಟೇ ಉನ್ನತವಾಗಿ ಮತ್ತು ಆಹ್ಲಾದಕರವಾಗಿರುವ ಸನ್ನಿವೇಶದ ನಿಮಿತ್ತವಾಗಿಯೂ ಅವಳು ಇನ್ನಷ್ಟು ಸಂತೋಷಪಡುತ್ತಿದ್ದಳು. ಮುಖ್ಯವಾಗಿ ಹೇಳುವುದಾದರೆ ಅವಳು ಉತ್ತುಂಗತೆಯ ಮತ್ತು ಸ್ವಾತಂತ್ರ್ಯ ಮನೋಭಾವದ ಪ್ರತೀಕವಾಗಿದ್ದಳು. ವೈಯಕ್ತಿಕವಾಗಿ ಅವಳು ಮಾನವಗಣದಿಂದ ಬೇರ್ಪಟ್ಟು ಉನ್ನತ ಸ್ಥಾನವನ್ನೇ ಪಡೆದಿದ್ದಳು. ತುಲನಾತ್ಮಕವಾಗಿ ಅವಳು ಬರೀ ಐದು ಅಡಿ ಎತ್ತರ ಮಾತ್ರವಾಗಿದ್ದರೂ ಅವಳು ದೊಡ್ಡ ಸಭೆಗಳಲ್ಲಿ ಭಾಷಣ ಮಾಡಲು ನಿಂತಾಗ ಅವಳು ಎತ್ತರವಾಗಿಯೇ ಕಾಣುತ್ತಿದ್ದಳು; ಮತ್ತು ಅವಳು ಸಭಾಂಗಣವನ್ನು ಹೊಕ್ಕಾಗ ಅಲ್ಲಿದ್ದವರೆಲ್ಲರೂ ಅವಳಿಗಿಂತ ಚಿಕ್ಕವರಾಗಿಯೇ ತೋರುತ್ತಿದ್ದರು. ತನ್ನ ಮೊಣಕಾಲುದ್ದಕ್ಕೂ ಹಾಕಿದ ಭಾರತೀಯ ಬಿಳಿ ಸೀರೆ, ಬಿಳಿಕೂದಲಿನಿಂದಾವೃತವಾದ ಅವಳ ದೊಡ್ಡ ಗಾತ್ರದ ತಲೆಯಿಂದ ಅವಳು ಶೋಭಾಯಮಾನವಾದ ವ್ಯಕ್ತಿತ್ವವನ್ನು ತಳೆದು ಅಂತೆಯೇ ಚಿತ್ರಿಸಿ ಕಂಬಿಗಳಿಂದಾವೃತವಾದ ಲಂಡನ್ನಿನ Queen's Hall ಸಭಾಮಂಟಪವನ್ನು ಪ್ರವೇಶಿಸಿದಾಗ ಅವಳು ಎತ್ತರವಾಗಿಯೂ ಪ್ರತಿಭಾಸಂಪನ್ನಳಾಗಿಯೂ ತೋರುತ್ತಿದ್ದಳು. ಬಹುಶಃ ಇಂಥ ಸಂದರ್ಭಗಳಲ್ಲಿ ಅವಳ ದೈಹಿಕ ಗಾತ್ರವನ್ನು ಮೀರಿದ ಆಧ್ಯಾತ್ಮಿಕ ಉನ್ನತಿಯು ಅವಳನ್ನು ಇನ್ನಷ್ಟು ಗಂಭೀರವಾದ ವ್ಯಕ್ತಿತ್ವಕ್ಕೇರಿಸುತ್ತಿತ್ತೆಂದೆನ್ನಬಹುದು.

ಭಾರತದ ಅಂದಿನ ರೈಲು ಡಬ್ಬಿಗಳಲ್ಲಿ ಐದು ಯಾ ಆರು ಜನಕ್ಕೆ ಪ್ರತ್ಯೇಕ ಸ್ಥಳವೀಯುತ್ತಿದ್ದುದರಿಂದ ಅನಿ ಬೆಸೆಂಟಳು ತನ್ನ ಗೆಳೆಯರ ತಂಡದೊಡನೆ ದೇಶವೆಲ್ಲಾ ಪ್ರಯಾಣ ಬೆಳೆಸುತ್ತ

ತಿದ್ದಳು. ರಾತ್ರಿ ಬೇಗನೆ ಮಲಗುವುದು ಮತ್ತು ಬೆಳಿಗ್ಗೆ ಇತರರು ನಿದ್ರಿಸು ತ್ತಿದ್ದಂತೆಯೇ ಏಳುತ್ತ ಎಲ್ಲರಿಗೂ ಮುಂಚೆಯೇ ಏಳುವುದು ಅವಳ ನಿತ್ಯದ ಅಭ್ಯಾಸವಾಗಿತ್ತು. ಆಂದಿನ ರೈಲುಗಳಲ್ಲಿ ಹೆಚ್ಚು ಸೌಕರ್ಯಗಳಿರುತ್ತಿಲ್ಲವಾದರೂ ಬೆಳಿಗ್ಗೆ ಅವಳು ತನ್ನ ಸ್ನಾನವನ್ನು ಮುಗಿಸಿ ಇತರರಿಗೂ ಕಾಫಿಯನ್ನು ತಯಾರಿಸುತ್ತಿದ್ದಳು. ಕಾಫಿ ಪಾನಕವನ್ನು ತಯಾರಿಸುವುದರಲ್ಲಿ ಅವಳು ದಕ್ಷತೆಯುಳ್ಳವಳಾಗಿದ್ದಳು. ಇತರರು ಎದ್ದು ಅವರ ಶೌಚ ಕ್ರಿಯೆಯನ್ನು ನಡೆಸುವಾಗ ಆನಿ ಬಿಸಿಬಟ್ಟಲು ಹೀರತೀಯ ರೀತಿಯಲ್ಲಿ ಅಟ್ಟಿಗಾಲಿನಲ್ಲಿ ಕುಳಿತು ವಾದರೂ ಬರೆಯುವಳು; ಅಥವಾ ಹೊರಗಿನ ನಿಸರ್ಗ ದೃಶ್ಯವನ್ನು ನೋಡುವಳು. ರೈಲಿನಲ್ಲಿಯೇ ಬರೆಯುವುದರಲ್ಲಿ ಅವಳು ನಿಷ್ಣಾತೆಯಾಗಿದ್ದಳು. ಎಡಗೈಯಲ್ಲಿ ಕಾಗದವನ್ನು ಗಟ್ಟಿಯಾಗಿ ಹಿಡಿದು ಬಲಗೈಯಿಂದ ನೇರವಾಗಿ ಬರೆಯುವಳು, ನಿಧಾನವಾದರೂ ಅವಳ ಬರವಣಿಗೆಯು ಉರುಟಾಗಿಯೂ ಚೊಕ್ಕದಾಗಿಯೂ ಇರುತ್ತಿದ್ದಿತು. ಅವಳ ಲೇಖನಿಯು ಬಹು ದಿಟ್ಟವಾಗಿ ಮತ್ತು ಭಾವಪೂರ್ಣವಾಗಿ ಸ್ಫುರಿಸುತ್ತಿತ್ತಲ್ಲದೆ ಅವಳ ಬರಹದಲ್ಲಿ ಅನಾಗರಿಕತೆಗೆ ಎಡೆಯಿಲ್ಲದೆ ಪ್ರತಿಯೊಂದು ಶಬ್ದವೂ ಅರ್ಥವತ್ತಾಗಿ ಮತ್ತು ಉದ್ದೇಶಪೂರ್ಣವಾಗಿಯೇ ಇರುತ್ತಿದ್ದಿತು. ಅವಳು ಯಾವ ಪತ್ರವನ್ನು "ನಾನು ನಿನ್ನ ಅತೀ ವಿಧೇಯಳಾದ ಸೇವಕಿ" ಎಂಬುದಾಗಿ ಬರೆದು ಕೊನೆಗೊಳಿಸಿದ್ದೇ ಇಲ್ಲ, ಏಕೆಂದರೆ ಅವಳು ಈ ಭೂಮಿಯಲ್ಲಿ ಯಾರಿಗೂ ವಿಧೇಯಳಾಗಿರಲಿಲ್ಲ. ಆ ರೀತಿ ಅಭಿಪ್ರಾಯವನ್ನು ಅವಳು ವ್ಯಕ್ತಪಡಿಸುತ್ತಲೂ ಇರಲಿಲ್ಲ, ಕೇವಲ ಬಂಧು ನಿಯಮವನ್ನು ಪಾಲಿಸಲಿಕ್ಕಲ್ಲದೆ ಅವಳು ಪದ್ಧತಿಗಳನ್ನನುಸರಿಸಿದ್ದೇ ಇಲ್ಲ, ಕಾರ್ಯತಃ ಯೋಗ್ಯವಾದುದನ್ನು ಮಾತ್ರ ಅವಳು ನಡೆಸುತ್ತಿದ್ದಳು.

ಪ್ರಯಾಣ ಮಾಡುವಾಗ ಅವಳೊಡನೆ ಇರುತ್ತಿದ್ದ ಎಲ್ಲರಿಗೂ ಅವಳು ಕುಡಿಯಲಿಕ್ಕೆ ಕಾಫಿಯನ್ನು ತಯಾರಿಸುತ್ತಿದ್ದುದು ಅವಳು ಅನುಸರಿಸಿದ ಒಂದು ವಿಶಿಷ್ಟತೆಯಾಗಿದೆ. ತುಂಬಾ ಅನುಭವಶಾಲಿ ಪ್ರಯಾಣಿಕಳಾಗಿದ್ದುದರಿಂದ ಅವಳು ತೆಗೆದುಕೊಳ್ಳುತ್ತಿದ್ದ ಸಾಮಾನು ಸಹ ಇತರರ ಅಧೀನದಲ್ಲಿದ್ದಾಗಲೂ ಅದು ಹಾಳಾಗಿ ಹೋಗದಂತೆ ನೋಡಿಕೊಳ್ಳುತ್ತಿದ್ದಳು. ಅವಳನ್ನು ಸ್ವಾಗತಿಸಲಿಕ್ಕೆ ಬಂದರಕ್ಕೆ, ರೈಲು ಯಾ ವಿಮಾನ ನಿಲ್ದಾಣಕ್ಕೆ ಬರುತ್ತಿದ್ದ ಗೆಳೆಯರು ಅವಳ ಸೇವೆಯನ್ನು ಮಾಡಲು ಕಾತರರಾಗಿದ್ದಾಗಲೂ ಅವಳ ಅಭ್ಯಾಸ ಮಾತ್ರ ಅವಳ ವಸ್ತುಗಳನ್ನು ಅವಳಾಗಿಯೇ ನೋಡಿಕೊಳ್ಳುವುದೇ ಆಗಿತ್ತು. ಯಾರಾದರೂ ಅವಳ ಕಟ್ಟು ಮೂಟೆಗಳನ್ನು ಹೊತ್ತುಕೊಂಡಾಗಲೂ ಅವಳು ಹೋಗುವ ಸ್ಥಳಕ್ಕೆ ಅವಳು ಕಾರನ್ನು ಹತ್ತುವಾಗಲೂ ಅವಳ ಗಮನವೆಲ್ಲವೂ ತನ್ನ ಮೂಟೆಗಳನ್ನು ಗಾಡಿಯೊಳಗೆ ಹಾಕಿಸುತ್ತಿದ್ದಳು.

ಆನಿಯು ಒಳ್ಳೆಯ ಸಮಯದ ಪ್ರಯಾಣಿಕಳಾಗಿರಲಿಲ್ಲ.

ಹಡಗಿನಲ್ಲಿ ತನ್ನ ಗೂಡಾರದೊಳಗಿಂದ ಹೊರಗೆ ಬರಲು ದಿನಗಳೇ ಕಳೆದು ಹೋಗುತ್ತಿದ್ದುವು. ಬೆಳಿಗ್ಗೆ ವೇಳೆಯಲ್ಲಿ ಅಲ್ಲದೆ ಸಮುದ್ರವು ಶಾಂತವಾಗಿದ್ದಾಗಲೂ ಅವಳು ಹಡಗಿನ ಅಂತಸ್ಸಿನಲ್ಲಿ ಬಹು ಸಮಯ ಇರುತ್ತಿರಲಿಲ್ಲ. ಹಡಗಿನ ಸಂಚಾಲಕರು ಅವಳನ್ನು ತತ್ವಜ್ಞಾನ (Theosophy) ವಿಷಯವಾಗಿ ಭಾಷಣವನ್ನು ಕೊಡಲು ಹಲವು ಬಾರಿ ಕೇಳಿಕೊಂಡಾಗ್ಯೂ ಅವಳು ತನ್ನ ಸ್ವಾರಸ್ಯವಾದ ಮಾತುಗಳಿಂದ ಇತರ ಪ್ರಯಾಣಿಕರನ್ನೆಲ್ಲ ಸಂತೋಷಗೊಳಿಸುತ್ತಿದ್ದಳು.

ಅನಿ ಬೆಸೆಂಟ್ ಇವಳು ಸಂದರ್ಶಿಸಿದ ದೇಶಗಳ ಆಚಾರ ಪದ್ಧತಿಯನ್ನು ಆಳವಾಗಿ ಪರಿಶೀಲಿಸಿ ತಿಳಿಯುವುದರಲ್ಲಿ ಅವಳು ಅಪಾರ ಸಮರ್ಥಳಾಗಿದ್ದಳು. ಹೋದೆಡೆಯಲ್ಲೆಲ್ಲ ತನ್ನ ಚಟುವಟಿಕೆಯಲ್ಲಿ ಉತ್ಸಾಹವನ್ನು ಹುಟ್ಟಿಸಬೇಕಾದರೆ ಅದು ಅಲ್ಲಿಯ ಜನತೆಯ ಸತ್ಯವನ್ನು ಅವಳು ಅರಿತುಕೊಂಡುದ್ದರಿಂದಲೇ ಆಗುತ್ತ. ಬೇರೆ ಬೇರೆ ದೇಶಗಳ ಜನರ ಬೇರೆ ಬೇಡಿಕೆಗಳನ್ನು ಅಭ್ಯಾಸಿಸಿ ಅವನ್ನು ಅರಿತು ಅದಕ್ಕೆ ತಕ್ಕಂತೆ ಸಲಹೆಗಳನ್ನು ಬಹು ಆತ್ಮೀಯತೆಯಿಂದ ನೀಡುತ್ತಿದ್ದಳು. ಅವಳು ಯಾವ ದೇಶದಲ್ಲೂ ವಿದೇಶೀಯಳೆಂದೆನಿಸಿಕೊಳ್ಳುತ್ತಿರಲಿಲ್ಲ. ಹೋದೆಡೆಯಲ್ಲೆಲ್ಲ ಅವಳು ಎಲ್ಲರ ಗೆಳತಿಯಂತೆಯೇ ಇದ್ದಳು. ಆದರೆ ಅವಳು ಸಹೃದಯಳಾದ ಗೆಳತಿಯಾಗಿದ್ದಳು, ತಾನು ಜನಪ್ರಿಯತೆಯನ್ನು ಗಳಿಸಿಕೊಳ್ಳುವೆನೆಂಬುದನ್ನು ಎಣಿಸಿದೆ ತನ್ನ ಮನಸ್ಸಿಗೆ ತೋರಿದನ್ನು ಹೇಳುವುದಕ್ಕೆ ಅವಳು ಅಂಜುತ್ತಿರಲಿಲ್ಲ. ವಿದೇಶೀಯರಿಂದ ಜನರು ಕಠೋಕ್ತಿಗಳನ್ನು ಸಹಿಸುವುದು ಕಠಿಣವಾಗಿ ವಿವಿಧ ದೇಶಗಳ ಜನರು ಮನನೊಂದುಕೊಳ್ಳುವರೆಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆಯೆಂಬುದನ್ನು ಅಂತರಾಷ್ಟ್ರೀಯ ಭಾಷಣಕಾರರು ಚೆನ್ನಾಗಿ ತಿಳಿದಿದ್ದಾರೆ. ಕೆಲವು ಭಾಷಣಕಾರರು ಸೂಕ್ಷ್ಮದರ್ಶಿಗಳು, ಕೆಲವರು ಅಹಂಭಾವಿಗಳು, ಅದೇ ರೀತಿ ಜನವೂ ಸಹ; ವಿಷಯಗಳನ್ನು ತಿಳಿಯುವುದರಲ್ಲಿ ಅಭಿರುಚಿಯುಳ್ಳವರು; ಅನಿ ಬೆಸೆಂಟ್ ಇವಳಿಗೆ ಇದೆಲ್ಲ ಚೆನ್ನಾಗಿ ತಿಳಿದಿತ್ತು. ಅವಳಾದರೋ ಯಾರ ಮನಸ್ಸನ್ನು ನೋಯಿಸದೆ ಇದ್ದರೂ ಸತ್ಯವನ್ನು ಹೇಳದೆಯೆ ಇದ್ದುದಿಲ್ಲ. ಬುದ್ಧನ ಸೂತ್ರವನ್ನು ಅನುಸರಿಸಿ "ತನ್ನ ಆತ್ಮಸಾಕ್ಷಿಗನುಗುಣವಾಗಿ ಸಾಧ್ಯವಾದಷ್ಟು ಸತ್ಯವನ್ನು ಹೇಳುತ್ತಲೇ ಬೇಕು" ಎಂಬ ವಿಧಿಯನ್ನು ನಿರಂತರ ಪಾಲಿಸಿದಳು.

ಅವಳ ಪ್ರಯಾಣದ ಪಟ್ಟಿಯು ಸೂಚಿಸುವಂತೆ ಅವಳು ನಿಜಕ್ಕೂ ಅಂತರಾಷ್ಟ್ರೀಯ ವ್ಯಕ್ತಿಯಾಗಿದ್ದಳು. ದಕ್ಷಿಣ ಆಫ್ರಿಕಾ, ರಷ್ಯಾ, ಐರ್ಲ್ಯಾಂಡ್, ದಕ್ಷಿಣ ಅಮೇರಿಕಾ ಖಂಡ, ಆಫ್ರಿಕಾ, ಫಿಲಿಪೈನ್ಸ್, ಸ್ಪೇಯಿನ್, ಗ್ರೀಸ್ ಮತ್ತು ಪೂರ್ವ ಏಷ್ಯಾದ ದೇಶಗಳನ್ನು ಅವಳು ಹಿಮ್ಮೆ ಸಹ ಸಂದರ್ಶಿಸುವ ಸಂದರ್ಭವೊದಗಲಿಲ್ಲ.

ಆನಿ ಬೆಸೆಂಟ್ ಇವಳು ಫ್ರಾನ್ಸಿನಲ್ಲಿ ಯಾವಾಗಲೂ ಫ್ರೆಂಚ್‌ನಲ್ಲಿಯೇ ಮಾತಾಡುತ್ತಿದ್ದಳು. ಗ್ಯಾರ್ಡೋನ ಬ್ರೂನೋನ (Giordano Bruno) ಜನ್ಮವನ್ನಿತ್ತ ಬಂಧುವರ್ಗದಿಂದ ನಂಬಿದ್ದ ಅವಳು "ಆಧುನಿಕ ಜಗತ್ತಿಗೆ ಗ್ಯಾರ್ಡೋನ ಬ್ರೂನೋನ ಸಂದೇಶ" ಎಂಬುದಾಗಿ 1911ರಲ್ಲಿ ಸೋರ್ಬೋನ್‌ನಲ್ಲಿ ಅವಳು ಕೊಟ್ಟ ಅಮೋಘ ಭಾಷಣವು ಅವಳು ಕಡೆದ ಮಹತ್ತಾದ ಶಿಲುಬೆಗಳಲ್ಲಿ ಒಂದಾಗಿತ್ತು. ಸೋರ್ಬೋನ್ ಫ್ರಾನ್ಸಿನ ಪ್ರಾಚೀನ ಪ್ಯಾರಿಸ್ ವಿಶ್ವವಿದ್ಯಾಲಯದಲ್ಲಿ 4000 ಜನರು ಕೂರಬಹುದಾದಷ್ಟು ವಿಶಾಲವಾದ ಕೇಂದ್ರ ಹಜಾರವಾಗಿದೆ. ಹಿಂದೆ ಯಾರೂ ಇಷ್ಟು ವಿವರಣಾತ್ಮಕವಾಗಿ ಗ್ಯಾರ್ಡೋನ ಬ್ರೂನೋ ಇವನ ಜೀವನ ಸಂದೇಶವನ್ನು ಕುರಿತು ಹೇಳದೇ ಇದ್ದಾಗ ಆನಿ ಬೆಸೆಂಟಳ ಆ ಭಾಷಣವನ್ನು ಕೇಳಲು ಮತ್ತು ಸೋರ್ಬೋನ್‌ನಲ್ಲಿ ಸ್ಥಳವನ್ನು ಪಡೆಯಲು ನೂರಾರು ಮಂದಿ ಪ್ರಯತ್ನಿಸಿ ಜಯಪ್ರದರಾಗದೆಯೇ ಹೋದರು. ಈ ಸೋರ್ಬೋನ್ ಭಾಷಣವು ಅವಳು ತತ್ವಜ್ಞಾನ (Theosophy) ಸಂಸ್ಥೆಯ ಅಧ್ಯಕ್ಷೆಯಾಗಿ ಮಾಡಿದ ಭಾಷಣಗಳಲ್ಲಿ ಪ್ರಖ್ಯಾತವಾದುದಾಗಿತ್ತಲ್ಲದೆ ತತ್ವಜ್ಞಾನ ಪ್ರಚಾರಕ್ಕೆ ಅದು ಕಲ್ಪವೃಕ್ಷವಾಗಿತ್ತು. ಅದೇ ರೀತಿ ಆನಿ ಬೆಸೆಂಟಳು ತನ್ನ ಇಪ್ಪತ್ತೈದು ವರ್ಷಗಳ ಸಾರ್ವಜನಿಕ ಜೀವನವನ್ನು ಮುಗಿಸಿದುದರ ಸಂಕೇತವಾಗಿ ನಡೆಸಿದ ಹಲವು ಪ್ರದರ್ಶನೋತ್ಸವಗಳೂ ಸ್ಮರಣೀಯ ಘಟನೆಗಳಾಗಿದ್ದುವು. ಮೊದಲನೇ ಅಂಥ ಪ್ರದರ್ಶನವು ಲೋಕದ ಅಂದಿನ ಗ್ರಂಥ ವಿಚಾರಗಳ ಮೇಲೆ ಹಲವು ಬಾರಿ ಅವಳು ಭಾಷಣಗಳನ್ನು ಕೊಟ್ಟ ಲಂಡನ್ನಿನ Queen's Hall ನಲ್ಲಿ ನಡೆಯಿತು. ಅನಂತರ ಎರಡನೇ ಉತ್ಸವವು ಮದ್ರಾಸಿನಲ್ಲೂ ಮೂರನೆಯದು ಬೊಂಬಾಯಿಯಲ್ಲೂ ನಡೆದುವು. ಈ ಎಲ್ಲಾ ಸಂದರ್ಭಗಳಲ್ಲಿ ನೆರೆದಿದ್ದ ಜನಸ್ತೋಮವು ಅವಳನ್ನು ಎಷ್ಟು ಉತ್ಸಾಹದಿಂದ, ಭಕ್ತಿಯಿಂದ, ಹಾರ್ದಿಕ ಮಮತೆಯಿಂದ ಮತ್ತು ಕೃತಜ್ಞತಾಪೂರ್ವಕವಾಗಿ ಅವಳನ್ನು ಕೊಂಡಾಡಿತು ಎಂಬುದನ್ನು ಇಲ್ಲಿ ವಿವರಿಸಲು ಅಸಾಧ್ಯವಾಗಿದೆ. ಆನಿ ಬೆಸೆಂಟಳು ತನ್ನ ಹಿಂದಿನ ಜನ್ಮಗಳಲ್ಲಿ ಏನೇ ಆಗಿರಲಿ, ಇದೀಗ ೧೯ನೇ ಮತ್ತು ೨೦ನೇ ಶತಮಾನಗಳ ಪ್ರಗತಿಗಾಮಿಗಳ ತಂಡದಲ್ಲಿ ಚಿರಕಾಲ ನೆನೆಸಲ್ಪಡುವವರಲ್ಲಿ ಈ ವೀರನಾರಿಯಾದ ಆನಿಯು ಪ್ರಸಿದ್ಧಳೆಂದು ಜನಜನಿತಳಾದಳು.

ತನ್ನ ಸತತ ಮುತ್ತಿದ್ದ ಜನವು ಹಿಂದೆಯೇ ನಿರ್ಧರಿಸಲಾದ ಗುರಿಯನ್ನು ತಲುಪಲು ತನ್ನೊಡನೆ (ಸಹಚರರು, ಇದ್ದ ಜತೆಗಾರರು, ಎಂಬಿತ್ಯಾದಿ) ನಡೆಯಬೇಕೆಂದು ಆನಿ ಬೆಸೆಂಟಳು ಇಚ್ಛಿಸಿದ್ದಳು. ಅವಳು ಯಾರನ್ನೂ ಸಂದೇಹದಿಂದ ನೋಡಲಿಲ್ಲ; ಇತರರನ್ನು ಅವಳು ಸಹೃದಯತೆಯಿಂದ ಅರಿಯಬಲ್ಲಳು; ಅದರಿಂದ ಯಾರು ಏನೇ ಕಾರಣಗಳಿಂದ ಕ್ಷಮಿಸಲಾಗದೆ ಇದ್ದರೋ ಅಂತವರು ಹಿಂದುಳಿಯಬೇಕಾಗಿತ್ತು; ಹಾಗೆ ಜೀವನ ಸಾರ್ಥಕವಾಗಿ ನಡೆಯಲಾಗದವರ ಮೇಲೆ ಅವಳು ತಪ್ಪು ಹೊರಿಸಿದ್ದು ಇಲ್ಲ. ಹೀಗೂ ಆನಿಯು ಅಂಧವಿಶ್ವಾಸಗಳನ್ನು ಗಮನಿಸದೆಯೆ

ತಾನು ಸಲ್ಲಿಸಬೇಕಾದ ಸೇವೆಯನ್ನು ತನ್ನ ಜವಾಬ್ದಾರಿಕೆಯನ್ನರಿತು ನಿಷ್ಠೆಯಿಂದ ನಡೆಸುತ್ತಿದ್ದಳು. ತನ್ನ ಕೆಲಸದಲ್ಲಿ ಕಾಲಕ್ಕೆ ಸರಿಯಾಗಿ ತಾನು ನಿಮಿಷಗಳನ್ನು ನಷ್ಟಪಡಿಸದ ದಕ್ಷಳಾಗಿರುವಳು. ತಾನು ಸರಿಯೆಂದು ಕಂಡುದನ್ನು ಮಾಡುವುದಕ್ಕೆ ತೊಂದರೆಯುಂಟುಮಾಡಲು ಅವಳು ಯಾರನ್ನೂ ಬಿಡುತ್ತಿಲ್ಲ. ಹಿಂದಿನ ಸಂದರ್ಭದಲ್ಲಿ ಅವಳಿಂದ ಹಿಂದಿನ ಕಾರ್ಯವನ್ನು ಸಾಧಿಸಿಕೊಳ್ಳಲು ಪ್ರಯತ್ನಿಸಿದ ಅವಳ ಹಿರಿಯ ಶಿಷ್ಯನಿಗೆ ಅವಳು ಏನು ಹೇಳಿದ್ದಳೆಂಬುದು ನಿನಗೆ ಚೆನ್ನಾಗಿ ನೆನಪಿದೆ. ಅವಳಿಗೆ ಅವನು ತುಂಬಾ ಬೇಕಾದವನಾಗಿದ್ದರೂ ಕರ್ತವ್ಯವು ಅವಳಿಗೆ ಎಲ್ಲದಕ್ಕಿಂತಲೂ ಪ್ರಿಯತಮವಾಗಿತ್ತು. ಹೆಚ್ಚೇಕೆ,– ಅವಳಿಗೆ ಪ್ರಿಯರಾದವರು ಬಹು ಜನವಿದ್ದರು, ಅವಳು ಬಹು ಹಾರ್ದಿಕ ಹಾಗೂ ವಿಶ್ವಾಸಪೂರ್ಣವಾದ ಗೆಳೆತನವನ್ನು ಹಲವೆಡೆಯಿಂದ ಪಡೆದವಳಾಗಿದ್ದಳು. ಆದರೆ ಯಾವಾಗಲೂ ಕರ್ತವ್ಯವೇ ಅವಳಿಗೆ ಮೇಲಾಗಿದ್ದಿತು. ತನಗೆ ಪ್ರಾಮುಖ್ಯವಾದ ಕರ್ತವ್ಯದ ಪಾಲನೆಯಲ್ಲಿ ಆತ್ಮೀಯ ಗೆಳೆತನವನ್ನು ಉಪೇಕ್ಷಿಸಿದ ಸಂದರ್ಭಗಳು ಹಲವು ಇವೆ. ಹಿಂದೊಂದು ವೇಳೆ ಅಂಥ ಪ್ರಸಂಗದಲ್ಲಿ ಬಿದ್ದಂಥವರು ಸಂದರ್ಭಾವಶ್ಯಕತೆಗಳನ್ನರಿಯಲು ಅಸಮರ್ಥರಾದರು, ಅಲ್ಪಮತಿಗಳಾಗಿರುತ್ತಿದ್ದರು. ಪರಿಣಾಮವಾಗಿ ಅವರ ಗೆಳೆತನದ ಕಟ್ಟು ಸಡಿಲುಹೋಗುತ್ತಿತ್ತು. ಆದರೆ ಅಂಥದ್ದು ಆಕೆಯ ಕಡೆಯಿಂದ ಎಂದೂ ಆದುದಿಲ್ಲ; ಏಕೆಂದರೆ ಅವಳು ಗೆಳೆತನಕ್ಕೆ ಯಾವಾಗಲೂ ಮಾರುಹೋಗುತ್ತಿದ್ದಳು. ಆದರೆ ಅನ್ಯೋನ್ಯ ವಿಶ್ವಾಸ ಮತ್ತು ಸಹಾನುಭೂತಿಗಳಿಂದ ಕೂಡಿದ ಗೆಳೆತನವು ಯಾವಾಗಲೂ ಮತ್ತು ಇತರರಿಗೂ ಅವರ್ಣನೀಯ ಆನಂದವನ್ನೀಯುತ್ತಿತ್ತು.

ಮೊದಲನೇ ಮಜಲು.

ತತ್ವಜ್ಞಾನ (Theosophy) ಸಂಸ್ಥೆಗೆ ಜೀವವಿತ್ತುದು!

ಪ್ರಪಂಚವಿಡೀ ಹಬ್ಬಿದ್ದ ಬ್ರಹ್ಮವಿದ್ಯಾ ಅಥವಾ ತತ್ವಜ್ಞಾನ ಸಂಸ್ಥೆ (Theosophical Society)ಯ ಶಾಖೆಗಳಿಗೆ ಜೀವಕಳೆಯನ್ನೀಯುವುದು ಅವಳ ಮೊದಲ ಕಾರ್ಯಕ್ರಮವಾಗಿತ್ತು. ಆನಿ ಬೆಸೆಂಟ್ ಇವಳು ಅಧ್ಯಕ್ಷೆಯಾಗಿದ್ದ ಅವಧಿಯಲ್ಲಿ ಬ್ರಹ್ಮವಿದ್ಯಾ ಸಂಸ್ಥೆಯು ಹಿಂದೆಂದೂ ಬೆಳೆಯದಿದ್ದ ಮತ್ತು ಮುಂದೆಯೂ ಕೆಲಕಾಲ ಬೆಳೆಯಲು ಸಾಧ್ಯವಿಲ್ಲದಷ್ಟು ಪ್ರಮಾಣದಲ್ಲಿ ಅಭಿವೃದ್ಧಿಗೊಂಡಿತು. ತತ್ವಜ್ಞಾನವು (Theosophy) ಪ್ರಪಂಚದ ಉದ್ದಗಲಕ್ಕೂ ಹಬ್ಬಿತು, ಮಾತ್ರವಲ್ಲ; ಅದರಲ್ಲಿ ಪ್ರತಿಪಾದಿಸಿದ ವಿಚಾರಗಳು ಸಾಮಾನ್ಯವಾಗಿ ಅಂಗೀಕಾರವಾಯಿತಲ್ಲದೆ ಆ ತತ್ವಗಳು ಹಲವೆಡೆ ಮನೆಮಾತಾಗಿ ಹರಡಿವೆ. ಹೀಗೆ ಪ್ರಪಂಚವು ತತ್ವಜ್ಞಾನದಲ್ಲಿ ಹೇಳಲ್ಪಟ್ಟ ಸೂತ್ರಗಳಿಂದ ಆವೃತವಾಗಿವೆ. ಇಂದಿಗೆ ಈ ಸಂಸ್ಥೆಯ ಸದಸ್ಯರಾಗದ ಸಹಸ್ರಾರು ಜನ ತತ್ವಜ್ಞಾನಿಗಳು (Theosophists) ವಿವಿಧ ದೇಶಗಳಲ್ಲಿ

ಹಬ್ಬುತ್ತಾರೆ. ಈ ಬ್ರಹ್ಮ ವಿದ್ಯಾ ಸಂಸ್ಥೆಯ ಸದಸ್ಯರಾಗುವುದಕ್ಕಿಂತ ಆ ಬ್ರಹ್ಮ ವಿದ್ಯಾಭಿಮಾನಿಗಳಾಗಿರುವುದೇ ಮುಖ್ಯವಾಗಿದೆ, ಇದೇ ಸತ್ಯಾನ್ವೇಷಕರಿಗೂ ಪ್ರೋತ್ಸಾಹಕವಾದ ತತ್ವಶಾಸ್ತ್ರವಾಗಿದೆ:—

ಅನಿ ಬೆಸೆಂಟ್ ಇವರು 1907ರಲ್ಲಿ ಈ ತತ್ವಜ್ಞಾನ ಸಂಸ್ಥೆಯ ಅಧ್ಯಕ್ಷ ಪದವಿಯನ್ನು ವಹಿಸಿದಂದಿನಿಂದ 1933ರಲ್ಲಿ ಅವರು ಅಧಿಕಾರದಲ್ಲಿದ್ದವರೆಗೂ ಪ್ರಾರಂಭದಿಂದಲೂ ಆ ಸಂಸ್ಥೆಯ ಬೆಳವಣಿಗೆಯು ಎಷ್ಟರಮಟ್ಟಿಗೆ ಆಗಿದೆಯೆಂದು ನೋಡುವುದು ಸ್ವಾರಸ್ಯವಾಗಿ ತೋರಬಹುದು. ಆ ವಿಷಯವಾಗಿ ಪ್ರಕಟವಾದ ಅಂಕೆ ಸಂಖ್ಯೆಗಳು ಹೀಗಿವೆ:—

ವರ್ಷ	ಸಕ್ರಿಯ ಶಾಖೆಗಳು	ಸಕ್ರಿಯ ಸದಸ್ಯರು	ವರ್ಷ	ಸಕ್ರಿಯ ಶಾಖೆಗಳು	ಸಕ್ರಿಯ ಸದಸ್ಯರು
1907—	567—	14,863	1921—	1349—	40,475
1908—	631—	15,617	1922—	1360—	39,773
1909—	698—	16,898	1923—	1369—	40,996
1910—	778—	20,356	1924—	1520—	41,492
1911—	867—	21,464	1925—	1571—	41,645
1912—	950—	23,140	1926—	1645—	43,301
1913—	952—	22,744	1927—	1679—	44,217
1914—	1,016—	24,575	1928—	1586—	45,098
1915—	991—	25,696	1929	1592—	43,625
1916—	989—	26,820	1930	1490—	39,311
1917—	1,074—	28,673	1931	1426—	36,115
1918—	896—	22,879	1932	1345—	33,267
1919—	1,194—	33,427	1933	1279—	30,836.
1920—	1,244—	36,350	—	—	—

ಈ ಸಂಸ್ಥೆಯ (Theosophical Society) ಕಾರ್ಯಭಾರವು ಹೇಗೆ ನಡೆಯುತ್ತಿತ್ತೆಂಬುದರ ವಿವರಣೆಯನ್ನರಿಯುವ ಇಚ್ಛೆಯುಳ್ಳವರು ಇದರ ಸದಸ್ಯತ್ವವನ್ನು ಹೆಚ್ಚಿಸಲು ಕೈಕೊಂಡ ಸಾಹಸವೆಷ್ಟೆಂಬುದು ಮೇಲಿನ ಅಂಕೆ ಸಂಖ್ಯೆಗಳಿಂದ ತಿಳಿಯಬಹುದು, ಇಂದಿನ ಯುದ್ಧೋತ್ತರ ಆರ್ಥಿಕ ದುಃಸ್ಥಿತಿಯ ಎದೆಯಲ್ಲಿ ಅನಿ ಬೆಸೆಂಟರ ಅಧ್ಯಕ್ಷತ್ವದ ಅವಧಿಯು ಹಲವು ವಿಧಾಯಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಯಿತೆಂದೂ ಇದರಿಂದ ವ್ಯಕ್ತವಾಗುವುದು,

ಶ್ರೀಮತಿ ಬ್ಲಾವಟ್ಸ್ಕಿ ಇವರು ತಮ್ಮ "ರಹಸ್ಯ ಸಿದ್ಧಾಂತಗಳು"— ಇದನ್ನು ಬರೆದು ಅಮೋಘ ಆದರ್ಶವನ್ನಿತ್ತಂತೆ ಅನಿ ಬೆಸೆಂಟ್ ಇವರು ಬರೆದ ಗ್ರಂಥಗಳು ಮತ್ತು ಕಿರುಹೊತ್ತಿಗೆಗಳ ಸಾಹಿತ್ಯವು ಅಪಾರವಾಗಿದೆ; ಮಾತ್ರವಲ್ಲ, ಅವು ತತ್ವಜ್ಞಾನ (Theosophy) ವನ್ನು ಕುರಿತಾಗಿ

ಬರೆದ ಮಹತ್ತಾದ ಕೃತಿಗಳೂ ಇವೆ. ಅವಳ ಕೃತಿಗಳು ಒಟ್ಟಾಗಿ 362 ರಷ್ಟಾಗಿದೆಯಲ್ಲದೆ ಹದಿನೆಂಟು ವಿವಿಧ ಬಗೆಯ ಪತ್ರಿಕೆಗಳನ್ನು ನಡೆಸಿದ್ದಾಳೆ. ಇಷ್ಟು ತ್ವರಿತ ಕೃತಿಗಳ ಲೇಖಿಕೆಯೂ ಸಂಪಾದಕಿಯೂ ಆಗಿದ್ದಾಳೆ. ಅವಳ ಕೆಲವು ಉತ್ತಮ ಗ್ರಂಥಗಳು ಸಿ. ಡಬ್ಲ್ಯು. ಲೆಡ್‌ಬೀಟರನೊಡನೆ ಕೂಡಿ ಬರೆದವುಗಳಾಗಿವೆ.

ತತ್ವಜ್ಞಾನ ಸಂಸ್ಥೆಯ ಅಧ್ಯಕ್ಷರುಗಳನ್ನು ಒಬ್ಬರು ಮೇಲೆಂದೂ ಮತ್ತೊಬ್ಬರು ಕೀಳೆಂದೂ ಬಗೆಯುವರೆಂದೂ ನಾವು ಹೇಳಲಾರೆವು; ಏಕೆಂದರೆ ಪ್ರತಿಯೊಬ್ಬರೂ ಅವರು ತತ್ವಜ್ಞಾನ ಸಂಸ್ಥೆಗೆ ಸಲ್ಲಿಸಿದ ಸೇವೆ ಮತ್ತು ಅದನ್ನು ಅಭಿವೃದ್ಧಿಗೊಳಿಸಲು ಪಟ್ಟ ಶ್ರಮವನ್ನು ಪರಿಶೀಲಿಸಿ ಆರಿಸಲ್ಪಟ್ಟವರಾಗಿದ್ದಾರೆ. ಆದರೆ ತತ್ವಜ್ಞಾನ ಸಂಸ್ಥೆಯ ಅಧ್ಯಕ್ಷರುಗಳಲ್ಲಿ ಅನಿ ಬೆಸೆಂಟ್ ಇವಳ ಹೆಸರು ಜಾಜ್ವಲ್ಯಮಾನವಾಗಿ ಗೋಚರಿಸುವುದು.

ತತ್ವಜ್ಞಾನ ಅಂತರರಾಷ್ಟ್ರೀಯ ಸಂಸ್ಥೆಯ ಅಧ್ಯಕ್ಷೆಯಾಗಿ, ಅಡೆಯಾರ್ ಕೇಂದ್ರದ ಮುಖ್ಯ ಸಂಚಾಲಿಕೆಯಾಗಿ ಹೆಚ್ಚಿನ ಜವಾಬ್ದಾರಿಕೆಯನ್ನು ಅನಿ ಬೆಸೆಂಟ್ ಇವಳು ಹೊತ್ತಾಗ ಅವಳು ದಿನೇ ದಿನೇ ಮಾತೃಸಮಾನವಾದ ಸ್ಥಾನವನ್ನು ಪಡೆಯುವಂತಾದಳು. ಅವಳು ಸಾಹಸೀ ಹೋರಾಟಗಾರ್ತಿಯೂ ಪ್ರಸಿದ್ಧವಾಗಿಯೂ ರಾಜಕಾರಣಿಯೂ ಹಿಂದೂಸ್ಥಾನದ ಸ್ವಾತಂತ್ರ್ಯ ಅವಿರತ ಹೋರಾಡಿದವಳೂ ಎಂದು ಸರ್ವಸಮಾನ್ಯಳಾದಳು. ಅವಳ ಯಾವ ವೈರಿಯೂ ನಿರೀಕ್ಷಿಸಲಾರದಷ್ಟು ಹಠವಾದಿಯಾದ ವಿರೋಧಿಯೂ ಆಗಿರುತ್ತಿದ್ದಳೆಂಬುದು ಸರ್ವವಿದಿತವಾಗಿದೆ. ನಾನು ಹಿಂದೆಯೇ ಹೇಳಿದಂತೆ ಅವಳು ಈ ಗುಣವನ್ನು ಹೆಚ್ಚು ತೋರಿಸಿ ಇತರರು ಅವಳನ್ನು ತಪ್ಪಾಗಿ ಕಂಡುದ್ದುಂಟು. ತುಳಿದ್ದ (ಪೀಡಿತ) ಜನಾಂಗದವರಿಗಾಗಿ ತಾಂಬಾರಿನವರೆಲ್ಲೂ ಬೆತ್ತರಿಯೂ ಎಡರು ತೊಂದರೆಗಳನ್ನು ಎದುರಿಸಲು ಸಮರ್ಥಳೂ ವಾದವಿವಾದಗಳಲ್ಲಿ ಆಸಕ್ತಳಾಗಿರುವವಳೂ ಯಾವ ಸಂಧಾನಕ್ಕೂ ಜಗ್ಗದೆ ಗೆಲುವನ್ನು ಆರಿಸಿ ಹೋರಾಡುತ್ತಿದ್ದವಳೂ, ಕಷ್ಟದಲ್ಲಿರುವವರಿಗೆ ಬಡವರಿಗೆ, ಮತ್ತು ದೀನರಿಗೆ ತನ್ನ ಹಾರ್ದಿಕ ದಯೆ ಮತ್ತು ಸಹಕಾರವನ್ನು ತೋರುವವಳೂ ಆಗಿ ಅವಳೊಬ್ಬ ಆದರ್ಶ (ಪವಿತ್ರ) ಮಹಿಳೆಯೆನಿಸಿ ವಿರಾಜಿಸಿದಳು.

ಇಂಥ ಗುಣಸಂಪನ್ನತೆಯಿಂದ ಕೂಡಿದ್ದ ಅನಿ ಬೆಸೆಂಟ್ ಇವಳನ್ನು ತಿಳಿದಿದ್ದ ಜನಕ್ಕೆ ಪ್ರಪಂಚದ ತತ್ವಜ್ಞಾನ (Theosophy) ಸಂಸ್ಥೆಯ ಶಾಖೆಗಳಲ್ಲಿದ್ದ ಅವಳ ಸಹೋದ್ಯೋಗಿಗಳಿಗೆ, ಶಿಷ್ಯರಿಗೆ, ಮತ್ತಿತರ ಎಲ್ಲಾ ಜನಕ್ಕೂ ಮಾರ್ಗದರ್ಶಿಗಳಾಗಿ ಅವಳೊಬ್ಬ ಸೌಜನ್ಯಶೀಲೆಯಾದ ತಾಯಿಯಂತಾದಳು. ಕಾಲಕ್ರಮೇಣವಾಗಿ ಅವಳ ಅನುಮಾನಗಳನ್ನು ಎಲ್ಲರೂ ಒಪ್ಪಿದ್ದು ಮಾತ್ರವಲ್ಲ; ಹೆಚ್ಚಾಗಿ ಅವಳನ್ನು

ಅಂತಿಮತೆ ಪರಿಗಣಿಸಲಾಗಿದರು. ಅವರ ಪ್ರಾಯವೇರಿದಂತೆ ಅವರು ಎಂದಿಗಿಂತಲೂ ಎಲ್ಲರ ತಾಯಿಯೇ ಆದರು, ಅಡೆಯಾರ್ ನಿವಾಸಿ ಸಾವಿರಾರು ಜನ ಕೆಲಸಗಾರರು ತಮ್ಮ ಭಾಷೆಯಲ್ಲಿ, "ಪೆರಿಯ ಅಮ್ಮ" ಎಂದೇ ಆದರದಿಂದ ಕರೆಯುತ್ತಿದ್ದರು, ಅಡೆಯಾರ್ ಕೇಂದ್ರದಲ್ಲಿ ಹಲವು ನಿಜವಾದ ತಾಯಂದಿರು ಇದ್ದ ಕಾರಣದಿಂದ ಆನಿಯು ಎಲ್ಲರಿಗೂ ಹಿರಿಯಮ್ಮನೇ ಆದರು.

ಅಕ್ಷರಶಃ: ಧೀರೆ ಹೋರಾಟಗಾರ್ತಿಯೂ ಮಮತೆಯ ಮಹಾ ತಾಯಿಯೂ ಆಗಿ ಬೆಳಗಿದ ಈ ಅಪೂರ್ವ ವ್ಯಕ್ತಿಯ ಈ ವ್ಯಕ್ತಿತ್ವಗಳಲ್ಲಿ ಯಾವುದನ್ನು ಹೆಚ್ಚು ಹೊತ್ತಿದ್ದಳೆಂಬುದನ್ನು ನನಗೆ ಹೇಳಲಿಕ್ಕೆ ಅಸಾಧ್ಯವಾಗಿದೆ!

ಎರಡನೇ ಮಜಲು — ಜೆ. ಕೃಷ್ಣಮೂರ್ತಿ.

ಆನಿ ಬೆಸೆಂಟ್ ಇವರು ತನ್ನ ಆತ್ಮಜ್ಞಾನ ಪ್ರಭಾವದಿಂದ ಓರ್ವ ಎಳೆ ದಕ್ಷಿಣ ಭಾರತೀಯ ಯುವಕನಾದ ಜೆ. ಕೃಷ್ಣಮೂರ್ತಿಯು ಮುಂದಕ್ಕೆ ಪ್ರಪಂಚದಲ್ಲಿ ಓರ್ವ ಯೋಗ್ಯ ಧರ್ಮಶಾಸ್ತ್ರ ಬೋಧಕನಾಗುವನೆಂದು ಎಣಿಸಿ ಅವನನ್ನು ಲೋಕಕ್ಕೆ ಪರಿಚಯ ಮಾಡಿಸಿದ್ದು ಅವರ ಕಾರ್ಯಕ್ಷೇತ್ರದ ಎರಡನೆ ಮಜಲು ಆಗಿದೆ, ಎರಡು ಸಾವಿರ ವರ್ಷಗಳಿಗೆ ಹಿಂದೆ ಕ್ರಿಸ್ತನು ಯೇಸುವನ್ನು ಬೋಧಕನಾಗಿ ಉಪಯೋಗಿಸಿದ್ದನೆಂದು ಅವರು ನಂಬಿದ್ದ ರೀತಿಯಲ್ಲಿ ಇದೀಗ ಕ್ರಿಸ್ತನೇ ಕೃಷ್ಣಮೂರ್ತಿಯನ್ನು ಅದೇ ಉದ್ದೇಶಕ್ಕಾಗಿ ಉಪಯೋಗಿಸುವನೆಂದು ಎಣಿಸಿದರು, ಪ್ರಪಂಚದ ಮಹಾಬೋಧಕನಾಗಿ ಇನ್ನೊಮ್ಮೆ ಕಾಲಕ್ಕೆ ತಕ್ಕ ಎಲ್ಲಾ ಮತ ಧರ್ಮಗಳಿಗೂ ಪ್ರಭುವೆಂದೆನಿಸುವ ಕ್ರಿಸ್ತನು ಪೂರ್ವದೇಶಗಳಲ್ಲಿ ಬೋಧಿಸತ್ವನಾದ ಮೈತ್ರೇಯ ಬುದ್ಧನೆಂದೂ ನಂಬಲಾಗಿದೆ. ಸತ್ಯವೆಂಬ ವಜ್ರದ ಕಚ್ಚಿಯ ವಿವಿಧ ಮುಖಗಳನ್ನು ತನ್ನ ಆತ್ಮಶಕ್ತಿಯ ಮೂಲಕ ಓರ್ವ ಶಿಷ್ಯನ ಮುಖಾಂತರ ಪ್ರಕಾಶಿಸಿ ಲೋಕಕ್ಕೆ ಉಪಕೃತವಾಗುವಂತೆ ಕ್ರಿಸ್ತನೇ ವಿಧಿಸಿರುವನು, ಹೀಗೆಂದು ನಂಬಿದ್ದ ಆನಿ ಮತ್ತು ಲೆಡ್‌ಬೀಟರ್ ಇವರ ನಿರ್ಣಯವೆಲ್ಲವೂ ಅಂದಿನ ಎಳೆ ಜ್ಞಾನ ಸ್ಥಿತಿಯ ಜಿಡ್ಡು ಕೃಷ್ಣಮೂರ್ತಿಯಲ್ಲಿ ಸಮಾವೇಶಗೊಳ್ಳುವಂತೆ ಪ್ರಯತ್ನಿಸುವುದರಲ್ಲಿ, ಮತ್ತು ಅದಕ್ಕೆ ತಕ್ಕ ಶಿಕ್ಷಣವನ್ನೀಯುವುದರಲ್ಲಿ 1909 ರಿಂದ ವಿನಿಯೋಗವಾಯಿತು, ಆದರೆ ಅಂದಿನ ಸಂಭವಕ್ಕೆ ಹೇಗೆ ವರ್ತಿಸಬೇಕು, ಹೇಗೆ ದೈವಿಕ ಪ್ರಭಾವವನ್ನು ಬೀರಬೇಕು, ಯಾವ ವಿಷಯವನ್ನು ಕಲಿತು ಅವನಿಗೆ ಹೇಗೆ ಬೋಧಿಸಬೇಕೆಂಬ ಅನುಭವವಿಲ್ಲದ ಕಾರಣದಿಂದ ತುಂಬಾ ತೊಂದರೆ ಪಡಬೇಕಾಯಿತು.

ಈ ಸಮಸ್ಯೆಗಳು ಮುಂದಿನ ಚಿತ್ತ ವ್ಯಾಕುಲತೆಗೆ ಎಡೆಕೊಟ್ಟಿತು ಎಂದಲ್ಲ; ಏಕೆಂದರೆ ವಿವಿಧ ಬಗೆಯ ತತ್ತ್ವ ಪ್ರತಿಪಾದನೆಗೂ ಚಿತ್ತಶುದ್ಧಿ, ಭಾವಶುದ್ಧಿ ಮತ್ತು ಉತ್ಸಾಹವಿಲ್ಲದೆ ಧರ್ಮಶಾಸ್ತ್ರದ ಎಲ್ಲಾ ಶಾಖೆಗಳಿಗೂ ತಕ್ಕ ಬೋಧನೆ ಮತ್ತು ಸೇವೆಯನ್ನು ಒದಗಿಸುವ ಅತ್ಯುತ್ಕೃಷ್ಟತೆಯು ಸೇರಬೇಕು. ಆ ಮಹಾಗುರುವಿನ (ದೇವರ) ಸ್ಫೂರ್ತಿಯು ಜಿಡ್ಡು ಕೃಷ್ಣಮೂರ್ತಿಯಲ್ಲಿ ಎಷ್ಟರ ಮಟ್ಟಿಗೆ ಪರಿಣಾಮವನ್ನುಂಟು ಮಾಡಬಲ್ಲುದೆಂದು, ಮತ್ತು ಆ ದಿವ್ಯ ಪ್ರಭಾವದ ವ್ಯಾಪಕತ್ವವು, ಎಲ್ಲಿಯ ವರೆಗೆ ಇದ್ದೀತು, ಬೋಧನೆಯಾದರೂ ಏನು, ಮಾನವ ಶಕ್ತಿಯನ್ನು ಮೀರಿದ ಸಾಹಸದಿಂದ ಪಡೆಯುವ ಆ ಮೂಲಮಂತ್ರವನ್ನು ಕೃಷ್ಣಮೂರ್ತಿಯು ಎಷ್ಟರ ಮಟ್ಟಿಗೆ ಅರಗಿಸಿಕೊಳ್ಳಬಲ್ಲನು, ಎಂದು ಆನಿಗಾಗಲೀ, ಅವಳ ಸಹೋದ್ಯೋಗಿ (ಲೆಡ್‌ಬೀಟರ್) ಗಾಗಲೀ ಹೇಳುವುದಕ್ಕೆ ಸಾಧ್ಯವಿಲ್ಲದಾಗಿತ್ತು.

ಆನಿ ಬೆಸೆಂಟ್ ಮತ್ತು ಲೆಡ್‌ಬೀಟರ್ ಇವರ ನಂಬಿಕೆ ಅಥವಾ ಭವಿಷ್ಯವಾಣಿಯನ್ನು ಎಷ್ಟರ ಮಟ್ಟಿಗೆ ನ್ಯಾಯವಾಗಿದೆಯೆಂದು ಹೇಳುವುದು ನನ್ನ ಉದ್ದೇಶವಲ್ಲ. ಅಂದು ಬರೀ ತಾತ್ಕಾಲಿಕವೇ ಎಂದು ಭಾವಿಸಿದ್ದ ಅಂದಿನ ಆ ನಿರೀಕ್ಷೆಗಿಂತ ಇಂದು ಎಷ್ಟೋ ಬೇರ್ಪಟ್ಟು ಕೃಷ್ಣಮೂರ್ತಿಯು ತನ್ನ ಜೀವನವನ್ನು ವಿಕಾಸಗೊಳಿಸಿದ್ದಾನೆ. ಅವನು ಈಗ ಬ್ರಹ್ಮವಿದ್ಯಾ (Theosophy) ಸಂಸ್ಥೆಯ ಸದಸ್ಯನಲ್ಲ. ಬ್ರಹ್ಮವಿದ್ಯಾ ಸಾಹಿತ್ಯಗಳಲ್ಲಿ ಪ್ರತಿಪಾದಿಸಲ್ಪಟ್ಟ ತತ್ತ್ವಜ್ಞಾನ ಸೂತ್ರಗಳಲ್ಲಿ ಈಗ ಶ್ರದ್ಧೆಯುಳ್ಳವನೂ ಅಲ್ಲ. ಆದರೆ ವೈಜ್ಞಾನಿಕ ಸತ್ಯವೆಂಬುದಾಗಿ ಎಲ್ಲದರಲ್ಲೂ ಒಪ್ಪಲ್ಪಟ್ಟ ಬ್ರಹ್ಮವಿದ್ಯೆ ಹಿಂದಿದೆ; ಆ ವಿದ್ಯಾಜ್ಞಾನದಲ್ಲಿ ಎಲ್ಲವೂ ಜೀವಿಸುತ್ತವೆ; ಮತ್ತು ಬೆಳೆಯುತ್ತವೆ. ಈ ತತ್ತ್ವಜ್ಞಾನವನ್ನು ಬಿತ್ತರಿಸುವುದಕ್ಕಿಂತ ಮತ್ತು ಆ ಕೆಲಸದಲ್ಲಿ ಅವರಿಗೆ ಸಹಕರಿಸುವುದಕ್ಕಿಂತ ದೊಡ್ಡ ಕಾರ್ಯವು ದೇವರಿಗೆ ಇದೆಯೆಂದು ಊಹಿಸಲು ನಿಜ ಬುದ್ಧಿವಂತರಾದ ನಮ್ರ ತಾತ್ವಿಕರಿಗೆ ಸಾಧ್ಯವಾಗದ ರೀತಿಯಲ್ಲಿ ಈ ಸೃಷ್ಟಿ ನಿಯಾಮಕನು ತನ್ನದೇ ನಿಯಮವನ್ನನುಸರಿಸಿ ವಿಶ್ವವನ್ನು ನಡೆಸುತ್ತಾನೆ. ಕೃಷ್ಣಮೂರ್ತಿಯು ಬಾಲ್ಯದಲ್ಲಿ ಬಹು ಪ್ರೀತಿಯಿಂದ ಸಲಹಲ್ಪಟ್ಟಿದ್ದನು. ಅವನ ಆ ಇಬ್ಬರು ಪೋಷಕರು (ಆನಿ ಮತ್ತು ಲೆಡ್‌ಬೀಟರ್) ಅವನು ಚಿಕ್ಕವನಿದ್ದಾಗ ಬ್ರಹ್ಮವಿದ್ಯಾ ಜ್ಞಾನವನ್ನು ಹರಡಲು ಅವನು ತಕ್ಕವನೆಂದು ನಂಬಿದ್ದರು; ಅವರ ಇಚ್ಛೆಯನ್ನು ಅವನು ಈಡೇರಿಸುವನೆಂದು ತಿಳಿದರು, ಹೇಗೂ ಅವನು ನಿಸ್ಸಂದೇಹವಾಗಿಯೂ ಜೀವನ ಸಮಸ್ಯೆಗಳನ್ನು ಆಳವಾಗಿ ಪರಿಶೀಲಿಸಿದ ಮಹಾವ್ಯಕ್ತಿಯೂ ತಾತ್ವಿಕ ವಿಷಯಗಳನ್ನು ದಿವ್ಯವಾದುವು ಎಂದೆನಿಸಿ ಆಸ್ವಾದಿಸಿದವನೂ ಸಾಂಪ್ರದಾಯಿಕ ಪರಂಪರೆಗಳನ್ನೆದುರಿಸಿದ ಅಜ್ಞಾನ, ದುಃಖ ಮತ್ತು

ಸಂದೇಹಕ್ಕೆ ಮೂಲ ಹೇತುವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ತಿಳಿದಂ
ತವನೂ ಆಗಿರುವನು. ಬ್ರಹ್ಮವಿದ್ಯಾಜ್ಞಾನ (Theosophy) ವಿಚಾರ
ಗಳ ಮೇಲೆ ಕೃಷ್ಣಮೂರ್ತಿಯು ಎಡೆಬಿಡದೆ ನಿಷ್ಠುರವಾಗಿ ಮಾ
ಡಿದ ಟೀಕೆಗಳು ಹಲವರಿಗೆ ಆಶ್ಚರ್ಯಕರವೂ ಶೋಚನೀಯವೂ
ಆಗಿ ತೋರಿದ್ದರೂ ಆನಿ ಬೆಸೆಂಟ್ ಇವಳು ಮಾತ್ರ ಅವನು ತನ್ನ
ಧ್ಯೇಯವನ್ನು ಚೆನ್ನಾಗಿ ಸಾಧಿಸುವನೆಂಬ ವಿಶ್ವಾಸದಿಂದಲೇ ಕೂಡಿ
ದ್ದಳು. ನಾನು ಹಿಂದೆಯೇ ಹೇಳಿದಂತೆ ಅವನು ಕಡೆವರೆಗೂ
ಸಾಧಿಸುವ ತನ್ನ ಸಾಧನೆಗಳ ಫಲಿತಾಂಶದಿಂದ ಮಾತ್ರ ಅವನನ್ನು ತಿ
ಳಿಯಬಹುದಲ್ಲದೆ ಈಗಲೇ ತೀರ್ಮಾನಿಸುವುದು ನನ್ನ ಕೆಲಸವಲ್ಲ.

ಮೊದಲನೇ ಮಹಾಯುದ್ಧವು ಪ್ರಾರಂಭವಾಗಿ ಕಡೆಗೆ
ಅದು ಮಿಲ್ಯಾಂತರ ಮಾನವರ ಮತ್ತು ಧನದೌಲತ್ತಿನ ವಿನಾಶದಲ್ಲಿ
ಕೊನೆಗೊಂಡಿತು. ಆನಿ ಬೆಸೆಂಟ್ ಇವಳ ಜೀವನತರಂಗದಲ್ಲಿ ಸ್ವಾಭಾ
ವಿಕವಾಗಿ ಪ್ರತಿಬಿಂಬಿಸಿತು. ಅವಳ ಆ ಮನೋದ್ವೇಗವು ತನ್ನ ಸಾಕು
ಮಕ್ಕಳ (ಕೃಷ್ಣಮೂರ್ತಿ ಮತ್ತು ನಿತ್ಯಾನಂದ) ಸಂಬಂಧವಾಗಿ ಕಾ
ನೂನು ಬದ್ಧ ವ್ಯವಹಾರಕ್ಕೆ ಅವಳನ್ನು ತಂದಿಳಿಸಿತು. ಅವಳು ಆ
ಮಕ್ಕಳ ಮೇಲೆ ಹೊತ್ತಿದ್ದ ಪೋಷಣೆಯನ್ನು ಮತ್ತು ಅವರಿಗೆ ಕೊ
ಡಲು ಏರ್ಪಡಿಸಿದ್ದ ಆ ಮೋಕ್ಷ ವಿದ್ಯೆಯ ಶಿಕ್ಷಣವನ್ನು ಇಲ್ಲದಂ
ತೆ ಮಾಡಲು ಅವರ ತಂದೆಯು ಪ್ರಯತ್ನಿಸಿದ್ದನು. ಆ ವ್ಯಾಜ್ಯವು
ಲಂಡನ್ ನ್ಯಾಯಾಲಯಗಳ ವರೆಗೂ ಹೋದಾಗ ಆನಿಯು ಆ ಬಗ್ಗೆ
ತಾನೇ ವಕಾಲತ್ತನ್ನು ನಡೆಸಿ ಜಯಪ್ರದವಾದ ವಿಷಯವನ್ನು
ಅವಳೇ ಸ್ಫುಟವಾಗಿ ತನ್ನ ಆತ್ಮಚರಿತ್ರೆಯಲ್ಲಿ ಹೇಳಿದ್ದಾಳೆ. ಮ
ದ್ರಾಸಿನ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ
ನಿಂತು ವಾದಿಸುವುದು ಅವಳಿಗೆ ತಾನೇನೂ ವ್ಯವಹಾರವನ್ನು
ಮೀರಿ ಹೋಗುತ್ತಿರುವಂತೆ ತೋರಲಿಲ್ಲ. ತನ್ನ ನಿಲುವನ್ನು ಖಚಿ
ತ ಪಡಿಸಲು ತಾನೇ ವಕಾಲತ್ತನ್ನು ವಹಿಸಿದ್ದಲ್ಲದೆ ಅತ್ಯಂತ ಗಹ
ನವಾದ ವಿಚಾರದ ಮೇಲೆ ನ್ಯಾಯಶಾಸ್ತ್ರದ ಎಲ್ಲ ವಿಧಿನಿಯ
ಮಗಳನ್ನು ಸಾಲಂಕೃತವಾಗಿ ತಿಳಿದು ಯಾವ ಶ್ರೇಷ್ಠ ವಕೀಲರ
ನ್ನೂ ಮೀರಿದ ತಜ್ಞತೆಯಿಂದ ವಾದಿಸಿ ಅವಳು ಎಲ್ಲರಲ್ಲೂ ಒಂ
ದು ಬಗೆಯ ಕೌತುಕವನ್ನು ಕೆರಳಿಸಲು ಕಾರಣಳಾದಳು.

ಆನಿಯು ತನ್ನ ಅಡೆಯಾರ್ ಜೀವನದ ಕೊನೆಯಲ್ಲಿ ಅಸಂಖ್ಯ
ಕಾನೂನು ಶಾಸ್ತ್ರ ಗ್ರಂಥಗಳಿಂದ ಸುತ್ತುವರಿದುದನ್ನು, ಶ್ರೇಷ್ಠ ನ್ಯಾ
ಯಾಲಯದ ನಿವೃತ್ತ, ಹಾಗು ತಾತ್ಕಾಲಿಕವಾಗಿ ಪ್ರಧಾನ ನ್ಯಾಯಾ
ಧೀಶನೂ, ನ್ಯಾಯಶಾಸ್ತ್ರ ನಿಪುಣನೂ, ಬ್ರಹ್ಮವಿದ್ಯಾಸಂಸ್ಥೆಯ ನಿಷ್ಠಾ
ವಂತ ಸದಸ್ಯನೂ, ಕೆಲಕಾಲ ಅದರ ಉಪಾಧ್ಯಕ್ಷನೂ ಆದ ಸರ್
ಸುಬ್ರಹ್ಮಣ್ಯ ಅಯ್ಯರ್ ಮತ್ತು ಇತರ ಶ್ರೇಷ್ಠ ವಕೀಲರೂ ಅವಳಿಗೆ

ಕಾನೂನು ಬಗ್ಗೆ ಸಲಹೆಗಳನ್ನೀಯಲು ಆಗಿಂದಾಗ್ಗೆ ಆನಿಯ ಬಳಿಗೆ ಹೋಗುತ್ತಿದ್ದರೂ ಆ ಮೊಕದ್ದಮೆಯ ಪ್ರಾಮುಖ್ಯತೆಯನ್ನು ತಿಳಿದಿದ್ದ ಅವಳು ಸಾಮಾನ್ಯ ಜಿಲ್ಲಾ ವಕೀಲನು ತನ್ನ ವಾದಸರಣಿಯನ್ನು ಮಂಡಿಸಿ ನ್ಯಾಯಾಲಯದ ಮುಂದಿಟ್ಟು, ಅನಾವಶ್ಯ ವಿಚಾರವನ್ನು ನ್ಯಾಯವಾದದಿಂದು ಹೇಗೆ ಸಮರ್ಥಿಸುವನೋ ಅದೇ ರೀತಿ ಅವಳು ರಾತ್ರಿ ಇಡೀ ಕುಳಿತು ಆ ಮೊಕದ್ದಮೆಯನ್ನು ಎಲ್ಲಾ ದೃಷ್ಟಿಕೋನದಿಂದ ಪರಿಸುತ್ತಿದ್ದುದನ್ನು ನಾನು ಇಂದಿಗೂ ನೆನೆಯುತ್ತೇನೆ.

ಆನಿ ಬೆಸೆಂಟ್, ಲಿಲ್ಲಿ ಬರ್ ಮತ್ತು ನಾನು ದಿನದಿಂದ ದಿನಕ್ಕೆ ನ್ಯಾಯಾಲಯಕ್ಕೆ ಕಾರಿನಲ್ಲಿ ಹೋಗುತ್ತಿದ್ದುದು ಅವಳೊಬ್ಬ ಧೀರೆಯಾದ ಯೋಧಳಂತೆ ಮತ್ತು ಆ ವ್ಯಾಜ್ಯದ ಸಂಬಂಧ ನಾವೆಲ್ಲರೂ ಸಿಡಿದುರಿದು ಕೆರಳಿದವರಂತೆಯೂ ಇದ್ದುದನ್ನು ಇದೀಗ ನೆನೆಯುತ್ತೇನೆ. ಕಾನೂನು ಗ್ರಂಥಗಳು, ಹಲವು ಗ್ರಂಥ ಕಾಂಡಗಳು, ನಮಗಿಂತ ಮುಂಚೆಯೇ ಬೆಳಿಗ್ಗೆ ಕಳುಹಿಸಲ್ಪಡುತ್ತಿದ್ದುವು, ಆದರೆ ಕಳ್ಳರ ತಂಡದ ಭೀತಿಯಲ್ಲಿ ತನ್ನ ಅಮೂಲ್ಯವಾದ ಆಭರಣಗಳನ್ನು ಕೈಯಲ್ಲಿ ಗಟ್ಟಿಯಾಗಿ ಎದೆಗೊತ್ತಿ ಹಿಡಿದುಕೊಳ್ಳುವಂತೆ ಅವಳು ನ್ಯಾಯಾಲಯದಲ್ಲಿ ತನ್ನ ವಾದಕ್ಕೆ ಆಧಾರಪ್ರಾಯವಾದ ಪ್ರಾಮುಖ್ಯ ಕಾಗದ ಪತ್ರಗಳನ್ನು ಹಿಡಿದುಕೊಳ್ಳುತ್ತಿದ್ದಳು. ನಾವು ಅವಳ ಕರಪತ್ರಗಳ ಹೊರೆಯನ್ನು ಕಡಿಮೆ ಮಾಡಲು ನಿರರ್ಥಕವಾಗಿ ಪ್ರಯತ್ನಿಸುತ್ತಿದ್ದೆವು. ಅವಳು ಬಹುಶಃ ತನ್ನ ಆತ್ಮವನ್ನೇ ಇತರರಿಗೆ ಸುಲಭದಲ್ಲಿ ಕೊಡಬಲ್ಲವಳಾದರೂ ಆ ಪತ್ರಗಳನ್ನು ಮಾತ್ರ ಕೈಬಿಡ ಒಲ್ಲಳೆಂದು ಈಗ ನಾನು ಆ ವಿಚಾರವನ್ನು ಕುರಿತಾಗಿ ಯೋಚಿಸುತ್ತಿದ್ದೇನೆ.

ಅನಂತರ ಶ್ರೇಷ್ಠ ನ್ಯಾಯಾಲಯದ ಒಳಗೆ, ಮತ್ತು ಆ ವ್ಯಾಜ್ಯದ ವಿಚಾರಣೆಗೆ ವಿನಿಸಿದ್ದ ಕೊಠಡಿಯೊಳಗೆ ತನ್ನ ನ್ಯಾಯಶಾಸ್ತ್ರ ಗ್ರಂಥಗಳೂ ಮತ್ತು ಪತ್ರಗಳೂ ತನ್ನ ಸುತ್ತೆಲ್ಲಾ ಹರಡಿ ಆನಿ ಬೆಸೆಂಟ್ ಇವಳೂ, ಸಾಹಿತ್ಯ ಬಂಡಾರದ ಕೇಂದ್ರದಂತೆ ಇದ್ದ ಮತ್ತು ಅವಳನ್ನು ವಿರೋಧಿಸಿ ವಕಾಲತ್ತನ್ನು ವಹಿಸಿದ್ದ ಸರ್ ಸಿ.ಪಿ. ರಾಮಸ್ವಾಮಿ ಅಯ್ಯರರೂ ಕುಳಿತಿರುತ್ತಿದ್ದರು. ಇತರ ಕಿರಿಯ ವರ್ಗದ ವಕೀಲರು ಸುತ್ತಮುತ್ತಲೂ ಓಡಾಡುತ್ತಾ ಅತ್ತಿತ್ತ ನಡೆದಾಡುವವರು, ಇಡೀ ಕೋರ್ಟೇ ಏನೋ ಕೌತುಕದ ಸನ್ನಿವೇಶವನ್ನು ನಿಸ್ಪೃಹತೆಯಿಂದ ನಿರೀಕ್ಷಿಸುತ್ತಿತ್ತು.*

ನ್ಯಾಯಾಧೀಶರನಾದರೋ, ಎಂದಿನಂತೆ ತನಗೆ ಮಹತ್ವವಾದುದನ್ನು ವಾದಿಸಲಿಕ್ಕೆ ಏನೂ ಇಲ್ಲವೆಂಬಂತೆ ಶಾಂತಿಯಿಂದ ತನ್ನ ಆಸನದತ್ತ ನಡೆಯುವವನು. ನೆರೆದ ಜನವೆಲ್ಲ ತಮ್ಮ ಪೀಠದಿಂದ, ಅವರಲ್ಲಿ

---

* ಆ ವ್ಯಾಜ್ಯದ ನಂತರವೇ ರಾಮಸ್ವಾಮಿ ಅಯ್ಯರನು ಆನಿಯ ಆತ್ಮೀಯ ಮಿತ್ರನಾದನು; ಅವರಿಬ್ಬರೂ "ಹೋಂ ರೂಲ್" ಇತ್ಯಾದಿ ರಾಜಕೀಯ ಚಳವಳಿಯಲ್ಲಿ ಭಾಗವಹಿಸಿದರು!

ಹಲವರು ಕೇವಲ ನಿರ್ಲಕ್ಷ್ಯದಿಂದ, ವಳುವಾಗ್ಗೆ ಆನಿಯು ತನ್ನ ಪೂರ್ತಿ ಎತ್ತರವನ್ನು ಪ್ರದರ್ಶಿಸಿ ಎದ್ದು ತನ್ನ ಚುರುಕು ಕಣ್ಣುಗಳಿಂದ ಮತ್ತು ಸಂಚಲನೀಯಂಥಾ ವ್ಯಕ್ತಿತ್ವದಿಂದೊಡಗೂಡಿ ಆ ನ್ಯಾಯಾಧೀಶನತ್ತ ದಿಟ್ಟಿಸುತ್ತಾ ನಿಲ್ಲುವಳು.

ಇದೀಗ ವ್ಯಾಜ್ಯದ ವಿಚಾರ ಪ್ರಾರಂಭವಾಗಲಿದೆ. ಆನಿಯು ತನ್ನ ನಿಲುವನ್ನು ನ್ಯಾಯಾಲಯದಲ್ಲಿ ಬಹು ಪ್ರಚಂಡವಾಗಿ ವಾದಿಸುವುದನ್ನು ಪ್ರಶಂಸಿಸುತ್ತಾ ನ್ಯಾಯಾಧೀಶನು ಕಡೆಗಂತು ಅವಳಿಗೆ ವಿರೋಧವಾಗಿ ತನ್ನ ತೀರ್ಪನ್ನು ಕೊಡುತ್ತಾನೆ. ಅದರನಂತರ ಅವಳು ಸುಮ್ಮನಿರಲಾರಳು; ಭಾರತ ಸರ್ಕಾರಕ್ಕೆ ಅದರ ಬಗ್ಗೆ ಮನವಿಯನ್ನು ಸಲ್ಲಿಸುತ್ತಾಳೆ, ಅಲ್ಲೂ ಅವಳು ಸೋಲುತ್ತಾಳೆ. ಅದರನಂತರ ಇಂಗ್ಲೆಂಡಿನ ಉನ್ನತ ನ್ಯಾಯಾಸ್ಥಾನ (Privy Council) ಇದ್ದೇ ಇದೆ! ಅವಳ ಮತ್ತು ಇತರ ನ್ಯಾಯಶಾಸ್ತ್ರಜ್ಞರ ಸಲಹೆಯಂತೆ ಆ ವ್ಯಾಜ್ಯವು ಲಂಡನ್ನಿಗೆ ಹೀಗೂ ಹೋಯಿತು. ಅಲ್ಲಿ ಪ್ರಧಾನ ನ್ಯಾಯಾಲಯ ಸಮಿತಿಯ ಅಧ್ಯಕ್ಷ ಲಾರ್ಡ್ ಹಾಲ್ಡೇನ್ ಇವನು ಈ ಮೊಕದ್ದಮೆಯನ್ನು ಆ ನ್ಯಾಯಾಲಯದ ಮುಂದಿಡುತ್ತಾನೆ. ಹಿಂದಿನ ತೀರ್ಪುಗಳನ್ನು ಖಂಡಿಸಲು ಇಲ್ಲಿ ಹೆಚ್ಚು ಸಮಯ ಬೇಕಾಗಲಿಲ್ಲ. ಆನಿ ಬೆಸೆಂಟ್ ಇವಳೇ ಅದನ್ನು ಕುರಿತು ಹೀಗಂದಿದ್ದಾಳೆ:—

"ಎಳೆ ಪ್ರಾಯದವರು (minors) ಈ ದೇಶದ (ಇಂಗ್ಲೆಂಡಿನ) ನ್ಯಾಯಾಲಯಕ್ಕೆ (Court of Chancery) ಮೊರೆಯಿಟ್ಟಾಗ ನ್ಯಾಯಾಸ್ಥಾನದ ತೀರ್ಪು ಅವರ ಭವಿಷ್ಯದ ಕ್ಷೇಮವನ್ನು ಕುರಿತು ಆಲೋಚಿಸಬೇಕಲ್ಲದೆ ಯಾವ ನ್ಯಾಯಸ್ಥಾನವೂ ಅದರ ಬಗ್ಗೆ ಅವರ ಅಭಿಪ್ರಾಯವನ್ನು ಪಡೆಯದೆ ತೀರ್ಪನ್ನು ಕೊಡಲು ಯತ್ನಿಸುವುದು ಸರಿಯಲ್ಲವೆಂಬ ತೀರ್ಮಾನವು ಹಿಂದೂಸ್ಥಾನದ ಮತ್ತು ಇಂಗ್ಲೆಂಡಿನ ನ್ಯಾಯಾಲಯಗಳಲ್ಲಿ ಈ ಮೊಕದ್ದಮೆಯು ಸಿದ್ಧಾಂತಪಡಿಸಿದೆ. ಈ ಸಂದರ್ಭದಲ್ಲಿ ಹುಡುಗರಿಗೆ ತಮ್ಮ ಭವಿಷ್ಯದ ಬಗ್ಗೆ ಅಭಿಪ್ರಾಯ ಕೊಡಲು ಪ್ರಾಯ ಹದಿನಾಲ್ಕು ಆಗಬೇಕೆಂದು ನಿರ್ಧರಿಸಲಾಗಿದೆ. ಈ ವ್ಯಾಜ್ಯದಲ್ಲಿ ಮಂಡಿಸಿದ ತೀರ್ಮಾನದ ಫಲಿತಾಂಶವೇನೆಂದರೆ ಅದಕ್ಕಾಗಿ ಚೆಲ್ಲಿದಷ್ಟು ಬಹುದೊಡ್ಡ ಮೊಬಲಗಿನ ಹಣವನ್ನುಳಿದು ಆ ಹೋರಾಟವು ಪ್ರಾರಂಭವಾದಾಗ ನಾವು ಎಲ್ಲಿ ಇದ್ದೆವೋ ಅಲ್ಲಿಗೇನೇ ಅದನ್ನು ತಂದು ಇರಿಸಿದ್ದೇ ಅದರ ಅಂತ್ಯವೂ ಆಗಿದೆ! *

---

* ಜಿಡ್ಡು ಕೃಷ್ಣಮೂರ್ತಿಯು ಆನಿಯನ್ನು ನಿರಾಶಳಾಗಿಸಿದರೂ ಕಡೆಗಂತು ಪ್ರಸಿದ್ಧ ವೇದಾಂತಿಯಾಗಿ ಆಂಗ್ಲಭಾಷಾ ಜಗತ್ತಿನಾದ್ಯಂತ ತನ್ನ ಧರ್ಮಪ್ರಚಾರ ಮಾಡುತ್ತಾ, ಯುರೋಪಿನಲ್ಲಿ ನೆಲೆಸಿದ್ದು 1986ರಲ್ಲಿ ತನ್ನ 91ನೇ ವರ್ಷದಲ್ಲಿ ಮೃತನಾದನು. ಅವನ ತಮ್ಮ ನಿತ್ಯಾನಂದನು ಅವನ ಯೌವನದಲ್ಲಿ ಗತಿಸಿದ್ದನು!

—ಮೂರನೇ ಹಂತ—
ಭಾರತದ ಸ್ವಾತಂತ್ರ್ಯಕ್ಕೆ ಹೋರಾಟ!

ಕ್ರಿ.ಶ. 1914ರಲ್ಲಿ ಬ್ರಹ್ಮವಿದ್ಯಾ (Theosophy) ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾದುದಕ್ಕೆ ಸರಿಯಾಗಿ ಆನೀ ಬೆಸೆಂಟ್ ಇವರು ಈ ದೇಶದ ರಾಜಕೀಯದಲ್ಲಿ ಪ್ರಚಂಡವಾಗಿ ದುಡಿಯಲು ಆರಂಭಿಸಿದ್ದರಿಂದ ಅವರ ಕಾರ್ಯಕ್ಷೇತ್ರದ ಮೂರನೇ ಹಂತ ಪ್ರಾರಂಭವಾಗುತ್ತದೆ. ಹಿಂದೂಸ್ಥಾನಕ್ಕೆ ಸ್ವರಾಜ್ಯ (Home Rule) ಬೇಕೆಂಬುದಾಗಿ ಆ ವರ್ಷದ ಬೇಸಿಗೆಯಿಂದ ಪ್ರಯತ್ನಿಸಲು ಪ್ರಾರಂಭಿಸಿ ಪರಿಪೂರ್ಣತೆಯನ್ನು ಪಡೆದುದು. ಆನಿಯು ತನ್ನ ಜೀವನದಲ್ಲಿ ಸಿಗದ ಮಹತ್ವವೊಂದು ಕಡೆವರೆಗೂ ನಂಬಿದ್ದಳು. 1898ರಲ್ಲಿ ಹಿಂದಿನಿಂದಲೇ ಹಿಂದೂಸ್ಥಾನದ ಉದ್ಧಾರಕ್ಕೆ ಹೋರಾಡಿ ಹಿಂದೂಮತದ ಪುನರ್ಜೀವಕ್ಕೆಂದು ದುಡಿಯುತ್ತಿದ್ದುದರಿಂದಲೇ, ಅವರು ಮುಂದಕ್ಕೆ ಇಂಡಿಯಾ ಮಹತ್ಕಾರ್ಯಕ್ಕೆ ತೊಡಗುವುದರಿಂದ ತಿಳಿಯದೇ ಅವರು ಬನಾರಸ್ ಕೇಂದ್ರೀಯ ಹಿಂದೂ ಕಾಲೇಜಿನ ಭವ್ಯಮಂದಿರಕ್ಕೆ ತಳಹದಿಯನ್ನು ಹಾಕಿದರು. ಧಾರ್ಮಿಕ ಚೈತನ್ಯವು ಎಲ್ಲಿಲ್ಲ ಪ್ರಜ್ವಲಿತವಾಗದೆ, ರಾಷ್ಟ್ರೀಯ ವಿದ್ಯಾಭ್ಯಾಸ ನಿಜವಾಗಿಯೂ ಬೇರೂರದೆ ನಿಜವಾದ ರಾಜಕೀಯ ಪ್ರಗತಿಯು ಆಗದು, ಎಂದು ತಿಳಿದಿದ್ದ ಅವರು ಈ ಯೋಜನೆಗೆ ಇನ್ನೂ ಮುಂಚಿತವಾಗಿ ಕಾರ್ಯರಂಗಕ್ಕಿಳಿದರು. ಶ್ರೀಲಂಕಾದಲ್ಲಿ ಬೌದ್ಧಮತದ ಪುನರ್ಜೀವಕ್ಕೆ ಅಸಮಾನವಾಗಿ ದುಡಿದು ಅಲ್ಲಿ ಹಲವಾರು ಬೌದ್ಧ ಶಾಲೆಗಳನ್ನು ಸ್ಥಾಪಿಸಿದ ಮತ್ತು ಅವರಿಗಿಂತ ಹಿಂದೆ ತತ್ವಜ್ಞಾನ (Theosophy) ಸಂಸ್ಥೆಯ ಅಧ್ಯಕ್ಷನಾಗಿದ್ದ ಕರ್ನಲ್ ಹೆಚ್. ಎಸ್. ಅಲ್ಕಾಟ್ ಇವರ ಹೆಜ್ಜೆಯನ್ನು ಆನೀ ಬೆಸೆಂಟ್ ಇವರೂ ಅನುಸರಿಸಿದರು.

ಆನಿಯಿಂದಾಗಿ ಕಡೆಗಂತೂ ಹಿಂದೂಮತವು ಮಿಲ್ಯಾಂತರ ಜನರಿಂದ ಪುರಸ್ಕರಿಸಲ್ಪಡುವಂತಾಯಿತು. ಹಿಂದು ವಿಧದಲ್ಲಿ ಹೇಳುವುದಾದರೆ ಅಜ್ಞಾನೀ ಹಿಂದೂಗಳಿಂದ ತಿರಸ್ಕರಿಸಲ್ಪಟ್ಟಿದ್ದ ಮತ್ತು ಆಧುನಿಕ ಎಲ್ಲ ಜನಾಂಗದ ಅವಹೇಳನಕ್ಕೆ ಪಾತ್ರವಾಗಿದ್ದ ಈ ಹಿಂದೂಧರ್ಮವು ಪುನಃ ಅದರ ಹಿಂದಿನ ಶೋಭೆಯನ್ನು ಪಡೆಯುವಂತಾಯಿತು.

ಆದರೆ ಈ ದೇಶದ ರಾಜಕೀಯ ಚಳುವಳಿಗೆ ತಕ್ಕ ಅಸ್ತಿಭಾರವನ್ನು ಭದ್ರವಾಗಿ ಸ್ಥಾಪಿಸಲು ಅವರು ಇನ್ನೂ ಬಹುತರವಾಗಿ ಶ್ರಮಿಸಬೇಕಾಗಿತ್ತು. ಕ್ರಿ.ಶ. 1913ರ ಆದಿಭಾಗದವರೆಯಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದ ಪ್ರಾರಂಭದಿಂದಲೇ ಅವರು 'ದೇಶದಲ್ಲಿ ಶೀಘ್ರವಾಗಿ ಸಾಮಾಜಿಕ ಸುಧಾರಣೆಗಳಾಗಬೇಕೆಂಬು

ವನನ್ನು ಕುರಿತು ಮದ್ರಾಸಿನಲ್ಲಿ "ಭಾರತವೇ, ಎಚ್ಚರಗೊ" (Wake up, India) ಎಂಬ ಶೀರ್ಷಿಕೆಯಿಂದ ಹಲವು ಭಾಷಣಗಳನ್ನು ಕೊಟ್ಟಳು.

ಐದನೇ ಜಾರ್ಜ್ ಚಕ್ರವರ್ತಿಯು "ಇಂಗ್ಲೆಂಡೇ, ಎಚ್ಚರಗೊ" ಎಂಬುದಾಗಿ ಘೋಷಿಸಿದುದನ್ನು ತನ್ನ ದೃಷ್ಟಿಯಿಂದ ಅನುಕರಿಸಿ "ಭಾರತವೇ ಎಚ್ಚರಗೊ" ಎಂದು ಹಾಕಿರುವೆನೆಂದು ಆನಿಯು ಹೇಳಿದ್ದಳು. ಅವಳ ಭಾಷಣಗಳ ಸಂಕಲನಕ್ಕೆ ಅವಳು ಬರೆದ ಮುನ್ನುಡಿಯಲ್ಲಿ ಅವಳು ಹೀಗೆಂದಳು:

"ಹಿಂದೂ ಧರ್ಮದ ಪ್ರಗತಿಯನ್ನು ಸಾಧಿಸಲು ಹಿಂದೂ ಯೋಜನಾಬದ್ಧವಾದ ಚಳವಳಿಯನ್ನು ಶ್ರದ್ಧೆಯಿಂದ ಪ್ರಾರಂಭಿಸಲು ಈ ಭಾಷಣಗಳನ್ನು ಕೊಡಲಾಯಿತು. ಬ್ರಹ್ಮವಿದ್ಯಾ ಸಂಸ್ಥೆ ಮತ್ತಿತರ ಮತೀಯ ಕೇಂದ್ರಗಳ ಪ್ರಯತ್ನದ ಫಲವಾಗಿ ಧಾರ್ಮಿಕ ಸುಧಾರಣೆಗಳು ಜಾರಿಗೆ ಬಂದುವು. ವಿದ್ಯಾಕ್ಷೇತ್ರದಲ್ಲಿ ತುಂಬಾ ಅಭಿವೃದ್ಧಿಯನ್ನು ಸಾಧಿಸಲಾಗಿದೆ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸು ಮತ್ತು ಅದರ ಶಾಖೆಗಳು ರಾಜಕೀಯ ಸುಧಾರಣೆಗಳಿಗಾಗಿ ಯಥೇಷ್ಟವಾಗಿ ಶ್ರಮಿಸಿವೆ, ಕೆಲವು ಸ್ವತಂತ್ರ ಮನಸ್ಸಿನವರಿಂದ ಮತ್ತು ಕೆಲವು ತತ್ವಜ್ಞಾನಿಗಳಿಂದ (Theosophists) ಕೂಡಿದ ಚಿಕ್ಕ ಸಂಸ್ಥೆಯು ತಮ್ಮ ತನು ಮನ ಧನವನ್ನು ಅರ್ಪಿಸಿ ದೇಶದ ಸಾಮಾಜಿಕ ಸುಧಾರಣೆಗಳಿಗಾಗಿ ಶ್ರಮಿಸಿದೆ."

"ಯಾರಿಗಾಗಿ ದುಡಿಯುವುದು ಬಹು ಶ್ರಮದಾಯಕವೂ ಜನರ ಕೃತಜ್ಞತೆಗೆ ಪಾತ್ರವಾಗದ್ದೂ ಆಗಿದೆಯೋ ಅಂಥ ದೀನದಲಿತರ ಉದ್ಧಾರದ ನಿಮಿತ್ತ ಈ ಭಾಷಣಗಳು ಕೊಡಲ್ಪಟ್ಟಿದ್ದಾಗಿವೆ."

ಆದರೆ ಕ್ರಿ.ಶ. 1913 ಕ್ಕಿಂತ ಹಿಂದೆ ನಡೆದುದೆಲ್ಲವೂ ಬಲವತ್ತರವೂ ಗಂಭೀರವೂ ಆಗಿ ಕಾಣಿಸದ ಧಾರ್ಮಿಕ, ವಿದ್ಯಾ, ಹಾಗೂ ಸಾಮಾಜಿಕ ಬಾಂಧವ್ಯದ ತೆರೆಗಳು ಸಾಮೂಹಿಕವಾಗಿ ಮತ್ತು ವಿಧಾಯಕವಾಗಿ ಒಂದುಗೂಡಿ ಭಾರತೀಯ ಜಾಗೃತಿ ಹಾಗೂ ಪ್ರಬುದ್ಧ ರಾಜಕೀಯಕ್ಕೆ ನಾಂದಿಯಾಗಿತ್ತೆಂದು ಅವಳು ಊಹಿಸಿರಲಿಲ್ಲ.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಚಟುವಟಿಕೆಗಳೊಡಗೂಡಿ ಹಿಂದೆ ನಡೆದ ಎಲ್ಲಾ ವಿಚಾರಗಳು ಮುಂದಿನ ರಾಜಕೀಯದ ತಳಹದಿಯನ್ನು ಸುಭದ್ರಗೊಳಿಸುತ್ತಿದೆ ಎನಿಸಿತ್ತಲ್ಲದೆ ಆ ರಾಜಕೀಯದ ಪ್ರಭಾವವನ್ನು ವ್ಯಾಪಕವಾಗಿ ಹೆಚ್ಚಿಸಲು 1914 ರಿಂದ ಅವಳು ಈ ಭರತಖಂಡದ ಉದ್ದಗಲಕ್ಕೂ ಓಡಾಡಿ ಆ ರೀತಿ ಶ್ರಮಿಸಿದಳು. 'ಗಾಂಧೀಜಿ ಒಂದು ಬಾರಿ ಹೇಳಿದಂತೆ ಆನಿ ಬೆಸೆಂಟ್ ಇವಳು ಕೆಲವೇ ವರ್ಷಗಳಲ್ಲಿ ಸ್ವರಾಜ್ಯ ಮಂತ್ರವನ್ನು ಈ ದೇಶದ ಪಟ್ಟಣಗಳು ಮತ್ತು ನಗರಗಳಲ್ಲಿ ಮಾತ್ರವಲ್ಲ, ಎಲ್ಲಾ ಗ್ರಾಮಗಳಲ್ಲೂ ಹರಡಿ ಜನತೆಯ ಸ್ವಪ್ರಜ್ಞೆಯನ್ನು ಕೆರಳಿಸಿದಳು. ಯಾವ ಭಾರತೀಯನನ್ನೂ ಮೀರಿ ಅವಳು ಈ ದೇಶದ

ಸ್ವಾತಂತ್ರ್ಯದ ಸಮರಾಂಗಣದಲ್ಲಿ ಸಂಕಲ್ಪಿತವಾಗಿ ವಿರಾಜಿಸಿದರು. ಅವರಿಗೆ ಪ್ರಿಯವಾದ ಆ ಧ್ಯೇಯವನ್ನು ಸಾಧಿಸಲು ಅವರು ಹದಿನಾರು ವರ್ಷಗಳಿಂದಲೂ ಅಕ್ಷರಶಃ ಹಗಲಿರುಳು ಹೆಣಗಿದರು. ಆದರೂ ಅವರು ತನ್ನ ಸಂಗಾತಿಗಳ ಸಹಾಯ ಮತ್ತು ನೆರವಿಗೆ ಕಾತರರಾದರು. ಮದ್ರಾಸಿನಲ್ಲಿ ಮಾರಾಟಕ್ಕೆ ಇಟ್ಟಿದ್ದಂತಹ ಮತ್ತು ಅತ್ಯಂತ ಪ್ರಸಿದ್ಧಿಯುಳ್ಳ The Madras Standard ವಾರ್ತಾಪತ್ರಿಕೆಯನ್ನು ಕೊಂಡುಕೊಂಡು ಅದಕ್ಕೆ New India ಎಂಬುದಾಗಿ ನಾಮಕರಣವನ್ನು ಮಾಡಿ ಅದನ್ನು ತನ್ನ ರಾಜಕೀಯಕ್ಕೆ ಉಪಯೋಗಿಸಿದರು.*

ಯಾವ ಯೋಜನೆಯನ್ನು ಹೀಗೆ ನಡೆಸಬೇಕೆಂಬ ನಿಷ್ಕರ್ಷೆಯೊಡನೆ ಆನಿ ಬೆಸೆಂಟರ ವಾರ್ತಾಪತ್ರಿಕೆಗಳ ಚಟುವಟಿಕೆಯು 1914ರ ಜುಲೈಯಿಂದ ಪ್ರಾರಂಭವಾಯಿತು. ತನ್ನ New India ಪತ್ರಿಕೆಯನ್ನು ದಿನಪತ್ರಿಕೆಯಾಗಿ ನಡೆಸುವಂತೆ ತೀರ್ಮಾನಿಸಿದರು. ವಾರ್ತಾಪತ್ರಿಕೆಯನ್ನು ನಡೆಸುವುದರಲ್ಲಿ ತಕ್ಕ ಯೋಗ್ಯತೆಯನ್ನು, ಎಲ್ಲಾ ವರ್ಗಗಳ ಅನುಭವವನ್ನು ಪಡೆದವರೋ ಎಂಬಂತೆ ಪತ್ರಿಕೋದ್ಯಮಿಗಳು, ವರದಿಗಾರರು, ಜಾಹೀರಾತುಗಾರರು, ಉಪಸಂಪಾದಕರು ಮತ್ತಿತರ ಕಚೇರಿ ನೌಕರರನ್ನು ತಂದು ತರಬೇತುಗೊಳಿಸಿ ಪತ್ರಿಕೆಯನ್ನು ಆನಿಯು ನಡೆಸಿದರು. ಅವರೊಡನೆ ಉತ್ತಮ ಕೆಲಸಗಾರರು ಯಾವಾಗಲೂ ಇರುತ್ತಿದ್ದರು. ಅಲ್ಲದೆ 1917ರಲ್ಲಿ ಅವರು ಕಾರಾಗೃಹವಾಸವನ್ನನುಭವಿಸಬೇಕಾಗಿದ್ದಾಗಲೂ ಸ್ವರಾಜ್ಯ (Home Rule) ಚಳವಳಿಯನ್ನು ಪತ್ರಿ

---

* ಡಾ. ಆನಿ ಬೆಸೆಂಟ್ ಇವರು 16ನೇ ಜುಲೈ 1914ರಲ್ಲಿ ಸರ್ ಮಾರಿಸ್ ಎಸ್ಕರ್ ಸ್ಮಿತ್ ಇವರಿಗೆ ಬರೆದ ಪತ್ರಗಳಲ್ಲೊಂದು ಹೀಗಿದೆ.—

"ನಾನು ಮದ್ರಾಸಿನಲ್ಲಿ ಒಂದು ದೈನಿಕ ಪತ್ರಿಕೆಯನ್ನು ಕೊಂಡುಕೊಂಡಿದ್ದೇನೆಂದು ತಿಳಿದು ದಯಮಾಡಿ ಉದ್ರೇಕಗೊಳ್ಳಬೇಡ. ಬರೀ ಹಳ್ಳಿ[illegible]ಯಾಗಿದ್ದ ಅದು ಮುಂದಕ್ಕೆ ಒಂದು ಪ್ರಬಲ ಶಕ್ತಿಯಾಗುವುದು. ದಿನಪತ್ರಿಕೆಯನ್ನು ಹೊರತರುವುದು ಸ್ವಾರ್ಥದಾಯಕ ಕೆಲಸವಾಗಿದೆ, ನಾನು ಅದನ್ನು ಉತ್ತಮಗೊಳಿಸಲು ಯತ್ನಿಸುತ್ತೇನೆ, ಅನೇಕ ಜಾಹೀರಾತುಗಳನ್ನು ನಿಲ್ಲಿಸಿದ್ದೇನೆ, ನಾನೀಗ ಹೊಸ ನೌಕರರೊಡನೆ ಸಾಹಸದ [illegible]ರುವೆನಾದುದರಿಂದ ನನ್ನಲ್ಲಿ ದಯೆದೋರು! ನನ್ನ ಈ ಪ್ರಯೋಗವನ್ನು ಪಂಡಿತರು ಮೆಚ್ಚುವರೆಂದು ಭಾವಿಸುವೆನೆಂಬುದಾಗಿ ಅವರಿಗೆ ಹೇಳು. ಹಳೆ ರಾಜಕೀಯ ಹೋರಾಟಗಾರರಾದ ಅವರು ನನ್ನ ಈ ಭಾರತೀಯ ಚಳವಳಿಯನ್ನು ಪ್ರೋತ್ಸಾಹಿಸಿ ಭಾರತೀಯ ಹೆಂಗಸರನ್ನು ಕುರಿತಾದ ಸಂದೇಶವನ್ನು ಈ ಪತ್ರಿಕೆಗೆ ಕಳುಹಿಸುವರೆಂದು ನಂಬುತ್ತೇನೆ. ಅದರಲ್ಲೇನಾದರೂ ಅಸಂಗತವಾದುದಿದ್ದರೆ ನಾನು ಅದನ್ನು ತಿದ್ದುಪಡಿಸುವೆನು, ತುಂಬಾ ಪ್ರೀತಿಗಳು, ಇತಿ, "ಹೆರಾಕ್ಲೆಸ್" (Herakles)--."

ಕಟುವಾದ ಲೇಖನಗಳಿದ್ದಾಗ್ಯೂ ಸರಕಾರವು ದೊಡ್ಡ ಹಣದ ದಂಡವನ್ನು ವಿಧಿಸಿ ಪತ್ರಿಕೆಯನ್ನು ಮುಟ್ಟುಗೋಲು ಹಾಕಲು ಪ್ರಯತ್ನಿಸಿದ್ದಾಗಲೂ ಪತ್ರಿಕೆಯು ಹೀಗೂ ಏರುತ್ತಾ ತಗ್ಗುತ್ತಾ ಮುಂದುವರಿಯಿತು, *I

New India ಪತ್ರಿಕೆಯು ಸ್ಥಾಪನೆಯಾದನಂತರವೇ, ಭಾರತ ಸ್ವರಾಜ್ಯಕ್ಕಾಗಿ ಹಾತೊರೆಯುವ ರಾಷ್ಟ್ರೀಯ ಜ್ಯೋತಿಯಾಗಿ ಜನಪ್ರಿಯವಾಯಿತು; ಅಲ್ಲದೆ ಅದರ ಪ್ರಚಾರವು ಎಷ್ಟೋ ಸಾವಿರ ಸಂಖ್ಯೆಗೆ ಏರಿತು, ಮಿಲ್ಯಂತರ ಸಂಖ್ಯೆಯಲ್ಲಿ ವಾರ್ತಾಪತ್ರಿಕೆಗಳು ಪ್ರಚಾರವಿರುವುದು ಸಾಮಾನ್ಯವಾಗಿರುವಾಗ ಈ ಸಂಖ್ಯೆಯು ಅಲ್ಪವಾಗಿ ಕಂಡುಬಂದೀತು, ಆದರೆ ಹಿಂದೂಸ್ಥಾನದಲ್ಲಿ ಪತ್ರಿಕೆಗಳು ಸಂಖ್ಯೆಯಲ್ಲಿ ಮಾತ್ರ ಪ್ರಚಾರವಿರುವುದು,

ಪ್ರತಿದಿನವೂ ಆನಿ ಬಿಸೆಂಟ್ ಇವರು ತಮ್ಮ ಹಲವು ಕಾರ್ಯಭಾರಗಳಿದ್ದರೆ ಬೆಳಿಗ್ಗೆ ಒಂಭತ್ತು ಅಥವಾ ಹತ್ತು ಗಂಟೆಗೆ ಅಡೆಯಾರ್‌ನಿಂದ ಮದ್ರಾಸಿನ New India ಆಫೀಸಿಗೆ ಹೋಗುವರು. ಅಲ್ಲಿ ಸಂಪಾದಕೀಯ ಕೊಠಡಿಗೆ ಮೇಲೆ ಹತ್ತಿ ಹೋಗಿ ಕುಳಿತು ಬಹು ಕಹಿಯಾದ, ಕಟುವಾದ ಮತ್ತು ಚಿಂತನೀಯವಾದ ಸಂಪಾದಕೀಯಂಗಳನ್ನು ಬರೆಯುತ್ತಿದ್ದರಲ್ಲದೆ ಅವುಗಳಲ್ಲಿ ಹಲವಕ್ಕೆ ಅವರೆ ಸಹಿಹಾಕುವರು, *II

ದಿನವೆಲ್ಲ ಅವರು ಮೇಲಿಂದ ಮೇಲೆ ಬರೆಯುವರು, ಅವರು ಟೈಪ್‌ರೈಟರನ್ನು ತಮ್ಮ ಜೀವಮಾನದಲ್ಲೇ ಉಪಯೋಗಿಸಿದ್ದಿಲ್ಲ. ಹಿಂದು ಸಂದರ್ಭದಲ್ಲಿ ಅದನ್ನು ಉಪಯೋಗಿಸಲು ಪ್ರಯತ್ನಿಸಿ ಅನಂತರ ಕಡೆಗೆ ಸಾರಿ ಬಿಟ್ಟುಬಿಟ್ಟರು. ಕೆಲವೇ ಪತ್ರಗಳನ್ನು ಅವರು ಇತರರಿಂದ ಬರೆಸುತ್ತಿದ್ದರಲ್ಲದೆ ಎಲ್ಲವನ್ನು ಅವರೇ ತಮ್ಮ ಸ್ವಂತ ಸುಂದರವಾದ ಕೈಬರಹದಲ್ಲಿ ನಿಧಾನವಾಗಿ ನಿರ್ಧಾರಪೂರ್ವಕವಾಗಿ ಬಹು ಜಾಗರೂಕತೆಯಿಂದ ನೇರವಾದ ಪಂಕ್ತಿಗಳಲ್ಲಿ ಅಲ್ಪವಿರಾಮ, ಪೂರ್ಣವಿರಾಮಾದಿಗಳ ನಿಯಮವನ್ನನುಸರಿಸಿ ಬರೆಯುವರು. New India ಪತ್ರಿಕೆಯಲ್ಲೂ ಅವರ ಲೇಖನಗಳು ಇದೇ ರೀತಿ ಇರುತ್ತಿದ್ದುವು. ಬೇರೆ ಏನೇ ಸಡಗರದ ಕಾರ್ಯಕ್ರಮವಿದ್ದರೂ ಅವರು ತಮ್ಮ ಬರವಣಿಗೆಯ ಮಧ್ಯೆ ದಣಿಯುತ್ತಿರಲಿಲ್ಲ; ಇತರರು ಅವರನ್ನು ತೊಂದರೆಪಡಿಸುವುದಕ್ಕೆ ಅವರು ಬಿಡುತ್ತಿದ್ದಿಲ್ಲ. ಯಾವುದೊಂದೂ ಕೆಲಸವನ್ನೂ ಅವರು ಬೇಗನೆ ಮಾಡಬಲ್ಲರು, ಹಾಗಿದ್ದರೂ ಅವರು ಆ ವೇಗವನ್ನು ತಮ್ಮ ಅಂಕಿತದಲ್ಲಿಡಬಲ್ಲರು, ತಮ್ಮ ಸ್ವಂತ ಲೇಖನಗಳನ್ನು ಬರೆ

---

*I New India ಪತ್ರಿಕೆಯು ಪ್ರಾರಂಭವಾಗುವ ಮುನ್ನ, 1914ರ ಪ್ರಾರಂಭದಲ್ಲಿ, The Commonweal ಎಂಬ ವಾರಪತ್ರಿಕೆಯನ್ನು ಸ್ಥಾಪಿಸಿದ್ದರು. ಅದು ಕೆಲಕಾಲ ನಡೆಯಿತು. ವಿದೇಶೀಯ ವಾರ್ತೆಗಳು ಮತ್ತು ಭಾರತೀಯ ವಾರ್ತೆಗಳನ್ನು ವಿದೇಶೀಯರಿಗೆ, ಹೆಚ್ಚಾಗಿ ಇಂಗ್ಲೆಂಡಿನ ಜನಕ್ಕೆ ತಿಳಿಸಲೆಂದು ಆ ವಾರಪತ್ರಿಕೆ ಪ್ರಚಾರದಲ್ಲಿತ್ತು.

*II – The Besant Spirit – ಈ ಗ್ರಂಥದ 3ನೇ ಕಾಂಡ ನೋಡುವುದು.

ಯುತ್ತಿದ್ದುದು ಮಾತ್ರವಲ್ಲ, ಇತರ ಸಂಪಾದಕರು ಬರೆದುದನ್ನು ಸಹ ಅವರು ಪೂರ್ತಿಯಾಗಿ ಓದಿ ತಪ್ಪಿದೆ ನೋಡುವರು. ಈ New India ಪತ್ರಿಕೆಯು ಪ್ರಚಾರವಾಗುತ್ತಿದ್ದ ಕಾಲವು ರಾಜಕೀಯವಾಗಿ ಅಪಾಯಕರವಾಗಿತ್ತು. ಏಕೆಂದರೆ ಸರ್ಕಾರ ಸಂಪಾದಕನನ್ನು ಕಾರಣವನ್ನು ಕೊಡದೆ ಮತ್ತು ವಿಚಾರಣೆಗೆ ಒಳಪಡಿಸದೆ ಬಂಧಿಸಬಹುದಾಗಿತ್ತಲ್ಲದೆ ವಾರ್ತಾಪತ್ರಿಕೆಯ ಮೇಲೆ ಯಾವ ಕ್ಷಣದಲ್ಲಾದರೂ ದಂಡವನ್ನು ವಿಧಿಸಿ ಅಥವಾ ಭದ್ರತಾ ಹಣವನ್ನು ಕೇಳುವ ಅದನ್ನು ಮುಟ್ಟುಗೋಲು ಹಾಕುವ ಅಧಿಕಾರವೂ ಸರಕಾರಕ್ಕೆ ಇತ್ತೆಂಬುದು ಈ New India ಪತ್ರಿಕೆಯ ಅನುಭವದಿಂದಲೇ ವಿದಿತವಾಗಿತ್ತು. ಅಷ್ಟೇ ಅಲ್ಲ, ಜಾಹೀರಾತುಗಳೂ ಇರುತ್ತಿದ್ದುವು. ಅದರಲ್ಲಿ ಏನಾದರೂ ಅಸಭ್ಯ ಜಾಹೀರಾತುಗಳು ಪ್ರಕಟವಾಗಿ ತನ್ನ ಪತ್ರಿಕೆಯ ಹೆಸರು ಹಾಳಾಗದಂತೆ ಅನಿಯು ಆ ವಿಷಯದಲ್ಲಿ ತುಂಬಾ ಎಚ್ಚರವಿಟ್ಟಿದ್ದರು.

ಪತ್ರಿಕೆಯು ಹೊರಬರುವ ಸಮಯ ಹಿಂದಿನ ದಿನ ಸಾಯಂಕಾಲ ಸುಮಾರು ಐದು ಗಂಟೆಯಾಯಿತು, ಬೆಳಿಗ್ಗೆಯಿಂದ ಮಧ್ಯಾಹ್ನ ಕಳೆದ ನಂತರವೂ ಅವರ ಆಜ್ಞಾಪಾಲನೆಯು ಪ್ರತಿಧ್ವನಿಸುತ್ತಿದ್ದಂತೆಯೇ ಆ ದಿನದ ಪೂರ್ಣ ಪತ್ರಿಕೆಯ ಬಿಸಿಯಾದ ಪ್ರತಿಯೊಂದನ್ನು ತಂದು ಸೂಕ್ಷ್ಮ ಪರಿಶೀಲನೆಗೆಂದು ಅವರ ಮುಂದೆ ಇರಿಸಲಾಗುತ್ತಿತ್ತು. ಹಿಂದಿನ ಮುದ್ರಣವನ್ನು ಸರಿಯಾಗಿಸುವಂತೆ ಅಂತೆಯೇ ಹಿಂದಿನ ಸಂಚಿಕೆ, ಅದೇ ಎಲ್ಲವೂ ಸರಿಯಿದೆಯೆಂದು ಒಪ್ಪಿಗೆಯ ಸೂಚನೆ. ಆದರೆ ಯಾವುದಕ್ಕೂ ಅವರು ಇಂಗ್ಲಿಷ್ ಭಾಷೆಯಲ್ಲಿ ಬಳಸಲ್ಪಡುವ ಸಂಕೇತಾಕ್ಷರಗಳನ್ನು ಪ್ರಬಲ ಸಾಹಿತಿಯಾದ ಅವರು ಉಪಯೋಗಿಸಿದ್ದೇ ಇಲ್ಲ. ಕಡೆಗೆ ಮುದ್ರಣಯಂತ್ರಗಳ ನಿನಾದ ಮತ್ತು ಅಂದಿನ ಪತ್ರಿಕಾ ಪ್ರತಿಗಳ ಮುದ್ರಣದೊಡನೆ ಪ್ರಧಾನ ಸಂಪಾದಕಿಯು ತನ್ನ ಸಹಸಂಪಾದಕರುಗಳಿಗೆಲ್ಲ ನಮಿಸಿ ಮೆಲ್ಲನೆ ಮಹಡಿಯಿಂದಿಳಿದು ವಿದೇಶೀಯ ಚಾಲಕ ಮೋಟರಿನಿಂದ ಓಡಿಸಲ್ಪಡುವ ತನ್ನ ಕಾರನ್ನು ಹತ್ತಿ ಹೋಗುವರು. ಹಾಗೆ ಹೋಗುತ್ತಾ ನಿಮ್ಮ ಹಾದಿಯಲ್ಲಿಯೇ ಇರುವ ಮತ್ತು ಮದ್ರಾಸಿನ ವಿದ್ಯಾರ್ಥಿಗಳು ವಾಸಕ್ಕೆ ಮತ್ತು ಬೋಧನಕ್ಕೆ ಅನುಕೂಲವಾಗುವಂತೆ ಕಟ್ಟಿಸಲ್ಪಟ್ಟ ಹಿಂದೂ ಯುವಕರ ಸಂಸ್ಥೆಯ (Young men's Indian Association) ಕಟ್ಟಡದಲ್ಲಿದ್ದ ಅಂದಿನ ಪ್ರಸಿದ್ಧ ದೇಶಸೇವಾಸಕ್ತನಾದ ಗೋಪಾಲಕೃಷ್ಣ ಗೋಖಲೆಯ ಹೆಸರಿನಿಂದ ಕರೆಯಲ್ಪಡುವ ಸಾರ್ವಜನಿಕ ಹಜಾರ (Gokhale Hall)ದಲ್ಲಿ ಕಾಫಿಯ ಫಲಾಹಾರವನ್ನು ತೆಗೆದುಕೊಳ್ಳುವರು.

ತನ್ನ ಜೀವನದ ಅತಿ ಇಳಿಹರಯದಲ್ಲೂ ಆಗಿಂದಾಗ್ಗೆ ಅಲ್ಲಿಗೆ ಹೋಗುತ್ತಿದ್ದ ಅವರು ಅಲ್ಲಿ ಸುಮಾರು ಅರ್ಧ ಗಂಟೆಯ ವರೆಗೆ ಇದ್ದು

ದು ಹಾಸ್ಯವಾಗಿಯೇ ತೋರಿತಲ್ಲದೆ ಬೇರೇನೂ ಅಲ್ಲ. ಅವಳ ಮೇಲೆ ಕ್ರಮವನ್ನು ಕೈಗೊಂಡು ಅವಳನ್ನು ಅಪಮಾನಕ್ಕೀಡು ಮಾಡಲು ಅವಳು ಭಾಷಣಗಳನ್ನು ಕೊಡುತ್ತಿದ್ದ ಎಲ್ಲಾ ಸ್ಥಳಗಳಿಗೂ ಅವಳು ಹೇಳುತ್ತಿದ್ದ ವಿಷಯಗಳನ್ನು ಸಂಗ್ರಹಿಸಲಿಕ್ಕೆಂದು ಸರಕಾರದಿಂದ ಕಳುಹಿಸಲ್ಪಟ್ಟ ಗೂಢಚಾರಿಗಳನ್ನು ಅವಳ ಬೆಂಬಲಿಗರು ಮತ್ತು ನೆರೆದ ಜನಸಂದಣಿಯು 'ಉದ್ವೇಗದಿಂದ' ಕಾಡಬೇಕಾಗಿತ್ತು. ಸಂಶಯವನ್ನು ಹುಟ್ಟಿಸುವ [illegible] ರೀತಿಯು ವಿನೋದಕಾರಕ ಪರಿಸ್ಥಿತಿಯನ್ನು ಅವಳ ಸುತ್ತಮುತ್ತಲಿದ್ದ ಜನರು ನೋಡಿ ನಗದೆಯೂ ಇರಲಿಲ್ಲ. ಒಂದು ವಿಧದಲ್ಲಿ ನೋಡಿದರೆ ಅದು ಸರಕಾರದ ತಿಳಿಗೇಡಿತನದ ಕೆಲಸವಾಗಿತ್ತು, ಏಕೆಂದರೆ ಕಟ್ಟಕಡೆಗೆ ಅವಳು ತನ್ನ ಕಾರ್ಯದಲ್ಲಿ ಜಯಶಾಲಿಯಾಗಿಯೇ ಆಗುವಳು, ಅವಳನ್ನು ಹುತಾತ್ಮಳಾಗಿ ಮಾಡಿದಂತಾಗುವುದೆಂಬುದನ್ನು ತಿಳಿಯದ ಅವಿವೇಕಿ ಸರಕಾರದ ವರ್ತನೆಯು ಅವಳ ಧ್ಯೇಯ ಸಾಧನೆಗೆ ನೆರವೀಯುವಂತಾಯಿತೆಂಬುದನ್ನು ಅವರು ತಿಳಿದಿರಬೇಕಿತ್ತು.

ಆದರೆ ಆನಿ ಬೆಸೆಂಟ್ ಳಿಗಾದರೋ ಇದು ನಿಜವಾಗಿಯೂ ದುಃಖಕರವಾದ ಸನ್ನಿವೇಶವಾಗಿತ್ತು. ಬಹು ತ್ವರಿತಗತಿಯಿಂದ ಓಡುವ ಉಗಿಬಂಡಿಯು ಥಟ್ಟನೆ ನಿಂತುಹೋದಂತಾಗಿ ಕಾಣಿಗೆ ಬಹುಕಾಲ ಓಡಿಸಲ್ಪಟ್ಟ ಆ ಯಂತ್ರದ ಪ್ರತಿಯೊಂದು ಭಾಗವೂ ಸವೆದು ಮುಂದಕ್ಕೆ ಅದು ಯಾವ ಪ್ರಯೋಜನಕ್ಕೂ ಬಾರದ ಪರಿಸ್ಥಿತಿಯೆಂತೋ ಅಂತೆಯೇ ತೋರಿ ಬಂತು.

ಅವಳನ್ನು ಸೆರೆಮನೆಗೆ ಒಯ್ಯುವ ಬಗ್ಗೆ ಆಜ್ಞೆಯು 1917ರ ಜೂನ್ ತಿಂಗಳ ಮಧ್ಯದಲ್ಲಿ ಹೊರಡಿಸಲಾಯಿತು. ಹಾಗಾಗುತ್ತದೆಂದು ಅವಳಿಗೆ ತಿಳಿದಿತ್ತು. ಆ ಕಾರಣದಿಂದ ತನ್ನ ಮುಂದಿನ ಕಾರ್ಯಕ್ರಮವನ್ನು ಕುರಿತು ಎಲ್ಲಾ ಸಿದ್ಧತೆಗಳನ್ನು ನಡೆಸಿದ್ದಳು. ಯಾವ ಸರಕಾರವೂ ತನ್ನ ಅಧಿಕಾರ ದೊರೆಗಳ ಪಡೆದಿದ್ದ ಕ್ರಮದಲ್ಲಿ ಅವಳಿಗೆ ವಾರ್ತೆಯನ್ನು ಒಯ್ಯಲು ಹಲವು ಮಾರ್ಗಗಳಿದ್ದುವು. ಅನಿರೀಕ್ಷಿತ ಸ್ಥಳಗಳಲ್ಲಿ ಕುತೂಹಲದಿಂದ ಕೂಡಿದ್ದ ಮಿತ್ರರೇ ಅವಳ ವಾರ್ತಾಸಂಗ್ರಹಕ್ಕೆ ಮೂಲವಾಗಿದ್ದರು. ಆದರೆ ಸರಕಾರದ ಮೂಲವಾದರೋ ಅವರು ಹುಡುಕುತ್ತಿತ್ತು. ನೇಮಿಸಿದ್ದರೂ ಆ ಗುಮಾಸ್ತರಲ್ಲಿ ಮನಃಪೂರ್ವಕವಾಗಿ ದುಡಿಯುವ [illegible] ರಾಗಿದ್ದರು.

ಒಂದು ದಿನ ಬೆಳಿಗ್ಗೆ ಸರಕಾರದ ರಾಜ್ಯಪಾಲ (Governor) ನೊಡನೆ ನಡೆಸಿದ ವ್ಯರ್ಥವಾದ ಸಂಭಾಷಣೆಯ ನಂತರ ಅವಳು ತನಗೆ ತುಂಬಾ ಕೆಲಸವಿದೆಯೆಂದು ತೋರ್ಪಡಿಸಿಕೊಳ್ಳುತ್ತಾ ತನ್ನ New India ಪತ್ರಿಕಾ ಕಚೇರಿಗೆ ಹೋದಳು. ರಾಜ್ಯಪಾಲ

ನಂತರ ನಡೆಸಿದ ಮಾತುಕತೆಯು ಎಲ್ಲರೂ ನಿರೀಕ್ಷಿಸಿದಂತೆ ಫಲಕಾರಿಯಾಗಲಿಲ್ಲವೆಂದು ಚಿತ್ರಿಸಿ ಸುದ್ದಿಗಾರರಿಗೆ ತಿಳಿದಿತ್ತು. ಗವರ್ನರನು ಆವಳನ್ನು ಕೇಳಿದನು, "ಶ್ರೀಮತಿ ಬೆಸೆಂಟ್, ನೀವು ಈಗ ಕೈಗೊಂಡಿರುವ ರೀತಿಯ ರಾಜಕೀಯ ಚಟುವಟಿಕೆಗಳನ್ನು ನಿಲ್ಲಿಸಬೇಕು," ಎಂದು ಹೇಳಲು ಆನಿಯಾದರೋ, "ಸ್ವಾಮಿ, ರಾಜ್ಯಪಾಲರೆ (Your Excellency), ನಾನು ನನ್ನ ಕೆಲಸವನ್ನು ನನಗೆ ಸರಿಯೆಂದು ಕಂಡ ರೀತಿಯಲ್ಲಿ ಮುಂದುವರಿಸಬೇಕಾಗಿದೆ" ಎಂದಳು,

ಈ ಸಂದರ್ಶನದ ನಂತರ ಹಿಂದಿರುಗಿದ ದಿನ ಆನಿ ಬೆಸೆಂಟ್ ಇವಳು ತನ್ನ New India ಕಛೇರಿಗೆ ಹೋದಳು. ಆದೇಶ ಹಿಂದು ಕುತೂಹಲದಾಯಕವಾದ ನಿರೀಕ್ಷೆಯಿಂದ ಅಂದು ಆ ಇಡೀ ಕಟ್ಟಡವು ಕಾದಿತ್ತು. ಆವಳು ಎಂದಿನಂತೆ ತನ್ನ ಕೆಲಸಕ್ಕೆ ತೊಡಗಿದಳು, ಕೆಲಕಾಲ ಏನೂ ಸಂಭವಿಸದೆ ಅಂತ್ಯೆಯೋ ಮೌನದಲ್ಲಿ ದಿನಗಳು ಉರುಳಿದುವು, ಆದರೆ ಆದೇಶೀ ಹೊರಡಿಸುತ್ತದೆಯೆಂದು ಜನ ಊಹಿಸಿದ್ದರು, ಆದೇ ಬಂದೇ ಬಂತು. ಮಧ್ಯಾಹ್ನ ಹನ್ನೊಂದುವರೆ ಗಂಟೆಗೆ ಸರಕಾರದ ಗುರುತು,ಚಾರಿ ಪಡೆದ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ಲನ ಹೆಸರಿನಿಂದ ಕೂಡಿದ ಹಿಂದು ಪ್ರೀಕ್ಷಣೆ ಚೀಟಿಯು ಬಂತು. ಆ ಚೀಟಿಯನ್ನು ಅರುಂಡೇಲ್ ಮತ್ತು ವಾಡಿಯಾ ಇವರಿಗೂ ಕಳುಹಿಸಲಾಯಿತು. ಆದೇಶಿಂದು ತಿಳಿದಿದ್ದ ಪಾಠ್ಯನು ತಾವು ನಿರೀಕ್ಷಿಸಿದ ಆ ಘಟನೆಯನ್ನು ಕುರಿತಾಗಿ ಹಿಂದು ಲೇಖನವನ್ನು ಬರೆದು ಮುಗಿಸುವ ವರೆಗೆ ಆ ಪೋಲೀಸ್ ಅಧಿಕಾರಿಯನ್ನು ಮಾತಾಡಿಸಿಕೊಂಡು ಸ್ವಲ್ಪ ಆಲಿಯೇ ನಿಲ್ಲಿಸುವಂತೆ ಅರುಂಡೇಲನಿಗೆ ಹೇಳಿದನು, ಸ್ವರಾಜ್ಯ ಹೋಳವಳಿದ ಪ್ರಧಾನ ನಾಯಕಿಯನ್ನು ಮುಂದೆ ಬಂಧಿಸದೆ ತಾವಿಪರ್ಯರನ್ನು ಮಾತ್ರ ಬಂಧಿಸಲು ಆದೇಶ ಮುಂದಾದರೆಂಬುದನ್ನು ಆವರಿಪರ್ಯರೂ ತಿಳಿಯಲಾರದೆ ಹೋದರು. ಆ ವಿಚಾರವಾಗಿ ಆನಿ ಬೆಸೆಂಟಳಿಗೂ ತಿಳಿಯಲಿಲ್ಲ, ಆದರೆ ಆವಳನ್ನು ಬಂಧಿಸದೆ ಬಿಡಲಾರರೆಂದು ಆವಳಿಗೆ ತಿಳಿದೇ ಇತ್ತು. ಹೇಗೂ ಇನ್ಸ್ಪೆಕ್ಟರ್ ಜನರಲ್ಲನನ್ನು ಆವನು ತನಿದ್ದ ಇನ್ನೊಬ್ಬ ಅಧಿಕಾರಿಯನ್ನು ಅರುಂಡೇಲನು ಸ್ವಾಗತಿಸಿದನು, ಆವರು ಮೊದಲಿಗೆ ಕಡೆಗೆ ಸಂಪಾದಿಕೆಯ ಕೋಣೆಗೆ ಹೋಗಿ ಅಲ್ಲಿ ಆವಳ ಮುಂದೆ ಅರುಂಡೇಲನನ್ನು ಬಂಧಿಸುವ ಆಜ್ಞಾಪತ್ರವನ್ನು ತೋರಿಸುವಂತೆ ಆಲೋಚಿಸಿದರು. ಅರುಂಡೇಲನು ಸಹಿ ಹಾಕಿ ಆ ಪತ್ರವನ್ನು ಸ್ವೀಕರಿಸಿದನು, ಆನಿ ಬೆಸೆಂಟಳು ಆಗ ಗಂಭೀರವಾಗಿ ಬಹು ತನ್ನಾನೆ ಕೂಡಿದ್ದಳು, "ಶ್ರೀ ವಾಡ್ಯನನ್ನು ಕಾಣಬಹುದೇ?" ಎಂದು ಪೋಲೀಸ್ ಅಧಿಕಾರಿ ಕೇಳಲು, "ನಿಜವಾಗಿಯೂ ಕಾಣಬಹುದು," ಎಂ

ದಿನವೂ New India ಪತ್ರಿಕೆಯ ಪ್ರಚಾರ ಖಾತೆಯ ಮುಖ್ಯಸ್ಥನಾದ ಶ್ರೀ ವಾಡ್ಯಾನ ಕೋರ್ಟಿಗೆ ಎಲ್ಲರೂ ಹಿಂದು ಚಿಕ್ಕ ಮೆರವಣಿಗೆಯ ರೀತಿಯಲ್ಲಿ ನಡೆದು ಕಡೆಗೆ ಅಲ್ಲಿ ವಾಡ್ಯಾನನ್ನು ಬಂಧಿಸುವ ಆಜ್ಞಾಪತ್ರವನ್ನು ಅವನಿಗೆ ಕೊಡಲಾಯಿತು.

ಚಿಕ್ಕ ಕಚೇರಿಗಳನ್ನು ಸರಕಾರದ ಬಲೆಯೊಳಗೆ ಸೇರಿಸಿಕೊಂಡನಂತರ ಇನ್ನೀಗ ನಿಜವಾಗಿಯೂ ಅಪಾಯಕರರಾದ ವ್ಯಕ್ತಿಯೊಬ್ಬಳನ್ನು ಹಿಡಿಯಲು ಉಳಿದಿತ್ತು. ಹೀಗೂ ಅನಿಯ ಸರದಿ ಬಂತೆ ಬಂತು. ಅವಳು ರಾಷ್ಟ್ರೀಯವಾದಿಗಳನ್ನು ಬಂಧಿಸುವಂಥಾ ಕೆಲಸವನ್ನು ಮಾಡುವ ಇನ್ಸ್‌ಪೆಕ್ಟರ್ ಜನರಲ್ಲನನ್ನು ಗದರಿಸಿದ್ದರೂ ಅವನು ತನ್ನ ಮೇಲಾಧಿಕಾರಿಗಳ ಆಜ್ಞೆಯನ್ನು ನಿರ್ವಹಿಸುತ್ತಿರುವೆನೆಂದು ಹೇಳಿದಾಗ ಅವನನ್ನು ಗೌರವಿಸಿದಳು. ಆನಂತರ ಅನಿಯು ಅವಳನ್ನು ಬಂಧಿಸುವ ಆಜ್ಞಾಪತ್ರಕ್ಕೆ ಸಹಿ ಹಾಕಿದಳು. ಪತ್ರಿಕೆ, ಲೇಖನ, ಸಭೆ, ಇತ್ಯಾದಿಗಳಿಗೆ ನಿಷೇಧಾಜ್ಞೆ ಹೊರಡಿಸಿದ್ದರಿಂದ ಅವತ್ತು ಅದರನಂತರ ಏನನ್ನೂ ಬರೆಯಲಿಲ್ಲ. ಆದರೆ ಅವಳು ಏನೇನು ಬರೆಯಬೇಕೋ ಅದನ್ನೆಲ್ಲ ಹಿಂದೆಯೇ ಬರೆದಿದ್ದಳು. ಅಲ್ಲದೆ ತನ್ನ ಪ್ರೀತಿಯ ಪತ್ರಿಕೆಯನ್ನು ಅವಳ ಆಪ್ತಮಿತ್ರನೂ ತನ್ನ ಬಲಾತ್ಕಾರದ ಗೈರ್ಹಾಜರಿಯಿಂದ ಹಿಂದಿರುಗುವ ವರೆಗೆ ಅದನ್ನು ನಡೆಸುವನೆಂಬ ಭರವಸೆಯುಳ್ಳ ನಿತ್ಯವನೂ ಆದ ಶ್ರೀ ಪಿ. ಕೆ. ತೆಲಾಂಗ್ ಇವನ ವಶಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಳು.

ಅನಿಯು ಅಡಿಯಾರಿಗೆ ಹಿಂದಿರುಗಿ ಬಹುತ್ವರಿತವಾಗಿ ತನ್ನ ಕೊಠಡಿಗೆ ಹೋದಳು. ಪ್ರಬಲ ಯಂತ್ರವೊಂದು ಥಟ್ಟನೆ ನಿಂತುಹೋಗಿತ್ತು. ಅವಳ ಬಂಧನದಿಂದ ಅವಳು ನಡೆಸುತ್ತಿದ್ದ ಸಂಸ್ಥೆಗಳ ಮೇಲೆ ಎಂಥಾ ಪರಿಣಾಮವಾಗಬಲ್ಲದೆಂದು ಇತರರು ತಿಳಿಯದೇ ಇದ್ದಿದ್ದರೂ ಅವಳು ತಿಳಿದಿದ್ದಳು. ಅದರಿಂದುಂಟಾದ ಬಾಧೆಯು ಅವಳನ್ನು ಬಹುಶಃ ಕೊಲ್ಲಬಹುದೆಂದು ಜನರು ಊಹಿಸದೇ ಇದ್ದಿದ್ದರೂ ಅವಳು ಊಹಿಸಿಯೇ ಇದ್ದಳು. ಗುಡ್ಡಬೆಟ್ಟಗಳಿಂದಾವೃತವಾದ ಬೇಸಗೆ ವಾಸಕ್ಕೆ ಯೋಗ್ಯವಾದ ಉತ್ಕೃಷ್ಟವಾದ ಕೇಂದ್ರವಾದ ಪಟ್ಟಣ, ಮದ್ರಾಸಿನಿಂದ ಒಂದು ರಾತ್ರಿ ಇಡೀ ರೈಲು ಪ್ರಯಾಣದಷ್ಟು ದೂರದ ನೀಲಗಿರಿಯ ಉದಕಮಂಡಲವು ಅವಳ ಕಾರಾಗೃಹ ವಾಸಸ್ಥಾನವಾಗಿ ನಿರ್ಣಯಿಸಲಾಯಿತು. ತನ್ನ ಬಿಡುವಿಲ್ಲದ ಕೆಲಸದಿಂದ ಅವಳು ಶೀಘ್ರ ಅಲ್ಲಿಗೆ ಹೋಗಿ ವಿರಮಿಸಲನುವಾದಳು. ಅಲ್ಲದೆ, ಮುಂದಕ್ಕೆ ಚಲಿಸಲಾರದ ಉಗಿಯಂತ್ರವು ಬಹು ದೊಡ್ಡ ಹೋರಾಟದಲ್ಲಿ ಸಿಲುಕಿಕೊಳ್ಳುವುದು ಇನ್ನೆಷ್ಟು ಅಹಿತಕರ ಪ್ರಸಂಗವಾಗಿ ತೋರಿತು.

ಅರುಂಡೇಲ್ ಮತ್ತು ವಾಡಿಯಾ ಇವರು ತಮಗೆ ವಿಧಿಸಲ್ಪಟ್ಟ ಒಂದು ವಾರದ ಅವಧಿಯ ನಂತರ ಬೇರೆಡೆ ಸೆರೆವಾಸದಲ್ಲಿರುವಂತೆ ನಿರ್ಣಯಿಸಲಾಗಿತ್ತು. ಅವರಿಬ್ಬರನ್ನು ಆನಿ ಬೆಸೆಂಟ್ ಇವಳಿಂದ ಪ್ರತ್ಯೇಕಿಸಿ ಮೂವರನ್ನು ಬೇರೆ ಬೇರೆ ಸ್ಥಳಗಳಲ್ಲಿ ಸೆರೆಯಲ್ಲಿಡುವ ಸರಕಾರದ ನಿರ್ಧಾರವನ್ನು ಅವು ತಮ್ಮ ಆಪ್ತರಿಂದ ಗುಟ್ಟಾಗಿ ತಿಳಿದುಕೊಂಡರು.

ಸರಕಾರದ ಈ ತೀರ್ಮಾನದಿಂದ ತಪ್ಪಿಸಿಕೊಳ್ಳಲು ಅರುಂಡೇಲ್ ಮತ್ತು ವಾಡಿಯಾ ಇವರು ಮಧ್ಯರಾತ್ರಿಯಲ್ಲಿ ಅಡೆಯಾರ್‌ನಲ್ಲಿದ್ದ ಗೂಢಚಾರಿ ಮತ್ತು ಕಾವಲುಗಾರರಿಂದ ತಪ್ಪಿಸಿಕೊಂಡು ಮದ್ರಾಸಿನಿಂದ ಸ್ವಲ್ಪ ದೂರದ ಒಂದು ರೈಲು ನಿಲ್ದಾಣದಲ್ಲಿ ರೈಲು ಹತ್ತಿ, ಸರಕಾರದ ಎರಡನೇ ಪತ್ರವು ಅವರಿಗೆ ತಲುಪುವ ಮೊದಲೇ ಉದಕಮಂಡಲವನ್ನು ಸೇರಿಕೊಂಡರು. ಮೊದಲನೇ ಪತ್ರದ ಪ್ರಕಾರ ಆ ಮೂವರೂ ಒಂದೇ ಸ್ಥಳದಲ್ಲಿ ಒಟ್ಟಿಗೆ ಸೆರೆವಾಸವನ್ನು ಎಂದಿನಂತೆ ಪೋಲೀಸರ ಕಾವಲು ಸಹಿತ ಮತ್ತು ವೃತ್ತಪತ್ರಿಕೆಗಳಲ್ಲಿ ಅವರು ಬರೆಯಬಾರದೆಂಬ ನಿಷೇಧಾಜ್ಞೆಯ ಸಹಿತ ಕಳೆಯಬಹುದೆಂದಿತ್ತು. ಆದರೆ ಅದನ್ನು ಬೇರೆ ಬೇರೆ ಇರಿಸಬೇಕೆಂದು ಸರಕಾರವು ಸಮಯ ಮೀರಿ ಆಲೋಚಿಸಿದ್ದರಲ್ಲಿ ಅವಿನೀತರು "ನ್ಯಾಯ"ವನ್ನು ಪ್ರತಿಭಟಿಸಿ ಜಯಪ್ರದರಾದರು. ಅರುಂಡೇಲ್ ಮತ್ತು ವಾಡಿಯಾ ಇವರಿಗೆ ಸೆರೆಮನೆ ವಾಸ ಮಕ್ಕಳಾಟದಂತೆ ತೋರಿದ್ದರೂ ಆನಿ ಬೆಸೆಂಟ್ ಇವಳಿಗೆ ಅವಳ ಜೀವಕ್ಕೆ ಹಾನಿಕರವಾಗಬಹುದಾದ ಅಸ್ವಸ್ಥತೆಯಂತೆ ತೋರಿತು. ಒಂದರ ನಂತರ ಒಂದಾಗಿ ವಾರಗಳುರುಳಿದಂತೆ ಅವಳು ಕೃಶಳಾಗುತ್ತಾ ಬಂದಳಲ್ಲದೆ ಹಲವು ಗಂಟೆಗಳ ಕಾಲ ಅವಳು ಶೂನ್ಯ ಮನಸ್ಕಳಾಗಿ ನೆಟ್ಟನೆ ದಿಟ್ಟಿಸುತ್ತಾ ಕಿಟಕಿಯಲ್ಲಿ ಕುಳಿತಿರುತ್ತಿದ್ದಳು. ತಾಳ್ಮೆಯನ್ನು ಪ್ರಚೋದಿಸುವ ಇಸ್ಪೀಟು ಆಟ (Cards game) ವನ್ನಾಡಲು ತೊಡಗುವಳು; ಅರ್ಧ ಗಂಟೆ ಕಾಲ ಆಡುವಳು, ಪಕ್ಕನೆ ನಿಲ್ಲಿಸುವಳು; ಪುನಃ ಕಿಟಕಿಯ ತಾಸುಗಟ್ಟಲೆ ಕಾಲ ಶೂನ್ಯಮನಸ್ಕಳಾಗಿ ಎತ್ತಲೋ ನೆಟ್ಟನೆ ನೋಡುತ್ತಾ ಕುಳಿತಿರುವಳು.

ಆನಿ ಬೆಸೆಂಟ್ ಇವಳ ಅಸ್ವಸ್ಥತೆಯ ಬಗ್ಗೆ ಕಳವಳಕ್ಕೀಡಾಗುವಂತೆ ಮಾಡಿದ ವರದಿಯು ಪ್ರಕಟವಾಗಲು ಸರಕಾರವು ಆಸ್ಥೆ ಕೈಗೊಂಡು ಮದ್ರಾಸಿನ ಗವರ್ನರನು ತನ್ನ ವೈದ್ಯನನ್ನು ಅವಳ ಚಿಕಿತ್ಸೆಗೂ, ಹವೆಯಲ್ಲಿ ಉತ್ತಮವೆನಿಸಿದ ಕೊಯಮುತ್ತೂರಿಗೆ ಅವಳನ್ನು ವರ್ಗಾಯಿಸಲಿಕ್ಕೂ ಮುಂದಾದನು. ಆ ವೈದ್ಯನ ಸೇವೆಯನ್ನು ಅವಳು ನಿರಾಕರಿಸಿದಳಾದರೂ ಕೊಯಮುತ್ತೂರಿಗೆ ಹೇಗೂ ಅವಳನ್ನು ವರ್ಗಾಯಿಸಲಾಯಿತು. ಉದಕಮಂಡಲದಲ್ಲಿದ್ದಾಗ ಬ್ರಹ್ಮವಿದ್ಯಾ (Theosophy) ಸಂಸ್ಥೆಯ ಮೊದಲ ಅಧ್ಯಕ್ಷನಾಗಿದ್ದ ಕರ್ನಲ್

ಆಲ್ಕಾಟ್ ಇವರು ಆ ಸಂಸ್ಥೆಯ ಅಧ್ಯಕ್ಷರಾಗಿರತಕ್ಕಂಥವರಿಗೆ ಬೇಸಗೆ ವಾಸಕ್ಕೆ ಅನುಕೂಲವಾಗುವಂತೆ ತೆಗೆದಿಟ್ಟಿದ್ದ "ಗುಲಿಸ್ತಾನ್" ಮಂದಿರದಲ್ಲಿ ಅವಳನ್ನಿಡಲಾಯಿತು. ಕೊಯಮುತ್ತೂರಿನಲ್ಲಿ ಅವಳ ಸುವರ್ಣ ಮಿತ್ರನು ಅವಳಿಗಾಗಿ ವಿಸ್ತಾರವಾದ ಒಂದು ಭವನವನ್ನು ಸರಕಾರದ ಒಪ್ಪಿಗೆಯನ್ನು ಪಡೆದನಂತರ ಬಿಟ್ಟುಕೊಟ್ಟನು.

ಅನಿ ಬೆಸೆಂಟ್ ಇವಳ ಬಂಧನದ ಕಾರಣದಿಂದ ರಾಷ್ಟ್ರೀಯ ಗೊಂದಲವು ಇಡೀ ಹಿಂದೂಸ್ಥಾನವೆಲ್ಲಾ ಶೀಘ್ರವಾಗಿ ಹಬ್ಬಿತಲ್ಲದೆ, ಅವಳನ್ನು ಸೆರೆಯಿಂದ ಬಿಡದಿದ್ದರೆ ತನ್ನ ಅನುಯಾಯಿಗಳ ಸೈನ್ಯ ಸಮೇತವಾಗಿ ಉತ್ತರ ಹಿಂದೂಸ್ಥಾನದಿಂದ ಕಾಲ್ನಡಿಗೆಯಿಂದ ಬರುತ್ತಾ ಸತ್ಯಾಗ್ರಹವನ್ನು ಹೂಡುವೆನೆಂದು ಗಾಂಧೀಜಿಯು ಸರಕಾರಕ್ಕೆ ಕಠಿಣವಾಗಿ ಹೇಳುವವರೆಗೂ ಅವಳು ಕೊಯಮುತ್ತೂರಿನಲ್ಲಿಯೇ ಇದ್ದಳು. ಭಾರತ ಸರಕಾರ ಮತ್ತು ಬ್ರಿಟಿಷ್ ಸರಕಾರ (White Hall) ಇವರು ಮದ್ರಾಸು ಸರಕಾರದ ಈ ಅನ್ಯಾಯಕ್ಕೋಸ್ಕರ ಮಾಡಿದ ಅವಿಚಾರ ನೀತಿಯನ್ನು ಸರಿಪಡಿಸುವಷ್ಟರಲ್ಲಿ ಬರೀ ಮೂರು ತಿಂಗಳು ಮಾತ್ರ ಕಳೆಯಿತು. ಪರಿಣಾಮವಾಗಿ ಇಡೀ ದೇಶವು ಜಯಘೋಷ ಸಮೇತವಾಗಿ ನಿರೀಕ್ಷಿಸುತ್ತಿದ್ದಂತೆಯೇ ಅನಿ ಬೆಸೆಂಟ್, ಅರುಂಡೇಲ್ ಮತ್ತು ವಾಡ್ಯ ಇವರನ್ನು ಬಿಡುಗಡೆ ಮಾಡುವ ಆಜ್ಞೆಯು ಬಹಿರಂಗವಾಯಿತು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸನ್ನು ಅದರ ಪ್ರಾರಂಭಾವಸ್ಥೆಯಲ್ಲಿ ಗಾಂಧೀಜಿಯ ಮಾತಿನಂತೆ ಅದನ್ನು "ಪಾಲಿಸಿ ಪೋಷಿಸಿದ" ಭಾರತದ ಅಂದಿನ ಪಿತಾಮಹನೆಂದೆನಿಸಿದ್ದ ದಾದಾಭಾಯಿ ನವರೋಜಿ ಮತ್ತು ಇನ್ನೊರ್ವ ಶಿಲ್ಪಿ ಫಿರೋಜ್ ಷಾ ಮೆಹತಾ ಇವರೊಡನೆ ಅನಿ ಬೆಸೆಂಟ್ ಇವಳು 1917ರಲ್ಲಿ ತನ್ನ ಸೆರೆಮನೆಯಿಂದ ಬಿಡಲ್ಪಟ್ಟನಂತರ ನಡೆಸಿದ ಮಾತುಕತೆಗಳು ಸ್ಮರಣೀಯವಾಗಿವೆ. ಬೊಂಬಾಯಿಯಲ್ಲಿ ಸೇರಿದ್ದ ಮೊದಲನೇ ಕಾಂಗ್ರೆಸ್ ಅಧಿವೇಶನದಲ್ಲಿ ಇವರಿರ್ವರೂ (ನವರೋಜಿ ಮತ್ತು ಮೆಹತಾ) ಹಾಜರಿದ್ದರು. ಅಲ್ಲಿಂದನಂತರ ತನ್ನ ಕಡೇದಿನದವರೆಗೂ ದಾದಾಭಾಯಿ ನವರೋಜಿಯು ಭಾರತದ ಸಾಮಾಜಿಕ ಮತ್ತು ರಾಜಕೀಯ ಸುಧಾರಣೆಗಳೆರಡರ ಬಗ್ಗೆಯೂ ದುಡಿದವರಲ್ಲಿ ಅಗ್ರಗಣ್ಯನೆಂದೆನ್ನಬಹುದು. ಈ ಇರ್ವರು (ನವರೋಜಿ ಮತ್ತು ಅನಿ ಬೆಸೆಂಟ್) ಭಾರತೀಯ ದೇಶಾಭಿಮಾನಿಗಳು ಪರಸ್ಪರ ಭೇಟಿಯಾದರು. ಪಾಶ್ಚಾತ್ಯ ದೇಶವು ಭಾರತಕ್ಕೆ ತೇಜಸ್ವಿ ಮುಂದಾಳು ಇವಳನ್ನು ಇತ್ತುದಕ್ಕೆ ನವರೋಜಿಯು ಬಹಿರಂಗವಾಗಿ ಸ್ತುತಿಸಿದ್ದುದನ್ನು ನಾನು ಇಂದಿಗೂ ಚೆನ್ನಾಗಿ ನೆನೆಯುತ್ತಿದ್ದೇನೆ.

ಅನಿ ಬೆಸೆಂಟಳು ಸೆರೆಮನೆಯಿಂದ ಹೊರಬಂದೊಡನೆ ಬೊಂಬಾಯಿಯಲ್ಲಿ ಆವರೆಗೂ ಯಾವ ಸಾರ್ವಜನಿಕ ಮುಂದಾ

ಷ್ಟವಿಗೂ ಕೊಡದೇ ಇದ್ದಂಥ ಅಭೂತಪೂರ್ವವಾದ ಸ್ವಾಗತವನ್ನು ಪಡೆದಳು. ಆದರೆ ಬೊಂಬಾಯಿ ನಗರದಿಂದ ಅನತಿ ದೂರದಲ್ಲಿಯೇ ತನ್ನ ನಿವೃತ್ತಿ ಜೀವನವನ್ನನುಭವಿಸುತ್ತಿದ್ದ ವೃದ್ಧ ದಾದಾಭಾಯಿ ನವರೋಜಿಯನ್ನು ಪ್ರತ್ಯಕ್ಷವಾಗಿ ಕಾಣುವ ಸುಯೋಗದಿಂದ ಅವಳಿಗುಂಟಾದ ಸಂತೋಷಕ್ಕಿಂತ ಬೇರೆ ಯಾವುದೂ ಇರಲಿಲ್ಲ.

ಹೀಗೆ ಕೆಲ ಸಮಯ ನಿಂತು ಹೋಗಿದ್ದ ಯಂತ್ರವು ಪುನಃ ಚಾಲನೆ ಆರಂಭವಾಯಿತು; ಅದರೊಡನೆಯೇ ಅವಳ ಅಸ್ವಸ್ಥತೆಯೂ ಮಾಯವಾಯಿತು. ಹಾಗಿದ್ದರೂ ಅವಳ ಅಮೋಘ ದೈಹಿಕ ಶಕ್ತಿಗೆ ಧಕ್ಕೆ ಬಡಿದಂತಾಗಿ ಬಹುಶಃ ಅದೇ ಅವಳ ಜೀವಕ್ಕೆ ನಿರಂತರವಿರುತಕ್ಕ ಅಪಾಯದಂತೆ ಇತ್ತು. ಆ ಖೇದಕರವಾದ ಘಟನೆಯನಂತರ ಅವಳು ಹದಿನಾರು ವರ್ಷಗಳ ಕಾಲ ಜೀವಿಸಿದ್ದಳು. ಆದರೆ ಅವಳಿಗೆ ಆ ಸಿಕ್ಕಿವತ್ತನ ಮಾನವು ಲಭಿಸದೇ ಹೋಗಿದ್ದರೆ, ಪಾಶ್ಚಾತ್ಯ ವಿದ್ಯೆಯನ್ನು ಪಡೆದವರು ಮತ್ತು ಅವಳ ಪ್ರಬಲ ಮುಂದಾಳುತನದ ಪರಿಣಾಮವಾಗಿ ಮುಂದಕ್ಕೆ ಬಂದವರು ತಮ್ಮ ಅಂತರ್ಯದಲ್ಲಿ ಅವಳೆಡೆಗೆ ಸಹಾನುಭೂತಿಯಿಂದ ವರ್ತಿಸಿದ್ದರೆ ಅವಳು ಇನ್ನೂ ಕೆಲಕಾಲ ಬದುಕುತ್ತಿದ್ದಳೆಂದು ಅವಳ ಜತೆಗಾರರು ನಂಬಿದ್ದರು. ಒಂದು ಶತಮಾನಕ್ಕಿಂತಲೂ ಹೆಚ್ಚಾಗಿ ಪಾಶ್ಚಾತ್ಯರು ಈ ದೇಶದಲ್ಲಿ ಪ್ರಭಾವವನ್ನು ಬೀರಿದ್ದರಿಂದ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಜನತೆಯು ಕರಗಿಟ್ಟು ತೋರುತ್ತಿದ್ದುದರಿಂದ ಅವಳ ಪ್ರಭಾವವು ದೇಶದಲ್ಲಿ ಅತಿ ಅಲ್ಪಕ್ಕೆ ಹೂಗಟ್ಟಿಕೊಂಡಾಯಿತು. ದೇಶದ ಜನತೆಯಲ್ಲಿ ಪರಕೀಯರ ಪ್ರಭಾವವು ರಕ್ತಗತವಾಗಿ ಹೊಕ್ಕಿದ್ದಿತಲ್ಲದೆ ಶುದ್ಧ ಭಾರತೀಯರಾದರೂ ಅವರು ಪಾಶ್ಚಾತ್ಯರಂತೆ ತೋರ್ಪಡಿಸಿಕೊಂಡಿರುತ್ತಿದ್ದರು.

ಅನಿ ಬೆಸೆಂಟ್ ಇವಳ ಚಟುವಟಿಕೆಗಳು ಜಯಪ್ರದವಾಗುತ್ತಾ ಬಂದಂತೆ, ಮತ್ತು ಅವಳು ಇಂಗ್ಲೀಷಿನಲ್ಲಿ ಮಾತಾಡುತ್ತಿದ್ದಳಾದರೂ, ಅವಳನ್ನುವುದನ್ನು ಕೇಳಲು ಜನರು ಗುಂಪುಗೂಡುತ್ತಿದ್ದರಲ್ಲದೆ ಅವಳನ್ನು ಜನರು "ದೇವತೆ"ಯೆಂದೇ ಪೂಜಿಸಿದ್ದರು. ಆರ್ಥಿಕ ಪ್ರಗತಿಯನ್ನು ಹೊಂದಿದವರಿಗಿಂತಲೂ ಜನಸಾಮಾನ್ಯರು ಪರಿಸ್ಥಿತಿಯನ್ನು ಚೆನ್ನಾಗಿ ತಿಳಿಯಬಲ್ಲವರಾಗಿದ್ದರು. ಏಕೆಂದರೆ ಅವರಲ್ಲಿ ಭಾರತದ ಆತ್ಮೀಯತೆಯು ಇತರರಿಗಿಂತಲೂ ಹೆಚ್ಚಾಗಿ ಮನೆಮಾಡಿತ್ತು. ಆದರೆ ಅವರು ಬಡತನ, ಕ್ಷಾಮ ಮತ್ತು ಪಾಶ್ಚಾತ್ಯ ದೇಶಗಳಲ್ಲಿರುವುದಕ್ಕಿಂತ ಹೆಚ್ಚಾಗಿ ನಿರುದ್ಯೋಗದಿಂದ ಸೊರಗಿದ್ದರಿಂದ ಅವರು ಶಿಕ್ಷಣವನ್ನು ಬಗೆಹರಿಸಲು ನಿಸ್ಸಹಾಯಕರಾಗಿದ್ದರು. ಅವರು ಬರೇ ಜೋಡಿಕೆಯ ಮುಗ್ಧತೆಯಿಂದ ಕಣ್ಣೆತ್ತಿ ನೋಡುವವರಲ್ಲದೆ ಕಾರ್ಯತಃ ಮುಂದಕ್ಕೆ ಸಾಗಲು ಅವರಿಗೆ ಸಾಧ್ಯವಾಗಲಿಲ್ಲ.

ಅನಿಯವರು ಎಲ್ಲಿಡೆಯೂ ಜನಸಾಮಾನ್ಯರ ಪ್ರಶಂಸೆಗೆ ಪಾತ್ರಳಾದಂತೆ ಈ ದೇಶದಲ್ಲೂ ಅವಳು ಸರ್ವಮಾನ್ಯಳಾದಳು. ಪಾಶ್ಚಾತ್ಯರ ಪ್ರಭಾವದ ಕಾರಣದಿಂದ ಮತ್ತು ಅನಿ ಬೆಸೆಂಟ್ ಇ

ಪಳ ಅಮೋಘ ಜ್ಞಾನಶಕ್ತಿ ಮತ್ತು ಜನಸಂಘಟನಾ ಶಕ್ತಿಯ ಎದುರಿಗೆ ಕೆಲವೇ ಜತ್ತ ಧನವಂತ ರಾಜಕಾರಣಿಗಳನ್ನುಳಿದು ಸಾಮಾನ್ಯ ಭಾರತೀಯ ಕೆಲಸಗಾರನು ರಾಜಕೀಯಕ್ಕೆ ಇಳಿಯಲು ಶಕ್ತಿಯುಳ್ಳದ್ದೆಂದು ತಿಳಿಯಬೇಕಾಯಿತು. ಅವನ ಭಾರತೀಯ ಆತ್ಮವೆಂಬ ಗೂಡಿನೊಳಗೆ ಶಾಶ್ವತ್ಯ ಖಾತ್ರಿಕವಾದದ್ದು ಕೊನೆಗೂ ಕುಗ್ಗದ ಕಾರಣದಿಂದ ಅವನು ಭರತಖಂಡದ ಆರ್ಯಯತ್ವೆಯೆಂಬ ಆತ್ಮದ ಸಂಬಂಧವನ್ನು ತೋರಿಸಿದ್ದನು. ಕೆಲವರನ್ನು ಮಾತ್ರ ಉಳಿದು ಇಡೀ ದೇಶದಲ್ಲಿ ಮಹಾಶಕ್ತಿ ಮತ್ತು ದಿವ್ಯ ಸಾತ್ವಿಕ ಗುಣದ ಸತ್ಯಶ್ರದ್ಧೆ ಇಲ್ಲದ ಕಾರಣದಿಂದ ಅಂದು ಆತ್ಮಶಕ್ತಿಯ ಒಳಹೊಗಲು ಯಾವುದೇ ಸತ್ವಬಲವು ಇಲ್ಲದಂತಿತ್ತು. ಇಂಥ ಪರಿಸ್ಥಿತಿ ಒಂದೆಡೆ ಇದ್ದಾಗ ಇನ್ನೊಂದೆಡೆ ಗಾಂಧೀಜಿಯ ಬೇಜವಾಬ್ದಾರಿಕೆಯ ವಿಚಿತ್ರ ರಾಜಕೀಯವು ಹಲವು ಬಾರಿ ಪ್ರದರ್ಶನಾರ್ಥವಾಗಿ ಮಾತ್ರವಿದ್ದು ಕೇವಲ ನಿರರ್ಥಕವೆನಿಸಿದರೂ ದೇಶದ ಜನಸಾಮಾನ್ಯರ ಮನವೊಲಿಸಿತ್ತು. ಇದರ ಮಧ್ಯೆ ಆನಿ ಬೆಸೆಂಟ್ ಇವರು ಏಕಾಂಗಿಯಾಗಿ ತನ್ನ ತತ್ವವನ್ನು ಹಿಡಿದು ಕಾದಬೇಕಾಗಿತ್ತು. ಅವರಿಗೆ ಇತರ ರಾಜಕಾರಣಿಗಳಂತೆ ಕಾಲಹರಣ ಮಾಡಲು ಮನಸ್ಸಿರಲಿಲ್ಲ; ಗಾಂಧೀಜಿಯ ಚಳುವಳಿ ಕ್ರಮವು ಅವರಿಗೆ ಹಿಡಿಸಲಿಲ್ಲ, ಗಾಂಧೀಜಿಯ ರಾಜಕೀಯವು ಒಂದಲ್ಲ ಒಂದು ದಿನ ಹಿಂದೂಸ್ಥಾನವನ್ನು ರಕ್ತದಲ್ಲಿ ತೋಯಿಸದಿರಲಾರದೆಂದೂ ದೇಶವು ಸ್ವರಾಜ್ಯವನ್ನು ಪಡೆಯುವ ಕಾಲಾವಧಿಯನ್ನು ಮುಂದಕ್ಕೆ ತಳ್ಳುತ್ತದೆ ಎಂಬುದಾಗಿಯೂ ಆನಿಯವರು ತಿಳಿದೇ ಇದ್ದರು.

ತಾನು ಸೆರೆಮನೆ ವಾಸವನ್ನು ಅನುಭವಿಸಿ ಮೂರು ವರ್ಷಗಳನಂತರ, ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷೆಯಾಗಿ ಅಮೋಘವಾಗಿ ದುಡಿದು ದೇಶದಲ್ಲಿ ಜನಜಾಗೃತಿಯನ್ನೆಬ್ಬಿಸಿದನಂತರ ಆನಿಯವರು ತನ್ನ ಎದುರು ಜನ ಆಕ್ರೋಶವನ್ನು 1920ರ ಲಾಹೋರ್ ಕಾಂಗ್ರೆಸ್ ಅಧಿವೇಶನದ ವೇಳೆಗೆ ಸಹಸ್ರಾರು ಜನವನ್ನು ಎದುರಿಸಿ ಏಕಾಂಗಿಯಾಗಿ ನಿಂತರು. ಸರಕಾರದ ವಿರೋಧಿವಾಗಿ ಹೋರಾಡಲು ಗಾಂಧೀಜಿ ಅನುಸರಿಸಿದ್ದ ಅಸಹಕಾರ ಚಳುವಳಿಯಿಂದ ದೇಶವು ರಕ್ತದಿಂದ ಚಿಲ್ಲಾಪಿಲ್ಲಿಯಾಗುವುದು ಮಾತ್ರವಲ್ಲದೆ ಅದರಲ್ಲಿ ಭಾಗವಹಿಸುವ ನಿಸ್ಸಹಾಯಕ ಜನರು ಪಡಬೇಕಾದ ದುರವಸ್ಥೆಯನ್ನು ಕುರಿತು ಭವಿಷ್ಯ ನುಡಿದಿದ್ದರಲ್ಲದೆ ಆ ಅಸಹಕಾರ ನೀತಿಗೆ ವಿರುದ್ಧವಾಗಿ ಏಕಾಂಗಿಯಾಗಿ ನಿಂತರು.

ಈ ಅಸಹಕಾರ ಚಳುವಳಿ ಅಧಿಮಾ ಸತ್ಯಾಗ್ರಹವು ತನ್ನ "ಹಿಮಾಲಯದಷ್ಟು ದೊಡ್ಡ ತಪ್ಪು" ಎಂಬುದು ಗಾಂಧೀಜಿ ಅಂದೇ ಹೇಳಿಕೊಂಡರು. ಪರಿಣಾಮವಾಗಿ ಅದರಿಂದ ಬೇಗನೆ ಬಂದಿದ್ದ ಪರಿಸ್ಥಿತಿಗೆ ಜನತೆಯನ್ನು ತರುವುದೇ ಅವನ ನಿತ್ಯದ ಕಾರ್ಯಕ್ರಮವಾಗಿತ್ತು. ಹಾಗಿದ್ದರೂ ರಕ್ತಪಾತ ಮತ್ತು ಜನತೆಯನ್ನು ಹತ್ತಿಕ್ಕುವ ದುರಂತದ ಸಿನಾಹತವು ನಡೆದೇ ನಡೆದಿತ್ತು. ಆನಿ ಬೆಸೆಂಟ್ ಇವರು ಇದನ್ನು

ಉಂಟಾಗುವುದೆಂದು ಹಿಂದೆಯೇ ತಿಳಿದಿದ್ದಳು. ತನ್ನ ಯೌವನದಿಂದಲೇ ಅವಳು ಜನಸಂದಣಿಯನ್ನೂ, ಜನವು ಹಿಂಸಾರೀತಿಯಲ್ಲಿ ವರ್ತಿಸುವುದನ್ನೆಲ್ಲ ಅಂದೇ ಕಂಡಿದ್ದಳು, ಯಾವ ಒಳ್ಳೆಯದೂ ಕಾನೂನು ಮತ್ತು ಶಿಕ್ಷೆಗೆ ಒಳಪಡದೆ ಬೆಳೆಯಲಾರದೆ ಬೇಜವಾಬ್ದಾರಿಕೆಯು ಆಳಿಸಿತ್ತು, ಅಕ್ರಮನೀತಿಯನ್ನಲ್ಲವೆಂದು ಚಾರ್ಲ್ಸ್ ಬ್ರ್ಯಾಡ್ಲಾಯು ಅವಳಿಗೆ ಬೋಧಿಸಿದ್ದನು, ಸಮಾಜದ ಪ್ರಗತಿಗೆ ಸಾಧನವಾದ ಕಾನೂನುಗಳನ್ನು ಮೀರುವುದಾದರೆ, ಅವಿಧೇಯತೆಯು ತಾಂಡವವಾಡಿದರೆ ಆ ಕಾನೂನು ತಿರಸ್ಕಾರವು ಸಹ ಅಂಥ ಕಾನೂನಿನ ಒಳಗೆ ಅಡಗಿರಬೇಕು, ತಾನೇಕೆ ತಿರಸ್ಕರಿಸಿದ್ದೇನೆಂಬುದನ್ನು ಅಂಥ ಕಾನೂನು ಕಾಯಿದೆಗಳು ವಿವರಿಸುವಂತಿರಬೇಕು. ಸಮಾಜವನ್ನು ಸರಿಗಟ್ಟಲು ಜಾರಿಯಲ್ಲಿರುವ ಕ್ರಮವನ್ನು ಮೀರುವ ಅವಿಧೇಯತೆಯೆಂಬ ಗುಣವು ಸಹ ಕ್ರಮಬದ್ಧವಾಗಿರಬೇಕು, ಎಲ್ಲಿ ಹಿಂಸಾಕೃತ್ಯವು ಸಂಭವಿಸಬಹುದೆಂದು ತೋರುವುದೋ ಅದೇ ಕಾನೂನನ್ನು ಪ್ರತಿಭಟಿಸುವ ಸನ್ನಿವೇಶ ಎಲ್ಲಿದೆಯೋ ಅಂಥ ಸಂದರ್ಭಗಳಲ್ಲಿ ನಾಯಕನೇ ಮುಂದೆ ಬಂದು ಆ ಚಳುವಳಿಯನ್ನು ಮುನ್ನಡೆಸಬೇಕೆಂದೂ ಅವಳಿಗೆ ತಿಳಿದಿತ್ತು. ನಾಯಕನು ಮುಂದೆ ನಡೆಯಬೇಕು; ಮುಂದೆ ಶಿಕ್ಷೆಗೆ ಯಾ ಹಿಂಸೆಗೆ ಒಳಗಾಗಬೇಕು; ಅವನು ಸ್ವತಃ ಭಾಗವಹಿಸದ್ದ ಅಥವಾ ಭಾಗವಹಿಸಲಿಚ್ಛಿಸದ ಚಳುವಳಿಯಲ್ಲಿ ಅವನು ಇತರರಿಗೆ ಶಾಸನದಂತೆ ಮಾಡಿರಿ ಎಂದು ಆಜ್ಞಾಪಿಸುವ ಧಿಕ್ಕೃತನವನ್ನು ಕೈಕೊಳ್ಳಬಾರದು.

ಗುಲ್ಲೆಬ್ಬಿಸುವ ಸಹಸ್ರಾರು ಜನಕ್ಕೆ ವಿರೋಧವಾಗಿ ತಾನೊಬ್ಬಳೇ ನಿಂತಳು ಅನಿಬೆಸೆಂಟ್! ಭಾರತದ ಸೇವೆಗಾಗಿ, ಭಾರತೀಯರಿಗಾಗಿ ಒಬ್ಬಳೇ ನಿಂತಳು, ಯಾವ ನಿತ್ಯದ ಮಾರ್ಗವನ್ನು ಹಿಡಿದು ಒಂದಲ್ಲ ಒಂದು ಕಾಲದಲ್ಲಿ ಮರುಳಾದ ಜನತೆಯು ಸಾಗಬೇಕೋ ಆ ಭಾರತದ ಸ್ವಾತಂತ್ರ್ಯದ ಹಾದಿಯಲ್ಲಿ ಒಬ್ಬಳೇ ನಿಂತಳು, ಕಡೆಗಂತೂ ಒಂಟಿಯಾದಳು. ತಾನು ಒಬ್ಬಳೇ ಇರಲು ಇಚ್ಛಿಸಿದ್ದ ಅವಳು, ಹಿಂದೂಸ್ಥಾನದಲ್ಲಿ, ತಾನು ಹೃತ್ಪೂರ್ವಕವಾಗಿ ಪ್ರೀತಿಸಿದ ಭಾರತೀಯರಿಂದ ಅವಳು ಒಬ್ಬಳೇ ನಿಂತಳು. ಅವಳ ಸೇವೆ ಮತ್ತು ತ್ಯಾಗದ ಪರಿಣಾಮವಾಗಿ ಅವರಿಗೆ ಲಭಿಸಬಹುದಾದ ಕ್ಷೇಮಕ್ಕಾಗಿ ಅವಳು ಒಬ್ಬಳೇ ಇರುವಂತಾದಳು, ತನ್ನ ಪ್ರೀತಿಯ ಭಾರತಖಂಡಕ್ಕೆ ತನ್ನ ನೆತ್ತರನ್ನು ಕೊಟ್ಟಳು, ಇದೀಗ ಅದನ್ನು ತನ್ನ ಪ್ರಾಣಾಂತ ಯಾತನೆಯಿಂದ ತಿರುಗಿ ಕೊಂಡುಕೊಳ್ಳುತ್ತಿದ್ದಳು, ಜನ ಅವಳ ರೀತಿ ನೀತಿಯನ್ನು ನಿರಾಕರಿಸಿದರೂ ಅವಳ ಪ್ರೀತಿಯು ಅವರಲ್ಲಿ ಇನ್ನಷ್ಟು ಕಳೆಗೊಂಡು ಹೆಚ್ಚಿತು, ಇಂದಿಗೂ ಪ್ರತಿ ವರ್ಷ ಅವಳ ಹುಟ್ಟಿದ ದಿನವಾದ ಅಕ್ಟೋಬರ್ 1ನೇ ದಿನ ಅವಳ ಸೇವೆಯನ್ನು ಕೊಂಡಾಡುವುದು ಒಂದು ಸಂಪ್ರದಾಯವೇ ಆಗಿದೆ, ಅವಳ ಮೇಲೆ

ಹೊಗಳಿಕೆಯ ಮಳೆಯನ್ನು ಸುರಿಸಲು ಸಭೆಗಳನ್ನು ಸೇರಿಸಲಾಗುತ್ತಿವೆ.
ಆ ಸಭೆಗಳಲ್ಲಿ ಮಾತಾಡುವವರಾದರೋ 'ಅವಳು ಎಂದು ಬಹುಮುಖವಾ
ಗಿ ದೇಶಕ್ಕೆ ಶ್ರಮಿಸುವಾಗ ಅವಳನ್ನು ನಿಂದಿಸಿದವರೂ ಅವಳ ಮಹ
ತ್ವವನ್ನರಿಯಲು ಅಸಮರ್ಥರಾಗಿದ್ದವರೂ ಅವಳ ಕಾರ್ಯಕ್ರಮಕ್ಕೆ
ವಿರೋಧಿಸಿದವರೂ ತಪ್ಪು ತೋರಿಸಿದವರೂ ಆಗಿರುವವರು. ಅವಳ ಪ್ರಖ್ಯಾ
ತಿಯ ಪ್ರತಿಧ್ವನಿಯು ಅವರಿಗೆ ಬೇಸರವನ್ನುಂಟುಮಾಡಿತು. ಆದರೆ
ಈಗ ಅವರು ಅವಳನ್ನು ಕುರಿತು ಏನೇನು ಹೇಳುತ್ತಾರೋ ಅದನ್ನೆಲ್ಲ
ಹಿಂದೆ ಅವಳು ಸ್ವತಃ ಬಂದು ಭಾರತದ ಇಂದಿನ ದುಃಸ್ಥಿತಿಯನ್ನು
ಸುಧಾರಿಸುವ ಬಗೆ ಕರೆಕೊಟ್ಟರೆ ಖಂಡಿತವಾಗಿಯೂ ಅವರು ತಾವು
ಏನೇನೋ ಟೀಕೆಯನ್ನು ಮಾಡಿದ್ದನ್ನೆಲ್ಲ ತಾವೇ ಒಪ್ಪಲಾರರು. ಹಾಗಿ
ದ್ದರೂ ಬಹುಶಃ ಅವಳನ್ನು ವಿರೋಧಿಸಿದ ಆ ಕೆಲವರು ಅವಳನ್ನು
ಈಗ ಪ್ರಶಂಸಿಸುವುದೇಕೆ, ಅವಳ ಪ್ರತಿಭೆ ಮತ್ತು ಪ್ರಸಿದ್ಧಿಯನ್ನು
ಒಪ್ಪದೇ ಇದ್ದವರು ಸಹ ಇಂದು ಸ್ಪಷ್ಟವಾಗಿ ಅವಳ ಶ್ರೇಷ್ಠತೆ
ಯನ್ನು ಮನಗಂಡಿರುವರೆಂದರೆ ಅದು ಅವರ ಸತ್ಯ ಹಾಗೂ
ನ್ಯಾಯಪರತೆಯಿಂದಿರಬಹುದೇ ?

ಆಕೆಯ ಜೀವನದ ಆ ಉತ್ಕೃಷ್ಟ ವೇಳೆಯಲ್ಲಿ ಸಹ ಅವಳ
ಒಂಟಿ ಜೀವನ ಮತ್ತು ತ್ಯಾಗವು ಅವಳನ್ನು ಸುತ್ತುವರಿದಿತ್ತು. ಸ
ತ್ಯಾನ್ವೇಷಣೆಗಾಗಿ ಅವಳು ಮಾತೃತ್ವದಲ್ಲಿ ದೊರಕುವ ಸಂತೋಷ
ವನ್ನೆಲ್ಲ ತೊರೆದಾಗ ಅವಳಲ್ಲಿ ಏಕಾಂಗಿ ಜೀವನ ಮತ್ತು ತ್ಯಾಗ
ವು ಅಂತೇ ಕೂಡಿತ್ತು. ಚಾರ್ಲ್ಸ್ ಬ್ರಾಡ್ಲೇ ಇವರಿಂದ ಅಗಲಿದಾ
ಗಲೂ ಅವಳಲ್ಲಿ ಅದೇ ಗುಣಗಳು ವ್ಯಕ್ತವಾಗಿದ್ದುವು. ಅದಕ್ಕಿಂತ
ಲೂ ಹಲವು ಆತ್ಮೀಯರಿದ್ದ ಏಕಾಂಗಿ ವಾಸ ಮತ್ತು ತ್ಯಾಗಶೀಲಗಳನ್ನು
ಅವಳು ಅನುಭವಿಸಿದ್ದಳು. ಅವಳ ಧೈರ್ಯ ಮತ್ತು ಮಾನವ
ತೆಗೆ, ಅದರಲ್ಲೂ ಭಾರತಖಂಡಕ್ಕೆ, ಯಾರ ಸೌಖ್ಯವನ್ನು ಬಯಸಿ
ಬಂದಳೋ ಅವರ ಆದರ್ಶವನ್ನು ನಿಷ್ಠೆಯಿಂದ ಪಾಲಿಸಿದಳು.

ಆದರೆ ಆ ಏಕಾಂಗಿ ಜೀವನದ 'ಪವಿತ್ರ' ನಿಷ್ಠೆಯು ಒದ
ಗಿಸುವುದಕ್ಕಿಂತ ಮುಂದೆ ಅವಳನ್ನು ದೇಶದ 'ಪವಿತ್ರ' ಜನಸ್ತೋಮ
ಮತ್ತು ಸುತ್ತುವರಿದ 'ಪವಿತ್ರ' ದಿನಗಳೂ ಇದ್ದುವು, "ಯಾವ
ಪಾದವನ್ನು ಮುಟ್ಟಲು ತಾನು ಅನರ್ಹನೋ (ಅನರ್ಹಳೋ) ಆ ಪಾದ
ಧೂಳಿಯು ಪೂಜೆಗೆ" ಎಂಬುದಾಗಿ ಇರುವ ಬೈಬಲ್ ಸೂಕ್ತಿಯನ್ನು
ಇಲ್ಲಿ ಹೋಲಿಸಲು ಅನುಮತಿಯನ್ನು ಕೇಳುತ್ತೇನೆ. ಅವಳು ಕಾರಾ
ಗೃಹದಿಂದ ಹೊರಬಂದಾಗ ನಿಜವಾಗಿಯೂ ಅವಳೊಬ್ಬ ರಾಷ್ಟ್ರೀಯ
ಕಣ್ಮಣಿಯಾದಳು. ಅವಳು ಹೋದೆಡೆಯಲ್ಲೆಲ್ಲ ಸಹಸ್ರಾರು
ಜನರು ಅವಳನ್ನು ಸ್ವಾಗತಿಸಿದರು. ಅವಳು ರೈಲಿನಲ್ಲಿ ಪ್ರಯಾಣ
ಬೆಳೆಸುವಾಗ ಹಗಲೂ ರಾತ್ರಿಯೂ ದಾರಿ ಉದ್ದಕ್ಕೂ ಇಡೀ ದೇಶದ

ಎಲ್ಲಾ ಜಿಲ್ಲೆಗಳಲ್ಲೂ ಜನಸಂದಣಿಯು ಉತ್ಸಾಹದಿಂದ ಅವಳಿಗಾಗಿ ಕಾಯುತ್ತಿದ್ದರು. ಕಡೆಗಾಗಿ ಅಂದಿನ ಮದ್ರಾಸ್ ಅಧಿಕೃತ ಸರಕಾರಕ್ಕೆ ವಂದನೆಗಳು; ಅವಳನ್ನು ಸೆರೆಗೊಯ್ದ ನಂತರ ಅವಳ ಜಯಭೇರಿಗೆ ಕಿರೀಟಪ್ರಾಯವೆಂಬಂತೆ 1917 ರಲ್ಲಿ ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ವಿಶೇಷ ಸಭೆಗೆ ಅವಳು ಅಧ್ಯಕ್ಷೆಯಾಗಿ ಚುನಾಯಿತಳಾದಳು! ಹಲವು ವಿಷಯಗಳನ್ನು ಕುರಿತಾಗಿ ಪ್ರಸ್ತಾಪಿಸಲಾದ ಅವಳ ಅಧ್ಯಕ್ಷೀಯ ಭಾಷಣವು ಬಹು ಉದ್ಧಾಮ ಕೃತಿಯೆಂಬುದಾಗಿ ಸರ್ವರ ಪ್ರಶಂಸೆಗೂ ಪಾತ್ರವಾಯಿತು!

ಆನಿ ಬೆಸೆಂಟ್ ಇವಳು ತನ್ನ ಜೀವನದಲ್ಲಿ ರಚಿಸಿದ ಕೃತಿಗಳಲ್ಲಿ ಅವಳು 1917 ರಲ್ಲಿ ಕಲ್ಕತ್ತಾದಲ್ಲಿ ಮೇಲೆ ಸೂಚಿಸಿದ ಆ ಸಭೆಗೆ ಮಾಡಿದ ಭಾಷಣದಿಂದ ಅವಳು ಸ್ವಾತಂತ್ರ್ಯಯೋಧಳಾಗಿ ಎದ್ದುನಿಂತವಳೆಂದು ನಾನು ನಂಬುತ್ತೇನೆ. ಅವಳು ಸೆರೆಮನೆಯಿಂದ ಹೊರಬಂದ ನಂತರ ತುಂಬಾ ಸಂಶೋಧನೆ ಮತ್ತು ಪರಿಶೀಲನೆ ನಡೆಸಿ ಆ ಭಾಷಣವನ್ನು ತಯ್ಯಾರಿಸಿದ್ದಳು. ತನ್ನನ್ನು ಅಧ್ಯಕ್ಷೆಯಾಗಿ ಆರಿಸಿದ ಆ ಮಹಾ ಸಂಸ್ಥೆಗೆ ಕೃತಜ್ಞತೆಯನ್ನು ಹಿಂದೂಸ್ಥಾನದ ಗತವೈಭವವನ್ನು ನೆನಪಿಗೆ ತರುವುದಕ್ಕೂ ಮುಂದೆ ತಾವು ಮಾಡಬೇಕಾಗಿದ್ದ ಕೆಲಸಗಳನ್ನು ಸಾಧಿಸುವುದರ ಬಗ್ಗೆಯೂ ಅವಳು ಮದ್ರಾಸಿನ ಎಲ್ಲಾ ಸಾರ್ವಜನಿಕ ಹಾಗೂ ಖಾಸಗೀ ಗ್ರಂಥಭಂಡಾರಗಳಿಂದ ಗ್ರಂಥಗಳು, ವಾರ್ತಾಪತ್ರಿಕೆಗಳು ಮತ್ತು ಕಾಗದಪತ್ರಗಳನ್ನೆಲ್ಲ ಸಂಗ್ರಹಿಸಿ ತನ್ನ ಕೋಣೆಯಲ್ಲಿ ಗುಪ್ತವಾಗಿ ಹಲವು ದಿನಗಳ ವರೆಗೆ ಕುಳಿತು ಬರೆಯುತ್ತಿದ್ದುದನ್ನು ನಾನು ಚೆನ್ನಾಗಿ ನೆನೆಯುತ್ತೇನೆ.*

ಈ ಪ್ರಬಲ ಭಾಷಣದಿಂದ ಹಲವು ಪ್ರಾಮುಖ್ಯ ಅಂಶಗಳನ್ನು ಇಲ್ಲಿ ಎತ್ತಿ ಹೇಳದಿದ್ದರೆ ನನ್ನ ಮನಸ್ಸು ಒಪ್ಪುವುದಿಲ್ಲ. ಅವಳು ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ಓದಿದ ತನ್ನ ಭಾಷಣದ ಪ್ರತಿಯನ್ನು ಅಡೆಯಾರ್ ತತ್ವಜ್ಞಾನ ಶಿಬಿರದ ಪ್ರದರ್ಶನಾಲಯದಲ್ಲಿ ಇಡಲಾಗಿದೆ. ಹೇಗೂ ಇಲ್ಲಿ ಅವಳ ಭಾಷಣದ ಪ್ರಧಾನಾಂಶಗಳ ಎತ್ತಿತೋರಿಸಿ ಅದರ ಪ್ರಾರಂಭದ ಮತ್ತು ಕೊನೆಯ ಭಾಗಗಳನ್ನು ಮಾತ್ರ ಇಲ್ಲಿ ಕೊಡುತ್ತಿದ್ದೇನೆ. ಮೊತ್ತಮೊದಲಾಗಿ ಅವಳು ಹೀಗೆಂದಳು:—

"ನನ್ನನ್ನು ಅವಮಾನಕ್ಕೀಡಾಗಿಸಿದಾಗ ನೀವು ನನಗೆ ಕಿರೀಟವನ್ನೇರಿಸಿ ಗೌರವಿಸಿದ್ದೀರಿ. ನನ್ನನ್ನು ದೂಷಿಸುತ್ತಿದ್ದಾಗ ನೀವು ನನ್ನ ಕರ್ತವ್ಯದಕ್ಷತೆ ಮತ್ತು ಸದಭಿಮಾನದಲ್ಲಿ ವಿಶ್ವಾಸವನ್ನಿಟ್ಟಿದ್ದೀರಿ. ಸಾಮ್ರಾಜ್ಯ ನ್ಯಾಯದ ತಕ್ಕಡಿಯಲ್ಲಿ ನಿಲುಕಿ ನಾನು ನಿಷ್ಕಳಂಕಿಯಾಗಿ

---

* ಈ ಭಾಷಣವು The Besant Spirit ಗ್ರಂಥಮಾಲೆಯ ನಾಲ್ಕನೇ ಕಾಂಡದಲ್ಲಿ ಪ್ರಕಟವಾಗಿದೆ.

ತಿದ್ದಾಗ ನೀವು ನನ್ನನ್ನು ನಿಮ್ಮ ನಾಯಕತ್ವದಿಂದ ಸಾರಿದೀರಿ. ನನ್ನ ಬಾಯನ್ನು ಮುಚ್ಚಿ ನನ್ನನ್ನು ನಾನೇ ರಕ್ಷಿಸಿಕೊಳ್ಳಲು ಆಗದೇ ಇದ್ದಾಗ ನೀವು ನನ್ನ ಬಿಡುಗಡೆಗಾಗಿ ವಾದಿಸಿ ಸೆರೆಮನೆಯಿಂದ ಬಿಡಿಸಿದ್ದೀರಿ. ನಾನು ನನ್ನ ಅಲ್ಪಜೀವಿತವನ್ನು ದೈನ್ಯದಿಂದ ಮಾಡುವುದರಲ್ಲಿ ಹೆಮ್ಮೆಗೊಂಡಿದ್ದಾಗ ನೀವು ನನ್ನನ್ನು ಮೇಲೆತ್ತಿ ನಿಮ್ಮಿಂದ ಆರಿಸಲ್ಪಟ್ಟ ಪ್ರತಿನಿಧಿಯೆಂದು ನನ್ನನ್ನು ಲೋಕಕ್ಕೆ ತೋರಿಸಿದ್ದೀರಿ. ನಿಮಗೆ ನನ್ನ ಧನ್ಯವಾದಗಳನ್ನು ಅರ್ಪಿಸಲು ನನಗೆ ಮಾತೇ ಬಾರದು; ನಿಮ್ಮ ಔದಾರ್ಯವನ್ನು ತೀರಿಸಲು ನನ್ನ ವಾಗ್ಬಲವು ಸಾಲದು; ನಾನು ಮಾಡುವ ಕೆಲಸವೇ ನನಗಾಗಿ ಮಾತನಾಡಬೇಕು, ಏಕೆಂದರೆ ನನಗೆ ಮಾತಾಡುವ ಮಾತುಗಳೇ ಬಾರವು. ನೀವಿತ್ತ ಕೊಡುಗೆಯನ್ನು ತಾಯ್ನಾಡಿನ ಸೇವೆಗಾಗಿ ಮೀಸಲಾಗಿಡುವೆನು. ನನ್ನ ಜೀವವನ್ನೆ ನನ್ನ ಸೇವೆಯ ಮೂಲಕವಾಗಿ ತಾಯ್ನಾಡಿಗೆ ಅರ್ಪಿಸುವೆನು, ನನ್ನಲ್ಲಿ ಏನಿದೆಯೋ ನಾನು ಏನಾಗಿರುವೆನೋ ಅದನ್ನೆಲ್ಲ ತಾಯಿಯ ಪದತಲದಲ್ಲಿಡುವೆನು, ನಾವೆಲ್ಲರೂ ಒಟ್ಟಾಗಿ ನಮ್ಮ ಮಾತುಗಳಿಗಿಂತಲೂ ನಮ್ಮ ಸೇವೆಯಿಂದ ಹೊಗಳುವ! ವಂದೇ ಮಾತರಂ."

ತನ್ನ ಬಂಧನ ಮತ್ತು ಬಿಡುಗಡೆಯನ್ನು ಕುರಿತಾಗಿ ಅವಳು ಪ್ರಸ್ತಾಪಿಸಿದಲ್ಲಿಂದು ಅದರಿಂದ ವ್ಯಕ್ತವಾಗುವುದು, "ವಂದೇ ಮಾತರಂ" ಎಂಬುದು "ಜನ್ಮಭೂಮಿಯನ್ನು ಪೂಜಿಸಿರಿ" ಎಂಬ ಅರ್ಥದಲ್ಲಿ ಹಿಂದೂಸ್ಥಾನದ ಉದ್ದಗಲಕ್ಕೂ ಹಾಡಲ್ಪಡುವ ಬಂಕಿಂ ಚಂದ್ರ ಚಟರ್ಜಿಯ ಹಾಡಿನ ಪಲ್ಲವಿಯಾಗಿದೆ.

ಹಿಂದಿನ ಕೆಲವು ವರ್ಷಗಳಿಂದ ಭಾರತದಲ್ಲಿ "ಹೊಸ ಚೈತನ್ಯವನ್ನು ಹುಟ್ಟಿಸಿ ಜನತೆಯನ್ನು ಹುರಿದುಂಬಿಸಲು ಸಾಧಕವಾದ ವಿಶೇಷ ಶಕ್ತಿ"ಯನ್ನು ಕುರಿತಾಗಿ ತನ್ನ ಭಾಷಣದಲ್ಲಿ ಅತ್ಯುತ್ತಮ ಶೈಲಿಯಲ್ಲಿ ಪ್ರತಿಪಾದಿಸುತ್ತಾ ಅವಳು ಈ ಕೆಳಗಿನ ಅಂಶಗಳನ್ನು ಮುಂದಿಟ್ಟಳು:—

i ಏಷ್ಯಾ ಖಂಡವು ಜಾಗೃತವಾದುದು

ii ಪರಕೀಯ ರಾಜ್ಯಭಾರ ಮತ್ತು ಸಾಮ್ರಾಜ್ಯ ಸಂಘಟನೆಯನ್ನು ಕುರಿತಾಗಿ ವಿದೇಶಗಳಲ್ಲಿ ಮಾತುಕತೆ ನಡೆದುದು

iii ಬಿಳಿ ಜನರು ಮೇಲ್ಮಟ್ಟದವರೆಂಬುದಾಗಿ ಇದ್ದ ಭಾವನೆಯು ತೊಲಗಿದ್ದು,

iv ವ್ಯಾಪಾರ ವರ್ಗವು ಎಚ್ಚೆತ್ತುದು

v ಹೆಂಗಸರು ತಮ್ಮ ಪ್ರಾಚೀನ ಸ್ಥಾನಮಾನಗಳ ಹಕ್ಕಿಗಾಗಿ ಹೋರಾಡಲು ಮುಂದೆ ಬಂದುದು

vi ಇಡೀ ಜನತೆಯ ನವಜಾಗೃತಿ:

ಈ ಎಲ್ಲಾ ವಿವರಣೆಗಳನಂತರ ಅವಳ ಭಾಷಣದ ಉಪಸಂಹಾರ ಭಾಗವು ಈ ರೀತಿಯಾಗಿ ಹರಿಯಿತು:—

"ಮಾನವ ದೃಷ್ಟಿಯ ವಿಶಾಲತೆಯನ್ನು ಮೀರಿ ಹಿಂದು ಸಾವಿರ

ವರ್ಷಗಳ ಚರಿತ್ರೆಯೊಡನೆ ಸಾಯದೆಯೇ ಜೀವಿಸುತ್ತಾ ಬಂದ ಗತಕಾಲದ ವೈಭವಪೂರ್ಣ ನಾಗರೀಕತೆಯು ಬೆಳೆಯುತ್ತಾ, ಏರುತ್ತಾ, ತೊಳಲಾಡುತ್ತಾ, ಆ ಎಲ್ಲೆಯನ್ನು ಕೆಡಿಸದೆ ಹಾಗೆಯೇ ಉಚ್ಚಸ್ಥಿತಿಗೆ ಏರಿ ಕಡೆಗೆ ಬಿದ್ದ ಭೂಮಿಯಲ್ಲಿ ಬಹು ಆಳದಲ್ಲಿ ಹುಗಿಯಲ್ಪಟ್ಟಿದ್ದರೂ ಗೋರಿಗಳು ಉಂಟಾಯಿತೇ ಉಳಿದಿವೆ. ಜನಾಂಗಗಳ ಶಕ್ತಿ ನಿಜವಾಗಿಯೂ ಶಿಲಬಿಗೀರಿಸಲ್ಪಟ್ಟುದಾಗಿ ಚಿರಂಜೀವಿಯೂ ಭವ್ಯವೂ ಚಿರನೂತನವೂ ಆಗಿ ಇದ್ದೀಗ ಈ ಬೆಳಗಿನಲ್ಲಿ ಪುನಃ ಹಿಮ್ಮೆಟ್ಟುವಿಕೆಯಿಂದ ಆತ್ಮಸಂತೃಪ್ತಿಯಿಂದ, ಬಲಿಷ್ಠವಾಗಿ, ಸ್ವತಂತ್ರವಾಗಿ ಮತ್ತು ಜಗತ್ತಿನ ಜಾಗೃತಿ ಹಾಗೂ ಉನ್ನತಿಗಾ ಹಕ್ಕೆ ಸಮಾನವಾದ ವಿಶ್ವ ಖಂಡದ ಸಂವಾದೀಯವಾಗಿ ಭಾರತವು ಎಚ್ಚೆತ್ತೇಳುವುದನ್ನು ಬೇಗನೆ ನೋಡುತ್ತಿದ್ದೇನೆ."

ಈ ಧ್ಯೇಯಕ್ಕನುವಾಗಿ ಭಾರತದ ಆರ್ಥಿಕ, ವೈಜ್ಞಾನಿಕ, ಶುದ್ಧ ಪ್ರಜಾಪ್ರಭುತ್ವ ಮತ್ತು ಅತಿ ಉತ್ತಮ ರಾಜಕೀಯದ ರಚನೆಯುಂಟುಮಾಡಿಕೊಂಡು "ಕಾಮನ್‌ವೆಲ್ತ್ ಆಫ್ ಇಂಡಿಯಾ ಬಿಲ್" ಎಂಬ ಮಸೂದೆಯನ್ನು ಸೇರಿಗೆ ತರಲೆಂದು ಅವರು 1917 ರಿಂದ ದೇಶದ ಎಲ್ಲಾ ಭಾಗಗಳಿಂದ ಸಂಗ್ರಹಿಸಿದ ಸಮಾಚಾರ ಟಿಪ್ಪಣಿಗಳನ್ನು ನೆರೆಸಿ ವಿಧಾಯಕ ಕಾರ್ಯಕ್ರಮದ ಬಗ್ಗೆ ಅವರು ದುಡಿಯಲನುವಾದರು.

ತನ್ನ ಆತ್ಮದ ಸರ್ವಾಂಗೀಣ ಉನ್ನತಿಗೆ ಹಿಂದೂಸ್ಥಾನವು ತನ್ನದೇ ಶಕ್ತಿಯನ್ನು ಗಳಿಸದೆ ತಕ್ಕ ವರ್ಚಸ್ಸನ್ನು ಪಡೆಕ್ಕಿ ಪಡೆಯಲು ಸಾಧ್ಯವಿಲ್ಲವೆಂದು ಆನಿ ಬೆಸೆಂಟ್ ನಂಬಿದ್ದರು. ಧಾರ್ಮಿಕ, ವಿದ್ಯಾ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಅವರು ತನ್ನ ಚಟುವಟಿಕೆಗಳಿಂದ ಭಾರತೀಯ ಆತ್ಮವನ್ನು ಕೆರಳಿಸಿದ್ದರು. ಇದೀಗ ರಾಜಕೀಯದಲ್ಲೂ ಈ ದೇಶದ ವಿಸ್ಮಯಕರವಾದ ಪ್ರಜಾಪ್ರಭುತ್ವ ಕ್ರಮದೊಡನೆ ಪ್ರಸಿದ್ಧಾರ ವಿನಿಮಯಕ್ಕೆ ತಕ್ಕುದಾದ ಸಾಮರ್ಥ್ಯ ಮತ್ತು ಜವಾಬ್ದಾರಿಕೆಯನ್ನು ಕಲಿಸಿ ಅವರು ಆ ರೀತಿ ಚಳುವಳಿಯನ್ನು ಪ್ರಸಾರಗೊಂಡಿದನ್ನು ಅರಿತಿದ್ದರು.

1920 ರಲ್ಲಿ ಆನಿ ಬೆಸೆಂಟ್ ಇವರು ಕೊಟ್ಟ ಚಾರಿತ್ರಿಕ ವಿಚಾರ ಸಾಧ್ಯ ಮಾತಿಯಲ್ಲಿ ಪುರಾತನ ಭಾರತೀಯ ಕ್ರಮವನ್ನು ಇಂದಿನ ಪ್ರಜಾಸತ್ತಾತ್ಮಕ ಕ್ರಮಕ್ಕೆ ಹೋಲಿಸುತ್ತಾ ಹಿಂದೂಸ್ಥಾನದ ಅಂದಿನ ರಾಜಕೀಯ ನೀತಿಗಳು ಇಂದಿಗೆ ಎಷ್ಟು ಚೆನ್ನಾಗಿ ಅನ್ವಯಿಸುತ್ತದೆಯೆಂದು ತೋರಿಸಿದರು. ಅದರನಂತರ ಕೆಲವು ದೇಶೀಯ ಮುಂದಾಳುಗಳೊಡನೆ ಮಾತಾಡಿ "ಕಾಮನ್‌ವೆಲ್ತ್ ಆಫ್ ಇಂಡಿಯಾ ಬಿಲ್" ಇದಕ್ಕೆ ಬ್ರಿಟಿಷ್ ರಾಜಕಾರಿಣಿಗಳ ಮನವೊಲಿಸಿ 1926 ರಲ್ಲಿ ಇಂಗ್ಲೆಂಡಿನ ಶಾಸನ ಸಭೆಯ ಎದುರಿಗೆ ಮೊದಲ ಬಾರಿಗೆ ಇಡಲಾಯಿತು. *

ಈ ಮಸೂದೆಯು ಕೆಲವು ಶರತ್ತುಗಳು ಕೈಗೂಡಿತ್ತಾದರೂ

---

* ಇದನ್ನು ಕುರಿತು ಹೆಚ್ಚಿನ ವಿವರಣೆಗೆ The Besant Spirit ಈ ಗ್ರಂಥದ ಮೂರನೇ ಕಾಂಡದ ಪುಟ 137 ನ್ನು ನೋಡುವುದು.

ಇನ್ನೂ ಹಲವು ಕಾರ್ಯಗತವಾಗದೆ ಅಂತೆಯೇ ಇವೆ. ಇದಕ್ಕೆ ಭಾರತದ ಇತರ ಮುಂದಾಳುಗಳ ಉದಾಸೀನತೆಯೂ ಒಂದು ಕಾರಣವೆಂದೆನ್ನಬಹುದು. ಶೀಘ್ರದ ರಾಜಕೀಯಕ್ಕೆ ತಕ್ಕುದಾದ ಬೇಡಿಕೆಗಳನ್ನು ಕುರಿತು ಠರಾವನ್ನು ಮಂಡಿಸುವುದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯಕ್ರಮವಾದರೂ ಇಂದಿಗೂ ಅಂಥಾ ಒಂದು ಮಹಾಸಭೆಯು ನಿರ್ಧಾರದ ಅವಗಾಹನೆಗೆ ಬರಲಿಲ್ಲ, ಕೇವಲ ಅಲಕ್ಷ್ಯ ವಿಚಾರಗಳಲ್ಲಿ ಮತ್ತು ಪ್ರಾಂತೀಯ ಭಿನ್ನಾಭಿಪ್ರಾಯಗಳಲ್ಲಿ ಸ್ಥಳೀಯ ಮುಂದಾಳುಗಳು ತಲ್ಲೀನರಾಗಿದ್ದಾರಲ್ಲದೆ ದೇಶಕ್ಕೆ ಸ್ವಾತಂತ್ರ್ಯವನ್ನು ಕುರಿತಾದ ವಿಚಾರವನ್ನು ಮುಂದಿಡುವುದರಲ್ಲಿ ಅವರು ಇನ್ನೂ ಜಯಪ್ರದರಾಗಿಲ್ಲ.

ಭಾರತದ ಸ್ವಾತಂತ್ರ್ಯಕ್ಕೆ ಆನಿ ಬೆಸೆಂಟ್ ಇವರು ಈ ಕೆಲವು ಶಾಸನಗಳ ಒಂದು ನಕಲನ್ನು ಅವರು ಪ್ರಯಾಣ ಬೆಳೆಸಿದೆಡೆಯಲ್ಲೆಲ್ಲ ಎತ್ತಿಕೊಳ್ಳುತ್ತಿದ್ದರಲ್ಲದೆ ಅದನ್ನು ಅವರು ತಂಗುತ್ತಿದ್ದ ಸ್ಥಳಗಳಲ್ಲಿ ತನ್ನ ಸಮೀಪದಲ್ಲಿ ಗೋಡೆಯಲ್ಲಿ ತೂಗಿಸಿಕೊಳ್ಳುತ್ತಿದ್ದರು:—

1) ಇಂಗ್ಲೆಂಡಿನಲ್ಲಿ ಜನರು ಹೇಗೆ ಸ್ವತಂತ್ರರಾಗಿದ್ದಾರೋ ಅದೇ ರೀತಿಯಲ್ಲಿ ಹಿಂದೂಸ್ಥಾನದ ಜನರೂ ಸ್ವತಂತ್ರರಾಗಬೇಕು.

2) ತಾನು ಆರಿಸಿದ ತನ್ನ ಸ್ವಂತ ಪ್ರತಿನಿಧಿಗಳಿಂದಲೇ ತಾನು ಆಳಲ್ಪಡಬೇಕು.

3) ತಾನು ಇಚ್ಛಿಸಿದಂತೆ ಮಂತ್ರಿಮಂಡಲಗಳಾಗಬೇಕು, ಮತ್ತು ತಾನು ಇಚ್ಛಿಸಿದಾಗ ಅವು ಕೊನೆಗೊಳ್ಳಬೇಕು.

4) ತಾನು ಆಯುಧಗಳನ್ನು, ತನ್ನ ಸ್ವಂತ ಸೈನ್ಯವನ್ನು, ನೌಕಾಪಡೆಯನ್ನು ಮತ್ತು ಸ್ವಂತ ವಿಮಾನದಳವನ್ನು ಇಟ್ಟುಕೊಳ್ಳಬೇಕು.

5) ತಾನು ಇಚ್ಛಿಸಿದಂತೆ ಕರಕಂದಾಯವನ್ನು ವಿಧಿಸಬೇಕು; ಅಂತೆಯೇ ತನ್ನ ಸ್ವಂತ ಜಮಾಖರ್ಚು ಲೆಕ್ಕಾಚಾರಗಳು ಇರಬೇಕು.

6) ತನ್ನ ಜನಕ್ಕೆ ಬೇಕಾದ ವಿದ್ಯೆಯನ್ನು ತಾನೇ ಕಲಿಸಬೇಕು.

7) ತನ್ನ ಹೊಲಕ್ಕೆ ನೀರನ್ನು ಹಾಯಿಸಲು, ತನ್ನ ಖನಿಜ ಸಂಪತ್ತನ್ನು ತೆಗೆಯಲು ಮತ್ತು ತನ್ನ ನಾಣ್ಯವನ್ನು ಚಲಾಯಿಸಲು ತನಗೆ ಸ್ವಾತಂತ್ರ್ಯ ಬೇಕು.

8) ತನ್ನ ಸ್ವಂತ ಸರಹದ್ದಿನಿಂದ ಕೂಡಿ, ತನ್ನ ಸ್ವಂತ ಸಾಮ್ರಾಜ್ಯಶಾಹೀ ಅಧಿಕಾರದಿಂದೊಡಗೂಡಿ ತನ್ನ ಜನವು ಆ ಸಾಮ್ರಾಜ್ಯ ಶಾಸನಸಭೆಗಳಿಗೆ ಪ್ರತಿನಿಧಿಸುವ ತನ್ನ ಸ್ವಂತ ಜನಾಂಗವಾಗಬೇಕು.

9) ವಿಲಾಯತಿ ಮತ್ತು ಭಾರತವು ಕೈಗೆ ಕೈಕೊಟ್ಟು ಹೋಗಬೇಕು; ಆದರೂ ಹಿಂದೂಸ್ಥಾನವು ತನ್ನ ಸ್ವಂತ ಹಕ್ಕನ್ನು ಅನುಸರಿಸಿ ಪೂರ್ತಿ ಸ್ವಾತಂತ್ರ್ಯವನ್ನು ಪಡೆಯಬೇಕು.

ಮುಂದಕ್ಕೆ ಏನಾದರೊಂದು ಕಾರಣದಿಂದ ಇಂಗ್ಲೆಂಡ್ ಮತ್ತು ಬ್ರಿಟಿಶ್ ಸಾಮ್ರಾಜ್ಯ ಬೇರ್ಪಡಬೇಕಾದ ಸಂಭವವು ಬಂದರೆ ಭಾರತವು ಆ ಸಂಬಂಧವನ್ನು ತಾನು ಇಚ್ಛಿಸಿದಾಗ ಕಡಿದು ಹಾಕುವ ಹಕ್ಕನ್ನು ಯಾರಿಂದಲೂ ತಪ್ಪಿಸಲಾಗುವುದಿಲ್ಲವೆಂಬ ಅವರ ಇಚ್ಛೆಯನ್ನು ಆನಿಯು

ಹಲವು ಬಾರಿ ಪ್ರಕಟಿಸಿದ್ದನ್ನು ಇದಕ್ಕೆ ಸೇರಿಸಬೇಕು, ಬೇರೆ ಯಾವ ತರಹದ ಬಾಂಧವ್ಯವಿದ್ದರೂ ಹಿಂದೂಸ್ಥಾನದ ಸ್ವಾತಂತ್ರ್ಯವನ್ನು ಕುರಿತಾದ ಕೋರಿಕೆಯು ಅವರಲ್ಲಿ ಕೂಡಲೂ ಮೇಲ್ಪಂಕ್ತಿಯಲ್ಲಿ ಯಾವಾಗಲೂ ಇರುತ್ತಿದ್ದದ್ದು.

1913ರಿಂದ ಪ್ರಾರಂಭವಾದ ಅನಿಯತ ಬಂಡಮಾರತೆ ದಿಟ್ಟ ವೇಗದ ಪ್ರಚಾರ ಮತ್ತು ಚಟುವಟಿಕೆಯು ಎಡೆಯಲ್ಲಿ ಸ್ವಾಭಾವಿಕವಾಗಿ ಅವರಿಗೆ ಬಾಸೆಂಟಿನ ಸಂಬಂಧದಿಂದ ಸೋಲಾಗಲು ಅಸಾಧ್ಯವಾಗಿಯೂ ತೋರುತ್ತ, ಅವರೇ ನ್ಯಾಯವಾಗಿ ಹೇಳಿದಂತೆ ಅವರ ಪ್ರಾರಂಭದ ದಿನಗಳಲ್ಲಿ ಜನರ ಅಸೂಯಾಕರವಾದ ಮತ್ತು ವಿಷಯಗಳನ್ನು ತಪ್ಪಾಗಿ ಕಲ್ಪಿಸಿ ಹೇಳುವ ಮಾತುಗಳಿಂದಾಗಿ ಅವರೂ ಅವರೊಡನೆ ಬಾಲಕರ್ಯಾಕ್ಷೆಯೂ ಆಗಿಂದಾಗ್ಗೆ ತಮ್ಮ ಮೇಲೆ ತಪ್ಪನ್ನು ಹೊರಿಸಿದವರಿಗೆ ಉತ್ತರಿಸಲು ನ್ಯಾಯಾಸ್ಥಾನಕ್ಕೆ ಹೋಗಬೇಕಾಗುತ್ತಿತ್ತು. ಈ ವಿಷಯಗಳನ್ನು ಕುರಿತು ಅವರು ತನ್ನ ಆತ್ಮಚರಿತೆಯಲ್ಲಿ ಸ್ವಾರಸ್ಯವಾಗಿ ಹೇಳುತ್ತಾರೆ. ಆ ಕಾರಣದಿಂದ ನಾನು ಆ ವಿಷಯವನ್ನು ಇಲ್ಲಿ ಹೇಳಬೇಕಾಗಿಲ್ಲ. ಆದರೆ ಹಿಂದೆಯೇ ಹೇಳಿದಂತೆ ತತ್ತ್ವಜ್ಞಾನ (Theosophy) ಸಂಸ್ಥೆಗೆ ವಿರುದ್ಧವಾಗಿ ಅವರ ತನ್ನ ಪೋಷಣೆಯಲ್ಲಿದ್ದ ಜಿಡ್ಡು ಕೃಷ್ಣಮೂರ್ತಿ ಮತ್ತು ನಿತ್ಯಾನಂದ ಇವರಿಗೆ ತಮ್ಮ ಪೋಷಕರನ್ನು ಆರಿಸಿಕೊಳ್ಳುವ ವಿಷಯದಲ್ಲಿ ಅವರೇನು! ಹೋರಾಡಿದರು,

ತತ್ತ್ವಜ್ಞಾನ ಸಂಸ್ಥೆ (Theosophical Society)ಗೆ ವಿರೋಧವಾಗಿ ಹೊರಡಿಸಿದ ಅಪಪ್ರಚಾರದ ಬಗ್ಗೆ ಡಾ. ಅನಿ ಬಿಸೆಂಟ್ ಇವರು ಮದ್ರಾಸು ಪೋಲೀಸ್ ನ್ಯಾಯಾಲಯದಲ್ಲಿ 1913ರಲ್ಲಿ ಹೋಗಿ ಎಲ್ಲಾ ಅಪವಾದಗಳಿಂದ ಮುಕ್ತಳಾಗಿ ಜಯಪ್ರದಳಾದರೂ ಅವರು ಆ ಮೇಲೆ ನ್ಯಾಯಾಲಯಕ್ಕೆ ಆಗಿಂದಾಗ್ಗೆ ಹೋಗಬೇಕಾದ ಸಂದರ್ಭಗಳಲ್ಲಿ ಮೊದಲನೇದಾಗಿದೆ. ನ್ಯಾಯಾಧೀಶನು ಆ ಸಂಸ್ಥೆಯನ್ನು ಅಪವಾದಗಳಿಂದ ಖುಲಾಸು ಮಾಡಿದರೂ ಅವರ ಮೇಲೆ ಆರೋಪಣೆ ಹೊರಿಸಿದ್ದವರ ಮೇಲೆ ಮಾನಹಾನಿಗೆ ತಕ್ಕ ಕ್ರಮವನ್ನು ಕೈಕೊಳ್ಳಲು ಬಿಡಲಿಲ್ಲ. ಬಿಷಪ್ ಲೆಡ್‌ಬೀಟರನು ಯುವಕರಿಗೆ ಕೊಡುತ್ತಿದ್ದ ಬೋಧನೆಯನ್ನು ಕುರಿತು ದ್ವೇಷಪೂರ್ಣ ಪ್ರಚಾರವು ನಡೆದಾಗ ಅವರು ಅವನು ಕೊಡುತ್ತಿದ್ದ ಬೋಧನೆಗೆ ಒಪ್ಪಿದ್ದರಿಂದ ಕಾರಣದಿಂದ ಅವರನ್ನು ಅವರ ವಿರೋಧಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಲು ಬಿಡಲಿಲ್ಲ. ಹಾಗಿದ್ದರೂ ಸಾರ್ವಜನಿಕ ಅಭಿಪ್ರಾಯವು ಮದ್ರಾಸಿನಲ್ಲಿ ಮಾತ್ರವಲ್ಲ; ಪ್ರಪಂಚದ ಇತರ ಕೆಲವು ಸ್ಥಳಗಳಲ್ಲೂ ಆ ನ್ಯಾಯದ ತೀರ್ಪಿಗೆ ವಿರೋಧ ಸೂಚಿಸಿದ್ದರಿಂದ ಅವರ ಅನಿಯತ ಸಾರ್ವಜನಿಕ ಹಾಗೂ ಸಾಮಾಜಿಕ ಜೀವನಕ್ಕೆ ಕಳಂಕವನ್ನುಂಟುಮಾಡಲಿಲ್ಲವೆಂಬುದಾಗಿ

ಅವರೇ ಅನಂತರ ಬರೆದರು.

ಎರಡನೇದಾಗಿ 1912-13ರಲ್ಲಿ ಡಾ. ಬೆಸೆಂಟ್ ಮತ್ತು ಜಿ. ನಾರ
ಾಯಣ್ಯ ಇವರೊಳಗೆ ಮದ್ರಾಸು ಉಚ್ಚ ನ್ಯಾಯಾಲಯದಲ್ಲಿ ನಡೆದ
ವ್ಯಾಜ್ಯದಲ್ಲಿ ಅವಳು ಸ್ವತಃ ವಾದಿಸಿದಳು. ಈ ವ್ಯಾಜ್ಯವಾದರೋ
ನಾರಾಯಣ್ಯನ ಇಬ್ಬರು ಮಕ್ಕಳಾದ ಕೃಷ್ಣಮೂರ್ತಿ ಮತ್ತು ನಿತ್ಯಾ
ನಂದ ಇವರನ್ನು ಕುರಿತಾಗಿ ಆಗಿತ್ತು. ಈ ವಿಷಯದಲ್ಲೂ ಅನಿಯು
ಕಡೆಗಂತೂ ಜಯಪ್ರದಳಾದಳೆಂಬುದನ್ನು ಹಿಂದೆಯೇ ಹೇಳಲಾಗಿದೆ.

ಮೂರನೇ ಬಾರಿಗೆ 1916ರಲ್ಲಿ ಅನಿ ಬೆಸೆಂಟ್ ತನ್ನ ರಾಜಕೀ
ಯ ಜೀವನದ ಪರಮಾವಧಿಯಲ್ಲಿದ್ದಾಗ New India ವಾಹಿ
ನಿಯ ಮಾಲೀಕಳಾಗಿ ಮತ್ತು ಆ ಪತ್ರಿಕೆಯಲ್ಲಿ ಸಾರ್ವಜನಿಕ ಶಾಂತಿ
ಗೆ ಭಂಗವಾಗುವಂಥ ಲೇಖನಗಳನ್ನು ಪ್ರಕಟಿಸಿದುದಕ್ಕಾಗಿ ಅವ
ಳಿಂದ ಭದ್ರತಾ ಹಣವನ್ನು ಮೊದಲ ಬಾರಿಗೆ ಪಡೆಯುತ್ತಲಿದ್ದ ಕಾದ
ಕ್ಕಾಗಿ ನೇಮಿತರಾದ ಅಧಿಕಾರಿಗಳು ಆ ಮುದ್ರಣಾಲಯವನ್ನು ಜಪ್ತಿ
ಮಾಡುವ ಆಜ್ಞೆಯನ್ನು ಹೊರಡಿಸಿದರು. ಅದಕ್ಕೆ ವಿರುದ್ಧವಾಗಿ
ಅವಳು ಮದ್ರಾಸಿನ ಶ್ರೇಷ್ಠ ನ್ಯಾಯಾಸ್ಥಾನಕ್ಕೆ ಅಪೀಲು ಮಾಡಲು
ನ್ಯಾಯಾಧೀಶನು ಕೆಳಗಿನ ನ್ಯಾಯಾಲಯವು ಅದರ ಅಧಿಕಾರವನ್ನು
ಮೀರಿ ಆ ಜಪ್ತಿ ಆಜ್ಞೆಯನ್ನು ಹೊರಡಿಸಿತೆಂದೂ ತಾನು ಆ ತೀರ್ಪ
ನ್ನು ರದ್ದುಗೊಳಿಸಲು ಬೇಕಾದ ನಿಯಮವು ಈ ಮುದ್ರಣ ವಿಧಿ
(Press Act)ಯಲ್ಲಿ ಕಾಣುವುದಿಲ್ಲವೆಂದೂ ಹೇಳಿದನು. ಅವನು
ಮತ್ತು ಅವನ ಸಹೋದ್ಯೋಗಿಗಳೂ ಈ ವ್ಯಾಜ್ಯವನ್ನು ಆ ಕಾರಯೋ
ಗ್ಯತೆಯಿಂದ ಚರ್ಚಿಸದೆಯೇ ಬಿಡುವುದನ್ನು ತಾವು ಹೇಳುವ ಅವಶ್ಯ
ಕತೆಯಿಲ್ಲವೆಂದೂ ಹೇಳಿದನು.

ಅಂದಿನ ರಾಜಕೀಯ ಜೀವನದ ಘಟನೀಯ ದಿನಗಳಲ್ಲಿ
ಸರಕಾರವು ಅನಿಯನ್ನು ಕುರಿತು ಕಡಿಮೆ ಪಕ್ಷ ಮೂರು ಬಾರಿಯಾ
ದರೂ ರೂ. 20,000ದಷ್ಟು ಭದ್ರತಾ ಹಣವನ್ನು ಕೊಡಬೇಕೆಂದು
ವಿಧಿಸಿತು. ಕೆಲವು ವರ್ಷಗಳನಂತರ ಆ ಹಣದ ಒಂದು ಭಾಗ
ವನ್ನು ಮಾತ್ರ ಅವಳಿಗೆ ಹಿಂದಕ್ಕೆ ಕೊಡಲಾಯಿತು. ಈ ವಿಷಯ
ವಾಗಿ ಅವಳು ಭಾರತೀಯ ಮುದ್ರಣ ವಿಧಿ (Indian Press Act)
ಇದನ್ನು ಹಿಂದೆಗೆಯುವ ಆಜ್ಞೆಯನ್ನು ಸಮರ್ಥಿಸುತ್ತಾ "ಭಾರತೀ
ಯರ ಹೃದಯದ ನೋವು ಈ ಕಾನೂನನ್ನು ಹಿಂದೆಗೆದರೆ ಗುಣ
ಮುಖವಾಗುತ್ತದೆ," ಎಂದು ಬೇಸರದಿಂದ ಹೇಳುತ್ತಾ ಪ್ರತಿಕರಿಸಿದಳು.

ಅನಿ ಬೆಸೆಂಟಳ ಜೀವನದ ಈ ಅವಸ್ಥೆಯಲ್ಲಿ ನಡೆದ
ಇತರ ಘಟನೆಗಳಿಗೂ ಅವಳು 'Home Rule' ಇದಕ್ಕೆ ಪ್ರಯತ್ನಿ
ಸಿದ್ದು, ಅವಳು ಸಾಯುವುದಕ್ಕಿಂತ ಏಳು ವರ್ಷಗಳಿಗೆ ಹಿಂದೆ
1926ರಲ್ಲಿ Commonwealth of India Bill — ಈ ಮಸೂದೆ

ಯ ಸಾರಾಂಶವೂ ಅವರ "ಹಿಂದೂಸ್ಥಾನ ದಾಸ್ಯವೋ ಸ್ವಾತಂತ್ರ್ಯವೋ?"
ಎಂಬ ವಿವರಣಾತ್ಮಕ ಗ್ರಂಥದಿಂದ ತಿಳಿಯಬಹುದೆಂದು ಓದುಗ
ರಿಗೆ ತಿಳಿಸಲಿಚ್ಛಿಸುತ್ತೇನೆ. ಈ ಮತಸೂಚಿಯು ಅವರ ಈ ದೇಶ
ಕ್ಕೆ ಕಡೆಯ ಕೊಡುಗೆಯಾಗಿದೆ. ಆದರೂ ಅದನ್ನು ಸಂತೋಷದಿಂ
ದ ಸ್ವಾಗತಿಸಬೇಕಾಗಿದ್ದ ಈ ದೇಶದ ನಾಯಕರು, ಅಹಾ, ಅದನ್ನು
ಒಪ್ಪದಿದ್ದರೂ, ಈ ದೇಶದ ಸ್ವಾತಂತ್ರ್ಯಕ್ಕೆ ಗಂಬಾಳ್ಕೆ—ಮಣ್ಣನ್ನಿ
ಯುರಂತಿದ್ದ ಅನಿಯು ಜೀವಂತವಿದ್ದಾಗಲೇ ಅವರ ಹೇಳಿಕೆಗ
ಳನ್ನೆಲ್ಲ ತಳ್ಳಿಹಾಕಿ ಇಂದೀಗ ಅವರು ಅಗಲಿದನಂತರ ಅವರನ್ನು
ಆಕಾಶಕ್ಕೇರಿಸಿ ಹೊಗಳುವುದು ಒಂದು ಹಾಸ್ಯಾಸ್ಪದವಾಗಿ ಹೋಗಿದೆ.
ಆಗಿಂದಾಗ್ಗೆ ಬಹಳ ಹಾನಿಕರವಾಗಿ ಪರಿಣಮಿಸಿದ ತಮ್ಮ ಸ್ವಂತ ಧೋ
ರಣೆಗಳ ಬದಲಾಗಿ ಗಾಂಧೀಜಿಯವರು ಅನಿ ಬಿಸೆಂಬಳ್ಳೋಕನ ಸೀರು
ವಿ ಮುಂದಾಲೋಚನೆಯನ್ನು ಮಾಡಿದ್ದರೆ ಹಿಂದೂಸ್ಥಾನವು ಇಂದು
(ಎರಡಾಗಿ ಒಡೆಯದೆ) ಒಂದೇ ಸ್ವತಂತ್ರ ದೇಶವಾಗಿರುತ್ತಿತ್ತು.
ನಮ್ಮ ನಾಯಕರೊಳಗೆ ಇರುವ ಯಾದವೀ ಕಲಹದಿಂದ ಪ್ರಪಂ
ಚದ ಎದುರಿಗೆ ಅಸ್ಥಿರತೆಯ ತವರಂತೆ ತೋರುವ ಈ ದೇಶಕ್ಕೆ
ಅದರೊಳಗಿನ ಅಂತಃಕಲಹವೇ ದೊಡ್ಡ ಬಾಧಕವಾಗಿದೆ. ಅದಕ್ಕೆ
ಮೀರಿ ಒಂದೊಂದು ಗತವೈಭವನನ್ನು ಹೆಚ್ಚಾಗಿ ಬ್ರಿಟಿಶ್ ಸಾಮ್ರಾಜ್ಯ
ಶಾಹಿಯು (ಅದಕ್ಕಿಂತಲೂ ಹಿಂದೆ ಇಸ್ಲಾಮ್ ಸಾಮ್ರಾಜ್ಯಶಾಹಿಯು)
ಅಧೀನದಲ್ಲಿದ್ದ ಕಾರಣದಿಂದ ಆ ಪರಕೀಯರ ಪ್ರಭಾವಕ್ಕೊಳಗಾ
ದ ಭಾರತೀಯರು ಸಹ ದಾಸ್ಯಭಾವದಿಂದ ಸೊರಗುತ್ತಿದ್ದಾರೆ.
ಬಹು ಸಂಖ್ಯೆ ಮಹಮ್ಮದೀಯರು ಮತ್ತು ಗಣನೀಯ ಸಂಖ್ಯೆಯ
ಹಿಂದೂಗಳು ಸಹ, ಇಂದಿನ ಪ್ರಮುಖ ರಾಜಕೀಯ ಸಂಸ್ಥೆ
ಯಾದ ರಾಷ್ಟ್ರೀಯ ಕಾಂಗ್ರೆಸ್ಸಿನ ತಮಗೇನೂ ಸಂಬಂಧವಿಲ್ಲ
ವೆಂದೇ ಸಾರಿದರೂ, ಆ ಸಂಸ್ಥೆಗೆ ಸೇರಿ ಇಂದು (1939
ರಲ್ಲಿ) ವಿವಿಧ ಪ್ರಾಂತಗಳಲ್ಲಿ ತಾತ್ಕಾಲಿಕವಾಗಿ ಅಧಿಕಾರವನ್ನು
ಹೊತ್ತ ದೇಶೀಯ ಮಂತ್ರಿಗಳು ಸಹ ನಿಜಕ್ಕೂ ಪಾಶ್ಚಾತ್ಯ ವ್ಯವ
ಹಾರ, ಸಂಪ್ರದಾಯಗಳ ಆರಾಧಕರೇ ಆಗಿದ್ದಾರೆ. ಇವರೆಲ್ಲರೂ
"ಪೂರ್ಣ ಸ್ವರಾಜ್ಯ" ಕ್ಕಾಗಿ ಅಪೇಕ್ಷಿಸುತ್ತಾ ತಮ್ಮದೇ ರಾಜ್ಯಘ
ಟನೆಯನ್ನು ನಿರ್ಮಿಸುತ್ತಾ, ಪರಕೀಯವಾಗಿ ಕಂಡುಬಂ
ದುದೆಲ್ಲ ತ್ಯಜಿಸುವುದು ಬಗೆಯುತ್ತಾ ಪ್ರತಿಭಟಿಸುವವರಾಗಿ
ದ್ದಾರೆ. ಅವರಿಗೆ ಸ್ಫೂರ್ತಿದಾಯಕವಾದುದು ಸನಾತನ ಭಾರ
ತದ ಆತ್ಮವಲ್ಲ, ಬದಲಾಗಿ ಬಲವತ್ತರವಾದ ಒಂದು ರಾಷ್ಟ್ರವ
ನ್ನು (ಬಹುತರ: ಸೋವಿಯೆಟ್ ರಷ್ಯಾ) ಅನುಕರಣೆ ಮಾಡುವ ಹಂ
ಬಲವಾಗಿದೆ. ಸಂಪೂರ್ಣ ಭಾರತೀಯವಾಗಿ ಎಲ್ಲವನ್ನೂ ಮಾರ್ಪಡಿ
ಸಬೇಕೆಂದಿದ್ದರೂ ಅವರು ರಷ್ಯಾ ಅಥವಾ ಇನ್ನಾವುದಾದರೊಂದು

ಪರರಾಷ್ಟ್ರದತ್ತ ತಮ್ಮ ರಾಜಕೀಯ ಸ್ಫೂರ್ತಿಗಾಗಿ ಮತ್ತು ಭಾರತೀಯ ಜೀವನವನ್ನು ಆ ರೀತಿ ಮಾರ್ಪಡಿಸಲಿಕ್ಕಾಗಿ ಹಾತೊರೆಯುತ್ತಿದ್ದಾರೆ. ನಾನು ಈ ಪುಟಗಳನ್ನು ಬರೆಯುತ್ತಾ ಇದ್ದಂತೆಯೇ ಕೆಲವರು ಜಪಾನಿನ ಮತ್ತು ಇತರೆಯತ್ತಲೂ ನೋಡುತ್ತಿದ್ದಾರೆ. ಭಾರತೀಯನು ತನ್ನದಂ ಸಂಸ್ಕೃತಿಯ ಜೀವನದಿಂದ ಎದ್ದು ಹಿಮ್ಮೆಟ್ಟಿ ಸ್ವತಂತ್ರನಾಗುವಾಗ ಅವನಲ್ಲಿ ಅವನಿಗೆ ತಿಳಿಯದೆಯೇ ಬಲವಾಗಿ ಬೇರೂರಿದ ದಾಸ್ಯತ್ವ ಮಾನಸಿಕ ಪ್ರಭಾವವನ್ನು ನೋಡಿದರೆ ಚಿಂತಾಜನಕವಲ್ಲವೆಂದರೂ ಅದು ವಿಶಿಷ್ಟವೂ ಬೋಧಪ್ರದವೂ ಆಗಿದೆ.

ಅನಿಯ ಈ ಮಹಲನ್ನು ಕುರಿತಾದ ನಿರೂಪಣೆಯನ್ನು ಅವರ "ಹಿಂದೂಸ್ಥಾನ — ದಾಸ್ಯವೋ? ಸ್ವಾತಂತ್ರ್ಯವೋ?" — ಎಂಬ ಗ್ರಂಥದ ಕಡೆಯ ಭಾಗವನ್ನು ಮಾತ್ರ ಉದಾಹರಿಸುತ್ತಿದ್ದೇನೆ:—

"ಹಿಂದೂದೇಶವು ಇತರ ರಾಷ್ಟ್ರಗಳ ಬಳಗಕ್ಕೆ (Commonwealth of Nations) ಸೇರಿಸಲ್ಪಟ್ಟರೆ ಅದಕ್ಕೆ ತನ್ನ ರಾಷ್ಟ್ರದಲ್ಲಿ ಹಾಗೂ ವಿದೇಶಗಳಲ್ಲಿ ಸ್ವತಂತ್ರ ರಾಷ್ಟ್ರದ ಸ್ಥಾನ (Dominion Status) ದೊರಕಿದ್ದಾದರೆ ಪ್ರಪಂಚದ ಶಾಂತಿಯು ಅದಕ್ಕಾಗಿ ಕಾತರಿಸುತ್ತಿರುವ ನಮ್ಮ ರಾಷ್ಟ್ರಗಳ ಮೇಲೆ ಬೀಳಲು. 1919ರಲ್ಲಿ ತನಗೆ ಬೇಕಾದ ರೀತಿಯಲ್ಲಿ ಸ್ವತಂತ್ರ ಸರಕಾರವನ್ನು ಹಿಂದೂಸ್ಥಾನವೇ ನಿರ್ಧರಿಸಲಿ ಎಂದು ನಾನು ಸೂಚಿಸಿದ್ದೆನು. ಇದೇ ಅಭಿಪ್ರಾಯವು ಈಗ ಇಂಗ್ಲೆಂಡಿನ ಶಾಸನ ಸಭೆ (House of Commons)ಯ ಮುಂದೆ ಇರುವ Commonwealth of India Bill ಇದರಲ್ಲಿ ಆಧಾರವಾಗಿದೆ ಎಂಬುದು (ನಾನು ಈ ಗ್ರಂಥದ ಹಿಂದಿನ ಭಾಗದಲ್ಲಿ ಕೊಟ್ಟ ಅಂಶಗಳಿಂದ) ವ್ಯಕ್ತವಾಗುವುದು.

'ಹಿಂದೂಸ್ಥಾನ ಮತ್ತು ಇಂಗ್ಲೆಂಡ್ — ಈ ಎರಡೂ ರಾಷ್ಟ್ರಗಳ ಕ್ಷೇಮಕ್ಕಾಗಿ ಮತ್ತು ಮಾನವ ಗಣದ ಕಲ್ಯಾಣಕ್ಕಾಗಿ ಭಾರತದ ಭವಿಷ್ಯತ್ತು ವಿಲಾಯಿತಿಯೊಡನೆ ಐಕ್ಯವಾಗುವುದರಲ್ಲಿ ಇದೆಯೆಂದು ಭಾವಿಸುತ್ತೇನೆ. ಏಕೆಂದರೆ ಅವು ಎರಡೂ ತಮ್ಮ ಕುಂದು ಕೊರತೆಗಳನ್ನು ಪರಸ್ಪರ ನೀಗಿಕೊಳ್ಳಬಲ್ಲವು, ಒಳ್ಳೆ ಹಿಂದೀ ರಾಷ್ಟ್ರವು ಪ್ರಪಂಚಕ್ಕೆ ಸಲ್ಲಿಸಲಾರದ ಸೇವೆಯನ್ನು ಅವೆರಡೂ ದೇಶಗಳು ಒಡಗೂಡಿ ಮಾಡಬಲ್ಲವು. ಉನ್ನತ ಧಾರ್ಮಿಕ ಪ್ರಭಾವವು ಹಿಂದೂ ರಾಷ್ಟ್ರದ ಸರ್ವಾಂಗೀಣ ಶ್ರೇಯಸ್ಸಿಗೆ ತಡೆ ಹಾಕದೆ ಅದನ್ನು ಇನ್ನೂ ಮೇಲ್ಮಟ್ಟಕ್ಕೇರಿಸಲು ಸಹಕರಿಸುತ್ತದೆ. ಮಹತ್ತಾದ ಸನಾತನ ಧರ್ಮದ ಆಶ್ರಯದಲ್ಲಿ ಈ ದೇಶಕ್ಕೆ ಅಭಿಮಾನವಾದ ಧರ್ಮಮಾರ್ಗ. ಮತ್ತು ಆಧ್ಯಾತ್ಮಿಕ ಸಾಹಿತ್ಯವನ್ನು ಸೃಷ್ಟಿಸುತ್ತ, ಅವರ್ಣನೀಯ ಸೌಂದರ್ಯವನ್ನು ಹೊಮ್ಮಿಸುವ ಕಲೆಯು ಪ್ರಫುಲ್ಲಿತವಾಗಿ ಬೆಳೆಯಿತು. ಇಂದಿಗೂ

ಅತೀಯವೂ ಸ್ಫೂರ್ತಿದಾಯಕವೂ ಆದ ನಾಟ್ಯಕಲೆಯೂ ಹೆಚ್ಚಿತು.

ಸಹಸ್ರಾರು ವರ್ಷಗಳು ಒಂದರನಂತರ ಒಂದಾಗಿ ಉರುಳಲು ಈ ದೇಶದ ವಿಜ್ಞಾನ ಸಂಬಂಧ ಅಭಿವೃದ್ಧಿಯು ಲೋಕದ ದೃಷ್ಟಿಯನ್ನು ಸೆಳೆಯಿತು, ತನಗೆ ಬೇಕಾದಂತೆ ತನ್ನ ಪ್ರಗತಿಯನ್ನು ಸಾಧಿಸಲು ಭಾರತಕ್ಕೆ ಸ್ವಾತಂತ್ರ್ಯವು ಕೊಡಲ್ಪಟ್ಟಿತು. ಇದರನಂತರ ಪುನಃ ಅದರ ಹಿಂದಿನ ವೈಭವವನ್ನು ಮೀರಿಸುತ್ತದೆ; ಅಷ್ಟೇ ಅಲ್ಲ, ಅದಕ್ಕಿಂತಲೂ ಅತ್ಯಧಿಕವಾದ ಭವಿಷ್ಯವನ್ನು ಅದು ಕಾಣಲಿದೆ. ಸ್ವಾತಂತ್ರ್ಯವಿಲ್ಲದ್ದರಿಂದ ಈ ದೇಶವು ಇದೀಗ ಸಾವಿನ ದಾರಿಯನ್ನು ಹಿಡಿದಿದೆ. ಅದನ್ನು ಹಾಗೆಯೇ ಬಿಟ್ಟರೆ ಲೋಕವು ಅದು ಹಿಂದಿನ ಕಾಲದಲ್ಲಿ ಹೇಗಿತ್ತೆಂಬುದರ ನೆನಪನ್ನು ಮಾತ್ರ ಉಳಿಸುತ್ತದೆ, ಆಲೋಚಿಸಿ ನೋಡು ನಿರ್ಧಾರಕ್ಕೆ ಬರಬೇಕಾದ ಮುಂದಿನ ವರ್ಷಗಳು ಆಪತ್ತಿನ ಅವಧಿಯಾಗಿದೆ. ತಾನು ಹೇಗಿದ್ದೆನೆಂಬುದನ್ನು ಭಾರತಖಂಡವು ನೆನೆಯಲಿ, ಮತ್ತು ಮುಂದಕ್ಕೆ ಏನಾಗಬಹುದೆಂಬುದನ್ನು ಊಹಿಸಲಿ; ಹಾಗಾದರೆ ಮಾತ್ರ ಈ ದೇಶದ ವೈಭವ-ಭಾಸ್ಕರನು ಪೂರ್ವ ದಿಕ್ಕಿನಲ್ಲಿ ಪುನಃ ಉದಯಿಸಿ ಆರ್ಯಾವರ್ತ ಭೂಮಿಯನ್ನೆಲ್ಲ ಬೆಳಗುವುದು.

"ಭಾರತದ ಮುಕ್ತಿಯು ಅದರ ಸ್ವರಾಜ್ಯ (self-rule) ಇದರಲ್ಲಿ ಮಾತ್ರ ಇದೆ. ಇದೀಗಲೇ ಅದರ ಸತ್ವಸಾರವೆಲ್ಲವೂ ಮೆಲ್ಲನೆ ಇಳಿಮುಖವಾಗುತ್ತಿರುವ ಈ ದೇಶವನ್ನು ಬೇರೆ ಯಾವುದೂ ಉಳಿಸಲಾರದು. ಹಾಗಿದ್ದರೂ ಆ ಪಾರಮಾರ್ಥಿಕ ಸತ್ವವೆಲ್ಲವೂ ಬಹು ಪೂರ್ವಕಾಲದಿಂದಲೇ ಉಳಿದಿದೆ. ಇಂದಿನ ಚಾರಿತ್ರಿಕ ಸಂಶೋಧನೆಗೂ ಎಟುಕದ ಬಹು ಹಿಂದಿನ ಕಾಲದ ಮಾನಸಿಕ ಮತ್ತು ನೈತಿಕ ಸಾಧನೆಗಳು ಈ ದೇಶದ ಅಸಂಖ್ಯ ಮಿಲ್ಲಿಯ ಮಕ್ಕಳ್ ಮೇಲೆ ಪ್ರಭಾವವನ್ನು ಬೀರಿ ಆನಂತರ ಪುನಃ ಉದಯಿಸುವ ಸೂರ್ಯನು ಎಂತೋ ಅಂತು ಪಾಶ್ಚಾತ್ಯ ರಾಷ್ಟ್ರಗಳಲ್ಲೂ ಆ ಪ್ರಭಾವವನ್ನು ಹರಿಯಿಸುವುದು!"

ನಾಲ್ಕನೇ ಮಜಲು - ರಾಷ್ಟ್ರೀಯ ಶಿಕ್ಷಣ.

ಬ್ರಹ್ಮವಿದ್ಯಾಸಂಘ (Theosophical Society) ಇದರ ಆಶ್ರಯದಲ್ಲಿ ಡಾ. ರವೀಂದ್ರನಾಥ್ ಟಾಗೋರ್ ಇವರ Vice-Chancellorship ನಲ್ಲಿ ಅಡೆಯಾರ್‌ನಲ್ಲಿ ಸ್ಥಾಪಿಸಲ್ಪಟ್ಟ ರಾಷ್ಟ್ರೀಯ ವಿಶ್ವವಿದ್ಯಾಲಯ (National University) ಇದರ ಶಾಖೆಗಳಿಗೆ ಹಿಂದೂದೇಶದ ವಿವಿಧ ಭಾಗಗಳಲ್ಲಿ ರಾಷ್ಟ್ರೀಯ ಶಿಕ್ಷಣ (National Education) ಪ್ರವರ್ತವನ್ನು ಹರಡಲು ರಾಷ್ಟ್ರೀಯ ಶಾಲೆಗಳು ಮತ್ತು ರಾಷ್ಟ್ರೀಯ ಕಾಲೇಜುಗಳನ್ನು 1917 ರಿಂದ ಸ್ಥಾಪಿಸಲು ಪ್ರಾರಂಭಿಸಿದುದೇ ನಾಲ್ಕನೇ ಮಜಲು ಆಗಿದೆ. ಈ ರಾಷ್ಟ್ರೀಯ ವಿದ್ಯಾಲಯದ ಪದವಿ (degrees) ಗಳನ್ನು

ಆಂಗ್ಲ ಸರಕಾರವು ಅಂಗೀಕರಿಸದಿದ್ದರೂ ವಿವಿಧ ವಿಷಯಗಳ ಮೇಲೆ ಬಹು ಉಚ್ಚಮಟ್ಟದ ಶಿಕ್ಷಣವನ್ನು ಕೊಡಲು ಏರ್ಪಡಿಸಲಾಗಿತ್ತು. ಪ್ರಾರಂಭದಲ್ಲಿ ಹಲವು ವಿದ್ಯಾರ್ಥಿಗಳು ಈ ಶಾಲೆಗಳಲ್ಲಿ ಸೇರಿದರಲ್ಲದೆ ಸಾರ್ವಜನಿಕರೂ ಉತ್ಸಾಹದಿಂದ ಆ ಯೋಜನೆಗೆ ದ್ರವ್ಯಸಹಾಯವನ್ನು ಮಾಡಿದರು. ಆದರೆ ಸರಕಾರೀಯ ವಿದ್ಯಾಕ್ರಮವು ದೇಶದಲ್ಲಿ ಬಲವಾಗಿ ಬೇರೂರಿದ್ದರಿಂದ ಮತ್ತು ಬ್ರಿಟಿಷ್ ಸರಕಾರವು ಈ ಯೋಜನೆಗೆ ಯಾವುದೊಂದು ಸಹಕಾರವನ್ನೀಯದ್ದರಿಂದ ಮುಂದಕ್ಕೆ ತಮ್ಮ ಉನ್ನತಿಗೆ ತಕ್ಕಂಥಾ ಹುದ್ದೆಗಳು ದೊರಕಲು ಅನಿವಾರ್ಯವಾದ ಈ ಶಿಕ್ಷಣವನ್ನು ಪಡೆಯಲು ತಂದೆತಾಯಿಗಳು ತಮ್ಮ ಮಕ್ಕಳನ್ನು ಅಲ್ಲಿ ಓದಿಸಲು ಕಳುಹಿಸುತ್ತಿರಲಿಲ್ಲ. ಅಷ್ಟೇ ಅಲ್ಲ, ಗಾಂಧೀಜಿಯು ತಾನು ಹಿಮಾಲಯದಷ್ಟು ದೊಡ್ಡದಾದ ಪ್ರಮಾದವನ್ನು ಮಾಡಿದೆನೆಂದು ಆ ಮೇಲೆ ಹೇಳಿದ ತನ್ನ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದ್ದರಿಂದ ಆ ಹಿಂದು ಹೋಗಿ ತಮ್ಮಳಿಗೆ ಆಕರ್ಷಿತರಾದ ಜನರು ಈ ರಾಷ್ಟ್ರೀಯ ಶಿಕ್ಷಣ ಯೋಜನೆಯಲ್ಲಿ ಉತ್ಸಾಹವನ್ನು ತೋರಿಸಲಾರದೇ ಹೋದರು. ಅನಂತರ ಕೆಲವೇ ವರ್ಷಗಳ ಅವಧಿಯಲ್ಲಿ ಸರಕಾರೀಯ ಶಿಕ್ಷಣಯೋಜನೆಯನ್ನು ಮೂಲೆಗೆ ತಳ್ಳಲು ಈ ರಾಷ್ಟ್ರೀಯ ಶಿಕ್ಷಣ ಕೇಂದ್ರಗಳನ್ನು ಎಲ್ಲೆಲ್ಲೂ ಸ್ಥಾಪಿಸುವ ಸದವಕಾಶವು ಇಲ್ಲದಾಯಿತು. ಏಕೆಂದರೆ ಆ ಕಾಲದಲ್ಲಿ ಎಲ್ಲಾ ವಿಷಯಗಳಲ್ಲೂ ಸದವಕಾಶಗಳನ್ನು ಕಳೆದುಕೊಳ್ಳುವುದೇ ಈ ದೇಶದ ಹಣೇಬರಹವಾಗಿತ್ತು. ಹೀಗಾಗಿ ಇಂದು (1939ರಲ್ಲಿ) ರಾಷ್ಟ್ರೀಯ ಶಿಕ್ಷಣವೆಂಬುದಾಗಿ ಯಾವುದೂ ಇಲ್ಲ; ಅಲ್ಲದೆ ದೊಡ್ಡ ಭೇರೀ ಧ್ವನಿ ಮೊಳಗಿಸಿ ಹೊರಡಿಸಿದ ಗಾಂಧೀಜಿಯ ಮೂಲಶಿಕ್ಷಣ ಕ್ರಮವು Basic System of Education, ಅಮೇರಿಕಾ ಮತ್ತು ರಷ್ಯಾದಲ್ಲಿ ಕೊಡಲ್ಪಡುವ ಪ್ರಾಯೋಗಿಕ ಶಿಕ್ಷಣ – (Experimental learning) ಇದರ ಹಿಂದು ಅಂಶವೆಂದೆನ್ನಬಹುದು. ಹೇಗೂ 1917ರಲ್ಲಿ ಉದ್ಭವಿಸಿದ ಆ ಆಶ್ರಿ ಬರವಣಿಗೆಗಳು ಇಂದಿಗೆ ಈ ರಾಷ್ಟ್ರೀಯ ವಿಶ್ವವಿದ್ಯಾಲಯಗಳ ಪದವಿ (degrees)ಗಳನ್ನು ಮದ್ರಾಸು ಸರಕಾರವು ಅಂಗೀಕರಿಸದಿದ್ದರಲ್ಲಿಯೂ, ನ್ಯಾಯವಾದ ವಿದ್ಯೆಯನ್ನು ಈ ಶಿಕ್ಷಣ ಕೇಂದ್ರಗಳಲ್ಲಿ ಗಳಿಸಿದ ಹಲವಾರು ವಿದ್ಯಾರ್ಥಿಗಳ ಕೀರ್ತಿ ಸ್ಮೃತಿ ಭಾವದಲ್ಲೂ ಮಾತ್ರ ಉಳಿದಿವೆ!

ಅದನ್ನೇ ಮಂಗಲ – ಬಾಲಚಮೂದಳ!

ಅದೇ ವರ್ಷ, ಎಂದರೆ 1917ರಲ್ಲಿ, ಭಾರತೀಯ ಬಾಲಚಮೂದಳ – The Indian Boy Scouts Association – ವನ್ನು ಸ್ಥಾಪಿಸಿದ್ದ

ಇದನ್ನೇ ಪಡೆಯಲು ಎಂದೆನಿಸಬಹುದು. ಆಶ್ಚರ್ಯವೆಂದರೆ ಬಾಡೆನ್ ಪೊವೆಲ್ ಇವನು ಸ್ಥಾಪಿಸಿದ್ದ ಬಾಲಚಮೂ ದಳದಲ್ಲಿ ಭಾರತೀಯರಿಗೆ ಸ್ಥಳವಿರಲಿಲ್ಲ. ಪಾಶ್ಚಾತ್ಯರು ಮತ್ತು ಆಂಗ್ಲೋ ಇಂಡಿಯನ್ನರು ಇವರಿಗೆ ಮಾತ್ರ ಅದರಲ್ಲಿ ಪ್ರವೇಶವಿತ್ತು. ಈ ಪ್ರಮಾದವನ್ನು ಸರಿಪಡಿಸಬೇಕಿತ್ತು. ಆಗ ಅದನ್ನು ಆನಿಬೆಸೆಂಟ್ ಇವರು ಸರಿಪಡಿಸಿದರು. ಭಾರತೀಯ ಬಾಲಚಮೂ ದಳದ ಸಂಸ್ಥೆಯು ಕೆಲಕಾಲ ಬಹಳ ಚೆನ್ನಾಗಿ ನಡೆಯಿತು. ಕಡೆಗೆ 1921 ರಲ್ಲಿ ಸರ್ ಬಾಡೆನ್ ಪೊವೆಲ್ಲರು ಮದ್ರಾಸಿಗೆ ಬಂದಿದ್ದಾಗ ಆನಿಯವರೊಡನೆ ಮಾತಾಡಿದುದರ ಪರಿಣಾಮವಾಗಿ ಆ ಎರಡು ದಳಗಳೂ ಒಂದಾದುವು. ಇವೆರಡು ಹೀಗೆ ಒಟ್ಟುಗೂಡುದು ಕೆಲವರಿಗೆ ಸರಿಕಾಣಲಿಲ್ಲ. ಇಡೀ ಪ್ರಪಂಚಕ್ಕೆ ಒಂದೇ ಬಾಲಚಮೂ ದಳವು ಇರಬೇಕೆಂದಿದ್ದಾಗ ಹಿಂದೂಸ್ಥಾನದ ದಳವೂ ಆ ದಳಕ್ಕೆ ಸೇರಬೇಕಾಗಿದ್ದುದು ನ್ಯಾಯವೆಂದೂ ಭಾರತೀಯ ದಳವು ರಾಷ್ಟ್ರೀಯವಾಗಿ ಸ್ವತಂತ್ರವಿದ್ದುದು ಇನ್ನು ಪೂರ್ತಿ ಸ್ವತಂತ್ರವಾಗಲಿದೆಯೆಂದೂ ಆ ಕಾರಣದಿಂದ ಜಗತ್ತಿಗೆ ಒಂದೇ ಬಾಲಚಮೂ ಸಂಸ್ಥೆ ಅಗತ್ಯವೆಂದೂ ಆನಿಯು ವಾದಿಸಿದರು.

ಹೇಗೂ ಆ ಎರಡು ದಳಗಳು ಒಂದಾದಾಗ ಭಾರತೀಯ ದಳದಲ್ಲಿದ್ದ ರಾಷ್ಟ್ರೀಯ ಭಾವನೆಗೆ ಅವಕಾಶವಿಲ್ಲದಾಯಿತೆಂದು ಅನಂತರದ ಘಟನೆಗಳಿಂದ ತಿಳಿಯುತ್ತದೆ. ಹಾಗಿದ್ದರೂ ನಮ್ಮ ಕಾಲದ ಗಣ್ಯವ್ಯಕ್ತಿಗಳಲ್ಲೊಬ್ಬನಾದ ಬಾಡೆನ್ ಪೊವೆಲ್ ಇವನ ನೇತೃತ್ವದಲ್ಲಿ ಈ ದಳವು ಇದ್ದುದರಿಂದ ಆ ಅವಕಾಶವನ್ನು ಹೊಂದಲು ಬರೀ ಈ ರಾಷ್ಟ್ರೀಯ ಭಾವನೆಯೆಂಬ ಸಂಕೀರ್ಣತೆಯನ್ನು ಕಳೆದುಕೊಂಡರೂ ಚಿಂತೆಯಿಲ್ಲ. ಆದರೆ ಅಂದಾ ಅಂತರಾಷ್ಟ್ರೀಯ ಧ್ಯೇಯದಿಂದ ಕಟ್ಟಲ್ಪಟ್ಟ ಭಾರತೀಯ ಬಾಲಚಮೂ ದಳದ ಕೀರ್ತಿಗೆ [illegible] ಒಂದು ಆಘಾತವುಂಟಾಯಿತು. ಅಂತರಾಷ್ಟ್ರೀಯ ಬಾಲಚಮೂ ದಳದ ಪ್ರಮುಖನಿಗೂ ಪತ್ರಿಕಾ ವರದಿಗಾರರಿಗೂ ನಡೆದ ಮಾತುಕತೆಗಳಲ್ಲಿ ಮದ್ರಾಸಿ ಅವನು ಭಾರತೀಯರ ಗೌರವಕ್ಕೆ ಕುಂದುಕವನ್ನುಂಟು ಮಾಡುವಂಥಾ ಮಾತನ್ನಾಡಿದನೆಂದು [illegible] ವಿಶ್ವಾಸಾರ್ಹವಾದ ಕಡೆಯಿಂದ ವರದಿಯಾಯಿತು. ಅದನ್ನು ಕುರಿತು ಅವನನ್ನು ಕೇಳಿದಾಗ್ಯೂ ಅವನಿಂದ ಸರಿಯಾದ ವಿವರಣೆಯು ದೊರಕಲಿಲ್ಲ. ಅಲ್ಲಿಂದ ನಂತರ ಭಾರತೀಯ ಬಾಲಚಮೂ ದಳದ ಬಹಳ ದೊಡ್ಡ ಭಾಗವು ಸರ್ ಬಾಡೆನ್ ಪೊವೆಲ್ ಇವನ ದಳದಿಂದ ಬೇರ್ಪಟ್ಟಿತು; ಮಾತ್ರವಲ್ಲ, ಇಂದಿಗೆ (1939) ಇಡೀ ದೇಶಕ್ಕೆ "ಹಿಂದೂಸ್ಥಾನ ಬಾಲಚಮೂ ಸಂಸ್ಥೆ" (Hindustan Scout Association) ಎಂಬುದಾಗಿ ಇದೆ.

ಆನಿ ಬೆಸೆಂಟ್ ಇವರನ್ನು, ಗೌರವ ಸ್ಕೌಟ್ ಕಮಿಷನರ್ ಎಂದು ನೇಮಿಸಿ ಬಾಡೆನ್ ಪೊವೆಲ್ ಇವನು ಪುರಸ್ಕರಿಸಿದನು, ಅವರ ಕೊನೆ ದಿನಗಳಲ್ಲಿ, ಎಂದರೆ 1932-33ರಲ್ಲಿ, ಬಾಲಚಮೂ ದಳದ ಪ್ರಮುಖನು ಕೊಡಬಹುದಾದ ಅತ್ಯುಚ್ಚ ಬಿರುದು, Order

Of the Silver Wolf – ಇದನ್ನು ಕೊಟ್ಟು ಗೌರವಿಸಲಾಯಿತು. ಆವಳು ಸಾಯುವುದಕ್ಕೆ ಕೆಲವು ದಿನಗಳಿಗೆ ಹಿಂದೆ ಬಾಲಚಮೂ ದಳದ ಪ್ರಧಾನಿಯು ಅವಳಿಗೆ ಸ್ವತಃ ಕೊಟ್ಟ ಆ Silver Wolf ಪದಕವನ್ನು ಎದೆಯಾರೆ ಹಿಡಿದುಕೊಂಡು ಮತ್ತು ಆಗಿಂದಾಗ್ಗೆ ಅದನ್ನು ನೋಡುತ್ತಾ, ತುಂಬಾ ಸಂತೋಷದಿಂದ ಆಕೆಯು ತನ್ನ ಕಡೇ ದಿನಗಳನ್ನು ಕಳೆಯುತ್ತಿದ್ದಳು!

ಆರನೇ ಮಜಲು – ಜಗತ್ತಿಗೆ ತಾಯಿ!

1928 ರಲ್ಲಿ ಅಡ್ಯಾರಿನ ಸಂತ ಮಿಕ್ಕೆಲ್ ಮತ್ತು ಎಲ್ಲಾ ಸಂತರ ಗುಡಿಯಲ್ಲಿ, "Church of St. Michael and All Angels" ತತ್ವೋಪದೇಶದ' ಹಬ್ಬ (Festival of Annunciation)ದ ವೇಳೆಗೆ ಬಂದಾಗಲ್ಯ, ಅದೇ ಇಂದೂ (1939) ಸಹ ಜ್ಞಾಪಕ ಶಕ್ತಿ ತೋರಿಸಲ್ಪಡುತ್ತಿದೇ ಇರುವ ಆನಿ ಬೆಸೆಂಟ್ ಇವಳು ಸಾರಿದ ಉಪದೇಶವು ಅವಳ ಜೀವನದ ವಿವಿಧ ಮಜಲುಗಳಲ್ಲಿ ಕ್ರಮಶಃ ವಾದುದರಿಂದ ಹೇಳಬೇಕಾಗಿದೆ.

ಮೋಕ್ಷ ಸಾಧಕರ ಗುರು, ಮಂತ್ರಿಯು ಸ್ವಳಿಗೆ ಜಗದ್ಗುರು ಶಿವನನು ಇರುವಂತೆಯೇ ಜಗದಂಬೆ ಆದಿಮಾ ಜಗನ್ಮಾತೆಯೊಬ್ಬಳು ಇರುವಳೆಂಬುದನ್ನು ಅವಳು ಉಪದೇಶದಲ್ಲಿ ಪ್ರತಿಪಾದಿಸುತ್ತಾ ಕಡೆಗೆ ಈ ರೀತಿ ಮುಂದುವರಿಸಿದಳು:—

"ಬೇರೆ ಬೇರೆ ಮತ ಧರ್ಮಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುವ ಜಗನ್ಮಾತೆಯು ಪಾರಮಾರ್ಥಿಕವಾಗಿ ಉತ್ಸಾಹದಿಂದ ಹಿಂದೆಂದೂ ಇಲ್ಲದಷ್ಟು ತೀವ್ರಗತಿಯಿಂದ ಜಗತ್ತಿನ ತಾಯಿಯೆಂಬ ವಿಶಿಷ್ಟ ಸ್ಥಾನವನ್ನಲಂಕರಿಸಲು ಇದೇ ವೇಳೆಗೆ ಬರುವಳು, ತಾಯಿಯು ಯಾವ ಜಾತಿಗಾಗಲೀ ವರ್ಗಕ್ಕಾಗಲೀ ಸೇರಿದ್ದರೂ ಆ ಪ್ರತಿಯೊಂದು ಮಗುವು ಹುಟ್ಟುವ ವೇಳೆಗೆ ದಯಾಪೂರ್ಣವಾದ ಹಾಗೂ ಮೃದು ಮಧುರವಾದ ಅವಳ ಹಸ್ತವು ಮಗುವನ್ನು ಕಾಪಾಡುತ್ತದೆ, ಅವಳ ದಯೆ, ಕೋಮಲತೆ ಮತ್ತು ನಿರ್ಮಲ ಪ್ರೀತಿ ಸ್ವಾಭಾವದತ್ತೆಗಳನ್ನೊಳಗೊಂಡ ತಾಯ್ತನವು ಜಾತಿ, ವರ್ಣ, ವರ್ಗ ಭೇದಗಳನ್ನು ಮೀರಿದನ್ನು ಅರಿಯದು, ಎಲ್ಲವೂ ಅವಳಿಗೆ, ಅವಳ ಕೂಸುಗಳಿಗೆ— — — —," ಎಂದು ವಿದಿತವಾಗಿತ್ತು.

ಮಾಂತ್ರಿಕವಾದ ನುಡಿಗಟ್ಟುಗಳ ರಚನೆಯಲ್ಲಿ ಕುಶಲೆಯಾದ ಆನಿ ಬೆಸೆಂಟ್ ಇವಳು ಈ ಕೆಳಗಿನ ಸ್ತುತಿಗಾನವನ್ನು ಅವಳು ಆಗಿಂದಾಗ್ಗೆ ಹಾಡುತ್ತಾ ಇರುತ್ತಿದ್ದಳು:—

'ಮನೋವಿಪಿಡೀ ಭಕ್ತಿಯುತ ಪ್ರಾರ್ಥನೆಯಿ,
ಶ್ರೇಷ್ಠವು ಬಲಿಷ್ಠವಿಹ ಗುರುಸ್ತೋಮದಲ್ಲಿ;

ತೋರದ ಸಾಕಾರದೊಳಗಿರುತಿಹಗೆ ಅಲ್ಲಿ,
ಅನಿತವಿಲ್ಲ ಅನಿಂದ್ಯ ಚೆಲುವಿನಾ ರತ್ನದಲ್ಲಿ,
ಸಾಗರದಲೆಯ ತೆರೆ– ಜಗನ್ಮಾತೆಗಲ್ಲಿ!" *

ಜೆ. ಕೃಷ್ಣಮೂರ್ತಿಯು ಜಗದ್ಗುರುವಿನ ಪ್ರಭಾವವನ್ನು ಹೊಂದಿ ಆ ಮಾರ್ಗದಲ್ಲಿ ಅವನು ಮುಂದಕ್ಕೆ ಹೋಗುವಂತೆ ಆನಿ ಬೆಸೆಂಟ್ ಇವಳು ಸರ್ವ ಎಳೆ ಬ್ರಾಹ್ಮಣ ಕನ್ಯೆ ರುಕ್ಮಿಣಿದೇವಿಯನ್ನು ಕಾಲಕ್ರಮೇಣ ಜಗನ್ಮಾತೆಯಾಗಿ ಸಾಗುವಂತೆ ಅವಳನ್ನು ತರಬೇತುಗೊಳಿಸುತ್ತಿದ್ದಳು. ಸ್ತ್ರೀತ್ವ ಮತ್ತು ಮಾತೃತ್ವದ ಪವಿತ್ರತೆಯು ಆ ರೀತಿಯಾಗಿ ಅಂಗೀಕಾರವಾಗದೆ ಜಗತ್ತಿಗೆ ಸುಖಶಾಂತಿ ಅಭಿವೃದ್ಧಿಗಳು ದೊರಕಲಾರವು.

ಈ ಭಾರತೀಯ ಮಹಿಳೆ (ರುಕ್ಮಿಣೀ ದೇವಿ) ತನ್ನ ಎಳೆ ಪ್ರಾಯದಲ್ಲಿಯೇ ಆನಿಯ ಆಪ್ತ ಗೆಳತಿಯರ ಬಳಗದಲ್ಲಿ ಸಿಬ್ಬಳಾದಳು. ಕಲಾ ಪ್ರಪಂಚದಲ್ಲಿ ಅವಳು ಆಗಲೇ ಸರ್ವ ಗಣ್ಯ ವ್ಯಕ್ತಿಯಾಗಿದ್ದಳಲ್ಲದೆ ಭರತನಾಟ್ಯ ಕಲೆಗೆ ಅದರ ಹಿಂದಿನ ಸ್ಥಾನವನ್ನು ಗಳಿಸಲು ದುಡಿದ ಪ್ರಮುಖರಲ್ಲಿ ಸಿಬ್ಬಳಾಗಿದ್ದಳು. ಜಗತ್ತಿಗೆ ಮಾತೆಯಾಗತಕ್ಕವಳ ಪ್ರಭಾವವು ಸಂಸ್ಕೃತಿ, ಸಭ್ಯತೆ, ಲಾವಣ್ಯ, ಮತ್ತು ಉತ್ತಮ ಜೀವನದ ಎಲ್ಲಾ ಸೌಂದರ್ಯಗಳನ್ನು ಸೆರೆಯಬೇಕಿದೆ. ಈ ರೀತಿಯಾಗಿ ಮತ್ತು ಸೌಮ್ಯ ಮಾನವನ ಕೈಯಿಂದ ಪ್ರಾಣಿಗಳ ಹತ್ಯೆಯಾಗುವುದನ್ನು ತಪ್ಪಿಸಲು ಅವಳು ಪ್ರಯತ್ನಪೂರ್ವಕವಾಗಿ ಶ್ರಮಿಸಿದ್ದು ಅವಳು ಮುಂದೆ ವಿಶಾಲ ಪ್ರಪಂಚದಲ್ಲಿ ಎಸಗಬೇಕಾದುದಕ್ಕೆ ತಕ್ಕ ತಳಹದಿಯಾಯಿತು. ಕೃಷ್ಣಮೂರ್ತಿ ಹೇಗೋ ಹಾಗೆಯೇ ಈ ರುಕ್ಮಿಣಿಯೂ ಸರ್ವ ವಿಶಿಷ್ಟ ವ್ಯಕ್ತಿಯಾಗಿದ್ದಳು. ಅವಳ ವಿಷಯದಲ್ಲಿ ಆನಿ ಬೆಸೆಂಟ್ ಇವಳು ತಾಳಿದ ಅಭಿಪ್ರಾಯದ ಮೇಲೆ ನಾನು ಯಾವ ಬಗೆಯ ತೀರ್ಪನ್ನೂ ಕೊಡಬೇಕಾಗಿಲ್ಲ. ಹೇಗೂ ಅವರಿರ್ವರೂ (ಕೃಷ್ಣಮೂರ್ತಿ ಮತ್ತು ರುಕ್ಮಿಣಿ ದೇವಿ) ತಮ್ಮ ಕ್ಷೇತ್ರಗಳಲ್ಲಿ ಉತ್ಕೃಷ್ಟ ಸೇವೆಯನ್ನು ಸಲ್ಲಿಸಿ ಜಗತ್ತಿನಲ್ಲಿ ಸ್ಥಾನ ಪಡೆಯುವರೆಂಬುದಕ್ಕೆ ಸಂದೇಹವಿಲ್ಲ. ಅಷ್ಟೇ ಅಲ್ಲ, ಸಾರ್ವಜನಿಕ ಅವಹೇಳನಕ್ಕೆ ಮತ್ತು ಖಂಡನೆಗೆ ಲಕ್ಷ್ಯವಾದೆ

---

* ಈ ಆದರ್ಶವನ್ನಾದ ಪ್ರಾರ್ಥನೆಯನ್ನು ಆನಿಯು ಕೆಲವು ವರ್ಷಗಳಿಗೆ ಹಿಂದೆ ವಿಶ್ವಸೋದರ ಭಾವನೆಯನ್ನು ಮೊಳಗಿಸುತ್ತಿಂದ ಹಾಡಿದ ಮತ್ತು ಥಿಯೊಸಫಿ ಎಲ್ಲ ತತ್ವಜ್ಞಾನ ಸಂಘ (Theosophical Society)ಗಳಲ್ಲಿ ಹಾಡಲ್ಪಡುವ ಕೆಳಗಿನ ಪಂಕ್ತಿಗಳಿಗೆ ಹೋಲುವುದು!–

ಅಂತರ್ಜ್ಯೋತಿಗಳಲಿ ಮಿನುಗುತಲಿ ಅವಿತಿಹ ಹೇ ಜೀವವೆ!
ಪ್ರತಿ ಜೀವಿಯನು ಬೆಳಗಿಸುತ ನಡೆಸುತಿಹ ಹೇ ಬೆಳಕೆ!
ಸರ್ವವನು ವಿಶ್ವಾತೆಯೊಳಪ್ಪಿಯೊಲಾಡಿಸುವ ಹೇ ಪ್ರೇಮವೆ!
ತನ್ನ ತಾನರಿತು ಪ್ರತಿ ಜೀವಿಯೂ ದೈವಾಂಶವಾಗಲಿ, ದೇವಾ!
ಇತರರೊಳು ತಾನೊರ್ವನೆಂದೆನಿಸಲಿ, ಹೇ ಮಾನವಾ!"

ಸತ್ಯವನ್ನು ಹೇಳಲು ಹಿಂಜರಿಯದಿದ್ದ ಆನಿಯವರ ಉತ್ಕೃಷ್ಟತೆಯಿಂದ ಅವರಿಗೆಷ್ಟು ಕಷ್ಟನಷ್ಟಗಳಾಗಿದ್ದವೆಂಬುದನ್ನು ಇಲ್ಲಿ ಬೇರೆ ಹೇಳಬೇಕೇ? ಆನಿಯವರು ಯಾವಾಗಲೂ ಯಾವ ತೊಂದರೆಗಳಿದ್ದರೂ ಸತ್ಯವನ್ನು ಮೇಲೆತ್ತಲು ಹೋರಾಡುತ್ತಿದ್ದ ಯೋಧೆಯಾಗಿದ್ದರು. ತಮ್ಮ ಪ್ರತಿ ಹಲವಿನ ಮಾತಿನಿಂದ ಅವರನ್ನು ಅಭಿಮಾನಪೂರ್ವಕವಾಗಿ ಕಾಣುತ್ತಿದ್ದ ಮತ್ತು ಅವರಿಂದ ಖ್ಯಾತರಾದ ಕೃಷ್ಣಮೂರ್ತಿ ಮತ್ತು ರುಕ್ಮಿಣೀದೇವಿ ಇವರು ನಿಜವಾಗಿಯೂ ಧನ್ಯರು.

ಸತ್ಯದ ಅವತರಣಿಕೆ.

ಆನಿ ಬಿಸೆಂಟ್ ಇವರ ಜೀವನದ ಕಡೆ ಅವಲೋಕಿಸುತ್ತ. ಅವರ ಜೀವನದ ಕೆಲವು ವಿಷಯಗಳು ತಿಳಿಯುತ್ತವೆ. "ಅವರು ಸತ್ಯವನ್ನು ಪಾಲಿಸುತ್ತಿದ್ದರು," ಎಂಬುದಾಗಿ ಅವರ ಗೋರಿಯ ಬರಹ ಇರಬೇಕೆಂದು ಅಪೇಕ್ಷಿಸಿದಂತೆ ಅವರು ತನ್ನ ಜೀವನವನ್ನು ಆದರ್ಶಪ್ರಾಯವಾಗಿ ಸಾಗಿಸಿದರು, ಸತ್ಯದ ಅವತಾರಿಣಿಯೇ ಆದರು. ಅವರು ಸುಳ್ಳು ಹೇಳಿದ್ದೇ ಇಲ್ಲ; ವಿಷಯಗಳನ್ನು ಪರಿಶೀಲಿಸದೆ ಯಾವುದನ್ನೂ ಅವರು ಹೇಳಿಲ್ಲ. ಕಾಲದಿಂದ ಕಾಲಕ್ಕೆ ಅವರು ಸ್ವಮತವನ್ನು ನಡೆಸಿದ್ದೇ ಇಲ್ಲ, ಸತ್ಯದಿಂದ ಸತ್ಯಕ್ಕೆ ಅವರು ನಡೆದರು. ಕೇವಲ ಜೀವನ ವ್ಯವಹಾರದಲ್ಲಿ ತೊಡಗಿದ್ದರಿಂದ ಸತ್ಯಾನ್ವೇಷಣೆಯನ್ನು ಬಹು ಆಳದಿಂದ ಸಾಧಿಸಿದರು. ಹಿಂದಿನಷ್ಟು ಅಸತ್ಯವನ್ನು ಅವರ ಲಾಭಕ್ಕಾಗಲೀ, ಸ್ವಂತ ಕಾರ್ಯಸಾಧನೆಗಾಗಲೀ ಅಥವಾ ತನ್ನ ಮಿತ್ರರಿಗೆಂದಾಗಲೀ ಅವರು ಹೇಳಿಲ್ಲ.

ಆನಿಯವರನ್ನು ಚೆನ್ನಾಗಿ ತಿಳಿದಿದ್ದವರು ಅವರು "ಸತ್ಯವನ್ನು ಪಾಲಿಸಿದರು" ಎಂಬ ನುಡಿಗಳು ಮಾತ್ರ ಕಾಲದಿಂದೀಚೆಗೆ ಅದನ್ನು "ಅವರೇ ಸತ್ಯ" ಎಂಬುದಾಗಿ ಬದಲಾಯಿಸಿದರು.

ಎರಡನೆಯದಾಗಿ ಅವರು ತನ್ನ ಗುರುವಿನ ಹಿಂದೆ ನಿಷ್ಠೆಯ ಅನುಕರಣೆ ಮಾಡುತ್ತಿದ್ದರು, ತನ್ನ ಗುರುವಿನ ಸೇವೆಯೇ ಅವರಿಗೆ ವಿಧಿಯಾಗಿತ್ತು. ಕಣ್ಣು ಮುಚ್ಚಿಕೊಂಡು ಗುರುವಿನ ಆಜ್ಞೆಯನ್ನು ಪಾಲಿಸುವ ವಿಧೇಯತೆಯು ಕ್ಷಣಕಾಲ ಅವಶ್ಯವಿದೆಯೆಂದೂ ವಿಚಾರಗಳನ್ನು ಎಲ್ಲಾ ಕಾಲದಲ್ಲೂ ಪರಿಶೀಲಿಸಿ ತಿಳಿಯುವ ಜ್ಞಾನವು ಅವರಲ್ಲಿ ಇರಲು ಅದರಂತೆ ಮಾನಸಿಕವಾಗಿ ಗುರುವನ್ನು ಪಾಲಿಸಿದರು.

ಸಿಪಾಯಿಗಳು ಯುದ್ಧರಂಗದಲ್ಲಿ ಸೇನಾನಿಗಳ ಆಜ್ಞೆಯನ್ನು ತಮಗೆ ಅರ್ಥವಾಗದಿದ್ದರೂ ಪಾಲಿಸುವಂತೆ ಆನಿ ಬಿಸೆಂಟ್ ಇವರು ಹಿಂದೊಂದು ವೇಳೆ ತನಗರಿಯದೆಯೇ ತನಗೆ ವಿಧಿಸಿದ್ದನ್ನು ವಿಧೇಯತೆಗೋಸ್ಕರಾಗಿ ಪಾಲಿಸಿದ್ದಿರಬಹುದು. ಯಾವಾಗಲೂ ಕಾರ್ಯರಂಗದಲ್ಲಿದ್ದು ತಾನು ಹೃತ್ಪೂರ್ವಕವಾಗಿ ನಂಬಿದ್ದ ಧ್ಯೇಯದ ಸಾಧನೆಗಾಗಿ ಮತ್ತು ಅನ್ಯಾಯವನ್ನು ಪ್ರತಿಭಟಿಸಿ ನ್ಯಾಯಕ್ಕಾಗಿ

ಹೋರಾಡುತ್ತಾ ಇದ್ದರು. ಇಂಥ ಕಾರ್ಯಕ್ಷೇತ್ರದಲ್ಲಿ ನಾಯಕತ್ವವನ್ನು
ವಹಿಸಿದ್ದ ಅವರ ಸೇನಾನಿ 'ಗುರು'ವು ಅಪೂರ್ವದ ಸಂಸ್ಕಾರವೇ
ಆದ ಬಿಳಿ ಜನಾಂಗದ ಸೋದರತ್ವಕ್ಕೆ ಸೇರಿದ್ದನು. ನಿಶ್ಚಲವಾದ
ವಿಧೇಯತೆ! ನಿಯಮವನ್ನು ಪಾಲಿಸುವಿಕೆ!! ತನ್ನ ಆತ್ಮಸಾಕ್ಷಿಯ
ನ್ನನುಸರಿಸಿ ಕರ್ತವ್ಯವನ್ನು ಮಾಡುತ್ತಿದ್ದ ವಿಧೇಯತೆ! ಇಂಥಾ ಅಪಾ
ರಮಾದಿಕ ಶಕ್ತಿ ಮತ್ತು ಸ್ಫೂರ್ತಿಯಿಂದ ಮತ್ತು ತೀವ್ರ ಕರ್ತವ್ಯ
ದಕ್ಷತೆಯಿಂದ ಅವರ ವರ್ಚಸ್ಸು ವಿಶ್ವವಿಖ್ಯಾತವಾಯಿತು,

ಹೆಚ್. ಪಿ. ಬ್ಲಾವಟ್ಸ್ಕಿಯವರನ್ನು ಅವರು ಮೊದಲ ಬಾ
ರಿಗೆ ಕಂಡಂದಿನಿಂದ ಅವರು ತನ್ನ ಸಾರ್ವಜನಿಕ ಜೀವನದಲ್ಲಿ
ಮೇಲೇರುತ್ತಾ ಬಂದರು. ಶ್ರೇಷ್ಠತೆಯೆಂದರೇನೆಂದು ಅವರು
ಹಿಂದೆಯೇ ಅರಿತಿದ್ದರು. ಚಾರ್ಲ್ಸ್ ಬ್ರಾಡ್ಲೆಯು ಅಂತೆಯೇ
ಆತ್ಮಶಕ್ತಿಯಿಂದ ತುಂಬಿದ್ದನು, ಆನಿ ಬೆಸೆಂಟರ ಆಪ್ತಮಿತ್ರ
ನಾದ ಬರ್ನಾರ್ಡ್ ಷಾ ಇವನು ಬ್ರಾಡ್ಲೆಯನ್ನು ಕುರಿತು ಹೇಳಿ
ದ್ದನ್ನು ಹಿಂದಿನ ಅಧ್ಯಾಯದ ಇಂಗ್ಲಿಷ್ ಅವತರಣಿಕೆಯಲ್ಲಿ ಕೊಟ್ಟಿದೆ.

ಅದೇ ಮಾತುಗಳನ್ನು ಆನಿ ಬೆಸೆಂಟ್ ಇವರನ್ನು ಕುರಿ
ತಾಗಿಯೂ ಹೇಳಬಹುದು. ಅವರು ಸಹ ಸರ್ವ ಮಾಂತ್ರಿಕ ಶಕ್ತಿ
ಯಿಂದ ಕೂಡಿದ್ದವರಾಗಿದ್ದರು, ಅವರಿಗೆ ವಿರೋಧಿಗಳಾರೂ
ಇದ್ದಿಲ್ಲವಾದರೂ ಅಂಥಾ ಬಲಿಷ್ಠ ಎದುರಾಳಿಗಳನ್ನು ಚಾರ್ಲ್ಸ್ ಬ್ರಾ
ಡ್ಲೆ ಇವನಂತೆ ಸೋಲಬಿಡದೆ ತನ್ನ ಆತ್ಮಶಕ್ತಿಯಿಂದ ತಳ್ಳಿಹಾಕ
ಬಲ್ಲವರಾಗಿದ್ದರು. ಅವರು ಸೇರಿದ ಪ್ರತಿಯೊಂದು ಸಭೆ, ಸಮ್ಮೇ
ಳನ, ಅಥವಾ ಸಾಮಾಜಿಕ ಮಾತುಕತೆಗಳನ್ನೆಲ್ಲ ಅವರೇ ಕೇಂದ್ರ
ಆಕರ್ಷಕ ವ್ಯಕ್ತಿಯಾಗಿ ಎಲ್ಲರನ್ನೂ ಮರುಳುಗೊಳಿಸುತ್ತಿದ್ದರು. ಅ
ಲ್ಲದೆ ಅಂಥಾ ಕೂಟಗಳಲ್ಲಿ ಏನು ನಡೆಯುತ್ತಿದ್ದರೂ ಅವರ ಪ್ರಭಾ
ವವು ಆ 'ಮಾನವ'ನನ್ನು ಬೇಧಿಸುತ್ತು. ಅಂಥಾ ಪ್ರತಿಭೆಯನ್ನು ಇ
ತರರು ನಿರಾಕರಿಸುತ್ತಿದ್ದರೂ ಅದು ಅನಿವಾರ್ಯವಾಗಿ ತನ್ನ
ಮುದ್ರೆಯನ್ನು ಅಂಥಾ ಸ್ಥಳಗಳಲ್ಲಿ ಒತ್ತಿಯೇ ಬಿಡುತ್ತಿತ್ತು. ಚಾರ್ಲ್ಸ್
ಬ್ರಾಡ್ಲೆ ಮತ್ತು ಇತರ ಮಹಾವ್ಯಕ್ತಿಗಳ ವಿಷಯದಲ್ಲೂ ಅದೇ
ರೀತಿ ಇದ್ದಿರಬಹುದು,

ಆದರೆ ಆನಿ ಬೆಸೆಂಟರ ಮಟ್ಟಿಗೆ ಹೇಳುವುದಾದರೆ ಇನ್ನೂ
ಇದೆ, ಸಾಮಾನ್ಯವಾಗಿ ಇತರರ ಶ್ರೇಷ್ಠತೆಯನ್ನು ಅಳೆಯುವ ಮಾನ
ದಂಡದಿಂದ ಅವರ ಮಹಾವ್ಯಕ್ತಿತ್ವವನ್ನು ಅಳೆಯಲಾಗುವುದಿಲ್ಲವೆಂ
ಬುದಕ್ಕೆ, ಮತ್ತು ಅವರ ಮಹತ್ವಕ್ಕೆ ಕಾರಣವಾದ ಒಂದು ಅ
ಪೂರ್ವ ಶಕ್ತಿಯೂ ಅವರಲ್ಲಿತ್ತು. ಅವರು ಬಹು ದೂರಕ್ಕೆ ಸೇರಿ
ದ್ದವರಾಗಿದ್ದರು. ಅವರ ಕಲ್ಪನೆಗಳು ಸಾಮಾನ್ಯ ಜನಕ್ಕೆ ತಿಳಿ
ಯಲು ಸಾಧ್ಯವಾಗದ ಒಂದು ತಪಸ್ಸಿನ ಪ್ರಭಾವದ ಕಲ್ಪನೆಗಳಾ

ಗಿದ್ದವು. ಅವಳು ಈ ಜಗತ್ತಿಗೆ ಬಹು ಸಮೀಪದಲ್ಲಿದ್ದರೂ, ಪ್ರಧಾನನಾರಿಯಾಗಿ ತೋರುತ್ತಿದ್ದರೆ, ಬಹು ಸಮೀಪದಲ್ಲಿದ್ದ ಕಾರಣದಿಂದ, ಅವಳ ಜೀವನವು ಇತರರಿಂದ ಬೇರ್ಪಟ್ಟು ಬಹು ದೂರದಲ್ಲಿತ್ತು. ಸಾಮಾನ್ಯ ವ್ಯಕ್ತಿಯು ಯಾವಿಧದಿಂದ ಸ್ಫೂರ್ತಿಯನ್ನು ಹೊಂದುವನೋ ಆ ಮೂಲವನ್ನು ಮೀರಿದ ಎಡೆಗಳಿಂದ ಅವಳು ಆತ್ಮಶಕ್ತಿ ಮತ್ತು ಸ್ಫೂರ್ತಿಗಳನ್ನು ಹೊಂದುತ್ತಿದ್ದಳು. ಕಾರ್ಲೈಲ್ (Carlyle) ಇವನು ಹೇಳಿದಂತೆ ಕೈಲಾಸ ಗಿರಿಯಷ್ಟು ಉನ್ನತವಾದ ಸ್ಥಾನವನ್ನು ಪಡೆಯುವವರಿರುವರು; ಅಂಥವರಲ್ಲಿ ಆನಿ ಬೆಸೆಂಟ್ ಇವಳು ಒಬ್ಬಳಾಗಿದ್ದು ಅವಳು ತನ್ನ ಜೀವಮಾನದಲ್ಲಿ ಅಪೂರ್ವವಾದೊಂದು ಅಗ್ನಿಸ್ತಂಭದಂತೆ ವಿರಾಜಿಸಿದಳು. ಅವಳ ಪ್ರಾರಂಭ ಜೀವನ, ನಡೆ ನುಡಿ ಮತ್ತು ಅವಳ ಕೊನೆಯ ದಿನಗಳಲ್ಲಿಯೂ ಜನಸಂದಣಿಯಿಂದ ಮತ್ತು ಅಂಥಾ ಸಂದರ್ಭಗಳ ಮುಂದಾಳುಗಳಿಂದ ಎಷ್ಟೋ ಬೇರ್ಪಟ್ಟಿತ್ತು. ಹಾಗಿದ್ದರೂ ಹಿಂದೆಯೇ ಹೇಳಿದಂತೆ ಅವಳು ಜನಸಂದಣಿಯೊಳಗೊಬ್ಬಳಾಗಿ ಜನತೆಯ ಮುಂದಾಳಾಗಿ ಜನತೆಯ ಮನೋಗತಿಗಳ, ಆಸೆಗಳ, ತಾಪಗಳ, ತ್ಯಾಗಗಳನ್ನು ಅರಿತು ಸರ್ವಕಾಲಾವಧಿಯಂತೆ ಅವರ ಹಿತಕ್ಕಾಗಿ ಮತ್ತು ದೈವದತ್ತವಾದ ಅವರ ಪ್ರತಿಷ್ಠೆಗೆ ತಕ್ಕಂತೆ ನಿರಂತರ ದುಡಿದಳು.

ಇಷ್ಟರಲ್ಲಿ ಸರ್ವ ವೃದ್ಧಿ ತೋರಿದೆಯಾಗಿ ಎಂಬತ್ತು ವರ್ಷ ಪ್ರಾಯವನ್ನು ಮೀರಿದರೂ ಆನಿ ಬೆಸೆಂಟ್ ಇವಳು ತನ್ನ ಸಾರ್ವಜನಿಕ ಕೆಲಸಗಳಲ್ಲಿ ನಿರತಳಾಗಿದ್ದು ಈ ಜನ್ಮದಲ್ಲಿ ಕಡೆಗೊಮ್ಮೆ ಎಂಬಂತೆ 1930ರಲ್ಲಿ ತನ್ನ 83ರ ಹರಯದಲ್ಲಿ ಯುರೋಪಿಗೆ ಪ್ರಯಾಣ ಬೆಳೆಸಿ ಆ ವರ್ಷಾಂತ್ಯದಲ್ಲಿ ಅಡೆಯಾರಿಗೆ ಹಿಂದಿರುಗಿದಳು. ಆದರೆ ಅವಳ ಶರೀರವು ಕ್ಷೀಣವಾಗುತ್ತಾ ಬಂದಿತು. ಹಾಗಿದ್ದರೂ ಬನಾರಸದಲ್ಲಿ ನಡೆದ ಬ್ರಹ್ಮವಿದ್ಯಾ ಸಂಸ್ಥೆಯ (Theosophical Society) ಐವತ್ತೈದನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಲು ಅಸಮರ್ಥಳಾಗಿದ್ದಳು.

ತನ್ನ 88 ಹರಯದಲ್ಲಿ ಅಧ್ಯಕ್ಷೆಯಾಗಿ ತನ್ನ ತತ್ವಜ್ಞಾನ ಸಂಸ್ಥೆಗೆ ತಕ್ಕ ಸೇವೆಯನ್ನು ಸಲ್ಲಿಸಲು ಸಾಧ್ಯವಿಲ್ಲವೆಂದು ಅವಳು ನಿವೃತ್ತಳಾಗಲು ಬಯಸಿದ್ದಳು, ಆಗ ಕೆಲವರು ಅವಳು ಜೀವಿಸಿದ್ದ ವರೆಗೆ ಆ ಸ್ಥಾನವನ್ನಲಂಕರಿಸಬೇಕೆಂದು ಇಚ್ಛಿಸಿದ್ದರು. ಅಷ್ಟೇ ಅಲ್ಲ, ಕೆಲವೇ ವರ್ಷಗಳಿಗೆ ಹಿಂದೆ ಅವಳಿಗೆ ಆ ಸಂಸ್ಥೆಯ ಜೀವಾವಧಿ ಅಧ್ಯಕ್ಷೆ ಪದವಿಯನ್ನು ಒಪ್ಪಿಸಲಾಗಿತ್ತು. 1907ರಲ್ಲಿ ಮೊದಲ ಬಾರಿಗೆ ಚುನಾಯಿಸಲ್ಪಟ್ಟ ಅವಳು 1914ರಲ್ಲಿ, 1921ರಲ್ಲಿ ಮತ್ತು 1928ರಲ್ಲಿ ಅವಿರೋಧವಾಗಿ ಚುನಾಯಿತಳಾದಳು, ಅವಳು ಜೀವಿಸಿದ್ದ ವರೆಗೆ ಬೇರಾರೂ ಅಧ್ಯಕ್ಷರಾಗುವುದು ಬೇಡವೆಂದೇ ನಿಶ್ಚಯವಾಗಿತ್ತು. ಆದರೆ ಪ್ರಜಾಪ್ರಭುತ್ವ ನೀತಿಗೊಳಗಾದ ಸಂಸ್ಥೆಗಳು ಮತದಾರರ ಇಚ್ಛೆಗೆ ಯಾವಾಗಲೂ ಒಳಪಡಬೇಕೆಂದು

ಒಮ್ಮೊಮ್ಮೆ ಅವರು ತಮಗೆ ಬೇಕಾದಂತೆ ಭಾಷಣವನ್ನು ಅದಕ್ಕೆ ತಕ್ಕಂತೆ ಮಾರ್ಪಡಿಸಿದಾಗಲೂ ಆನಿ ಬೆಸೆಂಟ್ ಇವರು ಅದಕ್ಕೆ ಒಪ್ಪಿಕೊಳ್ಳುತ್ತಿದ್ದರು. ಅಂತೆಯೇ ತನ್ನ ಜೀವಾವಧಿ ಅಧಿಕಾರವನ್ನು ನಿರಾಕರಿಸಿದ್ದರು. ಅವರು 1933ರ ವರೆಗೆ ಜೀವಿಸಿದ್ದರೆ ಖಂಡಿತವಾಗಿಯೂ ಏಳನೇ ಬಾರಿಗೆ ಪುನಃ ಅಧ್ಯಕ್ಷೆಯಾಗಿ ಚುನಾಯಿಸಲ್ಪಡುತ್ತಿದ್ದರು. ಸ್ವತಃ ಮುದಿಯರು ಅವರು ನಿಶ್ಶಕ್ತರಾಗಿದ್ದರೂ ಹಲವು ಸದಸ್ಯರು ತತ್ವಜ್ಞಾನ ಸಂಸ್ಥೆಗೆ ಅವರಿತ್ತ ಅಮೂಲ್ಯ ಸೇವೆಯಿಂದ ಮಾನಸಿಕವಾಗಿ ಪ್ರಯೋಜನ ಹೊಂದಿದ್ದರು. ಅವರು ತನ್ನ ಸಾರ್ವಜನಿಕ ಪರಿಶ್ರಮದೊಡಗೂಡಿ ಇದ್ದಷ್ಟು ಕಾಲ ಆ ಸಂಸ್ಥೆಗೆ ಅವರ ಬೆಂಬಲವಿದ್ದೇ ಇರುತ್ತದೆಂದು ಅರಿತು ನಂಬಿದ್ದರು. ಅವರ ಸ್ಫೂರ್ತಿ, ಅವರ ಜ್ಞಾನ ಮತ್ತು ಅವರು ತನ್ನ ಗುರು ಹಾಗೂ ಮಾನವ ಜನಾಂಗಕ್ಕೆ ಸಲ್ಲಿಸಿದ ನಿಷ್ಕಾಮ ಸೇವೆಯೆಲ್ಲವೂ ಇತರ ಕ್ಷೇತ್ರಗಳಲ್ಲಿ ಸಾಧಿಸಿದುದಕ್ಕಿಂತ ಬ್ರಹ್ಮಜ್ಞಾನ ಸಂಸ್ಥೆಗೆ ವಿಶೇಷವಾಗಿ ಅರ್ಪಿಸಲಾಗಿತ್ತೆಂದೂ ಎಲ್ಲರೂ ತಿಳಿದಿದ್ದರು. ಏನಿದ್ದರೂ ಅವರು ತನ್ನ ರಾಜೀನಾಮೆಯನ್ನು ಅಂಗೀಕರಿಸಬೇಕೆಂದು ಮಾಡಿಸಲಿಲ್ಲ; ಏಕೆಂದರೆ ಅವರ ಗುರುವು ಅವರಿಗೆ ತನ್ನ ಸ್ಥಾನದಲ್ಲಿಯೇ ಇರಬೇಕೆಂದು ವಿಧಿಸಿದ್ದನು, "ಅವನು ಬಯಸಿದ್ದೇ ನನ್ನ ಆಜ್ಞೆ; ಆದುದರಿಂದ ಒಬ್ಬ ಯೋಧನು ತನ್ನ ಸ್ಥಾನದಲ್ಲಿ ಬೇರೊಬ್ಬನು ಬಂದು ಅವನನ್ನು ಬಿಡುಗಡೆ ಮಾಡುವ ವರೆಗೂ ಹೇಗೆ ನಿಂತಿರುವನೋ ಅದೇ ರೀತಿ ನಾನು ನಿಲ್ಲುವೆನು," ಎಂಬುದಾಗಿ ಆನಿಯವರು ಹೇಳುತ್ತಿದ್ದರು.

ಆನಿ ಬೆಸೆಂಟ್ ಇವರ ದೇಹಬಲವು ಕ್ರಮೇಣ ಇಳಿಯುತ್ತ ಬಂತು. ಅವರು ಅಡಿಯಾರಿನ ತನ್ನ ಅಂತರಾಷ್ಟ್ರೀಯ ಮುಖ್ಯ ಕಚೇರಿಯ ಪ್ರಧಾನ ಭವನದ ಕೋಣೆಯಲ್ಲಿ ಕೂಡಿರುತ್ತಿದ್ದರು. ಆಗಿಂದಾಗ್ಗೆ ಅವರು, "ಉದಾರ ಕ್ಯಾಥೊಲಿಕ್ ಚರ್ಚ್" (Liberal Catholic Church – ಇದರ ಬಿಷಪ್ ಆಗಿ ನೇಮಿತನಾದ ಲೆಡ್‌ಬೀಟರ್ ಇವನನ್ನು ಅಥವಾ ಅವನು ಇವರನ್ನು ಎಂಬಂತೆ ಪರಸ್ಪರ ಸಂದರ್ಶಿಸಿ ಮಾತಾಡುತ್ತಿದ್ದರು. ಆದರೆ ಒಮ್ಮೊಮ್ಮೆ ಅವರು ಹೊರಗಿನಿಂದ ಕೂಡಿದ್ದ ತನ್ನ ಮೇಲ್ಮಹಡಿ ಕೋಣೆಯಿಂದ ಕೆಳಗಿಳಿದು ಬರುತ್ತಿದ್ದರು. ಉದಾಹರಣೆಗೆ ಅವರು 1931ರ ಅಂತರಾಷ್ಟ್ರೀಯ ವಾರ್ಷಿಕ ಸಮ್ಮೇಳನದ ವೇಳೆಗೆ ದೊಡ್ಡ ಹಜಾರ (Great Hall)ದಲ್ಲಿ ಭಾಷಣವನ್ನು ಕೊಟ್ಟರು. ಆ ಹಳೆ ಹಜಾರದ ಕಿಡಿಗಳು ಹಾರಿ ಜ್ವಾಲೆಯಂತೆ ಮಾರ್ದನಿಸುತ್ತಿತ್ತು. ಅವರ ಕಂಠದ ಮಾಧುರ್ಯವು ಕಾಮನಬಿಲ್ಲಿನ ಸೌಂದರ್ಯ ತರಂಗಗಳಂತೆ ಕೇಳಿಸುತ್ತಿದ್ದಿತು, ಆ ಭಾಷಣವನ್ನು ಕೇಳಿ ಸಂತೋಷಭರಿತರಾದ ಜನಸಮೂಹವು ಭಕ್ತಿ ಮತ್ತು ಪ್ರೀತಿಯಿಂದ ಅವರನ್ನು

ಹುತ್ತು ವರಿದಳು. ಅವಳು ಕೆಲವು ನಿಮಿಷಗಳ ಕಾಲ ಮಾತಾಡಿದಳು. ಆದರೆ ಆ ಕೆಲವು ನಿಮಿಷಗಳು ಅವಳ ಕಡೆಯ ಭಾಷಣದ ಆ ಸ್ವರ್ಣದಂತ ಧ್ವನಿಯು (Golden Voice) ನೆರೆದಿದ್ದ ಶ್ರೋತೃಗಳ ಮನಸ್ಸನ್ನು ಸೂರೆಗೊಂಡಿತು. ಆದರೆ ಅವಳ ಕ್ಷೀಣವಾದ ದೇಹಕ್ಕೆ ಆ ಭಾಷಣವು ಬಹು ಆಯಾಸವನ್ನುಂಟುಮಾಡಿದರಿಂದ ಅವಳು ಹಲವು ದಿನ ಮಲಗಿದ್ದಲ್ಲೇ ಇರಬೇಕಾಯಿತು. ಅವಳು ಸಭೆಯಲ್ಲಿ ಮಾತಾಡಿದ್ದು ಅದೇ ಕಡೆಯ ಬಾರಿಗೆ ಆಗಿತ್ತು. ಆದರೆ ಅವಳ ಹುಟ್ಟುದಿನದ ವೇಳೆಗೆ ಅಡ್ಯಾರ್‌ನಲ್ಲಿ ಇದ್ದಾಗ ಜನ ಸಹಸ್ರಗಟ್ಟಲೆಯಾಗಿ ಸೇರಿ ಅವಳಿಗೆ ಶುಭಾಶಯವನ್ನು ಬಯಸುತ್ತಿದ್ದಂತೆಯೇ ಅವಳ ಉಳಿದ ಹುಟ್ಟುದಿನಗಳಂದೂ ಜನ ಅದೇ ರೀತಿಯಾಗಿ ಸೇರುತ್ತಿದ್ದರು. ಒಂದು ಸಂದರ್ಭದಲ್ಲಿ ಹೂ ಮತ್ತು ಎಲೆಯ ಸುಂದರವಾದ ಲತಾಗೃಹವನ್ನು ಮಾಡಿ ಅವಳನ್ನು ಸಜೀವ ಶೋಭೆಯುಂಟಾಗುವಂತೆ ದೇವತೆಯು ದಿವ್ಯಭವನದಂತೆ ಅದರೊಳಗೆ ಕುಳ್ಳಿರಿಸಿದರು, ಆಗ ಅವಳ ಮಿತ್ರರು ಒಬ್ಬರನಂತರ ಒಬ್ಬರಂತೆ ಅವಳಿಗೆ ಹೂಗೊಂಚಲನ್ನು ಅರ್ಪಿಸಿದರು. ಆ ಪ್ರದರ್ಶನವು ಅವಳಿಗೆ ಹಲವು ದಿನಗಳವರೆಗೆ ಶಾರೀರಿಕ ಆಯಾಸವನ್ನು ಹುಟ್ಟಿಸಿತು. ಆದರೂ ಅವಳು ಬಹು ಸಂತೋಷದಿಂದಲೂ ವಿನೀತ ಮುಗುಳ್ನಗುವಿನಿಂದಲೂ ನಮ್ರತೆಗಳಿಂದಲೂ ಎಲ್ಲರನ್ನು ಮಾತಾಡಿಸಿದ್ದಳಲ್ಲದೆ ಅವಳನ್ನು ಪ್ರತ್ಯಕ್ಷ ಕಾಣುವುದು ನಿಜಕ್ಕೂ ಒಂದು ವರಪ್ರಸಾದ ದೊರಕಿದಂತಿತ್ತು. ಇನ್ನೊಂದು ವಾರ್ಷಿಕೋತ್ಸವದ ವೇಳೆಗೆ ಆ ನೂರಾರು ಪ್ರತಿನಿಧಿಗಳಲ್ಲಿ ಪ್ರತಿಯೊಬ್ಬನನ್ನೂ ತನ್ನ ಪಲ್ಲಂಗದ ಕೋಣೆಗೆ ಹೋಗಿ ಕಾಣುವಂತೆ ಸರಿಜನಕ್ಕೆ ಅನುಮತಿಯಿತ್ತಳು, ಅವಳು ಕುಳಿತಿದ್ದಂತೆ ಒಬ್ಬರನಂತರ ಒಬ್ಬರು ಅವಳಿಗೆ ವಂದಿಸಿ ಮುಂದಕ್ಕೆ ಹೋಗುತ್ತಿದ್ದ ದೃಶ್ಯವು ಅವರ್ಣನೀಯವಾಗಿತ್ತು. ಆದರಿಂದ ಅವಳು ಎಷ್ಟು ಸಂತೋಷಪಟ್ಟಳೆಂದರೆ ಅವಳು ತನ್ನನ್ನು ಕಾಡುತ್ತ ಬಂದ ರೋಗದೆಯನ್ನು ಬೇಗನೆ ಹೋಗಗೊಡಲಿಲ್ಲ, ಅವಳಿಗೆ ಪ್ರತಿಯೊಬ್ಬನೊಡನೆಯೂ ಮಾತಾಡಬೇಕು, ಕೆಲವರೊಡನೆ ಬಹು ಸಮಯ ಮಾತಾಡುವಳು. ಆ ಕಾರಣದಿಂದ ಬರುತ್ತಿದ್ದ ಸೇವಕರು ತುಂಬಾ ಕಳವಳಗೊಳ್ಳುತ್ತಿದ್ದರು. ಜನರು ಬಹು ಸಂಖ್ಯೆಯಲ್ಲಿ ಅವಳ ಸುತ್ತುಗಟ್ಟುತ್ತಿದ್ದುದರಿಂದ ಮಾತ್ರವಲ್ಲ, ಯಾರೂ ತಿಳಿಯದ ಬಹು ದಾದಂತೆ ಅವಳಿಗೆ ವಿಪರೀತ ದೇಹಾಯಾಸಕ್ಕೆ ಎಡೆಗೊಟ್ಟಂತೆ ಆಗಿತ್ತು. ಹೇಗೂ ಎಲ್ಲವೂ ತೃಪ್ತಿಕರವಾಗಿ ಮುಗಿದರೂ ಅವಳು ಕೆಲವು ದಿನ ಹಾಸಿಗೆ ಹಿಡಿಯಬೇಕಾಗಿತ್ತು.

ಆನಿ ಬೆಸೆಂಟ್ ಇವಳ ಜೀವನದ ಕಡೆಯ ದಿನಗಳು ಸಮೀಪಿಸುತ್ತಾ ಇದ್ದಂತೆ ಪ್ರಾಯವೇರಿದ ಅವಳು ತನ್ನ ಕೆಲಸದಿಂದ ನಿವೃತ್ತಳಾಗುತ್ತಾ ಬರುತ್ತಿದ್ದಳು. ಒಂದೊಂದು ವೇಳೆ ಬಹು ಸಮಯ ನಿದ್ದೆ ಹೋಗುವಳು. ಅವಳೇನಾದರೂ ಮಾತಾಡಿದರೆ ಅದು ಬಡಜನರ ಯಾತನೆಯನ್ನು ಮತ್ತು ಅದರ ನಿವಾರಣೆಯನ್ನು

ಕುರಿತಾಗಿರುತ್ತಿತ್ತು, ಶಾಲೆಗಳ ಮೇಲೆ ಅವಳು ಇಟ್ಟಿದ್ದ ದಯೆಯ
ನ್ನು ಕುರಿತು ಪ್ರಸ್ತಾಪಿಸುವಳು. ಅವಳು ತನ್ನ ಗುರುಗಳಿಗೆ ಕೃತಜ್ಞ
ತೆಯ ಬಗ್ಗೆ ಆಗಿಂದಾಗ್ಗೆ ಹೇಳುವಳು; ಶಿಷ್ಯ ಪುತ್ರ ಮಕ್ಕಳ ವಿಷಯ
ವಾಗಿಯೂ ಉಲ್ಲೇಖಿಸುವಳು. ಒಂದು ದಿನ ಮಧ್ಯಾಹ್ನ ಆನಿ ಬೆಸೆಂ
ಟ್ ಇವಳು ಈ ಕೆಳಗಿನಂತೆ ತನ್ನ ಸೇವಿಕೆಯೊಬ್ಬಳಿಗೆ ಉಕ್ತ ಲೇಖನ
ವೆಂಬಂತೆ ಹೇಳಿ ಅವಳಿಂದ ಬರೆಸಿದಳು:-

"ಶಿಷ್ಯ ಮಕ್ಕಳು ಸಂತೋಷದಿಂದ ಮತ್ತು ನಿರ್ಭೀತಿಯಿಂದ
ಇರುವಂತೆ ಮಾಡಲು ನಾನು ಶ್ರಮಿಸಿದ್ದೇನೆ. ಆ ಕಾಲದಲ್ಲಿ ಮುಂದುವ
ರಿಯಲಿ. ಎಳೆ ಜನಾಂಗವು ನನ್ನನ್ನು ಮತ್ತು ಅವರಲ್ಲಿ ನಾನು ಇಟ್ಟಿದ್ದ
ಪ್ರೀತಿಯನ್ನು ತಿಳಿಯಲು ಕಲಿಯಲಿ.

"ನಿಕೃಷ್ಟ ಜೀವಿಗಳಿಗೆ ಹೆದರುವಂಥಾ ಸ್ವಭಾವವನ್ನು ಕಲ್ಪಿಸಿ
ಹಾಕಲು ಹೋಗದಿರಿ; ಏಕೆಂದರೆ ಎಳೆ ಮಕ್ಕಳನ್ನು ಅವರಿಗೆ ಬೇಕಾ
ದಂತೆ ಅನಿರ್ಬಂಧಿಯಾಗಿ ವರ್ತಿಸಲು ಬಿಡಬಾರದು, ಆದರೂ ಅವ
ರು ಸಂತೋಷದಿಂದ ಬೆಳೆಯಬೇಕು."

ಇದು ಅವಳ ಜೀವಿತ ಸದುದ್ಯೋಗವನ್ನು ತಿಳಿಸಿದ ಲೇ
ಖನ ಸಹಸ್ರಾರು ಜನರಿಗೆ ಹೇಳಿದ ಅವಳ ಕಡೆ ನುಡಿಗಳಾಗಿದ್ದುವು.
ಬೆಸೆಂಟ್ ಬ್ರಹ್ಮವಿದ್ಯಾ ಶಾಲೆ (The Besant Theosophical School)
ಇದು ಅವಳ ಸ್ಮಾರಕವಾಗಿ ಅಡೆಯಾರ್‌ನಲ್ಲಿ ಸ್ಥಾಪನೆಯಾಯಿತು,
ವರ್ಷಗಳು ಕಳೆದಂತೆ ಇತರ ವಿಶ್ವವಿದ್ಯಾಲಯಗಳು ವಿದ್ಯಾಲಯ
ಗಳಂತೆ ಇಲ್ಲಿದ್ದರೂ ಒಂದಾಗಬೇಕೆಂಬ ಆಶಯದಿಂದ ಇದೊಂ
ದು ಜಗದ್ವಿಖ್ಯಾತ ವಿದ್ಯಾಲಯ, A World University - ಎಂಬ
ವಾದದಿಂದ ಆಶಿಸಲಾಗಿದೆ. ಈ ಶಾಲೆಯು ತತ್ವಜ್ಞಾನ ಸಂಸ್ಥೆಯಿಂ
ದ ತಕ್ಕ ಸ್ಫೂರ್ತಿಯನ್ನು ಪಡೆಯಬೇಕೆಂಬುದಕ್ಕೂ ಮತ್ತು ವಿಶ್ವ
ಬಾಂಧವ್ಯವನ್ನು ಬೆಳೆಸಲಿಕ್ಕೂ ಅಡೆಯಾರ್‌ಗೆ ಸಮೀಪವಿರಬೇ
ಕೆಂದು ಅವಳು ಇಚ್ಛಿಸಿದ್ದಳು. 1934ರಲ್ಲಿ ಸ್ಥಾಪಿಸಲ್ಪಟ್ಟ ಈ ಶಾ
ಲೆಯು ಅಭಿವೃದ್ಧಿಗೊಳ್ಳುತ್ತಿದೆಯಾದರೂ ಇದುವರೆಗೆ
ಪಡೆದ ಸಹಕಾರಕ್ಕಿಂತಲೂ ಇನ್ನೂ ಹೆಚ್ಚು ಸಹಾಯವನ್ನೂ ಜನರ ಸಹಾ
ನುಭೂತಿಯನ್ನೂ ಪಡೆಯಬೇಕಿದೆ.

ಆನಿ ಬೆಸೆಂಟಳು ವಿದ್ಯೆಯ ಅಭಿವೃದ್ಧಿಯನ್ನು ಬಯಸಿ
ಲೋಕಕ್ಕೆ ಸಲ್ಲಿಸಿದ ಸೇವೆಯು ಅಪರಿಮಿತವಾಗಿದೆ. ಆದರೆ
ವಿದ್ಯೆಯ ಧ್ಯೇಯವನ್ನು ಕುರಿತು ಹೇಳುವ ಕ್ರಮಕ್ಕೆ ಸರಿಯಾಗಿ
ಹಲವರು ಆಸಿಯು ನಿರ್ದಿಷ್ಟ ಕೆಲಸಗಳನ್ನು ಪ್ರಶಂಸಿಸದಂತೆ
ತೋರುವುದಿಲ್ಲ. ಅವಳು ಬರೀ ಮಾತಿನಲ್ಲಿ ಮಾತ್ರ ಅಭಿಮಾನ
ವನ್ನು ತೋರಿಸುವಂಥವಳಾಗಿರಲಿಲ್ಲ. ಅವಳು ವಿದ್ಯಾಯೋಜ
ನೆಯನ್ನು ಸ್ವತಃ ಕೈಗೊಂಡು ತೋರಿಸಿದಳು. ವಿದ್ಯೆಯನ್ನು ಕುರಿತು

ಅವಳು ಹೇಳಿದ್ದೆಲ್ಲ The Besant Spirit ಎಂಬ ಗ್ರಂಥದ ಎರಡನೇ ಸಂಪುಟದಲ್ಲಿ ಕೊಡಲಾಗಿದೆ; ಅಲ್ಲದೆ ಅವಳು ತನ್ನ ಕೆಲವು ಭಾರತೀಯ ಮಿತ್ರರೊಡನೆ ಸ್ಥಾಪಿಸಿದ ಕೇಂದ್ರ ಹಿಂದೂ ವಿಶ್ವವಿದ್ಯಾಲಯ, Central Hindu College, ಇದನ್ನು ಕುರಿತಾಗಿ ಪ್ರಾರಂಭಿಸಿದ ಸಂಚಿಕೆಯ ವಿವರವನ್ನು ಓದಿಯಲ್ಲೂ ಹೇಳಲಾಗಿದೆ.

ಅನಿ ಬೆಸೆಂಟ್ ಇವಳು ಸರ್ವತೋಮುಖವಾದ ಹೋರಾಟಗಾರ್ತಿ ರಾಜಕಾರಣೀಯತೆಯಿಂದಲೂ ಭಾರತದ ಸ್ವಾತಂತ್ರ್ಯಕ್ಕೆ ಮೂಲಪ್ರಾಯಳೆಂದೂ ಹಾದಿಗಳಲ್ಲಿ ನೆನೆಸಿಕೊಳ್ಳುತ್ತಿರುವಳು. ಅಷ್ಟೇ ಅಲ್ಲ, ತನ್ನ ಧ್ಯೇಯವನ್ನು ಸಾಧಿಸಲು ತನ್ನ ಅನುಯಾಯಿಗಳನ್ನು ಉದ್ರೇಕಗೊಳಿಸಬಲ್ಲಂಥಾ ಮಹಾ ವಾಗ್ಮಿತೆಯೂ ಆಗಿದ್ದಳು. ಹಿಂದೂ ಧರ್ಮವನ್ನು ಹುರಿದುಂಬಿಸಿ ಅದರಿಂದ ಆದರ್ಶದ ಕಿಡಿಯನ್ನು ಹಾರಿಸಲು ಇನ್ನೊಂದು ಅಪೇಕ್ಷಿತವಾದ ಶಕ್ತಿಯೇ ಬೇಕು. ಅನಿಯೂ ಅಂಥಾ ಹಿಂದೂ ಬೆಂಕಿಯ ಕಿಡಿಯಾಗಿದ್ದಳು. ಇನ್ನೂ ಈ ಭೂಮಿಯಲ್ಲಿ ಕಂಗೆಟ್ಟು ತೊಳಲುವವರಿಗೆ ದಾರಿ ತೋರಿಸಲು ಅವಳ ಆ ಆತ್ಮಜ್ಯೋತಿಯು ಸ್ವರ್ಗವನ್ನೇ ತಲುಪುವದಕ್ಕೂ ಎತ್ತರಕ್ಕೆ ಏರಿತು.

ಬೆಳಗುವ ಹಿಂದೂ ಜ್ಯೋತಿ!

ಕಡೆಗೊಮ್ಮೆ ಎಂಬಂತೆ 1933ರ ಸೆಪ್ಟಂಬರ್ 20ರಲ್ಲಿ ಅನಿ ಬೆಸೆಂಟ್ ಇವಳ ಭೌತಿಕ ಶರೀರಕ್ಕೆ ಬಲವು ಮತ್ತು ಶೋಭೆಯನ್ನೀಯಲು ಅದು ಯಾವ ಪಂಚಭೂತಗಳಿಂದಾವೃತವಾದ ಮಾಯೆಯಿಂದ ಉದಯವಾಯಿತೋ ಅದೇ ಪಂಚಭೂತಕ್ಕೆ ಅದನ್ನು ಅರ್ಪಿಸಲಾಯಿತು. ಅವಳ ದೇಹವು ಅದರ ಬಾಲ್ಯದಲ್ಲಿ ಎಷ್ಟು ಪ್ರಫುಲ್ಲತೆಯಿಂದ ಮತ್ತು ವಿಶೇಷ ಕೋಮಲತೆಯಿಂದ ಕೂಡಿತ್ತೋ ಅದೇ ರೀತಿ ಅದಕ್ಕೆ ಪ್ರಾಯವೇರಿದಾಗಲೂ ಇತ್ತು ಎಂಬುದು ಅವಳ ಜತೆಯಲ್ಲಿದ್ದ ಕೆಲವರಿಗೆ ಮಾತ್ರ ಗೊತ್ತಿತ್ತು. ಅವಳ ಕೂದಲು ಬೆಳ್ಳಿಯಂತೆಯೂ ಅವಳ ತಲೆಯು ಸಿಂಹಿಣಿಯ ತಲೆಯಂತೆ ಸುಂದರವೂ ಭವ್ಯವೂ ಶೋಭಾಯಮಾನವೂ ಆಗಿತ್ತೆಂದರೆ ಅತಿಶಯೋಕ್ತಿಯೇನೂ ಅಲ್ಲ. ಮಹಾ ಸಂತರ ಮತ್ತು ದಯಾಶಾಲಿಗಳ ಕಣ್ಣುಗಳಂತೆ ಅವಳ ಕಣ್ಣುಗಳು ಪ್ರಕಾಶಮಾನವಾಗಿದ್ದುವು. ಜೀವನದಲ್ಲಿ ವಿನೋದಗಳನ್ನು ಅರಸುವವರಿಗೆ ಅವಳ ಕಡೆಗಣ್ಣ ಕುಡಿನೋಟಗಳು ಬೆಡಗು ಕಾಣುತ್ತಿತ್ತು. ಅನ್ಯಾಯವನ್ನು ಪ್ರತಿಭಟಿಸುವ ವೀರ ಸೇನಾನಿಗಳ ಕಣ್ಣುಗಳಂತೆ ಜಾಜ್ವಲ್ಯಮಾನವಾಗಿಯೂ ಇದ್ದುವು. ಎಲ್ಲೆಲ್ಲಿ ಕುನೀತಿಗಳು ಇದ್ದುವೋ ಆ ಅಕ್ರಮದ ತೆರೆಯನ್ನು ಸರಿಸಿ ಅವಳ ವಿಶಾಲ ದೃಷ್ಟಿಯು ಬಹು ಆಳಕ್ಕೆ ಸ್ಪರ್ಶಿಸಿ ಒಳ್ಳೆಯದನ್ನೇ ಅನ್ವೇಷಿಸುತ್ತಿತ್ತು. ಅವಳ ಮುಂದೆ ಇರುವಾಗ ವಿಮೋಚಕರೊಬ್ಬರ ಕಣ್ಣುಗಳ ತಾಂತ್ರಿಕ

ಶಕ್ತಿಯು ಹೊರ್ಗೆಸನ್ನು ತೋರಿಸುತ್ತಿದ್ದಲ್ಲದೆ ಸರ್ವಜೀವಿಗಳಲ್ಲೂ ವಿಶ್ವಾಸ ವಿಡುವ ಸತ್ಯವನ್ನೂ ಕಾಣುವ ಮತ್ತು ಸರ್ವರೂ ದೈವತ್ವವನ್ನು ಹೊಂದುವರೆಂಬ ವಿಶ್ವಾಸವನ್ನು ತಳೆದಿದ್ದ ಕಾಂತಿಪೂರ್ಣ ಕಣ್ಣುಗಳು ಇದಾಗಿದ್ದುವು. ಅಂತೆಯೇ ಅವಳ ಕೈಗಳು ಸರ್ವ ಕಲಾವಿದನ ಕೈಗಳಾಗಿದ್ದು ಸೂಕ್ಷ್ಮವೂ ನಿರ್ಮಾಣಕುಶಲವೂ ಸ್ಥೈರ್ಯವನ್ನು ಸಾಧಿಸುವಷ್ಟು ಶಕ್ತಿಯುತವೂ ಆಗಿ ಸುಂದರವಾಗಿದ್ದುವು. ಅವಳ ಪಾದಗಳು ಅವಳ ದೈಹಿಕ ಮಾಟದ ಮತ್ತು ಸ್ವಭಾವದ ಪ್ರತೀಕದಂತಿದ್ದು ಸರ್ವ ಶ್ರದ್ಧಾವಂತ ಸನಾತನಿಯು ಅದನ್ನು ಪಾದಕಮಲಗಳೆಂದು ಕರೆದರೆ ಅತಿಶಯೋಕ್ತಿಯಾಗದೆಂದು ಭಾವಿಸುವಂತಿತ್ತು. ಈ ರೀತಿ ಅವಳ ಇಡೀ ವ್ಯಕ್ತಿತ್ವ ಸಲಲಿತವೂ ದಯಾಪೂರ್ಣವೂ ಆಗಿ ಸರ್ವರನ್ನು ಮೋಹಿಸುವಂತಿತ್ತು.

ಅವಳ ಕಂಠಸ್ವರವನ್ನು ಕುರಿತು ಏನೆಂದು ಹೇಳಲಿ? ಅವಳು 1873 ರಲ್ಲಿ ಮೊದಲು ಬಾರಿಗೆ ಮಾಡಿದ ಭಾಷಣದ ವಿವರಣೆಯನ್ನು ಕುರಿತು ಅವಳ ಆತ್ಮಚರಿತ್ರೆಯಲ್ಲಿ ಓದುವೆವು. "ಸಿಬ್ಸೀ ಗುಡಿಯ (Sibsey Church) ಖಾಲೀ ಮೇಲ್ಛಾವಣಿನಲ್ಲಿ --- ಮೌನದಿಂದ ಕೂಡಿದ್ದ ಆ ದೊಡ್ಡ ಗುಡಿಯಲ್ಲಿ ಒಬ್ಬಳೇ ನಿಂತು --- ನಾನು ನನ್ನ ಮೊದಲ ಭಾಷಣವನ್ನು ಕೊಡಲು ವೇದಿಕೆಯ ಮೆಟ್ಟಲನ್ನೇರಿದೆನು --- ನನ್ನ ಕಂಠಸ್ವರದ ತರಂಗವು ಆ ಗುಡಿಯ ಮೇಲ್ಛಾವಣಿಗೇರಿದಾಗ ಮತ್ತು ನನ್ನ ಆವೇಶವು ಯಾವಾಗ ಮತ್ತು ತಾಳಬದ್ಧವಾಗಲು ಕಾಯದೆ ಕ್ರಮವಾದ ವಾಕ್ಯಗಳನ್ನು ಒಂದರನಂತರ ಒಂದಾಗಿ ಹೊರಸಿದಾಗ ---- ಆ ವಾಗ್ಬಲದ ರೀತಿಯು ನನ್ನದೆಂದೇ ತಿಳಿದೆನು ---- ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯಲು ನನಗೆ ಅವಕಾಶ ದೊರೆತರೆ ಈ ಸುಮಧುರವಾದ ನುಡಿಗಳು ನಾನೀಯಬೇಕಾದ ಸಂದೇಶವನ್ನೊಯ್ಯಲು ತಕ್ಕುದಾಗಿದ್ದು ಜಯಪ್ರದವಾಗಬಲ್ಲುದು."

ಆನಿ ಬಿಸೆಂಟಳ ಕಂಠಸ್ವರವನ್ನು ಗ್ಲಾಡ್‌ಸ್ಟನ್, ಬ್ರಾಡ್ಲೆ, ಮತ್ತು ಬ್ರೈಟ್ ಇವರ ಧ್ವನಿಗೆ ಕೆಲವು ವರ್ಷಗಳನಂತರ ಹೋಲಿಸಲು ಕೆಲವರು ಸಂದರ್ಭವನ್ನು ತೆಗೆದುಕೊಂಡರೂ ಅವಳ ವಾಗ್ಬಲವು ಬಹುಮಟ್ಟಿಗೆ ಸಂಗೀತಮಯವಾಗಿ ಮಾರ್ದನಿಸುತ್ತಿತ್ತು. ಸತ್ಯ, ಸ್ವಾತಂತ್ರ್ಯ ಮತ್ತು ನ್ಯಾಯದ ಪಾಲನೆಗೆ, ದಲಿತರ, ಹಿಂಗಸರ, ಭರತಖಂಡದ, ತತ್ತ್ವಜ್ಞಾನದ, ಆಹಾರಶಾಸ್ತ್ರೀಯ ಬೆಂಬಲದ, ಬ್ರಹ್ಮವಿದ್ಯಾ (Theosophy) ಸಂಘದ ಮತ್ತು ವಿಶ್ವಬಂಧುತ್ವದ ಸಲುವಾಗಿ ಅವಳು ಕೈಕೊಂಡ 'ಎಲ್ಲಾ ಚಟುವಟಿಕೆಗಳಿಗಾಗಿ ಮಾತ್ರ ಅವಳು ತನ್ನ ಇಂಪಾದ ಕಂಠಧ್ವನಿಯ ಸುಂದರ ನಾದಗಳನ್ನು ಭಾಷಣಗಳ ರೀತಿಯಲ್ಲಿ ಕೊಡಬಲ್ಲವಳಾದಳು.

ಅವಳು ತನ್ನ ಯೌವನದಲ್ಲಿ ಜನರು ಕಿಕ್ಕಿರಿದು ನೆರೆದಿದ್ದ ಸಭೆಗಳಲ್ಲಿ ಪ್ರಖರವಾದ ವಿಷಯಗಳ ಮೇಲೆ ಚರ್ಚಿಸುತ್ತಿದ್ದ ಇತರರನ್ನು ಪ್ರತಿಭಟಿಸಿ ತನ್ನೆಡೆಗೆ ವಾಗ್ಯುದ್ಧಕ್ಕೆ ಬಂದವರನ್ನು ಸೋಲಿಸಿ ಪ್ರೇಕ್ಷಕರನ್ನು ಬೆರಗಾಗಿಸುತ್ತಿದ್ದಳು. ಆದರೆ ಆಕೆಯ ವಾಗ್ಯುದ್ಧವು ತನ್ನ ಪ್ರತಿವಾದಿಗಳಿಗೆ ಸಂಕೋಚವನ್ನುಂಟುಮಾಡುತ್ತವೆಂದು ಎಣಿಸಿ ಅವಳು ವಾದವನ್ನು ಬಿಟ್ಟುಬಿಟ್ಟಳು.

ಅಲ್ಲಿಂದ ನಂತರ ಅನಿಯು ತನ್ನ ಅಹಂಕಾರರಹಿತ ರವಿಕಿರಣ ಮತ್ತು ಕಡಿಮೆ ತೆರೆಯ ಧ್ವನಿಯೊಡನೆ ಸತ್ಯವನ್ನು ಬೆರೆಸಿ ಅದನ್ನು ಪ್ರತಿಪಾದಿಸಲಾರಂಭಿಸಿದಳು. ಅವಳು ಭಾಷಣಕ್ಕೆಂದು ಬಂದಾಗ ಜನವನ್ನು ಅವಳು ಎಂದಿನಂತೆ ತನ್ನ ಉಪಮಾನೋಕ್ತಿಗಳಿಂದ ಆಹ್ಲಾದಪಡಿಸುವಳೋ ಎಂದು ನಾವು ಕುತೂಹಲದಿಂದ ನಿರೀಕ್ಷಿಸುತ್ತಿದ್ದೆವು. ಆದರೆ ಆ ಕುತೂಹಲದ ನಿರೀಕ್ಷಣೆಯೆಲ್ಲಾ ಅನವಶ್ಯಕವಾಗಿದ್ದುವು. ಅವಳು ತನ್ನ ಭಾಷಣಗಳಿಂದ ಜನಮನವನ್ನು ಸೆಳೆದು ಜಯಪ್ರದಳಾಗದೇ ಇದ್ದ ಸಂದರ್ಭಗಳಿವೆಯೇ? ಅವಳು ಮಾತಾಡುತ್ತಾ ಇದ್ದಂತೆಯೇ ತನ್ನ ನಾದಮಯವಾದ ನುಡಿಗಳಿಂದ ಧ್ವನಿಯನ್ನು ಏರಿಸುತ್ತಾ ಕಡೆಗೆ ಅಗೋಚರ ದಿಗಂತವನ್ನು ದಾಟಿ ಹೋಗುವಳು. ಅವಳು ನಿಲ್ಲಿಸುತ್ತಾ ಇದ್ದಾಗ್ಯೂ ನಾವು ಮೇಲೇರುತ್ತಿದ್ದೆವು. ಸಭಿಕರೆಲ್ಲಾ ಅಂತೆಯೇ ಸ್ಫೂರ್ತಿಗೊಂಡಿರುತ್ತಿದ್ದರಲ್ಲದೆ ಅವಳು ಕಡೆಗಂತು ತನ್ನ ವಾಗ್ಝರಿಯ ಆಧಿಕ್ಯವನ್ನು ಮುಟ್ಟುವಳೋ ಎಂದು ಬೆರಗಾಂತು ನಿರೀಕ್ಷಿಸುವರು. ಆದರೆ ಅವಳಾದರೋ ನಂದದೇ ಇರುತ್ತಿದ್ದ ಜ್ಯೋತಿಯಾಗಿದ್ದಳು. ಆ ಕಂಠಸ್ವರವನ್ನು ದೇವತೆಗಳು ಅವಳಿಗೆ ಹಿಂದೆಯೇ ಕರುಣಿಸಿದ್ದರು; ಅಂತೆಯೇ ಅವರು ಅವಳಿಗೆ ವಿಧಿಸಿದ್ದ ಆ ಶಕ್ತಿ ಸಾಮರ್ಥ್ಯವನ್ನೆಲ್ಲ ಅವಳ ನಡೆದಾರಿಯಲ್ಲಿ ತೋರಿಸಿದ್ದರು.

ಹೀಗೆ ಅನಿ ಬೆಸೆಂಟ್ ಇವಳು ತನ್ನ ಬಾಲ್ಯದಲ್ಲಿ ಪ್ರಾರಂಭಿಸಿದ್ದು ಅವಳ ಯೌವನದಲ್ಲೂ ನಡು ಹರಯದಲ್ಲೂ ಕಡೆಗೆ ವೃದ್ಧಾಪ್ಯದಲ್ಲೂ ಇದ್ದಳು. ಅವಳ ದೇಹಶಕ್ತಿಯು ಕುಂದಿದಂತೆ ಅವಳ ಅಂತಃಪ್ರಜ್ಞಾ ಜ್ಯೋತಿಯು ಉಜ್ವಲವಾಗುತ್ತಾ ಬಂತು. ಅವಳ ಅಂತಿಮ ಕಾಲಕ್ಕೆ ಮುಂಚೆ ಆಗಿಂದಾಗ್ಯೆ ನಿವೃತ್ತಿ ತಪ್ಪದ್ದು ಆ ರೀತಿ ತನ್ನ ದೇಹವನ್ನು ತ್ಯಜಿಸಲನುವಾಗಿದ್ದಳು. ಹೀಗೂ ಅವಳು ಜೀವವಿದ್ದಷ್ಟು ದಿನದ ವರೆಗೂ ಅದು ಇತರರಿಗೆ ಸ್ಫೂರ್ತಿದಾಯಕವಾಗಿತ್ತು.

ಕಡೇ ಕೆಲವು ವಾರಗಳ ಕಾಲ ಆ ದೇಹವು ನಿದ್ರಿಸಿತು. ತನ್ನ ಗುರುವಿನ ಸೇವೆಯಲ್ಲಿ ತಾನು ನಂಬಿದ್ದ ಧ್ಯೇಯವನ್ನು ಸಾಧಿಸಲು ಅವಿಶ್ರಾಂತವಾಗಿ ಬಹು ವಿನೀತವಾಗಿಯೇ ಶ್ರಮಿಸಿದ ಆ ದೇಹವು ಕಡೆಗಂತು ನಿದ್ರಿಸಿತು.

ಸೆಪ್ಟಂಬರ್ ತಿಂಗಳ್ ೨೦ (1933)ರ ಮಧ್ಯಾಹ್ನಕ್ಕೆ ಆನಿ ಬೆಸೆಂಟ್ ಇವರ ಉಸಿರು ನಿಂತಿತು. ಮರುದಿನ (ತಾ.೨೧) ಬೆಳಿಗ್ಗೆ ಅಗಲಿದ ಆತ್ಮಕ್ಕೆ ಗೌರವವನ್ನು ಬಯಸಿ ಜನರು ದೊಡ್ಡ ಹಜಾರ (The Great Hall) ದಲ್ಲಿ ಸೇರಿದರು. ಅನಂತರ ಅಡೆಯಾರಿನ Masonic Hall ಇದರಲ್ಲಿ ತತ್ವಜ್ಞಾನ ಸಂಸ್ಥೆಯು ಮತ್ತು Order of Universal Free-Masonry ಸದಸ್ಯರೆಲ್ಲಾ ಸೇರಿ ಕಡೇ ಪ್ರಾರ್ಥನೋತ್ಸವವನ್ನು ನಡೆಸಿದರು. ಅವರ ಶವ ಸಂಸ್ಕಾರದ ವೇಳೆಗೆ ಸಹಸ್ರಾರು ಜನರು ಅಳುತ್ತಾ ನೆರೆದು ತಮ್ಮ ಬಾಷ್ಪಾಂಜಲಿಯನ್ನು ಅರ್ಪಿಸಿದರು.

ಅಂಥಾ ಒಂದು ಜೀವದ ಅಗಲಿಕೆಗೆ ದುಃಖಿಸದೆ ಶಾಂತರಾಗಿರುವುದು ಅಸಂಭವ! ಆದರೂ ಅವರು ಪ್ರಭಾವ ಪೂರ್ಣ ಜೀವನದಿಂದ ತಾವು ಧನ್ಯರಾದೆವೆಂದೂ, ಸಾವು ಉತ್ತಮ ಪದವಿಗೇರಲು ಇರುವ ಹೆಬ್ಬಾಗಿಲು ಎಂಬುದನ್ನು ಅವರು ಕಲಿಸಿದ್ದರಿಂದಲೂ, ಜಯಪ್ರದವಾದ ತುಂಬು ಜೀವನವನ್ನು ಸತ್ಯದಲ್ಲಿ ಕಳೆಗಿದ ಆತ್ಮವು ಅದೆಂದೂ ಅವರ ಶವ ಸಂಸ್ಕಾರದ ವೇಳೆಗೆ ನೆರೆದಿದ್ದ ಜನ ಉದ್ಗರಿಸಿದರು.

ಜನವು ನಿಜಕ್ಕೂ ಶೋಕಭರಿತರಾಗಿದ್ದರು. ಧಾರಾಕಾರವಾಗಿ ಕಂಬನಿಗರೆದರು. ಆದರೂ ಅಲ್ಲಿ ಶಾಂತಿಯಿತ್ತು. ನಿಜವಾಗಿಯೂ ಅವರು ಇಹವನ್ನು ತ್ಯಜಿಸಿರಲಿಲ್ಲವೆಂದು ಅಂದೇ ತೋರಿತು. ಅವರ ಆತ್ಮವು ಇಲ್ಲಿಯೇ ಉಳಿದಿದೆ; ಯಾವ ಪ್ರಪಂಚವನ್ನು ಜನತೆಯನ್ನು ಅವರು ಹಾರ್ದಿಕವಾಗಿ ಪ್ರೀತಿಸಿದರೋ ಮತ್ತು ಯಾವುದರ ಭವ್ಯ ಪ್ರಗತಿಯ ಕನಸನ್ನು ಕಂಡಿದ್ದರೋ ಅವರು ಬರೀ ದೈಹಿಕವಾಗಿ ಮಾತ್ರ ಅಗಲಿರುವರೆಂದು ಜನರು ಆವಾಗ ನಂಬಿದ್ದರು.

ಶವವನ್ನು ನಿರ್ಧರಿತವಾಗಿ ಒಬ್ಬ ಯೋಗಿನಿಯೇ ಆದ ಆನಿ ಬೆಸೆಂಟ್ ಇವರ ದೇಹವನ್ನು ಯೋಗಿಯರಿಗನುಸರಿಸುವಂತೆ ಉತ್ತರ ಮತ್ತು ದಕ್ಷಿಣಕ್ಕೆ ಇರಿಸಲಾಯಿತು. ಉತ್ತರಕ್ಕೆ ಅಡೆಯಾರ್ ಹೊಳೆ ಮತ್ತು ಆತ್ಮವು ಹಿಮಾಲಯದತ್ತ ಎತ್ತರಕ್ಕೆ ಏರಿದವರ ನೆಲೆಯನ್ನು ಅವರು ಕಣ್ಣೆತ್ತಿ ನೋಡುತ್ತಿರುವರೋ ಎಂಬಂತೆ ಇದ್ದ ದೂರದ ಹಿಮಾಲಯವೂ ಇತ್ತು. ಪೂರ್ವಕ್ಕೆ ಉದಯವಾಗುತ್ತಿದ್ದ ಸೂರ್ಯನೂ ಬಂಗಾಳ ಕೊಲ್ಲಿಯೂ ದಕ್ಷಿಣಕ್ಕೆ ಹಿಂದೂ ಮಹಾಸಾಗರವೂ ತಾಳೆಮರಗಳೂ ಇದ್ದುವು. ನಿರಂತರವಾಗಿಯೂ ಕಾಲವೆಂಬ ದಡಕ್ಕೆ ಸ್ಥಿರ ನಿತ್ಯ ಘೋರ ನಿನಾದವನ್ನು ಮೊಳಗಿಸುವ ಅಲೆಗಳೂ ನಾರಿಕೇಳ ಮರಗಳ ತೋಪುಗಳೂ ಇದ್ದುವು. ಇನಿದಾಗಿ ಬೀಸಿ ಮಲಗಿದವರೆಯನ್ನು

ನಿಶ್ಶಬ್ದವಾಗಿ ಮೆತ್ತನೆ ತೂಗುತ್ತಿರುವ ತಂಗಾಳಿಯೂ ಸುತ್ತೆಲ್ಲ ತಂಪನ್ನು ಚೆಲ್ಲುತ್ತಿತ್ತು.

ಪವಿತ್ರವಾದ ಗಂಧದ ಸೌದೆಯಲ್ಲಿ ಸಿಡಿದು ಹಾರಿದ ಜ್ಯೋತಿಯು ಸೂಸಿದ ತುಪ್ಪದಿಂದೊಡಗೂಡಿ ಮೆಲ್ಲನೆ ಹೊತ್ತಿ ಕಡೆಗೆ ಆ ಸಜ್ಜನನ ದೇಹವನ್ನು ತಾಳಿದಂತೆ ಮೇಲಕ್ಕೆ ಏರಿ ಹಾರಿತು, ಕೊನೆಗೆ ಕಾದಿರುವ ಕೆಂಪು ಕೆಂಡಗಳು ತೋರಿದುವು. ಅದರ ನಂತರ ಅಲ್ಲಿ ಉಳಿದು ಬಿದ್ದ ಬೂದಿಯನ್ನು ಸ್ಮಾರಕಾರ್ಥವಾಗಿ ಸಂಗ್ರಹಿಸಲಾಯಿತು.

ಹಲವು ಗೆಳೆಯರ ಕೈಗಳು ಆ ಬೂದಿಯನ್ನೆಲ್ಲ ಆದರದಿಂದ ಕೂಡಿಟ್ಟುವು. ಅನಿಯನ್ನು ಸ್ಮರಿಸಲು ಯಾವ ಸ್ಮಾರಕೋದ್ಯಾನಗಳೂ ಬೇಡವಾಗಿದ್ದರೂ ಆವಳ ಸ್ಮಾರಕವನ್ನು ಆವಳ ನಂತರ ಆರು ತಿಂಗಳಲ್ಲಿ, ಎಂದರೆ 1ನೇ ಮಾರ್ಚ್ 1934 ರಲ್ಲಿ ಆ ಪ್ರೀತಿಯಾದ ಪರ್ತ್ ನಗರದಲ್ಲಿ ದೈವ ಸಾನ್ನಿಧ್ಯವನ್ನು ಪಡೆದ ಚಾರ್ಲ್ಸ್ ವೆಬ್ಸ್ಟರ್ ಲೆಡ್ಬೀಟರ್ (Charles Webster Leadbeater) ಇವನ ಸ್ಮಾರಕವನ್ನು ಸ್ಮಾರಕೋದ್ಯಾನಗಳು ರಚಿಸಲ್ಪಟ್ಟುವು, ಆವಳ ಬೂದಿಯ ಸ್ವಲ್ಪ ಭಾಗವನ್ನು ಆವಳ ಸಂಗಾತಿಯಾಗಿ ಜೀವನವೆಲ್ಲ ದುಡಿದ ಲೆಡ್ಬೀಟರನ ದೇಹದೊಡನೆ ಇರಿಸಲು ಕಳುಹಿಸಲಾಯಿತು. ಹೀಗೂ ಸ್ಮಾರಕೋದ್ಯಾನವು ಅವರಿಬ್ಬರ ಸ್ಮಾರಕವಾಗಿ ನಿರ್ಮಿತವಾದುವಲ್ಲದೆ ಆ ತತ್ವಜ್ಞಾನ ಸಂಸ್ಥೆ (Theosophical Society)ಯ ಭವನದ ಸಮೀಪದಲ್ಲಿಯೇ ಅದರ ಸ್ಥಾಪಕನೂ ಮೊದಲ ಅಧ್ಯಕ್ಷನೂ ಆದ ಕರ್ನಲ್ ಹೆಚ್. ಎಸ್. ಆಲ್ಕಾಟ್ ಇವನ ಸ್ಮಾರಕವಾಗಿಯೂ ಒಂದು ಉದ್ಯಾನದ ತೋಟವನ್ನು ನಿರ್ಮಿಸಲಾಗಿದೆ, ಈ ಕೆಳಗಿನಂತೆ ಮೂರು ಬೆಂಗಲ್ಲ ಶಾಸನಗಳು ಆ ಸ್ಮಾರಕೋದ್ಯಾನದಲ್ಲಿ ಇಡಲ್ಪಟ್ಟಿವೆ:—

"1907 ರಿಂದ 1933 ರ ವರೆಗೆ ಬ್ರಹ್ಮವಿದ್ಯಾ (Theosophy)
ಸಂಸ್ಥೆಯ ಅಧ್ಯಕ್ಷೆಯಾಗಿದ್ದು ಮತ್ತು 1933 ರ
ಸೆಪ್ಟಂಬರ್ 20ರಲ್ಲಿ ಬೆಳಿಗ್ಗೆ ಒಂಭತ್ತು ಘಂಟೆಗೆ
ದೈವಾಧೀನಳಾದ ಆನಿ ಬೆಸೆಂಟ್ ಇವಳ
ಶವಸಂಸ್ಕಾರವನ್ನು ಇಲ್ಲಿ ವಿಧಿವತ್ತಾಗಿ
ನೆರವೇರಿಸಲಾಯಿತು.

"1935 ರ ಈ ಸ್ವರ್ಣಮಹೋತ್ಸವದ ವೇಳೆಗೆ ಈ ಸ್ಮಾ
ರಕೋದ್ಯಾನವನ್ನು ತನ್ನ ಗುರುಗಳ ವಿನೀತ
ಸೇವಿಕೆಯೂ ಸತ್ಯಪ್ರಿಯಳೂ ಎಲ್ಲಾ
ಜೀವರಾಶಿಗಳ ಗೆಳತಿಯೂ ಆದ

ಅನಿ ಬೆಸೆಂಟ್ ಇವರಿಗೆ ಭಕ್ತಿಪೂರ್ವಕ
ವಾಗಿಯೂ ಹಾರ್ದಿಕ ಪ್ರೀತಿಯಿಂ
-ದಲೂ ಅರ್ಪಿಸಲಾಗಿದೆ-

"ಹಾರ್ದಿಕ ಪ್ರೀತಿಗೂ ಭಕ್ತಿಪೂರ್ವಕವಾದ ಸ್ಮರಣೆಗೂ ಪಾತ್ರ
ನಾದ ಚಾರ್ಲ್ಸ್ ವೆಬ್‌ಸ್ಟರ್ ಲೀಡ್‌ಬೀಟರ್ ಇವನ ನಶ್ವರ
ದೇಹದ ಚಿತಾಭಸ್ಮವು ಅವನ ಜೀವಿತಾವಧಿ
ಸಂಗಾತಿಯಾಗಿದ್ದ ಅನಿ ಬೆಸೆಂಟ್ ಇವರ
ಚಿತಾಭಸ್ಮದೊಂದಿಗೆ ತಾವಿರ್ವರೂ
ಅಂತಿಮದಲ್ಲಿ ಇಚ್ಛಿಸಿರಬಹುದಾ
ದಂತೆ ಇಲ್ಲಿ ಒಟ್ಟಿಗೇನೆ
ಇಡಲ್ಪಟ್ಟಿದೆ!

ಫೆಬ್ರವರಿ 17, 1847 ———— ಮಾರ್ಚ ೧, 1934.

ಹೆಚ್. ಪಿ. ಬ್ಲಾವಟ್‌ಸ್ಕಿ (Helen P. Blavatsky) ಇವರ ಚಿತಾಭಸ್ಮವು ರಾವಳ ಪ್ರತಿಮೆಯ ಕೆಳಗೆ ಇಡಲ್ಪಟ್ಟಿದೆ, ಮತ್ತು ಅವರ ಸಹಸಂಸ್ಥಾಪಕ ಕರ್ನಲ್ ಓಲ್ಕಾಟ್ ಇವರ ಚಿತಾಭಸ್ಮವು "ಸಂಸ್ಥೆ" (Theosophical Society) ಇದರ ಮುಖ್ಯ ಕಚೇರಿಯ 'ದೊಡ್ಡ ಹಜಾರ (Great-Hall) ದಲ್ಲಿ ಇಡಲಾಗಿದೆ.

ಹೀಗೆ ಇವರೆಲ್ಲರ ಚಿತಾಭಸ್ಮವು ಶಾಂತಿ ಮತ್ತು ಶಕ್ತಿಗೆ ಆಶ್ರಯವಾದ ಅಡೆಯಾರ್‌ನಲ್ಲಿಯೇ ಇರಿಸಲಾಗಿದೆ,

೧ನೇ ಜುಲೈ ೧೯೭೫. ಸಹಿ] ಜಾರ್ಜ ಎಸ್. ಅರುಂಡೇಲ್.

ಭಾಗ ೨

ಆನಿ ಬೆಸೆಂಟ್ ಇವರ ಆತ್ಮ ಚರಿತ್ರೆ

× × ×

ಮೂರನೇ ಮಹಾದ್ವೀಪಕ್ಕೆ ಮುನ್ನಡೆ.

ನಾನು ತತ್ವಜ್ಞಾನ (Theosophy) ಸಂಘಕ್ಕೆ ಸೇರಿ, ಈ ಗ್ರಂಥದ ಅಂತ್ಯದಲ್ಲಿ ಹೇಳಿದಂತೆ ಹದಿನೆಂಟು ವರ್ಷಗಳು ಕಳೆದು ಹೋದುವು. ಈ ಅವಧಿಯಲ್ಲಿ ನಾನು ಆ ಸಂಸ್ಥೆಯ ಪರವಾಗಿ ಪ್ರಚಾರ ಭಾಷಣಗಳನ್ನು ಕೊಡುತ್ತಾ, ಪ್ರಪಂಚದ ಬಹು ಕಡೆ ಸಂಚರಿಸಿದೆನು, ಹಲವು ಪಾಶ್ಚಾತ್ಯ ದೇಶಗಳನ್ನು ಸಂದರ್ಶಿಸಿದೆನಲ್ಲದೆ ಆ ಪ್ರತಿಯೊಂದು ದೇಶದಲ್ಲೂ ಬ್ರಹ್ಮವಿದ್ಯಾ (Theosophy) ಶಿಬಿರಗಳನ್ನು ಸ್ಥಾಪಿಸಲಾಗಿದೆ, ಫ್ರಾನ್ಸ್, ಬೆಲ್ಜಿಯಮ್, ಹಾಲೆಂಡ್, ಜರ್ಮನಿ, ಹಂಗೆರಿ, ಇಟಲಿ, ಡೆನ್ಮಾರ್ಕ್, ಸ್ವೀಡನ್, ನಾರ್ವೆ ಮೊದಲಾದ ದೇಶಗಳ ಜನರು ತಾವಾಗಿಯೇ ಬ್ರಹ್ಮವಿದ್ಯಾ ಸಂಘಗಳನ್ನು ಆರಿಸಿದರಲ್ಲದೆ ಆ ದೇಶಗಳ ಹಲವು ದೊಡ್ಡ ನಗರಗಳಲ್ಲಿ ಬಹು ಸಂಖ್ಯೆಯಲ್ಲಿ ಜನರು ಮುಂದೆ ಬಂದು ಸದಸ್ಯರಾದರು. ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್‌ಗಳಲ್ಲಿ ಈ ಕಾರ್ಯಕ್ರಮದ ಬಗೆ ಇತರ ಸ್ಥಳಗಳಿಗಿಂತಲೂ ಎಲ್ಲಕ್ಕೂ ಹೆಚ್ಚಾಗಿ ಪ್ರಚಾರಕಾರ್ಯವನ್ನು ಸ್ವಾಭಾವಿಕವಾಗಿಯೇ ಒಂದೇ ನನ್ನ ನಾಡುಗಳಲ್ಲಿ ನಡೆಸಲಾಗಿದೆ. ಆಂಗ್ಲ ನಾಸ್ತಿಕವಾದವನ್ನು ತೊಡೆದು ಹಾಕಿ ಪಾರಮಾರ್ಥಿಕ ವಿಚಾರಗಳ ಕಡೆಗೆ ಜನತೆಯ ಮನಸ್ಸನ್ನು ಹರಿಯಿಸಲು ಈ ತತ್ವಜ್ಞಾನದ ವಿಚಾರಧಾರೆಯು ಸಹಾಯಕವಾಗಿದೆ.

ಅಮೇರಿಕಾ ಖಂಡದ ಹಲವು ದೊಡ್ಡ ನಗರಗಳಲ್ಲೂ ಇದೇ ರೀತಿ ಪ್ರಚಾರ ಭಾಷಣಗಳನ್ನು ಕೊಟ್ಟಿದ್ದೇನೆ, ಅದೇ ಕಾರ್ಯಾರ್ಥವಾಗಿ ನಾನು ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್‌ಗಳಿಗೂ ಹೋಗಿದ್ದೇನೆ, ಇವೆಲ್ಲಕ್ಕಿಂತಲೂ ಹೆಚ್ಚಾಗಿ 1893ರಲ್ಲಿ ನಾನು ಹಿಂದೂಸ್ಥಾನಕ್ಕೆ ಕಾಲಿಟ್ಟಂದಿನಿಂದ ಈ ದೇಶವೇ ನನ್ನ ಕಾರ್ಯಕ್ಷೇತ್ರವಾಗಿದೆ, ಪುರಾತನ ಧರ್ಮಗಳಾದ ಹಿಂದೂ, ಪಾರ್ಸೀ, ಮತ್ತು ಬೌದ್ಧಮತಗಳನ್ನು ಪುನರುಜ್ಜೀವಗೊಳಿಸಲು

ಶ್ರೀಲಂಕಾ ಮತ್ತು ಬರ್ಮಾ ದೇಶಗಳಲ್ಲೂ ಹರಡಲಾಗಿದೆ, ತತ್ವಜ್ಞಾನ ಸಂಸ್ಥೆ (Theosophical Society)ಯು ಈ ರೀತಿಯಲ್ಲಿ ಗಳಿಸಿದ ಖ್ಯಾತಿ ತೀವ್ರವನ್ನು ಮಿತ್ರರೂ ವಿರೋಧಿಗಳೂ ಒಟ್ಟು ಸೇರಿ ಪ್ರಶಂಸಿಸಿದ್ದಾರೆ, ಸನಾತನ ಧರ್ಮಗಳ ಪುನರುದ್ಧಾರದ ಈ ಕಾರ್ಯವು ಜನತೆಯಲ್ಲಿ ಸ್ವಾಭಿಮಾನವನ್ನೂ ತಮ್ಮ ಧರ್ಮಸಂಸ್ಕೃತಿಗಳಲ್ಲಿ ಹೆಮ್ಮೆಯನ್ನೂ ದೇಶಾಭಿಮಾನದ ತೀರಿಯನ್ನೂ ಹುಟ್ಟಿಸಿತಲ್ಲದೆ ಇವೆಲ್ಲವೂ ದೇಶವನ್ನು ಹೊಸದಾಗಿ ಮಾರ್ಪಡಿಸುವ ಕಾರ್ಯಕ್ರಮಕ್ಕೆ ನಾಂದಿಯಾದುವು. ಎರಡನೇದಾಗಿ ವಿದ್ಯಾಕ್ಷೇತ್ರದಲ್ಲಿ ಪಾಶ್ಚಾತ್ಯ ವಿದ್ಯಾಕ್ರಮಕ್ಕೂ ಪೌರಸ್ತ್ಯ ಮತಧರ್ಮಗಳಿಗೂ ಬಾಂಧವ್ಯವನ್ನು ಬೆಳೆಸಿದ್ದಲ್ಲದೆ ಶಾಲೆಗಳು ಮತ್ತು ಕಾಲೇಜುಗಳನ್ನು ಇಂಗ್ಲಿಷ್ ಸರಕಾರ ಮತ್ತು ಕ್ರೈಸ್ತಮತಬೋಧಕರು ನಡೆಸುವುದರ ಬದಲಾಗಿ ತತ್ವಜ್ಞಾನ (Theosophy) ಸಂಸ್ಥೆಯು ರಾಷ್ಟ್ರೀಯ ಶಾಲೆಗಳನ್ನು ನಡೆಸಲು ಆರಂಭಿಸಿದಂದಿನಿಂದ ಭಾರತೀಯರು ರಾಷ್ಟ್ರೀಯ ಕಾಲೇಜು ಮತ್ತು ಶಾಲೆಗಳನ್ನು ನಡೆಸುತ್ತಿದ್ದಾರೆ, ಶ್ರೀಲಂಕಾದಲ್ಲಿ ಬೌದ್ಧ ತತ್ವಜ್ಞಾನಿಗಳ ಆಶ್ರಯದಲ್ಲಿ ಮೂರು ಕಾಲೇಜುಗಳೂ ಇನ್ನೂರಕ್ಕೂ ಮಿಕ್ಕ ಶಾಲೆಗಳೂ ನಡೆಸಲ್ಪಡುತ್ತಿವೆ, ಅದೇ ರೀತಿ ಹಿಂದೂಸ್ಥಾನದಲ್ಲಿ ಹಿಂದೂ ತತ್ವಜ್ಞಾನಿಗಳು (Hindu Theosophists) ಎರಡು ಕಾಲೇಜುಗಳನ್ನು ಹಲವು ಶಾಲೆಗಳನ್ನು ನಡೆಸುತ್ತಿದ್ದಾರೆ, ಈವರೆಗೂ ನಿರ್ಲಕ್ಷಿಸಲ್ಪಟ್ಟಿದ್ದ ಅಸ್ಪೃಶ್ಯ ಮಕ್ಕಳ ವಿದ್ಯೆಗಾಗಿ ಮದ್ರಾಸಿನಲ್ಲಿ ಐದು ಉಚಿತ ಶಾಲೆಗಳು ಸ್ಥಾಪನೆಯಾಗಿವೆ,

ತತ್ವಜ್ಞಾನ ಸಂಸ್ಥೆಯ ಪ್ರಧಾನ ಕಚೇರಿಯುಳ್ಳ ಮದ್ರಾಸಿನ ಸಮೀಪದ ಅಡ್ಯಾರ್‌ನಲ್ಲಿ ಒಂದು ಪೌರಸ್ತ್ಯ ಗ್ರಂಥಭಂಡಾರ (Oriental Library)ವನ್ನು ಕಟ್ಟಲಾಗಿದ್ದು ಅದರಲ್ಲಿ ಸಂಸ್ಕೃತ, ಪಾಲೀ ಭಾಷೆಗಳ ತಾಳೆವೋಲೆಗಳೂ ಇತರ ಮಹತ್ತಾದ ಗ್ರಂಥಗಳೂ ಸಂಗ್ರಹವಾಗಿ ಕಾದಿರಿಸಲಾಗಿವೆ,

ನಮ್ಮ ಪ್ರೀತ್ಯಾದರಗಳಿಗೆ ಪಾತ್ರರಾದ ಶ್ರೀಮತಿ ಹೆಲೆನ್ ಬ್ಲಾವಟ್ಸ್ಕಿ ಇವರ ಸಹೋದ್ಯೋಗಿಯೂ ಸಂಸ್ಥೆಯ ಮೊದಲ ಸ್ಥಾಪಕ-ಅಧ್ಯಕ್ಷರೂ ಆಗಿದ್ದ ಕರ್ನಲ್ ಹೆನ್ರಿ ಸ್ಟೀಲ್ ಆಲ್ಕಾಟ್ ಇವರೊಡನೆ ನಾನು 1893 ರಿಂದ 1907 ರ ವರೆಗೆ ನನ್ನ ಭಾರತೀಯ ಕಾರ್ಯಕ್ರಮಗಳನ್ನು ಕೈಗೊಂಡೆನು, ಅವರ ಉಪಕ್ರಮ ಮತ್ತು ನಿರಂತರ ಸಹಕಾರವು ಇಲ್ಲಿ ಶ್ರೀಲಂಕಾದಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ವಿಚಾರಕ್ಕೆ ಪ್ರೋತ್ಸಾಹವನ್ನು ತಂದಿತಲ್ಲದೆ, ತತ್ವಜ್ಞಾನ ಸಂಸ್ಥೆಯ ಅಡ್ಯಾರ್ ಕಚೇರಿ, ಪೌರಸ್ತ್ಯ ಗ್ರಂಥಭಂಡಾರ, ಹರಿಜನರಿಗಾಗಿ ಶಾಲೆಗಳು ಇತ್ಯಾದಿಗಳಲ್ಲದೆ ಹಿಂದೂ ಮತ್ತು ಬೌದ್ಧರುಗಳು ತಮ್ಮ ಪವಿತ್ರ

ಗ್ರಂಥಗಳನ್ನು ದೂರದಿಂದ ತರಿಯಿಸಿ ಸಂಗ್ರಹಿಸುವುದರ ಬದಲಾಗಿ ಅವುಗಳನ್ನು ಓದಿ ಅವುಗಳಲ್ಲಿರುವ ಅಮೂಲ್ಯ ತತ್ವರಾಶಿಯಿಂದ ಪುಲಕಿತರಾಗುವಂತೆ ಅವರನ್ನು (ಕರ್ನಲ್ ಆಲ್ಕಾಟ್) ಕೇಳಿಕೊಳಿಸಿದನು. ಅವನು 1907ರ ಫೆಬ್ರುವರಿಯಲ್ಲಿ ಮೃತನಾದಾಗ ಅವನು ಬಹು ಶ್ರದ್ಧೆಯಿಂದ ವಿಸ್ತರಿಸಿ ಮತ್ತು ದಕ್ಷತೆಯಿಂದ ನಿಯೋಜಿಸಿದ ಆ ತತ್ವಜ್ಞಾನ ಸಂಸ್ಥೆಯನ್ನು ಒಂದು ವಿಶ್ವಮಾನ್ಯ ಯೋಜನೆಯಾಗಿ ಮಾಡಿ ಬಿಟ್ಟು ಹೋದನು. ಅವನ ಗುರುವಿನ ಅನುಗ್ರಹದಂತೆ ಅವನು ಮೃತನಾದನಂತರ ಮತ್ತು ಅವನ ಇಚ್ಛೆಯಂತೆ ನಾನು ಈ ಬ್ರಹ್ಮಜ್ಞಾನ ಸಂಸ್ಥೆಯ (World Theosophical Society) ಹಿಮ್ಮತ್ತದ ಹಿತ್ತುಗೆಯೋಜನೆಯ ಅದರ ಅಧ್ಯಕ್ಷೆಯಾಗಿ ಆರಿಸಲ್ಪಟ್ಟೆನು.

ಕಳೆದ ಹತ್ತೊಂಭತ್ತು ವರ್ಷಗಳ ಕಾಲ ಪ್ರಾರಂಭದಲ್ಲಿ ಕೈಗೊಂಡ ಸತತ ಪ್ರಯತ್ನದಿಂದ ಈ ತತ್ವಜ್ಞಾನ (Theosophy) ಸಂಸ್ಥೆಯು ಅಭಿವೃದ್ಧಿಗೊಂಡು ಬಲಿಷ್ಠವಾಗಿಯೂ ಸಮೃದ್ಧಿಯಿಂದಲೂ ಸಂತೃಪ್ತವಾಗಿಯೂ ಇದೆಯೆಂಬುದನ್ನು ನಾನು ಇಲ್ಲಿ ದಾಖಲಿಸಬೇಕಾಗಿದೆ. ಹೆಮ್ಮೆಯಾದರೂ ಒಂದು ಕ್ಷಣವಾದರೂ ನಾನು ಅದರಲ್ಲಿಟ್ಟ ನನ್ನ ವಿಶ್ವಾಸವು ಅಲುಗಲಿಲ್ಲ; ಅಥವಾ ಅವಿಶ್ವಾಸದ ಕಾರ್ಮೋಡವು ನನ್ನ ಮನಸ್ಸಿನಗಗನದಲ್ಲಿ ಹೊಂಚಿದ್ದೇ ಇಲ್ಲ. ಪ್ರತಿವರ್ಷವೂ ಹೆಚ್ಚುತ್ತಿದ್ದ ಬುದ್ಧಿಬಲವನ್ನು ತೆರೆದು ಬಂದ ವಿಷಯಗಳ ಪರಿಶೀಲನಾ ಜ್ಞಾನವನ್ನು ಗಳಿಸಿಕೊಂಡು ತೋರಿದ್ದನ್ನು ಕಾಯುನ್ನತ: ಸಾಧಿಸಿದ ತೃಪ್ತಿಯೂ ಈ ಸಂಸ್ಥೆಗೆ ಒದಗಿಸಲಾಗಿದೆ. ಜೀವನವು ಅದ್ಭುತವಾಗಿಯೂ ವ್ಯಾಪಕವಾಗಿಯೂ ತೋರಿಬರುತ್ತ ಬಂದಾಗ ಸಾವು ಕೇವಲ ನಿರ್ಲಕ್ಷ್ಯಕಾರಕ ಘಟನೆಯಂತಾಗಿದೆ. ಹೆಲೆನ್ ಬ್ಲಾವಟ್ಸ್ಕಿ ಇವರಲ್ಲಿ ನಾನಿಟ್ಟ ಹಾರ್ದಿಕ ಕೃತಜ್ಞತಾ ಭಾವವು ಕೇವಲ ಗತರತಿಕ್ಷಯರೊಳಗಿನ ಇರುವ ಸೆರುಡು ಅಭಿಮಾನವೇನೂ ಅಲ್ಲ. ಅದು ಅನುಭವದ ಒರೆಗಲ್ಲಿನಲ್ಲಿ ತಿಕ್ಕಿ ಮೆರುಗಾದ ವಿಚಾರಗಳ ನಿಧಿಯೂ ಆಗಿದ್ದು ಅವಳಿಲ್ಲ ಉಡುಗೊರೆಯಾಗಿ ಇತ್ತಿರುವಳು. ಭವಿಷ್ಯದಲ್ಲಿ ಪ್ರಾರಂಭವು ಒಂದೇ ಒಂದು ವಿಶ್ವಧರ್ಮ ಸಾಂಪ್ರದಾಯವನ್ನು ಕಟ್ಟುವಾಗ ಅದಕ್ಕೆ ತಳಹದಿಯನ್ನು ಕಟ್ಟಿದ ಮಹಾಜೀವಂತರಲ್ಲಿ ಬ್ಲಾವಟ್ಸ್ಕಿಯು ಅಗ್ರಗಣ್ಯಳೆಂದು ಸಾಧಿಸಲ್ಪಡುವಳು.

ಬನಾರಸ್ (ಕಾಶಿ.)
ಹಿಂದೂಸ್ಥಾನ.
ಜನವರಿ 25, 1908

ಸಹಿ.) ಅನಿ ಬೆಸೆಂಟ್.

ಮುನ್ನುಡಿ!

ಒಂದು ಜೀವನದ ಕಥೆಯನ್ನು ಹೇಳುವುದು ಕಷ್ಟ, ಅದರಲ್ಲೂ ಆ ಜೀವನವು ಕಥೆ ಹೇಳುವವನದೇ ಆದರೆ ಅದು ಇನ್ನೂ ಕಷ್ಟ! ಏನಿಲ್ಲೆಂದರೂ ಆ ನಿರೂಪಣೆಯಲ್ಲಿ ಅಹಂಭಾವದ ಛಾಯೆ ಇದ್ದೇ ಇರುತ್ತದೆ. ಆದರೆ ಈ ಹೇಳಿಕೆಯು ಒಬ್ಬ ಸಾಮಾನ್ಯ ವ್ಯಕ್ತಿಯಿಂದ ಬಂದರೆ ನಾವು ಒಪ್ಪಿಕೊಳ್ಳಬಹುದಾದ ಸಮಾಧಾನವಾಗಿದೆ, ಇಲ್ಲಿ ಸೂಚಿತವಾದ ವಿವರಣೆ ಮತ್ತು ನಿರೂಪಣೆಯಿಂದ ಇದು ಒಬ್ಬಳ ಕಥೆ ಮಾತ್ರವಲ್ಲ, ಹಲವರ ಅನುಭವಗಳ ಸಂಗ್ರಹವೆಂದೂ ತೋರಬಹುದು, ಆತ್ಮಚರಿತ್ರಕಾರನಿಗೆ ಸಂತೋಷವಲ್ಲದ ವಿಚಾರಗಳನ್ನು ತಾನಾಗಿಯೇ ಆಲೋಚಿಸಿ ಬರೆಯುವ ಕೆಲಸದ ಜೊತೆಗೆ ತನ್ನ ಸಮಕಾಲೀನರ ಮನಸ್ಸಿಗೂ ಅಹಿತವೆನಿಸದ ಸಮಸ್ಯೆಗಳ ಬಗ್ಗೆಯೂ ಹೇಳಬೇಕಾಗಬಹುದು, ಕತ್ತಲಲ್ಲಿ ತೊಳಲುವ ಸೋದರರಿಗೆ ದಾರಿಯನ್ನು ತೋರಿ ಆ ರೀತಿ ಕಷ್ಟದಲ್ಲಿರುವವನನ್ನು ಸಂತೃಪ್ತಿಗೊಳಿಸಲೂ ಬಹುದು. ಇಂದಿನ ಈ ಆಂದೋಲನದಲ್ಲಿ ಸುತ್ತುವರಿದ ಮತ್ತು ಈ ಪೀಳಿಗೆಗೆ ಸೇರಿದ ನಾವೆಲ್ಲರೂ ಗಂಡಸರು ಹೆಂಗಸರು ಮೊದಲ್ಗೊಂಡು ಅದೇನೋ ನಡೆಯುತ್ತಲೆಯುತ್ತ ನೋಡುತ್ತೇವಾದರೂ ನಾವು ಏನೂ ತಿಳಿಯುತ್ತಿಲ್ಲವು, ಹಳೆ ವಿಚಾರಗಳಿಂದ ಅತೃಪ್ತರಾದ ನಾವು ಹೊಸತಕ್ಕೆ ಅರ್ಥ ಹುಡುಕುವಂತಿರುವೆವು, ವೈಜ್ಞಾನಿಕ ಪ್ರಗತಿಯ ಪರಿಣಾಮವಾಗಿ ಹಳೆಯ ಆಸ್ತಿಕ್ಯಲಯಕ್ಕೆ ಕಾತರಗತ್ತಿರುವೆವಾದರೂ ಆತ್ಮದ ವಿಚಾರದಲ್ಲಿ ಅನಿಶ್ಚಿತವಾದುದ್ದು ಕಡೆಗೆಳೆಯಂದ ನೋಡುತ್ತಾ ಮೂಢ ನಂಬಿಕೆಗೆ ಹೆದರುತ್ತಾ, ನಾಸ್ತಿಕತೆಗೆ ಇನ್ನೂ ಹೆದ್ದು ಬೆರಗಾಗಿ ನಾವು ಪಾರಮಾರ್ಥಿಕ ವಿಚಾರಗಳಿಗಾಗಿ ಹಸಿದು ಕಂಗೆಟ್ಟಿರುವೆವು. ನಮಗೆ ಕಾತರತೆ, ವ್ಯಸನ, ಭವಿಷ್ಯದಲ್ಲಿ ವಿಶ್ವಾಸ, ಮತ್ತು ಜ್ಞಾನಲಾಲಸೆಯು ಏಕಸಮಾನವಾಗಿ ಇರುವುದರಿಂದ ಒಬ್ಬಳ ಕಥೆ ಇತರರಿಗೂ ಹಿತಕರವೆನಿಸುತ್ತದೆ, ಏಕಾಂತವಾಗಿ ಕತ್ತಲಲ್ಲಿ ಹುಡುಕಾಡುತ್ತಿದ್ದ ಒಂದು ಆತ್ಮವು ಅಂತಿಮವಾಗಿ ಒಂದೆಡೆ ಬೆಳಕನ್ನು ಕಂಡಂತೆ ಬಿರುಗಾಳಿಯಂತೆ ತೊಳಲಿ ಕಡೆಗೆ ಶಾಂತಿಯನ್ನು ಪಡೆದಂತೆ ಒಂದು ಜೀವಿಯ ಅಂತಃಸ್ಸಂದು ಕಥೆಯು ಹಾಗೆ ಅಂಧತೆ ಮತ್ತು ಚಿಂತೆ ಮಾಡುತ್ತದೆ ಹೋಯುತ್ತಿದ್ದ ಸಿಲುಕಿದವರಿಗೆ ಸ್ವಲ್ಪವಾದರೂ ಆಶಾಜ್ಯೋತಿಯ ಕಿರಣಗಳನ್ನು ಮನಶ್ಶಾಂತಿಯನ್ನೂ ಒದಗಿಸಬಹುದೆಂದು ಆಶಿಸಲಾಗಿದೆ.

ತತ್ವಜ್ಞಾನ ಸಂಸ್ಥೆ (Theosophical Society)
17 ಶ 19, ಅವೆನ್ಯೂ ರಸ್ತೆ,
ರೀಜೆಂಟ್ಸ್ ಪಾರ್ಕ್ – ಲಂಡನ್.

ಸಹಿ) ಅನಿಬೆಸೆಂಟ್.
ಆಗಸ್ಟ್ – 1893.

ಅಧ್ಯಾಯ ೧

ಸರ್ವಶಕ್ತಿಯಿಂದ ಹೊರಟು ಮತ್ತೆ ಇಲ್ಲಿಗೆ!

ಕ್ರಿ.ಶ. 1847 ರ ಅಕ್ಟೋಬರ್ ೧ನೇ ದಿನ ಲಂಡನ್ ನಗರದ ಒಂದು ಮಧ್ಯಾಹ್ನ ೪.39 ತಾಸಿನ ವೇಳೆಗೆ ನಾನು ಬೆಳಕಿಗೆ ಕಣ್ತೆರೆದೆನೆಂದು ವಿಶ್ವಸನೀಯವಾಗಿ ನನಗೆ ಹಿರಿಯರು ತಿಳಿಸಿದರು.

ಆ ಕಂಠಕಾಲ್ಯಯ ಗಳಿಗೆಯಲ್ಲಿ ಗ್ರಹಗಳು ಎಲ್ಲೆಲ್ಲಿ ಇದ್ದುವೆಂದು ತೋರಿಸುತ್ತ ಒಂದು ಕೋಷ್ಟಕಚಿತ್ರವನ್ನು ಒಬ್ಬ ಜ್ಯೋತಿಷ್ಯ ಮಿತ್ರನು ನನಗೆ ಬಿಡಿಸಿಕೊಟ್ಟನು. ಆದರೆ ನನಗೆ ಜ್ಯೋತಿಷ್ಯವೇನೂ ಗೊತ್ತಿಲ್ಲದ್ದರಿಂದ ನಾನು ಅದನ್ನು ನೋಡುತ್ತಾ ಇದ್ದಂತೆ ಹೆಚ್ಚೇನೂ ತಿಳಿದವನಾದೆನೆಂದು ಹೇಳಲಾರೆನು.

ಭೂಮಿಯು ಭೌತಿಕ ಸ್ಥಿತಿಗತಿಯನ್ನು, ಸೂರ್ಯ, ಚಂದ್ರ ಮತ್ತು ಗ್ರಹಗಳು ತಮ್ಮ ಪ್ರಭಾವದಿಂದ ನಡೆಸುತ್ತಿರುವುದನ್ನು ನೋಡುವಾಗ ಭೂಮಿಯ ಒಂದು ಅಂಶವಾಗಿ ಅದೇ ಭೌತಿಕ ಶಕ್ತಿಯಿಂದ ಆದವಾಗಿರುವ ಮಾನವರ ಸ್ವಭಾವ ದೇಹಗಳು ಅದೇ ನಿಸರ್ಗ ಶಕ್ತಿಯಿಂದ ನಡೆಸಲ್ಪಡುತ್ತವೆಯೆಂದರೆ ಅದು ಅಸಂಬದ್ಧವಾದ ವಿಚಾರವೇನೂ ಅಲ್ಲ, ರಾಶಿಚಕ್ರದ ವಿವಿಧ ಸ್ಥಾನದಲ್ಲಿ ಜನ್ಮವೆತ್ತಿದವರು ವಿವಿಧ ಗುಣದಿಂದ ಕೂಡಿರುವರೆಂಬುದನ್ನು ವೈಜ್ಞಾನಿಕವಾಗಿ ಗೊತ್ತುಹಚ್ಚಲು ತಿಳಿದಿದ್ದರೆ ಅಂತವನಿಗೆ ತಾನು ತಿಳಿದ ಜನ ಯಾರಾರು ಏನೇನು ಗುಣಗಳಿಂದ ಕೂಡಿರುವರೆಂಬುದನ್ನು ಅರಿತು ಹೆಚ್ಚಿನ ಶೀಲನಿಗೆ ಒಬ್ಬ ಜ್ಯೋತಿಷ್ಯನ ಸಹಾಯವನ್ನು ಪಡೆದು ಅವರವರ ಹುಟ್ಟು, ರಾಶಿಫಲ ಇತ್ಯಾದಿಗಳನ್ನರಿಯಬಹುದು. ವಿಭಿನ್ನತೆಯಿಂದ ಕೂಡಿದ ಇವರು ಬೇರೆ ಬೇರೆ ರಾಶಿಯಲ್ಲಿ ಹುಟ್ಟಿದವರೆಂದೂ, ಸಮಾನ ಗುಣ ನಿಶ್ಚಿತ ಜಾತಕಫಲಕ್ಕೆ ಹೊರಟು ಇರುವುದಲ್ಲದೆ ಅಸಹ್ಯಕರವಲ್ಲವೆಂದೂ ಜ್ಯೋತಿಷ್ಯ ತಿಳಿದವನು ಹೇಳುವನು, ನಾವು ಹುಟ್ಟುವಾಕ್ಷಣದ ಮುಂಚೆಯೇ ಕೆಲವು ನಿಯಮವನ್ನನುಸರಿಸಿ ಹೀಗೆ ಭೌತಿಕ ಶರೀರದಿಂದೊಡಗೂಡಿ ಹುಟ್ಟಿದ್ದೇವೆ, ಆದುದರಿಂದ ನಮ್ಮ ಮುಂದಿನ ದೈಹಿಕ ವಿಕಾಸಕ್ಕೂ ಅದರ ಪರಿಣಾಮವು ಇದ್ದೇ ಇದೆ, ಹಾಗೆ ಅಭ್ಯಸಿಸಲ್ಪಡುವ ಜ್ಯೋತಿಷ್ಯವು ಹೆಚ್ಚೆಂದರೆ ಒಂದು ನಿಶ್ಚಿತ ವೇಳೆಯಲ್ಲಿ ಒಬ್ಬನ ಶಾರೀರಿಕ ಸ್ಥಿತಿಯನ್ನನುಸರಿಸಿ ಮತ್ತು ಅವನ ಹುಟ್ಟಿನ ಮತ್ತಿತರ ಸನ್ನಿವೇಶಗಳನ್ನನುಸರಿಸಿ ಅವನ ಭೂತ ಭವಿಷ್ಯತ್ತುಗಳ ಗ್ರಹರಾಶಿಗಳನ್ನು ಪರಿಶೀಲಿಸಿ ಹೇಳುವಂತದ್ದಾಗಿದೆ. ಆದರೆ ಸಾಮಾನ್ಯವಾಗಿ ಒಬ್ಬನ ಭೌತಿಕ ನೆಲೆ, ಬಾಹ್ಯ ಆವರಣ ಮತ್ತು ತನ್ನ ದೇಹ-ಇಂದ್ರಿಯಗಳ ಪ್ರಭಾವವು ಅವನ ಜೀವನವನ್ನು ಹೀಗೆ ನಡೆಸುವಲ್ಲಿ

ಬಲ್ಲದರಿಂದು ಸೂಚಿಸುವುದಲ್ಲದೆ ಮುಂದಕ್ಕೆ ಅವನೇನು ಮಾಡುವನು, ಅಥವಾ ಅವನಿಗೆ ಏನು ಸಂಭವಿಸಬಹುದೆಂದು ನಿಶ್ಚಯವಾಗಿ ಹೇಳಲು ಸಾಧ್ಯವಿಲ್ಲ. ಜ್ಯೋತಿಷ್ಯವು ಮಾಡಿದ ಕೆಲವು ದೊಡ್ಡ ತಪ್ಪುಗಳನ್ನು ನೋಡಿದರೆ ಅಥವಾ ಅದನ್ನು ಅಭ್ಯಸಿಸಿದವರು ಅದನ್ನು ಚೆನ್ನಾಗಿ ತಿಳಿಯದವರಾಗಿದ್ದರೆ ಆ ಶಾಸ್ತ್ರವೇ ವಿಶ್ವಾಸಾರ್ಹವಾಗಿಲ್ಲವೆಂದೆನ್ನಬಹುದು. ಹೇಗೂ ನಿಜವಾದ ಜ್ಯೋತಿಷ್ಯ ಶಾಸ್ತ್ರವಿದೆಯೆಂಬುದಕ್ಕೂ ಪೂರ್ವದಲ್ಲಿ ಬಹಳ ಪ್ರವೀಣ ಜ್ಯೋತಿಷ್ಯರೂ ಇದ್ದರೆಂಬುದರಲ್ಲೂ ನನಗೆ ಸಂಶಯವೇನೂ ಇಲ್ಲ!

ನನ್ನ ರಕ್ತದ ಕಣಗಳಲ್ಲಿ ಮುಕ್ಕಾಲು ಅಂಶದಷ್ಟು ಐರ್ಲೆಂಡಿನದಾಗಿರುವಾಗ ನಾನು ಲಂಡನ್ ನಗರದ ಘಂಟಾಧ್ವನಿಯ ಆವರಣದೊಳಗೆ (within the sound of Bow Bells) ಹುಟ್ಟಿದ್ದು ನನಗೆ ಯಾವಾಗಲೂ ಸಂತೋಷಕ್ಕೆಡೆಗೊಳ್ಳುತ್ತದೆ. ನನ್ನ ಪ್ರೀತಿಯ ಮಾತೆ ಶುದ್ಧ ಐರ್ಲೆಂಡಿನವಳು; ನನ್ನ ತಂದೆ ಅವನ ತಂದೆಯ ಕಡೆಯಿಂದ ಡೆವನ್ ಶೈರ್ ವಂಶಕ್ಕೆ ಸೇರಿದ್ದರೂ ಅವನ ತಾಯಿ ಐರಿಷ್ ಸ್ತ್ರೀಯಾಗಿದ್ದಳು. ವುಡ್ಸನ (The Woods) ಜನರು ಧೃಢಕಾಯರಾಗಿ ತಮ್ಮ ಸ್ವಂತ ಭೂಮಿಯ ವ್ಯವಸಾಯವನ್ನು ಪ್ರಾಮಾಣಿಕತೆಯಿಂದಲೂ ಸ್ವತಂತ್ರವಾಗಿಯೂ ಕೈಗೊಂಡಿದ್ದರು, ಇತ್ತೀಚಿಗೆ ಜನವು ತಮ್ಮ ಸಾಹಸಕ್ಕೆಯು ಬದಲಾಗಿ ವಿದ್ಯಾಶಕ್ತಿಯನ್ನು ಉಪಯೋಗಿಸಲು ತೊಡಗಿದರು. ಮ್ಯಾಥ್ಯೂ ವುಡ್ ಇವನು ಲಂಡನ್ ನಗರದ ಅಧ್ಯಕ್ಷನಾದನು. ರಾಣಿ ಕೆರೋಲಿನ್ನಳ ಯುದ್ಧಗಳಲ್ಲಿ ಅವಳ ಸ್ವಾಮಿನಿಷ್ಠ ಹಾಗೂ ಗೆಳೆತನಂತನ್ನಾದ ಹತ್ತಿಗೆ ಎದುರಾಗಿ ಕೆಂಟಿನ ನಾಯಕ (Duke of Kent) ಇವನ ಸಹಾಯವನ್ನು ಪಡೆದು ಭಾಗವಹಿಸಿದ್ದಲ್ಲದೆ ಆ ಡ್ಯೂಕನ ಶತ್ರುಯು ಮೂಲಕವಾಗಿ ಹಿಂದಿನ ಬ್ಯಾರನೆಟ್ (Baronetcy) ಪದವಿಯನ್ನು ಪಡೆದನು. ಅಲ್ಲಿಂದನಂತರ ಅವರು ಚರ್ಚ್ ಹಾಗೂ ಶ್ರೀಮಂತನದ ಲಾರ್ಡ್ ಹ್ಯಾದರ್ಲಿಯನ್ನು ಇಂಗ್ಲೆಂಡಿನ ಸರ್ವಪ್ರಧಾನಿ (Lord Chancellor) ಯಾಗಿತ್ತಲ್ಲದೆ ಆ ವಂಶದ ಇತರರು ದೇಶದ ವಿವಿಧ ಕ್ಷೇತ್ರಗಳಲ್ಲಿ ಪ್ರಸಿದ್ಧರಾದರು. ಆದರೆ ನಾನಾದರೋ, ನನ್ನ ತಂದೆಯು ಸರನಾಡಿಗಳಲ್ಲಿ ಅವನ ಐರಿಷ್ ತಾಯಿಯು, ಅವನ ಗಾಲ್ವೇ ಮನೆತನದ ಮತ್ತು ಡಬ್ಲಿನ್ನಿನ ಟ್ರಿನಿಟಿ ವಿದ್ಯಾಲಯದ ಪದವಿ, ಇದನ್ನೆಲ್ಲ ನೆನೆದು ವಿನೋದಕ್ಕಾಗಿ ಅಸೂಯೆಯಿಂದ ಕಾಡಿಸುವುದೂ ಇತ್ತು. ಐರಿಷ್ ಭಾಷೆಯು ನನ್ನ ಕಿವಿಗೆ ಇಂಪಾಗಿಯೂ ಐರಿಷ್ ಗಾನವು ನನ್ನ ಹೃದಯಕ್ಕೆ ಪ್ರಿಯವಾಗಿಯೂ ಕಾಣುತ್ತದೆ. ಪುರಾತನ ಐರ್ಲೆಂಡಿನ ಮೂರುಕಾಲು ಕಟ್ಟೆಗಳೊಂದನ್ನು ನೋಡಲು ಹರಕೆ ಪಟ್ಟಿಯನ್ನಿಟ್ಟು ಮುದುಕಿಯೊಬ್ಬಳನ್ನು ದಾರಿ ಕೇಳಿದರೆ ಅವಳು, "ಪ್ರಿಯ ಮಗಳೇ, ನಿಜವಾಗಿಯೂ ಇದೋ

ಈ ಗುಡ್ಡವನ್ನು ಹಾದು ಬಲಕ್ಕೆ ತಿರುಗಿದರೆ ಅಲ್ಲಿಗೆ ತಲಪಲು ಯಾರು ಬೇಕಾದರೂ ದಾರಿ ತೋರಿಸಿಕೊಡುವರು. ಅಲ್ಲಿಯೇ, ಆ ದೇವಾಲಯಸಂಸ್ಥಾಪಕ ಸೇಂಟ್ ಪ್ಯಾಟ್ರಿಕ್ ಜೀವನದ ಸ್ಥಾನವನ್ನು ಹಿಡಿದಿದ್ದಾನೆ. ಅವನ ಸ್ವಭಾಗ್ಯಶಾಲಿಗಳು ನಿನ್ನ ಮೇಲೆ ನಿರೀಕ್ಷೆಯುಳ್ಳವರು," ಎಂಬುದಾಗಿ ಬಾಯ್ತುಂಬಾ ಹೇಳುವುದನ್ನು ಸ್ಕಾಟ್ಲೆಂಡಿನಲ್ಲಿ ಕೇಳಬೇಕು. ಅಷ್ಟು ಬಡ ಮನುಷ್ಯನು ಅಷ್ಟು ಹಾರುಗಾಗಿ ಸಿರ್ಸ ಗಳಿಸಿಯುಂಟೆ ಮಾತುಗಾರಿಕೆಯನ್ನು ತೋರಿಸುವುದು ಬೇರಾವ ದೇಶದಲ್ಲೂ ಕಾಣಲಾರೆವು, ಇಷ್ಟೇ ಅಲ್ಲ; ದೇಶದಿಂದ ವಿದೇಶಕ್ಕೆ ಹೋಗುವ ಸ್ಕಾಚೋ ಐರಿಷೋ ಜನವನ್ನು ಬೀಳ್ಕೊಡಲು ಇಡೀ ಕಪ್ಪಡ ಗಂಡಸರು ಹೆಂಗಸರಾದಿಯಾಗಿ ಕಿಕ್ಕಿರಿದು ನೆರೆದು ದೂರಕ್ಕೆ ಹೋಗುವವರಿಗೆ ಕಡೆಯ ಬಾರಿಗೊಮ್ಮೆ ಎಂಬಂತೆ ಮುದ್ದಿಸುತ್ತಾ, ಅಳುತ್ತಾ, ನಗುತ್ತಾ, ಇಡೀ ಹಡಗು ನಿಲ್ದಾಣವನ್ನೆಲ್ಲ ಸಾರಸಲ್ಲಾಪ ಧ್ವನಿಯಿಂದ ತುಂಬುತ್ತಾ, ಹಡಗು ಅಲ್ಲಿಂದ ಹೊರಡುವವರೆಗೂ ಕಂಠದಲ್ಲಿ ಗದ್ಗದ ಧ್ವನಿಯೂ ಕಣ್ಣುಗಳಲ್ಲಿ ಅಶ್ರುಧಾರೆಯೂ ಏಕಮುಖವಾಗಿ ಪ್ರದರ್ಶನಗೊಳ್ಳುವ ದೃಶ್ಯ ಸ್ಕಾಟ್ಲೆಂಡಿನಲ್ಲಿ ಅಲ್ಲದೆ ಬೇರೆಲ್ಲಿ? ಗಿರ್ವನನ ಕೋಟೆ (castle)ಯು ಗೂಢಾಚಾರದಿಂದ ನಿತತ್ತ್ವವರಿಯುಳ್ಳವರೆಂಬುದನ್ನು ತಿಳಿದಿದ್ದರೂ ಅವರೊಡನೆ ಹೋರಾಟ ಹೊಡೆಯುತ್ತಾ, ಸ್ವೇಚ್ಛವನ್ನು ಬೆಳೆಸಿ ಮಿತ್ರಬಾಂಧವರ ಬಾಡಿಗೆ ಗಾಡಿಯ ಮೇಲ್ಭಾಗದಲ್ಲಿರುತ್ತ ನಗರದಲ್ಲಿ ನೋಡತಕ್ಕ ಸ್ಥಳವನ್ನೆಲ್ಲ ನೋಡುಗರಿಗೆ ತೋರಿಸುವವರು ಸ್ಕಾಟ್ಲೆಂಡಿನಲ್ಲಿ ಅಲ್ಲದೆ ಬೇರೆಲ್ಲಿ ಇದ್ದಾರೆ? ಮಾನ್ಯತೆಯು ಸಾಲದಿದ್ದರೂ ಬಲವಂತವಾಗಿ ಹಿಡಿಯಲು ಅನಾದ್ಯವೂ ಅದು ಬಿಡುಗಡೆಮಾತಿನ ಸದ್ಯದಯಂತೆಯು ಆ ಜನವು ಬಾಳಲಿ! ಪ್ರಬಲ ಮೇಧಾವಿಗಳೂ ಸಾಹಸರು ಬೆಳೆದ ಸ್ಥಳವೂ ಕಾಲ ಚಕ್ರವು ಉರುಳಿದಂತೆ ಪುನಃ ಅದೇ ಸ್ಥಿತಿಗೆ ತಲುಪಿರುವ ಈ ನಾಡು ಬೆಳಗಲಿ!

ಬಾಲ್ಯದಲ್ಲಿ ನಾನು ತುಂಬಾ ಅಭಿಮಾನದಿಂದಲೂ ಸ್ವಲ್ಪಮಟ್ಟಿಗೆ ಹೆದರಿಕೆಯಿಂದಲೂ ಕಂಡಿದ್ದ ನನ್ನ ತಾಯಿಯ ತಂದೆಯೂ ಸ್ಕಾಟ್ಲೆಂಡಿನವನಾಗಿದ್ದನು. ಅವನು ನಿರ್ನಾಮವಾಗುತ್ತಲಿದ್ದ ಮರಿಸನ್ ಎಂಬ ಸ್ಕಾಟಿಷ್ ಕುಟುಂಬಕ್ಕೆ ಸೇರಿದ್ದನು. ತನ್ನ ಅಚಿಂತ್ಯ ಯೌವನದಲ್ಲಿ ಸುಂದರಿಯಾದ ಪತ್ನಿಯೊಂದೊಡಗೂಡಿ ಅವನು ತನ್ನ ಮನೆಯಿನ ಅಭಿವೃದ್ಧಿಯನ್ನು ಮೋದದಿಂದ ಸಾಧಿಸಿದನು. ತನ್ನ ವೃದ್ಧಾಪ್ಯದಲ್ಲಿ ಹಿಮದಂತೆ ಬಿಳಿ ತಲೆಗೂದಲಿಂದ ಕೂಡಿದ್ದು ಬಹು ಕಿಂಚಿತ್ತಾದ ಉದ್ರೇಕಕ್ಕೂ ತನ್ನ ಸ್ಕಾಟಿಷ್ ಸ್ವಭಾವಕ್ಕನುವಾಗಿ ಸಹಿಷ್ಣುತೆಯಿಂದ ಬೊಬ್ಬೆಯಿಡುತ್ತಾ, ಕಡೆಗೆ ಒಮ್ಮೆಲೇ ಮೌನವಾಗುತ್ತಿದ್ದನು. ಸಂಸಾರವು ಹೆಚ್ಚಾಗುತ್ತಾ, ಹಣವು ಕಡಿಮೆಯಾಗುತ್ತಾ ಇದ್ದ ಕುಟುಂಬದಲ್ಲಿ ನನ್ನ ತಾಯಿಯು ಎರಡನೆಯವಳಾಗಿದ್ದಳು. ಅವಳ ತಂದೆಯ ಅವಿವಾಹಿತ ಸೋದರಿಯೊ

ವರ್ಗಳು ಅವಳನ್ನು ಸಾಕಿದ್ದರು. ನನ್ನ ತಾಯಿಯ ಬಾಲ್ಯದ ಚಿತ್ರಣಕ್ಕೆ ಮತ್ತು ಗರ್ವಿಷ್ಠ ಸ್ವಭಾವದ ಹಾದಿಯು ನನ್ನ ಮೇಲೂ ಬಿದ್ದಿತೆಂದು ನಮ್ಮವರ ಹಸ್ತಾನತ ತ್ರಿಯುಂದ ವ್ಯಕ್ತವಾಯಿತು. ಐರ್ಲೆಂಡಿನ ಹಲವು ಬಡ ಕುಟುಂಬಗಳು ಪೂರ್ವದಲ್ಲಿ 'ರಾಜ' ಮನೆತನಕ್ಕೆ ಅನಿವಾರ್ಯವಾಗಿ ಸೇರಿದುವೆಂದು ನಂಬಿದ್ದ ಆ ಅವಿವಾಹಿತೆ ಅತ್ತೆಯು ತನ್ನ ಸಂಸಾರದ ಬಗ್ಗೆ ಹೆಮ್ಮೆಗೊಂಡಿದ್ದಳು. ಅವಳು ಹೇಳುತ್ತಿದ್ದ ರಾಜರು ಐರ್ಲೆಂಡಿನ ಹಳೆ ಅರಸರನ್ನು ಕುರಿತಾಗಿತ್ತು. ಅದರಲ್ಲೂ ಮಿಲೆಸಿಯ ರಾಜರ (The Milesians) ವಂಶಾವಳಿಯು ನನ್ನ ಕುರಿತಾಗಿ ಮನನೀಯವೂ ಗಂಭೀರವೂ ಆದ ಚರ್ಮದ ಕಾಗದದಲ್ಲಿ ಬರೆದಿದ್ದುದು ಆ ವಂಶಕ್ಕೆ ಸೇರಿದ್ದ ಹಿರಿಯರು ಮನೆಯ ಎದುರು ಕೋಣೆಯ ಹಿತಿಯ ಮೇಲಿನ ಅಟ್ಟದಲ್ಲಿ ಎಲ್ಲರಿಗೂ ತೋರುವಂತೆ ಇಡಲಾಗಿತ್ತು. ರಾಜತ್ವವನ್ನು ಘೋಷಿಸಿದ ಈ ಬೃಹದ್ರೂಪ (ಅತ್ತೆಯು) ಅದಕ್ಕೆ ತಕ್ಕಂತೆ ಕೂಡ ಎಮಿಲಿ (Emily)ಯ ಆದರಕ್ಕೆ ಪಾತ್ರಳಾದಳು. ಅವಳು ಸಹಸ್ರವರ್ಷಾತ್ ಅದಾವುದೋ ಅರಸನ ರಾಜಮನೆತನಕ್ಕೆ ಸೇರಿದ್ದ ಆ ವೃಕ್ಷದ ಒಂದು ಚಿಕ್ಕ ಕಡ್ಡಿಯಾಗಿದ್ದಳೆಂದು ನಾನು ಊಹಿಸುತ್ತಿದ್ದೇನೆ. ನಿಸ್ಸಂದೇಹವಾಗಿಯೂ ಅಲ್ಲಿ ಸೂಚಿಸಲಾದ ಕಾರಣದಿಂದ ಐರ್ಲೆಂಡಿನಿಂದ ಓಡಿಸಲ್ಪಟ್ಟ ಆ ರಾಜವೃಕ್ಷದ "ಕಡ್ಡಿಗಳು" ಸಮುದ್ರವನ್ನು ದಾಟಿ ಇಂಗ್ಲೆಂಡಿಗೆ ಬಂದು ತಮ್ಮ ದರಿದ್ರ ಜೀವನವನ್ನು ಮುಂದುವರಿಸಿದರು. ಕಾಲಚಕ್ರದ ಉರುಳುವಿಕೆ ಆಶ್ಚರ್ಯವೇ ಸರಿ, ಏಕೆಂದರೆ ಈ ಅನಾಗರಿಕ ಸಂಚಾರೀ ಜೀವಿಗಳ ದರಾತ್ರಮತ್ತು ಜೀವನವೇ ೧೯ನೇ ಶತಮಾನದ ಮೊದಲ ಭಾಗದಲ್ಲಿ ಈ ಸಭ್ಯಳಾದ ಐರಿಶ್ ಮಹಿಳೆಯ ಮನೆಯಲ್ಲಿ ನೈತಿಕವಾಗಿ ಒಪ್ಪಲಾದ ನಿತ್ಯ ಕ್ರಮವಾಯಿತು. ನನ್ನ ತಾಯಿ (Emily) ಶಿಶುವಾಗಿದ್ದಾಗ ಒಮ್ಮೊಮ್ಮೆ ಏನಾದರೂ ಚೇಷ್ಟೆಯನ್ನು ಮಾಡಿದರೆ ಆ ಅವಿವಾಹಿತೆ ಅತ್ತೆಯು ಅವಳಿಗೆ, "ಎಮಿಲಿಯೇ, ನಿನ್ನ ವರ್ತನೆಯು ಐರ್ಲೆಂಡಿನ ಹಳೆ ರಾಜರ ಸಂತತಿಯ ಪ್ರತಿಷ್ಠೆಗೆ ತಕ್ಕುದಲ್ಲ," ಎಂದು ಸಿಡುಕಿನಿಂದ ತನ್ನ ಕನ್ನಡಕಗಳ ಮೇಲೆ ನೋಡುತ್ತ ಗದರಿಸುತ್ತಿದ್ದಳೆಂದು ನನಗೆ ಹೇಳುತ್ತಿದ್ದಳು. ಎಮಿಲಿಯಾದರೋ ಅವಳ ಸುಂದರವಾದ ಬೂದಿ ವರ್ಣದ ಐರಿಶ್ ಕಣ್ಣುಗಳಿಂದಲೂ ಹುರುಳಾದ ಕಪ್ಪು ಮುಂಗುರುಳುಗಳಿಂದಲೂ ಕೂಡಿದ್ದು ಸ್ನಿಗ್ಧದೂ ಚೆಲುವೂ ಆಗಿದ್ದ ಆ ಕೂಸಿನಮುಖ (Emily) ಗುಲಾಬಿ ಹೂಮೊಗ್ಗ ಹೇಗೋ ಹಾಗೆ ಇದ್ದು ಬಹುಶಃ ತನ್ನ ಆ ರಾಜವಂಶದ ಕೀರ್ತಿಗೆ ಸಲ್ಲದ ಅಕ್ರಮವನ್ನೇನೋ ಮಾಡಿದೆನೆಂಬ ಪಶ್ಚಾತ್ತಾಪದ ನಸುನಾಚಿಕೆಯಿಂದ ಅಂತೆಯೇ ಇರುವಳು.

ಇಂದು ಕೆಲವು ಛಾಯಾ ಸನ್ನಿವೇಶಗಳು ಎಮಿಲಿಯ ಬಾಲ್ಯದಲ್ಲಿ ಪ್ರಭಾವವನ್ನು ಬೀರಿದ್ದವು; ಅಲ್ಲದೆ ಅಷ್ಟು ಸಹನೀಯವಾಗಿ ವರ್ತನೆ

ಹುವುದು ಅವರಿಗೆ ರುಚಿಸುತ್ತಿರಲಿಲ್ಲ, ಅದಕ್ಕೆ ನೋವು, ನಾಚಿಕೆ ಮುತ್ತು ಅಸಹನೆಗಳ ಗೊಂದಲದಿಂದಯುಳ್ಳ ಗೌರವವನ್ನುಳಿಸಿಕೊಳ್ಳಬೇಕೆಂದು ಅವರು ಓರ್ವರೇ ಮಗಳಾದ ನನಗೆ ಹಲವು ಬಾರಿ ಹೇಳಿದ್ದರು. ಪ್ರಪಂಚದಲ್ಲಿ ಮನುಷ್ಯನು ಯಾವ ಕಳಂಕವೂ ಇಲ್ಲದ ನಿರ್ಮಲತ್ವವುಗಳನ್ನು ಉಳಿಸುವುದಕ್ಕಾಗಿ ಪ್ರತೀಕ್ಷೆ ಶ್ರಮಿಸಬೇಕಾದರೂ ಯಾವಾಗಲೂ ದೃಢಪರ್ಯದಿಂದಿರಬೇಕಾದರೂ ಮಾನಹಾನಿಗೆ ಹಿಂದಿಕ್ಕು ಎಡೆಗೊಡಬಾರದು. ನಿಶ್ಯಕ್ತಳಾದ ಸ್ತ್ರೀ ಹಸಿದಿದ್ದರೂ ಬೇರೊಬ್ಬರ ಬಹುಮಾನವನ್ನು ಇಟ್ಟುಕೊಳ್ಳಬಾರದು; ಅವಳು ಎದೆ ಒಡೆಯುವ ಸಂದರ್ಭದಲ್ಲೂ ಅವಳು ಅದನ್ನು ಮೌನಗಳ್ಳಗುವಿನಿಂದ ಅನುಭವಿಸಬೇಕು. ಇಂಥ ನಡತೆ ಸ್ವಭಾವ ಮತ್ತು ಆತ್ಮಗೌರವವು ಬಹುಮಟ್ಟಿಗೆ ಖಂಡನೆಗೆ ಮತ್ತು ನಿಂದನೆಗೆ ಗುರಿಯಾದ ನನ್ನ ಅವಿಶ್ರಾಂತ ಸಾರ್ವಜನಿಕ ಜೀವನಕ್ಕೆ ತುಕ್ಕ ಆಧಾರವಾಯಿತು, ಎಲ್ಲಾ ಬಗೆಯ ಟೀಕೆ ಮತ್ತು ನಿಂದೆಗಳನ್ನು ಬದಿಗೊತ್ತಿ ವೈಯಕ್ತಿಕ ಮನೋವೃತ್ತಿ ಮತ್ತು ಸ್ವಗೌರವವನ್ನು ಉಳಿಸಿಕೊಂಡು ಸಾರ್ವಜನಿಕ ರಂಗದಲ್ಲಿ ಶ್ರಮಿಸುವ ತಕ್ಕ ಉತ್ತೇಜನವಿತ್ತಂತಾಯಿತೆಂಬುದು ಹಿಟ್ಟತನಕ ಸ್ವಾಭಿಮಾನಿಗಳಿಗೆ ಮಾತ್ರ ತಿಳಿಯುವುದು. ಅದರಿಂದ ಇನ್ನಷ್ಟು ಉದ್ವೇಗಕಾರಕವಾದ ಮತ್ತು ಅಮೂಲ್ಯವಾದ ಪರಿಣಾಮವಾಯಿತೆಂದೆನ್ನಬಹುದು, ನಿಶ್ಚಿತ ಹೇಳಬೇಕಾದ ಎಂಥ ಪ್ರಸಂಗದಲ್ಲಿಯೂ ಉಗ್ರವಾಗಿ ತನ್ನ ಪ್ರತಿಪಕ್ಷಿಯನ್ನು ಕಾಪಾಡುವುದು; ಅಂಥ ಪ್ರತಿಸ್ಪರ್ಧಿಯು ನಾದನಿಗೆ ಯಾ ರಕ್ಷಣೆಗೆ ಹಕ್ಕಿದ್ದದೆ, ಯಾರು ಏನನ್ನು ಖಂಡಿಸಿದರೂ ತನ್ನದೇ ಆದ ರೀತಿಯಲ್ಲಿ ವರ್ತಿಸುವ ಶಕ್ತಿ ಹಾಗೂ ನಿರ್ಧಾರವಶಕ್ತಿ ಇಲ್ಲದೆ "ನಾನು ನೀನು ಆಲೋಚಿಸಿಕೊಂಡಿರುಲ್ಲ; ನಿನ್ನ ತೀರ್ಮಾನವು ನನ್ನ ನಡೆನುಡಿಯನ್ನು ಬದಲಾಯಿಸದು; ನೀನು ನನ್ನ ಬಗೆ ಏನು ಭಾವಿಸಿಕೊಂಡಿರೂ ನನ್ನನ್ನು ಶಿಕ್ಷಿಸಲೆಂತೆ ನಿನಗೆ ಮಾಡಲಾಗುವುದಿಲ್ಲ; ನೀನು ನನ್ನ ಬಗ್ಗೆ ಹೇಗೆ ಭಾವಿಸಿದೆಯೋ ಆ ರೀತಿ ನಾನು ಇಲ್ಲ," ಎಂಬಂತೆ ನಾನು ಇದ್ದೆನು. ನನಗೆ ಅವಮಾನವೊದಗಿದ ಮೇಳಿಗೆ ನನ್ನ ಗುಣಾದಲ್ಲಿ ನನಗಿದ್ದ ಶ್ರದ್ಧೆ ಮತ್ತು ಹೆಮ್ಮೆಯೇ ನನಗೆ ರಕ್ಷಾಕವಚವಾಯಿತು, ಸಾರ್ವಜನಿಕ ದೃಷ್ಟಿಯಲ್ಲಿ ನಾನು ಕೆಳಗೆ ಬಿದ್ದಾಗ ನನ್ನ ಮನಸ್ಸು ಆ ರೀತಿ ಕಳಂಕಿತವಾಗಲು ಒಪ್ಪಲೊಲ್ಲದು, ಹೀಗಾದರೂ ನನ್ನ ಈ ಬಿಟ್ಟತನವೇ ನನ್ನನ್ನು ನನ್ನ ಮನೆಯಿಂದ, ನನ್ನ ಮಿತ್ರರಿಂದ ಮತ್ತು ಸಮಾಜದಿಂದ ದೂರವಿರಿಸಿತು. ನನ್ನ ಅಜ್ಜನ ಸೋದರಿಯು ಅವಳ್ಳೀಕ್ಷೆಕೂ ಅವಳು ಉತ್ಸಾಹವಾಗಿ ಸ್ವಾಗಿಸಿದ್ದ ಅಂದಿನ ಆ ರಾಜರ ಆತ್ಮಕ್ಕೆ ಶಾಂತಿಯಿರಲಿ, ಏಕೆಂದರೆ ನಾನು ಅದೇ ಸಂತತಿಯವಳಾದ ಕಾರಣದಿಂದ ಅವರಿಗೆ ಹೇಗೂ ಋಣಿ

ಬಾಗಿದ್ದೇನೆ, ನನ್ನ ತಾಯಿಯನ್ನು ಮತ್ತು ಕೋಮಲತೆಯ, ಮೃದುತೆಯ, ಹೆಮ್ಮೆಯ ಮತ್ತು ನಿಷ್ಕಳಂಕ ಶ್ರೀಯಾಗುವಂತೆ ನನ್ನನ್ನು ನೋಡಿಕೊಂಡ ಮತ್ತು ನನಗೆ ತಿಳಿಯದೇ ಇದ್ದ ಆ ದಾರಿಯನ್ನು ನಾನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ. ಶೈಶವದಲ್ಲಿ ಮತ್ತು ಬಾಲ್ಯದಲ್ಲಿ ಉದಾತ್ತ ಹಾಗೂ ಮಮತಾ ಭಾವದ ಆದರ್ಶಕ್ಕೆ ಕಾರಣಳಾದ ಮತ್ತು ಯಾರ ಮೊಗದಾವರೆಯೇ ಮನೆಗೆ ಸೌಂದರ್ಯವನ್ನು, ಯಾರ ಪ್ರೀತಿಯು ನನಗೆ ಸಹಾಯಕಾರಕವೂ ರಕ್ಷಣಾಕವಚವೂ ಆಯಿತೋ ಅಂದಿನ ಮಾತೆಯನ್ನು ಹಿಂದಕ್ಕೆ ತಿರುಗಿ ನೋಡುವುದರಲ್ಲಿ ತುಂಬಾ ಆತ್ಮಸಂತೃಪ್ತಿಯಿದೆ. ತಾಯಿ ಮತ್ತು ಮಗು ಇವರೊಳಗೆ ಎಂದೆಂದಿಗೂ ಕಡಿಮೆಯಾಗದ, ಯಾ ಸಡಿಲವಾಗದ ಅನ್ಯೋನ್ಯ ಪ್ರೀತಿ ಸೌಹಾರ್ದತೆಯ ಕಟ್ಟನ್ನು ಬಲಪಡಿಸಲು ಜೀವನದ ಈ ಅನುಭವಕ್ಕಿಂತ ಬೇರೇನೂ ಬೇಕಿಲ್ಲ.

ನನ್ನ ಮತಿ ಪರಿವರ್ತನೆಯ ಬಗ್ಗೆ, ಮತ್ತು ಸಾಮಾಜಿಕವಾಗಿ ನಾನು ಇತರರಿಂದ ಬೇರ್ಪಟ್ಟ ಕಾರಣದಿಂದ ಅವಳು ಬೇಗನೆ ವ್ಯತ್ಯಾಸವನ್ನುಪ್ಪದರೂ ಹಾರ್ದಿಕವಾಗಿ ನಮ್ಮೊಳಗೆ ಕಾರ್ಮೋಡದ ತೆರೆಯು ಎಂದೂ ಕವಿದಿರಲಿಲ್ಲ. ಆದರೂ ಅವಳು ನನಗಾಗಿ ಮರುಗುತ್ತಿದ್ದಳು. ನನ್ನ ಇತ್ತೀಚಿನ ದಿನಗಳಲ್ಲಿ ನಾನು ಎಂದೂ ಅನುಭವಿಸದಷ್ಟು ಕಷ್ಟ ಅನುಭವವಾಯಿತು. ಆ ದಿಸ್ಸೆಯ ವಿಷಯವು ಬಹು ಖೇದಕರವಾಗಿತ್ತಾದರೂ ನಮ್ಮೊಳಗೆ ಭಿನ್ನಭಾವಕ್ಕೆಡೆಯಿರಲಿಲ್ಲ, ನಮ್ಮೊಳಗಿದ್ದ ಅನ್ಯೋನ್ಯ ಪ್ರೀತಿಯನ್ನು ಕಡಿದಿರಲಿಲ್ಲ. ತನ್ನ ನಿಷ್ಠುರ ದೇಹವನ್ನು ಹೊತ್ತು ಅವಳು ಬದುಕಿದ್ದ ಆ ಕಾಲದ ನನ್ನ ಎಳೆ ಹರೆಯದಲ್ಲಿ ನಾನು ಅವಳನ್ನು ಹೇಗೆ ಪ್ರೀತಿಸುತ್ತಿದ್ದೆನೋ ಅದೇ ನೆನಪು ಸಿಹಿಯು ಇಂದಿಗೂ ಇದೆ. ತಾನು ಪ್ರೀತಿಯಿಂದ ಕಂಡವರನ್ನು ಹಾರ್ದಿಕವಾಗಿ ಪೋಷಿಸಿ ಕ್ಷುಲ್ಲಕವಾದ ಗರ್ವಮದವನ್ನೆಲ್ಲ ನಿಷ್ಕ್ರಿಯವೆಂಬಂತೆ ಕಂಡು, ಗೌರವಪಾತ್ರವಾದುದನ್ನು ಬಹು ಲಕ್ಷ್ಯದಿಂದ ಆದರದಿಂದ ನೋಡಿ, ದುಃಖಿತರನ್ನು ಕೋಮಲತೆಯಿಂದ ಬೆರೆಸಿದ ಪ್ರೀತಿಯಿಂದ ಕಂಡರು ಅವಳು ನನ್ನ ಆ ಬಾಲ್ಯವನ್ನು ಸ್ವಚ್ಛಲೋಕದಲ್ಲಿ ತೇಲಿಸಿ ನನ್ನ ವಿವಾಹದ ವರೆಗೆ ನನಗೆ ಒದಗಿರಬಹುದಾದ ನೋವು ಬೇವುಗಳನ್ನು ತಾನೇ ಅನುಭವಿಸಿ, ನನಗೊದಗಿದ ಕಷ್ಟ ಪ್ರಸಂಗವನ್ನೆಲ್ಲ ನಾನು ಅನುಭವಿಸುವುದಕ್ಕಿಂತ ಅವಳೇ ಅನುಭವಿಸಿ ಕಷ್ಟವನ್ನೆಲ್ಲ ತಾನೇ ಸಹಿಸಿ ಕಡೆಗೆ ದುಃಖದಿಂದ, ಬಡತನದಿಂದ, ಮನೋಘಾತದಿಂದ, ತಾನು ಮುಪ್ಪಿಗೆ ಕಾಲಿಡುವ ಮೊದಲೇ ಮುಪ್ಪಾಗಿ ನನ್ನ ತಾಯಿಯು 1874ರ ಮೇ ತಿಂಗಳಲ್ಲಿ ನಾರ್ವುಡ್ಡ (Norwood)ನ ನಮ್ಮ ಚಿಕ್ಕ ಮನೆಯಲ್ಲಿ ಮೃತ್ಯುವಶಳಾದಳು. ಅಷ್ಟು ಕಷ್ಟವಾದರೂ ಸಹನೆಯಿಂದ ಕೂಡಿದ್ದ ನನ್ನ ತಾಯಿಯಂಥಾ ಆದರ್ಶಮಾ

ತೆಯನ್ನು ನಾನು ಇಂದಿಗೂ ಕಂಡಿಲ್ಲ.

ಸೇಂಟ್ ಜಾನ್ಸ್ ವುಡ್ (St. John's Wood)ನ ಗ್ರೋವ್ ರಸ್ತೆಯಲ್ಲಿ ನಾನು ಸುಮಾರು ನಾಲ್ಕು ವರ್ಷ ಪ್ರಾಯದವಳಿದ್ದಾಗ ಒಂದು ಉದ್ಯಾನದಿಂದ ಆವೃತವಾದ ಮನೆಯಲ್ಲಿ ವಾಸವಿದ್ದುದೇ ನನ್ನ ಮೊತ್ತ ಮೊದಲ ನೆನಪು ಆಗಿದೆ. ಹೊರಗೆ ದುಡಿಯಲು ಹೋಗಿ ಹಿಂದಿರುಗುವ ತನ್ನ ಪತಿಗೆ ಊಟಕ್ಕೆ ಬಡಿಸುತ್ತ ನಿಲ್ಲುತ್ತಿರುತ್ತಿದ್ದ ಯುವ ತಾಯಿಯೂ ನನಗಿಂತ ಎರಡು ವರ್ಷ ಹಿರಿಯವನಾದ ನನ್ನ ಸೋದರನು ತಂದೆಗಾಗಿ ಕಾಯುತ್ತಿದ್ದುದೂ ನೆನಪಿದೆ. ಹಿರಿಯರು ಊಟಕ್ಕೆ ಕೂರುವುದಕ್ಕಿಂತ ನಾಂದಿಯಾಗಿ ಚಿಕ್ಕ ಮಕ್ಕಳು ಅಳುತ್ತ, ಓಡಾಡುತ್ತ ಇರುವುದು ನನಗೆ ಚೆನ್ನಾಗಿ ನೆನಪಿದೆ. 1851ರ ಡಿಸೆಂಬರ್ ತಿಂಗಳ 1ನೇ ದಿನದಂದು ನಾನು ಹಾಸಿಗೆಯ ಮೇಲಿಂದ "ಅಪ್ಪ, ಅವ್ವ," ಎಂದು ದೊಡ್ಡದಾಗಿ ಕರೆಯುತ್ತಾ "ನನಗೆ ಇಂದಿಗೆ ನಾಲ್ಕು ವರ್ಷವಾದದು ಗೊತ್ತಿದ್ದಿಲ್ಲವೇ, ಆಗ ನನ್ನ ಸೋದರನು ಊಟದ ವೇಳೆಗೆ, "ಆಕೆಗೆ ನಾಲ್ಕು ವರ್ಷ ಪ್ರಾಯವಾದುದರಿಂದ ಅವಳು ಈಗ ತಾನಾಗಿಯೇ ಬೇಕಾದಷ್ಟು ಊಟಮಾಡಬಹುದಲ್ಲವೇ?" ಎಂದು ಹೇಳಿದ್ದು ನೆನಪಿದೆ.

ಕ್ರಿ.ಶ. 1851ರ ಮಹಾ ಪ್ರದರ್ಶನ (Great Exhibition)ಕ್ಕೆ ಹೋಗಲು ನಾನು ಇನ್ನೂ ಚಿಕ್ಕವಳೆಂಬ ಕಾರಣದಿಂದ ನನ್ನನ್ನು ಹೋಗಗೊಡದಿದ್ದುದು ನನಗೆ ತುಂಬಾ ದುಃಖವನ್ನುಂಟು ಮಾಡಿತು. ನನ್ನನ್ನು ಸಮಾಧಾನಪಡಿಸಲೋಸ್ಕರವೋ ಎಂಬಂತೆ ನನ್ನ ಸೋದರನು ನಾನು ನೋಡಲು ತವಕಿಸಿದ್ದ ಮುದ್ರಿತ ಚಿತ್ರಗಳ ಚೂರನ್ನು ಅಂಗಡಿಗಳಿಂದ ಕೊಡಿಸಿಕೊಂಡು ಹಿಡಿದು ತಂದಿತ್ತನು. ಅಂದಿನ ಕೆಲವು ತೆರೆಮರೆಯ ನೆನಪುಗಳು ಇವು! ನೋಡಿದ್ದನ್ನೆಲ್ಲ ತಮ್ಮ ಮನೋಸ್ಮೃತಿಯಲ್ಲಿಟ್ಟು ಅನಂತರ ಅವನ್ನೆಲ್ಲ ನೆನೆದು ಈ ಬಾಹ್ಯ ಜಗತ್ತು ಮಾನವೀಯ ಜಾಗೃತಿಯನ್ನು ಹೇಗೆ ಹುಟ್ಟಿಸುತ್ತದೆಯೆಂದು ಶಿಶುಗಳಿಗೆ ತಿಳಿಯಲು ಸಾಧ್ಯವಿಲ್ಲದ್ದು ಎಷ್ಟು ವಿಷಾದಕರ! ನಮ್ಮ ಕಣ್ಣುಗಳ ಮೊದಲ ನೋಟಕ್ಕೆ ತೋರುವ ಹಾಗೆ ಪ್ರತಿಬಿಂಬಿಸುತ್ತದೆಂದು ನೆನೆಯುವ ಶಕ್ತಿ ಇದ್ದಿದ್ದರೆ, ಬಾಹ್ಯವಸ್ತುವಿನ ಅಸ್ತಿತ್ವವು ನಮಗೆ ಗೋಚರವಾದಾಗ, ನಮ್ಮ ಸುತ್ತುಮುತ್ತಲ ಗೊಂದಲಕ್ಕೆ ತಾಯಿತಂದೆಯರ ಪ್ರತಿಕ್ರಿಯೆ ಎಂತೆಂದು ತಿಳಿಯಬಹುದಾಗಿದ್ದಾಗ, ಪ್ರಿಯವಾದವು ಮುಗುಳ್ನಗೆಯಿಂದ ಸ್ವಾಗತಿಸಲ್ಪಟ್ಟಾಗ ಅಥವಾ ದುಃಖದಲ್ಲಿ ಬೆರೆತು ಅಪ್ಪಿಕೊಂಡಾಗ ಉಂಟಾಗುವ ಮನೋತರಂಗವೆಲ್ಲವನ್ನೂ ಅಂದಿನ ಅಸ್ಪಷ್ಟತೆಯನ್ನು ಕಳಚಿ ಆ ನಮ್ಮ ಬಾಲ್ಯಕ್ಕೆ ನಮ್ಮ ಮನಸ್ಸನ್ನು ಹಾಯಿಸಿದರೆ ಇನ್ನೂ ಸಿದ್ಧಾಂತವಾಗದ ಅದೆಷ್ಟು ವಿಚಾರಗಳು ಮನಃಶಾಸ್ತ್ರಕ್ಕೆ ದೊರಕುವಂತಾಗಬಹುದು.

ಸಾಧ್ಯ ನಿರರ್ಥಕವಾಗಿ ಉತ್ತರಿಸಲು ಪ್ರಯತ್ನಿಸುವ ಅದೆಷ್ಟು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಕಂಡುಹಿಡಿಯಬಹುದು ಎಂಬುದಾಗಿ ಇದೀಗ ನಾನು ಯೋಚಿಸುತ್ತಿದ್ದೇನೆ.

ಅದರನಂತರ ನನ್ನ ಮನೋಭಿತ್ತಿಯಲ್ಲಿ ಉಳಿದ ಹಳೆ ನೆನಪುಗಳಲ್ಲಿ ನನ್ನ ತಂದೆಯ ಮರಣಶಯ್ಯೆಯ ದೃಶ್ಯವೇ ಆಗಿದೆ. ಅವನ ಸಾವಿಗೆ ಕಾರಣವಾದ ವಿಷಯಗಳನ್ನು ನಾನು ನನ್ನ ಒಲವಿನ ತಾಯಿಯಿಂದ ತಿಳಿದೆನು. ಹಲವು ತಜ್ಞ ವೈದ್ಯರ ಗೆಳೆಯನಾಗಿ ಅವರೊಡನೆ ಖಾಯಿಲಸ್ಥರನ್ನು ನೋಡುತ್ತಾ ಆಸ್ಪತ್ರೆಯ ಸುತ್ತುವರಿದು ಅವರೊಡನೆಯೇ ಅಂಗಚ್ಛೇದದ ಕೊಠಡಿಯೊಳಗೆ ನಡೆಯುತ್ತಾ ಇದ್ದ ಅವನು ತಾನು ತರಬೇತು ಹೊಂದಿದ ಆ ವೃತ್ತಿಯಲ್ಲಿ ಅನುರಕ್ತಿಯನ್ನು ಕಳೆದುಕೊಂಡದ್ದೇ ಇಲ್ಲ. ಆಸ್ಪತ್ರೆಯಲ್ಲಿ ಕ್ಷಯರೋಗಕ್ಕೊಳಗಾದವನ ದೇಹವನ್ನು ವಿಚ್ಛೇದನಗೊಳಿಸುತ್ತ ಅವನ ಪಕ್ಕೆಲುಬುಗಳ ಕಡೆಗೆ ಚೂರಿಯನ್ನು ಹಾಯಿಸಿದಾಗ ನನ್ನ ತಂದೆಯು ತನ್ನ ಬೆರಳನ್ನೇ ತಿವಿದುಕೊಂಡನು. ಆ ಬೆರಳು ರಕ್ತ ಕಟ್ಟಿಕೊಂಡು ಊದಿಕೊಂಡಿದ್ದು ಸುಲಭದಲ್ಲಿ ಗುಣಹೊಂದಲಿಲ್ಲ. ಆಗ ಆ ಗಾಯವನ್ನು ಕಂಡು ಸರ್ಜನ್ ವೈದ್ಯನು ತಾನಾಗಿದ್ದರೆ ಆ ಬೆರಳನ್ನೇ ಕತ್ತರಿಸಿಕೊಳ್ಳುತ್ತಿದ್ದೆನು ಎಂದು ನನ್ನ ತಂದೆಗೆ ಹೇಳಿದನು. ಬೇರೊಬ್ಬ ವೈದ್ಯನು ಅದನ್ನು ಕೇಳಿ ನಕ್ಕನು. ಪ್ರಾರಂಭದಲ್ಲಿ ತಂದೆಯು ತನ್ನ ಬೆರಳನ್ನು ಕತ್ತರಿಸಿ ತೆಗೆಯಲು ಆಲೋಚಿಸಿದ್ದನಾದರೂ ಕಡೆಗೆ ಅದು ಅದರಷ್ಟಕ್ಕೆ ಗುಣಹೊಂದಲಿ ಎಂದು ಅಂತಿಮೇ ನಿಶ್ಚಯಿಸಿದನು.

1852 ನೇ ವರ್ಷದ ಆಗಸ್ಟ್ ತಿಂಗಳ ಮಧ್ಯದಲ್ಲಿ ಮಳೆ ಹೊಡೆಯುತ್ತಾ ಇದ್ದ ಆ ದಿನದಂದು ನನ್ನ ತಂದೆ ಹಿಂದಿನ ಬಾಡಿಗೆ ಬಸ್ಸನ್ನು ಏರಿ ಪ್ರಯಾಣ ಬೆಳೆಸಿದ ಪರಿಣಾಮವಾಗಿ ಶೀತವಾಗಿ ಕಡೆಗೆ ಅದು ಎದೆ ನೋವಾಗಿ ಮಾರ್ಪಟ್ಟುದರಿಂದ ಸರ್ವಪ್ರಸಿದ್ಧ ಹಾಗೂ ಕರುಣಾಚಿತ್ತದ ವೈದ್ಯನೊಬ್ಬನನ್ನು ಕರೆಸಲಾಯಿತು. ಅವನು ನನ್ನ ತಂದೆಯನ್ನು ಜಾಗ್ರತೆಯಿಂದ ಪರೀಕ್ಷಿಸಿ ಶ್ವಾಸಕೋಶಗಳನ್ನು ಬಡಿದು ನೋಡಿದನಂತರ ನನ್ನ ತಾಯಿಯೊಡನೆಯೇ ಕೋಣೆಯಿಂದ ಹೊರಬಂದನು; ತನ್ನ ಪತಿಯು ಕಳವಳಪಡದಂತೆ ಮತ್ತು ಆ ವೈದ್ಯನಿಂದ ಉತ್ತರವನ್ನು ನಿರೀಕ್ಷಿಸದೆಯೇ "ಹೇಗಿದೆ" ಎಂದು ತಾಯಿ ಕೇಳಿದಳು. "ನೀವು ಅವರನ್ನು ಉತ್ಸಾಹದಿಂದಿರಿಸಬೇಕು," ಎಂದು ಆ ವೈದ್ಯನು ನೆಟ್ಟನೆ ಹೇಳಿದನು. "ಅವರ ಸ್ಥಿತಿಯು ಕ್ಷಯರೋಗದತ್ತ ಧಾವಿಸುತ್ತಿದೆ; ಆರು ವಾರಗಳನಂತರ ಅವರು ನಿಮ್ಮೊಡನೆ ಇರಲಾರರು," ಎಂದು ಹಿಂದುಮುಂದು ಆಲೋಚಿಸದೆ ಹೇಳಿದಾಗ ನನ್ನ ತಾಯಿಯು ಒಂದು ಕಲ್ಲು ದಢಾರನೆ ತಲೆಗೆ ಬಿದ್ದಂತೆ ಸ್ಮೃತಿತಪ್ಪಿ ಬಿದ್ದಳು. ಆದರೂ ಪ್ರೇಮವಂತ ಆ

ಮನೋವೇದನೆಯನ್ನು ಮರೆಸುತ್ತಿತ್ತು. ಇನ್ನೊಂದು ಅರ್ಧ ಗಂಟೆಯಲ್ಲಿ ಆವಳು ತನ್ನ ಪತಿಯ ಬಳಿಯಲ್ಲಿ ಇರುತ್ತಾಳೆ. ಅಲ್ಲಿಂದ ಮತ್ತೆ ಮತ್ತೆ ಹತ್ತು ನಿಮಿಷಕ್ಕೊಮ್ಮೆ ಹಗಲೂ ರಾತ್ರಿಯೂ ಅವನನ್ನು ಅಗಲದೆಯೇ ನೋಡಿಕೊಂಡಳು. ಅವನು ಮೃತ್ಯುವನ್ನಪ್ಪಿ ಕಣ್ಣು ಮುಚ್ಚುವ ವರೆಗೂ ಅವನ ಸಮೀಪವೇ ಕುಳಿತಿರುತ್ತಿದ್ದಳು.

ನನ್ನ ತಂದೆ ಸಾಯುವ ಹಿಂದಿನ ದಿನಕ್ಕೆ ಹಿಂದೆ ಕಡೇ ಬಾರಿಗೆ ಅವನಿಗೆ ಪ್ರಣಾಮವನ್ನು ಮಾಡಲು ನನ್ನನ್ನು ಹಾಸಿಗೆಯ ಮೇಲೆತ್ತಿ ತೋರಿಸಿದರು. ಆಗ ಅವನು ತನ್ನ ವಿಶಾಲವಾದ ಕಣ್ಣುಗಳಿಂದ ಮತ್ತು ಕರ್ಕಶ ಧ್ವನಿಯಿಂದ ಕೂಡಿದ್ದನ್ನು ಕಂಡು ಹೆದರಿದ್ದೆನಾದರೂ ಅವನು ನನಗೆ ತಾನು ಬೇಗನೆ ಹೋಗುತ್ತಿರುವೆನಾದುದರಿಂದ ನಾನು ನನ್ನ ಪ್ರಿಯ ಮಾತೆಗೆ ಒಳ್ಳೆಯ ಮಗನಾಗಿರಬೇಕೆಂದು ಹೇಳಿದನು. ತಂದೆಯು ನನ್ನ ಸೋದರನನ್ನು ಮುದ್ದಾಡಿಸಲು ಬಲಾತ್ಕರಿಸುತ್ತಿದ್ದನು. ನನ್ನ ಹುಟ್ಟುದಿನಕ್ಕೆ ಮೂರು ದಿನಕ್ಕೆ ಮುಂಚೆ ತಂದೆಯು ಆದೇಶದಂತೆ ನನಗೊಂದು ಗೊಂಬೆಯನ್ನು ಆಡಿಸುತ್ತಿತ್ತುದೂ ನಾನು ಅನಂತರ ಒಮ್ಮೆ ಅಳುತ್ತಿದ್ದಂತೆಯೇ ನನ್ನನ್ನು ಕೋಣೆಯಿಂದ ಹೊರಸಾಗಿಸಿದ್ದು ನಾನು ನೆನೆಯುತ್ತೇನೆ. ತಂದೆಯು ಅಕ್ಟೋಬರ್ ೫ನೇ ದಿನ ಮೃತನಾದನು. ಆಗ ನನ್ನ ಅಣ್ಣನೂ ನಾನೂ ನಮ್ಮ ತಾಯಿಯ ತಂದೆಯ ಮನೆಯಲ್ಲಿದ್ದೆವು. ನಮ್ಮ ತಂದೆಯ ಶವಸಂಸ್ಕಾರದ ವೇಳೆಗೆ ಮಾತ್ರ ನಾವು ಅಲ್ಲಿಗೆ ಹೋದುದಲ್ಲದೆ ಅದಕ್ಕಿಂತ ಹಿಂದೆ ನಾವು ಅಲ್ಲಿದ್ದೆವು ಎಂದು ಹೇಳಲಾರೆನು. ತಂದೆಯು ಆಗತಾನೆ ನಂತರ ನಮ್ಮ ತಾಯಿ ತುಂಬಾ ಕಂಗೆಟ್ಟಳು, ಶವಸಂಸ್ಕಾರದ ನಂತರ ಸ್ಮೃತಿ ತಪ್ಪಿದ್ದ ಅವಳನ್ನು ಅವಳ ಕೋಣೆಗೆ ಸಾಗಿಸಿದರು. ಅವಳು ಎಚ್ಚೆತ್ತ ನಂತರ ತನ್ನನ್ನು ಮಾತನಾಡಿಸದಿರುವಂತೆ ಬಿಡಲು ಕೇಳಿಕೊಂಡರೂ ಆ ರಾತ್ರಿಯೆಲ್ಲ ತನ್ನ ಕೋಣೆಯ ಬಾಗಿಲನ್ನು ಮುಚ್ಚಿ ಬಿಟ್ಟೇ ಇದ್ದರೂ ಮರುದಿನ ಬೆಳಿಗ್ಗೆ ಅವಳನ್ನು ತನ್ನ ಕೋಣೆಯ ಬಾಗಿಲು ತೆರೆಯುವಂತೆ ಇತರರು ಬಲಾತ್ಕರಿಸಿದ್ದು ನನಗೆ ನೆನಪಿದೆ. ಅವಳು ಕೋಣೆಯ ಬಾಗಿಲು ತೆರೆದನಂತರವೇ ಹಿರಿಯರು ಅವಳಿಗೆ, 'ಎಮಿಲಿಯವರೇ, ನಿನ್ನ ಕೂದಲು ತೀರಾ ಬಿಳುಪಾಗಿದೆ," ಎಂದು ಆಶ್ಚರ್ಯದಿಂದ ಹೇಳಿದರು. ಸುಂದರವಾದ ಅವಳ ತಲೆಗೂದಲು ದಟ್ಟವಾಗಿ ತನ್ನ ಬೂದುಬಣ್ಣದ ಕಣ್ಣುಗಳಿಂದ ಬೇರ್ಪಟ್ಟು ಇದ್ದು ಅವಳ ಮುಖವನ್ನು ಆಕರ್ಷಕವಾಗಿ ಮಾಡುತ್ತಿತ್ತು. ನನಗಾದರೋ ನನ್ನ ತಾಯಿಯ ಮುಖವು ಹಿಮದಂತೆ ಶುಭ್ರ ಬಿಳಿ ತಲೆಗೂದಲಿಂದ ತುಂಬಿ ರಜತ ಕಾಂತಿಯನ್ನು ಚೆಲ್ಲುತ್ತಿದ್ದು ಬಹು ಸುಂದರವಾಗಿ ಕಾಣುತ್ತಿತ್ತು.

ನನ್ನ ತಂದೆ ಮತ್ತು ತಾಯಿ ಇವರಿಬ್ಬರಿಗಿದ್ದ ಪ್ರೀತಿಯು ಬಹು

ಸುಂದರವಾಗಿತ್ತೆಂದೂ ಆದರೆ ಅವಳ ಮುಂದಿನ ಜೀವನಕ್ಕೆ ತಕ್ಕ ಮಾರ್ಗದರ್ಶನವು ಸಿಕ್ಕಿತ್ತು ಎಂಬುದನ್ನು ನಾನು ಕೇಳಿದ್ದೇನೆ, ನನ್ನ ತಂದೆಯಾದರೋ ಹಿರಿಯ ಪಂಡಿತನು! ವಿದ್ಯಾವಂತ! ಗಣಿತ ಮತ್ತು ಪೌರಾಣಿಕ ಸಾಹಿತ್ಯದಲ್ಲಿ ವಿದ್ವಾಂಸ. ಫ್ರೆಂಚ್, ಜರ್ಮನ್, ಇಟಾಲಿಯನ್, ಸ್ಪ್ಯಾನಿಷ್ ಮತ್ತು ಪೋರ್ಚುಗೀಸ್ ಭಾಷೆಗಳಲ್ಲಿ ಪಳಗಿದ್ದನು, ಹಿಬ್ರೂ ಮತ್ತು ಗಾಲಿಕ್ (Gaelic) ಭಾಷೆಗಳನ್ನು ಸಾಕಷ್ಟು ಕಲಿತಿದ್ದನು. ಪುರಾತನ ಮತ್ತು ಆಧುನಿಕ ಸಾಹಿತ್ಯ ಗ್ರಂಥಗಳು ಅವನ ಮನೆಯನ್ನು ನಿತ್ಯವೂ ಅಲಂಕರಿಸಿದ್ದುವು. ತನ್ನ ಪತ್ನಿಯು ಕೆಲಸದಲ್ಲಿ ನಿರತಳಾದಾಗ ಅವನು ಒಡನೆ ಕುಳಿತು ಅವಳಿಗೂ ಕೇಳಿಸುವಂತೆ ಓದುತ್ತಿದ್ದುದು ಅವನ ಮೆಚ್ಚಿನ ಕೆಲಸವಾಗಿತ್ತು. ಒಮ್ಮೊಮ್ಮೆ ಪರಭಾಷಾ ಕವಿಯ ಕೃತಿಯೊಂದರ ಭಾಷಾಂತರ, ಮತ್ತೊಮ್ಮೆ ಸಂಗೀತದಲ್ಲಿ ತಲ್ಲೀನನಾಗಿ ಸ್ವರಭೇದದಿಂದೊಡಗೂಡಿ ಇಂಪಾಗಿ ಹಾಡುವುದೂ ಅವನ ಹವ್ಯಾಸವಾಗಿತ್ತು. ತತ್ವಶಾಸ್ತ್ರದ ವಿದ್ಯಾರ್ಥಿಯಾಗಿದ್ದ ಅವನು ಬಹಳ ನಿಷ್ಠೆಯಿಂದ ತತ್ವಜ್ಞಾನ ಮಾಡಿದ್ದು ಅನಂತರ ಅವಿಶ್ವಾಸಿ ಚಾರ್ವಾಕನಾದನು. ಕ್ರೈಸ್ತಧರ್ಮವನ್ನು ಕುರಿತು ಒಮ್ಮೊಮ್ಮೆ ಹಾಸ್ಯರೂಪದಲ್ಲಿ ಮಾತಾಡುವನು, ದೇವಭಕ್ತಳಾದ ತನ್ನ ಜೀವನ ಬಂಧುವನ್ನು ಅವನು ನಿರ್ಲಕ್ಷಿಸಿದ್ದನೆಂದೂ ಅವಳು ನನಗೆ ಅನಂತರ ಹೇಳಿದಳು. ನನ್ನ ತಂದೆಯ ತಾಯಿ ಮತ್ತು ಸಹೋದರಿಯು ಕಟ್ಟಾ ರೋಮನ್ ಕ್ಯಾಥೊಲಿಕ್ ಪಂಥದವರಾಗಿದ್ದರು. ಅವನು ಸಾಯುವಾಗ ಒಬ್ಬ ಕ್ರೈಸ್ತಗುರುವನ್ನು ಕರೆಸಿ ಅವನ ಕೋಣೆಗೆ ಬಲಾತ್ಕಾರದಿಂದ ನುಗ್ಗಿಸಿದರು. ಆದರೆ ಸಾಯುತ್ತಿದ್ದ ಆ ವ್ಯಕ್ತಿಯು ಕೋಪದಿಂದ ಆ ಗುರುವನ್ನು ಅಲ್ಲಿಂದ ಓಡಿಸಿದನು, ಅದರ ನಂತರ ಯಾವ ಗುರುವೂ ಮತ್ತೆ ಬಾರದಿರಲು ತನ್ನ ರೀತಿಯನ್ನು ಕಾಪಿಡಬೇಕೆಂಬ ನಿರ್ಧಾರವನ್ನು ನನ್ನ ತಾಯಿಯು ತಾಳಿದ್ದರಿಂದ ಅಂಥವರನ್ನೆಲ್ಲ ಅವನಿಂದ ದೂರವಿರಿಸಲಾಯಿತು,

ತತ್ವಶಾಸ್ತ್ರವನ್ನು ಬಹಳ ನಿಗೂಢವಾಗಿ ಓದಿದ್ದ ಅವನು ಅಂದಿನ ಸಾಂಪ್ರದಾಯಿಕ ನಂಬಿಕೆಗಳನ್ನೆಲ್ಲ ಮೀರಿ ಬೆಳೆದಿದ್ದನು. ಆದರೆ ಅವನ ಅವಿಶ್ವಾಸವನ್ನು ಸ್ವೀಕರಿಸಲಾರದ ಮತ್ತು ಅವನನ್ನು ತುಂಬಾ ಪ್ರೀತಿಸಿದ್ದ ಅವನ ಪತ್ನಿ ತನ್ನ ದೈವಭಕ್ತಿಯನ್ನು ಅವನ ಚಾರ್ವಾಕ ನೀತಿಯೊಡಗೂಡಿ ಅನುಸರಿಸಿದಳು, 'ಗಂಡಸರು ಶಿಕ್ಷಿತರಾದ ಗೌರವ ಪೂರ್ಣವ್ಯಕ್ತಿಗಳಾದರೆ ಸರಿ; ಅವರು ತಮಗೆ ತೋರಿದಂತೆ ಆಲೋಚಿಸುವುದೂ ಓದುವುದೂ ಮಾಡಬಹುದು, ಆದರೆ ಹೆಂಗಸರು ದೈವಭಕ್ತಿಯಿಂದ ಕೂಡಿರಲೇ ಬೇಕು ಎಂದು ನನ್ನ ತಾಯಿ ಹೇಳುತ್ತಿದ್ದಳು. ನನ್ನ ತಂದೆಯ ಉದಾರ ಮತದ (liberal thoughts) ಮತ್ತು ಸಂಪ್ರದಾಯ ಹೀನವಾದ ನೀತಿಯ ಪರಿಣಾಮವೇನೆಂದರೆ ನನ್ನ ತಾಯಿ ತನ್ನ ಭಕ್ತಿ ವಿಶ್ವಾಸಗಳನ್ನು ತನಗರಿಯದಂತೆಯೇ ಮಾರ್ಪಡಿಸಿದಂತೆ ಮತ್ತು

ಸ್ವಲ್ಪ ವಿವೇಕದಿಂದ ಪ್ರತಿಕ್ರಿಯಿಸುವಂತಾಯಿತು. ಅದರಿಂದಲೇ ನಿರಂತರ ನರಕ, ಕ್ರಿಸ್ತನಿಗಾಗಿ ಪ್ರಾಯಶ್ಚಿತ್ತ, ಶಿಲುಬೆಯ ಸತ್ಯತೆ, ತ್ರಿಮೂರ್ತಿ (Trinity), ಕ್ರೈಸ್ತ ಪ್ರಸಂಗದಲ್ಲಿ ತಂದೆಗೂ ಮಗನಿಗೂ ಇರುವ ಸಮಾನತೆ ಮುಂತಾದ ಸಾಂಪ್ರದಾಯಿಕ ಅಭಿಮಾನಗಳು ತಪ್ಪೆಂದು ಅವಳು ಹಿಂದೆಯೇ ಸಾಧಿಸಿದಾಗ ಇನ್ನೊಂದೆಡೆಯಲ್ಲಿ ತನ್ನ ಅನಂತರದ ದಿನಗಳಲ್ಲಿ ಜೋವೆಟ್ಟ್, ಕೋಲೆನ್ಸೊ, ಮತ್ತು ಸ್ಟಾನ್ಲಿ ಇವರ ಬರಹಗಳಲ್ಲಿ ತುಂಬಾ ಅಭಿರುಚಿಯನ್ನು ನನ್ನ ತಾಯಿ ತೋರಿಸಿದಳು. ಇವರಲ್ಲಿ ಸ್ಟಾನ್ಲಿಯು ಅವಳಿಗೆ ವಿನಯಂಗತ್ವ, ಸೌಮ್ಯತೆ, ವಿಶಾಲ ಮನಸ್ಸಿನ ಮತ್ತು ಭಕ್ತಿ ಸಂಪನ್ನನಾದ ಸಚ್ಛ್ರೈಸ್ತನಂತೆ ತೋರಿದನು. ಮತಪ್ರಚಾರಕರ ಅನೇಕ ಸಿದ್ಧಾಂತಗಳು ಅವಳ ಜ್ಞಾನ ಪರಿಪಕ್ವತೆಯನ್ನು ಹೇಗೆ ಕದಡಿಸಿತೋ ಅದೇ ಪ್ರಮಾಣದಲ್ಲಿ ಮತಪ್ರಚಾರಕರ ಸಹಕಾರತೆಯು ಅವಳ ಅಭಿರುಚಿಗೆ ಆಕರ್ಷಣೆಯನ್ನುಂಟುಮಾಡಿತು. ನನ್ನ ತಾಯಿಯು ಸಡಗರವಾಡಂಬರದಿಂದ ಕಲಾತ್ಮಕವಾಗಿ ತಾನೊಬ್ಬ ಕ್ರೈಸ್ತಳೆಂದೆನಿಸಿಕೊಳ್ಳಲು ಬಯಸಿದಳಲ್ಲದೆ ತಾನು ಗುಡಿಗೆ ಪ್ರಾರ್ಥನೆಗೆಂದು ಹೋದಾಗ ಸ್ವಾರಸ್ಯವಾದ ಸಂಗೀತ ಮತ್ತು ಮನೋಹರವಾದ ವಾಸ್ತುಶಿಲ್ಪದಿಂದ ಸಂತುಷ್ಟಳಾಗಲು ಇಚ್ಛಿಸಿದ್ದಳು. ಸನ್ಯಾಸಿಗಳೊಡನೆ ನಿಕಟ ಪರಿಚಯವನ್ನು ಬೆಳೆಸುವುದು ಅವಳಿಗೆ ಹಿಡಿಸುತ್ತಿರಲಿಲ್ಲವಾದರೂ ಅವರಿಗೆ ಮರ್ಯಾದೆಯಿಂದ ಮತ್ತು ಭಕ್ತಿಯಿಂದ ವಂದಿಸಿ ತನ್ನ ಪಾಲಿನ ಕರ್ತವ್ಯವನ್ನು ಮಾಡುತ್ತಿದ್ದಳು. ನಸುಬೆಳಕಿನ ಮತ್ತು ಆ ವಾಯು ಆವರಣದ ವೆಸ್ಟ್‌ಮಿನಿಸ್ಟರ್ ಗುಡಿಯು ಅವಳಿಗೆ ಪ್ರಿಯವಾದ ದೇಗುಲವಾಯಿತು. ಸುಂದರ ಕಲ್ಲು ಕೆತ್ತನೆಯ ಕೊಠಡಿ, ಭಕ್ತಿಗೀತೆಗಳನ್ನು ಒಕ್ಕೊರಲಿನಿಂದ ತಾಳಬದ್ಧವಾಗಿ ಹಾಡುವ ಗೀತಾಧ್ವನಿ, ಬಣ್ಣಚಿತ್ರಗಳಿಂದ ಶೋಭಿಸುವ ಕಿಟಕಿಗಳು, ಎತ್ತರಕ್ಕೆ ಚಾಚಿ ಕಮಾನಾಕೃತಿಯಿಂದ ಎಸೆಯುವ ಕಂಬ ಮತ್ತು ತೊಲೆಗಂಬಗಳು, ಕಲ್ಲಿನ ಪರದೆ ಮತ್ತು ಸ್ಮಾರಕ ಶಿಲೆಗಳಲ್ಲಿ ಪ್ರತಿಧ್ವನಿಸಿ ಮೊಳಗಿ ನಾದಸ್ವರವನ್ನು ಹೊಮ್ಮಿಸುವ ಧ್ವನಿವಾಹಿನಿ ಪೆಟ್ಟಿಗೆಗಳು, ಮಡಿದ ಮಹಾತ್ಮರುಗಳ ಚಿತ್ರಪಟ್ಟು ಅವಶೇಷಗಳು, ಗತಕಾಲದ ಸ್ಮರಣೆಯನ್ನು ಉದ್ದೀಪಿಸುವ ಶಿಲ್ಪಕಲೆಯಲ್ಲಿ ಕ್ರೈಸ್ತಧರ್ಮವನ್ನು ಮಾನಸಿಕವಾಗಿ ಉಚ್ಛ್ರಾಯಸ್ಥಿತಿಗೇರಿಸುತ್ತವೆಂದು ನನ್ನ ತಾಯಿಯು ಹಾರ್ದಿಕವಾಗಿ ನಂಬಿ ಸಂತೃಪ್ತಳಾದಳು.

ನನ್ನ ಈ ಮತಧರ್ಮವನ್ನು ಬಹು ಪ್ರಾಮಾಣಿಕವಾಗಿ ತಿಳಿದಿದ್ದೆನಾದರೋ ನನ್ನ ತಾಯಿಯು ಸವಿಯಾದ ಮತ್ತು ಹಸನಾಗಿ ಪಾಲಿಸಿ ಬೆಳೆಸಿದ ಆ ಸಾದುತ್ವವು 'ಲಾವೊಡಿಸಿಯನ್' (Laodicean) ಔದಾಸೀನ್ಯದಂತೆ ತೋರಿತು. ನನ್ನ ನೇರ-ನಿಷ್ಠುರ ನಂಬಿಕೆ ಮತ್ತು ಸಾಧನೆಯು ನಿಷ್ಕ್ರಿಯೆಯಾಗಿ ಇರಲು ಒಪ್ಪಿದ್ದಿಲ್ಲವೆಂದು ತೋರಿತು.

ಸಮಾನ ಗುಣಧರ್ಮದ, ವಿನೀತ ಗುಣಶೀಲಗಳುಳ್ಳ ಆಗತ್ಯ ಬೋಧೆಯಿಂದು ನನ್ನ ತಾಯಿ ನಂಬಿದ್ದಳು. ನನ್ನ ವರ್ತನೆಯ ನೋಟವು ನನ್ನ ತಾಯಿಗೆ ವಿಪರೀತವಾಗಿ ಕಂಡಿತು. ಆವಳು ಹಿಂದಿನ ಕಾಲಕ್ಕೆ ಸೇರಿದ್ದಳು. ನಾನಾದರೋ ತೀವ್ರಗಾಮಿಗಳ ವರ್ಗಕ್ಕೆ ಸೇರಿದ್ದೆನು. ನಾನು ಹಲವು ಬಾರಿ ಹಿಂಸಾತ್ಮಕತೆಯನ್ನು ಮಾಡಿದಾಗ, ಮತ್ತು ನನ್ನ ತಾಯಿ ಮರಣಶಯ್ಯೆಯಲ್ಲಿ ಬಿದ್ದಿದ್ದಾಗ, ಆವಳಿಗರಿಯದೆಯೇ, ಆವಳು ಉಚ್ಚರಿಸದೆಯೇ ಆವಳ ತುಟಿಗಳಿಂದ ಈ ಮಾತುಗಳು ಉರುಳಿ ಬರುವಂತಿದ್ದು ತೋರುತ್ತದೆ: "ನನ್ನ ಮಗನೇ, ನೀನು ನಿನ್ನ ಹಿತಕ್ಕಾಗಿ ಅಲ್ಲದೆ ನನ್ನನ್ನು ಎಂದಿಗೂ ನೀನು ಶೋಕಕ್ಕೀಡಾಗಿಸಿದ್ದಿಲ್ಲ. ನೀನು ಯಾವಾಗಲೂ ತುಂಬಾ ಧಾರ್ಮಿಕ ಪ್ರವೃತ್ತಿಯುಳ್ಳವಳಾಗಿದ್ದೆ!"

ಹಾಗೆನ್ನುತ್ತ ನನ್ನ ತಾಯಿ ತಾನಾಗಿಯೇ ಹೀಗೆ ಉದ್ಗರಿಸುವಳು, "ಹೌದು, ನನ್ನ ಪ್ರಿಯ ಆನಿಯು ಯಾವಾಗಲೂ ತುಂಬಾ ಧಾರ್ಮಿಕಳಾಗಿದ್ದದರಿಂದಲೇ ಆವಳ ತಪ್ಪು!" ಈಗ ನಾನು ಉಸುರುವಾಗ ಮತ್ತು ದೀರ್ಘವೇ ತೀರ್ಪನ್ನು ಕಾಯುವಂತೆ ಮೃತ್ಯುವಿನ ಸನಿಹದಲ್ಲಿದ್ದ ಆ ಧ್ವನಿಯು ಸತ್ಯವನ್ನೇ ಹೇಳಿತು. ಆವಳ ಆ ಕಣ್ಣುಗಳು ತನ್ನ ಅಂತರಂಗದೊಳಗೆ ಹೊಕ್ಕು ನೋಡಿತು. ನಾನು ಆಗ ಧರ್ಮಗುರುಗಳೊಡನೆ ಜಾತಿಭ್ರಷ್ಟರೊಡನೆ ಆಗಿದ್ದರೂ ನನ್ನ ತಾಯಿಯ ಹಾಸಿಗೆಯ ಬಳಿಯಲ್ಲಿ ಮೊಣಕಾಲೂರಿದೆನು, ಹಿಂದಿನ ಧರ್ಮವನ್ನು ತಿರಸ್ಕರಿಸುವ ಮತ್ತು ನಿಮಿತ್ತಗಳನ್ನು ಧ್ವಂಸಿಸುವ ಮತ್ತು ಸತ್ಯವನ್ನು ತೃಪ್ತಿಗೊಳಿಸುವ ಆ ಸಿದ್ಧಾಂತಗಳನ್ನು ಪ್ರತಿಭಟಿಸುವ ಭರದಲ್ಲಿ ನನ್ನ ಹೃದಯವು ಶಾಂತಿಯಾಗಿ ಧರ್ಮವನ್ನು ಒಪ್ಪುತ್ತು. ಆಸ್ತಿಕ್ಯವು ನನಗೆ ಹೆಚ್ಚು ಹಿಡಿಸದೆಯೆಂದಲ್ಲ; ಅದಕ್ಕೆ ಬದಲಾಗಿ ಅದು ನನಗೆ ಅತ್ಯೇನೂ ಹಿತಕರವಾಗಿ ಕಂಡುಬರದ್ದರಿಂದ ನಾನು ಏಕಾಂಗಿಯಾಗಿ ಅಂಧಕಾರದಲ್ಲಿ ಅಲೆದೆನು. ತಾತ್ವಿಕ ವಿಚಾರವು ಬಹು ಅಲ್ಪವಾಗಿ, ಸಾಮಾನ್ಯವಾಗಿ, ಬಲವಂತದಿಂದ ಹಿಡಿಯುಲು ಹೆಚ್ಚೇನೂ ಇಲ್ಲದಾಗಿ, (ಧಾರ್ಮಿಕ ವಿಚಾರದಲ್ಲಿಯೇ ಹೆಚ್ಚು ಮಗ್ನವಾಗಿ, ಬರೀ ಸಾಮಾಜಿಕ ಸಂಪ್ರದಾಯಕ್ಕೆ ಹೊಂದಿಕೊಳ್ಳುವ ಹಿಂದು ಸಾಧನವೆಂಬಂತೆ ನನಗೆ ತೋರಿತು. ರೋಮನ್ ಕ್ಯಾಥೊಲಿಕ್ ಪಂಥವು ನನ್ನನ್ನು ಆಕರ್ಷಿಸಿತು; ಆ ಧರ್ಮ ಸಾಕಷ್ಟು ಆಕರ್ಷಿಸುವುದರಲ್ಲಿತ್ತು. ಆದು ನನ್ನನು ಭಯಂಕರವೂ ತ್ಯಾಗಶೀಲವೂ ಆದ ಮತ ಬೋಧಕಿಯಾಗಿ ಹಿಂದು ಸ್ತ್ರೀಯಳಿಕ್ಕೆ ಕಳುಹಿಸಿ ನನ್ನನ್ನು ಜೀವನ ಪರ್ಯಂತ ಬಳಸಬಹುದಿತ್ತು. ಹೀನಾನು ಕಾಯಿದೆಗಳಿಗೊಳಪಟ್ಟ ಆ ಪಂಥವು ನನ್ನನ್ನು ಜೀವನ ನಾಟಕಗಳಾಗಿಯೂ ಧರ್ಮವಿರೋಧಿಯಾಗಿಯೂ ಪರಿವರ್ತಿಸಿತು.

ನಾನು ನನ್ನ ಬಾಲ್ಯದಿಂದಲೇ ಜೀವನ ರಹಸ್ಯವಾದಿ

ವಾದಿಯೂ ಕಲ್ಪನಾಲೋಲಳೂ ಆಗಿದ್ದು ಸ್ವಲ್ಪಮಟ್ಟಿಗೆ ಮಾಟವಿದ್ಯೆಯನ್ನು
ಕಾಣುವ ಮತ್ತು ಸ್ವಪ್ನದೃಶ್ಯವಾದುದನ್ನು ತೋರಿಸುವ ಜ್ಞಾನಿಯು
ನನ್ನ ಕಡೆಯ ನಾನು ಆ ವಾದ ಮತಸ್ಥರ ವರೆಗೂ ಧರ್ಮಾಭಿಮಾನಿ
ಯಾಗಿದ್ದೇನೆ. ಮಾನಸಿಕವಾಗಿಯೂ ಬಲವತ್ತಾಗಿ ಕಾಡಿದ ಕೆಲ್ಟ್
(Celtic) ಜನಕ್ಕೆ ತಾವು ಮೂಢಭಕ್ತಿಯಿಂದ ಕಾಡಿದವರಿಂದ
ತೋರಿದ್ದರೂ ಇಂಥ ವಿದ್ವತ್ತು ಅವರಲ್ಲಿ ಅಸಾಮಾನ್ಯವಾದುದಾಗಿರ
ಲಿಲ್ಲ. ನನ್ನ ತಂದೆಯ ಶವಸಂಸ್ಕಾರದಿಂದ ನನ್ನ ತಾಯಿಯು ತನ್ನ
ಬಿಡಿಗಣ್ಣುಗಳನ್ನು ನೆಟ್ಟನೆಯ ಟಕ್ಕ ಸ್ತಬ್ಧತೆಯಿಂದ ನಿಸ್ತೇಜವದನ
ಳಾಗಿ ಕುಳಿತಿದ್ದ ಆ ಚಿತ್ರವು ನನ್ನ ಸ್ಮೃತಿಪಟಲದಲ್ಲಿ ಸ್ಥಿರವಾ
ಗಿದ್ದು ನನ್ನ ಅಂದಿನ ಮನೋವೃತ್ತಿಯಲ್ಲಿ ಅಚ್ಚಳಿಯದೆ ಇನ್ನೂ ಇದೆ.
ಶವಸಂಸ್ಕಾರದ ವಿಧಿಯನ್ನು ಹೆಜ್ಜೆ ಹೆಜ್ಜೆಗೂ ಅನುಸರಿಸಿ ಅ
ವಳು "ಎಲ್ಲಾ ಮುಗಿಯಿತು" ಎಂದೆನ್ನುತ್ತಾ ಸ್ಮೃತಿ ತಪ್ಪಿ ಬಿದ್ದಳು.
ಅವಳು ಶವದೊಡನೆ ಗಾಡಿಯ ಹಿಂದೆ ಸ್ಮಶಾನದವರೆಗೂ ನಡೆದು
ದನ್ನು ಮತ್ತು ಗುಂಡಿಯಲ್ಲಿ ಪ್ರಾರ್ಥನಾ ವಿಧಿಯನ್ನು ಮುಗಿಸಿದ್ದನ್ನು
ಆ ಮೇಲೆ ಹೇಳಿದಳು. ಕೆಲವು ವಾರಗಳನಂತರ ಅವಳು ತನ್ನ
ಪತಿಯನ್ನು ಹೂಳಿದ್ದ ಕೆನ್ಸಲ್ ಗ್ರೀನ್ ಸ್ಮಶಾನಕ್ಕೆ ಸುಮ್ಮನೆ ಬಂಧು
ವಿನೊಡನೆ ಹೋದಳು. ಅವನಿಗೆ ಆ ಸಮಾಧಿ ಸ್ಥಳವನ್ನು ಕಂಡು
ಹಿಡಿಯಲು ಆಗದಿದ್ದಾಗ ಇನ್ನೊಂದು ಗುಂಪು ಜನವು ಅದೇ
ಕಾರ್ಯಾರ್ಥವಾಗಿ ಬೇರೊಂದೆಡೆಗೆ ಹೋದರು. ಆಗ ನನ್ನ ತಾ
ಯಿಯು ಶವಸಂಸ್ಕಾರದ ವೇಳೆಗೆ ಹೋದ ವಿಧಿಯನ್ನು ಆಚರಿ
ಸಲಾದ ಗುಂಡಿಗೆ ತನ್ನನ್ನು ಕರೆದುಕೊಂಡು ಹೋದರೆ ತಾನೇ ಆ
ಸ್ಥಳವನ್ನು ಕಂಡುಹಿಡಿಯುವೆನೆಂದು ಹೇಳಿದಳು. ಈ ಮಾತು
ಬರೀ ತಿಳಿಗೇಡಿತನವೆಂದು ಅವಳ ಬಂಧುವಾಪ್ತನಿಗೆ ತೋರಿತು.
ಆದರೆ ಈ ಹೊಸ ವಿಧವೆಯ ಮನಸ್ಸನ್ನು ನೋಯಿಸದೆ ಅವಳ
ಆಶಯದಂತೆ ಅವಳನ್ನು ಆ ಗುಂಡಿಗೆ ಕರೆದುಕೊಂಡು ಹೋದನು.
ಅಲ್ಲಿಂದ ಅವಳು ಸುತ್ತಲೂ ನೋಡಿದಳು. ಆ ಗುಂಡಿಯ ಬಾಗಿ
ಲಿನಿಂದ ಹೊರಬಂದು ತನ್ನ ಪತಿಯ ಶವವನ್ನು ಕೊಂಡುಹೋದ
ದಾರಿಗಾಗಿಯೇ ಸ್ಮಶಾನಕ್ಕೆ ನಡೆದು ಒಂದು ಸ್ಥಳದಲ್ಲಿ ಸುಮ್ಮನೆ
ನಿಂತಿದ್ದಾಗ ಆ ಸ್ಮಶಾನದ ಮೇಲ್ವಿಚಾರಕನು ಬಂದು ಅವಳ ಪ
ತಿಯ ಸಮಾಧಿಯನ್ನು ತೋರಿಸಿದನು. ಆ ಸ್ಥಳವು ಗುಂಡಿ
ಯಿಂದ ಅನತಿ ದೂರದಲ್ಲಿದ್ದರೂ ಪ್ರಧಾನ ರಸ್ತೆಯ ಬದಿಯಲ್ಲೇ
ನೂ ಇದು ಇರಲಿಲ್ಲ. ಆ ಸಮಾಧಿಯನ್ನು ಗುರುತಿಸಲು ಒಂ
ದು ಮರದ ಗೂಟಕ್ಕೆ ಒಂದು ಸಂಖ್ಯೆಯನ್ನು ಕೊಟ್ಟು ಅಲ್ಲಿ
ಊರಿದ್ದರಲ್ಲದೆ ಅಲ್ಲಿ ಬೇರೇನೂ ಇರಲಿಲ್ಲ. ಹಾಗಿದ್ದ ಎಲ್ಲಾ
ಸ್ಥಳಗಳೂ ಅದೇ ರೀತಿ ಗುರುತಿಸಲ್ಪಟ್ಟಿದ್ದರಿಂದ ಹಾಗೆ ಊರಿದ್ದ

ಈ ಶಕ್ತಿಗಳೂ ಸಹಾಯಕವಾಗಲಿಲ್ಲ. ಸ್ವಲ್ಪ ದೂರಕ್ಕೆ ಆ ಶಕ್ತಿಗಳೂ ಕಾಣಿಸುತ್ತಿರಲಿಲ್ಲ. ಹೇಗೂ ಅವಳು ಹೇಗೆ ಆ ಸಮಾಧಿ ಸ್ಥಿತಿಯನ್ನು ತಂದುಕೊಂಡಳೆಂಬುದು ಕುಟುಂಬದ ಜನಕ್ಕೆ ಆಶ್ಚರ್ಯವಾಯಿತು, ಏಕೆಂದರೆ ಅವಳು ಶಿವಸಂಸ್ಕಾರದಿಂದ ಅಲ್ಲಿದ್ದಳೆಂಬುದನ್ನು ಕುಟುಂಬದ ಜನರಾರೂ ನಂಬಿರಲಿಲ್ಲ. ಹೇಗೂ ನನ್ನ ಇಂದಿನ ವಿಚಾರಜ್ಞಾನದಿಂದ ನಾನು ಈ ವಿಚಾರವು ಹೆಚ್ಚೇನೂ ಗಹನವಾದುದಲ್ಲವೆಂದು ಹೇಳಬಲ್ಲೆನು. ಶಿವಾತ್ಮನು ದೇಹದಿಂದ ಅಗಲಬಹುದು, ಅದು ಬೇರೊಂದೆಡೆ ನಡೆಯುತ್ತಿರುವ ಕಾರ್ಯದಲ್ಲಿ ಭಾಗವಹಿಸಬಹುದು. ಕಡೆಗೆ ಹಿಂದಿರುಗಿ ತನ್ನ ಅನುಭವವನ್ನು ಮೆದುಳಿಗೆ ತಿಳಿಸಬಹುದು. ಅವಳನ್ನು ಗುಡಿಗೆ ಪುನಃ ಕರೆದುಕೊಂಡು ಹೋಗಬೇಕೆಂದು ಹೇಳಿದ್ದರಲ್ಲಿ ತುಂಬಾ ಅರ್ಥವಿದೆ; ಅದರಿಂದ ಹಿಂದೆ ನನ್ನ ತಾಯಿ ಗುಡಿಯಿಂದ ಗೋರಿಯ ವರೆಗೆ ನಡೆದ ಘಟನೆಗಳನ್ನು ಆ ಗುಡಿಯಲ್ಲಿ ನಡೆದುದನ್ನು ಮೊದಲ್ಗೊಂಡು ನೆನೆಯಲು ಆರಂಭಿಸಿದ್ದಳು, ಅವಳು ಮೊದಲು ನಡೆದ ಸ್ಥಳದಿಂದ ಸ್ಮಶಾನಕ್ಕೆ ನಡೆದರೆ ಮಾತ್ರ ಅವಳಿಗೆ ತನ್ನ ಶಕ್ತಿಯು ಸಮಾಧಿ ಸ್ಥಿತಿಯ ಕಾಲಕ್ಕೆ ಸಿಕ್ಕುವುದು, ದೇಹಾತೀತ ಅನುಭವಕ್ಕೆ ಇನ್ನೊಂದು ನಿದರ್ಶನವು ಕೆಲವು ತಿಂಗಳ ನಂತರ ನಡೆಯಿತು, ನನ್ನ ತಾಯಿ ತನ್ನ ಎಳೆಮಗನು ಒಂದು ರಾತ್ರಿ ತನ್ನ ತಂದೆಯನ್ನು ಕಾಣಲೆಂದು ಹೊರಟಿದ್ದು ಅಳುತ್ತಿದ್ದಾಗ ಅವಳು ಅವನನ್ನು ಎತ್ತಿಕೊಂಡಳು. ಮರುದಿನ ಬೆಳಿಗ್ಗೆ ಅವಳು ತನ್ನ ಸೋದರಿಗೆ “ಮಗ ಸಾಯುತ್ತಿದ್ದಾನೆ”, ಎಂದು ಹೇಳಿದಳು. ಮಗುವಿಗೆ ಖಾಯಿಲೆಯೇನೂ ಇರಲಿಲ್ಲವಾದರೂ ಅವನು ಸ್ವಸ್ಥವಾಗಿಯೇ ಇದ್ದನು, ಚಳಿಗಾಲದಲ್ಲಿ ಕುಂದಿದ ದೇಹಶಕ್ತಿಯು ಮರು ವಸಂತಕಾಲದ ವೇಳೆಗೆ ಬರುತ್ತದೆ, ಎಂಬುದಾಗಿ ಎಲ್ಲರೂ ಹೇಳಿಕೊಳ್ಳುತ್ತಿದ್ದರು, ಆದರೆ ತಾಯಿಯಾದರೋ “ಹಾಗಾಗದು” ಎಂದು ಉತ್ತರಿಸುತ್ತಿದ್ದಳು. “ಅವನು (Alf) ನನ್ನ ತೋಳ್ತೆಕ್ಕೆಯಲ್ಲಿ ಕಳೆದ ರಾತ್ರಿ ನಿದ್ದೆ ಹೋದನು. ವಿಲಿಯಮ್ (ಅವಳ ಪತಿ) ಮತ್ತು ಆಲ್ಫ್ (Alf) ಅವನ ಜತೆಗೆ ಬೇಕಾಗಿದ್ದಾನೆ. ಉಳಿದ ಇಬ್ಬರು ಮಕ್ಕಳನ್ನು ನಾನು ನೋಡಿಕೊಳ್ಳಬಹುದು” ಎಂದು ಹೇಳಿದನೆಂದು ಸಾರಿದ್ದಳು. ಆದರೆ ಅದು ಬರೀ ಅವಳ ಸ್ವಪ್ನವೆಂದೂ, ಹಾಗೆ ತನ್ನ ಪತಿಯನ್ನು ಕನಸಿನಲ್ಲಿ ಕಂಡುದು ಸ್ವಾಭಾವಿಕವೆಂದೂ, ತನ್ನ ಮಗನ ದೇಹಾಸ್ವಾಸ್ಥ್ಯದ ಚಿಂತೆಯು ಸ್ವಪ್ನದ ಮೂಲಕ ತೋರ್ಪಡಿಸಿತೆಂದೂ ಇತರರು ಅವಳಿಗೆ ವಿವರಿಸಿದ್ದರೂ ಅದು ಪ್ರಯೋಜನವಾಗಲಿಲ್ಲ. ಅವಳು ತನ್ನ ಪತಿಯನ್ನು ಕಂಡುದು ಬರೀ ಊಹೆ ಎಂದೂ ಅವನು ಅವಳೊಡನೆ ಮಾತಾಡಿದ್ದರ

ನಿಸಿದ್ದು ಬರೀ ಭ್ರಮೆಯಿಂದೂ ಇತರರು ಎಷ್ಟು ಹೇಳಿದರೂ ಅವಳು ಒಪ್ಪು ತ್ತಿಲ್ಲ. ಹೇಗೂ ಮುಂದಿನ ಮಾರ್ಚ್ ತಿಂಗಳಲ್ಲಿ ಅವಳ ತೊಳಲುಗಳು ಬರಿದಾಗಿ ಅವಳ ಮಗುವಿನ (Alf) ಮೊಂಬತ್ತಿಯ ಮೇಲೆ ಬರೀ ಒಂದು ಮೋಡದ ರೂಪ ಕಾಣಿಸಿಕೊಂಡಾಗ ಅವಳಿಗೆ ಅದು ಅತ್ಯಾಶ್ಚರ್ಯಕರವಾಗಿ ತೋರಲಿಲ್ಲ.

ಅವನ (ನನ್ನ ತಮ್ಮನ) ಮೃತದೇಹವನ್ನು ಸುಡುವ ಚಿತ್ತೆಗೆ ಒಳಗಿಡುವುದಕ್ಕಿಂತ ಮುಂಚೆ ನನ್ನ ತಂದೆಯವರು ನನ್ನನ್ನು ಅವನನ್ನು ನೋಡಲು ಬಿಟ್ಟರು, ನಾನು ಅವನನ್ನು ಇನ್ನೂ ಅಷ್ಟು ಸುಂದರನಾಗಿ ಅವನ ನಯವಾದ ಹಣೆಯಲ್ಲಿ ಕಪ್ಪು ಚುಕ್ಕೆಯಿಂದ ಕೂಡಿದ್ದವನಾಗಿ ಕಂಡೆನು, ನನ್ನ ಎಳೆಯ ತಮ್ಮನನ್ನು ಮುದ್ದಿಸಲು ಹೇಳಿದಾಗ ಅವನ ಶೀತಲ ದೇಹವು ನನ್ನನ್ನು ರೋಮಾಂಚನಗೊಳಿಸಿತು, ಅದನ್ನು ನಾನು ಅದೇ ಮೊದಲ ಬಾರಿಗೆ ಮುಟ್ಟಿದ್ದಾಗಿದೆ. ಅವನ ಹಣೆಯ ಕಪ್ಪು ಕಲೆಯು ನನ್ನ ಮನಸ್ಸಿನಲ್ಲಿ ಅದೇಕೋ ವಿಚಿತ್ರವಾಗಿ ಉಳಿಯಿತು. ಹಲವು ದಿನಗಳ ನಂತರ ಅದು ನನ್ನ ತಾಯಿಯು ಆ ತನ್ನ ಮಡಿದ ಶಿಶುವನ್ನು ಪ್ರೇಮಾತಿಶಯದಿಂದ ಮುದ್ದಿಸಿದ ಕಾರಣದಿಂದ ಎಂದು ಇತರರಿಂದ ತಿಳಿದೆನು, ಕಡೆ ಬಾರಿಗೆ ಬೀಳ್ಕೊಡುತ್ತಿಂದು ತಾಯಿಯು ತನ್ನ ಶಿಶುವನ್ನು ಮುದ್ದಿಸಿದ್ದೇ ಅದರ ಮುಖವನ್ನು ಕಳಗುಂದಿಸಿದ ಮೊದಲ ಗುರುತಿಗೆ ಕಾರಣವಾಯಿತೆಂದು ಚಿಂತಾಜನಕವಾದ ಊಹೆಯಾಗಿದೆ.

ಭೌತಿಕವಾಗಿ ಮಾತ್ರವಲ್ಲದೆ ಮಾನಸಿಕವಾಗಿಯೂ ಸ್ಮೃತಿಪಟಲದಲ್ಲಿ ಉಳಿದುವುಗಳು ಹೇಗೆ ಪರಿಣಾಮವನ್ನುಂಟು ಮಾಡುತ್ತವೆಂಬುದಕ್ಕೆ ನಾನು ಈ ಕತೆಗಳನ್ನು ಹೇಳುತ್ತಿರುವುದಲ್ಲದೆ ಅವು ಸ್ವಾರಸ್ಯ ವಿಚಾರವೆಂದಾಗಲೀ ಅಸಾಮಾನ್ಯವಾದುವು ಎಂದಾಗಲೀ ಅಲ್ಲ, ಈ ಮಾನಸಿಕ ವಿಷವು ನನ್ನ ಬಾಲ್ಯದ ಒಂದು ಬಾಹ್ಯಾಂತರಂಗಕ್ಕೆ ಎತ್ತಿಕೊಟ್ಟಿತಲ್ಲದೆ ನನ್ನ ಕುಟುಂಬಕ್ಕೆ ಸೇರಿದ್ದವರೂ ನನ್ನಂತೆಯೇ ಇದ್ದರು, ವೈದಿಕ ಗುಣವು ತಾಯ್ತಂದೆಯರಿಂದ ಬರುವುದಾದರೂ ಇಂಥ ಮಾನಸಿಕ ಪರಿಸ್ಥಿತಿಗಳು ಭೌತಿಕರೂಪದ ಒಂದು ಅಂಶವಾಗಿದೆ, ನಮ್ಮ ಕುಟುಂಬದಲ್ಲಿ ಹೇಗೋ ಹಾಗೆಯೇ ಹಲವು (ಐರಿಶ್) ಜನಗಳೂ ಹಲವು ಬಗೆಯ ಭೂತ ಪಿಶಾಚಿಗಳಿವೆಯೆಂಬುದನ್ನು ನಂಬುತ್ತಾರೆ. ಕುಟುಂಬದ ಒಬ್ಬನು ಸಾಯಲಿಕ್ಕಾಗಿದ್ದಾಗ ಒಂದು ಪಿಶಾಚಿಯು ಅವನು ಸಾಯುವುದರ ಸಂಕೇತವಾಗಿ ಅಳುತ್ತಾ ಇತ್ತೆಂಬುದನ್ನು ನನ್ನ ತಾಯಿಯು ನನಗೆ ಹೇಳಿದ್ದಳು. ನಾನು ಶಿಶುವಾಗಿದ್ದಾಗ ನನಗೆ ಆಹಾರಕ್ಕೆ ಕೊಟ್ಟ ಎಲ್ಲಾ ಬಗೆಯ ಹಾವು, ಮೀನು, ಮತ್ತು ಮೋಹಿನಿಯರ ಗೊಂಬೆಗಳು ಯಥಾರ್ಥವಾದುವೆಂದೇ ನಂಬಿದ್ದೆನು. ವೇಷಧಾರಿಗಳು ಮತ್ತು ತಾಂತ್ರಿಕರು

ನನಗೆ ಯಥಾರ್ಥ ಜೀವಿಗಳಾಗಿಯೇ ಕಂಡುಬಂದರು. ಅವರು ಪ್ರದ
ರ್ಶಿಸುತ್ತಿದ್ದ ಸುಂದರ ದೃಶ್ಯಗಳು ನನ್ನಲ್ಲಿ ಮನೋವೇದನೆಯ
ಅಲೆಗಳನ್ನು ಎಬ್ಬಿಸಿವೆ. ಭೂತಗಳಂತೆ ಭಯಾನಕ ವೇಷದಿಂದ
ಕಿರುಚುತ್ತಾ (ಇಂದ್ರಜಾಲಿಕರು ಬಂದಾಗ ನಾನು ತಲೆಮರೆಸಿಕೊಂ
ಡು ತಲೆದಿಂಬದಡಿಯಲ್ಲಿ ಅಡಗಿಕೊಂಡಿರುತ್ತಿದ್ದೆನಲ್ಲದೆ ಅವರು
ಬಹು ಕ್ರೂರವಾಗಿ ಉಪಯೋಗಿಸುತ್ತಿದ್ದ ಶಿಶುವಿನ ಅಳುವನ್ನು ಕೇಳಿ
ನಾನು ನನ್ನ ಬಾಲ್ಯದಲ್ಲಿ ದುಃಖದಿಂದ ತಲಕೆಳಗಾಗುತ್ತಿದ್ದೆನು.
ಆಗ ನಾನು ಕಂಡ ಎಲ್ಲಾ ವಸ್ತುಗಳು ನನಗೆ ಜೀವಂತವಾಗಿ
ಯೇ ಕಂಡುಬಂದುವು. ನಾನು ಮುದ್ದಿಸಿದ ಹೂವು ಮತ್ತು
ನಾನು ಆಡಿಸಿದ್ದ ಚಿಕ್ಕ ಮರಿಗಳಲ್ಲದೆ ಎಲ್ಲಾ ಸುಂದರ ವಸ್ತು
ಗಳೂ ತನ್ನಂತೆಯೇ ಜೀವಂತವಾಗಿವೆಯೆಂದೂ ನನಗೆ ಅತಿ
ಪ್ರಿಯವಾದ ವಸ್ತುಗಳು ನನ್ನ ಆತ್ಮೀಯ ಗೆಳೆಯರೆಂದೂ
ಕಲ್ಪಿಸಿ ಅವುಗಳೊಡನೆ ಕತೆಗಳನ್ನು ಹೇಳಿಕೊಂಡು ಆಡು
ತ್ತಿದ್ದೆನು. ಆದರೆ ಆ ಕನಸಿನ ಕಲ್ಪನೆಯ ಹಿನ್ನೆಲೆಗೆ ಈಗ
ಮಾರ್ಮಿಕ ವಿಚಾರವೂ ಸೇರಿದಾಗ ಅದು ಇನ್ನಷ್ಟು ಗಾಂಭೀ
ರ್ಯವನ್ನು ಪ್ರದರ್ಶಿಸುತ್ತ!

ಅಧ್ಯಾಯ — ೨

ಬಾಲ್ಯ

ಇನ್ನೀಗ ನನ್ನ ತಾಯಿಯ ಬದುಕಿನ ಹೋರಾಟ ಮತ್ತು ತೊಂದರೆಗಳ ಕಾಲವು ಪ್ರಾರಂಭವಾಯಿತು. ಇಲ್ಲಿಯವರೆಗೆ ಅವಳ ದೃಷ್ಟಿಕಾಯನಾದ ರೀತಿಯು ಚೆನ್ನಾಗಿ ಸಂಪಾದನೆಯನ್ನು ಮಾಡುತ್ತಿದ್ದುದರಿಂದ ಆರ್ಥಿಕವಾಗಿ ಅವಳಿಗೆ ತೊಂದರೆಯೂ ಭವಿಷ್ಯದ ವಿಚಾರದಲ್ಲಿ ಕಳವಳವೂ ಇರಲಿಲ್ಲ. ಅವನು ಸಾಯುವಾಗ ತನ್ನ ಹೆಂಡತಿ ಮಕ್ಕಳನ್ನು ಹಣದ ವಿಷಯದಲ್ಲಾದರೂ ಸುರಕ್ಷಿತವಾಗಿರಿಸಿ ಅಗಲುವೆನೆಂದೇ ಅವನು ನಂಬಿದ್ದನು. ಆದರೆ ಪರಿಸ್ಥಿತಿ ಹಾಗಿರಲಿಲ್ಲ. ನನಗೆ ಪೂರ್ತಿ ವಿವರಗಳ ಅರಿವು ಇಲ್ಲದಿದ್ದರೂ ಕೈಯಲ್ಲಿದ್ದ ಸ್ವಲ್ಪ ಹಣವಲ್ಲದೆ ವಿಧವೆ ಮತ್ತು ಮಕ್ಕಳಿಗೆ ಏನೂ ಉಳಿಸಿರಲಿಲ್ಲವೆಂಬುದು ಖಚಿತವಾಯಿತು. ಆಗ ನನ್ನ ತಾಯಿಯು ತಾಳಿದ ನಿರ್ಧಾರವಾದರೋ ಅವಳ ಗತ್ತಿಗೆ ತಕ್ಕಂತೆಯೇ ಇತ್ತು. ಅವಳ ಪತಿಯು ಬಂದಾಗಳಲ್ಲಿ ಇದ್ದರೆ ಅವಳ ಮಗನನ್ನು ನಗರದ ರೀತಿಯಲ್ಲಿ ಓದಿಸಿ ಅನಂತರ ಆ ವಿಸ್ಕರ್ನ್ ಮತ್ತು ಸರ್ ವಿಲ್ಲಿಯಮ್ ಪ್ರಾಟ್ಸ್ ಇವರು ತಮ್ಮ ಪ್ರಭಾವವನ್ನು ಉಪಯೋಗಿಸಿ ಅವನನ್ನು ಮುಂದಕ್ಕೆ ತರಲು ಆಲೋಚಿಸಿದ್ದರು. ಆದರೆ ಆ ಎಳೆ ಬಾಲಕನ ತಾಯಿ ತಂದೆಗಳು ತಮ್ಮ ಮೊದಲನೇ ಮಗನ ಭವಿಷ್ಯತ್ತನ್ನು ಕುರಿತು ಬೇರೊಂದು ರೀತಿಯಲ್ಲಿ ಆಲೋಚಿಸಿದ್ದರು. ಅವನನ್ನು ಸಾರ್ವಜನಿಕ ಶಾಲೆ Public School - ಇದಕ್ಕೆ ಕಳುಹಿಸಿ ಅನಂತರ ವಿಶ್ವವಿದ್ಯಾಲಯದಲ್ಲಿ ಓದಿಸಿ ವಕೀಲ ವೃತ್ತಿಯೊಂದನ್ನು ಹಿಡಿಯಲು ಸಹಕರಿಸುವಂತೆ ತಾಯಿಯೂ, ನ್ಯಾಯ ಶಾಸ್ತ್ರಕ್ಕೆ ಓದಿಸುವಂತೆ ತಂದೆಯೂ ಆಲೋಚಿಸಿದ್ದರು. ತನ್ನ ಮರಣಶಾಸನದಲ್ಲಿ ನನ್ನ ತಂದೆಯು ಹ್ಯಾರಿ (Harry) ಇವನಿಗೆ ಉತ್ತಮ ವಿದ್ಯಾಭ್ಯಾಸವನ್ನೀಯಬೇಕೆಂದು ಆಶಿಸಿದ್ದನಲ್ಲದೆ ಬೇರೇನನ್ನೂ ವ್ಯಕ್ತಪಡಿಸಿರಲಿಲ್ಲ. ಆದರೆ ಅವನ ವಿಧವೆಯಾದರೋ ತನ್ನ ಪತಿಯ ಕಡೇ ದಿನದ ಆಶೆಯನ್ನೀಡೇರಿಸಲು ಕಂಕಣಬದ್ಧಳಾದಳು. ಅವಳ ದೃಷ್ಟಿಯಲ್ಲಿ ಕಟ್ಟದ ರೀತಿಯ ಯೋಗ್ಯ ವಿದ್ಯಾಭ್ಯಾಸವನ್ನು ಕೊಡುವಂತಿದ್ದಿರಲಿಲ್ಲ. ಅಲ್ಲದೆ ತನ್ನ ಮಗನು ವಿಶ್ವವಿದ್ಯಾಲಯದಲ್ಲಿ ಓದಿದ್ದರೆ ಅವಳ ವರಿಷ್ಠ ಅಹಂಭಾವಕ್ಕೆ ಸಮಾಧಾನವಾಗಿದ್ದು. ಸರ್ ವಿಲ್ಲಿಯಮ್ ಇವನ ಕುಟುಂಬಕ್ಕೆ ಸೇರಿದ್ದ ಹೆಂಗಸರು ಈ ವಿಧವೆಯ ತಿಳಿಗೇಡಿತನದ ದರ್ಪವನ್ನು ಖಂಡಿಸಿ ಅವಳೊಡನೆ ತುಂಬಾ ಮಾತಾಡಿದರು. ಆದರೆ ಅವಳು ತಾನು ನಿರ್ಧರಿಸಿದಂತೆಯೇ ಆಗಬೇಕೆಂದು ನಿಶ್ಚೈಸಿದ್ದರಿಂದ ಅವಳ ಮತ್ತು ಇತರರೊಳಗಿನ ಸಂಬಂಧವು ಸ್ವಲ್ಪ

ದೂರವಾಯಿತು, ಪಿಸ್ಟನ್ಸ್ ಮತ್ತು ಸರ್ ವಿಲ್ಲಿಯಮ್ಸ್ ಇವರು ಅವಳ ಅಭಿಪ್ರಾಯಕ್ಕೆ ಪ್ರತಿಕೂಲವಾಗಿ ಹೇಳುತ್ತಿದ್ದರೂ ಅವರು ಅವಳ ಗೆಳೆಯರಾಗಿದ್ದು ಅವಳ ಆ ಸಂಕಷ್ಟಕಾಲದಲ್ಲಿ ಜ್ಞಾನವನ್ನಿತ್ತು ಸಹಕರಿಸಿದರು. ಹೇಗೂ ತುಂಬಾ ಚರ್ಚೆಯನ್ನು ನಡೆಸಿದನಂತರ ತನ್ನ ಮಗನು ನಗರದ ಇತರ ಶಾಲೆಗಳಲ್ಲಿರುವುದಕ್ಕಿಂತ ಕಡಿಮೆ ಶುಲ್ಕವಿರುವ ಹ್ಯಾರೋ (Harrow) ಶಾಲೆಯಲ್ಲಿ ಓದುವಂತೆಯೂ ಅನಂತರ ಅವನ ಆಖೈರು ಶಿಕ್ಷಣವನ್ನು ಕೇಂಬ್ರಿಡ್ಜಿನಲ್ಲಾಗಲೀ ಓಕ್ಸ್‌ಫರ್ಡಿನಲ್ಲಾಗಲೀ ಕಳುಹಿಸಲ್ಪಡಬೇಕೆಂದೂ ನಿರ್ಧರಿಸಿದಳು. ಕೈಯಲ್ಲಿ ಒಂದು ಚಿಕ್ಕಾಸು ಸಹ ಇಲ್ಲದ ಓರ್ವ ವಿಧವೆಯು ತನ್ನ ನಿಶ್ಚಿತವಾದ ಯೋಜನೆಯನ್ನು ಅಕ್ಷರಶಃ ಸಾಧಿಸಿದಳು. ನಮ್ಮ ಪ್ರೇಮದ ಮಾತೆಯ ಕೃಶವಾದ ಚಿಕ್ಕ ಶರೀರದಲ್ಲಿ ಅಡಗಿದ್ದ ದೃಢಚಿತ್ತವು ಬೇರೆಯಾರಲ್ಲೂ ಇರಲಿಲ್ಲ.

ಬಡತನದಲ್ಲಿ ಎಂಬಂತೆ ಕೆಲವು ತಿಂಗಳು ಕಾಲ ನನ್ನ ತಾಯಿಯು ತಂದೆಯ ಮನೆ ಮತ್ತು ಹ್ಯಾರೋ ಸಮೀಪದ ಕ್ಲಾಪಮ್ (Clapham) ನ ರಿಚ್ಮಂಡ್ ಟೆರೇಸ್ ಎಂಬಲ್ಲಿ ನಾವು ವಾಸಿಸಿದ್ದಾಗ ಅವಳು ಒಂದು ದಿನವು ಅಂಗಡಿ ಮನೆಯತ್ತ ಕೋಣೆಗಳನ್ನು ತಾತ್ಕಾಲಿಕವಾಗಿ ಬಾಡಿಗೆ ತೆಗೆದುಕೊಂಡು ವಾಸಕ್ಕೆ ಬೇಕಾಗಿದ್ದ ಒಂದು ಮನೆಯನ್ನು ಹುಡುಕುತ್ತಾ ಇದ್ದಳು. ಆ ದಿನವು ಅಂಗಡಿಯವನು ಅತ್ಯುತ್ಸಾಹದ ಓರ್ವ ವ್ಯಕ್ತಿಯಾಗಿದ್ದು ಮಾತಾಡುವಾಗ ದೊಡ್ಡ ಶಬ್ದಗಳನ್ನು ಉಪಯೋಗಿಸುವುದು ಅವನಿಗೆ ಸಂತೋಷಕರವಾದ ಹವ್ಯಾಸವಾಗಿತ್ತು. ಎಳೆ ವಿಧವೆಗೆ ಸಹಕರಿಸಿದ್ದ ಅವನು "ಚೆನ್ನಾಗಿ ಕಷ್ಟಪಟ್ಟರೆ ನಿಜವಾಗಿಯೂ ಅಭಿವೃದ್ಧಿಯನ್ನು ಹೊಂದಬಹುದು," ಎಂಬುದಾಗಿ ನನ್ನ ತಾಯಿಗೆ ಹೇಳಿದ್ದನ್ನು ಅವಳು ಅತ್ತೀ ವಿನೋದದಿಂದ ಹೇಳುತ್ತಿದ್ದಳು. "ನನ್ನನ್ನು ನೋಡಿ. ನಾನು ಕೈಯಲ್ಲಿ ಒಂದು ಪೈಸೆ ಸಹ ಇಲ್ಲದ ಬಡ ಹುಡುಗನಾಗಿ ಇದ್ದೆನು, ಈಗ ನಾನು ಅನುಕೂಲಸ್ಥನಾಗಿ ನನ್ನ "ಸಬರ್ಬನ್" (suburban) ಮನೆಯಲ್ಲಿ ವಾಸಿಸುತ್ತಿದ್ದೇನೆ," ಎಂದು ಅವನು ಹೆಮ್ಮೆಯಿಂದ ಹೇಳಿದನು. ಆ ಮನೆಯಾದರೋ ಆ ದಾರಿಗಾಗಿ ನಾವು ಹಲವು ಬಾರಿ ಹೋಗುತ್ತಿದ್ದಾಗ ಕಾಣುತ್ತಿದ್ದ ಒಂದು ವಿನೋದಾಸ್ಪದವಾದ ಕಟ್ಟಡವಾಗಿತ್ತು. "ಅದೋ ಅಲ್ಲಿ --- ಇವನ "ಸಬರ್ಬನ್ ವಿಲ್ಲಾ" ಎಂದು ನಗುತ್ತಾ ಒಬ್ಬನು ಹೇಳುತ್ತಿದ್ದನು. ಅದನ್ನು ಕುರಿತು ಹಿರಿಯರು ನಗೆಯಾಗ ನನಗೆ "ಸಬರ್ಬನ್" ಎಂಬುದಕ್ಕೆ ಅವನು ಉಪಯೋಗಿಸುತ್ತಿದ್ದ "ಸಬ್‌ಮೇರಿನ್" ಎಂಬ ಆ ಶಬ್ದಗಳ ಅರ್ಥಭೇದವು ಆ ನಿಷ್ಕಪಟ ದಿನಗಳ ಮಾತುಗಾರನಿಗೆ ಗೊತ್ತಿರುವುದಾದರೂ ನಾನು ಅವರೆಲ್ಲರ ರೀತಿ ತುಂಬಾ ನಗುತ್ತಿದ್ದೆನು.

ನನ್ನ ತಾಯಿಗೆ ಅವಳ ಸ್ವಂತ ಮಗನ ಪ್ರಾಯಕ್ಕೆ ಸಮನಾದ ಒಬ್ಬ ಹುಡುಗನನ್ನು ವಿದ್ಯಾಭ್ಯಾಸಕ್ಕೆಂದು ಅವನ ತಾಯಿ

ತಂದೆಗಳು ಅವಳ ಆಶ್ರಯದಲ್ಲಿ ಬೆಳೆದುದು ತುಂಬಾ ಪ್ರಶಸ್ತವಾಯಿತು, ಆದುದರಿಂದ ಇವರ ಹುಡುಗರಿಗೆ ಅವರ ಶಾಲಾವಾರದಲ್ಲಿ ಬೋಧನೆಯನ್ನು ಕೊಡಲು ಸರ್ವ ಅವಕಾಶವನ್ನು ಸ್ವಂತವಾಗಿ ನೋಡಿಕೊಳ್ಳಲು ಅವಳಿಗೆ ಅನುಕೂಲವಾಯಿತು, ಆ ಬೋಧಕನ ಒಂದು ಕಾಲು ಕಾರ್ಕ (cork) ಮರದ ತೊಗಟೆಯಿಂದ ಮಾಡಿದ್ದು ಅವನು ನಮ್ಮ ಮನೆಯಲ್ಲಿ ಪ್ರಾರ್ಥನೆಗೆಂದು ಮೊಣಕಾಲೂರಿದಾಗ ಅದು ನೆಟ್ಟನೆ ಹಿಂದಿದ್ದ ನನಗೆ ತಾಗುತ್ತಿದ್ದುದು ತುಂಬಾ ತೊಂದರೆಗೀಡಾಗಿಸುತ್ತ. ಅವನ ಈ ವರ್ತನೆಯು ಅನಾದರಣೀಯವೂ ಅಯೋಗ್ಯವೂ ಆಗಿದ್ದರೂ ನಾನು ಯಾವಾಗಲೂ ಅದರ ಅನುಕರಣೆಯನ್ನು ಮಾಡಲು ಇಚ್ಛಿಸಿದ್ದೆನು, ಒಂದು ವರ್ಷದನಂತರ ನನ್ನ ತಾಯಿಯು ಅವಳ ಕಾರ್ಯಕ್ರಮಕ್ಕೆ ಯೋಗ್ಯವಾದುದೆಂದು ಭಾವಿಸಿದ್ದ ಬೇರೊಂದು ಮನೆಯನ್ನು ಕಂಡುಹಿಡಿದಳು, ಪ್ಯಾರಿಸ್ ಶಾಲೆಯ ಮುಖ್ಯೋಪಾಧ್ಯಾಯರ ಅನುಮತಿಯಿಂದ ಇನ್ನು ಕೆಲವು ಹುಡುಗರಿಗೆ ತನ್ನ ಮನೆಯಲ್ಲಿ ಆಶ್ರಯವನ್ನಿತ್ತು ಆ ಮೂಲಕ ತನ್ನ ಮಗನ ವಿದ್ಯೆಗೆ ಸಾಕಷ್ಟು ಕೆಲ ಖ್ಯಾತಿಯನ್ನು ದ್ರವ್ಯರೂಪದಲ್ಲಿ ಪಡೆಯಲು ಅವಳು ಇಚ್ಛಿಸಿದ್ದಳು, ನಿಶ್ಚಯಳೂ ದೃಢಚಿತ್ತಳೂ ಆದ ಈ ಚಿಕ್ಕ ಹೆಂಗಸಿನ ಸಾಹಸಕ್ಕೆ ಮಾರುಹೋದ ಮುಖ್ಯೋಪಾಧ್ಯಾಯರು ಡಾ. ವಘಾನ್ (Dr. Vaughan) ಇವರು ಅಂದಿನಿಂದ ಅವಳ ಮಿತ್ರರೂ ಸಹಕಾರಿಯೂ ಆದರಲ್ಲದೆ ಅವರ ಮತ್ತು ಅವರ ಪತ್ನಿಯ ಸಹಾನುಭೂತಿಯಿಂದ ನನ್ನ ತಾಯಿಯ ಹಲವು ಕಾರ್ಯಭಾರಗಳು ಸುಖಪ್ರದವಾದುವು. ಅವಳು ತನ್ನ ಮನೆಯಲ್ಲಿ ಶಾಲಾ ಹುಡುಗರನ್ನು ಇರಿಸಿಕೊಳ್ಳಲು ಒಂದು ಶರತ್ತನ್ನು ಹಾಕಿದ್ದನು, ಅದೇನೆಂದರೆ ಹುಡುಗರಿಗೆ ತಮ್ಮ ನಿವಾಸ ಸ್ಥಾನದಲ್ಲಿ ಬೋಧಕನೊಬ್ಬನಿಲ್ಲದ ತೊಂದರೆ ಉಂಟಾಗದಂತೆ ಅವಳು ಆ ಶಾಲೆಯ ಅಧ್ಯಾಪಕನೊಬ್ಬನನ್ನು ಮನೆಯಲ್ಲಿ ಇರಿಸಿಕೊಳ್ಳಬೇಕು. ಇದಕ್ಕೆ ಅವಳು [illegible] ಒಪ್ಪಿದಳು, ಈ ವ್ಯವಸ್ಥೆಯು ಅವಳ ಮಗನು ಶಾಲೆಯ ವಿದ್ಯಾಭ್ಯಾಸವನ್ನು ಮುಗಿಸಿ ಕೇಂಬ್ರಿಡ್ಜಿಗೆ ಹೋಗುವವರೆಗೂ ಹತ್ತು ವರ್ಷಕಾಲ ನಡೆಯಿತು,

ಅವಳು ವಾಸಿಸಿದ್ದ ಮನೆಯು ಈಗ ಇಲ್ಲ. ಆ ಸ್ಥಳದಲ್ಲಿ ಒಂದು ಅನಾಕರ್ಷಕ ಇಟ್ಟಿಗೆಯ ಮನೆಯು ಈಗ ಇದೆ. ನಾವಿದ್ದ ಮನೆ ಬಿಳಿ ಹಳೆಯದೂ ಬೆಳ್ಳಗಿನದ್ದೂ, ಮುಂಭಾಗದಲ್ಲಿ ಗುಲಾಬಿ ಹೂ ಬಳ್ಳಿ, ಹಿಂಭಾಗದಲ್ಲಿ ಐವಿ (Ivy) ಬಳ್ಳಿಯಿಂದ ಆವರಿಸಲ್ಪಟ್ಟುದೂ ಆಗಿದ್ದು ಅದು ಶಾಲೆಯ ಮತ್ತು ಗುಡಿಯ ಮಧ್ಯೆ ಇದ್ದ ಪ್ಯಾರಿಸ್ ಗುಡ್ಡದ ಮೇಲೆ ನಿಂತಿತ್ತು. ಒಂದು ಕಾಲದಲ್ಲಿ ಆ ಮನೆಯು ಸಮೀಪದ ಗುಡಿಗೆ ಸೇರಿದ್ದ ಮನೆ

ಬೆಂಡನನ ನಿವಾಸ ಸ್ವರ್ಗವಾಗಿತ್ತು. ಆದರೆ ನಾನು ಕೆಲಸಮಾಡುತ್ತಿ
ದ್ದ ಸ್ಥಳಕ್ಕೂ ಆ ಮನೆಗೂ ಬಹು ದೂರವೆಂದು ಅದನ್ನು ಬಿಟ್ಟುಬಿಟ್ಟನು,
ಮನೆಯಲ್ಲಿ ಎದುರು ಕೋಣೆಯು ಹಳೆ ಮಾದರಿಯ ಅಗ್ನಿಕುಂಡ ಮತ್ತು
ಇಕ್ಕಟ್ಟಾದ ಬಾಗಿಲಿಂದ ಕೂಡಿದ್ದುದು ನನಗೆ ತುಂಬಾ ಅಸಮಾಧಾನಕ
ರವಾಗಿತ್ತು. ಅತ್ತಿತ್ತ ನೋಡಿದರೆ ಹೊರಗೆ ಉದ್ಯಾನದಲ್ಲಿ, ಗುಡ್ಡದ ದಾರಿ
ಯಲ್ಲಿ ಆಹ್ಲಾದಕರವಾದ ಗಾಳಿಮರ, ಹಣ್ಣಿನ ಮರ, ಹೂವಿನ ಗಿಡಗಳ ಪೊ
ದರುಗಳ ಡೆಯಲ್ಲಿ ಸೂರ್ಯಕಿರಣಗಳಿಗೆ ಮೈಯೊಡ್ಡಿ ಆಡುವ ಮನೆ
ಯ ಹಕ್ಕಿಗಳಿಂದ ಹಾಯ್ದಾಗ ಆ ಇಕ್ಕಟ್ಟಾದ ಬಾಗಿಲಿನ ಮೊಳೆಗಳು ನನ್ನ
ಹೊಸ ಉಡುಗೆಯನ್ನು ಹರಿದು ಹಾಕುತ್ತಲಿತ್ತು. ನಾನು ಅಲ್ಲಿ ಹತ್ತು ದಿನ
ಇದ್ದು ಒಂದು ಮರವಾದರೂ ಇಲ್ಲ. ಒಂದು ವಿಶಾಲವಾದ ಕೋಣೆಗಳ
ಲಾರೆಲ್ (laurel) ಪೊದರಿನ ಬಳಿ ನನ್ನ ಹೊಸ ನಿವಾಸವಾಗಿತ್ತು
ಅಲ್ಲಿ ನನ್ನ ಮಲಗುವ ಕೋಣೆ, ಕೂರುವ ಕೋಣೆ, ಓದುವ ಕೊಠಡಿ,
ಆಹಾರ ಪದಾರ್ಥಗಳ ಉಗ್ರಾಣಗಳೆಲ್ಲ ಇದ್ದುವು. ಸುತ್ತಮುತ್ತಲಿನ ಹ
ಣ್ಣಿನ ಮರಗಳಿಂದ ನಾನು ಯಥೇಷ್ಟವಾಗಿ ಕೊಯ್ಯುತ್ತಿದ್ದ ಹಣ್ಣುಗಳೇ
ಆ ಉಗ್ರಾಣವನ್ನು ತುಂಬುತ್ತಿದ್ದುವು, ಅಲ್ಲಿ ಓದುತ್ತಾ ಕುಳಿತಿರುತ್ತಿದ್ದ
ನಾನು ತಾಸುಗಟ್ಟಲೆ ನನ್ನ ಮೆಚ್ಚಿನ ಗ್ರಂಥಗಳನ್ನು, ಅದರಲ್ಲೂ ಮಿ
ಲ್ಟನ್ ಕವಿಯ "Paradise Lost"– ಇದನ್ನು ಓದುತ್ತಾ ಕುಳಿತಿ
ರುತ್ತಿದ್ದೆನು. ಮಿಲ್ಟನನ ಇಂತಹ ಸಾಲುಗಳಲ್ಲಿದ್ದ "ಸಿಂಹಾಸನ
ಗಳು, ಆಕ್ರಮಣಗಳು, ಚಕ್ರ ರಾಜ್ಯಗಳು, ಸರ್ವಪ್ರಭಾವಗಳು, ಅಧಿ
ಕಾರಗಳು," ಮುಂತಾದ್ದನ್ನು ಮಧುರವಾದ ಧ್ವನಿಯಲ್ಲಿ ಹಾಡುತ್ತಿ
ದ್ದಾಗ ಸುತ್ತಮುತ್ತಲೂ ಮರದ ಕೊಂಬೆಗಳಲ್ಲಿ ಜೀಕಾಡುತ್ತಾ
ಚಿಲಿಪಿಲಿಗುಟ್ಟುತ್ತಾ ಇರುತ್ತಿದ್ದ ಹಕ್ಕಿಗಳು ತಕ್ಷಣ ಬೆಚ್ಚಿಬಿದ್ದು ಗರಿ
ಗೆದರುತ್ತಿದ್ದುವು. ನಾನು ಸೈತಾನನಂತೆ ನಟಿಸಿ ಆ ಕಾವ್ಯದ ವೀರ
ಪಾತ್ರಗಳು ಹೇಳಿದ ಮಾತುಗಳನ್ನು ದೊಡ್ಡ ಧ್ವನಿಯಲ್ಲಿ ಹೇಳುತ್ತಾ
ಮಿಲ್ಟನ್ ಕವಿಯ ಸ್ವರ್ಗ ಮತ್ತು ನರಕದಲ್ಲಿ ಸೈತಾನನ ಸಹಚ
ರನಾಗಿ ಮತ್ತು "ಮಗ" ಗೇಬ್ರಿಯಲ್ ಮತ್ತು ಅಬ್ಡೀಲ್ ಇವರೊಡನೆ
ತಾಸುಗಟ್ಟಲೆಯಂತೆ ಕಾಲ ಕಳೆಯುತ್ತಿದ್ದೆನು, ನನ್ನ ಸ್ಥಾನವು ಸಾಮಾ
ನ್ಯದಲ್ಲಿತ್ತು; ಅದರ ಬದಲಾಗಿ ಉದ್ಯಾನಕ್ಕೆ ಹಾಯುವ ಜಾಗದಲ್ಲಿಯಂ
ತೆ ಒಂದು ಕಿಟಕಿಯ ಬಳಿ ಮತ್ತು ಮಳೆಗೆ ಜಗುಲಿ ಒಂದಿ
ಯೇ ಸಿಕ್ಕಿಯಾಗಿರುತ್ತಿತ್ತು. ಅದರ ಸುತ್ತ ಹಾರುವ ಮಿಂಚು ಬೀ
ಳುವ ಎಲ್ಲಾ ಪಕ್ಷಿಗಳ ಗುಲಾಬಿ ಹೂಗಳ ಬಳ್ಳಿಯಿಂದ ಆವೃತ
ವಾಗಿದ್ದ ಅಂದಾ ಗುಂಡಗಿನ ಉದ್ಯಾನವು ಆ ಹಳೇ ದೇವಸ್ಥಾನದ
ಸುತ್ತ ಎಂದೂ ಇರಲಿಲ್ಲ. ಆ ಕಿಟಕಿಯ ಕೋಣೆಯಲ್ಲಿ ಒಂದು
ಚಿಕ್ಕ ಬೀಗಗಳಿಲ್ಲದ ಮನೆಯುತ್ತು. ಅದರ ಸುತ್ತಲೂ ಬೇಲಿಗೆ
ಒಂದೆಡೆ ಇದ್ದ ಪ್ರವೇಶದ್ವಾರದ ಕದವು ಯಾವಾಗಲೂ ತೆರೆದಿರುತ್ತಿತ್ತು.

ಅಲ್ಲಿ ನಿಂತು ದೂರಕ್ಕೆ ದೃಷ್ಟಿಯನ್ನು ಹಾಯಿಸಿದರೆ ಇಂಗ್ಲೆಂಡಿನ ಅನಿಂದ್ಯ ಸುಂದರ ದೃಶ್ಯವೆತ್ತೆಂದು ಎಲ್ಲರನ್ನೂ ಆಹ್ಲಾದಗೊಳಿಸುತ್ತಿತ್ತು. ನಾನು ನಿಂತ ಸ್ಥಳದಿಂದ ಕೆಳಗೆ ನೇರವಾಗಿ ಗುಡ್ಡದ ದರಿಯು ಮರಗಿಡ ಗಾಡುಗಳಿಂದ ಕೂಡಿ ಹಸುರಾದ ದೃಶ್ಯವು ದಿಗಂತದಾಚೆ ವಿಂಡ್ಸರ್ ಕೋಟೆಯ ಗೋಪುರಗಳನ್ನು ದಾಟಿ ರಮಣೀಯವಾಗಿ ಕಾಣಿಸುವುದು, ಬೈರನ್ ಕವಿಯು ಗೋರಿಯಿರುವಲ್ಲಿಂದ ಅವನು ಮನದಣಿಯ ನೋಡುತ್ತಾ ಇದ್ದ ಆ ಸುಂದರ ದೃಶ್ಯವು ಇದೇ ಆಗಿತ್ತು. ಅದನ್ನು ಕುರಿತು ಬೈರನ್ನನು ಹೀಗೆ ಉದ್ಗರಿಸಿರುವನು!—

ದಿಟ್ಟಿಸಿದೆ ದಿನವೆಲ್ಲ ಈ ಚೆಲುವನು ಹೀರುತ
ಸರಜೀಗಿಡದಡಿಯ ನೆರಳಿ ಹರಗಿದೆನೊ ಗೋರಿಯಲ್ಲಿ!
ಅಲೆದಾಡಿದೆನೊ ಗುಡ್ಡದ ಮಗ್ಗುಲಲಿ ನಿಂದು
ಹರಗಲಿಹ ಕೆಂಗಿರಣನ ಕೆಂಜರಿಯನೀಕ್ಷಿಸುತ!

ನನ್ನ ಓದುಗನೇ, ಹ್ಯಾರೋ (Harrow)ವಿಗೆ ನೀನೆಂದಾದರೂ ಹೋದರೆ ಆ ಹಳೆ ಉದ್ಯಾನಕ್ಕೆ ಹೋಗಲು ಅನುಮತಿಯನ್ನು ಪಡೆದು ಅನಂತರ ನೀನು ಆ ಕಟ್ಟೆಯ ಮೇಲಿನ ಚಿಕ್ಕ ಪ್ರವೇಶ ದ್ವಾರದೆಡೆ ನಿಂತು ನಿನ್ನ ಕಣ್ಣ ಮುಂದೆ ಬಿಚ್ಚಿತೋರುವ ಆ ನಿಸರ್ಗ ಸೌಂದರ್ಯದ ಆನಂದವನ್ನು ಪಡೆಯಲು ಪ್ರಯತ್ನಿಸು.

ನನ್ನ ಎಂಟನೇ ಹುಟ್ಟುದಿನದಂದು ನಾವು ಆ ಮನೆಯನ್ನು ಸೇರಿದೆವು, ಅಲ್ಲಿಂದನಂತರ ತುಂಬಾ ದುಃಖಿಸುತ್ತಾ ತ್ಯಜಿಸಿದ ಮತ್ತು ಯಾವಾಗಲೂ ಬಹು ಸಂತೋಷದಿಂದ ಹಿಂದಿರುಗಿದ ಆ ಗೃಹವು ಹನ್ನೊಂದು ವರ್ಷಗಳ ಕಾಲ ನನ್ನ ನೆಚ್ಚಿನ ವಾಸಸ್ಥಾನವಾಗಿತ್ತು.

ಹೀಗೂ ಅದರ ನಂತರವೇ ನಾನು ಮೊದಲ ಬಾರಿಗೆ ನನ್ನ ತಾಯಿಯನ್ನು ಬಿಟ್ಟು ಶಾಲೆಮನೆಯ ಹಿಂದಿನ ಕುಟುಂಬವನ್ನು ಸಂದರ್ಶಿಸಲೆಂದು ಹೋದೆನು. ಆ ಮನೆಯ ಹೊರಕೋಣೆಯಲ್ಲಿ ಹರ್ಷ ಚಿಕ್ಕ ಹುಡುಗಿಯಾದ ನಾನು ನಗುತ್ತಾ ನಲಿನಲಿಯುತ್ತಾ ಕುಳಿತಿದ್ದುದನ್ನು ಕಂಡು ದುಃಖವೊಗೆದ ಕೆಂಪು ಮುಖದ ಯಾರೊಬ್ಬರು ತನ್ನ ಮುಖವನ್ನು ಸೌಮ್ಯದಿಂದಿಟ್ಟು ನನ್ನನ್ನು ಹತ್ತಿರಕ್ಕೆ ಕರೆದು ತನ್ನ ತೊಡೆಯ ಮೇಲೆ ಕುಳ್ಳಿರಿಸಿ ನನ್ನೊಡನೆ ಮಾತಾಡತೊಡಗಿದಳು, ಮರುದಿನ ಆ ನಮ್ಮ ನೆಚ್ಚಿನ ಗೆಳ್ತಿಯು ನನ್ನ ತಾಯಿಯನ್ನು ನೋಡಲಿಕ್ಕೆಂದು ಬಂದಳು, ಆಗ ರಜೆಯಲ್ಲಿ ಅವಳ ಮನೆಗೆ ಬರಲಿರುವ ಸೋದರನ ಮಗಳ ಜೊತೆಯಲ್ಲಿ ನನ್ನನ್ನು ವಿದ್ಯಾಭ್ಯಾಸಕ್ಕೆಂದು ಕಳುಹಲು ಅದರ ಜವಾಬ್ದಾರಿಯನ್ನೆಲ್ಲ ತಾನೇ ವಹಿಸುವೆನೆಂದೂ ಅವಳು ತಾಯಿಯೊಡನೆ ಹೇಳಿದಳು. ನನ್ನನ್ನು ನನ್ನ ತಾಯಿಯು ಆವರೆಗೂ ಬೇರೆ ಬಿಟ್ಟಿದ್ದೇ ಇಲ್ಲವಾದ್ದರಿಂದ ಪ್ರಾರಂಭದಲ್ಲಿ ಅವಳು ಆ

ಮುದುಕಿಯು ಮಾತನ್ನು ಕೇಳದೆಯೇ ಇದ್ದಳು. ತಾಯಿಯಲ್ಲಿ ನನಗಿದ್ದ ಪ್ರೀತಿಯು ಮೂರ್ತಿಭೂತವಾದರೆ ಅವಳಿಗೆ ನನ್ನಲ್ಲಿದ್ದ ಪ್ರೀತಿಯು ನಿಶ್ಚಲ ಶ್ರದ್ಧೆಯೆಂಬಂತೆ ಇದ್ದಿತು.

(ಹಲವು ವರ್ಷಗಳ ವರೆಗೆ ನಿರ್ದಾಕ್ಷಿಣ್ಯವಾದ ಪಾಡಿಗೆ ಸಿಲ್ಕಿಗಾದ ನನ್ನ ಅದೃಷ್ಟವಿಲ್ಲದ ಚಿಕ್ಕ ಕತೆಯು ನನ್ನ ತಾಯಿಯಲ್ಲಿದ್ದ ಕರುಣಾಪ್ರೀತಿಗೆ ಸಂಕೇತವಾಗಿದ್ದುದು ಇನ್ನೂ ನನ್ನ ಮನಸ್ಸಿನಿಂದ ಅಳಿಯು ಅಲ್ಲ. ಯಾವಾಗಲೂ ತಾಯಿಯು ಹಿಂದೆಯೇ ಎತ್ತಲು ಉದ್ಧಾರಕನು, ಅವಳೊಂದಿಗೆನೆಯೇ ಕೂರುವುದು, ನಿಲ್ಲುವುದು ಅದೇ ಕಾಯುತ್ತ ಇದ್ದಾಗಲೂ ತಾಯಿಯು ಮಮತೆಯಿಂದ ಮುತ್ತಿ "ಎಲೆ ಶಿಶುವೆ, ನೀನು ತಾಯಿಯನ್ನು ಹೀಗೆ ಹಿಂಬಾಲಿಸುತ್ತಾ ಇದ್ದರೆ ನಾನು ನಿನ್ನನ್ನು ನನ್ನ ಹೊರ ಅಂಗಿಯ ತುದಿಗೆ ಕಟ್ಟಿಕೊಳ್ಳುವುದೇ ಹಿತವಲ್ಲವೆ?" ಎಂಬುದಾಗಿ ಹೇಳಿದಾಗ ನಾನು ಚಿಕ್ಕವನೆ, "ಹಾಗೆಯೇ ಮಾಡು; ಕಟ್ಟು ಬಿದ್ದವಾಗಿರಲಿ", ಎಂದು ಹೇಳಿದೆನು. ಹೀಗೂ ನೋವು ತಾಪತ್ರಯಂಗಳೊಳೂ ತುಂಡರಿಸಲಾರದ ಆ ನಮ್ಮ ಪ್ರೇಮಪೂರ್ವದ ಕಟ್ಟನ್ನು ಮೃತ್ಯುವು ತುಂಡರಿಸುವ ವರೆಗೂ ಅಂತೆಯೇ ಇತ್ತು.)

ಹೀಗೂ ನನ್ನ ವಿದ್ಯೆಯನ್ನು ಸರಿಯಾಗಿ ಯಾವ ರೀತಿಗೂ ದೊರೆಯಲಾರದ ದತ್ತಿ ಅನುಕೂಲತೆಗಳಿಂದೊಂದೂ ನಾನು ಇತರ ಹುಡುಗರಷ್ಟೇ ಚುರುಕಾದ ಕ್ರಿಕೆಟ್ ಆಟಗಾರನೂ ಗುಡ್ಡ ಮತ್ತು ಮರಗಳನ್ನೇರುವುದರಲ್ಲಿ ಸಾಕಷ್ಟು ಆಗಿದ್ದರೂ ಮನೆ ತುಂಬಾ ಇರುವ ಹುಡುಗರ ಜತೆಯಲ್ಲಿ ನನ್ನ ಬೆಳವಣಿಗೆಯು ಸರಿಯಾಗಿರಲಾರದೆಂದೂ ಹೇಳಿದಾಗ್ಯೂ ನನ್ನ ತಾಯಿಯು ಯಾವ ಅನಾನುಕೂಲತೆಗಳಿಗೊಳಗಾಗದೆ ಮತ್ತು ಉತ್ತಮವಾದ ವಿದ್ಯೆಯನ್ನು ಪಡೆಯಲು ನನ್ನನ್ನು ಆ ಹೊಸ ಗೆಳತಿಯೊಂದಿಗೆ ಶಾಲೆಗೆ ಕಳುಹಿಸಲು ಒಪ್ಪಿದಳು. ಅಲ್ಲದೆ ಕುಮಾರಿ ಮೇರಿಯಟ್ (Miss Maryatt) ಇವಳು ಶಾಲೆಯಲ್ಲಿ ಮನೆಗೆ ಬಂದಾಗ ಅವಳೊಡನೆ ನನ್ನನ್ನು ಕಳುಹಿಸುವಂತೆಯೂ ತೀರ್ಮಾನಿಸಲಾಯಿತು.

ಪ್ರಸಿದ್ಧ ಕಾದಂಬರೀಕಾರ ಕ್ಯಾಪ್ಟನ್ ಮೇರ್ಯಟ್ (Capt. Marryat) ಇವನ ಪ್ರೀತಿಗೆ ಪಾತ್ರಳಾದ ಅವನ ಸಹೋದರಿ ಕುಮಾರಿ ಮೇರ್ಯಟ್ ಇವಳು ಹುಡುಗಾರ್ತಿ ಅವಿವಾಹಿತೆ ಮಹಿಳೆಯಾಗಿದ್ದಳು. ಮೃತನಾದ ಅವಳ ಅಣ್ಣನು ಸಾಯುತ್ತಿದ್ದಾಗ ಅವಳು ಅವನನ್ನು ಉಪಚರಿಸಿದಳು. ಅನಂತರ ಅವಳು ತನ್ನ ತಾಯಿಯೊಡನೆ ವಿಂಬಲ್ಡನ್ ಪಾರ್ಕಿನಲ್ಲಿ ವಾಸಿಸಿದ್ದಳು. ಅವಳ ತಾಯಿ ಮೃತಳಾದನಂತರ ತಾನು ಬೇರೆಯವರಿಗೆ ಉಪಯೋಗವಾಗುವಂಥ ಕೆಲಸವೇನಾದರೂ ಮಾಡಬಹುದೋ ಎಂದು ಸುತ್ತೆಲ್ಲ ನೋಡುತ್ತಿದ್ದಾಗ ಅವಳ ಓರ್ವ ಸಹೋದರನಿಗೆ ಹಲವು ಹೆಣ್ಣು ಮಕ್ಕಳಿದ್ದಾಗ ಅವರಲ್ಲಿ

ಒಬ್ಬಳನ್ನು ತಾನು ಸಾಕಿ ಚೆನ್ನಾಗಿ ವಿದ್ಯಾಭ್ಯಾಸವನ್ನು ಮಾಡಿಸುವೆನೆಂದು ಕರೆದುಕೊಂಡಳು. ಹ್ಯಾರೋಗೆ ಬಂದ ಸದವಕಾಶದೊಡನೆ ಸುದ್ದಿಯು ನನ್ನನ್ನು ಅವಳತ್ತ ಕೊಂಡುಹೋಗಲು ನನ್ನನ್ನು ತುಂಬಾ ಪ್ರೇರಿಸಿದ್ದ ಅವಳು ಬಹಳೇ ಹುಡುಗಿಯರನ್ನು ಸಾಕುವುದಕ್ಕಿಂತ ಹುಡುಗರನ್ನು ಸಾಕುವೆನೆಂದು ಅವಳು ನನ್ನ ತಾಯಿಯೊಡನೆ ಹೇಳಿದಳು.

ಕುಮಾರಿ ಮೇರ್ಯಾಟಗೆ ಸಾಕುವನ್ನು ಹೇಳುವುದರಲ್ಲಿ ವಿಶೇಷ ಕೌಶಲ್ಯವಿದ್ದುದರೊಡನೆ ಆ ಕೆಲಸದಲ್ಲಿ ಅವಳಿಗೆ ತುಂಬಾ ಅಭಿರುಚಿಯೂ ಇದ್ದಿತು. ಕಾಲದಿಂದ ಕಾಲಕ್ಕೆ ಅವಳು ನಮ್ಮ ಕೂಟಕ್ಕೆ ಒಬ್ಬ ಹುಡುಗನನ್ನು ಅಥವಾ ಹುಡುಗಿಯನ್ನು ಎಂಬಂತೆ ಸೇರಿಸುತ್ತಲೂ ಇದ್ದಳು. ಪ್ರಾರಂಭದಲ್ಲಿ ಎಮಿ ಮೇರ್ಯಾಟ್ ಮತ್ತು ನನ್ನೊಡನೆ ಚಿಕ್ಕ ಚಿಕ್ಕ ಹುಡುಗರು ಇದ್ದರು. ಹಲವು ಮಕ್ಕಳಿದ್ದ ಬಡ ಕ್ರೈಸ್ತಗುರುವಿನ ಮಗ ವಾಲ್ಟರ್ ಹೋಪ್ಕಿನ್ಸ್ ಇವನನ್ನು ಕೆಲವು ವರ್ಷ ಚೆನ್ನಾಗಿ ತರಬೇತುಗೊಳಿಸಿ ಅನಂತರ ಗ್ರಾಮರ್ ವಿದ್ಯಾಭ್ಯಾಸಕ್ಕೆಂದು ಕಳುಹಿಸಿದಳು. ಅವಳು ಪ್ರೀತಿಯಿಂದ ಕರೆಯುತ್ತಿದ್ದ 'ಅವಳ ಮಕ್ಕಳನ್ನು" ಒಂದು ನಿಶ್ಚಿತ ಧ್ಯೇಯದಿಂದ ಆರಿಸಿಕೊಂಡಿದ್ದಳು. ಪ್ರತಿಯೊಂದು ಕೂಸು ಸೌಮ್ಯತೆಯಿಂದ ಹುಟ್ಟಬೇಕು; ದಕ್ಷತೆಯಿಂದ ತರಬೇತು ಹೊಂದಬೇಕು ಮತ್ತು ಅಂಥ ಸನ್ನಿವೇಶದಲ್ಲಿ ಉದಾರತೆಯಿಂದ ನೀಡಿದ ವಿದ್ಯೆಯು ಅವನಿಗೆ ಪ್ರಯೋಜನವಾಗಬೇಕಲ್ಲದೆ ಅವನ ತಂದೆತಾಯಿಗಳಿಗೂ ಸ್ವಲ್ಪಮಟ್ಟಿಗೆ ಆಧಾರವಾಗಿ ಸಹಕಾರಿಯಾಗಬೇಕು. ಯಾರು ಹೆಚ್ಚು ಬಡತನದಿಂದ ಬಳಲುತ್ತಿದ್ದರೋ ಅವರಿಗೆ ನೆರವಾಗುವುದೂ ಅವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸಹಾಯವನ್ನು ಮಾಡುವುದೂ ಅವಳಿಗೆ ತುಂಬಾ ಸಂತೋಷಕರವಾದ ಕೆಲಸವಾಗಿತ್ತು. ಅವಳನ್ನು Miss Marryat ಎಂದು ಕರೆದರೆ ಅದು ಹಾಗಾ ತಾತ್ಸಾರ ಮತ್ತು ನಿರ್ಲಕ್ಷ್ಯಕಾರಕವೆಂದು ಅವಳು ಭಾವಿಸಿದ್ದರಿಂದ ನಾವು ಅವಳನ್ನು Auntie ಎಂದು ಕರೆಯುತ್ತಿದ್ದೆವು. ಸಂಗೀತವೊಂದಲ್ಲದೆ ಇತರ ವಿಷಯಗಳನ್ನೆಲ್ಲ ಅವಳೇ ನಮಗೆ ಬೋಧಿಸಿದಳು. ಇತಿಹಾಸ, ಇಂಗ್ಲಿಷ್, ಫ್ರೆಂಚ್, ಅನಂತರ ಜರ್ಮನ್ ಭಾಷೆಗಳನ್ನು ಜೋರಾಗಿ ಓದುವುದನ್ನು ಕಲಿಯುತ್ತಿದ್ದ ಬಡ ಅಧ್ಯಾಪಕನನ್ನು ಅವಳು ನೇಮಿಸಿದಳು, ಉಳಿದ ಎಲ್ಲಾ ವಿಷಯಗಳಲ್ಲಿ ಸಂಪೂರ್ಣವಾಗಿ ನಮ್ಮನ್ನು ತರಬೇತುಗೊಳಿಸುವುದರಲ್ಲಿ ಅವಳೇ ಶ್ರಮವಹಿಸಿದ್ದಳು. ನನ್ನಲ್ಲಿ ಇಂದಿಗೂ ಇರುವ ಮತ್ತು ನನಗೆ ಸ್ಫೂರ್ತಿಯಿತ್ತ ಜ್ಞಾನ ಮತ್ತು ಜ್ಞಾನ ತೃಷೆಗೆ ಅವಳು ಎಷ್ಟು ಜವಾಬ್ದಾರಳಾಗಿದ್ದಳೆಂಬುದನ್ನು ನನಗೆ ವರ್ಣಿಸಲು ಅಸಾಧ್ಯವಾಗಿದೆ.

ಆವಳ ಬೋಧನಾ ಕ್ರಮವು ಚಿಕ್ಕ ಮಕ್ಕಳನ್ನು ತರಬೇತು ಗೊಳಿಸುವವರಿಗೂ ಮತ್ತು ಈ ಕ್ರಮದ ಅನುಭವವನ್ನು ತಿಳಿಯುವ ಪತ್ರಕರಿಗೂ ತುಂಬಾ ಸ್ವಾರಸ್ಯವಿರಬಹುದು. ಮೊದಲನೇದಾಗಿ ಚಿಕ್ಕ ಮಗುವಿನ ತಲೆನೋವಿಗೆ ಕಾರಣವಾದ ಪದಗಳ ಅಕ್ಷರ ಜೋಡಣೆ (spelling) ಮತ್ತು ಇಂಗ್ಲೀಷ್ ವ್ಯಾಕರಣವನ್ನು ಉಪಯೋಗಿಸಿದ್ದೇ ಇಲ್ಲ. ಆದರೆ ನಾವು ತಿರುಗಾಡುತ್ತಾ ಇದ್ದಾಗ ಕಂಡ ವಸ್ತುಗಳನ್ನು ಕುರಿತು ಬರೆಯುತ್ತಿದ್ದೆವು. ನಾವು ಓದಿದ ಕತೆಗಳನ್ನು ಪುನಃ ಹೇಳುತ್ತಿದ್ದೆವು. ಮಕ್ಕಳು ಆ ಕೃತಿಗಳನ್ನು ಅವರೇ ಪುನಃ ಓದಿ ಹೇಳುವರು. ಪದ, ಅಕ್ಷರ, ವ್ಯಾಕರಣ, ಶೈಲಿ, ಮತ್ತು ಸ್ವರಭೇದಗಳನ್ನೆಲ್ಲ ತಿದ್ದುವರು. ಅವನ್ನು ವಾಕ್ಯವೊಂದನ್ನು ದೊಡ್ಡ ಸ್ವರದಿಂದ ಓದಿ ಅದರ ಅರ್ಥ ವಿಸ್ತಾರಗಳನ್ನು ವಿವರಿಸುವುದಲ್ಲದೆ ಅದರ ನಿರೀಕ್ಷಣೆ ಮತ್ತು ಉಚ್ಚಾರಣೆಯಲ್ಲಿರುವ ತಪ್ಪುಗಳನ್ನು ಸರಿಪಡಿಸುವರು. ಒಂದು ದಿವಸಕ್ಕೆ ಹಿಂದಿನ ಕೃತಿಗಳನ್ನು ತಿದ್ದಿ ನಿರೀಕ್ಷಣಾ ಭಾವವನ್ನು ಬೆಳೆಸುವ ಅಭ್ಯಾಸವನ್ನಿಡುವರು. ಸ್ಲೇಟನ್ನು ಹಿಡಿದುಕೊಂಡು ಚಿಕ್ಕ ಮಗುವೊಂದು "ಓ ಪ್ರಿಯಳೆ, (Oh, dear) ನನಗೆ ಹೇಳಲಿಕ್ಕೆ ಏನೂ ಇಲ್ಲ" ಎಂದು ಹೇಳುವುದು. ಆಗ Auntie Merryat ಇವರು, "ನಿನ್ನೆ ನೀನು ತಿರುಗಾಡಲಿಕ್ಕೆ ಹೋಗಲಿಲ್ಲವೆ?" ಎಂಬುದಾಗಿ ಕೇಳುವರು. "ಹೌದು ಹೋಗಿದ್ದೆ; ಆದರೆ ಅದನ್ನು ಕುರಿತು ಹೇಳಲಿಕ್ಕೆ ಏನೂ ಇಲ್ಲ," ಎಂಬುದಾಗಿ ಮಗುವು ಉತ್ತರಿಸುವುದು. "ಹೇಳಲಿಕ್ಕೆ ಏನೂ ಇಲ್ಲ? ಒಂದು ಗಂಟೆ ಕಾಲ ಬೀದಿಯಲ್ಲಿ ತಿರುಗಾಡಿ ಏನನ್ನೂ ನೋಡಲಿಲ್ಲವೆ? ಎಲ್ಲಿ, ಕಣ್ಣಿಲ್ಲದ ಹುಡುಗಿಯೆ! ಈ ದಿನ ನಿನ್ನ ಕಣ್ಣುಗಳನ್ನು ಸರಿಯಾಗಿ ಉಪಯೋಗಿಸಬೇಕು," ಹೀಗೆ ಹೇಳಿ ಕಡೆಗೆ ಅಕ್ಷರ ಜೋಡಣೆಯನ್ನು ಕುರಿತು ಸ್ವಾರಸ್ಯವಾಗಿ ಹೇಳಲು ಎಲ್ಲರೂ ಇಚ್ಛಿಸಿದ್ದ ಒಂದು "ಪಾಠ" ಇತ್ತು. ಒಂದೇ ರೀತಿಯಲ್ಲಿ ಉಚ್ಚರಿಸಲ್ಪಡುವ ಮತ್ತು ಬೇರೆ ಬೇರೆ ಅಕ್ಷರಗಳಿಂದ ಬರೆಯುವ ಶಬ್ದಗಳ ಪಟ್ಟಿಯನ್ನು ಬರೆಯುತ್ತಿದ್ದೆವು, "Knight - Night", "Last - Lost" ಇತ್ಯಾದಿಯಾಗಿ ಬರೆದಾಗ ಯಾವ ಮಗುವೂ ಹೆಚ್ಚು ಸಂಖ್ಯೆಯಲ್ಲಿ ಅಂಥಾ ಶಬ್ದಗಳ ಪಟ್ಟಿಯನ್ನು ನಿರ್ಮಿಸುತ್ತೋ ಅದರ ಸಂತೋಷಕ್ಕೆ ಪಾರವೇ ಇರಲಿಲ್ಲ. ಜರ್ಮನ್ನನ್ನು ಓದಲಿಕ್ಕೆ ಪ್ರಾರಂಭಿಸಿದಂದು Schiller ಇವನ Wilhem Tell ಇದನ್ನು ಓದಿದೆವು, ಹಾಗೆ ಓದುವಾಗ ನಿಕ್ಕದ ಕ್ರಿಯಾಪದಗಳನ್ನು ನಾವು ನೋಡಿ ಬರೆಯಬೇಕಾಗಿತ್ತು. ಕಲಿಯಲು ಯೋಗ್ಯವಾದ ಹಲವು ವಿಷಯಗಳನ್ನು ಬಾಯಿಪಾಠ ಮಾಡುತ್ತಿದ್ದೆವು, ಕೆಲವು ಸೋಮಾರಿಗಳಾದ ಅಧ್ಯಾಪಕರು ಮಾಡುವಂತೆ ಸ್ವಾರಸ್ಯವಿಲ್ಲದ ಪ್ರಶ್ನೋತ್ತರ ಅಭ್ಯಾಸಗಳನ್ನು ನಮಗೆ

ಕೊಡುತ್ತಿದ್ದೇ ಇಲ್ಲ. ಇತರರು ಕೆಲಸಮಾಡುವಾಗ, ಹುಡುಗಿಯರು ಮತ್ತು ಹುಡುಗರು ಸೂಜಿಯನ್ನು ಉಪಯೋಗಿಸಲು ಕಲಿಯಬೇಕಾಗಿ ಒಬ್ಬ ಮಂಗನ ಚರಿತ್ರೆ ಹಾಡನ್ನು ಎಲ್ಲರಿಗೂ ಕೇಳುವಂತೆ ಓದುವನು. ಒಂದು ದಿನ ಒಬ್ಬ ಚಿಕ್ಕ ಹುಡುಗನು ಕೇವಲ ತುಚ್ಛಭಾವದಿಂದ "ಇದು (ಸೂಜಿಯನ್ನು ಉಪಯೋಗಿಸುವುದು) ಹುಡುಗಿಯರದ್ದು," ಎಂದು ಹೇಳಿದನು. "ಆದು ನಿನ್ನ ಬಟ್ಟೆಗೆ ಗುಂಡಿಯನ್ನು ಹೊಲಿಸಬೇಕಾದರೆ ಒಂದು ಮಗು ಒಬ್ಬ ಹುಡುಗಿಯ ಹಿಂದೆ ಓಡುವಂತೆ," ಎಂಬುದಾಗಿ Auntie ಹೇಳಿದಳು. ಬಹುರಾಷ್ಟ್ರೀಯ ಭೂಪಟವನ್ನು ಬಿಡಿಸಿ ಅದಕ್ಕೆ ರಂಗನ್ನು ಬಳಿದು ಭೂಗೋಳಶಾಸ್ತ್ರವನ್ನು ಕಲಿಸುತ್ತಿದ್ದಳು. ಚಿಕ್ಕ ಚೀಲಗಳಿಗೆ ಆ ದೇಶದ ತುಂಬಾ ಸಂತೋಷವನ್ನು ಉಂಟುಮಾಡುವಂಥದಾಗಿತ್ತು. ಬೇರೆ ಬೇರೆ ದೇಶಗಳ ರೀತಿಯ ಚಿತ್ರಗಳನ್ನು ಬೇರೆ ಬೇರೆ ಖಂಡಗಳಲ್ಲಿ ಅಂಟಿಸುತ್ತ ಕಡೆಗೆ ಅವುಗಳನ್ನು ಎಲ್ಲಿ ಯಾವ ಖಂಡದಲ್ಲಿ ಇಡಬೇಕೆಂದು ಅಲ್ಲಿ ಇಡಿಸುವ ಕ್ರಮವು ಒಂದು ಆಟದಂತೆಯೇ ಇತ್ತು. ನಾನು ಆಗ ದೊಡ್ಡ ಸಾಮ್ರಾಜ್ಯ (empire) ಗಳಲ್ಲಿ ಆಸಕ್ತಿಯನ್ನಿಟ್ಟಿದ್ದೆನು. ರಷ್ಯದ ನಕ್ಷೆಯನ್ನು ಇತರ ಭೂಖಂಡದೊಳಗಿಟ್ಟು ಅದರ ಎಷ್ಟು ಸ್ಥಳವನ್ನು ಅದು ಆಕ್ರಮಿಸುತ್ತದೆಯೆಂದು ನೋಡುವುದರಲ್ಲಿ ನಾನು ಉತ್ಸುಕಳಾಗಿರುತ್ತಿದ್ದೆನು.

ವ್ಯಾಕರಣವನ್ನು ನಾವು ಕಲಿತಿದ್ದರೆ ಅದು ಬರೀ ಲ್ಯಾಟಿನ್ ಭಾಷೆಯ ವ್ಯಾಕರಣ ಮಾತ್ರ! ಅದನ್ನು ಸಹ ಬರವಣಿಗೆಯಲ್ಲಿ ಹೇಗೆ ಅದರ ಉಪಯೋಗವೆಂಬುದನ್ನು ನೋಡಿ ಅದನ್ನು ಅನುಸರಿಸಿ ವ್ಯಾಕರಣ ನಿಯಮಗಳನ್ನು ಕಲಿಯುತ್ತಿದ್ದೆವು, ತಮಗೆ ತಿಳಿಯದ್ದನ್ನು ಮಕ್ಕಳು ಬಾಯಿಪಾಠ ಮಾಡಿ ಕಡೆಗೆ ಎಲ್ಲಾ ತಿಳಿದಿದ್ದೇವೆಯೆಂದು ಭಾವಿಸಿಕೊಳ್ಳುತ್ತಿದ್ದುದು Auntieಗೆ ತುಂಬಾ ಕಳವಳವನ್ನುಂಟು ಮಾಡುತ್ತಿತ್ತು. "ಆನಿಯೇ, ಈ ಹೇಳಿಕೆಯ ಅರ್ಥವೇನು?" ಎಂದು ಅವಳು ನನ್ನನ್ನು ಕೇಳಿದಳು. ಅದನ್ನು ವಿವರಿಸಲು ಸಾಕಷ್ಟು ಪ್ರಯತ್ನಿಸಿ ಕಡೆಗೆ "ಹೋ Auntie, ಅದು ನನ್ನ ತಲೆಯಲ್ಲಿದೆ; ನನಗೆ ಗೊತ್ತಿದೆ; ಆದರೆ ನನಗೆ ಅದನ್ನು ವಿವರಿಸಲು ಸಾಧ್ಯವಿಲ್ಲ," ಎಂದೆನ್ನುತ್ತಿದ್ದೆನು. "ಹಾಗಾದರೆ ಆನಿಯೇ, ನಿನ್ನ ತಲೆಯಲ್ಲಿರುವುದು ನಿನಗೆ ಗೊತ್ತಿಲ್ಲವೆಂದಾಯಿತು. ಗೊತ್ತಿದ್ದಿದ್ದರೆ ಅದನ್ನು ನನ್ನ ತಲೆಗೆ ಹಾಕುವಂತೆ ನೀನು ವಿವರಿಸುತ್ತಿದ್ದಿ," ಎಂಬುದಾಗಿ Auntie ಬಳಿ ಹೇಳುವಳು. ಹೀಗೆ ಭಾವನೆ ಪ್ರತಿಪಾದನೆಗಳಿಲ್ಲ ವ್ಯಕ್ತಿಯನ್ನು ಪ್ರಚೋದಿಸುವ ಉತ್ತಮ ಅಭ್ಯಾಸವನ್ನೀಯಲಾಯಿತು. ಲ್ಯಾಟಿನ್ ವ್ಯಾಕ

ರಣವು ಇತರ ಭಾಷಾ ವ್ಯಾಕರಣಗಳಿಗಿಂತ ಸ್ಪಷ್ಟವಿದ್ದು ಅದು ಇತರ ಆಧುನಿಕ ಭಾಷೆಗಳಿಗೆ ತಳಹದಿಯಾಗಿರುವುದರಿಂದ ಅದನ್ನು ನಮಗೆ ನಮ್ಮ ಬಾಲ್ಯದಲ್ಲಿ ಕಲಿಸಲಾಯಿತು.

ಡಿವಾನ್ (Devon) ಜಿಲ್ಲೆಯ ಸಮುದ್ರದಲ್ಲಿ ಚಾರ್ಮತ್‌ನ (Charmouth) ಸಮೀಪದ ಡಾರ್ಚೆಸ್ಟರಿನಲ್ಲಿ ಥರ್ನ್‌ಹಿಲ್ಲ್ ಎಂಬ ಸುಂದರ ಸ್ಥಳವನ್ನು ಕುಮಾರಿ ಮೇರ್ಕ್ಯಟ್ ಇವಳು ನಡೆಸಿದ್ದಳು. ಆ ಜಿಲ್ಲೆಯ ಉತ್ತಮ ಚಟುವಟಿಕೆಗಳ ಕೇಂದ್ರದಂತಿದ್ದ ಅಲ್ಲಿ ಅದು ವರ್ಷಗಳ ಕಾಲ ಅವಳು ವಾಸವಿದ್ದಳು. ಅವಳು ನಡೆಸುತ್ತಿದ್ದ ಶಾಲೆಗೆ ಸೇರಲು ತವಕಿಸುತ್ತಿದ್ದ ಪ್ರಾಯವೇರಿದ ಮಕ್ಕಳಿಗೆ ಆದಿತ್ಯವಾರದ ತರಗತಿ (Sunday Class) ಗಳನ್ನು ತೆರೆದು ಅಲ್ಲಿ ಬೈಬಲ್ ಪಾಠವನ್ನು ಬೋಧಿಸುತ್ತಿದ್ದಳು. ಅವಳು ಬಡಜನರನ್ನು ಸಲಹುತ್ತಾ ಅವರಿಗೆ ಸಹಾಯವನ್ನೀಯುತ್ತಾ ತನ್ನ ಸ್ವಂತ ಆಹಾರ ಪದಾರ್ಥಗಳನ್ನು ಕಷ್ಟದಲ್ಲಿರುವವರಿಗೆ ಹಂಚುತ್ತಾ ಇದ್ದಳು. ತನಗೆ ಬೇಡದೇ ಇರುವ ತುಂಡು ಚೂರುಗಳನ್ನು ಇತರರಿಗೆ ಹಂಚದೆ ಉತ್ತಮವಾದುದನ್ನೇ ಇತ್ತಾಗ ಅದು ಅವರ ಕೊರಗಿದ ಹಸಿವನ್ನು ತಣಿಸುತ್ತಿತ್ತು. ಅವಳಲ್ಲಿ ಇದ್ದರೆ ಮಾತ್ರ ಇತರರಿಗೆ ಹಣದ ರೂಪದಲ್ಲಿ ಸಹಾಯವನ್ನೀಯುತ್ತಿದ್ದಳು. ಕಲಿಸಲಿಲ್ಲದೆ ಬಳಲುವವರಿಗೆ ಕಲಿಸುವನ್ನು ಸಂದು ದಿನಕ್ಕಾದರೂ ಒದಗಿಸಲು ಅವಳು ಶ್ರಮಿಸುವಳು. ದಯಾಳುವಾದರೂ ಕಠಿಣವಾದ ದಾಸ್ಯಭಾವ ಮತ್ತು ಕಾಠಿಣ್ಯದಿಂದ ವರ್ತಿಸುವವರಿಗೆ ಉಕ್ಕಿನಂತೆ ಕಠೋರಳೂ ಆಗಿದ್ದ ಅವಳಿಗೆ ಜನರು ಹೆದರಿದ್ದರೂ ಆದರೂ ಪ್ರೀತಿಸಿದ್ದರೂ ಅವಳ ಪ್ರಭಾವವು ಜನತೆಯ ಮೇಲೆ ಅದಕ್ಷಿಣ್ಯವಾಗಿತ್ತು. ಉತ್ಕೃಷ್ಟ ವರ್ಗದ ಮತಬೋಧಕರಲ್ಲಿ ಅವಳು ಶ್ರದ್ಧಾವಂತ ಮತಬೋಧಕಿಯಾಗಿದ್ದಳು. ಆದಿತ್ಯವಾರ ದಿನ ಎಲ್ಲರೂ ತಮ್ಮ ಮನೆಗಳಲ್ಲಿರಬೇಕು, ಆದರೆ ಬೈಬಲನ್ನು ಮಾತ್ರ ಓದಬೇಕೆಂದು ಅವಳು ವಿಧಿಸಿದ್ದರೂ ಮಕ್ಕಳಿಗೆ ಸಂತೋಷವಾಗುವಂತೆ ಅವರನ್ನು ಹಾಡಿಸುವುದೂ ಉದ್ಯಾನದಲ್ಲಿ ಅವರೊಡನೆ ತಿರುಗಾಡುವುದೂ ಇತ್ಯಾದಿ ಕಾರ್ಯಕ್ರಮದಲ್ಲಿ ನಿರತಳಾಗುವಳು. Mayne Reid ಇವನ ಆಸ್ವಾದಕರವಾದ ಕತೆಗಳಿಗಿಂತ ಕಾಡುಜನ ಮತ್ತು ಕಾಡುಪ್ರಾಣಿಗಳ ಮಧ್ಯೆ ತೊಳಲಾಡಿ ಅನೋನ್ಯ ಕಾರ್ಯವನ್ನೆಸಗಿದ ಮೊರಾಟ್ ಮತ್ತು ಲಿವಿಂಗ್‌ಸ್ಟನ್ ಇವರಂತ ಮತಬೋಧಕರ ರೋಮಾಂಚಕಾರಕವಾದ ಕತೆಯನ್ನು ಹೇಳುವಳು. ನಾವು ಅಭ್ಯಾಸಕ್ಕಾಗಿ ಬೈಬಲ್ ಪಾಠ ಹೇಳುತ್ತಾ ಬೈಬಲ್ ಚಿತ್ರಗಳಿಂದ ಬೇರೆ ಬೇರೆ ದೃಶ್ಯಗಳನ್ನು ಗುರುತಿಸುವ Bible Puzzle ಆಟಗಳನ್ನು ಆಡುತ್ತಿದ್ದೆವು. ಕಲಿಯಲು ಇಚ್ಛಿಸುವವರಿಗೆ ಕಲಿಸಲು ಯಾರೂ ಇಲ್ಲದಿದ್ದಾಗ ನಾವು ಅವರಿಗೆ ಪಾಠವನ್ನು ಹೇಳಿ

ಕೊಡದಿದ್ದರೆ ನಾವು ಕಲಿತ ವಿದ್ಯೆಯೇ ನಿಸ್ಸಾರವೆಂದು Auntie ಯವರು ನಮ
ಗೆ ಹೇಳುತ್ತಿದ್ದರು. ಇದರಿಂದ ಆದಿತ್ಯವಾರದ ತರಗತಿಗಳಲ್ಲಿ ನಾವು ಇ
ತರ ಬಡ ಮಕ್ಕಳಿಗೆ ಪಾಠವನ್ನು ಹೇಳುತ್ತಿದ್ದೆವು. ಬಡವರಿಗೆ ಕೊಟ್ಟ
ದ್ದು ಅಮೂಲ್ಯವಾಗಿದ್ದು ಕೊಟ್ಟವರಿಗೂ ಅದರ ಬೆಲೆ ಬರಬೇಕೆಂದು
ನಮಗೆ ಹೇಳಿಕೊಟ್ಟಿದ್ದರಿಂದ ನಾವು ಆದಿತ್ಯವಾರದ ಪಾಠಗಳನ್ನು
ಶನಿವಾರ ದಿನವೇ ಬಹಳ ಎಚ್ಚರಿಕೆಯಿಂದ ತಯಾರಿಸುತ್ತಿದ್ದೆವು. "ನ
ನಗೆ ಪ್ರಯೋಜನವಿಲ್ಲದನ್ನು ನಾನು ದೇವರಿಗೆ ಅರ್ಪಿಸಲೇ?" ಎಂಬ
ಸೂತ್ರವೇ ಅವಳ ಎಲ್ಲಾ ಕಾರ್ಯಕಲಾಪಗಳಲ್ಲಿ ಹಾದಿ ತೋರಿಸುವ
ತತ್ವದ ತಿರುಳಾಗಿತ್ತು. ಸುಮ್ಮನೆ ಇತರ ಬಡ ಮಕ್ಕಳು
ಕಷ್ಟದಲ್ಲಿದ್ದಾಗ ನಾವು ಅಳುತ್ತಾ ಅವಳ ಬಳಿಗೆ ಹೋಗಿ ಆ ಹಸಿದ
ಮಕ್ಕಳಿಗೆ ಏನಾದರೂ ಕೊಡಬಹುದೇ, ಎಂದು ಕೇಳಲು ಅವಳು
ಅಕ್ಕನೇ "ಅವರಿಗೆ ನೀವು ಏನು ಕೊಡುತ್ತೀರಿ?" ಎಂದು ಕೇಳುವಳು.
ಅನಂತರ ನಾವು ಸಕ್ಕರೆಯನ್ನು ಉಪಯೋಗಿಸುವುದನ್ನು ಕಡಿಮೆ
ಮಾಡಿದರೆ ಅದರಿಂದ ವಾರಕ್ಕೆ ಆರು ಕಾಸುಗಳನ್ನು ಉಳಿಸಿ
ಅವರಿಗೆ ಕೊಡಬಹುದೆಂದು ಹೇಳುವಳು. ಇತರರ ಹಿತಕ್ಕಾಗಿ
ಸ್ವತಃ ಕಷ್ಟಪಟ್ಟು ಸಹಕರಿಸುವುದಕ್ಕಿಂತ ಬೇರಾವ ಉತ್ತಮ
ಪಾಠವನ್ನು ಮಕ್ಕಳಿಗೆ ಕಲಿಸಬಹುದೆಂಬುದೇ ನನ್ನಲ್ಲಿ ಉಳಿದಿ
ದ್ದಂಥಾ ಸಂದೇಹವಾಗಿದೆ.

ಪ್ರತಿದಿನ ನಮ್ಮ ಶಾಲೆಗಳಲ್ಲಿ ಆದ ಮೇಲೆ ತುಂಬಾ ಆಡುತ್ತಿ
ದ್ದೆವು. ಬಹಳ ದೂರ ತಿರುಗಾಡುತ್ತಾ ಹೋಗುತ್ತಿದ್ದೆವು. ಚಿಕ್ಕ ಮ
ಕ್ಕಳು ತುಂಬಾ ವಿನೋದವನ್ನೀಯುವ ಅವರಿಂದು ತಿಳಿದಿದ್ದ ಚಿ
ತ್ರೋಪಮ ಕುದುರೆಗಳಲ್ಲಿ ಕುಳಿತು ಸವಾರಿ ಮಾಡುತ್ತಿದ್ದೆವು. ನಮ
ಗೆ ಕುದುರೆ ಸವಾರಿ ಕಲಿಸುವವನಲ್ಲಿ ಎಂಥ ವಿಚಿತ್ರ ವರ್ತನೆ
ಯಿದ್ದರೂ ನಾವು ಕುದುರೆಯ ಮೇಲೆ ಹೇಗೆ ಗಟ್ಟಿಯಾಗಿ ಕೂರ
ಬೇಕೆಂಬುದನ್ನು ಕಲಿಸಿಕೊಟ್ಟಿದ್ದನು. ವನಭೋಜನಾರ್ಥವಾಗಿ
ಹೋಗಿ ನಾವು ಹಾರ್ಮಟ್ ಗ್ರಾಮದ ರಸ್ತೆಯಲ್ಲಿ ಸಂತೋಷ
ದಿಂದ ಓಡುತ್ತಿದ್ದೆವು. ನಮ್ಮ ಜೊತೆ Auntie ಯೇ ಹೆ
ಚ್ಚು ಸಂತೋಷದಿಂದಿರುತ್ತಿದ್ದಳು. ಆ ರೀತಿ ಶಾರೀರಿಕವಾಗಿ
ಮತ್ತು ಮಾನಸಿಕವಾಗಿ ಸಂತೃಪ್ತರಾದ ಚಿಕ್ಕ ಮಕ್ಕಳ ತಂಡವು
ಆ ಶಾಂತಮಯ ಗ್ರಾಮದಲ್ಲಿ ಇದ್ದೇ ಇರಲಿಲ್ಲ. ಅದರನಂತರ ರ
ಜಾದಿನಗಳ ಸಂತೋಷ, ತನ್ನ ಪ್ರೀಯ ಮಗಳು ಶಾಲೆಯಲ್ಲಿ ಪಡೆ
ದ ಉತ್ತಮ ಫಲಿತಾಂಶದ ಬಗ್ಗೆ ತಾಯಿಯ ಹೆಮ್ಮೆ, ಅಲ್ಲದೆ
ರಜೆಯಲ್ಲಿ ನನ್ನ ಮನೆಯ ಹಳೆಮನೆ ಮತ್ತು ಉದ್ಯಾನದ
ಪ್ರತಿ ಮೂಲೆಯಲ್ಲೂ ಪರ್ಯಟನೆಯನ್ನು ಮಾಡಿ ಅವುಗಳ ಪರಿ
ಚಯವನ್ನು ಪಡೆಯುವ ಹಂಬಲ!

ಮಗುವಿನ ಕನಸುಗಳು ಲೌಕಿಕ ವಿಚಾರಗಳ ಕಡೆಗೆ ತಿರುಗಿದಾಗ ಅದು ಕಲ್ಪನಾಮಯವಾಗಿಯೂ ಧಾರ್ಮಿಕ ವಿಚಾರಕ್ಕೆ ತಿರುಗಿದಾಗ ರಹಸ್ಯವಾದದೆಡೆಗೂ ತಿರುಗುತ್ತದೆ. ಇವೆಲ್ಲ ಜನರು ಆಲೋಚಿಸಿದಷ್ಟು ಸಾಮಾನ್ಯವಾಗಿಲ್ಲವೆಂದು ನಾನು ನಂಬುತ್ತೇನೆ. ಕೆಲವರ ತಾತ್ವಿಕ ದೃಷ್ಟಿಯು ಮತ್ತು ಹಲವರ ಧಾರ್ಮಿಕ ಶಕ್ತಿಯು ಭೌತಿಕವಾದವನ್ನು ಬಿಟ್ಟು ಕಲ್ಪನೆಯ ರೂಪವಿಲ್ಲದ ಇಂದಿನ ಭೌತಿಕವಾದವು ಚಿಕ್ಕ ಮಕ್ಕಳ ಕೋಮಲವಾದ ಮನಸ್ಸಿನ ಬೆಳವಣಿಗೆಯನ್ನು ಕುಗ್ಗಿಸುತ್ತದೆ. ಮತ್ತು ದೀರ್ಘ ದೃಷ್ಟಿಯಿಂದ ನೋಡಿ ಬರುವುದಾದರೆ ಅವರ ಕಣ್ಣುಗಳನ್ನು ಕಟ್ಟಿದಂತಾಗುತ್ತದೆ. ಪ್ರಾರಂಭದಲ್ಲಿ ಮಗುವಿಗೆ ತಾನು ನೋಡುವುದನ್ನು ಮತ್ತು ಕಲ್ಪಿಸುವುದನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲದಿರುವುದರಿಂದ ಎರಡೂ ಇನ್ನೊಂದರಂತೆಯೇ ನಿಜವಾಗಿಯೂ ಸ್ಪಷ್ಟವಾಗಿಯೂ ವಿಶಿಷ್ಟವಾಗಿಯೂ ಕಾಣುವುದು, ನಿಜವಾದ ಮಕ್ಕಳೊಡನೆ ಆಡುವವರಿಗೆ ಮತ್ತು ಮಾತಾಡುವಂತೆ ಕಲ್ಪನೆಯ ಗೆಳೆಯರೊಡನೆಯೂ ಆಡುತ್ತದೆ, ನಾನು ಮಗು ಆಗಿದ್ದಾಗ ಓರ್ವ ಕಲ್ಪನೆಯ ಮಗುವಿನೊಡನೆ ಆಡಲು ನಾನು ಇಚ್ಛಿಸಿದ್ದೆನು, ಆ ದಿನದಿಂದ ಒಬ್ಬಳೇ ಇರುವುದೆಂಬುದನ್ನು ನಾನು ತಿಳಿದಿರಲಿಲ್ಲ, ಆದರೆ ನಿಷ್ಠುರರಾದ ವ್ಯಕ್ತಿಗಳು ಮತ್ತೆ ಕಾಲು ಹಾಕಿ ನನ್ನ ಕಲ್ಪನಾಮಯ 'ಉದ್ಯಾನವನ್ನು ತುಳಿದು ಕನಸಿನ ಹೂಗಳನ್ನು ಹೊಸಕಿ, ನನ್ನ ಸ್ವಪ್ನ ಲೋಕದ ಗಿರಿಗಳನ್ನು ತಳ್ಳಿಹಾಕಿ ಕಡೆಗೆ ನಾನು ಕೇಳುತ್ತಿದ್ದ ಕನಸಿನ ಇಂಪಾದ ಮತ್ತು ಸಂಗೀತಮಯವಾದ ಧ್ವನಿಯಂತಿಲ್ಲದ ಅವರ ಕಠೋರವಾಣಿಯಲ್ಲಿ "ಕುಮಾರಿ ಆನಿಯೇ, ನೀನು ಇಂಥ ತುಂಟ ಕತೆಗಳನ್ನು ಹೇಳುತ್ತಿರಬಾರದು. ಆ ತುಂಟು ಜೊತೆಗಾರರೆಲ್ಲ ಇತ್ತ ಕೊಡು; ನಿನ್ನ ತಾಯಿಯು ಕಂಡರೆ ನಿನ್ನಲ್ಲಿ ಸಿಟ್ಟುಗೊಳ್ಳುತ್ತ" ಎಂದೆನ್ನುವನು, ಆದರೆ ನನ್ನಲ್ಲಿದ್ದ ಆ ಕಲ್ಪನಾ ವಿಲಾಸವು ಇತರರಿಂದ ಅಡಗಿಸಲಾರದಷ್ಟು ಬಲವಾಗಿತ್ತು. ಅದು ನಾನು ಮೆಚ್ಚಿದ್ದ ಮಾಯಾಕತೆಗಳಲ್ಲೂ (Fairy tales) ನನ್ನನ್ನು ಆವೇಶಗೊಳಿಸುತ್ತಿದ್ದ ಧಾರ್ಮಿಕ ಸಮಾಚಾರಗಳಲ್ಲೂ ಅದಕ್ಕೆ ಬೇಕಾದ ಆಹಾರವನ್ನು ಪಡೆಯುತ್ತಿತ್ತು. ಯಾವಾಗ ನಾನು ಓದಲಿಕ್ಕೆ ತೊಡಗಿದೆನೋ ನಾನು ತಿಳಿಯೆನು, ಪುಸ್ತಕಗಳು ನನಗೆ ಸಂತೋಷವನ್ನು ಒದಗಿಸದಿದ್ದ ದಿನವನ್ನೇ ನಾನು ನೆನೆಯೆನು. ಐದು ವರ್ಷದವಳಾಗಿದ್ದಾಗ ಹೊರಗೆ ಹೋಗಿ ಆಡು ಎಂದು ಹೇಳಿದಾಗ ನಾನು ಆಹ್ಲಾದಕರವಾದ ತೋಟದ ಬಳಿಯಲ್ಲಿ ಅಡಗಿ ಓದನ್ನು ನಿಂತಲ್ಲಿಯೇ ಮೆಟ್ಟಿಗೆ ಸುತ್ತಿ ಹೊರಕ್ಕೆ ಇತರರಿಗೆ ಕಾಣಿಸದಂತೆ ಅದರೊಳಗೆ ನಿಂತು ಓದುತ್ತಿದ್ದೆನು. ಹೀಗೆ ನಾನು ಪುಸ್ತಕದೊಡನೆ

ಕೊಡಿದ್ದ ನನ್ನನ್ನು ನಾನೇ ಮರೆತು ಹೋಗುವ ಅಭ್ಯಾಸವು ಹೆಚ್ಚಿದಾಗ ಯಾರಾದರೂ ನಾನಿದ್ದ ಕೋಣೆಯೊಳಗಿಂದಲೇ ಕರೆದರೂ ಕೇಳಿಸದೆಯೇ ಇರುತ್ತಿದ್ದೆನು. ಯಾವುದೋ ಒಂದು ಗಂಧರ್ವ ಲೋಕದಲ್ಲಿರುವಂತೆ ನಾನು ಮೈಮರೆತಾಗ ಅಪ್ಪಾ ಒಂದು ರಾಕ್ಷಸನು ಸುತ್ತಿದಾಗ ಅವನಿಂದ ರಕ್ಷಿಸಿಕೊಳ್ಳಲು ಎಡೆಮರೆಯಲ್ಲಿ ಸಿಕ್ಕಿಲ್ಲದೇ ಅಡಗಿದಂತೆ ಕೂಡಿಕೊಂಡಾಗ ನಾನು ಚೀರಿದ್ದೆ ಅವಿತುಕೊಂಡಿದ್ದೇನೆಂದು ನನ್ನನ್ನು ಚುಡಾಯಿಸುತ್ತಿದ್ದರು.

ನಾನು ಹತ್ತು ಅಥವಾ ಎಂಟು ವರ್ಷದವಳಿದ್ದಾಗ ತಾತ್ವಿಕವಾಗಿ ತೋರಿದ ಮಕ್ಕಳ ದೃಷ್ಟಾಂತ ಕತೆಗಳನ್ನು Pilgrims' Progress ಮತ್ತು Paradise Lost- ಇವುಗಳನ್ನು ಓದುವ ಸಂದರ್ಭವೊದಗಿತ್ತು. ಅಲ್ಲಿಂದನಂತರ ನನ್ನ ಏಕಾಂತ ಕಲ್ಪನೆಯು ನನ್ನನ್ನು ಈ ವಿಚಿತ್ರ ಲೋಕದತ್ತ ಸಾಗಿಸುತ್ತ, ಕಾಣೆಯಾಗಿದ್ದ ರಾಜಕುಮಾರನ ಗುರಾಣಿಗೆ ಕೆಂಪು ಗುರುತನ್ನು ಹಾಕಿ ತರುಣ ಸಹಾಯಿಗಳು ಅವನನ್ನು ಪತ್ತೆಹಚ್ಚಲೆಂದು ಹೊಂಚಿಹಾಕಿ ಇರಿಸಿದ್ದ, ಯಾತ್ರಿಗಳು ಬೆಂಕಿಯನ್ನು ಕಾಯುತ್ತಾ ಬಂದು ಕೆಲವು ಚಿಕ್ಕ ಮಕ್ಕಳೊಡನೆ ಮಾತಾಡಿ ಅವರಿಗೆ ಮುಂಬರುವ ಅಪಾಯವನ್ನು ಕುರಿತು ಎಚ್ಚರಿಸುತ್ತಾ ಅವರಿಗೆ ರಕ್ಷಾಮಣಿಯನ್ನು ಹಿಡಿಸಿ ಅವರು ಸಿಕ್ಕಿಯುವರಾಗಿರದಿದ್ದರೆ ಆ ಮಣಿಯ ಕಾಂತಿಯನ್ನು ಕಳೆದುಕೊಳ್ಳುವರೆಂದು ಹೇಳಿದ್ದು ಸ್ವಾರಸ್ಯವಾಗಿತ್ತು. ಸಿಕ್ಕಿಯುವವರಾಗಿರು; ತಲೆ ಕೆಡುಕಳಾಗಬೇಡ! ಶುದ್ಧಮನಸ್ಸುಳ್ಳವಳಾಗಿರು, ಊಟದ ವೇಳೆ ಮೇಜಿನ ಮೇಲೆ ಚಪ್ಪದನ್ನು ಅತ್ತಿತ್ತ ಮಾಡಬೇಡವೆಂದು ಹೇಳುವಾಗ ನಾನು ಜೀವಿಸಬೇಕಾಗಿದ್ದ ಲೋಕವು ಅದೆಷ್ಟು ಆಯಾಸ ಹೊಂದಿ ಸ್ವಾರಸ್ಯವಿಲ್ಲದಂತಾಗಿ ಬೇಸರದು ಭಾವಿಸುತ್ತಿದ್ದೆನು. ಕೆಂಪು ಅಡ್ಡಗುರುತು (Red Cross) ಇದ್ದ ರ ಗುರಾಣಿ, ಬಿಳಿ ಕುದುರೆ, ಕಾದಾಡಲು ನಿಜವಾದ ಒಂದು ಯಾತ್ರಿ ಮತ್ತು ಕಾದಾಟದನಂತರ ನನ್ನನ್ನು ನೋಡಿ ಮುಗುಳ್ನಗುವ ಒಬ್ಬ ಸುಂದರ ರಾಜಕುಮಾರನೂ ಇದ್ದುದಾದರೆ ಕ್ಷೇಮವಾಗಿ ಇರುತ್ತಿದ್ದುದು ಅದೆಷ್ಟು ಸುಲಭ! ನನ್ನ ಮನೋಗತವನ್ನು ಕ್ರಿಯಾತ್ಮಕಗೊಳಿಸದೆ ಸ್ವಪ್ನದಲ್ಲಿಯೇ ಬೇರಾದ್ದನ್ನು ಮರೆತು ಆ ಗುಣವನ್ನು ಉದ್ರೇಕಕ್ಕೀಡಾಗಿ ಕಳೆದುಕೊಳ್ಳುವುದಕ್ಕಿಂತ ಕೀಟಕನನ್ನು ಮಾಡಲಾರವರೆಂದು ನೀನು ತಿಳಿದ ಆ ರಕ್ಷೆ ಮತ್ತು ನೆಲಗಳಿಂದ ಕೂಡಿ ಬೆಂಕಿಯನ್ನು ಕಾಯುತ್ತಾ ಬರುವ ಮರೊಡನೆ ಹೋರಾಡುವುದು ಎಷ್ಟು ಉದ್ವೇಗಕರವಾದುದು. ನಾನು ಉದ್ಯಾನದ ಒಬ್ಬ ಸ್ತ್ರೀ (Eve) ಆಗಿದ್ದರೆ ಆ ಮರದ ಸರ್ಪದ ಬಲೆಗೆ ನಾನು ಬೀಳುತ್ತಲೇ ಇರಲಿಲ್ಲ. ಆದರೆ ಒಬ್ಬ ಚಿಕ್ಕ ಹುಡುಗಿಗೆ

ಬಹುಶಃ ಅವುಗಳು ಕಾಯ್ದುಲಾರದ ಗುಲಾಬಿಯಂತೆ ಮೃದುವಾದ ಮತ್ತು ಸುಂದರವಾದ ಹೂವಾಗಿ ನಿರ್ದೇಶಿಸಲ್ಪಡುತ್ತಿದೆ, ಎಂದು ತಿಳಿಸಲು ಆ ಸೌಂದರ್ಯವು ಆ ಮರದಲ್ಲಿದ್ದುದರಿಂದ ಅವುಗಳು ಹೇಗೆ ತಿಳಿಯಬೇಕು! ನನಗೆ ಆಶ್ಚರ್ಯವಾಗುತ್ತಾ ಬಂದಾಗ್ಯೂ ನನ್ನ ಕನಸುಗಳು ಮತ್ತು ಕಲ್ಪನೆಗಳು ಕೇವಲ ಭ್ರಮೆಯಿಂದ ತೋರಿದ್ದರೂ ಅದು ನನ್ನ ನಿಜವಾದ ಉತ್ಸಾಹಕ್ಕೆ ಬಲ ಬೆಳೆದಂತಾಗಿತ್ತು. ನಾನು ಹಿಂದಿನ ಕಾಲದ ಶ್ರೇಷ್ಠ ಹುತಾತ್ಮರ ಕೃತಿಗಳನ್ನು ಓದಿ ದಿವ್ಯಕಾರ್ಯಕ್ಕಾಗಿ ಶ್ರಮಿಸಲು ಸಾಧ್ಯವಿಲ್ಲದ ಈ ಕಾಲದಲ್ಲಿ ಹುಟ್ಟಿದೆನಲ್ಲಾ ಎಂದು ಕೊರಗುತ್ತಿದ್ದೆನು, ಹಲವು ಗಂಟೆಗಳ ಕಾಲ ಹಗಲುಗನಸಿನಲ್ಲಿಯೇ ವೇಳೆಯನ್ನು ಕಳೆಯುತ್ತಾ, ರೋಮಾನಗರದ ಹಿಂದಿನ ನ್ಯಾಯಾಧೀಶರ ಮುಂದೆ ಶಾಮೀನರನ್ ಹಿಂಡಿದ ಜಿಜ್ಞಾಸೆಗಳ ಮುಂದೆ, ಸಿಂಹಗಳ ಮುಂದೆ ಎಸೆಯಲ್ಪಟ್ಟರೂ, ತೀವ್ರ ವೇದನೆಗೊಳಗಾಗುತ್ತ ನರಳಿದಂತೆ, ಮರಸ್ತಂಭದಲ್ಲಿ ಕಟ್ಟಿ ಸುಡಲ್ಪಟ್ಟಂತೆ ಕನಸುಗಳನ್ನು ಅಂತೆಯೇ ಕಣ್ಣು ತೆರೆದು ಕಾಣುತ್ತಿದ್ದೆನು. ಒಂದು ದಿನ ಒಂದು ದೊಡ್ಡ ಜನಸಂದಣಿಗೆ ಒಂದು ಹೊಸ ತತ್ವವನ್ನು ಪ್ರತಿಪಾದಿಸುತ್ತಾ, ಇದುದು ಆಗ ಅವರು ಕೇಳುತ್ತಾ, ಇದು ಕಾಗಿ ಅವರು ಮತಾವಲಂಬಿಗಳಾಗಿ ನಾನೇ ಮತಸ್ಥಾಪಕನಂತಾದುದನ್ನೂ ಕನಸು ಕಂಡೆನು, ಹಾಗಿದ್ದರೂ ಯಾವುದೊಂದು ಮಹತ್ಕಾರ್ಯವನ್ನೆಸಗಲು ಇಲ್ಲದ ಈ ಬಾಳಿಗೆ ನನ್ನನ್ನು ಅತನಃ ತಂದುದನ್ನು ಕಾರಿತಾಗಿ ಯಾವಾಗಲೂ ನಾನು ಆಶ್ಚರ್ಯಪಡುತ್ತಿದ್ದೆನು. ಇಲ್ಲಿ ಮುಖ್ಯತಃ ಕಾದಲು ಸಿಂಹಗಳಿಲ್ಲ ವಿರೋಧಿಸಲು ನ್ಯಾಯಾಧಿಪತಿಗಳಿಲ್ಲ; ಕೆಲವು ಸಾಮಾನ್ಯ ಕೆಲಸಗಳನ್ನು ಮಾತ್ರ ಇಲ್ಲಿ ಮಾಡಲಿಕ್ಕಿದೆ. ಮಹತ್ತಾದ ಕಾರ್ಯಗಳೆಲ್ಲ ಎಂದೋ ನಡೆದು ಹೋಗಿದ್ದು ಈಗ ಒಂದು ಹೊಸ ಮತವನ್ನು ಬೋಧಿಸಲು ಅದರ ಪರದಕ್ಕಾಗಿ ಶ್ರಮಿಸಲು ಅವಕಾಶವಿಲ್ಲದಿದ್ದಾಗ ನಾನು ಹುಟ್ಟಿ ಬಂದುದರ ಬಗ್ಗೆ ನನ್ನಲ್ಲಿ ನಾನು ಸಿಡಿಮಿಡಿಯುತ್ತಿದ್ದೆನು.

ಎಂಟನೇ ವರ್ಷ ಪ್ರಾಯದಿಂದ ನನ್ನ ವಿದ್ಯಾಭ್ಯಾಸವು ನನ್ನ ಗಹನ ಸ್ವಭಾವವನ್ನು ಧಾರ್ಮಿಕ ಮಾರ್ಗದತ್ತ ತಿರುಗಿಸಿತು. ಕುಮಾರಿ ಮೇರೀಸ್ಥುಲು ಅಧೀನದಲ್ಲಿ ನನ್ನ ಮತಾಭಿಮಾನವು ಬೋಧನಾ ಪ್ರವೃತ್ತಿಗೆ ವಾಲಿತು. ಆದರೆ ನಾನು ಹಿಂದಕ್ಕೆ ತಿರುಗಿ ಒಂದು ಗಂಟೆ ಹೊತ್ತಾದರೂ "ಮತಾಂತರ" ಹೊಂದಲು ಆಗದೇ ಇದ್ದುದು ನನ್ನನ್ನು ಬಾಧಿಸುತ್ತಿತ್ತು. ಇತರರು ತಮ್ಮ ಅನುಭವಗಳನ್ನು ಹೇಳುತ್ತಾ ಅದರಲ್ಲುಂಟಾದ ಮನಃಪರಿವರ್ತನೆಯನ್ನು ಕುರಿತು ಹೇಳುವಾಗ ನನಗೆ ಅಂತಹ ಮನೋಗತವಿಲ್ಲವಲ್ಲಾ ಎಂದು ಕೊರಗುತ್ತಿದ್ದೆನು. ಮತಬೋಧಕರು ಹೇಳುತ್ತಿದ್ದ ಪಾಪಕಾರ್ಯದ ಅತಿರೇಕ ಭಾವನೆಯ ಎದುರಿಗೆ ನನ್ನ ಕಲ್ಪನಾಬಿಲಾಷೆಗಳು ಬಹು ಅಲ್ಪವೆಂದು ತಿಳಿದು ನಾನು

ಅವುಗಳಿಂದ ಮುಕ್ತಳಾಗುವೆನೋ ಎಂದು ದುಃಖದಿಂದ ಆಶ್ಚರ್ಯಚಕಿತಳಾಗುತ್ತಿದ್ದೆನು. ನನ್ನನ್ನು ಹಲವು ಬಾರಿ ನನ್ನ ಧರ್ಮನಿಷ್ಠೆಗೆ ಹೊಗಳಿದಾಗ ನನಗೆ ತುಂಬಾ ಅತೃಪ್ತಿಯ ಸಂಕುಚಿತತೆಯು ಉಂಟಾಗುತ್ತಿತ್ತು. ಸ್ವದೇಶಭಾವ ಮತ್ತು ದರ್ಪವು ಒಬ್ಬನ ಧಾರ್ಮಿಕತೆಗಿಂತ ಅವನ ಹೊರತೋರಿಕೆಯಿಂದು ನಾನು ಸಂತ ಜೇಮ್ಸ್ ಇವನ ಸೂಕ್ತಿಗಳಲ್ಲಿ ಇಟ್ಟಿದ್ದಗಿಂತ ನನ್ನ ಬಾಯಿಪಾಠ ಮಾಡುವ ಶಕ್ತಿಯನ್ನು ತೋರಿಸುವುದರಿಂದ ಅವೆಲ್ಲವನ್ನು ಬಾಯಿಪಾಠ ಮಾಡಿದಾಗ, ಮತ್ತು ನನ್ನ ಕಿವಿಗೆ ಇಂಪಾಗಿ ತೋರಿದ ಹಳೆ ಮತ್ತು ಹೊಸ ಒಡಂಬಡಿಕೆ (Old and New Testament) ಗಳನ್ನು ಉಚ್ಚಧ್ವನಿಯಿಂದ ಹಾಡುವುದರಲ್ಲಿ ನಾನು ನನ್ನ ಅಕಲ್ಪನೆಯ ಸಂತೋಷವನ್ನು ಹೊಂದಿದಾಗ್ಯೂ ನನಗೆ ತಿಳಿದು ಬಂತು. ಅದೇ ರೀತಿ ನನ್ನ ಮನಸ್ಸಂತೋಷಕ್ಕಾಗಿ ಮಿಲ್ಟನ್ನಿನ Paradise Lost- ಇದರ ಸಾವಿರಾರು ಪಂಕ್ತಿಗಳನ್ನು ಉದ್ಯಾನವನದಲ್ಲಿರುತ್ತ ಹೇಳುತ್ತಾ, ಅನಂತ ನೀಲಾಕಾಶದತ್ತ ನೋಡುತ್ತಾ, ಇಂಪಾದ ಧ್ವನಿಯನ್ನು ರಾಗದಿಂದ ಹಾಡುತ್ತಾ, ಆ ನೀಲವರ್ಣವನ್ನು ಇಬ್ಬನಿಯಿಂದ ಕಾಣುತ್ತಾ, ಆ ಧ್ವನಿ ಮತ್ತು ಬಣ್ಣಕ್ಕೆ ಬೆರಗಾಗಿ ಮೈಮರೆಯುತ್ತಿದ್ದೆನು, ಬಾಯಿಪಾಠ ಮಾಡುವ ಕೌಶಲ್ಯ ಮತ್ತು ಆಲೋಚಿಸದೆಯೇ ಬಾಯ್ದೆರೆ ವಿದ್ಯಾಪ್ರದರ್ಶನವನ್ನು ಮಾಡುವ ಅಭ್ಯಾಸಬಲದಿಂದ ಇಡೀ ಬೈಬಲ್ ಮತ್ತು ಅದರ ಉತ್ತಮ ಪದಗುಚ್ಛಗಳನ್ನೆಲ್ಲ ಬಾಯಿಪಾಠ ಮಾಡಿದೆನು, ನಾವೆಲ್ಲರೂ ಒಟ್ಟಾಗಿ ನಡೆಸುತ್ತಿದ್ದ ಮತ್ತು ಮತಬೋಧಕರಿಗೆ ಪ್ರಿಯವಾಗಿದ್ದ ಪ್ರಾರ್ಥನಾ ಸಭೆಗಳಲ್ಲಿ ನನ್ನ ಈ ಅಭ್ಯಾಸಬಲವು ನನಗೆ ತುಂಬಾ ಸಹಾಯಕವಾಗಿತ್ತು. ಪರಿಣಾಮವಾಗಿ ನಮ್ಮನ್ನು ಉಚ್ಚಧ್ವನಿಯಲ್ಲಿ ಹಾಡಲು ಹೇಳಿದಾಗ ನಾನು ತುಂಬಾ ನಾಚಿಕೆಯಿಂದ ಕೂಡಿದ್ದವಳಾಗಿದ್ದುದರಿಂದ ನನಗೆ ಹಾಗೆ ಹಾಡುವುದು ಅಸಾಧ್ಯವಾಗಿ ತೋರುತ್ತಿತ್ತು. "ಪ್ರಿಯೆ, ಅನಿಯೆ, ಈಗ ನೀನು ದೇವರೊಡನೆ ಮಾತಾಡುವೆಯೋ?" ಎಂದು ನನಗೆ ಯಾವಾಗ ಹೇಳಿಬಿಡುವರೋ ಎಂದು ಕಾಯುತ್ತಾ ಇದ್ದಾಗ್ಯೂ ನಾನು ಮನಸ್ಸಿನಲ್ಲಿ ತುಂಬಾ ದಿಗಿಲುಗೊಳ್ಳುತ್ತಿದ್ದೆನು. ಆದರೆ ಯಾವಾಗ ನನ್ನ ನಡುಗು ತುಟಿಗಳು ಮಾತುಗಳನ್ನು ಹೊರಗೆಡಹುತ್ತವೋ ನನ್ನ ಸಭಾಕಂಪನವೆಲ್ಲವೂ ಮಾಯವಾಗಿ ವಾಕ್ಯಗಳನ್ನು ಯೋಗ್ಯರೀತಿಯಲ್ಲಿ ಹೊರಹೊಮ್ಮಿಸುವ ಕೌಶಲ್ಯವನ್ನು ತಾಳಿ ನಾನಾಗಿಯೇ ಹೆಮ್ಮೆಗೊಳ್ಳುತ್ತಿದ್ದೆನು. ಪರಿಣಾಮವಾಗಿ ದೇವರು ಮತ್ತು ಕುಮಾರಿ ಮೆಕ್ಕರ್ ಇವರೂ ನಾನು ಪ್ರಾರ್ಥನೆಯನ್ನು ಚೆನ್ನಾಗಿ ಮಾಡಿದ್ದನ್ನು ನೋಡಿರಬಹುದೆಂದು ಭಾವಿಸುತ್ತಿದ್ದೆನು, ಇದು ಖಂಡಿತವಾಗಿಯೂ ಧರ್ಮಾಭಿಮಾನದಿಂದ ಪ್ರಚೋದಕವಾಗಿ ತೊಂದರೆಗೊಳಿಸಿದ ಹೆಮ್ಮೆಯೇನೂ ಅಲ್ಲ, ಹುಟ್ಟುಗಿ ನಾನು ಯಾವಾಗಲೂ ಮೌನವಾಗಿ ತಾಯಿಯೊಡನೆ ನಡೆದಿದ್ದ

ಗೊಳ್ಳುತ್ತಿದ್ದುದರಿಂದ ನನ್ನನ್ನು ಮಾನಸಿಕವಾಗಿ ಆರೋಗ್ಯದಲ್ಲಿರಿಸಿತೋ ಎಂಬಂತೆ ಕಾಲ್ವಿನಿಸ್ಟಿಕ್ (Calvanistic) ನ ಬೋಧನೆಗಳನ್ನು ಹೆಚ್ಚಾಗಿ ನನಗೀಯಲಾಯಿತು. ರಜೆಯಲ್ಲಿ ಸುಮ್ಮನೆ ನಾನು ಮನೆಗೆ ಹೋಗಿದ್ದಾಗ್ಯೂ ಕುಮಾರಿ ಮೇರಿಯಟ್ ಇವರು ನನ್ನ ಶಾಲಾವರದಿಯಲ್ಲಿ ನಾನು "ಉತ್ಸಾಹದ ನಗು ಮುಖ"ದಿಂದ ತೋರಿಸಿಕೊಳ್ಳುತ್ತಿಲ್ಲವೆಂದು ಬರೆದುದನ್ನು ನೋಡಿ ನನ್ನ ತಾಯಿಯು ಆಶ್ಚರ್ಯಪಟ್ಟಳು, ಏಕೆಂದರೆ ನಾನು ಏಕಾಂತವಾಗಿ ಇರಲು ಇಚ್ಛಿಸಿದರೂ ಮನೆಯ ಕಡೆ ಹೆಚ್ಚಾಗಿ ಯೋಚಿಸುತ್ತ ಇದ್ದರೂ ರಜೆಯ ದಿನಗಳಲ್ಲಿ ಇತರ ಮಕ್ಕಳಂತೆಯೂ ಸಂತೋಷ ಭರಿತಳಾಗಿರುತ್ತಿದ್ದೆನು. ಧಾರ್ಮಿಕ ಪ್ರವೃತ್ತಿಯು ನನ್ನ ಸ್ವಭಾವವನ್ನು ವಿಚಾರಪೂರ್ಣವಾಗಿರಿಸಿತು. Paradise Lost - ಇದನ್ನು ಓದುವ ವರೆಗೂ ನರಕಯಾತನೆಯ ವಿಷಯವಾಗಿ ನನ್ನ ಕನಸಿಗೆ ಎಟುಕಿದ್ದೇ ಇಲ್ಲ. ಅದನ್ನು ಓದಿದ ನಂತರ ಅಗ್ನಿಜ್ವಾಲೆ ಕೋಡು, ನಖ, ಪಾದಗಳಿಂದ ಭಯಾನಕವಾಗಿಲ್ಲವೆಂದೂ ಅದು ನಿಜ ಸುಂದರ ಕಪ್ಪು ಛಾಯಾ ದೇವದೂತನೆಂದೂ ತೋರಿದಲ್ಲದೆ ನನ್ನ ಮೆಚ್ಚಿನ ಆರಾಧ್ಯ ರಾಜಕುಮಾರ ಯೇಸುವು ಕಡೆಗಾದರೂ ಅವನನ್ನು ಸೋಲಿಸುವನೆಂದು ನಂಬಿದ್ದೆನು. ನನ್ನನು ಹೆದರಿಕೆಗೊಳಗಾಗಿಸಿದ ವಿಷಯಗಳಲ್ಲಿ ಅಸ್ಪಷ್ಟವಾದುದಾಗಿ ಬೈಬಲು ಹೇಳುವಂತೆ ಅವು ಮಂಚದ ಕೆಳಗಡೆಯೊಳಗಡಗಿದಂತೆ ಇದ್ದವು, ಅವುಗಳನ್ನು ನಾನು ಕಾಣುತ್ತಿದ್ದಿಲ್ಲವಾದರೂ ಅವು ಕೋಣೆಯೊಳಗೇನೇ ಇದ್ದುವು ಎಂದು ತಿಳಿದಿದ್ದ ನನಗೆ ನಾನು ಅದನ್ನು ಇಣಿಕಿ ನೋಡುವೆನೆಂಬ ವಿಚಿತ್ರ ರೀತಿಯ ಹೆದರಿಕೆಯು ಕಾಡಿಸುತ್ತಿತ್ತು. ಆಕಸ್ಮಾತ್ತಾಗಿ ನಾನು ಭೂತ ಕಥೆಗಳನ್ನು ಓದಿದ್ದಾದರೆ ಹಲವು ತಿಂಗಳುಗಳ ವರೆಗೂ ಅವನ್ನೇ ನೆನೆಯುತ್ತ ಬೆಚ್ಚುತ್ತಿದ್ದೆನು. ಸರ್ ವಾಲ್ಟರ್ ಸ್ಕಾಟ್ ಇವನ ಒಂದು ಕತೆಯಲ್ಲಿ ಒಬ್ಬ ಭಯಾನಕ ಮುದುಕಿಯು ಹಾಸಿಗೆಯ ಒಂದು ಕಡೆಯಿಂದ ಪರದೆಯನ್ನೆತ್ತಿ ಸುಮ್ಮನೆ ಎರಗಿ ಕಣ್ಣು ಕೆರಳಿಸಿ ನೋಡುತ್ತಾ ಇರುವ ದೃಶ್ಯವು ನನ್ನನ್ನು ಹಲವು ದಿನಗಳ ವರೆಗೂ ರಾತ್ರಿ ಹಾಸಿಗೆ ಹಿಡಿಯುವ ವೇಳೆಗೆ ಹೆದರಿಸುತ್ತಿತ್ತು. ಇಂದಿಗೂ ಅದು ನನಗೆ ಭಯವನ್ನು ಹುಟ್ಟಿಸುತ್ತದೆ, ಎಂಬುದನ್ನು ನಾನು ಈಗಲೂ ಚೆನ್ನಾಗಿ ನೆನೆಯಬಲ್ಲೆನು.

ಅಧ್ಯಾಯ ೭.

ಯೌವನ.

ಕ್ರಿ.ಶ. 1861ರಲ್ಲಿ ಕುಮಾರಿ ಮೇರ್ಯಾಟ್ಸ್ ಇವರು ಆ ವಸಂತ ಋತುವಿನಲ್ಲಿ ವಿದೇಶ ಯಾತ್ರೆಯನ್ನು ಕೈಕೊಳ್ಳುವ ತನ್ನ ಇಚ್ಛೆಯನ್ನು ಪ್ರಕಟಿಸಿದಾಗ ನನ್ನನ್ನು ಅವರೊಡನೆ ಹೋಗಗೊಡಬೇಕೆಂದು ನನ್ನ ತಾಯಿಯನ್ನು ಕೇಳಿದರು. ಅವರು ಸಾಕಿದ್ದ ಅವರ ಸೋದರಿಯ ಮಗುವೊಂದು ಕಣ್ಣುರಿ ನೋವಿಂದ ನರಳುತ್ತಿದ್ದುದರಿಂದ ಅವನನ್ನು ಪ್ರಸಿದ್ಧ ರಹಸ್ಯ ಶಾಸ್ತ್ರಜ್ಞ ಡಿಸ್ಲೇಟರ್ಫ್ ಇವನ ಬಳಿಯಲ್ಲಿ ಬಿಡಲು ಇಚ್ಛಿಸಿದ್ದರು, ಮಿ. ಮೇರ್ಯಾಟ್ ಇವರ ತಾಯಿಯು ಇತ್ತೀಚೆರಲ್ಲಿ ಮೃತರಾದಾಗ ಯಾತ್ರೆಗೆಂದು ಹೊರಟಿದ್ದ ಮಗಳನ್ನು ಬೇಗನೆ ಹಿಂದಿರುಗುವಂತೆ ತಿಳಿಸಲಾಯಿತು. ಅವರು ಸಾಕಿದ್ದ ಮಗುವಿಗೆ ತನ್ನ ಒಲವಿನ ಸೋದರ ಫ್ರೆಡ್ರಿಕ್ (Capt. Marryat Fredrick) ಇವನ ಹೆಸರನ್ನಿಡಲಾಗಿತ್ತು. ಅವರ ಗೈರುಹಾಜರಿಯಲ್ಲಿ ಅವರ ಬದಲಿಗೆ ನನಗಿಂತ ಕೆಲವು ತಿಂಗಳು ಹಿರಿಯವಳಾಗಿದ್ದ ಎಮ್ಮಾ ಮ್ಯಾನ್ (Emma Mann) ಇವರನ್ನು ನೇಮಿಸಿದ್ದರು. ಇವರಾದರೋ ನನ್ನ ಊಹೆ ಸರಿಯಿದ್ದುದಾದರೆ, ಕ್ರಿಮಿಯಾ (Crimea) ದಲ್ಲಿ ದಾದಿಯಾಗಿದ್ದು ಅಮೋಘ ಸೇವೆ ಸಲ್ಲಿಸಿದ ಕುಮಾರಿ ಸ್ಟೆನ್ಲಿ ಇವರ ಸೋದರಿಯನ್ನು ವಿವಾಹವಾಗಿದ್ದ ಓರ್ವ ಮತಬೋಧಕನ ಮಗಳಾಗಿದ್ದರು.

ನಾವು ಸಂದರ್ಶಿಸುವ ದೇಶಕ್ಕೆ ಹೋಗುವುದಕ್ಕಿಂತ ಮುಂಚೆ ಆ ದೇಶದ ಭಾಷೆಯನ್ನು ಸರಿಯಾಗಿ ತಿಳಿದಿರಬೇಕೆಂದು ಕುಮಾರಿ ಮೇರ್ಯಾಟ್ಸರು ಇಚ್ಛಿಸಿದ್ದರಿಂದ ಕೆಲವು ತಿಂಗಳುಗಳ ಕಾಲ ನಾವು ಜರ್ಮನ್ ಭಾಷೆಯನ್ನು ಕಲಿಯುತ್ತಿದ್ದೆವು. "ನಿಸ್ಸಹಾಯಕ ವಿದೇಶೀಯ" ರಂತೆ ಕಾಣಿಸಿಕೊಳ್ಳದಂತೆ ನಮ್ಮ ಊಟದ ವೇಳೆಗೆ ಫ್ರೆಂಚ್ ಮಾತಾಡಿ ಅಭ್ಯಾಸವನ್ನು ತರಬೇತುಗೊಳಿಸಿದ್ದರು, ನಾವು ಸೇಂಟ್ ಕ್ಯಾಥರಿನ್ ಡಾಕ್ಸ್‌ನಿಂದ ಹಡಗನ್ನು ಹತ್ತಿ ಮರುದಿನ ಎಂಟ್‌ವರ್ಪ್‌ಗೆ ತಲುಪಿದಾಗ ನಾವು ಬಂದರೊಂದಕ್ಕೆ ತಾಗಲಾಡುವ ಹಲವು ಭಾಷೆಗಳ ಮಧ್ಯೆ ಸಿಕ್ಕಿಕೊಂಡೆವು. ನಾವು ಪ್ರಯಾಸಪಟ್ಟು ಕಲಿತ ಶಬ್ದಗಳನ್ನು ಹೆಚ್ಚಿನ ವೇಗತೆಯಿಂದ ಹೇಳುತ್ತಿದ್ದ ಫ್ರೆಂಚ್ ಭಾಷೆಯ ನಾಮಗಳನ್ನು ಉಚ್ಚರಿಸುವ ಜನರ ಕಾರ್ಯಗಳೆಡೆಯಲ್ಲಿ ಅವರಿಗೆ ನಾವಾಡುತ್ತಿದ್ದ ಒಂದೇ ಒಂದು ವಾಕ್ಯವೂ ಅರ್ಥವಾಗುತ್ತಿರಲಿಲ್ಲ. ಆದರೆ ಪ್ರಯಾಣ ಮಾಡುವುದರಲ್ಲಿ ಹೊಸಬಳಲ್ಲದ ಮತ್ತು ಫ್ರೆಂಚ್

ಬಾಕಿಯನ್ನು ಆಡುವುದರಲ್ಲಿ ನಿಸ್ಸೀಮಳಾಗಿದ್ದ ಕುಮಾರಿ ಮೇರ್ಯ್ ಟ್ಯುಲ್ಲಳು ಸಂದರ್ಭಕ್ಕೆ ತಕ್ಕಂತೆ ಜ್ಞಾನೇಯನ್ನು ಉಪಯೋಗಿಸಿ ನಮ್ಮನ್ನು ಸುಂದರ ಹೋಟೇಲಿಗೆ ಕರೆದೊಯ್ಯುತ್ತಿದ್ದಳು. ಮರುದಿನ ಎಕ್ಸಲಾ ಚಾಪೆಲ್‌ನ ಮೂಲಕ ಸೈಬೆನ್ಸ್ಟ್ ಬರ್ಗ್ ಮತ್ತು ರೋಲಂಡ್‌ಸೆಕ್ ಎಂಬ ಸ್ಥಳಗಳು ಮಾಂತ್ರಿಕ ಸ್ವಪ್ನದಂತೆ ಇರುವ ನಿಸರ್ಗರಮಣೀಯ ದೃಶ್ಯದ ನಡುವಲ್ಲಿರುವ ಬಾನ್ (Bonn) ನಗರಕ್ಕೆ ಹೊರಟೆವು. ಬಾನ್‌ನಲ್ಲಿ ನಮ್ಮ ಅನುಭವವು ಹೆಚ್ಚಾಗಿ ತೃಪ್ತಿಕರವಾಗಿರಲಿಲ್ಲ. ಪ್ರಿಯ Auntieಯು ಎಲ್ಲಾ ಯುವಕರನ್ನು ತೋಳಗಳೆಂದು ಭಾವಿಸುತ್ತಾ, ಬೆಳೆಯುವ "ಕುರಿ"ಗಳನ್ನು ಅವುಗಳಿಂದ ದೂರವಿರಿಸಲು ಯತ್ನಿಸುತ್ತಿದ್ದ ಅವಿವಾಹಿತ ಮುದುಕಿಯಾಗಿದ್ದಳು. ಬಾನ್ ಒಂದು ವಿಶ್ವವಿದ್ಯಾಲಯವಿದ್ದ ಪಟ್ಟಣವಾಗಿದ್ದು ಅಲ್ಲಿ ಇಂಗ್ಲಿಷ್ ಅಥವಾ ಇಂಗ್ಲೆಂಡಿಗೆ ಸಂಬಂಧಿಸಿದ ವಸ್ತುಗಳ ಮೇಲೆ ತುಂಬಾ ಅಭಿರುಚಿಯನ್ನು ತೋರಿಸುತ್ತಿದ್ದ ಕಾಲವು ಅದಾಗಿತ್ತು. ಎಮ್ಮಾ (Emma) ಇವಳು ತೆಳ್ಳಾದೇಹದ, ಹಾವಿನಂತೆ ಮೃದುವಾದ ಮತ್ತು ಚೆಲುಗೂದಲಿನ ಆದರ್ಶ ಇಂಗ್ಲಿಷ್ ಯುವತಿಯಾಗಿದ್ದು ಇತರರ ಮನಸ್ಸನ್ನು ನೋಯಿಸದ ತಿಳಿಹಾಸ್ಯದಿಂದ ಕೂಡಿದ್ದವಳಾಗಿದ್ದಳು. ನಾನಾದರೋ ಚಿಕ್ಕದಾಗಿ, ತೆಳ್ಳಗೆ, ಕಪ್ಪುಗೂದಲಿನ ಹುಡುಗಿಯಾಗಿ ಒಮ್ಮೊಮ್ಮೆ ಹಾಸ್ಯ ಮತ್ತು ಒಮ್ಮೊಮ್ಮೆ ಮೌನ ಗಾಂಭೀರ್ಯದಿಂದ ಕೂಡಿರುತ್ತಿದ್ದೆನು. ಮೊದಲು ನಾವು ಷಾಟೋ ಡುರೈನ್ ಎಂದು ರೈನ್ ನದಿಯ ಮೇಲ್ದಡದಲ್ಲಿದ್ದ ಸುಂದರವಾದ ನಿವಾಸಗೃಹದಲ್ಲಿದ್ದೆವು. ದಿವಂಗತ ಡ್ಯೂಕ್ ಆಫ್ ಹೆಮಿಲ್ಟನ್ ಆದ ಮಾರ್ಕ್ವಿಸ್ ಡಗ್ಲಸ್ ಮತ್ತು ಲಾರ್ಡ್ ಚಾರ್ಲ್ಸ್ ಇವರು ಇವರುಗಳು ಮಕ್ಕಳು ಅವರ ಬೋಧಕರ ಜತೆಯಲ್ಲಿ ಅಲ್ಲಿಯೆ ಉಳಿದುಕೊಂಡಿದ್ದರು. ಅವರಿಗೆ ಆ ನಿವಾಸಗೃಹದ ಮೇಲಂತಸ್ತಿನ ಇಡೀ ಕೊಠಡಿಯೂ, ನಮಗೆ ಕೆಳಗಿನ ಅಂತಸ್ತಿನ ಹಜಾರವೂ ಮೇಲಿನ ಕೋಣೆಗಳೂ ದೊರಕಿದುವು. ಕುಮಾರಿ ಮೇರ್ಯಟ್ಟ್ ಇವಳು "ಮಕ್ಕಳು" ಯಾವ ಗಂಡಸನ್ನೊಡನೆಯೂ ಮಾತಾಡುವುದನ್ನು ಅವಳು ಇಚ್ಛಿಸುತ್ತಿರಲಿಲ್ಲ, ಎಂಬುದಾಗಿ ಅಲ್ಲಿದ್ದ ಹುಡುಗರಿಗೆ ತಿಳಿಯಿತು. ನಮ್ಮ ಕೋಣೆಯ ಕಿಟಕಿಗೆ ಎದುರಾಗಿ ಹೊರಗೆ ಆ ಹುಡುಗರು ತಮ್ಮ ಕುದುರೆಗಳನ್ನು ಎಡಬಲಕ್ಕೆ ತಿರುಗಿಸುವರು. ನಾವು ತಿರುಗಾಡಲಿಕ್ಕೆ ಅಥವಾ ಸವಾರಿಗೆಂದು ಹೊರಟಾಗ ಅವರು ತಮ್ಮ ಕುದುರೆಯನ್ನೇರಿ ಹೋಗುತ್ತಾ, ತಮ್ಮ ಟೋಪಿ (hat)ಗಳನ್ನು ತೆಗೆದು ಸ್ವಲ್ಪ ಬಗ್ಗಿ ನಮಗೆ ನಮಸ್ಕರಿಸುವರು. ನಾವು ನಮ್ಮ ನಿವಾಸದ ಮಹಡಿಯಿಂದ ಕೆಳಗೆ ಬರುವಾಗ ಅವರು ಅದರ ದಾರಿಯಲ್ಲಿ ನಿಂತು ಮರ್ಯಾದೆಯಿಂದ "ಸುಪ್ರಭಾತ" (Good Morning) ಎಂದೆನ್ನುವರು. ಅವರು ಮುಂದೆಯೆ

ಗುಡಿಗೆ (church) ಹೋಗಿ ನಾವು ಕೂರುವ ಸ್ಥಳವನ್ನೆಲ್ಲ ಅನ್ವೇಷಿಸುವರು, ಅಲ್ಲದೆ ತಾನು ಇಚ್ಛಿಸಿದರೆ ಇಡೀ ಚರ್ಮವನ್ನು ತಲೆಬುರುಡೆಯಿಂದಲೆ ಎಳೆದು ಕಿತ್ತುಹಾಕಲು ಸಮರ್ಥನಾಗಿದ್ದ ಲಾರ್ಡ್ ಚಾರ್ಲ್ಸ್ ಇವನು ತನ್ನ ಕೊಂಡಲನ್ನು ಮೇಲೆ ಕೆಳಗೆ ಮಾಡಿಸುತ್ತಿರುವುದನ್ನು ನೋಡಿ ನಾವು ನಮ್ಮ ಶಿಷ್ಟಾಚಾರದ ಔಚಿತ್ಯವನ್ನು ಎಣಿಸದೆ ಬಿದ್ದು ಬಿದ್ದು ನಗುತ್ತಿದ್ದೆವು. ಒಂದು ತಿಂಗಳನಂತರ Auntie ಯವರನ್ನು ಆ ಚಿಕ್ಕದಾದ ಸ್ಥಳದಿಂದ ಅಕಸ್ಮಾತ್ ಓಡಿಸಿದ್ದು ನಮಗೆ ನಿರಾಶಾದಾಯಕವಾಯಿತು. ಆದರೂ ಅವರು ವಿಶ್ರಮಿಸಲಿಕ್ಕೆ ಬಿಡುತ್ತಿರಲಿಲ್ಲ. ನಾವು ಯಾವಕಡೆ ಹೋದರೂ ತುಂಟರಾದ ವಿದ್ಯಾರ್ಥಿಗಳು ನಮ್ಮನ್ನು ಬೆನ್ನಟ್ಟುತ್ತಿದ್ದರು. ಭಾವಜೀವಿಗಳಾದ ಜರ್ಮನ್ನರು ತಮ್ಮ ಗಾಯಗಳಿಂದ ಕೆನ್ನೆಯು ನಿಮ್ನೋನ್ನತವಾಗಿ ನಮ್ಮನ್ನು ಕೆರಳಿಸುವ ನಲ್ಮೆಡಿಗಳ ಮೆಲ್ಲಗಿರಿದರು. ಅವೆಲ್ಲವೂ ಕೇವಲ ಹುಡುಗತನದ ಮತ್ತು ಹಾನಿಕರವಲ್ಲದ ಚೇಷ್ಟೆಗಳಾದರೂ ಈ ರೀತಿಯ ಆಂಗ್ಲ ಮಹಿಳೆಯರು ಇದೆಲ್ಲ ಒಳ್ಳೆಯದಲ್ಲವೆಂದು ಭಾವಿಸಿದ್ದರು. ಅನಂತರ ಮೂರು ತಿಂಗಳಲ್ಲಿ ನಾವು ಅವಿಮಾನಕ್ಕೆ (ಡಾಕ್ಟರಂತೆ) ರಜೆಯಲ್ಲಿ ಮನೆಗೆ ಹಿಂದಕ್ಕೆ ಕಳುಹಿಸಲ್ಪಟ್ಟೆವು. ಆದರೆ ಈ ಅವಧಿಯಲ್ಲಿ ವೇಗದಿಂದ ಹರಿಯುವ ರೈನ್ ನದಿಯ ದಡದಲ್ಲಿ ನಡೆಯುವುದೂ ಬೆಟ್ಟ ಹತ್ತುವುದೂ ಸುಂದರವಾದ ಕಾಡುಗಳುದ್ದಕ್ಕೂ ಸಂಚರಿಸುವುದೂ ಮಾಡಿ ನಮ್ಮ ದಿವಸಗಳನ್ನು ಆನಂದದಿಂದ ಕಳೆದೆವು. ಡ್ರೆಕನ್‌ಫೆಲ್ಸ್‌ನ ತಳದಲ್ಲಿ ಕಂಡು ಬಂದ ರೈನ್ ನದಿಯ ಬೆಟ್ಟದರೆ ಮತ್ತು ರೋಲಂಡನ ಪ್ರೀತಿಗಾಗಿ ತನ್ನನ್ನು ಅರ್ಪಿಸಿದ ಮಹಿಳೆಯು ನಿರ್ಗಮಿಸಿದ ಮತ್ತು ಇಬ್ಬನಿಯ ತೆರೆಯಿಂದಾವರಿಸಿದ ದಿನ್ನೆಲ ನಾನು ನನ್ನ ವಿಶ್ರಾಂತಿ ವೇಳೆಯಲ್ಲಿ ನನ್ನ ಮನೋಚಿತ್ರಿಯಲ್ಲಿ ಕಂಡ ಸುಂದರ ದೃಶ್ಯಗಳ ಮಾಲೆಯನ್ನು ಇರಿಸಿಕೊಂಡಿರುವೆನು.

ಒಂದೆರಡು ದಿನಗಳನಂತರ ನಾವು ಕುಮಾರಿ ಮೆರ್ಸ್ತ್ರುಲನ್ನು ಪ್ಯಾರಿಸಿನಲ್ಲಿ ಜತೆ ಸೇರಿ ಅಲ್ಲಿ ಎರಡು ತಿಂಗಳು ತುಂಬಾ ಕೆಲಸದಲ್ಲಿ ನಿರತರಾಗಿ ಕಳೆದೆವು. ಬುಧವಾರ ಮತ್ತು ಶನಿವಾರದಂದು ನಾವು ಪಾಠವೇನೂ ಕಲಿಯಬೇಕಾಗಿದ್ದಿರಲಿಲ್ಲ. ಹಲವು ದಿನಗಳ ಮಧ್ಯಾಹ್ನ ಹೊತ್ತಿನಲ್ಲಿ ನಾವು ಲೂವರ (Louvre) ವಸ್ತುಪ್ರದರ್ಶನಾಲಯದ ಸುತ್ತಲೂ ತಿರುಗಿ ಎಲ್ಲಾ ದೇಶಗಳಿಂದ ತಂದು ಸಂಗ್ರಹಿಸಿದ ಕಲಾವಸ್ತುಗಳನ್ನೆಲ್ಲ ನೋಡುತ್ತಾ ತಿರುಗುತ್ತಿದ್ದೆವು. ಪ್ರತಿ ವಾರದ ನಮ್ಮ ಸಂಚಾರದಲ್ಲಿ ನಾವು ನೋಡದೇ ಇದ್ದ ಸುಂದರವಾದ ಗುಡಿಗಳು ಪ್ಯಾರಿಸ್ ನಲ್ಲಿವೆಯೋ ಎಂದು ಸಂದೇಹಪಡುತ್ತೇನೆ. ಸಂತ ಬಾರ್ತೋಲೋಮ್ಯೂನ ಹತ್ಯೆಗೆ ಸೂಚನೆಯನ್ನು ಕೊಟ್ಟ ಗಂಟೆಯು ಇರುವ ಮತ್ತು ಆಶ್ಚರ್ಯಕರವಾದ ಕೆತ್ತನೆಗಳಿಂದ ಕೂಡಿ ನಿಗೂಢವೂ ನಿಶ್ಯಬ್ದವೂ ಆಗಿರುವ ಬಣ್ಣಗಾಜುಗಳಿಂದ ಅಲಂಕೃತವಾದ St. Germain

de l'Auxerrois ಗುಡಿಯು ನನಗೆ ತುಂಬಾ ಮೆಚ್ಚಿನದಾಗಿತ್ತು. Notre Dame ಗುಡಿಯ ಪ್ರಶಾಂತ ಸೌಂದರ್ಯ, La Sainte Chappelle ಇದರ ವರ್ಣರಂಜಿತ ಶೃಂಗಾರ, La Madelaine ಇದರ ಗಾಂಭೀರ್ಯ ಮತ್ತು St. Roch ಗುಡಿಯ ಅಚ್ಚುಮೆಚ್ಚಾದ ಮೆಟ್ಟಿಲು ಎಲ್ಲವೂ ನಮಗೆ ತುಂಬಾ ಪರಿಚಯವಾಗಿತ್ತು. ಇವು ಅಲ್ಲದೆ Champs Elysees ಬಳಿ ಹೋಗುವ ಮತ್ತು Bois de Boulogne ನಲ್ಲಿ ಅಡ್ಡಾಡುವ ವರ್ಣರಂಜಿತ ಜನಸಂದಣಿಯ ಮಧ್ಯೆ ಸೇರಿಯುವುದು, Tuleries ಇದರ ಉದ್ಯಾನದಲ್ಲಿ ತಿರುಗಾಡುವುದು ಮತ್ತು ಪ್ಯಾರಿಸ್ ನಗರದ ಎಲ್ಲಾ ದೃಶ್ಯಗಳನ್ನು ಯಾವುದರಿಂದ ನೋಡಬಹುದೋ ಅಂಥ ಎಲ್ಲಾ ಗುಡಿಗೋಪುರಗಳ ಮೇಲೆ ಹತ್ತುವುದರಲ್ಲಿ ನಾವು ತುಂಬಾ ಸಂತೋಷಭರಿತರಾಗುತ್ತಿದ್ದೆವು. ಆಗ ಸಾಮ್ರಾಜ್ಯವು ಅದರ ಶೋಭೆಯ ಶಿಖರಾಗ್ರದಲ್ಲಿತ್ತು. ತುರಾಯಿಗಳು, ಚಿನ್ನ ಮತ್ತು ಬೆಳ್ಳಿಯಿಂದಲಂಕೃತವಾದ ಆ ಶೋಭೆಯು ಸೂರ್ಯಕಿರಣಕ್ಕೆ ಥಳಥಳಿಸುತ್ತಿದ್ದ ರಥದಲ್ಲಿ ಅತ್ಯಾಡಂಬರದಿಂದ ಸುಂದರಿಯಾದ ಸಾಮ್ರಾಜ್ಞಿಯು ತನ್ನ ಬದಿಯಲ್ಲಿ ಟೋಪಿಯನ್ನು, ನಾಚಿಕೆಯಿಂದ ಮುಟ್ಟುತ್ತಾ ಇದ್ದ ತನ್ನ ಮಗನನ್ನು ಕುಳ್ಳಿರಿಸಿಕೊಂಡು ಶಿರಬಾಗುವ ಜನಸಂದಣಿಗೆ ತನ್ನ ಶಿಂಗಾರದಿಂದಲೇ ಮುಗುಳ್ನಕ್ಕು ಉತ್ತರಿಸುವ ಅವಳು ಇತರ ಗಾಡಿಗಳಿಂದ ಸುತ್ತುವರಿದು ಅಟ್ಟಹಾಸದಿಂದ ಹೋಗುತ್ತಿರುವುದನ್ನು ನೋಡಿ ಸಂತೋಷಪಡುತ್ತಿದ್ದೆವು, ಆ ಸಾಮ್ರಾಜ್ಯದ ಕಿರೀಟಧಾರಿಯಾಗುವನೆಂಬುದಾಗಿ ಭಾವಿಸಿದ್ದ ಆ ರಾಜಕುಮಾರನ ಅಲ್ಪಕಾಲದ ಜೀವನವೃತ್ತಿಯು ತನಗೆ ಸಂಬಂಧವೇ ಇಲ್ಲದ ಕಾದಾಟದೆಡೆಯಲ್ಲಿ ಸಿಲುಕಿ ಕಾಡಿಗಳ ಭರ್ಜಿಗೆ ಆಹುತಿಯಾಗಿ ಕೊನೆಯಾಯಿತು.

ಕ್ರಿ. ಶ. 1862ರ ವಸಂತ ಮಾಸದಲ್ಲಿ ಓಹಾಯೋ (Ohio) ದ ಡ್ರಮಂಡ್ ಗುರುವು ಪ್ಯಾರಿಸ್‌ಗೆ ಬಂದಿದ್ದನು. ಆಗ Rue d' Aguessea ಗುಡಿಯ ಆಂಗ್ಲ ಗುರುವು ಹಿಂದು ಸಮಾಧಾನಾ ಸಭೆಯನ್ನು ವರ್ಣಿಸಿದನು, ಮೇಲೆ ಹೇಳಿದಂತೆ ನಾನು ಒಂದು ಆಳವಾದ ಧಾರ್ಮಿಕ ಭಾವದಲ್ಲಿ ಮುಳುಗಿದ್ದೆನು. ಜರ್ಮನಿಯಲ್ಲಿ ಅನುಭವಿಸಿದ್ದ ಅಲಕ್ಷ್ಯಕಾರಕ ಪ್ರಮಾದವಲ್ಲದೆ ನಾನು ನಿಶ್ಚಯವಾಗಿಯೂ ಧಾರ್ಮಿಕ ಮನೋವೃತ್ತಿಯವನಾಗಿದ್ದೆನು. ನಾಟ್ಯಶಾಲೆಗಳು (ನಾನು ಅಲ್ಲಿಗೆ ಹೋಗುವದ್ದರೂ) ಬುದ್ಧಿಯಿಲ್ಲದವರನ್ನು ನಾಶಮಾಡಿಸಲು ಸೈತಾನನಿಟ್ಟ ಬಲೆಗಳೆಂದು ಅಭಿಪ್ರಾಯಪಟ್ಟಿದ್ದೆನು. ನಾನು ಕೂಟಕ್ರೀಡೆಗಳಿಗೆ ಹೋಗುವುದೇ ಇಲ್ಲವೆಂದು ನಿರ್ಧರಿಸಿದ್ದೆನು. ಆದರೂ ನಾನು ಸ್ವಲ್ಪಮಟ್ಟಿಗೆ ಅಹಂಭಾ

ವದಿಂದ ಕೂಡಿದ್ದರಿಂದ ನನ್ನ ಆತ್ಮತೃಪ್ತಿಗಾಗಿ ಓಮೆನ್ ಸಾಹೇಬ್ರಾಲಿಗೆ
ಹೋಗಲು ಇಚ್ಛಿಸಿದೆನು, ಲೌಕಿಕ ಜೀವನ, ಮಾಂಸಾಹಾರ, ಮತ್ತು
ಸೈತಾನ— ಇವುಗಳನ್ನು ತ್ಯಜಿಸುವುದೆಂದರೇನೆಂದು ನನಗೀಗಾಗಿ
ಗೊತ್ತಿರಲಿಲ್ಲವೋ, ಆದ್ದರಿಂದ ಹೃತ್ಪೂರ್ವಕವಾಗಿ ಬಹು ಶ್ರದ್ಧೆಯಿಂದ ಅವು
ಗಳನ್ನು ತ್ಯಜಿಸುವೆನೆಂದು ನನ್ನ ಕ್ರಿಸ್ತಸ್ನಾನದ ಕಾಲದಲ್ಲಿ ಪ್ರ
ಮಾಣವನ್ನು ಮಾಡಿದ್ದಕ್ಕೆ ಅನುಸಾರವಾಗಿ ಆ ಜವಾಬ್ದಾರಿಕೆಯನ್ನು
ನಾನು ಈದಾಗಲೇ ಹೊತ್ತುಕೊಳ್ಳಲು ಸಿದ್ಧನಾಗಿದ್ದೆನು, ಆ ಪ್ರಮಾಣ
ವಚನವು ನನಗೆ ಬಹು ಪವಿತ್ರವಾದುದಾಗಿತ್ತು. ಜಾಗರೂಕತೆಯಿಂ
ದ ನಡತೆ, ದೀರ್ಘ ಪ್ರಾರ್ಥನೆಗಳು ಮತ್ತು ಎಳರಹಿತ ಭಕ್ತಿಯಿಂ
ದ ಕೂಡಿದ ಆತ್ಮದ ಚಿಂತೆಗಳು ಎಲ್ಲವೂ ಕ್ಷಮೆಯಾಗಿರು ಬೇಡಿದ
ಭಕ್ತರಿಗೆ ಅತಿ ಕಾತರತೆಯನ್ನುಂಟು ಮಾಡತಕ್ಕಂಥವುಗಳಾಗಿ
ದ್ದವು. ನಾನು ಗುಡಿಯಲ್ಲಿ ದೇವರ ಮುಂದೆ ಮೊಣಕಾಲೂರಿದಾ
ಗ ನನ್ನ ಮನೋವೇಗವನ್ನು ನನಗೆ ತಡೆಯಲು ಸಾಧ್ಯವಾಗಲಿಲ್ಲ.
ಮತ್ತೊಂದೆ ನನ್ನ ಶಿರದಲ್ಲಿ ಆ ವೃದ್ಧ ಗುರುವಿನ ಹಸ್ತಗಳ ಮೃದು
ಸ್ಪರ್ಶವು ಅತ್ಯಂತ ಸುಖೋಯಲೂ ಆದರೆ ಪವಿತ್ರ ಆತ್ಮವೆಂಬ ಸ್ವ
ರ್ಗೀಯ ಪಾರಿವಾಳದ ರೆಕ್ಕೆಗಳ ಸ್ಪರ್ಶದ ಶ್ರದ್ಧಾಪೂರ್ವಕ ಪ್ರಾರ್ಥ
ನೆಯಂತಾಯಿತು, ಓವರ್ ಎಲ್ಲಿ ನೋಡ್ತು ಬಂದ್ದಿಯ ಬಾಲೆಗೆ ಇಷ್ಟು
ಬಲವತ್ತಾಗಿ ಧಾರ್ಮಿಕ ಭಾವವನ್ನು ಹೇಳಾಗಿಸಲು ಬೇರೇನಾದ
ರೂ ಶಿಲಬಗಳವಾಗ್ಗದಿದೆಯೇ ಎಂದು ಆಶ್ಚರ್ಯಪಡುತ್ತಿದ್ದೆನು.

ಆ ವರೆಗೆ ಸುಪ್ತವಾಗಿದ್ದ ನನ್ನ ಧಾರ್ಮಿಕ ಸ್ವಭಾವವನ್ನು
ನಾನು ಕ್ಯಾಥೊಲಿಕ್‌ನಲ್ಲಿದ್ದ ಆವಧಿಯು ಉದ್ರೇಕಗೊಳಿಸಿತು. ಪ್ರಾರ್ಥ
ನಾ ಮಾಲೆಯಲ್ಲಿ ಬಣ್ಣ, ಸುಗಂಧ, ಆಡಂಬರಾದಿಗಳನ್ನು ಬೆರೆಸು
ವುದರಲ್ಲಿರುವ ಇಂದ್ರಿಯ ಸಂತೃಪ್ತಿಯನ್ನು ನಾನು ಕಂಡು
ಕೊಂಡೆನು. ಆದರಿಂದ ನಾಸ್ತಿಕತೆಯ ಆ ಮೋಹದ ಸಂತೃಪ್ತಿ
ಯೂ ದೈವಭಕ್ತಿಯ ರೂಪದಲ್ಲಿ ಗಾಂಭೀರ್ಯವನ್ನು ಪಡೆಯಿತು.
Louvre ನಲ್ಲಿ ಇದ್ದ Madonnas ಮತ್ತು ಇತರ ಸಂತರ ಚಿತ್ರಗ
ಳ ಸಾಲುಗಳು, ಗುಡಿಗಳಲ್ಲಿ ವ್ಯಕ್ತವಾಗಿರುವ ಸುಗಂಧವು
ಯು ಮತ್ತು ಸುಮಧುರ ಸಂಗೀತವೆಲ್ಲವೂ ನನ್ನ ಜೀವನಕ್ಕೆ
ಹೊಸ ಬಗೆಯ ಕೌತುಕವನ್ನು ನನ್ನ ಕನಸುಗಳಿಗೆ ಸುವರ್ಣ
ಬಣ್ಣನೆಯನ್ನೂ ಕೊಡುಗೆಯಿತ್ತು, ಚಿಕ್ಕಂದಿನಲ್ಲಿ ನಾನು ಕಲ್ಪಿಸಿದ್ದ
ಆದರ್ಶಪ್ರಾಯನಾದ ಆ ದೇವರ ಮಗನ ಚಿತ್ರವು ಲೋಕದಲ್ಲಿ
ಗೋಚರಿಸಿದ ಆ ಸ್ವಾಮಿಯ ಮುಖಭಾವವು ಇನ್ನಷ್ಟು ದುಃ
ಖಕರವಾಗಿ ನನಗೆ ತೋರುವ ವರೆಗೂ ಉದ್ರೇಕದಾಯಕವೂ
ಅತ್ಯುತ್ತಮವೂ ಆದ ತತ್ವಬೋಧನೆಯು ನನಗೆ ಕೇವಲ ಸತ್ಯ
ವಾಗಿ, ಆಪ್ಯಾಯಮಾನವಾಗಿ ತೋರಿತು. Paradise Lost ಇದರ

ಬದಲಾಗಿ ಕೀಬಲ್ (Kable) ಇವನ Christian Year ಗ್ರಂಥವು ಅನಂತರ ನನಗೆ ಸ್ಫೂರ್ತಿಯನ್ನುಂಟುಮಾಡಿತು. ನಾನು ಬಾಲ್ಯದಿಂದ ಯೌವನಕ್ಕೆ ಕಾಲಿಟ್ಟಾಗ ಈ ಗ್ರಂಥದ ಅಂತರಾಳದ ತರಂಗವು ನನ್ನನ್ನು ಪಾರಮಾರ್ಥಿಕ ವಿಚಾರದ ಕಡೆಗೆ ಸೆಳೆಯಿತು. ನನ್ನ ತಾಯಿಯು ನನ್ನನ್ನು ಪ್ರೇಮಕಥೆಗಳನ್ನು ಓದಲಿಕ್ಕೆ ಬಿಡುತ್ತಿರಲಿಲ್ಲ. ನನ್ನ ಭವಿಷ್ಯದ ಬಗ್ಗೆಯೂ ಎಂಬಂತೆ ಹಗಲುಗನಸುಗಳು ವಿವಿಧ ವಿಚಾರಗಳು ಮೇಲೆ ಏಳುತ್ತ ಹಿರ್ವ ಹುಡುಗಿಯು ಆದಾಗಲೇ ಕಾಲಿರುವ ಪ್ರಪಂಚದ ಕಡೆಗೆ ಕಣ್ಣೆತ್ತಿ ನೋಡುವಷ್ಟನ್ನು ಮಾತ್ರ ಅವರಿಸಿರಲ್ಲ. ಆ ನನ್ನ ಯೋಚನೆ ಮತ್ತು ಕೃತಿಯು ಸ್ವಾತಂತ್ರ್ಯ ಅರಸುವ ಆಶೀರ್ವಾದದ ತರುಣಿ ಸ್ವಾತಂತ್ರ್ಯವನ್ನು ಬಿಟ್ಟ St. Agnes ಇವಳು ಕಂಡ ತನ್ನ ಸ್ವರ್ಗೀಯ ಕನಸುಗಳನ್ನು, St. Cecelia ಇವಳ ಆಹ್ಲಾದಕರವಾದ ಕಿವಿಯ ಕಡೆಗೆ ಬಗ್ಗಿ ದೇವತೆಗಳು ಮೆಲ್ಲಗೆ ಹಾಡಿದ್ದನ್ನು ನೆನೆಯುತ್ತಿದ್ದೆನು. "ಮತ್ತೆಲ್ಲಿ? ಈಗ ನಾನೇಕೆ ಹಾಗಾಗಬಾರದು?" ಎಂಬುದಾಗಿ ನನ್ನ ಹೃದಯವು ದನಿಗೊಡುತ್ತಿತ್ತು. ನಾನು ಏಕಾಂತವಾಗಿದ್ದಾಗ ಓದುತ್ತಿದ್ದ ಆನಂದಕ್ಕಿಂತ ಬೇರಾವುದೂ ಇಲ್ಲದ ಆ ನನ್ನ ಕನಸುಗಳಲ್ಲಿಯೇ ನಾನು ಮೈಮರೆಯುತ್ತಿದ್ದೆನು.

ಕ್ರಿ.ಶ. 1862ರ ಬೇಸಗೆಯು ಕುಮಾರಿ ಮೇರಿ ಕ್ಯಾಥರೀ ಇವಳೊಡನೆ ಸಿಡ್ಮತ್ (Sidmouth)ನಲ್ಲಿ ಕಳೆಯಲಾಯಿತು. ಪ್ರಾಜ್ಞೆಯಾದ ಅವಳು ನಮ್ಮ ಶಾಲಾಕೋಣೆಯನ್ನು ಬಿಟ್ಟು ನಾಗರಿಕ ಹಕ್ಕನ್ನು ಪಡೆಯುವ ವಿದ್ಯೆಯ ಕಡೆಗೆ ನಮ್ಮನ್ನು ತಿರುಗಿಸಿದಳು. ನಾವು ಬೇರೆ ಬೇರೆಯಾಗಿ ದುಡಿಯಲು ತರಬೇತಿಯನ್ನು ಪಡೆದಂತೆ ನಮ್ಮನ್ನು ಸಿದ್ಧಗೊಳಿಸುವ ಕಾರ್ಯವನ್ನು ನಡೆಸಲಾಯಿತು. ನಾವು ತಪ್ಪು ಮಾಡಿದ್ದಾಗಲೂ ಬೇರೆ ಸಂದರ್ಭಗಳಲ್ಲಿ ನಾವು ಪ್ರತ್ಯೇಕ ಮಾಡಿದುದನ್ನು ನೆನೆದಾಗ ಅವಳು ನಮಗೆ ಏನನ್ನು ಹೇಳಿಕೊಡುವುದಿಲ್ಲವೆಂದು ಪ್ರೀತಿಯಿಂದ ಗೋಗರೆಯುತ್ತಿದ್ದನ್ನು ನೆನೆಯುತ್ತಿರುವೆನು. ಆಗ ಅವಳು ಇನ್ನು ನಾನು ನನ್ನನ್ನು ನೋಡಿಕೊಳ್ಳುವಷ್ಟು ಪ್ರಾಯಕ್ಕೆ ಬಂದಿರುವೆನೆಂದಾಗ ಜೀವನವೆಲ್ಲ Auntie ಯು ಕೈಹಿಡಿದು ಕಾಪಾಡುವಳೆಂಬುದನ್ನು ನಿರೀಕ್ಷಿಸಬೇಡವೆಂದೂ ಹೇಳಿದಳು. ನಿತ್ಯ ಜೀವನದಲ್ಲಿ ಮತ್ತು ಬೋಧನೆಯಲ್ಲಿ ಎಡೆಬಿಡದೆ ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಿದ್ದುದನ್ನು ನಮಗರಿಯದಂತೆ ನಿಧಾನವಾಗಿ ನಿಲ್ಲಿಸಿದ್ದು ಈ ಸಹೃದಯಳಾದ ನಾಗರಿಕ ಮಹಿಳೆಯು ನಮಗೆ ತೋರಿಸಿದ ಅತಿ ಜಾಣತನದ ಮತ್ತು ಒಳ್ಳೆಯ ಕೆಲಸಗಳಲ್ಲಿ ಒಂದಾಗಿತ್ತು. ಹುಡುಗಿಯರ "ಪ್ರಪಂಚ"ಕ್ಕೆ ಕಾಲಿಡುವ ವರೆಗೂ ಅವರನ್ನು ಶಾಲಾಕೋಣೆಗಳಲ್ಲಿರಿಸುವುದು ಅಂದಿನ ಸಂಪ್ರದಾಯವಾಗಿತ್ತು. ಅದರನಂತರ ಅವರನ್ನು ಒ

ಮೈತ್ರೀ ಉಪರಾಧ್ಯಕ್ಷರೇ ಬಿಟ್ಟಾಗ ಹಕ್ಕನ್ನು ದೊರಕಿದ ಆ ಸ್ವಾತಂತ್ರ್ಯದಿಂದ ಕಂಗೆಟ್ಟವರಾಗಿ ತಮ್ಮ ಮಾನಸಿಕ ಬೆಳವಣಿಗೆಗೆ ಹಾನಿಕಾರವಾದ ಸಮಯವನ್ನು ದುರ್ವಿನಿಯೋಗ ಮಾಡುವರು. ಹೆಂಗಸರಿಗೆ ಇಂದು ವಿಶ್ವವಿದ್ಯಾಲಯಗಳು ತೆರೆಯಲ್ಪಟ್ಟಿದ್ದರಿಂದ ಮುಂದಕ್ಕೆ ಬರಲು ತವಕಿಸುವಂತವರನ್ನು ಒಪ್ಪ ಒಂದಾ ಉಪಾಯದಿಂದ ರಕ್ಷಿಸಿದೆ. ಆದರೆ ನಾನು ಇಂದಿಗ ಇದನ್ನು ಬರೆಯುವ ವೇಳೆಗೆ ಹೆಂಗಸರ ಉಚ್ಚ ವಿದ್ಯಾಭ್ಯಾಸದ ಮಹತ್ವದಲ್ಲಿ ಆಗಲಿದ್ದ ಬದಲಾವಣೆಗಳನ್ನು ಸರಿಯಾಗಿ ಯಾರೂ ಊಹಿಸಿದ್ದೇ ಇಲ್ಲ!

1862–63ರ ಚಳಿಗಾಲದ ಸಮಯದಲ್ಲಿ ಮೇರ್ಯಟ್ಟ್ ಇವಳು ಲಂಡನ್ನಿನಲ್ಲಿದ್ದಳು. ಆಗ ಕೆಲವು ತಿಂಗಳ ಕಾಲ M. Roche ಕ್ಲಾಸು ನಡೆಸುತ್ತಿದ್ದ ಮತ್ತು ತುಂಬಾ ಮನಮೆಚ್ಚುವಂತೆ ಇದ್ದ ಫ್ರೆಂಚ್ ಶಾಲೆಗೆ ಹೋಗುತ್ತಾ ಅವಳೊಡನೆ ಇದ್ದೆನು. ಆದರೆ ನಂತರ ಆ ವರ್ಷ ಬೇಸಗೆಗೆ ಮುಂಚೆ ಪ್ಯಾರಿಸಿನಿಂದ ನನ್ನ ಮನೆಗೆ ಹಿಂದಿರುಗಿ ವಾರಕ್ಕೊಮ್ಮೆ ಲಂಡನ್ನಿಗೆ ಫ್ರೆಂಚ್ ಶಾಲೆಗೆಂದು ಹೋಗುತ್ತಿದ್ದೆನು. ಅನಂತರ ನಾನು ಮುಂದಕ್ಕೆ ಪ್ರಯೋಜನವಾಗುವ ಯಾವುದನ್ನು ಮಾಡಬೇಕೋ ಅದನ್ನೆಲ್ಲ ಮಾಡಿರುವೆನೆಂದೂ ಇನ್ನೀಗ ನಾನಾಗಿಯೇ ನನ್ನ ಶಿಕ್ಷೆಗಳನ್ನೊದರೆ ಸಾಗಬಹುದೆಂದೂ Auntie ಯು ಹೇಳಿದಳು. ಸರಿ, ಗವರ್ನೆಸ್ಸಿಯಿಂದ ಹೇಗೂ ಬಿಡುಗಡೆಯಾದುದರಿಂದ ನನ್ನ ಮುಂದಿನ ಕಾತರತೆಯು ವಿದ್ಯಾಭ್ಯಾಸದ ಪ್ರಾರಂಭವೆಂಬ ವಿಷಯಕ್ಕೆ ಅವಳು ಜಯಪ್ರದವಾಗಿ ನನ್ನನ್ನು ಮನಸ್ಸು ತೆಸಿದ್ದಳಾದರೂ ನನ್ನ ಮುಂದಿನ ಓದುವಿಕೆಯು ನಾನು ಬಹುಮಟ್ಟಿಗೆ ಒಲಿದ ನನ್ನ ವೈಯಕ್ತಿಕ ಭಾವನಾ ಪ್ರವೃತ್ತಿಯತ್ತ ಸೆಳೆಯುತ್ತು. ಓರ್ವ ಅಧ್ಯಾಪಕನ ಸಹಾಯದಿಂದ ನಾನು ಜರ್ಮನ್ ಭಾಷೆಯನ್ನು ಬಹು ತಜ್ಞಳಾದೆನು ಮತ್ತು ಹ್ಯಾರೋ ರೀತಿಯ ಸಂಗೀತ ಶಿಕ್ಷಕಿಯ ಸಹಕಾರಿ ಮಿಸ್ ಥಾಮಸ್‌ರ ಮೂಲಕ ಸಂಗೀತವನ್ನು ಕಲಿಯುವುದರಲ್ಲಿ ಬಹು ಸಮಯ ಕಳೆಯುತ್ತಿತು. ನನ್ನ ಪ್ರಿಯ ತಾಯಿಗೆ ಸಂಗೀತವೆಂದರೆ ತುಂಬಾ ಪ್ರೀತಿಯುತ್ತು. Beethoven ಮತ್ತು Bach ಇವರು ಅವಳು ಮೆಚ್ಚಿದ್ದ ಸಂಗೀತಗಾರರಾಗಿದ್ದರು. ಆ ಇಬ್ಬರ ಉತ್ತಮ ಕೃತಿಗಳಲ್ಲಿ ಆಹ್ಲಾದಕರವಾದ ಹಾಡುಗಳಲ್ಲಿ ನಾನು ಆರಿಸಿಕೊಳ್ಳದೇ ಇದ್ದುದು ಒಂದೂ ಇರಲಿಲ್ಲ. Mendelssohn ಇವನ ರಚನೆಗಳು ವಿರಾಮವೇಳೆಗೆ ಅನುಕೂಲವಾದಂತಿದ್ದುವು. ಕೆಲವು Titan ಮತ್ತು ನುಡಿಗಳೇ ಇಲ್ಲದ ಜರ್ಮನಿಯವರ ಇಂಪಾದ ನುಡಿಗಳನ್ನು, ಹಾಡುಗಳನ್ನು ಕೇಳುತ್ತಾ ನಾನು ಮತ್ತು ನನ್ನ ತಾಯಿಯು ಹಲವು ಸಾಯಂಕಾಲಗಳನ್ನು

ಒಡಗೂಡಿ ಕಲಿಯುತ್ತಿದ್ದೆವು. ಹ್ಯಾರೋದಲ್ಲಿ ನಮ್ಮ ಮೇಷ್ಟ್ರನ ಹಬ್ಬದ ಸಂಗೀತ ಪಾರ್ಟಿಯನ್ನು ನಡೆಸುವುದರಲ್ಲಿತ್ತಲ್ಲದೆ ನನ್ನ ಹಗುರವಾದ ಬೆರಳುಗಳು ನನ್ನನ್ನು ಎಲ್ಲೆಲ್ಲೂ ಸ್ವಾಗತಾರ್ಹಳಾದ ಅತಿಥಿಯಾಗಿಸುತ್ತಿತ್ತು;

ಹೀಗೆ ಹದಿನಾರೂವರೆ ವರ್ಷ ಪ್ರಾಯದ ವೇಳೆಗೆ ಶಾಲೆಯಿಂದ ಪಾರಾಗಿ ಹಿರಿಯಳೆ ಮಗಳಾದ ನಾನು ನನ್ನ ತಾಯಿಯ ಸಂತೋಷಕ್ಕಾಗಿ ಪ್ರತಿದಿನವೂ ನನ್ನ ಸಮಯದಲ್ಲಿ ಹಿಂದಿರಬಹುದು ಗಂಟೆಗಳ ಕಾಲ ಸಂಗೀತಕ್ಕೆಂದು ವಿನಿಯೋಗಿಸುತ್ತಿದ್ದೆನು, ಅಲ್ಲಿಂದ ನಂತರ ೧೯ನೇ ಪ್ರಾಯಕ್ಕಿಂತ ಸ್ವಲ್ಪ ಮುಂಚೆ ನನ್ನ ವಿವಾಹ ನಿಶ್ಚಯ ಮಾಗುವ ವರೆಗೂ ನನ್ನ ಜೀವನ ತೆರೆಯು ಸರಾಗವಾಗಿ ಹರಿಯುತಲಿ ಅದರಲ್ಲಿ ಒಂದು ತೆರೆಯು ಹಗಲು ವೇಳೆ ಹಾಡು ನರ್ತನಗಳ ರೂಪದಲ್ಲಿ ತೋರಿದರೆ ಇನ್ನೊಂದು ಭೂಮಿಯ ಆಳಕ್ಕೆ ಬಲವಾಗಿ ಹರಿಯುವ ಜಿಜ್ಞಾಸೆಯಂತೆಯೂ ಇತ್ತು.. ನನ್ನ ಬಾಹ್ಯ ಜೀವನವನ್ನು ನೋಡಿದರೆ ಬೇರಾವ ಹುಡುಗಿಗೂ ನನ್ನಷ್ಟು ಸೌಭಾಗ್ಯಮಾನವಾದ ಮತ್ತು ಸಂತೋಷಕರವಾದ ಜೀವನವು ಇರಲಿಲ್ಲ. ಬೆಳಿಗ್ಗೆ ಮತ್ತು ಮಧ್ಯಾಹ್ನ ನನಗೆ ಬೇಕಾದಂತೆ ಓದುತ್ತಾ ಇರುವುದು ಮತ್ತು ಸಾಯಂಕಾಲದ ವೇಳೆಗೆ ಆಟವಾಡುವುದು, ತಿರುಗಾಡುವುದು ಅಥವಾ ಕುದುರೆ ಸವಾರಿ ಮಾಡುವುದು, ಆಗಿಂದಾಗ್ಗೆ ನಡೆಯುತ್ತಿದ್ದ ಫಲಾಹಾರದ ಕೂಟಗಳಲ್ಲಿ ನಾನು ಎಲ್ಲರಿಗಿಂತಲೂ ಉತ್ಸಾಹದಿಂದ ಭಾಗವಹಿಸುವುದೂ ಇತ್ಯಾದಿ ಮಾಡುತ್ತಿದ್ದೆನು.. ಬಿಲ್ಲು ಹೊಡೆಯುವುದರಲ್ಲಿ ತುಂಬಾ ಚಾತುರ್ಯಳಾಗಿದ್ದ ನಾನು ಅದರಲ್ಲಿ ಗೆದ್ದ ಮೊದಲನೇ ಬಹುಮಾನವಾದ ಉಂಗುರವನ್ನು ಪ್ರದರ್ಶನಾರ್ಥವಾಗಿ ಹೆಮ್ಮೆಯಿಂದ ತೊಟ್ಟುಕೊಳ್ಳುತ್ತಿದ್ದೆನಲ್ಲದೆ ಮೈದಾನದಲ್ಲಿ ಆಡುವ ಚೆಂಡಾಟವು ನಿರಂತರವೂ ನನ್ನನ್ನು ನಿರೀಕ್ಷಿಸುತ್ತಿತ್ತು, ಜೀವನದಲ್ಲಿ ಪಡಬಹುದಾದ ಅಲ್ಪವಾದ ಕಷ್ಟನಷ್ಟಗಳ ಅನುಭವಕ್ಕೂ ಅವಕಾಶ ಕೊಡದೆ ನನ್ನ ಮಮತೆಯ ತಾಯಿಯು ನನ್ನನ್ನು ನಿಜವಾಗಿಯೂ "ಕೆಡಿಸಿದಳು" ಎಂದೇ ಹೇಳುತ್ತೇನೆ. ಪ್ರಯಾಸಕರವಾದ ಕೆಲಸಗಳನ್ನು ಮಾಡುವುದಕ್ಕೆ ನನ್ನನ್ನು ಬಿಟ್ಟದ್ದೇ ಇಲ್ಲ. ಎಲ್ಲ ತಾಪತ್ರಯಗಳು ಅವಳ ಮೇಲೆ, ಮತ್ತು ಸುಖ ಸಂತೋಷವೆಲ್ಲ ನನ್ನ ಮೇಲೆ ಬೀಳಬೇಕೆಂದೇ ಅವರ ಆಶಯವಾಗಿತ್ತು. ಅವಳ ಜೀವನವು ತುಂಬಾ ತೊಂದರೆಯಿಂದ ಕೂಡಿತ್ತೆಂದು ಆಗ ನಾನು ನೆನೆಯದೆ ಇದ್ದುದನ್ನು ಇಂದೀಗ ನೆನೆಯುತ್ತೇನೆ. ನನ್ನ ಅಜ್ಞಾನ ಶಾಲೆ ಮತ್ತು ಕಾಲೇಜು ವಿದ್ಯಾಭ್ಯಾಸಕ್ಕೆ ತಗಲಿದ ಹಣವೆಲ್ಲ ಒದಗಿಸುವುದು ಅವಳ ನಿತ್ಯದ ತಲೆನೋವಾಗಿತ್ತು, ಅವಳು ಹಲವರಿಗೆ ಕೊಡಬೇಕಾದ್ದ ಹಣವನ್ನು ಅವಳು ನಂಬಿದ್ದ ಒಬ್ಬ ವಕೀಲನ ಮುಖಾಂತರವಾಗಿ

ಕೊಡುತ್ತಾ ಇದ್ದಾಗ ಅವನು ಆ ಹಣವನ್ನು ತಾನೆ ಉಪಯೋಗಿಸಿ ಮೋಸ ಮಾಡಿ ತಾಯಿಯನ್ನು ಇನ್ನಷ್ಟು ಚಿಂತೆಗೆ ಈಡಾಗಿಸಿದ್ದನು, ಹೇಗೂ ನನಗಾದರೋ ಬೇಕಾದ್ದೆಲ್ಲವೂ ಅಲ್ಲಿಯೇ ಯಾವಾಗಲೂ ಇತ್ತು. ನಾವು ಹಿಂದು ನರ್ತನ ಕೂಟಕ್ಕೆ ಹೋಗುವುದೆ? ಅಲ್ಲಿಗೆ ನಾನು ಹೋಗಲಿಕ್ಕೆ ಹೊರಡುವ ವರೆಗೂ ನಾನು ಏನನ್ನು ಉಡುತ್ತೇನೆಂದು ಆಲೋಚಿಸಬೇಕಾಗಿಯೇ ಇರಲಿಲ್ಲ. ಎಲ್ಲವೂ ನಖಶಿಖಾಂತರದ ವರೆಗೂ ಪೂರ್ತಿ ಇತ್ತು. ಮೊಣಕಾಲುದ್ದಕ್ಕೂ ಬೀಳುತ್ತಿದ್ದ ನನ್ನ ಗುಂಗುರಾದ ತಲೆಗೂದಲನ್ನು ನನ್ನ ತಾಯಿಯೇ ಬಾಚಬೇಕಿತ್ತು, ಅವಳ ಕೈಗಳೇ ನನ್ನ ಉಡುಗೆಯನ್ನು ಸರಿಪಡಿಸಿ ಕಡೆಗೆ ಹೂಮುಡಿಯಬೇಕಿತ್ತು. ಒಮ್ಮೊಮ್ಮೆ ನಾನು ಅವಳನ್ನು ರೇಗಿಸಲಾಯಿಸಿ ನನ್ನ ಬಟ್ಟೆಗೆ ಧುಮುಕಿಯನ್ನು ನಾನೆ ಹೊಲಿಯುವೆನೆಂದೋ ಅಥವಾ ಬೇರೆನಾದರೊಂದನ್ನು ಸರಿಪಡಿಸಿಕೊಳ್ಳುವೆನೆಂದೋ ಹೇಳಿದರೆ ಅವಳು ನನಗೆ ಮುತ್ತಿಟ್ಟು ನಾನು ಪುಸ್ತಕಗಳನ್ನು ಓದುವುದಾಗಲೀ ಆಟವಾಡುತ್ತಿರುವುದಾಗಲೀ ಮಾಡುತ್ತಿರಬೇಕೆಂದು ಹೇಳುವಳು. ಅವಳ ಜೀವನದ ಒಂದೇ ಒಂದು ಸಂತೋಷವೆಂದರೆ ತನಗೆ ಒಂದು 'ನಿಧಿ'ಯಂತಿದ್ದ ನನ್ನನ್ನು ಸಂತೋಷಪಡಿಸುವುದೇ ಆಗಿತ್ತು. ನಮಗೆ ಮಾಡಬಹುದಾದ ಕೆಲಸಗಳನ್ನು ನಾವೇ ಮಾಡದೆ ಜೀವನವನ್ನು ಸುಖಮಯವೆಂದು ಭಾವಿಸಿದ್ದು ಕಡೆಗೆ ಯಾರ ರಕ್ಷಣೆ ಸಿಗಲೆಂದು ಹಾಗೆ ಭಾವಿಸಿದ್ದೇವೋ ಆ ತಾಯ್ತನದ ಸಂರಕ್ಷಣಾ ರೆಕ್ಕೆಯು ಕಳಚಿ ಹೋದಾಗ ಮತ್ತೆ ಜೀವನವು ಯಾವ ರೀತಿಯೆಂಬುದನ್ನು ನಾನು ತಿಳಿದವಳೇ ಆಗಿದೆ. ತಾಯಿಯ ಪ್ರೀತಿಯು ನನಗಾಗಿ ಎಷ್ಟು ಹೋರಬಹುದೋ ಆ ಎಲ್ಲ ಕಷ್ಟನಷ್ಟಗಳನ್ನು ನನ್ನಿಂದ ಹೊತ್ತು ಆ ರೀತಿ ನನ್ನ ಬಾಲ್ಯವು ಸಂರಕ್ಷಿಸಲ್ಪಟ್ಟಿದ್ದರಿಂದ ಜೀವನವು ಒಂದು ದೊಡ್ಡ ಹೋರಾಟವೆಂಬುದಾಗಿ ನಾನು ಭಾವಿಸಿಯೇ ಇರಲಿಲ್ಲ, ಆದರೂ ಬಡವರನ್ನು ಕಂಡಾಗ ಅವರಿಗೆ ಸಹಕರಿಸಲಿಕ್ಕೆಂದು ಕಳವಳಪಡುತ್ತಿದ್ದೆನು, ಅಂದಿನ ನನ್ನ ಸುಖ ಸಂತೋಷವನ್ನು ಕೃತಜ್ಞತಾಪೂರ್ವಕವಾಗಿಯೇ ನಾನು ಅನುಭವಿಸಬಹುದಾಗಿ ನಂಬುತ್ತೇನೆ. ನಾವು ಮೈಮರೆತು ಬಿಸಿಲಿನಲ್ಲಿ ಹಾಯಾಗಿ ಮಲಗಿ ಅದರ ಪ್ರಯೋಜನವನ್ನು ಪಡೆಯುವಷ್ಟೇ ಯಥಾವತ್ತಾಗಿ ಅಂದಿನ ನನ್ನ ದಿನಗಳನ್ನು ಸಂತೃಪ್ತಿಯಿಂದ ಕಳೆದೆನು. ನಾನು ನನ್ನ ತಾಯಿಯನ್ನು ಅತಿಶಯವಾಗಿ ಪ್ರೀತಿಸಿದ್ದೆನು, ಆದರೆ ಅವಳ ಮಮತೆಯ ಶ್ರೇಷ್ಠತೆಯೆಂದಿಗಲಿ ಅವಳ ಮನೆಯನ್ನು ಬಿಡುವ ವರೆಗೂ ನಾನು ಅವಳಿಗೆ ಎಷ್ಟು ಋಣಿಯಾಗಿದ್ದೆನೆಂಬುದನ್ನು ತಿಳಿದೇ ಇರಲಿಲ್ಲ. ಬಾಲ್ಯದಲ್ಲಿ ಅಂಥಾ ತರಬೇತು ಹಿತಕರವೇ? ನನಗೆ ಅದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಪ್ರಪಂಚದ ವ್ಯವಹಾರಕ್ಕೆ ಕಾಲಿಟ್ಟಾಗ ಸಾಮಾನ್ಯ ಸಮಸ್ಯೆಗಳೂ ಅಂಧವನನ್ನು ದಂಗು ಬಡಿಸುತ್ತವೆ. ಜೀವನದ ಗಹನವಾದ ರಹಸ್ಯಗಳನ್ನು ಬಾಲ್ಯ

ಪಟ್ಟಿಯನ್ನು ತಿಳಿಸಿದರೆ ಅದು ಎಷ್ಟು ಮಕ್ಕಳಿಗೆ ಹಿತಕರವಾಗದೇ ಎಂಬು
ದಾಗಿ ಕೇಳಲೇ ಬೇಕಾಗಿದೆ. ಹೀಗಿದ್ದರೂ ಹಿಂದಿರುಗಿ ನೋಡಲು ಸುಖ
ಪ್ರದವಾಗಿದ್ದ ಬಾಲ್ಯವು ಇದ್ದುದಾದರೆ ಅದು ನಿಜಕ್ಕೂ ಸ್ವರ್ಣಯುಗವೆ
ಆಗಿದೆ. ಅದು ಒಂದು ಸ್ವರ್ಣದ ನಿಧಿಯಂತೆ ಇದ್ದು ಅನಂತರದ
ಜೀವನದಲ್ಲಿ ಯಾವ ಕಳ್ಳನೂ ಕದಿಯಲಾರದ ಅಮೂಲ್ಯ "ನಿಧಿ"ಯಾಗಿ
ಉಳಿಯುತ್ತದೆ. ಅಂದು ನಾನು ಸುಖ ಸಂತೋಷದಿಂದ ವಿದ್ಯೆಯನ್ನು ಕಲಿ
ಯುತ್ತಿದ್ದ ಕಾಲದಲ್ಲಿ ನನ್ನನ್ನು ಎಲ್ಲರೂ ಸೂರ್ಯಪ್ರಕಾಶ (sun-shine)
ಎಂಬುದಾಗಿ ಕರೆಯುತ್ತಿದ್ದರು. ಅಂದಿನ ನನ್ನ ಓದುವಿಕೆಯು ಗಹನ
ವಾದ ಜೀವದೊಡನೆ ಕೈಬೆರೆತಿದ್ದ ನನ್ನ ಮನಸ್ಸು ಯಾವೆಡೆಗೆ ಮಾ
ರುತ್ತು ಎಂಬುದನ್ನು ಸೂಚಿಸುತ್ತದೆ. ಪೂರ್ವಕಾಲದ ಕ್ರೈಸ್ತಗುರುಗ
ಳೆಲ್ಲಿದ್ದ ಗುರುಗಳು ಇಂದಿಗೂ ನನ್ನ ಮುಖ್ಯ ಸಂಗಾತಿಗಳಾಗಿದ್ದಾರೆ.
Shepherd of Hermas, Polycarp – ಇವನ ಸೂಕ್ತಿಗಳು,
Barnabas, Ignatius ಮತ್ತು Clement ಇವರ ಗ್ರಂಥ
ಗಳು, Chrysostom ಇವನ ವ್ಯಾಖ್ಯಾನಗಳು, Augustine
ಇವನ ಶಿಷ್ಟಾಚಾರದ ನೀತಿಗಳನ್ನೆಲ್ಲ ನಾನು ಬಹಳ ನೋಡಿದೆನು.
ಇವುಗಳೊಡನೆಯೇ ನಾನು Pusey, Liddon ಮತ್ತು Keble
ಇವರ ಬರಹಗಳನ್ನು ಇತರ ಸಾಮಾನ್ಯ ಕೃತಿಗಳೊಡನೆ ಸಮವಾ
ಗಿ ನೋಡಿದೆನು, ಕ್ಯಾಥೊಲಿಕ್ ಸಂಬಂಧದ ಉಪನ್ಯಾಸಗಳಿಗೆ
ಮಾರುಹೋಗಿ ಶತಮಾನಗಳ ಕಾಲದ ಮಹಾಸಂತರ ಮತ್ತು ಪ್ರಾ
ಜ್ಞರ ತಳಹದಿಯಿಂದ ಕಟ್ಟಲ್ಪಟ್ಟ, ಯೋಗ್ಯತೆಯಿಂದ ಕೂಡಿದ
ನಮ್ಮ "ಒಬ್ಬನೇ ದೇವರು, ಒಂದೇ ಮತ, ಒಂದೇ ಜ್ಞಾನವಿಧಿ" ಎಂ
ಬಲ್ಲವರಿಗೂ ಬಂದ ಮತ್ತು ನಾನೆ ಆ ಪವಿತ್ರ ಸಂಘದ ಒಂದು ಭಾ
ಗವಾಗಿ ಭಾವಿಸಿದೆನು. ಧಾರಾವಾಹಿಯಾಗಿ ಹರಿಯುತ್ತಾ ಇದ್ದುದರ
ಪರಿಣಾಮವಾಗಿ ನನ್ನ ಅಂತರ್ಜೀವವು ಬಲವಾಗಿ ಬೆಳೆಯಿತು.
ಪ್ರತಿ ವಾರದ ಸಭಾ ಪ್ರಾರ್ಥನೆಯು ನನ್ನ ಆಧ್ಯಾತ್ಮ ಜೀವ
ನವು ತಿರುಗಿತಲ್ಲದೆ ದೈವಸಂಪರ್ಕವನ್ನು ಪಡೆಯುವ ಅ
ರಿವನ್ನು ಹೆಚ್ಚಿಸುತ್ತಿತ್ತು. ಕ್ರೈಸ್ತ ಸಂಘದ ವಿಧಿಗನುವಾಗಿ ನಾ
ನು ಉಪವಾಸದಲ್ಲಿರುತ್ತಿದ್ದೆನು, ದೈಹಿಕ ನೋವನ್ನು ನಾನು
ಸಹಿಸಬಲ್ಲೆನೋ ಎಂದು ನೋಡಲು ಒಮ್ಮೊಮ್ಮೆ ಚಿತ್ತದಿಂದ
ನಾನೇ ಹೊಡೆದುಕೊಳ್ಳುತ್ತಿದ್ದೆನು. ಹಿಂದಿನ ಯುಗಗಳು ನಡೆದ ದಾ
ರಿಯಲ್ಲಿ ನಾನು ನಡೆಯುವ ಸಿದ್ಧತೆಯನ್ನು ಪಡೆದೆನೋ ಎಂದು
ಯೋಚಿಸುತ್ತಿದ್ದೆನು. ನಾನು ಎಳೆತನದ ಮೇಲೆ ಇದ್ದ ನಿಷ್ಕಲ
ಭಕ್ತಿಯು ಅವನನ್ನು ತನ್ನ ಸ್ವರ್ಗೀಯ ಸಿಂಹಾಸನದಿಂದ ಕೆಳ
ತಂದು ನಾನು ಅವನನ್ನು ನನ್ನ ಆತ್ಮದ ಕಣ್ಣಿಂದ ಹೇಗೆ ಅಗೋ
ಚರನಾಗಿ ಕಂಡೆನೋ ಅದೇ ರೀತಿ ಈಗ ಪ್ರತ್ಯಕ್ಷ ಗೋಚರನಾಗಿ

ನಾನು ಅವನಲ್ಲಿ ಇಟ್ಟ ನನ್ನ ನಂಬಿಕೆ ಮತ್ತು ಅಭಿಲಾಷೆಗಳನ್ನು ಪೂರೈಸುವವನೋ ಎಂದು ನೆನೆಯುವೆನು. ಅವನ ಸೇವೆಯನ್ನು ಅವನ ಸಾರಿದ ಸಂದೇಶದ ಮೂಲಕವಾಗಿ ಮಾಡುವುದೇ ನನ್ನ ಜೀವನದ ನಿಶ್ಚಲ ಧ್ಯೇಯವಾಗಿದೆ. ನನ್ನ ಪ್ರೀತಿಯನ್ನು ತ್ಯಾಗದಿಂದಲೂ ನನ್ನ ಸ್ವತ್ವವನ್ನು ಕೃತಜ್ಞತೆಯನ್ನು ಸೇವೆಯಿಂದಲೂ ತೋರಿಸುವೆಂಥಾ ಸ್ವಾಮಿಗಳ ಜೀವನದ ಕಡೆ ನನ್ನ ಮನಸ್ಸು ತಿರುಗಲು ಆರಂಭವಾಯಿತು.

ನನ್ನ ಜೀವನವನ್ನು ನಾನು ಮಾಡಿದ ಹಲವು ಪ್ರಮಾದಗಳು, ಕೈಗೊಂಡು ಬಿಟ್ಟುಕೊಂಡು ಮಾಡಿದ ತಪ್ಪುಗಳು ಮತ್ತು ಅವಿವೇಕದ ಅನಿಷ್ಟ ಕೆಲಸಗಳ ಮೂಲಕವಾಗಿ ತಿರುಗಿ ಬಿಟ್ಟು ಹಿಂದಕ್ಕೆ ನೋಡಿದಾಗ ದೇವರಿಗಿಂತ ಮಹತ್ತಾದ ಕಾರ್ಯಕ್ಕಾಗಿ ಮಾನವೀಕರಿಸಿ ಅರ್ಪಿಸಿದ್ದ ತ್ಯಾಗವೇ ಮೂಲ ಧ್ಯೇಯವಾಗಿತ್ತೆಂದು ಊಹಿಸುವೆನು. ಆ ಅಭಿಲಾಷೆಯು ಅತ್ಯಂತ ಬಲವಾಗಿ ನನ್ನನ್ನು ಆವರಿಸಿದಾಗ ಈ ಜನ್ಮದ ಮೇಲೆ ಅಧಿಕಾರ ನಡೆಸುವ ಹಿಂದಿನ ಜನ್ಮದ ಪ್ರೇರಣೆಯೇ ಅದೆಂದು ತಿಳಿಯುತ್ತೇನೆ. ಆ ಪ್ರೇರಣೆಯನ್ನು ಅನುಸರಿಸದರೆ ಅದು ತನ್ನ ಅಸ್ತಿತ್ವವನ್ನು ಸೇವೆಗೆಂದು ಬಲಾತ್ಕಾರದ ಸ್ವತ್ವವನ್ನಾಗಿ ಮಾಡಬೇಕಾಗಿದ್ದನ್ನು ದುಃಖದಿಂದ ಇತರ ಹಠಾತ್ತಾಗಿ ತ್ಯಾಗವನ್ನು ಮಾಡಿದಂತೆ ಆಗುವುದಿಲ್ಲವೆಂಬುದು ಇದರಿಂದ ತಿಳಿಯುತ್ತದೆ. ತ್ಯಾಗದ ಪರಿಣಾಮವೇನೆಂದರೆ ಆತ್ಮಸಂತೃಪ್ತಿಯು ಬಗ್ಗೆಯನ್ನು ಸುಲಭವಾದ ಹಾದಿಗಾಗಿ ಹರಿಯುವುದೇ ಆಗಿದೆ. "ಯಜ್ಞ" ಅಥವಾ ಅರ್ಪಣೆಯು ವಿಶೇಷ ಆಕರ್ಷಕವಾದುದಾಗಿದೆ. "ಯಜ್ಞ" ಅಥವಾ ತ್ಯಾಗವನ್ನು ಮಾಡಿದ್ದರೆ ಹೃದಯಾಂತರಾಳದಲ್ಲಿ ಅರಿಯುವುದೇ ಶರೀರಿಸಿದಂತಾಗದು, ಇಲ್ಲದೆ ರಂಗವಾನು ಅಶಾಂತಿ ಮತ್ತು ಅನೀತಿ ವಶಕ್ಕೆ ಪಾತ್ರನಾಗುವನು. ಇತ್ತೀಚೆಗೆ ನನ್ನ ಬಗ್ಗೆ ಪ್ರಶಂಸನೀಯವಾಗಿ ಮಾತಾಡಿದ ಸಹೃದಯರ ತಪ್ಪು ಅಭಿಪ್ರಾಯಗಳು ಈ ಸಂದರ್ಭದಲ್ಲಿ ಕಾಡುಬಂದಿವೆ. ಸೇವೆಗಾಗಿ ಪ್ರಯತ್ನಿಸುವುದು ಸ್ವಾರ್ಥವನ್ನು ಲಕ್ಷಿಸದೆ ಮಾಡುವ ಕ್ರಮದಾಯಕ ಕೆಲಸವಲ್ಲ. ಅದರ ನಮ್ಮ ಮನಸ್ಸಿನ ಮೇಲೆ ಅಧಿಕಾರ ನಡೆಸುವ ಆತ್ಮಕ್ಕೆಗೆ ಬಲಿ ಬಿದ್ದರೆ ಅದು ಕಷ್ಟಕ್ಕೆ ಕಾರಣವಾಗುತ್ತದೆ. ಪವಿತ್ರವಾದ ಪ್ರೀತಿಗೆ ಕಟ್ಟುಬಿದ್ದು ತನ್ನ ಅಳುವ ಮಗುವನ್ನು ಮೊಲೆಹಾಲನ್ನುಣಿಸಿ ಶಾಂತಗೊಳಿಸುವ ತಾಯಿಯನ್ನು ನಾವು ಪ್ರಶಂಸಿಸುವುದಿಲ್ಲ. ಬದಲಾಗಿ ಅಳುವ ಮಗುವನ್ನು ಅಲಕ್ಷಿಸಿ ಬಿಟ್ಟು ಗೊಂಬೆಯೊಡನೆ ಅವಳು ಆಟವಾಡುತ್ತಾ ಇದ್ದರೆ ಅವಳನ್ನು ನಾವು ನಿಂದಿಸುವಂತೆ ಮಾನವ ಜನಾಂಗವೆಂಬ ಅನಾಥ ಶಿಶುವಿನ ಮೊರೆಗೆ ಯಾರ ಕಿವಿಗಳು ತೆರೆದಿವೆಯೋ ಅಂಥವರು ಮಾಡುವ

ಸೇವೆಗೆ ಅವರನ್ನು ಹೊಗಳುವುದನ್ನು ಬಿಟ್ಟು ಬಹುಶಃ ಅವರು ಸುಮ್ಮನಿದ್ದ ಕಷ್ಟದಲ್ಲಿ ಅಂಥಾ ಸ್ವಾರ್ಥಿಗಳನ್ನು ನಿಂದಿಸುತ್ತೇ ಬೇರೆ, ದುಃಖಿತರ ಆರ್ತಧ್ವನಿಯು ನನ್ನ ಹೃದಯವನ್ನು ಕೆರಳಿಸುತ್ತಿಂದು ಈಗ ನನಗೆ ಗೊತ್ತಿದೆಯಲ್ಲದೆ ಹಿಂದಿನ ಜನ್ಮಗಳಲ್ಲಿ ಮಾಡಿದ ಸೇವೆಯ ಫಲವಾಗಿ ನಾನು ಪತಿತರ ದುಃಖವನ್ನಾಲಿಸಲು ನನಸ್ಸಿನ ಕಿವಿಗಳನ್ನು ತಂದಿದ್ದೇನೆ, ಆ ಹಿಂದಿನ ಜನ್ಮಗಳ ಒಂದು ಸ್ಮೃತಿಯನ್ನು ಪ್ರಾತಾತ್ಮ್ಯಗಳ ಕನಸಿನ ದೃಶ್ಯಗಳು ಕಡೆ ಬಿಡಿಸಿ ಅನಂತರ ಅದೇ ಹೊಡೆತಗಳನ್ನು ನಿಶ್ಚಯಿಸುವಂತೆ ಪುಸ್ತಕಗಳನ್ನಾಗಿ ಮಾಡಿ, ಕಡೆಗೆ ಆ ಹೆಂಗಸನ್ನು ಜನರ ಪ್ರಿಯ ಹೇಳಿಕೆ ಮತ್ತು ದ್ವೇಷಕ್ಕೆ ಈಡುಮಾಡಿದ್ದಲ್ಲದೆ ಕೊನೆಗೆ ಜ್ಞಾನವಿವೇಚನೆಯು ಎದುರಿಗೆ ಇತರ ಎಲ್ಲಾ ವಿಶ್ವಾಸಗಳು ಬಹು ಶಿಕ್ಷದಿಂದು ತೋರಿಸಿದ ತತ್ವಜ್ಞಾನ (Theosophy) ದತ್ತ ಅವಳನ್ನು ಓಡಿಸಿತು.

1866ರ ವರುಷದ ಪುನರುತ್ಥಾನದ ಹಬ್ಬ (Easter) ದ ಕಾಲವು ನನ್ನ ಜೀವನದಲ್ಲಿ ಸ್ಮರಣೀಯವಾಗಿದೆ. ನಾನು ವಿವಾಹವಾದ ಯುವ ಪತಿ ಬೀಸೆಂಟನಿಗೆ ನನ್ನನ್ನು ಪರಿಚಯ ಮಾಡಿಸಿಕೊಟ್ಟಿದ್ದು ನನ್ನಲ್ಲಿ ಇದ್ದ ಮೊದಲ ಧಾರ್ಮಿಕ ಸಂದೇಹವನ್ನು ನಾನು ಎದುರುಗೊಂಡಿದ್ದು ಜಯ ಪ್ರಾಪ್ತಿಯಾದೆನು, ಕ್ಲಾಫಮ್ ಜಿಲ್ಲೆಯಲ್ಲಿ ಹಿಂದಿನ ಕ್ರಿಸ್‌ಮಸ್ ಹಬ್ಬದ ಕಾಲದಲ್ಲಿ ಒಂದು ಚಿಕ್ಕ ಗುಡಿ (Church) ಯನ್ನು ವರಿಸಿದರು, ನನ್ನ ಅಜ್ಜನ ಮನೆಯು ಸಮೀಪದಲ್ಲಿಯೇ ಇರುವ ಅಲ್ಬರ್ಟ್ ಚೌಕದಲ್ಲಿತ್ತು, ಉತ್ಸಾಹೀ ಹುಡುಗಿಯರು ಮತ್ತು ಹೆಂಗಸರು ಇರುವಂತೆ ನನಗೆ ಪ್ರಿಯಳಾಗಿದ್ದ ನನ್ನ ತಂದೆಯ ಸೋದರಿಯು ಮತ್ತು ನಾನು ಈ ಗುಡಿಗೆ ಆಗಿಂದಾಗ್ಗೆ ಹೋಗುತ್ತಿದ್ದ ಭಕ್ತರಾಗಿದ್ದೆವು. ಪುನರುತ್ಥಾನದ ಹಬ್ಬದ ಕಾಲದಲ್ಲಿ ಆ ಊರಿನ ಬಡ ಜನರು ಮತ್ತು ಹೊಗಳಸ್ಸೆ ಕಾಣದಿದ್ದ ಲಂಡನ್ನಿನ ಚಿಕ್ಕ ಮಕ್ಕಳು ಮೆಚ್ಚುವಂತೆ ಆ ಗುಡಿಯನ್ನು ಗುಲಾಬಿ ಹಳದಿ ಹೂ, ದಾಸವಾಳ ಇತ್ಯಾದಿ ಬಗೆಯ ಬಣ್ಣ ಹೂಗಳಿಂದ ಅಲಂಕರಿಸಿದ್ದೆವು. ಅದಾಗಲೇ ನೇಮಿತನಾಗಿ ಆ ಚಿಕ್ಕ ಗುಡಿಯಲ್ಲಿ ಮತಬೋಧಕ ಸ್ಥಾನಕ್ಕೆ ತರಬೇತನ್ನು ಹೊಂದುತ್ತಿದ್ದ ಕೇಂಬ್ರಿಡ್ಜಿನ ಯುವಕ ರೆವರೆಂಡ್ ಫ್ರಾಂಕ್ ಬಿಸೆಂಟ್ ಇವನನ್ನು ಅಲ್ಲಿ ಭೇಟಿಯಾದೆನು, ಇದರಲ್ಲಿ ವಿಶೇಷವೇನೆಂದರೆ ಅವನನ್ನು ಕಂಡ ಆ ಸಮಯದಲ್ಲಿಯೇ ನಾನು ಮದುವೆಯಾಗುವೆನೆಂದೆಣಿಸಿದೆಯಲ್ಲದೆ ಅನಂತರ ವಿವಾಹಬಂಧನವನ್ನು ಮುರಿಯುವ ಸಂದೇಹವೂ ಅಂತೆಯೇ ನನ್ನಲ್ಲಿ ಮೂಡಿಬಂತು, ಮುಂದಿನ ಶುಕ್ರವಾರದಿಂದ ವರುಷದ ಮುಂದೆ ಮೋಕಾಲೂರಲು ಮತ್ತು ಪುನರುತ್ಥಾನದ ದಿನದಿಂದು ಅವನ ಸಮಾ

ದಿಯರ ಮುಂದೆ ನಿಂತರು ಆ ಹಬ್ಬಕ್ಕೆ ಹಿಂದಿನ ಆ ಪವಿತ್ರ ವಾರದಲ್ಲಿ ಎಲ್ಲಾ ಆಂಗ್ಲ ಮತ್ತು ರೋಮನ್ ಕ್ಯಾಥೋಲಿಕ್ಕರು ತಮ್ಮ ಮನಸ್ಸನ್ನು ಬಹು ಹಿಂದಿನ ಕಾಲದ ಧಾರ್ಮಿಕ ಘಟನೆಗಳಿಗೆ ಕೊಂಡೊಯ್ದು ಮಾನವ ಪುತ್ರ "Son of Man" ಇವನ ಕಡೆ ದಿನಗಳಲ್ಲಿ ನಡೆದ ಪ್ರತಿಯೊಂದು ಘಟನೆಯನ್ನು ನಾವು ಆಗ ಅವನೊಡನೆ ಇದ್ದೆವೋ ಎಂಬಂತೆ ಪೂರ್ತಿ ವಿವರಗಳನ್ನು ಆಲೋಚಿಸುತ್ತಿದ್ದೆವು. ಭೂಮಿಗೆ ಹುಟ್ಟಿಬಂದು ಮಾನವನ ಒಳಿತನ್ನು ಬಯಸಿದ ದೇವನ ಅವತಾರಿಯ ಆ ಕಡೇ ಪವಿತ್ರದಿನಗಳನ್ನರಿಯಲು ಸಾಧ್ಯವಾಗುವಂತೆ ನಾನು ಆ ನಾಲ್ಕು ಆಧಾರನಿಷ್ಠ ತತ್ವಗ್ರಂಥ (Gospels)ಗಳಿಂದ ವಿಷಯಗಳನ್ನು ಸಂಗ್ರಹಿಸಲು ಆಲೋಚಿಸಿದೆನು, ಕ್ರಿ.ಶ. 33ನೇ ವರ್ಷದ ಆ ದುರಂತ ದಿನ್ನವೇಗದ ವೇಳೆ "ಅವನನ್ನು ನಮ್ಮ ಹಿತಕ್ಕಾಗಿ ಶಿಲುಬೆಗೆ ಹೊಡೆದು ತೂಗಿದ ವಿರೀಗೆ" ನಡೆದುದೆಲ್ಲವನ್ನೂ ಅವನ ಪಾದಗಳನ್ನನುಸರಿಸುತ್ತಾ ನೋಡಿ ಹೇಳಲಾಗಿದೆ. ಆ ಜ್ಞಾನದಿಂದ ಹುಟ್ಟುವ ಧೈರ್ಯದಿಂದ ನಾನು ಕೆಲಸಕ್ಕೆ ತೊಡಗಿದೆನು, ನನ್ನ ಬರೆಹವು ಇಂತಿತ್ತು:—

ಮ್ಯಾಥ್ಯೂ	ಮಾರ್ಕ್	ಲೂಕ್	ಜಾನ್
ಆದಿತ್ಯವಾರ	**ಆದಿತ್ಯವಾರ**	**ಆದಿತ್ಯವಾರ**	**ಆದಿತ್ಯವಾರ**
ಜೆರೂಸಲೇಮಿಗೆ ಸವಾರಿ ಹೋದುದು, ದೇವಸ್ಥಾನವನ್ನು ಶುದ್ಧೀಕರಿಸಿದ್ದು, ಬೆತ್ತನಿಗೆ ಹಿಂದಿರುಗಿದ್ದು	ಜೆರೂಸಲೇಮಿಗೆ ಸವಾರಿ ಹೋದುದು; ಬೆತ್ತನಿಗೆ ಹಿಂದಿರುಗಿದ್ದು,	ಜೆರೂಸಲೇಮಿಗೆ ಸವಾರಿ; ದೇವಸ್ಥಾನವನ್ನು ಶುದ್ಧೀಕರಿಸಿದ್ದು; ದಿನಂಪ್ರತಿ ದೇವಸ್ಥಾನದಲ್ಲಿ ಬೋಧಿಸಿದ್ದು.	ಜೆರೂಸಲೇಮಿಗೆ ಸವಾರಿ; ದೇವಸ್ಥಾನದಲ್ಲಿ ಮಾತಾಡಿದ್ದು.
ಸೋಮವಾರ	**ಸೋಮವಾರ**	**ಸೋಮವಾರ**	**ಸೋಮವಾರ**
ಅಂಜೂರ ವೃಕ್ಷವನ್ನು ಶಪಿಸಿದ್ದು, ದೇವಸ್ಥಾನದಲ್ಲಿ ಬೋಧಿಸಿದ್ದು; ಹಲವು ನೀತಿಕಥೆಗಳನ್ನು ಹೇಳಿದ್ದು. ಅಂಜೂರ ವೃಕ್ಷ ಮಂಗಳವಾರದವರೆಗೂ ಉದುರಲಿಲ್ಲ	ಅಂಜೂರ ವೃಕ್ಷವನ್ನು ಶಪಿಸಿದ್ದು; ದೇವಸ್ಥಾನವನ್ನು ಶುದ್ಧೀಕರಿಸಿದ್ದು; ನಗರದ ಹೊರಗೆ ಹೋದುದು.	(ಮ್ಯಾಥ್ಯೂವಿನ ವಿಚಾರದಲ್ಲಿ ನಡೆದಂತೆಯೆ!)	—
ಮಂಗಳವಾರ	**ಮಂಗಳವಾರ**	**ಮಂಗಳವಾರ**	**ಮಂಗಳವಾರ**
ಎಲ್ಲಾ ಅಧ್ಯಾಯ	ಅಂಜೂರ ವೃಕ್ಷ	ಉಪನ್ಯಾಸಗಳು.	—

ಗಳು — ೨೦ xxii–xxv - ಇವೆಲ್ಲ ಮಂಗಳವಾರ ಹೇಳಿದ್ದು; ಎರಡು ದಿನದ ನಂತರ ಪಸ್ಕಕ್ಕೆ ಹೋದರಂತೆ.	ಪತ್ತು ಉದುರಿಸಿದ ನಂತ್ರ ಕಾಣುವುದು; ಅದರ ನಂತರ ಉಪನ್ಯಾಸಗಳು.	(ದಿನಾಂಕಗಳು ನಮೂದಿಸಿಲ್ಲ.)	⟵ ξ
ಬುಧವಾರ ಈ ದಿನ ಲೂಕನ ಚಿತ್ರಣದಲ್ಲಿಲ್ಲ	**ಬುಧವಾರ** ಬೆಥಾನಿ: ಶ್ರದ್ಧೆ, ಸುಗಂಧದ್ರವ್ಯ	**ಬುಧವಾರ** ಒಡೆ ಕಾಣಿಕೆಗಳು ಲ್ಲಿ ಊಟದಲ್ಲಿ	**ಬುಧವಾರ** ಇದೆಯೆ ಪಿಪ್ಪಡು (Ointment)
ಗುರುವಾರ ಪಸ್ಕಕ್ಕೆ ಹೋಗಿ ಊಟ ಸಿದ್ಧತೆ; ಊಟ: ಪವಿತ್ರ ಯೂಕರಿಸ್ಟನ ಸಂಸ್ಥೆ; ಗೆತ್ಸೆಮನೆ ಪ್ರಾರ್ಥನೆಯಿಂದ ಪ್ರಾರಂಭ; ಕೈಯಾಫಾಸನಿಗೆ ಒಪ್ಪಿಸಲ್ಪಟ್ಟದ್ದು; ನಂತರ ಪೇತ್ರನ ನಿರಾಕರಣೆ.	**ಗುರುವಾರ** (ಮತ್ತಾಯನ ವಿವರದಲ್ಲಿ ಹೇಳಿದಂತೆ)	**ಗುರುವಾರ** (ಮತ್ತಾಯನ ವಿವರದಲ್ಲಿ ಹೇಳಿದಂತೆಯೇ)	**ಗುರುವಾರ** ಶಿಷ್ಯರಿಗೆ ಉಪನ್ಯಾಸ; ಅವರ ಪಾದಗಳನ್ನು ತೊಳೆಯುವುದು; ಯೂಕರಿಸ್ಟನ ವಿಷಯವಾಗಿ ಪ್ರವಚನ; ಗೆತ್ಸೆಮನೆ ತೋಟದ ವಿಷಯ ಪ್ರವಚನ; ನಂತರ ಪೇತ್ರನ ನಿರಾಕರಣೆ.
ಶುಕ್ರವಾರ ಪಿಲಾತನ ಬಳಿ ಒಯ್ಯುವುದು; ಜುದಾಸನು ತಾನೇ ನೇಣುಹಾಕಿಕೊಳ್ಳುವನು; ವಿಚಾರಣೆ; ಶಿಕ್ಷೆ, ಮರಣ; ಶಿಲುಬೆಗೆ ಏರಿಸುವುದು; ಮಧ್ಯಾಹ್ನ 12 ಗಂಟೆಯಿಂದ 3 ಗಂಟೆಯ ವರೆಗೆ ಕತ್ತಲೆ; 3 ಗಂಟೆಗೆ ಮರಣ.	**ಶುಕ್ರವಾರ** (ಮತ್ತಾಯನ ವಿವರದಲ್ಲಿ ಹೇಳಿದಂತೆ; ಆದರೆ ಶಿಲುಬೆಗೆ ಹಾಕಿದ್ದು ಬೆಳಿಗ್ಗೆ 9 ಗಂಟೆಗೆ.)	**ಶುಕ್ರವಾರ** ಪಿಲಾತನಲ್ಲಿಗೆ ಒಯ್ಯುವುದು; ಹೆರೋದನಿಗೆ ಹೇಳಿ ಕಳಿಸಿದ್ದು; ಪಿಲಾತನ ಬಳಿ ಹಿಂದಕ್ಕೆ ಕಳುಹಿಸಿದ್ದು, ಒಬ್ಬ ದುರಾತ್ಮನ ಬಿಡುಗಡೆ.	**ಶುಕ್ರವಾರ** ಪಿಲಾತನಲ್ಲಿ ಒಯ್ಯುವುದು; ಯೆಹೂದ್ಯರ ರಾಜ ಇರುವುದು; ಹಿಂದಿನವ ಮಾತನ್ನು ಪಿಲಾತನಿಂದ ಶಿಕ್ಷೆ. ಅವಹೇಳನ; ಪಿಲಾತನು ಯೆಹೂದ್ಯರಿಗೆ ... ವಸ್ತ್ರದಲ್ಲಿ ತೋರಿಸಿದ್ದು.

ಹೀಗೆ ನನ್ನ ಈ ಬರವಣಿಗೆಯನ್ನು ಮುಂದುವರಿಸುತ್ತಾ ಇದ್ದಾಗ ಈ ನಾಲ್ಕು ವಿಭಾಗಗಳಲ್ಲಿ ಅಲ್ಲಲ್ಲಿ ತಪ್ಪುಗಳು ತೋರಲು ನನಗೆ ಅನುಮಾನವು ಹುಟ್ಟಿತು. ಅಲ್ಲದೆ ಒಂದಕ್ಕೊಂದು ವಿರೋಧವಾದ ಹೇಳಿಕೆಗಳು ಅದರಲ್ಲಿ ಕಂಡುಬಂದಾಗ ನನಗೆ ಇನ್ನಷ್ಟು ಅತೃಪ್ತಿಗೆ ಕಾರಣವಾಯಿತು. ಕಡೆಗೆ ಈ ಕತೆಯಲ್ಲಿರುವ ನಿಜತ್ವದ ಬಗ್ಗೆ

ಸಂದೇಹವು ನನ್ನ ಮುಖಕ್ಕೆ ಹಾವು ಬುಸುಗುಟ್ಟುವಂತೆ ಬುಸುಗುಟ್ಟುತ್ತ, ಆದರೆ ಸಂದೇಹಪಡುವುದು ಪಾಪ ಮಾತ್ರವಲ್ಲ; ಒಂದು ಉತ್ತಮ ಕಾರ್ಯವನ್ನು ಆವೇಶಪೂರ್ವಕವಾಗಿ ಮಾಡುವಾಗ ಸಂಶಯಪಡುವುದು ಇಷ್ಟಕ್ಕೂ ದೊಡ್ಡ ಅಪರಾಧವೆಂದೇ ನನಗೆ ಒಂದು ಕ್ಷಣಕ್ಕೆ ನನ್ನ ಬರೆವಣಿಗೆಯನ್ನು ಅಂತೆಯೇ ಇಟ್ಟೆನು, ಆಗ ಈ ಸುವ್ಯಕ್ತ ವಿರೋಧಾಭಿಪ್ರಾಯಗಳು ಭಕ್ತಿಯನ್ನು ಪರೀಕ್ಷಿಸುವುದಕ್ಕೆ ಬೇಕಾದುದೆಂದು ನಾನಾಗಿಯೇ ಪ್ರಶ್ನೆಯಾಗಿ ಭಾವಿಸಿಕೊಂಡೆನು, ಅಲ್ಲದೆ ಟರ್ಟುಲ್ಯನ್ (Tertullian) ಇವನ ಪ್ರಸಿದ್ಧವಾದ ನುಡಿಯಂತೆ "ಯಾವುದೂ ಅಸಾಧ್ಯವಲ್ಲ," ಎಂಬುದನ್ನು ಬಾಯಿಪಾಠ ಮಾಡಿದ ರೀತಿಯಲ್ಲಿ ಹೇಳುತ್ತಾ ಇರುತ್ತಿದ್ದೆನು, ಕಲಿಯಲಿಕ್ಕೆ ಕಷ್ಟವಾಗಿ ಇರುವ ವಿಷಯಗಳು ಹೆಚ್ಚು ಬಹು ಬಹುಕ್ಲಿಷ್ಟವಾಗಿಯೂ ಅಸ್ಪಷ್ಟವಾಗಿಯೂ ಇರುವುದಿಲ್ಲ ಅದರಿಂದ ಬೇರ್ಪಟ್ಟು ಅಂತೆಯೇ ನಾಶವಾಗುತ್ತದೆ, ಎಂಬ Pauline ಇವನ ಸೂಕ್ತಿಗಳನ್ನು ಕುರಿತಾಗಿ ಸೇಂಟ್ ಪೀಟರ್ ಇವನು ಹೇಳಿದ್ದನ್ನು ನಾನು ನೆನೆಯುತ್ತಿದ್ದೆನು. ಮಹಾ ಪವಿತ್ರ ಮತಪ್ರವಾದಿಗಳೊಳಗೇನೇ ಪರಭಾವವು ತೋರದಿರುವಾಗ ನಾನು ಏನೂ ತಿಳಿಯದ ಮತತತ್ತ್ವ ಯಾವುದನ್ನು ಸ್ಪಷ್ಟವಾಗಿ ನೋಡದ ಅಜ್ಞಾನಿಯೆಂದೇ ಭಾವಿಸಿಕೊಂಡು ನನ್ನ ಆ ಅಜ್ಞಾನವನ್ನು ಮತತತ್ತ್ವ ಮತವಿಚಾರದಲ್ಲಿ ಅಂಥಾ ಪರಿಪೂರ್ಣ ವಿಶ್ವಾಸವಿಲ್ಲದಕ್ಕೆ ನ್ಯಾಯಯುಕ್ತವಾಗಿ ಉಪಮಾನವನ್ನು ಆಧರಿಸಿ ನಿರ್ಧರಿಸಿದೆನು, ಸಂಶಯವು ಮಹಾ ಪಾಪವೆಂಬಂತೆ ನನ್ನ ಮನಸ್ಸಿಗೆ ತೋರಿತು, ಆಗ ನಾನು ಕೊಲೆನ್ಸೋ (Colenso) ಇವನು ಬೈಬಲ್ಲಿನ ಸತ್ಯತೆಯನ್ನು ಪ್ರಶ್ನಿಸುವುದನ್ನು ತಿಳಿದಿದ್ದೆನು, ಆದರೆ ಪ್ರ್ಯಾಪ್ತನಿಂದ ಸಂತ ಜಾನ್ (Apostle John) ಇವನು ಶೌಚಾಲಯದ ಗೃಹದಾಗ Cerinthus ಇವನು ಆ ಕೋಣೆಯ ಮಾಳಿಗೆಯ ನಾಸ್ತಿಕನೊಬ್ಬನ ಮೇಲೆ ಬಿದ್ದು ಕಡೆಗೆ ಸತತ್ತು ಮುತ್ತಂತ್ಯ ಜನವನ್ನೆಲ್ಲ ಕೊಲ್ಲಲು ಕಾರಣವಾಗಬಹುದೆಂದೇನೇ ಅದರೊಳಗೆ ಹೊಕ್ಕಿದ್ದನ್ನು ನೆನೆದು ನಾನು ಎಲ್ಲಾ ನಾಸ್ತಿಕರಿಗೆ ತಾತ್ವಿಕವಾಗಿಯೇ ಭಯಪಡುತ್ತಿದ್ದೆನು. ಇತರ ಮತಗಳಲ್ಲಿ ಒಂದು ಬಗೆಯ ದ್ವೇಷದಿಂದ ಕೂಡಿದ ಪ್ಯೂಸೀ (Pusey) ಇವನು ನನ್ನನ್ನು ನಿಶ್ಚಿತವಾದ ಧರ್ಮಾಭಿಮಾನಿಯಾಗಿ ಮಾಡಿದಾಗ ನಾನೂ ಆ ಅನಂತವಾದ ಕಾರಣದಿಂದ ಪುರಾತನವೂ, ಸತ್ಯವಾದುದರಿಂದ ಯಾವ ರೀತಿಯಲ್ಲೂ ಬದಲಾವಣೆಗೆ ಒಳಗಾಗದೇ ಇರುವುದೂ ಆದ ಮತಾಭಿಮಾನದಲ್ಲಿ ಶ್ರದ್ಧೆಯಿಟ್ಟು ತೃಪ್ತನಾದೆನು. ನನ್ನ ತಾಯಿಗೆ ಪ್ರಿಯವಾಗಿದ್ದ ಸ್ಟ್ಯಾನ್ಲಿ (Stanley) ಇವನ ಗ್ರಂಥಗಳನ್ನು ಸಹ ನಾನು ಓದುತ್ತಿರಲಿಲ್ಲ; ಏಕೆಂದರೆ ಅವನ ಅಭಿಪ್ರಾಯಗಳು 'ಸರಿಯಾದುದಲ್ಲ" ಎಂಬುದಾಗಿ ಹಿಂದೆಯೇ ಹೇಳಲಾಗಿತ್ತು.

ಆದರೆ ಪ್ಯೂಸಿ (Pusey) ಇವನತ ವಿವಿಧ ಗ್ರಂಥಗಳನ್ನು ಉದ್ಧರಿಸೋಗಿರುವ
ಜೀವಿತತ್ವರವನ್ನು ತೋರಿಸಿ ಸ್ಪಷ್ಟದರ್ಶನವನ್ನು ಕೊಡುವ ಅವನ
ಬರಿವಣಿಗೆಯನ್ನು ಇತರರು ಖಂಡಿಸಿದ್ದು ಅದಕ್ಕೆ ತಕ್ಕುದಾದ ಮ
ತ್ತು ವಿಚಾರಪೂರ್ಣ ವಿವರಣೆಯಾಗಿತ್ತು. ಡೀನ್ (Dean) ಇವನ
ಸ್ವಾಭಿಪ್ರಾಯಬೋಧಕವಾದ ಸೂಚನಾಪತ್ರಿಗಳು ಸಹ ಹಲವು ಪ್ರಶ್ನೆಗ
ಳನ್ನು ಕೊಡುವಂತಹವಾಗಿರುವುದನ್ನು ಇಲ್ಲಿ ಹೇಳಬಯಸಿ ಇಚ್ಛಿ
ಸುತ್ತಿದ್ದೇನೆ. ನನ್ನ ಬರಿವಣಿಗೆಯಲ್ಲಿ ಮೊದಲಾಗಿಯೇ ಉದ್ಭವಿ
ಸಿದ ಸಂದೇಹವೊಂದು ನನ್ನನ್ನು ಚಿಂತೆಯೇ ಕಾಡಿಸಿದಾಗ ಅದು
ನನಗೆ ಎಷ್ಟು ಆಘಾತವನ್ನುಂಟು ಮಾಡಿತೆಂದೂ ಮತ್ತು ಅದನ್ನು
ಅದೆಷ್ಟು ತ್ವರೆಯಿಂದ ಹಾಗೂ ಇತರರಿಂದ ಕಡೆಗಣಿಸಿ, ಹೊರತಟ್ಟು
ಅನಂತರ ಆ ಸಮಾಧಿಯ ಹೊತ್ತಿಲವನ್ನು ಎಷ್ಟು ಸಮಯಗಳ್ಳಿ
ಸಿದೆಯೆಂಬುದನ್ನು ಯಾರೂ ಊಹಿಸಬಹುದಾಗಿದೆ. ಆದರೆ ಅದು
ಎಂತಹೋ ಏನೋ ಅಲ್ಲಿಯೇ ಇತ್ತು; ಮತ್ತು ಅದರ ಗುರುತನ್ನು
ಸಹ ಚಿಂತೆಯೇ (ಅಂತರಾಳದಲ್ಲಿ) ಉಳಿಸುತ್ತದೆ!

ಅಧ್ಯಾಯ ೪

ವಿವಾಹ

ಹುಡುಗಿತನದ ನನ್ನ ಸ್ವಾತಂತ್ರ್ಯದ ಕಡೇ ವರ್ಷವು ಕೊನೆಗೊಳ್ಳುತ್ತಾ ಇತ್ತು. ೧೯ನೇ ವರ್ಷ ಮುಗಿಯುವುದರೊಳಗೆ ನನ್ನ ವಿವಾಹವು ನಿಶ್ಚಯವಾದದ್ದು ೨೦ನೇ ವರ್ಷದಲ್ಲಿ ಕನ್ಯಾದಾನವಾದದ್ದು ಸಾಮಾನ್ಯ ವಿಚಾರಜ್ಞಾನದ ಓದುಗರಿಗೆ ತಿಳಿಯುವಂತೆ ಹೇಗೆ ಹೇಳಲಿ? ಇಪ್ಪತ್ತೈದು ವರ್ಷಗಳಷ್ಟು ಹಿಂದಕ್ಕೆ ತಿರುಗಿ ನೋಡಿದಾಗ ಮದುವೆಯೆಂದರೇನೆಂಬುದನ್ನು ಪೂರ್ತಿಯಾಗಿ ತಿಳಿಯದ, ಅಸಾಧ್ಯವಾದ ಕನಸುಗಳಿಂದ ತುಂಬಿದ ಮತ್ತು ಹೆಂಡತಿಯ ಪಾತ್ರವನ್ನು ವಹಿಸಲು ಅಸಮರ್ಥಳಾದ ಹುಡುಗಿಯ ಜೀವನದಲ್ಲಿ ಆ ಕಂಟಕಪ್ರಾಯವಾದ ಅವಸ್ಥೆಯನ್ನು ನೆನೆದು ತುಂಬಾ ಮರುಗುತ್ತೇನೆ. ನಾನು ಹಿಂದೆ ಹೇಳಿದಂತೆ ನನ್ನ ಹಗಲುಗನಸುಗಳಲ್ಲಿ ಪ್ರೇಮ ಅಥವಾ ಕಾಮ ಎಂಬುದಕ್ಕೆ ಸ್ಥಳವೇ ಇರಲಿಲ್ಲ. ಇದಕ್ಕೆ ಒಂದು ಕಾರಣ ನನ್ನ ಓದುವಿಕೆಗೆ ಲೈಂಗಿಕ ಕಾದಂಬರಿಗಳು ಸೇರಿರಲಿಲ್ಲ. ಇನ್ನೊಂದು ಕಾರಣವೆಂದರೆ ರಹಸ್ಯ ಶಾಸ್ತ್ರ ವಿಚಾರಗಳು ನಾನು ಕ್ರೈಸ್ತರ ಮೇಲಿಟ್ಟಿದ್ದ ಭಕ್ತಿಯನ್ನು ಹೆಚ್ಚು ಮಾಡಿದ್ದುವು. ಇಂಗ್ಲಿಷ್ ಅಥವಾ ರೋಮನ್ ಭಾಷೆಯಲ್ಲಿ ಕ್ಯಾಥೋಲಿಕ್ ಪಂಥವನ್ನು ಕುರಿತಾದ ಧಾರ್ಮಿಕ ಗ್ರಂಥಗಳು ಹೆಚ್ಚಾಗಿ ಪ್ರಾರ್ಥನಾ ಪದ್ಯಗಳಿಂದ ಕೂಡಿದ್ದು ಹೆಂಗಸರ ಮನಸ್ಸನ್ನು ಅವರಿಗೆ ಗೊತ್ತಿಲ್ಲದೆಯೇ ಆ ಹಾಡುಗಳ ಕಡೆಗೆ ಹಾರ್ದಿಕವಾಗಿ ಸೆಳೆಯುವ ಚೇತೋಹಾರಿ ಅಥವಾ ಆಹ್ಲಾದಕರವಾದ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ನಾನು ಏಸುವಿನ ಆರಾಧನೆಯಲ್ಲಿಯೇ ಕಾಲವನ್ನು ಕಳೆಯಲು ಹಾರೈಸಿದ್ದೆನು. ನನ್ನ ಆಂತರಿಕ ಜೀವನದ ಬಗ್ಗೆ ಹೇಳುವುದಾದರೆ ಹೆಂಗಸರಿಗೆ ಏಸುವು ಮತ್ತು ಗಂಡಸರಿಗೆ ಕನ್ನಿಕೆ ಮೇರಿಯು ಹೇಗೋ ಹಾಗೆಯೆ ಆ "ಜನ ರಕ್ಷಕ"ನಲ್ಲಿ ಅಮಿತ ಪ್ರೀತಿಯಿಂದ ಕೂಡಿದ್ದ ಆ ನನ್ನ ಮಾನಸಿಕವಾದ ಪ್ರೇಮೋಲ್ಲಾಸವು ಒಂದು ಧ್ಯೇಯವಾಗಿ ಮಾರ್ಪಟ್ಟಿತ್ತು. ನಾನು ಹೇಳುವುದು ಉತ್ಪ್ರೇಕ್ಷೆಯಲ್ಲವೆಂಬುದಕ್ಕೆ ನಾನು ದಿನ ನಿತ್ಯವೂ ಹೇಳುತ್ತಾ ಸಂತೋಷ ಪಡುತ್ತಿದ್ದ ಕೆಲವು ಸಾಲುಗಳನ್ನು ಕೆಳಗೆ ಕೊಡುತ್ತೇನೆ, ಒಬ್ಬ ಆವೇಶಭರಿತಳಾದ ತರುಣಿಯು ಆ ಭಕ್ತಿ ಗೀತಾಭ್ಯಾಸದಲ್ಲಿ ಎಷ್ಟು ಆಸಕ್ತಳಾಗಿರುವಳೆಂಬುದಕ್ಕೆ ಇದನ್ನು ಹೇಳುತ್ತಿದ್ದೇನೆ.—

"ಓ, ಶಿಲುಬೆಗೆ ಹಾಕಲ್ಪಟ್ಟ ಪ್ರೇಮವೇ! ಸರ್ವೋತ್ಕೃಷ್ಟವಾದ ಪ್ರೀತಿ ಮತ್ತು ಆದರವನ್ನು ನನ್ನಲ್ಲಿ ಹೆಚ್ಚಿಸು. ಅದರಿಂದನೆ

ನ್ನನ್ನು ನೋವಿಗೀಡಾಗಿಸಿದಾಗ ಆ ದುಃಖವನ್ನು ನಾನು ಸಹಿಸುವಂತಾಗಲಿ; ನಿನ್ನನ್ನು ಸಂತೋಷಗೊಳಿಸಲು ನನಗೆ ಇದು ಉಚಿತ ಆನಂದವನ್ನೀಯಲಿ!"

"ಓ, ಶ್ರೇಷ್ಠವಾದ ಪ್ರಭುವೆ! ನೀನು ಸ್ವರ್ಗವಾಸಿಯಾದುದರ ನೆನಪು ನನ್ನನ್ನು ನಿನಗಾಗಿ ಕಾತರಿಸಿ ಹಂಬಲಿಸುವಂತಾಗಲಿ; ಆ ನಿನ್ನ ಕರುಣಾಮಯವಾದ ಅಸ್ತಿತ್ವದಿಂದ ನೀನು ಸಂತೋಷಪಡುವಂತಾಗಲಿ.

"ಓ, ನನ್ನ ನಲವಿನ ಯೇಸು ಕ್ರಿಸ್ತನೆ, ಅಯೋಗ್ಯಳಾದ ಪಾಪಿಯಾದರೂ ನಿನ್ನ ಪವಿತ್ರ ನೆತ್ತರಿಂದ ನನ್ನನ್ನು ರಕ್ಷಿಸಿದೆ. ನಾನು ನನ್ನ ಈ ಬದುಕಿನಲ್ಲೂ ಸಾವಿನಲ್ಲೂ ನಿನ್ನವಳೇ ಆಗಿದ್ದೇನೆ.

"ಓ, ಪ್ರಭುವೇ, ಪ್ರಿಯನೆ, ಮಾನವ ಪುತ್ರರಿಗಿಂತಲೂ ಸುಂದರನೆ, ನಿನ್ನ ಪ್ರೇಮವೆಂಬ ಹಗ್ಗದಿಂದ ನನ್ನನ್ನು ನಿನ್ನೆಡೆಗೆ ಸೆಳೆದುಕೊ.

"ಸರ್ವರಿಂದ ಪ್ರಶಂಸಿಸಲ್ಪಟ್ಟ ಕರುಣಾಮಯನಾದ ದೇವನೆ, ನೀನು ನನ್ನಲ್ಲಿ ಕೃಪೆಯುಳ್ಳ ಆ ಜ್ಞಾನಸ್ನಾನದ ಜಲದಲ್ಲಿ ನನ್ನನ್ನು ಸ್ವರ್ಗೀಯ ಪಡೆವಂತೆ ಅಂಗೀಕರಿಸು. ನಿನ್ನ ದೇಹ ಮತ್ತು ರಕ್ತವನ್ನು ಹೊಸದಾಗಿ ಉಡುಗೊರೆಯಾಗಿತ್ತು. ನಿನ್ನ ಪ್ರೀತಿಯನ್ನು ಸಂಪೂರ್ಣವಾಗಿ ನನಗೊಪ್ಪಿಸು.

"ಓ ನನ್ನ ಒಲವಿನ ಪ್ರಭುವೆ, ನೀನು ನನ್ನ ಹೃದಯಾಂತರಾಳದ ದಯಾದೃಷ್ಟಿಯನ್ನು ಆನಂದವೂ ಆರೋಗ್ಯಕರವೂ ಆದ ನಿನ್ನ ಪ್ರೇಮವೆಂಬ ಗಾಯದಲ್ಲಿ ಸತ್ಯ, ಗಾಂಭೀರ್ಯ, ಬಹು ಪವಿತ್ರ ಮತ್ತು ಮತಶ್ರುತಿಪಾದನಾ ಉದಾರತೆಯಿಂದ ನೆಲೆಗೊಳಿಸು. ನನ್ನ ಆತ್ಮವು ನಿನ್ನ ಒಲವಿಂದ ಮತ್ತು ನಿನ್ನನ್ನು ಸೇರುವ ತವಕದಿಂದ ಸೊರಗಲಿ; ನಿನ್ನನ್ನು ಇಚ್ಛಿಸಿ ನಿನ್ನಿಂದ ಬಿಡಿಸಲ್ಪಡಲಿಕ್ಕೆ ಮರುಗಲಿ; ಅಲ್ಲದೆ ಅದು ತನ್ನಷ್ಟಕ್ಕೆ ಕರಗಿ ನಿನ್ನನ್ನು ಸೇರುವಂತಾಗಲಿ.

"ಓ ಸ್ವಾಮಿ, ದೇವತೆಗಳ ಬಹು ಹಾರ್ದಿಕ ಪ್ರೀತಿಗೆ ಬಳಿಗಾಗಿ ನಾನು ನಿನ್ನನ್ನು ಆಲಿಂಗಿಸುವಂತಾಗಲಿ;

"ಅವನು ನನಗೆ ಅವನದೇ ಬಾಯಿಮುತ್ತಿನಿಂದ ಮುತ್ತಿಡಲಿ, ಏಕೆಂದರೆ ನಿನ್ನ ಪ್ರೇಮರಸಿಯು ದ್ರಾಕ್ಷಾರಸಕ್ಕಿಂತ ಹಿತವಾಗಿದೆ, ನನ್ನನ್ನು ನಿನ್ನೆಡೆಗೆ ಆಕರ್ಷಿಸು; ನಾವು ನಿನ್ನ ಬಳಿಗೆ ಓಡಿಬರುವೆವು. ರಾಜನು ನನ್ನನ್ನು ಅವನ ಕೋಣೆಗೆ ಕರೆತಂದಿದ್ದಾನೆ----ಓ ಪ್ರಭುವೆ, ನನ್ನ ಆತ್ಮವು ನಿನ್ನ ಪ್ರತ್ಯಕ್ಷತೆಯ ಮಾಧುರ್ಯವನ್ನು ಅನುಭವಿಸಲಿ. ನೀನು ಎಷ್ಟು ಮಧುರವಾಗಿದ್ದೀಯೆಂಬುದನ್ನು ಅದು ನೋಡಲಿ. ನಿನ್ನ ಸಿಹಿಯಾದ ಮತ್ತು ಹಿಂದು ಕಾಡಿಯುತ್ತಿರುವ ಪ್ರೀತಿಯು ನನ್ನ ಆತ್ಮವನ್ನು ಸೆಳೆದೊಯ್ಯಲಿ, ಎಂದು ಬೇಡುತ್ತೇನೆ."

ಎಲ್ಲಾ ಪ್ರವೃತ್ತಿಗಳವರಲ್ಲೂ ಕಾಮೋದ್ರೇಕದ ತೆರಳು ಇದ್ದೇ ಇದೆ- ಆದರೆ ಅದರ ಬೆಳವಣಿಗೆಯು ಬೋಧನೆ ಗುಣಾನುವರ್ತನೆಗಳನ್ನು ಮತ್ತು ವಿದ್ಯೆಯಿಂದಾವೃತವಾದ ಸಮಾಜದ ಪ್ರಭಾವವನ್ನು ಹೊಂದಿಕೊಂಡಿದೆ. ಆ ನನ್ನ ಬಾಲ್ಯ ಮತ್ತು ಯೌವನವಲ್ಲದೆ ನನ್ನ ತಾಯಿ ಮತ್ತು ಕ್ರೈಸ್ತ ಇವರನ್ನನುಸರಿಸಿ ನನ್ನ ಮೋಹಾವೇಶದ ಶಕ್ತಿ ಬಳ್ಳಿಯು ಸಮ್ಮಿತವಾಗಿತ್ತು. ಹೀಗೆಂದರೆ ಆಶ್ಚರ್ಯಕರವಾಗಿ ತೋರಬಹುದೆಂದು ನನಗೆ ಗೊತ್ತಿದೆ. ಆದರೆ ಈ ಜೀವನ ಚರಿತ್ರೆಯಲ್ಲಿ ವಿಷಯಗಳನ್ನು ಯಥಾವತ್ತಾಗಿ ಹೇಳುತ್ತೇನಲ್ಲದೆ ಬರೆ ಸಾಂಪ್ರದಾಯಿಕವಾದುದನ್ನು ಹೇಳುತ್ತಿಲ್ಲ. ಗಂಡಸರು ನನಗೆ ಮಿತ್ರರಾಗಿದ್ದರಲ್ಲದೆ ನನ್ನಲ್ಲಿ ಪ್ರಣಯವನ್ನು ಯಾಚಿಸುವವರಾಗಿರಲಿಲ್ಲ. ನನಗೆ ಗೊತ್ತಿದ್ದ ಹಾಗೆ ನನ್ನನ್ನು ವಿವಾಹವಾಗಲು ಎರಡು ಯಾ ಮೂರು ಜನರು ಇಚ್ಛಿಸಿದ್ದರು. ಆಗ ನನ್ನ ತಾಯಿಯು ನನ್ನ ಯೌವನ ಮತ್ತು ಮತ್ಸ್ಯಗಾತಿಕೆಯನ್ನು ಕಂಡು ಅವರ ಕೋರಿಕೆಯನ್ನು ನಿರಾಕರಿಸಿದಳು. ನಾನು ಮಾತನಾಡಿದ ಗಂಡಸರಿಗೆ ನನಗಿಂತ ಹೆಚ್ಚು ತಿಳಿದಿದ್ದುದರಿಂದ ನಾನು ಅವರೊಡನೆ ಮಾತಾಡುತ್ತಿದ್ದೆನಲ್ಲದೆ ನನ್ನ ಹಗಲುಗನಸುಗಳಲ್ಲಿ ಅವರಿಗೆ ಸ್ಥಾನವಿರಲಿಲ್ಲ. ಈ ಕನಸುಗಳು ಹೆಚ್ಚಾಗಿ ಒಬ್ಬ ಆದರ್ಶ "ಮಾನವ"ನನ್ನು ನೆಚ್ಚುತ್ತಿತ್ತು; ಅಲ್ಲದೆ ಯಾವಾಗಲೂ ಕ್ರೈಸ್ತನನ್ನು ಆರಾಧಿಸುವ ಮತ್ತು ಅವಳ ಸಮಯವನ್ನೆಲ್ಲ ಬಡವರ ಹಿತಕ್ಕಾಗಿ ಉಪಯೋಗಿಸುವ ದಯಾಗರ್ಭವೆಂಬ ಸೌಂದರಿಯಲ್ಲಿ ನನ್ನ ಆ ವಿಶ್ವಾಸವು ನೆಲೆಸಿತ್ತು. ನನ್ನ ಪ್ರಿಯ ತಾಯಿಯು ನನ್ನ ಈ ಅಭಿಪ್ರಾಯಕ್ಕೆ ವಿರೋಧವಿದ್ದಳೆಂದು ನನಗೆ ಗೊತ್ತಿದ್ದರೂ ನನ್ನ ಹೃದಯದಲ್ಲಿ ಇದು ಬೆಚ್ಚನೆ ನೆಲೆಸಿತ್ತು. ಆ ನಂಬಿಕೆಯು ಈ ಸಾಮಾನ್ಯ ಜೀವನದೆಡೆಯಿಂದ ಸಾಗುವುದೋ ಎಂಬಂತಿದ್ದಾಗ ಮತ್ತೂ ಮತ್ತಾದರೊಂದು ತ್ಯಾಗಶೀಲವು ಮಾರ್ಗದರ್ಶಕವಾಗಿ ಮತ್ತು ಇನ್ನೂ ಹೆಚ್ಚು ಬಲವತ್ತಾಗಿ ಅದನ್ನೇ ನನ್ನ ಹೃದಯದಲ್ಲಿ ಬೇರೂರಿಸುತ್ತಿತ್ತು.

ಧಾರ್ಮಿಕ ವಿಚಾರದಲ್ಲಿ ನಾವು ಇರುವ ಇಂದಿನ ನಂಬಿಕೆಯು ಹಿಂದು ಮತ ಪ್ರಕೃತಿಗಳಾವುವೆಂದರೆ ಪುರೋಹಿತನು ದೇವದೂತನೆಂದೂ ದೇವರಿಂದ ಆರಿಸಲ್ಪಟ್ಟ ಭಕ್ತನೆಂದೂ ನೆನೆದು ಅವನನ್ನು ಪೂಜಿಸುವುದು! ಭೂಮಿಯ ಓರ್ವ ಸಾಮ್ರಾಟನಿಂದ ದೊರಕುವ ದೊಡ್ಡ ಬಿರುದಿಗಿಂತ ಆ ರಾಜರ ರಾಜನೂ ಶ್ರೀಮಂತನ ಜೀವಿಯೂ ಆದ ದೇವರಿಂದ ಪ್ರಾತಿನಿಧಿಕವಾಗಿ ದೊರಕುವ ಗೌರವ ಸ್ಥಾನವು ಎಷ್ಟೋ ದೊಡ್ಡದಾಗಿದ್ದು ಈ ಸಾಮಾನ್ಯ ಪುರೋಹಿತನು ದೇವತೆಗಳಿಗೆ ಸಲ್ಲುವ ಅಸಾಮಾನ್ಯ ಪದವಿಯನ್ನೆ ತಾನು ಪಡೆದಂತೆ ತೋರ್ಪಡಿಸಿಕೊಳ್ಳುತ್ತಾನೆ. ಇದೇ

ಭಾವನೆಯಿಂದ ಓರ್ವ ಪುರೋಹಿತನ ಹೆಂಡತಿಯು ವಿರಕ್ತೆಯಾದ ಸನ್ಯಾಸಿಯಂತಾಗುವಳು. ಹೀಗಾಗಿ ಗುಡಿಗಳಲ್ಲಿರುವ ಪೂಜಾರಿಗಳು ಬುದ್ಧಿಯಲ್ಲಿ ವಿಶೇಷ ಆಕರ್ಷಣೆಯಿದೆ. ಪುರೋಹಿತನು ತನ್ನ ಸಮೀಪವಿರುವ "ಪವಿತ್ರ ವಸ್ತು"ಗಳಿಗೆ ಅನ್ವಯಿಸ "ಪವಿತ್ರ ಸ್ಥಾನ"ವನ್ನು ತನ್ನ ಪತ್ನಿಯೊಡಗೂಡಿ ಪಡೆದಾಗ ಭಕ್ತಿ ಮತ್ತು ಕಲ್ಪನಾ ವಿಲಾಸಗಳಿಂದ ಹುರಿಗೊಂಡಿದ ಹಲವು ಜನವನ್ನು ಆಕರ್ಷಿಸುವ ಆಡಂಬರದ ಸ್ಥಾನವಾಗಿ ಅದು ಪರಿಣಮಿಸುತ್ತದೆ. ಇದರಲ್ಲಿ ಯಾರು ವಿಶೇಷ ಮೇಧಾವಿಗಳೂ ನಿಷ್ಕಲ್ಮಷ ಹೃದಯರೂ ಸ್ವತಃ ಸ್ವಭಾವವನ್ನು ಹೊಂದಿ ದೈವಿಕ ಪ್ರೇರಣೆಗೆ ಶರಣಾದವರೂ ಬಹುಮಟ್ಟಿಗೆ ಜನತೆಯು ಆದರಕ್ಕೆ ಪಾತ್ರರಾಗುವವರೆಂಬುದು ಎಲ್ಲಕ್ಕಿಂತಲೂ ದುಃಖಕರವಾದ ವಿಷಯವೆಂದು ಒಂದು ರೀತಿಯಲ್ಲಿ ಹೇಳಬಹುದು. ಅಂತವರು ತಮ್ಮ ಅನಂತರದ ಜೀವನದಲ್ಲಿ ಯಾವುದರ ಛಾಯೆಯಿಂದ ಆಕರ್ಷಿತರಾದರೋ ಅದೇ ಪರಮಪದವಿಗೆ ಏರಿಸಲ್ಪಡುವವರೂ ತಮ್ಮ ವ್ಯಕ್ತಿತ್ವದಲ್ಲಿ ಯಾರ ಪ್ರೀತಿಪಾತ್ರಕ್ಕೆ ಬಲಿಬಿದ್ದು ಉತ್ಕೃಷ್ಟ ತ್ಯಾಗಶೀಲರಾಗುವರೋ ಆಗ ಕರುಳ ಸನ್ಯಾಸಿಯು ಪರದೆಯು ತೆರೆಯಲ್ಪಟ್ಟು ದಾರಿದ್ರ್ಯದ ಕಲ್ಪನೆಯು ಅಗಾಧ ಜೀವನ ನೌಕೆಯು ಬಿರುಗಾಳಿಗೆ ಸಿಲುಕಿದ ತೆರೆಯಲ್ಲಿ ಮುಳುಗುತ್ತಾ ಅಥವಾ ಬಿರುಗಾಳಿಯುವ ಅಲೆಯಲ್ಲಿ ಏರಿಹುತ್ತಾ ಅದರ ಹಾಯಿ ಹಗ್ಗಗಳೆಲ್ಲವೂ ತುಂಡರಿಸಲ್ಪಟ್ಟು ಕಡೆಗೆ ಸುಭದ್ರವಾದ ಚಾಲನೆಯು ಪರಿಣಾಮವಾಗಿ ಪಾರಮಾರ್ಥಿಕತೆಯ ದಡವನ್ನು ಅದು ಸೇರುವುದು.

ನಾನು ಆ ಕ್ರೈಸ್ತಗುಡಿಯಲ್ಲಿ ಹಿಂದಿನ ವಸಂತ ಋತುವಿನ ಒಂದು ದಿನ ಭೇಟಿಯಾದ ಓರ್ವ ಎಳೆ ಕ್ರೈಸ್ತ ಪಾದರಿಯೊಂದಿಗೆ ವಿವಾಹವಾಗಲು 1866ರ ಬೇಸಗೆಯಲ್ಲಿ ನಿರ್ಣಯವಾಗಿತ್ತು. ನಮ್ಮಿಬ್ಬರೊಳಗಾದ ಪರಿಚಯವಾದರೋ ಹೆಚ್ಚೇನೂ ಇರಲಿಲ್ಲ, ರಜೆಯನ್ನು ಕಳೆಯಲಿಕ್ಕೆಂದು ಹೋಗುವ ಒಂದು ಚಿಕ್ಕ ಗುಂಪಿನಲ್ಲಿ ನಾವಿಬ್ಬರೇ ಎಲ್ಲರಿಗಿಂತಲೂ ಹಿರಿಯವರಾಗಿ ತಿರುಗಾಡುವಾಗ, ಕುದುರೆ ಸವಾರಿ ಮಾಡುವಾಗ ಮತ್ತು ವಾಹನದಲ್ಲಿ ಅಡ್ಡಾಡುವಾಗ ನಾವು ಸ್ವಾಭಾವಿಕವಾಗಿ ಒಟ್ಟಿಗೆ ಇದ್ದೆವು. ನಾವು ಆ ಸಂಚಾರವನ್ನು ಮುಗಿಸಿ ಬೇರ್ಪಡುವುದಕ್ಕಿಂತ ಒಂದೆರಡು ತಾಸುಗಳಿಗೆ ಮುನ್ನ ಅವನನ್ನು ನಾನು ವಿವಾಹವಾಗುವಂತೆ ಕೇಳಿಕೊಂಡನು, ಎಲ್ಲಾ ಗಂಡಸರನ್ನು ತಮಗೆ ಒಪ್ಪಬಹುದಾದ ಶಕ್ತಿಗಳಿಂದ ಹುಡುಗಿಯರು ನಿರೀಕ್ಷಿಸುವಂತೆ ನಾನೂ ಅದೇ ರೀತಿ ಎಂದು ಭಾವಿಸಿ ಅವನು ನನ್ನೊಡನೆ ಹೇಳಿದನು. ಆದರೆ ಇತರ ವಿಚಾರಗಳತ್ತ ಮನಸ್ಸು ಹರಿದಿದ್ದ ನನ್ನನ್ನು ಆ ಇತರ ಹುಡುಗಿಯರಂತೆಯೇ ಎಂದು ಭಾವಿಸಿ ಅವನು ತಪ್ಪಿದನು. ನಾನು

ಹುಡುಗಿಯನ್ನೊಬ್ಬಳ ಜೊತೆಯಲ್ಲಿ ಕಳುಹಿಸುತ್ತಿದ್ದೇನೆಂಬುದರ ಬಗ್ಗೆ ನನ್ನಲ್ಲಿದ್ದ ಅಭಿಪ್ರಾಯದೊಡನೆ ನನ್ನ ಸೂಕ್ಷ್ಮ ಪ್ರತಿಷ್ಠೆಗೆ ಭಂಗವಾದ ರೀತಿಯಲ್ಲಿ ನಾನು ಅಸ್ವಸ್ಥಯುಕ್ತಿಕತೆಯಾಗಿ ಅವನ ಆ ಪ್ರಸ್ತಾಪನೆಯನ್ನು ತಿರಸ್ಕರಿಸಲು ಹವಣಿಸಿ ಆಲೋಚಿಸಿದೆನಾದರೂ ನಾನು ಕಡೆಗಂತು ಮೌನವಾದೆನು, ನನ್ನ ಇನಿಯನು ಅವನ ಗಾಡಿಯನ್ನೇರಿ ಹೋದನಂತರ ನನ್ನ ತಾಯಿಯೊಡನೆ ಅವನ ವಿಶ್ವಾಸಕ್ಕೆ ನಾನು ಭಂಗವನ್ನುಂಟುಮಾಡಿದರೆ ಅದು ಅಗೌರವಕ್ಕೆ ಕಾರಣವಾಗುವುದೆಂದು ಹೇಳುತ್ತಾ ಆ ವಿಷಯ ಮಾತಾಡಿದೆವು. ಹೇಗೂ ಅವನೇ ಅನಿವಾರ್ಯವಾಗಿಯೇ ಈ ವಿವಾಹ ವಿಷಯವಾಗಿ ಸೂಚಿಸುವವರೆಗೂ ನಾನು ದಕ್ಷಿಣ ಸಮುದ್ರ (Sussex) ಕಡಲ ತೀರದಲ್ಲಿ ತಳಮಳಗೊಂಡ ವ್ಯಕ್ತಿ ಮೌನವಾಗಿ ಕುಳಿತಿದ್ದೆನು. ಅನಂತರ ಹದಿನೈದು ದಿನಗಳು ನನ್ನ ಜೀವನದಲ್ಲಿಯೇ ತುಂಬಾ ಬೇಸರಕ್ಕೆ ಕಾರಣವಾದ ಅವಧಿಯಾಗಿತ್ತು, ಏಕೆಂದರೆ ಮಾಡಬಾರದೆಂದಿದ್ದನ್ನು ನಾನು ಬಹುಶಃ ಮಾಡುತ್ತಿರುವೆನೋ ಎಂಬಂತಿದ್ದು ಹಿಂದಿನ ವಿಷಯವನ್ನು ಅವಳಿಗೆ ನಾನು ಹೇಳಲು ಇಚ್ಛಿಸಿದ್ದರೂ ಅದನ್ನು ಹೇಳದೆಯೇ ಆ ಗುಟ್ಟನ್ನು ನನ್ನಲ್ಲಿ ಇಟ್ಟುಕೊಂಡೆನು. ನಾವು ನಮ್ಮ ಪಟ್ಟಣಕ್ಕೆ ಹಿಂದಿರುಗಿದನಂತರ ನನ್ನ ಗೆಳೆಯನನ್ನು ಕಂಡಾಗ ನಾನು ಆ ವರೆಗೆ ಇದ್ದಂತೆ ಮೌನದಲ್ಲಿರಲು ನಿರ್ಧರಿಸಿದೆನು. ಕಡೆಗೆ ಕೇವಲ ನನ್ನ ದೌರ್ಬಲ್ಯದಿಂದ ಮತ್ತು ಅವನ ಮನಸ್ಸನ್ನು ನೋಯಿಸಲು ಇಚ್ಛಿಸದೆ ಮತ್ತು ನನಗೆ ಅವನಲ್ಲಿದ್ದ ಪ್ರೀತಿಭಾವವನ್ನೇನೂ ನಟಿಸದೆ ತಾನು ಅವನನ್ನು ವಿವಾಹವಾಗುವೆನೆಂದೇ ತೀರ್ಮಾನಿಸಿದೆನು, ಇದೊಂದು "ಟ್ರಾಜೆಡಿ"ಯೆಂದರೂ ಸರಿ! ಏಕೆಂದರೆ ನನ್ನ ಮದುವೆಗೆ ನಿಜವಾಗಿಯೂ ಒಪ್ಪದೆಯೇ ಇದ್ದ ನನ್ನ ತಾಯಿಯೂ ನನ್ನನ್ನು ಹಿಂದೂ ಮತಗುವೆಂದೇ ಭಾವಿಸಿದ್ದಳು. ಆದರೆ ಹಿನ್ನ ಎಲ್ಲ ಕ್ರೈಸ್ತರುಗಳವನ್ನು ಮದುವೆಯಾಗಿ ಬಡಜನರಿಗಾಗಿ ದುಡಿಯುವ ಉಪಕಾರವನ್ನು ಆಲೋಚಿಸಿದಾಗ ವಿವಾಹವಾಗುವುದರಲ್ಲಿ ನನಗಿದ್ದ ತಿರಸ್ಕಾರಭಾವವು ಅಳಿಯುತ್ತು. ಬರೆ ನನ್ನ ಊರಿಯಲ್ಲಿದ್ದ ಜನರ ಪಾಡುಗಳನ್ನು ಮತ್ತು ಕಷ್ಟಗಳನ್ನು ನಿವಾರಿಸಲಿಕ್ಕಾಗಿ ಶ್ರಮಿಸಲು ಮತ್ತು ಕ್ರೈಸ್ತ ಸಿದ್ಧಾಂತಕ್ಕೆ ಮತ್ತು ಬಡಜನಕ್ಕೆ ಸನ್ಯಾಸಿನಿಗಳು ಸಲ್ಲಿಸಿದ ಸೇವೆಯನ್ನು ಕುರಿತಾಗಿ ನಾನು ಓದಿ ತಿಳಿದಿರಲು, ಎಲ್ಲ ಧಾರ್ಮಿಕ ಚಟುವಟಿಕೆಗಳು ಅನಿಮಾನ ಮತ್ತು ಅನಾದಿ ಎಂದು ತೋರುವು ಬಗೆದಿದ್ದಾಗ ನನ್ನ ಸನ್ಯಾಸದಲ್ಲಿ ಬಹು ನಿಗೂಢವಾಗಿ ಮತ್ತು ಸತ್ಯವಾಗಿದ್ದವನ್ನು ಸರಳವೂ ಅಪ್ರಯೋಜಕವೂ ಎಂದು ಎಣಿಸಿದ್ದರೂ ತುಂಬಾ ಬಹಿಯುಂಡ ದುಡಿಯಲಿಚ್ಛಿಸಿದ ಅಂದಿನ ನನ್ನ ಯೌವನದ ಇಚ್ಛೆಯನ್ನು ಕಡೆಗಣಿಸಿದುದರಿಂದ ನನ್ನ ಸಂತೋಷ ಹಾಗೂ

ಶಾಂತವಾದ ಆವರಣದಲ್ಲಿ ಉತ್ಸಾಹದಿಂದ ದುಡಿಯಲು ನನಗೆ ಅವಕಾಶ ವಿರಲಿಲ್ಲ. ವಿವಾಹವಾಗಲು ನಿರ್ಲಕ್ಷಿಸಿದ ನನ್ನನ್ನು ಅದಕ್ಕೆ ಒಪ್ಪಿಸಲು ೪½ ವರ್ಷ ಮೇಲೆ ಜೋಯಿಸರ ಶಕ್ತಿಯಾದರೆ ಸಮಾಜಕ್ಕೆ ಒಳ್ಳೆಯದನ್ನು ಮಾಡಲು ತುಂಬಾ ಸಾಧ್ಯವಿದೆ," ಎಂಬುದಾಗಿ ಹೇಳಲಾಗಿತ್ತು.

1866ರ ಬೇಸಗೆಯಲ್ಲಿ ನನ್ನ ವಿವಾಹಕ್ಕೆ ನಿಶ್ಚಯವಾಗಿ ಅನಂತರ ಹದಿನಾಲ್ಕು ತಿಂಗಳಲ್ಲಿ ನನ್ನ ವಿವಾಹವಾಯಿತು. ಅದರ ಮಧ್ಯೆ ಆ ತೀರ್ಮಾನವನ್ನು ಮುರಿದು ಹಾಕಲು ಆಲೋಚಿಸಿದ್ದೆನು. ಆದರೆ ಅದನ್ನು ನನ್ನ ತಾಯಿಗೆ ಹೇಳಿದಾಗ ಅವಳು ಹೆಮ್ಮೆಯಿಂದ ನನ್ನ ಅಭಿಪ್ರಾಯವನ್ನು ಪ್ರತಿಭಟಿಸಿದಳು, ಅವಳ ಮಗಳಾದ ನಾನು ಕೊಟ್ಟ ಮಾತನ್ನು ಮೀರುವುದೇ? ನಾನು ಮದುವೆಯಾಗುವೆನೆಂದು ಒಪ್ಪಿದ ಆ ನನ್ನ ಇನಿಯನನ್ನು ಮೋಸಗೊಳಿಸಿ ಅಗೌರವಕ್ಕೆ ಪಾತ್ರಳಾಗುವುದೇ? ಗೌರವ ಪ್ರತಿಷ್ಠೆಗಳ ವಿಷಯದಲ್ಲಿ ನನ್ನ ತಾಯಿಯು ಕಠಿಣಳಾಗಿರುತ್ತಿದ್ದಳು. ಧಾರ್ಮಿಕ ವಿಚಾರಗಳಲ್ಲಿ ಅಲ್ಲದೆ ಇತರ ವಿಷಯಗಳಲ್ಲಿ ಅವಳ ಒಂದು ಮಾತು ಅಥವಾ ನೋಟ ಮಾತ್ರವೇ ನನಗೆ ಆಜ್ಞೆಯಂತೆ ಇದ್ದುದರಿಂದ ನಾನು ಅವಳ ಅಭಿಲಾಷೆಗೆ ಒಪ್ಪಿದೆನು. ಇಪ್ಪತ್ತು ವರ್ಷಗಳಾದರೂ ವೈವಾಹಿಕ ಸಂಬಂಧವೆಂದರೆ ಏನೆಂದು ತಿಳಿಯದಿದ್ದ ನಾನು ನಾಲ್ಕು ವರ್ಷದ ಮಗುವಿನಂತೆ ಇದ್ದು ಕಡೆಗೆ 1867ರ ಚಳಿಗಾಲದಲ್ಲಿ ಮದುವೆಯಾದೆನು. ಅಹಿತವಾದುದಾವುದೂ ನನ್ನ ಬುದ್ಧಿಯನ್ನು ಕಲುಷಿತಗೊಳಿಸಲು ಎಡೆಗೊಡದ, ಎಲ್ಲಾ ಬಗೆಯ ನೋವಿನಿಂದ ರಕ್ಷಿಸಲ್ಪಟ್ಟು ಮನೋದ್ವೇಗವನ್ನು ತಡೆದಿಟ್ಟ, ಲೈಂಗಿಕ ವಿಷಯದಲ್ಲಿ ಏನೂ ತಿಳಿಯದ ಮುಗ್ಧೆಯಾಗಿದ್ದ, ವಿವಾಹಿತ ಜೀವನಕ್ಕೆ ಸಿದ್ಧಳಾಗಿರದ ನನ್ನ ಕಲ್ಪನಾಮಯ ಅಸ್ತಿತ್ವವು ವಿವಾಹದ ಕಠಿಣವಾದ ಜೀವನವನ್ನು ಎದುರಿಸಲು ನಿಸ್ಸಹಾಯಕಳಾಗಿ ನನ್ನನ್ನಿರಿಸಿತು. ಜೀವನದಲ್ಲಿ ಹೊರಬೇಕಾದ ಕರ್ತವ್ಯ ಮತ್ತು ಕಾರ್ಯಭಾರಗಳ ಬಗ್ಗೆ ತರಬೇತಿಯನ್ನು ಕೊಡದೆ ಯುವ ಕನ್ಯೆಯನ್ನು ಒಮ್ಮೆಲೇ ಗೃಹಸ್ಥ ಜೀವನಕ್ಕೆ ಕಾಲಿಕ್ಕಿಸಿ ತನ್ನ ಹಳೆ ಪರಿಚಿತರಿಂದ ದೂರವಿರಿಸಿ ತಾಯ್ತನದ ಆಶ್ರಯವನ್ನು ಹೊಂದುವ ಪರಿಸ್ಥಿತಿಗೆ ಅವಳನ್ನಿಳಿಸುವುದು ಮಹಾಪರಾಧವೆಂಬುದನ್ನು ಇದೀಗ ನಾನು ಹಿಂದಕ್ಕೆ ತಿರುಗಿ ನೋಡಿದಾಗ ತೋರುವುದನ್ನು ಧೈರ್ಯವಾಗಿ ಹೇಳಬಲ್ಲೆನು. ಅಂದಾ "ಸುವ್ಯಕ್ತ ಅಜ್ಞಾನ"ವು ಉತ್ತಮವಾಗಿ ತೋರಬಹುದು; ಆದರೆ ಅದರಲ್ಲಿ ಅಪಾಯವೂ ಇದೆ. ತನ್ನ ತಾಯಿಯ ನಲ್ಮೆಯೆಂಬ ಸ್ವರ್ಗದಿಂದ ಹೊರಟುಹೋಗುವ ಮುಗ್ಧ ಮಗಳಿಗೆ ಜೀವನದ ಹಿತಾಹಿತಗಳು ಮತ್ತು ಗುಣಾವಗುಣಗಳ ಬಗ್ಗೆ ಎಲ್ಲವೂ ತಿಳಿದಿರಬೇಕು. ಎಳೆ ಹುಡುಗಿಯು ಸೂಕ್ಷ್ಮ ಸಂವೇದನಶೀಲೆ, ಸ್ವಾಭಿಮಾನಿ, ಅವಳು ನಿಸ್ಸಹಾಯಕ ಕಳವಳ ಮತ್ತು

ಬಹುಪಾಲು ಹಲವು ವಿವಾಹಿತ ದಂಪತಿಗಳಲ್ಲಿ ವಿರಸಕ್ಕೆ ಮತ್ತು ಮಾನಸಿಕ ಆಂದೋಲನಕ್ಕೆ ಇಂದಿನಿಂದಲೇ ಕಾರಣವಾಗುತ್ತಾ ಬಂದಿದೆ, ಗಂಡು ತನ್ನ ಶಾಲೆಯಲ್ಲಿ ಮತ್ತು ಕಾಲೇಜಿನಲ್ಲಿ ಪಡೆದ ವಿದ್ಯೆ ಅಥವಾ ಬಾಹ್ಯ ಪ್ರಪಂಚದಲ್ಲಿ ಅಡ್ಡಾಡಿ ತಾನು ಗಳಿಸಿದ ಜ್ಞಾನಬಲದ ಪರಿಣಾಮವಾಗಿ ಹುಡುಗಿಯರು ಅಷ್ಟು ವಿಚಾರಪೂರ್ಣರಾಗಿರುವುದರಿಂದ ಅದನ್ನು ತಿಳಿಯಲಿಕ್ಕೆ ಅವನಿಗೆ ಅಸಾಧ್ಯವಾಗಬಹುದು, ಹೀಗೂ ಅಂದು ಅಜ್ಞಾನವು ಕೆಲವು ಹುಡುಗಿಯರ ಮಟ್ಟಿಗಾದರೂ ನಿಜವೇ ಆಗಿದೆ, ಆದುದರಿಂದ ತನ್ನ ಮಗಳ ಕಣ್ಣುಗಳನ್ನು ಕಟ್ಟಿ ಅನಂತರ ಅವಳ ಕೊರಳನ್ನು ವಿವಾಹವೆಂಬ ನೊಗಕ್ಕೆ ಕಟ್ಟಲು ಯಾವ ತಾಯಿಯೂ ಯತ್ನಿಸಬಾರದು,

ಹುಡುಗಿತನದ ಆಶ್ರಯ ಸ್ಥಾನದಿಂದ ಅಗಲಿ ಜೀವನವೆಂಬ ಭೋರ್ಗರೆವ ಸಮುದ್ರದಲ್ಲಿ ತೇಲಾಡಲಿಳಿಯುವ ಮಹಿಳಾ ರಾಜಕೀಯ ಹೋರಾಟದ ಬಗ್ಗೆ ನನ್ನಲ್ಲಿ ಚೇತನಪೂರ್ವಕವಾದ ಅಭಿರುಚಿಯನ್ನು ಮೊದಲ ಬಾರಿಗೆ ಹುಟ್ಟಿಸಿದ ಒಂದು ಸಂದರ್ಭವನ್ನು ಕುರಿತು ಹೇಳಬೇಕಾಗಿದೆ, 1867ರ ಬೇಸಗೆಯಲ್ಲಿ ನನ್ನ ತಾಯಿಯೂ ನಾನೂ ಮ್ಯಾಂಚೆಸ್ಟರ್‌ನ ಬಳಿ ಪೆಂಡಲ್‌ಟನ್‌ನಲ್ಲಿದ್ದ ನಮ್ಮ ಮಿತ್ರರಾದ ಶ್ರೀ ಮತ್ತು ಶ್ರೀಮತಿ ರಾಬರ್ಟ್ಸ್ ಇವರಲ್ಲಿ ಉಳಿದುಕೊಂಡಿದ್ದೆವು. ರಾಬರ್ಟ್ಸ್ ಇವನು "ಬಡವರ ವಕೀಲ" ನೆಂದು ಅವನ ಮಿತ್ರರಿಂದ ಕರೆಯಲ್ಪಡುತ್ತಿದ್ದನು. ಅವನು ಶ್ರೀ ಅರ್ನೆಸ್ಟ್ ಜೋನ್ಸ್ ಇವನ ಅನುಯಾಯಿಯಾಗಿದ್ದು ಬಡವರ ಪರವಾಗಿ ಯಾವ ಫಲವನ್ನೂ ತೆಗೆದುಕೊಳ್ಳದೆ ಹೋರಾಡಲು ಸಿದ್ಧನಾಗಿದ್ದನು, ಹೆಂಗಸರು ಗಣಿಗಳಲ್ಲಿ ದುಡಿಯುವುದನ್ನು ನಿಲ್ಲಿಸುವ ಚಳವಳಿಯಲ್ಲಿ ಅವನು ತುಂಬಾ ಶ್ರಮಿಸಿದ್ದನು, ಹೆಂಗಸರು ತಮ್ಮ ಸೊಂಟದ ಮೇಲಕ್ಕೆ ಬಟ್ಟೆ ಉಡದೆ ಅವರ ಮೊಣಕಾಲಿಗೂ ಮುಟ್ಟದ ತುಂಡು ಅಂಗಿಯನ್ನು ಹಾಕಿ ಅವರಿಗೆ ಒಪ್ಪುವ ಮಾನವೀಯತೆ ಹಾಗೂ ಸ್ತ್ರೀತ್ವತೆಯನ್ನು ಮೀರಿ ಕಠಿಣವಾದ ಹಾಗೂ ಹೊಲಸು ಮಾತುಗಳಿಂದ ತಿರಸ್ಕರಿಸಿ ಅವರನ್ನು ದುಡಿಸುತ್ತಿದ್ದರೆಂದು ಅವನು ಹೇಳುವುದನ್ನು ನಾನು ಕೇಳಿದ್ದೇನು, ಚಿಕ್ಕ ಮಕ್ಕಳನ್ನು ಸಹ ಅದೇ ರೀತಿಯಲ್ಲಿ ದುಡಿಸುತ್ತಿದ್ದರು. ಮೂರು ನಾಲ್ಕು ವರ್ಷದ ಕೂಸುಗಳನ್ನು ಚಿಕ್ಕದ ಬಾಗಿಲುಗಳ ಬಳಿ ಕೂರಿಸಿದಾಗ ಅವು ಅಲ್ಲಿಯೇ ನಿದ್ದೆ ಹೋಗಿ ಕಡೆಗೆ ಕಾರ್ಖಾನೆ ಮೇಸ್ತ್ರಿಗಳ ಅಬ್ಬರ ಆಕ್ರೋಶದ ಧ್ವನಿಗೆ ಅವು ಎಚ್ಚರವಾಗುತ್ತಿದ್ದವು, ಹೀಗೆ ಹೇಳುತ್ತಾ ಇದ್ದಾಗ ಆ ಮುದುಕ ರಾಬರ್ಟ್ಸನ ಕಣ್ಣುಗಳು ಒದ್ದೆಯಾದುವಲ್ಲದೆ ಅಂದಿನ ಕರಾಳ ಹಿಂಸಾಕೃತ್ಯಗಳನ್ನು ವಿವರಿಸುವಾಗ ಅವನ ಕಂಠಸ್ವರವು ನಡುಗುತ್ತಿತ್ತು. ಇದರನಂತರ ಆ

ವನ ಮುಖವು ಕ್ರೂರ; ಸಾಮ್ಯತೆಗೆ ಇಳಿದಾಗ ಅವನು ಗುಲಾಮಗಿರಿಯನ್ನು ಕಟ್ಟಕಡೆಗೆ ಹೇಗೆ ಕತ್ತರಿಸಲಾಯಿತೆಂಬುದನ್ನು ಹೇಳುವನು, ಒಮ್ಮೆ ಅವನು ಕಲ್ಲಿದ್ದಲು ಜಿಲ್ಲೆಯಲ್ಲಿ ಹೋದಾಗ ತಮ್ಮ ಮನೆಗಳ ಬಾಗಿಲು ಬಳಿ ನಿಂತಿದ್ದ ಹೆಂಗಸರು ತಮ್ಮ ಮಕ್ಕಳನ್ನು ಮೇಲೆತ್ತಿ, "ವಕೀಲ ರಾಬರ್ಟ್ಸ್ ಇವನು ಹೋಗುತ್ತಾನೆ, ನೋಡಿ! ಅವನು ಮಾಡಿದ ಒಳ್ಳೆಯ ಕೆಲಸಕ್ಕೆ ನೀವೆಲ್ಲರೂ ಅವನಿಗೆ ಒಳ್ಳೆಯದನ್ನು ಹಾರೈಸಿರಿ," ಎಂಬುದಾಗಿ ಹೇಳುತ್ತಿದ್ದರೆಂದು ನಮಗೆ ಹೇಳಿದನು. ಆ ಸ್ತ್ರೀಯ ಮಾದರಿಕನು ತೀವ್ರ ಬದಲಾವಣೆಯಾಗಬೇಕೆಂಬುವ ವಿಷಯದಲ್ಲಿ ನನ್ನ ಮೊದಲ ಗುರು ಆಗಿದ್ದು ನಾನು ಅವನಿಗೆ ಒಪ್ಪಿದ ಶಿಷ್ಯಳಾಗಿದ್ದೆನು, ನಾನು ರಾಜಕೀಯ ದೃಷ್ಟಿ ಆಚರಣೆಯನ್ನಿಟ್ಟಿರಲಿಲ್ಲ, ಆದರೂ ನನಗೆ ಅದರ ಅರಿವೇನೂ ಇಲ್ಲದೆ ನನ್ನನ್ನು ಯಾವಾಗಲೂ ಸುತ್ತುಗಟ್ಟಿದ ಮತ್ತು ಹೆಚ್ಚುಕಡಿಮೆ ಅಲಂಕಾರಿಕವಾದ Whiggism ಇದನ್ನು ಪ್ರತಿಬಿಂಬಿಸಿದೆನು. ಬಡವರಿಗೆ ವಿದ್ಯೆ ಇತ್ತು. ದಾನ, ಧರ್ಮಾದಿಗಳಿಂದ ನೋಡುವುದಲ್ಲದೆ ಅವರನ್ನು ದೊಡ್ಡವರೇ ಇರಲಿ, ಬಡವರೇ ಇರಲಿ, ನಾನೊಬ್ಬ ಮಹಿಳೆಯಾಗಿರುವಾಗ ಅವರನ್ನು ಯಾವಾಗಲೂ ಬಹು ನಯ ವಿನಯದಿಂದಲೇ ಕಾಣುತ್ತಿದ್ದೆನು. ರಾಬರ್ಟ್ಸ್ ಇವನಿಗೆ ಬಡವರೆಂದರೆ ಸದಾ ದುಡಿಯುವ ಜೀನು ನೊಗಗಳೆಂದು, ಐಶ್ವರ್ಯವನ್ನು ಉತ್ಪಾದಿಸುವವರೆಂದೂ ಇತರರು ಅವರ ಎಚ್ಚರಿಕೆಯನ್ನು ನೋಡುವುದನ್ನು ಬಿಟ್ಟು ಅವರ ಸ್ವಾತಂತ್ರ್ಯವನ್ನು ಕಸಿಯುವವರೆಂದೂ, ಇತರರು ಅವರಿಗೆ ದಾನಧರ್ಮವನ್ನು ಮಾಡುವುದನ್ನು ಬಿಟ್ಟು ಆ ಬಡಜನ ತಾವಾಗಿಯೆ ನ್ಯಾಯವನ್ನು ಪಡೆಯುವ ಹಕ್ಕು ಇದೆಯೆಂದಲ್ಲ ಹೇಳುತ್ತಾ ತನ್ನ ಡೆಮೋಕ್ರಾಟಿಕೋಪದೇಶವನ್ನು ನನಗೆ ಆಗಿಂದಾಗ್ಗೆ ಕೊಡುತ್ತಲೇ ಇದ್ದನು, ನಾನು ಅವನ ವಿಶ್ವಾಸಕ್ಕೆ ಪಾತ್ರಳಾದ ಗೆಳತಿಯಾಗಿದ್ದು ಜನ ತುಂಬಿದ ಮ್ಯಾಂಚೆಸ್ಟರಿನ ಬೀದಿಗಳ ನಡುವೆ ಕುದುರೆಗಳನ್ನು ಓಡಿಸುವುದರಲ್ಲಿ ನನ್ನ ಜಾಣತನವನ್ನು ನೋಡಿದ್ದ ಅವನನ್ನು ಪ್ರತಿದಿನ ಬೆಳಿಗ್ಗೆ ಅವನ ಆಫೀಸಿಗೆ ಗಾಡಿಯನ್ನು ಹೊಡೆಯುತ್ತಾ ಸಾಗಿಸುತ್ತಿದ್ದೆನು, ಹೀಗೆ ಸವಾರಿ ಹೋಗುತ್ತಿರುವಾಗ ಮತ್ತು ಇತರ ಸಂದರ್ಭಗಳಲ್ಲೂ ರಾಬರ್ಟ್ಸ್ ಇವನು ಜನಸೇವೆಯನ್ನು ಮಾಡಬೇಕಾದುದರ ವಿಷಯವಾಗಿ ನನಗೆ ಬೋಧಿಸುತ್ತಿದ್ದನು. ಒಂದು ದಿನ ಅವನು ಕೇಳ್ದನು, "ನೀನೇಕೆ ಜಾನ್ ಬ್ರೈಟ್ ಇವನ ವಿಷಯವಾಗಿ ಆಲೋಚಿಸಬಾರದು?" ಎಂಬುದಾಗಿ ಅವನ ಕಂಗಳನ್ನು ಆವೇಗದಿಂದ ಕೆರಳಿಸಿ, ಅದುಮಿ ಅರಳಿಸಿ, ಕೇಳಿದನು. ಆಗ ನಾನು ಆ ಜಾನ್ ಬ್ರೈಟ್ ಇವನನ್ನು ಆಲೋಚಿಸಿದ್ದೇ ಇಲ್ಲವೆಂಬುದಾಗಿ ಆ ಜಾಗರೂಕತೆಯಿಂದ ಹೇಳಿದೆನು, "ಅವನು ತುಂಬಾ ಗದ್ದಲವನ್ನುಂ

ಟು ಮಾಡುತ್ತಾ ಇರುವ ಓರ್ವ ಕಠಿಣ ವ್ಯಕ್ತಿಯಲ್ಲವೇ?" ಎಂಬುದಾಗಿ ಕೇಳಲು, ಅವನು "ಸರಿ, ಅದೇ ನಾನೂ ಆಲೋಚಿಸಿದ್ದೇನು," ಎಂದು ನನ್ನನ್ನು ನೋಡಿ ಸೊಕ್ಕಿನ ಧ್ವನಿಯಿಂದ ಉಚ್ಚರಿಸಿದನು. ಬಡವರಿಗಾಗಿ ದುಡಿಯಲು ದೇವರು ನಿರ್ಮಿಸಿದ ಸಭ್ಯ ವ್ಯಕ್ತಿ ಜಾನ್ ಬ್ರೈಟ್ ಇವನೊಬ್ಬನೆ ದುಡಿದುದಾದರೆ ನಿಮ್ಮಿಂದ ಕೇವಲ ಉತ್ತಮ ಮಹಿಳೆಯರು ಸ್ವರ್ಗಲೋಕಕ್ಕೆ ಹೋಗಲು ಇಚ್ಛಿಸಲಾರಿರಿ, ಎಂಬುದಾಗಿ ರಾಬರ್ಟ್ಸ್ ಇವನು ಜಾನ್ ಬ್ರೈಟ್ ಇವನಲ್ಲಿರುವ ತನ್ನ ವಿಶ್ವಾಸವನ್ನು ವ್ಯಕ್ತಪಡಿಸಿದನು.

ಈ ಆವೇಶಯುಕ್ತನೂ ಮತ್ತು ಪ್ರೀತಿಗೆ ಪಾತ್ರನೂ ಆದ ಹೋರಾಟಗಾರನೊಡನೆ ನಾವು ಉಳಿದುಕೊಂಡಿದ್ದಾಗ ಮ್ಯಾಂಚೆಸ್ಟರ್‌ನಲ್ಲಿ ಇಬ್ಬರು ಫೆನಿಯನ್ (Fenian) ಮುಂದಾಳುಗಳಾದ ಕರ್ನಲ್ ಕೆಲ್ಲಿ ಮತ್ತು ಕ್ಯಾಪ್ಟನ್ ಡೀಸಿ ಇವರನ್ನು ವಿಚಾರಣೆಗೆ ಗುರಿಪಡಿಸಲಾಗಿತ್ತು. ಇದರಿಂದ ಇಡೀ ಐರಿಷ್ ಜನವೆಲ್ಲ ರೋಷದಿಂದ ಕುದಿದಿದ್ದರು, ಸೆಪ್ಟಂಬರ್ (1867) ತಿಂಗಳ 18ನೇ ದಿನ ಅವರನ್ನು ಒಂದು ಪೋಲೀಸ್ ಗಾಡಿಯಲ್ಲಿ ಸಿಲ್ವರ್ ಜೈಲಿಗೆ ಕೊಂಡೊಯ್ಯುವಾಗ Bellevue Railway Arch ಇದರ ಬಳಿ ರಸ್ತೆಯ ಬಲ ಭಾಗದಿಂದ ಬಂದ ಒಂದು ಗುಂಡು ಕುದುರೆ ಒಂದಕ್ಕೆ ತಗಲು ಅದು ಉರುಳಿ ಬಿತ್ತು, ಕ್ಷಣಮಾತ್ರದಲ್ಲಿ ಜನರು ಹಾರೆ ಪಿಕಾಸಿಗಳ ಸಮೇತವಾಗಿ ಆ ಗಾಡಿಯ ಬಾಗಿಲನ್ನೆಲ್ಲ ಮುರಿದು ಹಾಕಿ ಅದನ್ನು ಸುತ್ತುಗಟ್ಟಿದರು, ಒಂದು ಗುಂಪು ಪೋಲೀಸರು ಶೀಘ್ರವಾಗಿ ಬರುತ್ತಿದ್ದರು, ಆದರೆ ಕೈದಿಗಳನ್ನು ಪೋಲೀಸರಿಂದ ತಪ್ಪಿಸಬೇಕಾದರೆ ಗಾಡಿಯ ಬಾಗಿಲು ತೆರೆಯಬೇಕು, ಜನರು ಗಾಡಿಯ ಒಳಗಿದ್ದ ಪೋಲೀಸ್ ಬ್ರೆಟ್ಟ್ ಎಂಬುವನನ್ನು ಉಚ್ಚಸ್ವರದಿಂದ ಕರೆದು ಆ ಬಾಗಿಲಿನ ಬೀಗದ ಕೈಯನ್ನು ಹೊರಗೆಸೆಯಲು ಹೇಳುತ್ತಿದ್ದಾಗ ಯಾರೋ ಒಬ್ಬನು "ಬೀಗವನ್ನು ಒಡೆದು ಹಾಕಿ" ಎಂದು ಬೊಬ್ಬಿಟ್ಟನು, ಕೂಡಲೆ ಕೋವಿಯ ಒಂದು ಭಾಗದ ಕೋಲು ಬೀಗವನ್ನು ಸುತ್ತುವರಿದು ಅದನ್ನು ಮುರಿದು ಹಾಕಿತು, ಅಷ್ಟರಲ್ಲಿ ಗಾಡಿಯ ಒಳಗಿಂದ ಮೊನಚಾದ ಒಂದು ತೂತದ ಮೂಲಕ ಹೊರನೋಡುತ್ತಿದ್ದ ಪೋಲೀಸ್ ಬ್ರೆಟ್ಟ್ ಇವನು ತನ್ನ ತಲೆಗೆ ಗುಂಡೇಟು ತಾಗಿ ಆ ಗಾಡಿಯ ತೆರೆದ ಬಾಗಿಲ ಸಮೀಪವೇ ಸತ್ತು ಬಿದ್ದನು, ಅನಂತರ ಹದಿನೇಳು ವರ್ಷದ ಹುಡುಗ ವಿಲ್ಲಿಯಮ್ ಎಲ್ಲಿನ್ ಇವನು ಗಾಡಿಯ ಒಳಬಾಗಿಲುಗಳನ್ನು ತೆರೆದು ಹಾಕಿ ತೆರೆದು ಅದರೊಳಗಿಂದ ಕೆಲ್ಲಿ ಮತ್ತು ಡೀಸಿ ಇವರನ್ನು ಹೊರ ತೆಗೆಯುವಷ್ಟರಲ್ಲಿ ಇತರ ಎರಡೋ ಮೂರೋ ಜನರು ಅವರನ್ನು ಸುರಕ್ಷಿತವಾದ ಸ್ಥಳಕ್ಕೆ ಕೊಂಡೊಯ್ದರು, ಉಳಿದ ಜನವೆಲ್ಲ ಹೀಗೆ ಕೆಲಾಯನ

ಗೈಯುತ್ತಿದ್ದವರ ಮತ್ತು ಪೋಲೀಸ್ ಜನದ ಮಧ್ಯೆ ತಮ್ಮ ಕೋವಿ, ಕೋಲುಗಳ ಸಮೇತವಾಗಿ ಸಾಲುಗಟ್ಟಿ ನಿಂತಿದ್ದರು, ಆ ಫೆನಿಯನ್ (Fenian) ಮುಂದಾಳುಗಳು ತಮ್ಮ ಸುರಕ್ಷಿತ ಸ್ಥಳಕ್ಕೆ ತಲಪಿದನಂತರ ಅವರು ಚದರಿದರು. ತಮ್ಮ ಮುಂದಾಳುಗಳ ಕ್ಷೇಮವನ್ನು ತನ್ನ ಧ್ಯೇಯವಾಗಿಟ್ಟಿದ್ದ ಎಳೆ ವಿಲ್ಲಿಯಮ್ ಎಲ್ಲಿನ್ ಇವನು ತನ್ನ ರಕ್ಷಣೆಗಾಗಿ ಇತರರನ್ನು ಕೊಲ್ಲದೆ ಗಾಳಿಗೆ ಗುಂಡು ಹಾರಿಸುತ್ತಿದ್ದ. ಅವನು ಎಲ್ಲವೂ ಮುಗಿದನಂತರ ಎಂದಿನಂತೆ ಸುತ್ತಾಡುತ್ತಿದ್ದನು. ಪೋಲೀಸರು ಅವನನ್ನು ಹಿಡಿಯಲು ಹೇಗೂ ಹೊಂಚುತ್ತಾ ಇದ್ದರು. ಕಡೆಗೆ ಅವನನ್ನು ಹಿಂದಿನಿ ಹೊಡೆದು, ಕಲ್ಲು ಎಸೆದು, ಬಿದ್ದ ಹಾಕಿದರಲ್ಲದೆ ರಕ್ತದಲ್ಲಿ ತೊಯ್ದು ಮೈಮರೆತಿದ್ದ ಅವನನ್ನು ಅವನಂತೆಯೇ ಇದ್ದ ಅವನ ಇತರ ಸಂಗಾತಿಗಳೊಡನೆ ಎಳೆದೊಯ್ದು ಕಾರಾಗೃಹದೊಳಗಿಟ್ಟರು. ಪರಿಣಾಮವಾಗಿ ಇಡೀ ಮ್ಯಾಂಚೆಸ್ಟರ್ ನಡುಗಿತಲ್ಲದೆ ಜನಾಂಗ ಭೇದದ ಕಿಡಿಯು ಜ್ವಾಲೆಯಾಗಿ ಹೊತ್ತಿತು. ಆಂಗ್ಲ ಜನದ ಮಧ್ಯೆ ಹುಟ್ಟ(ಐರಿಶ್)ನವನೂ, ಅವನೆದುರಲ್ಲಿ ಹುಟ್ಟ ಆಂಗ್ಲನೂ ಜೀವವನ್ನು ಉಳಿಸಿಕೊಳ್ಳುವಂತಿರಲಿಲ್ಲ. ಸೆರೆಮನೆಯಲ್ಲಿದ್ದವರ ಮಿತ್ರರೆಲ್ಲರೂ ವಕೀಲ ರಾಬರ್ಟ್ಸನನ್ನು ಸುತ್ತುಗಟ್ಟಿ ಅವನ ಸಹಾಯವನ್ನು ಕೋರಿದರು. ಅವನಾದರೋ ತನ್ನ ಅಪ್ರತಿಹತವಾದ ಶಕ್ತಿಯನ್ನು ಜನರ ರಕ್ಷಣೆಗಾಗಿ ಮೀಸಲಾಗಿಟ್ಟನು. ಆಕಸ್ಮಿಕವಾಗಿ ಪ್ರಾಣಹಾರಕವಾದ ಗುಂಡನ್ನು ಹಾರಿಸಿದವನೊಬ್ಬನು ಹೇಗೂ ತಪ್ಪಿಸಿಕೊಂಡನು. ಅಲ್ಲದೆ ಇತರರಾರೂ ಯಾರನ್ನೂ ಕೊಂದಿಗೊಳ್ಳಬೇಕಿರಲಿಲ್ಲ. ನ್ಯಾಯಾಧೀಶ ಬ್ಲಾಕ್‌ಬರ್ನ್ ಇವರ ನೇತೃತ್ವದಲ್ಲಿ ಒಂದು ವಿಚಾರಣಾ ಸಮಿತಿಯನ್ನು ಮ್ಯಾಂಚೆಸ್ಟರ್‌ನಲ್ಲಿ ನೇಮಿಸಲಾಯಿತು. ಅವನನ್ನು ರಾಬರ್ಟ್ಸ್ ಇವನು "ನೇಣು ಹಾಕುವ ನ್ಯಾಯಾಧೀಶ"ನೆಂಬುದಾಗಿ ಕರೆದಿದ್ದ. ಆ ವಿಚಾರಣೆಯನ್ನು ಬೇರೆಂದೇ ಕಡೆಯಲ್ಲಿ ನಡೆಸಬೇಕೆಂಬ ಅವರ ಪ್ರಯತ್ನವು ವಿಫಲವಾಯಿತು. ಆದರೆ ಆಪಾದಿತರಿಗೆ ಮ್ಯಾಂಚೆಸ್ಟರ್‌ನಲ್ಲಿ ನ್ಯಾಯವು ಲಭಿಸುವುದೆಂದು ಮಾತ್ರ ಯಾರಿಗೂ ಖಂಡಿತವಾಗಿ ಹೇಳಲು ಸಾಧ್ಯವಿರಲಿಲ್ಲ. ಸೆಪ್ಟೆಂಬರ್ ೨೫ನೇ ದಿನ ಕೈದಿಗಳು ಕೈಗೆ ಕೋಳವನ್ನು ಹಾಕಿ ಕಚೇರಿಗೆ ಅವರನ್ನು ತರಲಾಯಿತು. ಆ ರೀತಿ ಅವರನ್ನು ಅವಮಾನಕ್ಕೊಳಪಡಿಸಿದ್ದಕ್ಕೆ ವಿರೋಧವನ್ನು ವ್ಯಕ್ತಪಡಿಸಿ ಅವರ ಪರವಾಗಿ ವಕಾಲತ್ತನ್ನು ವಹಿಸಿದ ಅರ್ನೆಸ್ಟ್ ಜೋನ್ಸ್ ಇವನು ತನ್ನ ವಕಾಲತ್ತನ್ನು ಬಿಟ್ಟು ನ್ಯಾಯಾಲಯದಿಂದ ಹೊರನಡೆದನು. ಆದರೆ ಈ ವಿಚಾರಣೆಯನ್ನು ಬಹು ಶೀಘ್ರವಾಗಿ ನಡೆಸಲು ಸೆಪ್ಟೆಂಬರ್ ೨೮ರಂದು ಎಲ್ಲಿನ್ ಲಾರ್ಕಿನ್, ಗೌಲ್ಡ್, ಮಾಗೀರ್ ಮತ್ತು ಕೊಂಡನ್ ಇವರು ಕೊಲೆಗಾರ

ರೆಂಬ ಆಪಾದನೆಯಿಂದ ನ್ಯಾಯಾಧೀಶರ ಮುಂದೆ ತಂದು ನಿಲ್ಲಿಸಿದರು.

ಆ ದಿನ ನ್ಯಾಯಾಲಯದಲ್ಲಿ ಕೂಡಿದ್ದ ಜನಸಂದಣಿಯಂತೆ ಮೊದಲ ಬಾರಿಗೆ ನಾನು ಕಂಡ ದೊಡ್ಡ ಜನಸಮೂಹವಾಗಿದೆ. ಬೀದಿಯೆಲ್ಲ ಶಸ್ತ್ರಧಾರಿಗಳಾದ ಸಿಪಾಯಿಗಳಿಂದ ತುಂಬಿ ನಿಬಿಡವಾಗಿತ್ತು. ನ್ಯಾಯಾಲಯದೆಡೆ ಎಲ್ಲ ದ್ವಾರಗಳು ಕಾತರದಿಂದ ಕೂಡಿದ್ದ ಜನರಿಂದ ಕಿಕ್ಕಿರಿದಿತ್ತು. ನಮ್ಮ ಗಾಡಿಯನ್ನು ಐರಿಷ್ ಜನಸಂದಣಿಯಿದ್ದ ಸಂದಿ ಕಡೆ ನಿಲ್ಲಿಸಲಾಯಿತು. ಅವರಲ್ಲಿ ಕೆಲಕೆಲವರಿಗಾಗಿ ಆಂಗ್ಲ ಜನರು ಕೊಲೆಗಡುಕರೆಂದು ಅವರನ್ನು ಕಠೋರವಾಗಿ ಶಪಿಸುತ್ತಾ ಐರಿಷ್ ಹುಡುಗರು ಮುಷ್ಟಿಯನ್ನೆತ್ತಿದ್ದರು. ಪರಿಸ್ಥಿತಿಯು ತುಂಬಾ ಬಿಗಡಾಗಿತ್ತು. ನಾವು ಇಬ್ಬರು ಹೆಂಗಸರು ಮತ್ತು ಮೂರು ಹುಡುಗಿಯರು ಇದ್ದೆವು, ನಮ್ಮನ್ನು ಯಾರಿಗೂ ತಿಳಿಯದು, ಎಂದು ಭಾವಿಸಿ ನಾನು ಮೆಲ್ಲನೆ ಸಮೀಪದಲ್ಲಿದ್ದ ಒಂದು ಮುಷ್ಟಿಯನ್ನು ಮುಟ್ಟಿದೆನು, "ಮಿತ್ರರೆ, ಇವರು ರಾಬರ್ಟ್ಸನ ಪತ್ನಿ ಮತ್ತು ಹೆಣ್ಣು ಮಕ್ಕಳು," ಎಂದು ಹೇಳಿದೆನು, "ರಾಬರ್ಟ್ಸ್! ವಕೀಲ ರಾಬರ್ಟ್ಸ್! ರಾಬರ್ಟ್ಸನಿಗೆ ದೇವರು ಒಳ್ಳೆಯದನ್ನು ಮಾಡಲಿ! ಅವರ ಗಾಡಿಯು ಮುಂದಕ್ಕೆ ಹೋಗಲಿ," ಎಂದು ಕೂಗಿದ್ದಾಗ ಜನರ ಗುಲ್ಲು ಕಡಿಮೆಯಾಯಿತು, ಕೂಡಲೇ ಅವರ ಮುಖವು ಮುಗುಳ್ನಗುವಿನಿಂದ ಕೂಡಿತಲ್ಲದೆ ನ್ಯಾಯಾಲಯದ ಮೆಟ್ಟಲು ವರೆಗೂ ನಮಗೆ ಸರಾಗವಾಗಿ ದಾರಿಯನ್ನು ಬಿಡಲಾಯಿತು,

ಆಹಾ, ಹೊರಗಿದ್ದ ಜನವು ಸೆರೆಮನೆಯಲ್ಲಿ ಇಟ್ಟಿದ್ದ ಜನರ ಪರವಾಗಿ ಕೂಡಿಕೊಂಡು ಗದ್ದಲವನ್ನೆಬ್ಬಿಸಿದಾಗ ಆ ಕಚೇರಿಯ ಒಳಗಿದ್ದ ಜನವು ಅವರಿಗೆ ವಿರೋಧವಾಗಿ ಅದೇ ಪ್ರಮಾಣದಲ್ಲಿ ಉದ್ರೇಕಗೊಂಡಿದ್ದರೆಂಬುದು ವಿಚಾರಣೆಯು ಪ್ರಾರಂಭವಾದೊಡನೇ ನ್ಯಾಯಾಧೀಶರ ಮತ್ತು ಸರಕಾರೀ ವಕೀಲರ ವರ್ತನೆಯಿಂದ ತಿಳಿಯುತ್ತಿತ್ತು. ಡಿಗ್ಬಿ, ಸೀಮೂರ್ ಮತ್ತು ಎರ್ನೆಸ್ಟ್ ಜೋನ್ಸ್ ಇವರು ಕೈದಿಗಳ ಪರವಾಗಿ ವಾದಿಸಿದರು, ಆದರೆ ಅವರು ಸರಕಾರದ ಆರೋಪಣೆಗಳನ್ನು ಪ್ರತಿಭಟಿಸಲು ಪ್ರತ್ಯಕ್ಷವಾಗಿಯೂ ಅಶಕ್ತರೋ ಎಂಬ ಸಂದೇಹವು ರಾಬರ್ಟ್ಸನಿಗೆ ಇದ್ದಿತು, ನಮ್ಮಂತೆ ಅವನು ಸಹ ಆ ವಿಚಾರಣೆಯನ್ನು ಕುರಿತು ನ್ಯಾಯಾಲಯದಲ್ಲಿ ವಾದಿಸುವವರು, ಪ್ರತಿವಾದಿಸುವವರೆಲ್ಲರೂ ಐರಿಷ್ ಜನರಿಗೆ ವಿರೋಧಿಗಳೆಂದು ತಿಳಿದಿದ್ದನು, ಆದ್ದರಿಂದ ರಾಬರ್ಟ್ಸನು ಆ ವಕೀಲರ ನ್ಯಾಯನಿಷ್ಠೆಯ ಬಗ್ಗೆ ಆಕ್ಷೇಪಿಸಿದನು. ಆಗ ನ್ಯಾಯಾಧೀಶ ಬ್ಲ್ಯಾಕ್‌ಬರ್ನ್ ಇವನು ಆ ತೀವ್ರಗಾಮಿ ವಕೀಲರ ಮೇಲೆ ತಕ್ಷಣ ಕ್ರಮವನ್ನು ತೆಗೆಯಲು ವ್ಯಗ್ರನ

ವಾಗಿ ಪ್ರಯತ್ನಿಸಿದನು, ರಾಬರ್ಟ್ಸನು, "ಈ ಜನರ (ಪ್ರತಿವಾದಿಗೆ ಸಿಕ್ಕಿಗಾದವರ) ಪ್ರಾಣವೇ ಅಪಾಯದಲ್ಲಿದೆ, ಸ್ವಾಮಿ," ಎಂಬುದಾಗಿ ಅವನಿಗೆ ಸಂಬೋಧಿಸಿ ಹೇಳಿದನು. "ಆ ವ್ಯಕ್ತಿಯನ್ನು ಇಲ್ಲಿಂದ ಹೊರಹಾಕಿ" ಎಂದು ನ್ಯಾಯಾಧೀಶನು ಕೋಪದಿಂದ ಆಜ್ಞಾಪಿಸಲು ನೌಕರರು ಮೆಲ್ಲಗೆ ರಾಬರ್ಟ್ಸನನ್ನು ದಬ್ಬಿಸಿದರು. ಆದರೆ ಆ ದೀನ ಹೋರಾಟಗಾರನನ್ನು ಪ್ರೀತಿ ಗೌರವಗಳಿಂದ ಎಲ್ಲಾ ಬಡಜನರು ಕಾಣುತ್ತಿದ್ದರೆಂದು ತಿಳಿದ ನ್ಯಾಯಾಧೀಶನು ತನ್ನ ಆಜ್ಞೆಯನ್ನು ಹಿಂತೆಗೆದುಕೊಂಡು ಅವನನ್ನು ಅಲ್ಲಿಯೇ ಇರುವಂತೆ ಹೇಳಿದನು. ಇಷ್ಟೆಲ್ಲ ಆದಾಗ್ಯೂ ಕಚೇರಿಯಲ್ಲಿ ಪಂಚಾಯತರಲ್ಲೊಬ್ಬನು ಯಾವ ವಿಚಾರಣೆ, ಸಾಕ್ಷ್ಯ ಇತ್ಯಾದಿಗಳನ್ನೆದನ್ನೂ ಲಕ್ಷಿಸದೆ ಎಲ್ಲಾ [illegible] ಜನವನ್ನೂ ಗಲ್ಲಿಗೇರಿಸುವನೆಂದು ಸಾರಿದನು, ಇಂಥ ಅಭಿಪ್ರಾಯದಿಂದ ಕೂಡಿದ್ದವರು ಅವನೊಬ್ಬನೇ ಅಲ್ಲವೆಂಬುದನ್ನು ಆ ವಿಚಾರಣೆಯು ಪ್ರತಿಕ್ಷಣವೇ ಸೂಚಿಸುತ್ತ, ಹಲವು ಅವಮಾನಕರವಾದ ವಿಷಯವನ್ನೆಲ್ಲ ಸಾಕ್ಷ್ಯರೂಪದಲ್ಲಿ ನ್ಯಾಯಾಲಯದಲ್ಲಿ ಹೇಳಲು ಬಿಡಲಾಗಿತ್ತು. ಬಹು ಕೀಳುವರ್ಗದ ಹೆಂಗಸರನ್ನು ಸಾಕ್ಷಿ ಹೇಳಲು ತಂದು ನಿಲ್ಲಿಸಲಾಗಿತ್ತು. ಅವರು ಹೇಳಿದ್ದನ್ನೆಲ್ಲ ಅವಿರೋಧವಾಗಿ ಒಪ್ಪಲಾಯಿತು. ಹೀಗೂ ಆರೋಪಿಗಳ ಪ್ರತಿವಾದಿಗಳು ಮಾಗೀರ (Maguire)ನನ್ನು ಕರೆಸಿದರು. ಕಡೆಗೆ ಸರಕಾರಕ್ಕೆ ಮನವಿ ಮಾಡಲಾಗಿ ಅವನಿಗೆ ಕ್ಷಮೆಯಿತ್ತು ಬಿಡುಗಡೆ ಮಾಡಲಾಯಿತು. ವಿಚಾರಣೆಯಾಗುವುದಕ್ಕಿಂತ ಹಿಂದೆಯೇ ಆಲೋಚಿಸಿದ್ದ ತೀರ್ಪು ಆ ಸೆರೆಯಲ್ಲಿದ್ದ ಜನವನ್ನು ರಕ್ಷಿಸಲಿಲ್ಲ. ನಾನು ಕಚೇರಿಯಲ್ಲಿ ಕುಳಿತಿದ್ದ ಸ್ಥಳದಿಂದ ನೇರವಾಗಿ ಬಿಳಿ ನೌಕರನು ನ್ಯಾಯಾಧೀಶನು ತೀರ್ಪನ್ನು ಕೊಡುವ ಮೊದಲೇ ಅಪರಾಧಿಗಳಿಗೆ ಕಪ್ಪು ಟೋಪಿಗಳನ್ನು ಹಾಕಲು ಸಿದ್ಧನಾಗಿದ್ದನು, ಹೀಗೆ ಹಿಂದೆಯೇ ನಿರ್ಧಾರವಾದ ಆ ನಾಮಕಾವಸ್ತೆಯ ತೀರ್ಮಾನವನ್ನು "ಅಪರಾಧಿ"ಗಳೆಂದೆನಿಸಿದ ಬಡ ಜನಕ್ಕೆ ಬೇರೆ ಬೇರೆ ಹೇಳಲಾಯಿತು. ಅದರನಂತರ ಅವರ ಮೇಲೆ ಮರಣದಂಡನೆಯನ್ನು ಏಕೆ ವಿಧಿಸಬಾರದೆಂಬುದಾಗಿ ಕೇಳಲಾಯಿತು, ಇದಕ್ಕೆ ಉತ್ತರವಾಗಿ ಅಲೆನ್ (Allen) ಇವನು ಕೇವಲ ಹುಡುಗನಾದರೂ ಧೈರ್ಯದಿಂದ ಹೀಗೆ ವೀರನಂತೆ ಮಾತಾಡಿದನು. ಅವನು ಪೋಲೀಸಿಗೆ ಅಲ್ಲದೆ ಮನುಷ್ಯರಿಗೆ ಗುಂಡುಹೊಡೆದುದಿಲ್ಲ; ಹಾಗೆ ಮನುಷ್ಯರಿಗೆ ಹೊಡೆದಿದ್ದರೆ ಅವನೂ ಶಿಕ್ಷೆಯಿಂದ ಪಾರಾಗುತ್ತಿದ್ದನು. ಅವನು ಕೆಲ್ಲಿ ಮತ್ತು ಡೀಸಿ ಇವರಿಗೆ ಸಹಕರಿಸಿದನು. ಅದರಿಂದಾದ ಪರಿಣಾಮಕ್ಕೆ ಅವನು ದುಃಖಿಸಲಾರನು. ಐರ್ಲೆಂಡಿಗಾಗಿ ಸಾಯಲು ಅವನು ಸಿದ್ಧನಾಗಿದ್ದನು, ತಪ್ಪಿತಸ್ಥರಲ್ಲವೆಂದು ಕ್ಷಮಿಸಲ್ಪಟ್ಟ ಮಾಗೀರ್ ಮತ್ತು ಕಾಂಡನ್ ಇವರೂ ಆ ಗೊಂದಲ

ದಡೆಯಲ್ಲಿ ಇದ್ದಿರಲಿಲ್ಲ. ಆದರೆ ಎಲ್ಲೆನ್‌ನಂತೆ ಇವರೂ ತಮ್ಮ ದೇಶಕ್ಕೆ ಸಾಯಲು ಸಿದ್ಧರಾಗಿದ್ದರು. ಹೇಗೂ ಮರಣದಂಡನೆಯನ್ನು ಇವರಿಗೆ ವಿಧಿಸಲಾಯಿತು. ಇದಕ್ಕೆ ಪ್ರತಿಯಾಗಿ "ದೇವರು ನಿಮ್ಮ ಆತ್ಮಕ್ಕೆ ದಯೆ ತೋರಲಿ," ಎಂಬ ಉದ್ಗಾರವನ್ನು ಐದು ಪ್ರತ್ಯೇಕ ಹಾಗೂ ಸ್ಪಷ್ಟವಾದ ಕಂಠಸ್ವರದಲ್ಲಿ ಸ್ವಲ್ಪವೂ ಭಯದಿಂದ ತಡವರಿಸದೆ ಇವರು ಪ್ರತಿಧ್ವನಿಸಿದರು. "ದೇವರು ಐರ್ಲೆಂಡನ್ನು ಕಾಪಾಡಲಿ" ಎಂದೆನ್ನುತ್ತಾ ಆ ಐದು ಮಂದಿ ಒಬ್ಬರನಂತರ ಒಬ್ಬರಾಗಿ ನನ್ನ ಕಂಬನಿದುಂಬಿದ ಕಣ್ಣುಗಳಿಂದ ಮರೆಯಾದರು.

ಬಹು ದುಃಖಕರವಾದ ಘಟನೆಯು ಅನಂತರ ಸಂಭವಿಸಿತು. ಎಲ್ಲೆನ್ ಇವನ ಪ್ರೇಯಸಿಯಾಗಿದ್ದ ಆ ಹುಡುಗಿಯು "ನನ್ನ ವಿಲ್ಲಿಯ ಮಾನನ್ನು ರಕ್ಷಿಸಿರಿ" ಎಂದು ಮೊಣಕಾಲೂರಿ ನಮಗೆ ಮೊರೆಯಿಡುತ್ತಿದ್ದ ಹೃದಯ ವಿದ್ರಾವಕವಾಗಿತ್ತು. ಆದರೆ ಗಂಡಾಂತರದಿಂದ ಪಾರಾಗಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ. ನವಂಬರ್ (1867) 23 ರಂದು ಎಲ್ಲೆನ್, ಲಾರ್ಕಿನ್ ಮತ್ತು ಓಬ್ರಾಯನ್ ಇವರನ್ನು ಸಾಲ್‌ಫರ್ಡ್ ಕಾರಾಗೃಹದ ಹೊರಾಂಗಣದಲ್ಲಿ ಗಲ್ಲಿಗೇರಿಸಲಾಯಿತು. ಇತಿಹಾಸದಲ್ಲಿ ಇವರು ಸ್ವಾತಂತ್ರ್ಯಕ್ಕೆ ಹೀಗೆ ಹೋರಾಡಿದ್ದರೆ ಇಂಗ್ಲೆಂಡು ಬಹುಶಃ ಇವರನ್ನು ಗೌರವಿಸುತ್ತಿದ್ದರು; ಇಲ್ಲಿ ಇವರನ್ನು ಇತರ ಸಾಮಾನ್ಯ ಕೊಲೆಪಾತಕರಂತೆ ಗಣಿಸಿ ಸೆರೆಮನೆಯ ಅಂಗಳದ ಬಿಸಿ ಸುಣ್ಣದ ಮಣ್ಣಿನಲ್ಲಿ ಹೂಳಿದರು.

ಬ್ರಾಡ್ಲೆಯೂ ನಾನೂ ಪರಸ್ಪರ ತಿಳಿಯದೇ ಇದ್ದಿದ್ದರೂ 1867 ರ ಕಾಲದಲ್ಲಿ ನಾವು ಒಂದು ರೀತಿಯಲ್ಲಿ ಸಹೋದ್ಯೋಗಿಗಳಾಗಿದ್ದೆವು, ಎಂಬುದನ್ನು ಸಂತೋಷದಿಂದ ಕಂಡುಹಿಡಿದಿದ್ದೇನೆ. ಆವಾಗ ಇವನು ತುಂಬಾ ಕೆಲಸಗಳಲ್ಲಿ ನಿರತನಾಗಿದ್ದನು. ನಾನಾದರೋ ಒಬ್ಬ ಹುಡುಗಿಯಾಗಿ ಸಾರ್ವಜನಿಕ ಕಾರ್ಯಕಲಾಪಗಳಿಗೆ ಎಚ್ಚೆತ್ತು ನನ್ನ ಸಹಾರ್ದತೆಯನ್ನು ಮಾತ್ರ ಅವುಗಳಿಗೆ ತೋರಿಸುತ್ತಿದ್ದೆನು. 1867 ರ ನವಂಬರ್ 24 ರ National Reformer ಪತ್ರಿಕೆಯಲ್ಲಿ ಇವನು ಕ್ಲೆರ್ಕನ್‌ವೆಲ್ ಗ್ರೀನ್‌ನಲ್ಲಿ ದಂಡನೆಗೆ ಒಳಗಾಗಿದ್ದವರ ಜೀವವನ್ನುಳಿಸಲು ಈ ರೀತಿಯಾಗಿ ವಾದಿಸಿದ್ದನ್ನು ಓದಿದ್ದೆನು:—

"ವಿಚಾರಣೆಯ ಕಾಲದಲ್ಲಿ ಕೊಟ್ಟ ಸಾಕ್ಷ್ಯದ ಪ್ರಕಾರ ಡೀಸ್ಲೆ ಮತ್ತು ಕೆಲ್ಲಿ ಇವರನ್ನು ಕಾನೂನಿಗೆ ವಿರೋಧವಾಗಿ ಸೆರೆಯಿಟ್ಟಾಗಿದೆ. ಬರೇ ತಿರಿದಾಡುವವರಿಂದ ಇವರ ಮೇಲೆ ಆರೋಪಣೆಯನ್ನು ಹೊರಿಸಿ ಅನಂತರ ಬಂಧಿಸಿದರು. ಅದರನಂತರ ಅವರು ದೊಡ್ಡ ಅಪರಾಧಿಗಳೆಂದು ತೀರ್ಮಾನವಾಗುವುದಕ್ಕಿಂತ ಮುಂಚೆಯೇ ಇವರನ್ನು ಬಂಧನದಲ್ಲಿಟ್ಟಿದ್ದರು. ಐರ್ಲೆಂಡಿನ ಪರಿಸ್ಥಿತಿಯೇ ಇಂಗ್ಲೆಂಡಿನಲ್ಲೂ ಇತ್ತೆಂದು ಇವನು ಇನ್ನೂ ತಿಳಿಯುವುದರಲ್ಲಿದ್ದನು, ಯಾವುದೇ ದೇಶದ ಪ್ರಜೆಯನ್ನು ಪಾ

ನೂನಿಗೆ ವ್ಯತಿರಿಕ್ತವಾಗಿ ಸೆರೆಹಿಡಿದರೂ ಈ ದೇಶದಲ್ಲಿ ಮಾತ್ರ ಅಂಥವರನ್ನು ವಿಚಾರಣೆಗೆ ಒಳಪಡಿಸುವ ವರೆಗೂ ಬಂಧನದಲ್ಲಿಡಬಹುದೆಂಬುದನ್ನು ಇನ್ನೂ ತಿಳಿಯುವುದರಲ್ಲಿದ್ದನು. ಕಾನೂನು ಬಾಹಿರವಾಗಿ ಅವನನ್ನು ಬಂಧಿಸಿದರೆ ಅಂಥವನ ಬಿಡುಗಡೆಗಾಗಿ ಬಲಾತ್ಕರಿಸುವುದರಲ್ಲಿ ನ್ಯಾಯವಿದೆ, ಕಾನೂನನ್ನು ಮೀರುವಂಥವನಿಗೆ ಪೋಲೀಸ್ ಉಡುಗೆಯನ್ನು ಅವನು ತೊಟ್ಟ ಮಾತ್ರಕ್ಕೆ ಹೆಚ್ಚಿನ ಅಧಿಕಾರ ಸಿಕ್ಕಿದಂತಾಗದು. ಈ ವಿಷಯವನ್ನು ಸರಿಯಾಗಿ ಪ್ರಧಾನ ನ್ಯಾಯಾಧೀಶನ ಮುಂದೆ ಅವನು The Court of Common Pleas - ಈ ನ್ಯಾಯಾಲಯದಲ್ಲಿ ವಾದಿಸಿದ್ದಾನೆ, ಆಗ ಆ ಪ್ರಧಾನ ನ್ಯಾಯಮೂರ್ತಿಯು ಆ ವಾದವನ್ನು ಪ್ರತಿಭಟಿಸಲಿಲ್ಲ. ಈ ಜನರಿಗೆ ಶಿಕ್ಷೆಯನ್ನು ವಿಧಿಸದೆ ಉಳಿಸಬೇಕೆಂಬುದಕ್ಕೆ ಇನ್ನೊಂದು ಕಾರಣವಿದೆ. ಅವರಿಗೆ ಶಿಕ್ಷೆಯನ್ನು ವಿಧಿಸಲೇ ಬೇಕೆಂದು ವಿಚಾರಣೆಗೆ ಮುಂದೆಯೇ ನಿರ್ಧರಿಸಿದ್ದ ನ್ಯಾಯಾಧೀಶರಲ್ಲೊಬ್ಬನನ್ನು ಈ ವ್ಯಾಜ್ಯದ ಬಗ್ಗೆ ಸರಕಾರವು ನೇಮಿಸಿದ್ದರಿಂದ ಅವನ ಮಾತಿಗೆ ಅವರು ಕಿವಿಗೊಡುವವರೆಂಬುದನ್ನು ಒಪ್ಪಬೇಕಾಗಿದೆ. ಇದು ಬರೇ ಹಿಂದಿನ ರಾಜಕೀಯ ಕಕ್ಷೆಯಾಗಿದೆ, ಪೋಲೀಸ್ ಬ್ರಿಟ್ಟು (Brett) ಇವನ ಮರಣವು ದುಃಖದಾಯಕವಾದ ಆಕಸ್ಮಿಕ ಘಟನೆಯಾಗಿದೆ, ಆದರೆ ಎಲ್ಲಾ ವಿವರಗಳನ್ನರಿತ ನಂತರ ಬ್ರಿಟ್ಟು ಇವನ ಕೊಲೆಯು ಬೇಕೆಂದೇ ಮಾಡಿದ್ದೆಂದು ಯಾರೂ ಊಹಿಸುವರಿರಲಿಲ್ಲ. ಕಾನೂನು ಪ್ರಕಾರವಾಗಿ ಅದೊಂದು ಕೊಲೆ; ಆದರೆ ವ್ಯಾವಹಾರಿಕವಾಗಿ ಹೇಳುವುದಾದರೆ ಅದು ಸೆರೆಯಿಂದ ಒಬ್ಬನನ್ನು ಬಿಡಿಸುವಾಗ ನಡೆದ ಆಕಸ್ಮಿಕ ಘಟನೆಯಾಗಿದೆ, Varignano, ನೇಪಲ್ಸನ Bourbon, ಪೋಲೆಂಡ್ ಅಥವಾ ಪ್ಯಾರಿಸ್‌ನಲ್ಲಿ ಸೆರೆಯಾದವರನ್ನು ಪಾರಾಗಿಸುವುದಾಗಿದ್ದರೆ ಈ ದೇಶದ ಶ್ರೀಮಂತರು ಸಹ ಅದೇ ರೀತಿ ತುಂಬಾ ವಾದಿಸುತ್ತಿದ್ದರು, ಆದರೆ ಸೋದರೀ ರಾಷ್ಟ್ರವಾದ ಐರ್ಲೆಂಡು ಆ ರಾಜ್ಯಗಳಿಗಿಂತ ಏನು ಕಡಿಮೆ? ಈ ಜನಕ್ಕೆ ಮರಣದಂಡನೆಯನ್ನು ವಿಧಿಸಿ ಅವರು ತಮ್ಮ ಸೇಡನ್ನು ತೀರಿಸಿಕೊಳ್ಳಲು ಹವಣಿಸುವರು. ಇದು ಹೇಗೂ ಮಹತ್ತಾದ ಮತ್ತು ಗಹನವಾದ ವಿಚಾರವಾಗಿದೆ, ಅವರನ್ನು ರಕ್ಷಿಸಲು ಇವರು ಶಕ್ತಿಮೀರಿ ಶ್ರಮಿಸುವರೆಂದೇ ಹಿಂದೆ ಮಾತಾಡಿದ ಒಬ್ಬನು ಹೇಳಿದನು, ಆದರೆ ಅವರು ಅಂತಿರಲಿಲ್ಲ. ಅವರು ಹಾಗೆ ಶ್ರಮಿಸಿದ್ದರೆ ಒಳ್ಳೆಯದಿತ್ತೆಂದು ಅವನು ಆಶಿಸಿದ್ದನು, ಇಂಗ್ಲೆಂಡಿನ ಜನವಾಗಿದ್ದರೆ ದೇಶದ ಒಂದು ಮೂಲೆಯಿಂದ ಇನ್ನೊಂದರ ವರೆಗೆ ಪ್ರತಿಯೊಬ್ಬನೂ "ಈ ಜನಕ್ಕೆ ಮರಣದಂಡನೆಯನ್ನು ವಿಧಿಸಬಾರದು" ಎಂಬುದಾಗಿ ಹೇಳುತ್ತಿದ್ದರು. ಆದರೆ ಹಾಗೆ ಹೇಳಲು ಜನಕ್ಕೆ ಅದಿಷ್ಟು ಧೈರ್ಯವಿರಲಿಲ್ಲವೆಂದೂ ಅವನು ಕಳವಳಪಟ್ಟಿದ್ದನು, ಅವರ ಆತ್ಮಬಲವು ಅವರ ದೇಹಬಲಕ್ಕೆ ಸಮಾನವಾಗಿರಲಿಲ್ಲ. ಆದುದರಿಂದ ಮರಣದಂಡನೆಯನ್ನು ವಿಧಿಸಬಾರದು,"

ಎಂದೆನ್ನಲು ಅವರಿಗೆ ಸಾಧ್ಯವಾಗಲಿಲ್ಲ. ಆ ಕಾರಣದಿಂದ ಇಂಗ್ಲೆಂಡಿನ ಸರ್ವಶಕ್ತಿಯುತ ನಿಷ್ಠ ವಾರ್ತಾಪತ್ರಿಕೆಗಳಿಗೆ ಅವನು ಮನವಿಯನ್ನು ಮಾಡಿಕೊಂಡನು. ಅಂದಿನ ಕೋಲಾಹಲದ ಮಧ್ಯೆ ಆ ದಿನಗಳಲ್ಲಿ ಹಾನಿಕಾರಕವೆಂದು ತೋರಿದ್ದ ಆ ವಾರ್ತಾಪತ್ರಿಕೆಗಳೇ ಈಗ ಈ ಮರಣದಂಡನೆಗೆ ಸಿಕ್ಕಿಗಾದ ನಾಲ್ವರನ್ನು ಬದುಕಿಸಬೇಕಾಗಿದೆ. ವಾರ್ತಾಶಾಖೆಯು ಹಾಗಾಗಬೇಕೆಂದು ವಾದಿಸಿದರೆ ಸರಕಾರವು ಅದನ್ನು ಉಲ್ಲಂಘಿಸಲಾರದು. 1798ರಲ್ಲಿ ಆದ ರಕ್ತಪಾತದ ಪುನರಾವೃತ್ತಿಯು ಈಗ ಅವನ ಎದುರಿಗೆ ಭಯಾನಕ ರೂಪದಲ್ಲಿ ನಿಂತಿತ್ತು. ಈ ವಿಷಯವಾಗಿ ಅವನ ಉಗ್ರ ಪ್ರತಿಪಾದನೆಯು ಆ ದಂಡನೆಗೊಳಗಾದ ಜನಕ್ಕೆ ಇನ್ನಷ್ಟು ಹಾನಿಕಾರಕವಾಗಿ ಪರಿಣಮಿಸುವುದೋ ಎಂದು ಅವನು ಹೆದರಿದನು, ಅಂತಲ್ಲದಿದ್ದರೆ ಅವನು ಬೆಂಕಿಯಿಂದ ಹೊತ್ತಿದ ನುಡಿಗಳನ್ನು ನಿರ್ಭಿಡೆಯಿಂದ ಅವಿರತವಾಗಿ ಮಾತಾಡುವುದರಲ್ಲಿದ್ದನು. ಅಂದಿನ ಪರಿಸ್ಥಿತಿಗನುಸಾರವಾಗಿ ಅವನು ಸರಕಾರಕ್ಕೆ, "ನೀವು ಇಂದು ಬಲಿಷ್ಠರಾಗಿದ್ದೀರಿ; ಈ ನಾಲ್ವರ ಜೀವನವನ್ನು ನಿಮ್ಮ ಕೈಯಲ್ಲಿ ಇಟ್ಟುಕೊಂಡಿದ್ದೀರಿ; ಆದರೆ ಅವರ ದೇಶವನ್ನು ನಿಮ್ಮೊಡನೆ ಸಮನ್ವಯಗೊಳಿಸಬೇಕಾದರೆ ಐರ್ಲೆಂಡನ್ನು ಅಥವಾ: ನೀವು ಗೆಲ್ಲಬೇಕೆಂದಾದರೆ ಈ ದೇಶದ ಮಕ್ಕಳು ನಿಮ್ಮನ್ನು ಪ್ರೀತಿಸುವಂತೆ ನೀವು ಇಚ್ಛಿಸುವುದಾದರೆ ನೀವು ಇವರನ್ನು ಗಲ್ಲುಗೇರಿಸಿ ಆ ರೀತಿಯಾಗಿ ಅವರ (ಐರಿಷ್) ಜನತೆಯನ್ನು ಇನ್ನಷ್ಟು ಕಡೆಗೊಳಿಸಿ ಅವರನ್ನು ಉದ್ರೇಕಿಸಬೇಡಿ. ನಿಮ್ಮ ಶೌರ್ಯವನ್ನು ದಯಾಗುಣದಿಂದ ತೋರಿಸಿರಿ; ನ್ಯಾಯವೆಂಬ ಖಡ್ಗವನ್ನು ನಿಮ್ಮ ಕೋಪವನ್ನು ತೀರಿಸುವುದಕ್ಕಾಗಿ ಉಪಯೋಗಿಸಬೇಡಿ, ಏಕೆಂದರೆ ನೀವು ಉಪಯೋಗಿಸುವ ಆಯುಧವು ನಿಮ್ಮ ಕೈಯಲ್ಲಿದ್ದಾಗಲೇ ಮುರಿದು ಹೋದೀತು; ಅಲ್ಲದೆ ಅದು ಕ್ರೂರತನದಿಂದ ಉಪಯೋಗಿಸಿದ ಆ ಖಡ್ಗದ ಹಿಡಿಯಿಂದಲೇ ನಿಮ್ಮ ತಲೆಬುರುಡೆಯು ಹಾರಿಹೋಗುವ ದಿನವೂ ಬೇಗನೆ ಬಂದೀತು!"

ಅಕ್ಟೋಬರ್ (1867)ನಲ್ಲಿ ಅವನು (ಬ್ರ್ಯಾಡ್ಲೆಯು) ಬಹುತೀವ್ರವಾದ ಮತ್ತು ಮನಸ್ಪರ್ಶಕವಾದ ಕೋರಿಕೆಯನ್ನು ಐರ್ಲೆಂಡಿಗಾಗಿ ಮಾಡಿದನಲ್ಲದೆ ಅದನ್ನು ಮುದ್ರಿಸಿ ಹಂಚಿದನು. ಅದೇನೆಂದರೆ:—

"ನೀವು ಹೊಗಳಿಕೊಳ್ಳುತ್ತಿರುವ ಆಂಗ್ಲ ಸ್ವಾತಂತ್ರ್ಯವು ಕಿಂಗ್ಸ್ಟನ್ (Kingston) ನೀತಿಯೆಂಬ ಕಂಬವನ್ನು ದಾಟಿದನಂತರ ಎಲ್ಲಿ ಹೋಯಿತು? ಈ ಸುಮಾರು ಎರಡು ವರ್ಷಗಳಿಂದ ಅದು ಎತ್ತ ಹಾರಿಯಿತು? ಕೈದಿಗಳನ್ನು ನ್ಯಾಯಾಲಯಕ್ಕೆ ತರುವ ಆಜ್ಞೆಯನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿ ಸೆರೆಮನೆಗಳೆಲ್ಲಾ ಅಪವಾದಿತರಿಂದ ತುಂಬಿಹೋಗಿವೆ. ಹಡಗುಗಳಲ್ಲಿ ಕೂಡಿಸಲ್ಪಡುತ್ತಿವೆ; ಗೂಢಚಾರರು ಎಲ್ಲಾ ಬೀದಿ ಅಂಗಡಿಗಳಲ್ಲಿರುವ ಜನರ ಮಾತ

ನ್ನೆಲ್ಲ ಸಂಗ್ರಹಿಸುತ್ತಿದ್ದಾರೆ. ಪರಿಣಾಮವಾಗಿ ಕಡೆಗೆ ಇಂಗ್ಲೆಂಡಿನಲ್ಲಿ ಈ ಫೀನಿಯನ್ ಕೋಲಾಹಲವು ಉಂಟಾಯಿತು. ಕಾಲವು ಮೀರುವುದಕ್ಕಿಂತ ಮುನ್ನ ನಮ್ಮ ಇತಿಹಾಸದ ಪುಟಗಳು ರಕ್ತದ ಶಾಯಿಯಿಂದ ಸಂಚಿತವಾಗುವ ಮುಂಚೆ, ಅವೇಶದಿಂದ ನಾವು ಮೈಮರೆತು ಪರಸ್ಪರ ವೈಮನಸ್ಯವನ್ನು ತಾಳುವ ಮುಂಚೆ, ನಾವು ನಮ್ಮ ಸೋದರೀ ರಾಷ್ಟ್ರಕ್ಕೆ ನ್ಯಾಯವನ್ನೊದಗಿಸಲು ಯತ್ನಿಸುವ. ರೈತಾಪಿಗಳಿಗೆ ಹಾನಿಕರವಾಗಿ ಪರಕೀಯತನದಿಂದ ಜಾರಿಗೆ ತಂದ ಭೂಹಿಡುವಳಿ ಕಾನೂನನ್ನು ತೆಗೆದು ಹಾಕಿರಿ. ದೇಶದ ಸತ್ವವನ್ನು ಹೀರಿ ಕಡೆಗೆ ಉದ್ಯೋಗತೀಗೀಡಾದ, ಅದಕ್ಕೆ ಒಂದೇ ಒಂದು ಸಮ್ಮಾನಕರವಾದ ಮಾತನ್ನು ಹೇಳದ, ಸಮಾಜದ ಜಿಗಣೆಯಂತಿರುವ ಈ ಕ್ರೈಸ್ತ ಸಮಾಜವನ್ನು ಕಿತ್ತುಹಾಕಿರಿ. ದೇಶದ ಸೈನಿಕ ಶಿಬಿರಗಳನ್ನು ಉಳಿಸಿ ನಾಡ ಕಾರ್ಖಾನೆಗಳಾಗಿ ಪರಿವರ್ತಿಸಿ. ನಾಗರಿಕರಲ್ಲಿ ಸ್ವಾತಂತ್ರ್ಯ ಭಾವವು ಮೊಳಗುವಂತೆ ಹುರಿದುಂಬಿಸಿ ತಕ್ಕ ಕಾನೂನು ಕಾಯಿದೆಗಳ ಮೂಲಕ ಅವರನ್ನು ರಕ್ಷಿಸಿರಿ. ಆದರಿಂದ ಅವರು ತಮ್ಮನ್ನು ಸೆರೆಮನೆಗೆ ಸೇರುವರೆಂಬುದಕ್ಕೆ ಹೆದರದೆ ತಮ್ಮ ಬೇಕು ಬೇಡಿಕೆಗಳನ್ನು ನೇರವಾಗಿ ಮತ್ತು ಸತ್ಯವಾಗಿ ಹೇಳಿಕೊಳ್ಳುವಂತಾಗಲಿ. ಐರಿಷ್ ಜನರಲ್ಲಿ ಉತ್ತಮರೂ ಬುದ್ಧಿವಂತರೂ ಆದವರಿಂದ ಕೂಡಿದ ಸಮಿತಿಯು ನಮ್ಮ ಉನ್ನತ ವರ್ಗದ ಆಂಗ್ಲ ನ್ಯಾಯಾಧಿಕಾರಿಗಳೊಡನೆ ವಿಧಾನಪೂರ್ವಕವಾಗಿ ಕಳುಹಿಸುವ ಎಲ್ಲ ಪ್ರಕಾರಗಳನ್ನು ಕೇಳಲಿ! ಅದಕ್ಕನುವಾಗಿ ಅತ್ಯಾಚಾರವನ್ನು ಶಿಕ್ಷಿಸುವ ಬದಲಾಗಿ ಆ ಅತ್ಯಾಚಾರಗಳನ್ನು ಹುಟ್ಟಿಸಲಿಕ್ಕೆ ತಕ್ಕುದಾದ ಮತ್ತು ನ್ಯಾಯಪೂರ್ವಕವಾದ ಮಸೂದೆಗಳನ್ನು ಜಾರಿಗೆ ತರುವ. ಐರ್ಲೆಂಡಿನ ಜನಸಂಖ್ಯೆಯನ್ನು ಕಡಿಮೆ ಮಾಡಿ ಅದರ ದಾರಿದ್ರ್ಯವನ್ನು ಹೆಚ್ಚಿಸಿದವರು ಫೀನಿಯನ್ ಜನತೆಯು ಅಲ್ಲ. ಬಹುಸಂಖ್ಯೆ ಗೇಣಿದಾರರನ್ನು ಅವರ ಸ್ಥಾನದಿಂದ ಓಡಿಸಿದುದು ಫೀನಿಯನ್ ಜನರು ಅಲ್ಲ, ವ್ಯವಸಾಯೋತ್ಪತ್ತಿಯು ಕಡಿಮೆಯಾಗುವಂತೆ ಮಾಡಿದ್ದು ಫೀನಿಯನ್ ಜನರಲ್ಲ; ಅನಾಹುತಗಳಿಗೆ ಕಾರಣರು ಯಾರೋ ಅವರೇ ಈಗ ಅದರ ನಿವಾರಣೆಗೆ ಉಪಾಯವನ್ನು ಕಂಡುಹಿಡಿಯಬೇಕು."

1867ರ ಡಿಸೆಂಬರ್ ತಿಂಗಳಲ್ಲಿ ನನ್ನ ಸಂತೋಷಪ್ರದವೂ ಶಾಂತಮಯವೂ ಆದ ತಾರುಣ್ಯದ ಬಂದರಿನಿಂದ ಜೀವನವೆಂಬ ನಾವೆಯನ್ನೇರಿ ಸಂಸಾರವೆಂಬ ವಿಶಾಲ ಸಮುದ್ರದಲ್ಲಿ ತೇಲಾಡಲೆಂದು ಹೊರಡಲು ಆ ನಾವೆಯು ಕಡವು ಮುಟ್ಟಿದೊಡನೆಯೇ ಅಲೆಗಳು ಭೋರ್ಗರೆಯತೊಡಗಿದುವು. ನಾನೂ ನನ್ನ ಪತಿಯೂ ಪ್ರಾರಂಭದಿಂದಲೇ ಒಬ್ಬರಿಗೊಬ್ಬರು ಹೊಂದದ ದಂಪತಿಗಳಾಗಿದ್ದೆವು. ಅವನಾದರೋ ಗಂಡಿನ ಸರ್ವಾಧಿಕಾರಿಯೆಂದೂ, ಹೆಣ್ಣು ಅವನ ಅಧೀನದಲ್ಲಿರತಕ್ಕವಳೆಂದೂ ತನ್ನ ಮನೆಯಲ್ಲಿ ತಾನು ಹೇಳಿದ್ದೇ

ನಡೆಯುವಿಕೆಯಿಂದೂ, ಕಾರುಬಾರುಗಳಲ್ಲಿ ಅಚ್ಚುಕಟ್ಟಾಗಿ ನಡೆಸುವಿಕೆ-
ಯಿಂದೂ ಭಾವಿಸಿದ್ದ ಕ್ರಮಬದ್ಧರೀತಿಯು ಮತ್ತು ಹಳೇ ಕಾಲದ ಪ್ರತಿನೀ-
ತಿಯನ್ನು ತಾಳಿದ್ದವನಾಗಿದ್ದನು. ನಾನಾದರೋ ಸ್ವತಂತ್ರ ಮನೋಭಾ-
ವದಿಂದ ಬೆಳೆದವಳು. ಮನೆಯ ವಿಚಾರದಲ್ಲಿ ಶಿಲ್ಪವಾದುದನ್ನೇನೂ
ಲಕ್ಷಿಸದವಳಲ್ಲ. ನಾನು ಅಮೇರಿಕದ ಪ್ರಕೃತಿಯಿಂದಲೂ ಸಹವಾಸ-
ದಿಂದಲೂ ಲ್ಯೂಸಿಫರ್‌ನಂತೆ ಸ್ವಾತಂತ್ರ್ಯದಿಂದ ಕೂಡಿದ್ದವಳಾಗಿ-
ದ್ದೆನು. ನನಗೆ ಎಂದೂ ಯಾರೂ ಕಠಿಣವಾಗಿ ಮಾತಾಡಿದ್ದಿಲ್ಲ; ಯಾರೂ
ಯಾವೊಂದು ಕೆಲಸವನ್ನು ಮಾಡಲಿಕ್ಕೆ ನನಗೆ ಆಜ್ಞಾಪಿಸಿದ್ದಿಲ್ಲ; ನಾನು
ನಡೆದ ದಾರಿಯನ್ನು ನನ್ನ ಪಾದಗಳಿಗೆ ಪ್ರಿಯವಾಗುವಂತಾಗಿಸದೆ ನಿಲ್ಲದೆ
ಯಾವ ಮಾನಸಿಕ ಗೌರವವೂ ನನ್ನನ್ನು ಬಾಧಿಸಿದ್ದೇ ಇಲ್ಲ. ಕಠಿಣ
ಪರಿಸ್ಥಿತಿಯು ಮೊದಲ ಬಾರಿಗೆ ನನ್ನ ಅಶ್ರದ್ಧೆಯ ಕಾತರವನ್ನು ಉ-
ದ್ರೇಕಿಸಿತಲ್ಲದೆ ಅದು ನನ್ನಲ್ಲಿ ಒಂದು ಬಗೆಯ ಕೋಪಾವೇಶದ ಕಂ-
ಬನಿಯನ್ನುಸುರಿಸುತ್ತ. ಉಕ್ಕಿನಂತೆ ತಣ್ಣಗಾಗಿ ಹಾಗೂ ಗಟ್ಟಿಯಾಗಿ
ಅನ್ಯಾಯವನ್ನು ಹೆಮ್ಮೆಯಿಂದ ಪ್ರತಿಭಟಿಸುತ್ತಲಿದ್ದೆನು. ಯಾವ ತಾತ್ಪ-
ರ್ಯವೂ ಇಲ್ಲದೆ ಬಿಂಗಿರಕಾಗಳಂತೆ ಉತ್ಸಾಹಿತೆಯಾಗಿದ್ದ ಹುಡುಗಿಯು
ಇದೀಗ ಮಾರ್ಪಟ್ಟಳು. ಗಂಭೀರ ಮೌನ ಹಾಗೂ ಹೆಮ್ಮೆಯಿಂದ ಕೂಡಿ-
ದ್ದ ಹೆಣ್ಣು ಇದೀಗ ಅವಳಲ್ಲಿ ಸಹಜವಾಗಿದ್ದ ವಿಶ್ವಾಸ, ಭಯ ಮತ್ತು ಭ್ರಾಂ-
ತಿ ನಿವಾರಣಾ ಭಾವವನ್ನು ತನ್ನಲ್ಲಿ ಹುದುಗಿಸಿಕೊಂಡು ಮಾರ್ಪಟ್ಟಳು.
ಪ್ರಾರಂಭದಿಂದಲೇ ನಾನು ಅದೇನೋ ಅಸಮಾಧಾನವನ್ನು ಹೊಂದಿದ ಹೆ-
ಣ್ಣಾಗಿದ್ದಿರಬಹುದಷ್ಟೇ ಅಲ್ಲ, ಇತರ ಸನ್ನಿವೇಶಗಳೂ ನನ್ನನ್ನು ನಿಧಾನವಾಗಿ
ಒಂದು ಸಾಂಪ್ರದಾಯಿಕ ವಸ್ತುವಾಗಿ ಮಾರ್ಪಡಿಸಿರಲೂ ಬಹುದು.
ಹಿಂದೆಯೇ ಹೇಳಿದ ಬಾಲ್ಯದ ಅಜ್ಞಾನದಿಂದ ತೊಡಗಿ ಒಳಗಿಂದೊ-
ಳಗೇ ಭಯ ಮತ್ತು ಬಲಾತ್ಕಾರದ ಪ್ರಸಂಗಗಳ ಅನುಭವ, ಮ-
ನೆಯ ಕಾರುಬಾರು, ಮತ್ತು ಹಣಕಾಸನ್ನು ಎಚ್ಚರಿಕೆಯಿಂದ
ಉಪಯೋಗಿಸುವ ರೀತಿಯನ್ನೇನೂ ತಿಳಿಯದಿದ್ದ ನಾನು ನನ್ನ
ಪಾಲಿನ ಕರ್ತವ್ಯವನ್ನು ನೆರವೇರಿಸಲು ಉತ್ಸುಕಳಾಗಿದ್ದರೂ
ನನ್ನ ಜೀವನದಲ್ಲಿ ಏನೊಂದು ಹಣವು ನನ್ನ ಖರ್ಚಿಗೆ ಇದ್ದುದೇ
ಇಲ್ಲ. ನನಗಾಗಿ ಒಂದು ಜತೆ ಕೈಚೀಲ (gloves) ವನ್ನು ಕೊಂಡು
ಕೊಂಡದ್ದೇ ಇಲ್ಲ. ಹೀಗೂ ಈ ಅಲ್ಪ ವಿಷಯಗಳನ್ನು ಕುರಿ-
ತಾಗಿ ನಾನು ತಲೆಯನ್ನು ಚಚ್ಚಿಕೊಳ್ಳಲಿಲ್ಲ. ನಾನು ಮಾಡಲು
ಇಚ್ಛಿಸಿದ್ದನ್ನು ತೀವ್ರವಾಗಿ ಮಾಡುತ್ತ, ನನ್ನ ತಾಯಿಯನ್ನು
ಕುರಿತು ಹೆಚ್ಚು ಮಾತಾಡದಿದ್ದರೂ ನನ್ನ ಹೃದಯದಲ್ಲಿ ಅವ-
ಳಿಗಾಗಿ ಮರುಗುತ್ತ, ಅವಳನ್ನು ಕಾಣಬೇಕೆಂಬ ಹಂಬಲವು
ನನ್ನ ಹೊಟ್ಟೆಯಲ್ಲಿ ಕುದಿಯುತ್ತ ಇರಲು ನನ್ನ ಸುತ್ತಮು-
ತ್ತಲಿದ್ದ ಹೆಂಗಸರು ಯಾವ ರೀತಿಯಲ್ಲೂ ನನ್ನ ಪ್ರೀತಿ ವಿಶ್ವಾಸಗ-
ಳಿಗೆ ಒಳಗಾಗಲಿಲ್ಲ. ನನ್ನನ್ನು ಮಾತಾಡಿಸುತ್ತಿದ್ದ ಹೆಂಗಸರು ನನಗೆ

ಅನುಭವವೇ ಇಲ್ಲದ ಕೂಸುಗಳು ಅದೇನಾ ತಾಯ್ತನದ ವಿಷಯವಾಗಿ, ಮನೆಯಲ್ಲಿ ಕೆಲಸಗಾರರನ್ನು ಇಟ್ಟುಕೊಳ್ಳುವ ವಿಚಾರವಾಗಿ ಹರಟುತ್ತಾ, ಇದ್ದಾಗ ಅವರ ಮಾತುಗಳು ಜುಗುಪ್ಸೆ ಹುಟ್ಟಿಸುತ್ತಿತ್ತು. ನನಗೆ ಅಭಿರುಚಿಯಿದ್ದ ತತ್ವಶಾಸ್ತ್ರ, ರಾಜಕೀಯ, ವಿಜ್ಞಾನವೇ ಇತ್ಯಾದಿಗಳಲ್ಲಿ ಅವರು ಹೇಗೆ ಆಸಕ್ತಿಯಿಲ್ಲದವರಾಗಿದ್ದರೋ, ಅದೇ ರೀತಿ ನಾನು ಮನೆಯ ಕೆಲಸಗಾರ್ತಿಯನ್ನು ಕುರಿತು ಮತ್ತು ಅಡುಗೆಯವಳು ಬೆಣ್ಣೆಯನ್ನು ಚೆಲ್ಲಿ ಎಚ್ಚರವಿಲ್ಲದೇ ಇರಲು ಅದನ್ನು ತಿಕ್ಕಿಸಿದ ರೀತಿಯೇ ಮಾತಾಡುತ್ತಿರಲು ನಾನು ಸಂಕೋಚದಿಂದಲೂ ಬುದ್ಧಿಮಾಂದ್ಯತೆಯಿಂದಲೂ ಮನಸ್ಸಿನಲ್ಲಿ ಕಂಗೆಟ್ಟವಳಾಗಿಯೂ ಮಾರ್ಪಟ್ಟೆನು,

ಒಬ್ಬ ಎಳೆ ಹುಡುಗಿಯಲ್ಲಿ ಆಕರ್ಷಕವಾಗಿ ಕಾಣುವ ನನ್ನ ಕಾತರತೆಯು, ಆವೇಶಪೂರ್ಣ ಮತ್ತು ಉತ್ಸಾಹದ ಪ್ರವೃತ್ತಿಯು ಒಬ್ಬ ವಿವಾಹಿತ ಸ್ತ್ರೀಯಾಗಿ ಮೌನದಿಂದ ಜೀವನ ನಡೆಸುವ ಕ್ರಮಕ್ಕೆ ವ್ಯತಿರಿಕ್ತವಾಗಿತ್ತು, ನಾನು "ರೆವರೆಂಡ್" ಫ್ರಾಂಕ್ ಬೆಸೆಂಟ್ ಇವನಿಗೆ ಸತಿಯಾಗಿ ಹೇಳಲು ಅಸಾಧ್ಯವಾದಷ್ಟು ಪ್ರಮಾಣದಲ್ಲಿ ಅವನ ಮನೋವೇದನೆಗೆ ಕಾರಣವಾಗಿದ್ದಿರಬಹುದು, ನಿಜವಾಗಿ ಹೇಳುವುದಿದ್ದರೆ ನಾನು ಮದುವೆಯಾಗಲೇ ಬಾರದಿತ್ತು; ಏಕೆಂದರೆ ಕೋಮಲೆಯಾಗಿ ಒಲವು ನಲವು ನಮ್ರತೆಯಿಂದ ಕೂಡಿದ್ದ ಹುಡುಗಿಯು ಇತರರಿಗೆ ಹೇಗೋ ಹಾಗೆಯೇ ತನಗೂ ತಿಳಿಯದಂತೆ ಆ ದೃಢ ನಿರ್ಧಾರದ ಮನೋದ್ವೇಗವನ್ನು ಬಿಚ್ಚಿ ಹೇಳುವ ಮತ್ತು ಬೆಂಕಿಯಂತೆ ಸಿಡಿದು ಉಗ್ರಾವೇಶವನ್ನು ಪ್ರದರ್ಶಿಸುವ ಅವಳು ತನಗೆ ಸಮಗಟ್ಟಲಾರದ ಒಬ್ಬನನ್ನು ಕೂಡಿ ಗೃಹಿಣಿಯಾಗಿ ಮೌನದಿಂದ ಒಲೆಯ ಮುಂದೆ ಕುಳಿತಳು. ನನ್ನ ಕಳೆದುಹೋದ ದಿನಗಳನ್ನು ಕುರಿತು ನಾನು ಹಲವು ಬಾರಿ ಆಲೋಚಿಸಿದಾಗ ನಾನೇಕೆ ಅಷ್ಟು ಅವಿವೇಕತೆಯಿಂದ ಗೃಹಸ್ಥಾಶ್ರಮವನ್ನು ಅಂಗೀಕರಿಸಿದೆನೋ ಎಂದು ನಾನೇ ಪ್ರಶ್ನಿಸುತ್ತೇನೆ. ಹೇಗೂ ನನ್ನಲ್ಲಿ ಸ್ವಾಭಾವಿಕವಾಗಿದ್ದ ವಿಪರ್ಯಾಸಗಳೇ ನನ್ನನ್ನು ಅಂದಾತಪ್ಪದಾರಿಗೆ ಒಯ್ದುವೆಂದು ನಾನು ನನ್ನ ಆತ್ಮವಿವೇಚನೆಯಿಂದ ತಿಳಿಯುತ್ತೇನೆ, ನನ್ನಲ್ಲಿ ದೌರ್ಬಲ್ಯವೂ ಶಾಬಲ್ಯವೂ ವಿಲಕ್ಷಣ ರೀತಿಯಲ್ಲಿ ಮಿಶ್ರವಾಗಿದೆ, ನನ್ನ ಆ ದೌರ್ಬಲ್ಯಕ್ಕೆ ಸಿಲುಗಾಗಿ ನಾನು ಕಷ್ಟಪಟ್ಟಿದ್ದೇನೆ. ಮಗುವಾಗಿದ್ದಾಗ ನಾಚಿಕೆಗೊಳಗಾಗಿ ನರಳಿದ್ದೇನೆ. ನನ್ನ ಪಾದರಕ್ಷೆಯ ಕಟ್ಟು ಸಡಿಲವಾಗಿದ್ದರೆ ಎಲ್ಲರೂ ನನ್ನ ಕಡೆ ನೋಡುತ್ತಿರುವರೆಂಬ ಭ್ರಾಂತಿಯ ನಾಚಿಕೆಯಿಂದ ಕಂಗೆಡುತ್ತಿದ್ದೆನು, ಹುಡುಗಿಯಾಗಿದ್ದಾಗ ನಾನು ಯಾರಿಗೂ ಬೇಡವಾದ ಮತ್ತು ಯಾರೂ ಮೆಚ್ಚದಿದ್ದವಳಾಗಿದ್ದೆನೆಂದು ಊಹಿಸುತ್ತಾ ಜನರಿಂದ ತಲೆಮರೆಸಿಕೊಳ್ಳುತ್ತಿದ್ದೆನು, ಆದರೆ ಯಾರಾದರೂ ನನ್ನನ್ನು ಕರುಣೆಯಿಂದ ನೋಡಿದ್ದಾದರೆ ನಾನು ಬಹು ಕೃತಜ್ಞತೆ

ಯಿಂದ ಅವರನ್ನು ಕಾಣುತ್ತಿದ್ದೆನು, ನನ್ನ ಮನೆಯಲ್ಲಿ ಎಲ್ಲ ಯಜಮಾನಿಕೆಯಾಗಿದ್ದಾಗ ನಾನು ನನ್ನ ಪರಿಜನಕ್ಕೆ ಹೆದರುತ್ತಿದ್ದೆನು, ಯಾರಾದರೂ ಅಜಾಗರೂಕತೆಯಿಂದ ಕೆಲಸ ಮಾಡಿದರೆ ಅವರನ್ನು ಬೈಯ್ಯದೆ ಸುಮ್ಮನಿದ್ದುಬಿಡುತ್ತಿದ್ದೆನು, ವೇದಿಕೆಗಳಲ್ಲಿ ನಿಂತು ಸ್ವಾರಸ್ಯವಿಲ್ಲದೆ ಭಾಷಣ ಮಾಡುವ ಮೊದಲು ನನಗೆ ಬೇಕಾದ್ದನ್ನು ನಾನು ಇತರರಿಂದ ಹೋರಾಟದಿಂದ ತರಿಸಿಕೊಳ್ಳುವುದರ ಬದಲಾಗಿ ನಾನು ಸುಮ್ಮನಿದ್ದುಬಿಡುತ್ತಿದ್ದೆನು. ನಾನು ಎಳೆಯಂದಿನಿಂದ ನಂಬಿದ್ದನ್ನು ಕುರಿತು ನನ್ನ ಭಾಷಣಗಳಲ್ಲಿ ಉಗ್ರವಾಗಿ ಪ್ರತಿಪಾದಿಸುತ್ತಿದ್ದೆನು, ನನ್ನ ಸ್ವಂತ ವಿಚಾರಗಳಲ್ಲಿ ನಾನು ಹೇಡಿಯಂತೆ ಇತರರೊಡನೆ ಜಗಳ ಮಾಡದೆ, ಅವರ ಅಸಮ್ಮತಿಯನ್ನು ಸಹಿಸದೆ ಸುಮ್ಮನಿರುತ್ತಿದ್ದೆನಾದರೂ ಸಾರ್ವಜನಿಕ ವಿಷಯಗಳ ಬಗ್ಗೆ ಬಲವಾಗಿ ಕಾದುತ್ತಿದ್ದೆನು. ನಾನು ಮಾಡಬೇಕಾದ ಕರ್ತವ್ಯವನ್ನು ಮನ್ನಿಸಿ ನನ್ನ ನೌಕರರು ತಪ್ಪಿದಾಗ ಅವರನ್ನು ಬೈಯ್ಯುವುದು ಅದೆಷ್ಟೋ ಬಾರಿ ಕಲಿತು ನನ್ನ ಧೈರ್ಯವನ್ನು ಹರಿತಗೊಳಿಸಿದ್ದೇನೆ, ಚಿಕ್ಕ ಹುಡುಗನು ಅದೇ ತಪ್ಪುಗಳನ್ನು ಮಾಡಿದ ತಪ್ಪಿಗೆ ಅವರನ್ನು ಬೈಯ್ಯಲು ಅಂಜುತ್ತಿದ್ದ ನಾನು ಸಾರ್ವಜನಿಕ ವೇದಿಕೆಗಳಲ್ಲಿ ಉಗ್ರವಾಗಿ ಟೀಕಿಸುವ ನನ್ನ ಮೋಸದ ವರ್ತನೆಯನ್ನು ನೋಡಿ ನಾನಾಗಿಯೇ ನನ್ನನ್ನು ಎಷ್ಟೋ ಗೇಲಿಮಾಡಿಕೊಂಡಿದ್ದೇನೆ, ಇತರರ ನಿರ್ದಯೆಯಿಂದ ನೋಡಿದಾಗ ಬಡವನ ಹತ್ತಿರ ಅವರ ಬೆಪ್ಪನೊಳಕ್ಕೆ ಹುದುಗುವಂತೆ ಮನಸಾರೆ ಸಾಗುತ್ತಿದ್ದ ನಾನು ವೇದಿಕೆಗಳಲ್ಲಿ ವಿರೋಧಾಭಿಪ್ರಾಯವಿದ್ದಾಗ ತೀವ್ರವಾಗಿ ಪ್ರತಿಭಟಿಸುವವನಾಗುತ್ತಿದ್ದೆನು, ಇತರರ ಮನಸ್ಸನ್ನು ನೋಯಿಸಲು ಹೆದರಿ ನಾನು ಕೇವಲ ಬುದ್ಧಿಹೀನನಾಗಿ ಮಂದಮತಿಯ ಬಲೆಯೊಳಗೆ ಹೊಕ್ಕೆನು, ಪರಿಣಾಮವಾಗಿ ಹಿಂದಿನ ವರ್ಷ ಕಾಲ ಹೃದಯಾಂತರಾಳದಲ್ಲಿ ಮರುಗಿದೆನು. ಅದರೊಡನೆಯೇ ಬಾಳಿನ ಕಟುವಾದ ಅನ್ಯಾಯದಲ್ಲಿ ಉದ್ದಪ್ಪಟ್ಟು ಇನ್ನಷ್ಟು ನಿಷ್ಠುರ ಮನಸ್ಕನಾಗಿ ದೀಕ್ಷೆಯಾಗಿ ಬಾಳಿದೆನು, ಹಿಮದಿಂದಾವೃತವಾದ ತಗ್ಗಿನ ವಾತಾವರಣದಲ್ಲಿ ಸಾಗಿ ನನ್ನನ್ನು ಕೊಂದು ಹಾಕಿದಷ್ಟು ಮಾನಸಿಕ ಸಂಕಟದಲ್ಲಿ ಬಿದ್ದೆನು, ಕಡೆಗೆ ಕವಚದೊಳಗೆ ಅಡಗಿದ್ದ ಕತ್ತಿ ಗುರಾಣಿಗಳ ಹೊಡೆತಕ್ಕೆ ತಪ್ಪಿಸಿಕೊಂಡು ಕೆಲವೇ ಜನರ ಸಮೂಹದಲ್ಲಿ ಹೇಗೆ ಬಾಳಬೇಕು ಮತ್ತು ದುಡಿಯಬೇಕೆಂಬುದನ್ನು ನಾನು ಕಲಿತೆನು.

ನಾನು ವಿಚಾರಪೂರ್ಣವಾದ ಬರವಣಿಗೆಗೆ ೧೮೬೮ರಲ್ಲಿ ಮೊದಲ ಬಾರಿಗೆ ತೊಡಗಿದೆನು. ಆಗ ನಾನು ಎರಡು ಬಗೆಯ ಮನೋಧರ್ಮದ ನಿರೂಪಣೆಗೆ ಪ್ರಾರಂಭಿಸಿದ್ದೆನು. ಕೇವಲ ನಿರ್ಲಕ್ಷ್ಯ ವಿ

ಚಾರಗಳನ್ನು ಕುರಿತಾಗಿ ಚಿಕ್ಕ ಕತೆಗಳನ್ನು ಮತ್ತು The Lives of Black Letter Saints ಎಂಬೀ ಬಗೆಯ ಅಪ್ರಾಧಾನ್ಯವಾದ ಸಂತನಗಳನ್ನು ಬರೆದೆನು. ಕ್ರೈಸ್ತಸಂಘದ ಬಗ್ಗೆ ಪರಿಚಯವಿಲ್ಲದವರಿಗೆ Church of England ಸಂಸ್ಥೆಯವರ ತಾರೀಖುಪಟ್ಟಿಯಲ್ಲಿ ಹಲವು ಸಂತರ ಪವಿತ್ರ ದಿನಗಳು ಸೂಚಿತವಾಗಿವೆಯೆಂದು ತಿಳಿಸುವ ಆವಶ್ಯಕತೆಯಿದೆ. ಅಂಥ ದಿನಗಳನ್ನು ತಾರೀಖು ಪಟ್ಟಿಯಲ್ಲಿ ಕೆಂಪು ಶಾಯಿಯಿಂದ ಮುದ್ರಿಸಿದಾಗ ಅವು Red Letter Days ಎಂದು ಕರೆಯಲ್ಪಡುತ್ತವೆ. ಆ ದಿನಗಳಂದು ಗುಡಿಗಳಲ್ಲಿ ಸಭಾ ಪ್ರಾರ್ಥನೆಗೆ ಏರ್ಪಡಿಸುತ್ತಾರೆ. ಉಳಿದ ದಿನಗಳು ಕಪ್ಪು ಶಾಯಿಯಿಂದ ಬರೆಯಲ್ಪಟ್ಟು ಅವುಗಳಿಗೆ ಪ್ರಾಮುಖ್ಯತೆ ಕೊಡುವುದರ ಸಂಪ್ರದಾಯವಿಲ್ಲ. ಹೀಗೂ ಈ ಎಲ್ಲಾ ದಿನಕ್ಕೂ ಅನ್ವಯವಾಗುವ ಪ್ರತಿಯೊಬ್ಬ ಸಂತನನ್ನು ಕುರಿತು ಅವರನ್ನು ಕ್ರಿಸ್ತನ ಜೀವನ ಪರಿಚಯವನ್ನು ವ್ಯಕ್ತವಾಗಿ ಮಾಡಬೇಕೆಂಬ ಅಭಿಪ್ರಾಯದಿಂದ ನಾನು ಆ ಕೆಲಸಕ್ಕೆ ಇಳಿದೆನು. ಅವರ ವಿಷಯವಾಗಿ ವಿಚಾರ ಸಂಗ್ರಹಕ್ಕೆ ಹಲವು ಚಾರಿತ್ರಿಕ ಮತ್ತು ಪೌರಾಣಿಕ ಪುಸ್ತಕಗಳನ್ನು ಕೂಡಿಟ್ಟೆನು. ಕಡೆಗೆ ಆ ಅಮೂಲ್ಯ ಬರೆವಣಿಗೆಯು ಏನಾಯಿತೋ ಏನೋ-ತಿಳಿಯದು. ನಾನು ಅದನ್ನು ಮೆಕ್ಮಿಲ್ಲನ್ ಪ್ರಕಟಣಾ ಸಂಸ್ಥೆಯ ಮೂಲಕ ಮುದ್ರಿಸಿ ಹೊರತರಲು ಪ್ರಯತ್ನಿಸಿದೆನು. ಅವರು ಅದನ್ನು ಚಿಕ್ಕವರಿಗಾಗಿ ಪ್ರಕಟಿಸುವ Church Books ಮಾಲೆಯ ಮುದ್ರಕರಿಗೆ ಕಳುಹಿಸಿದರು. ಅದರನಂತರ ಒಂದು ಕ್ರೈಸ್ತ ಸಂಸ್ಥೆಯು ನಾನು ಅದನ್ನು ಧರ್ಮಾರ್ಥವಾಗಿ ಅವರಿಗೆ ಒಪ್ಪಿಸಿದರೆ ಅವರೇ ಅದನ್ನು ಪ್ರಕಟಿಸುತ್ತೇವೆ, ಎಂಬುದಾಗಿ ಒಂದು ಪತ್ರವನ್ನು ಬರೆದರು. ಆ ಮೇಲೆ ಆ ಹಸ್ತಪ್ರತಿಯ ಹಣೆಬರಹವು ಏನಾಯಿತೋ ತಿಳಿಯೆನು.

ನಾನು ಬರೆದ ಚಿಕ್ಕ ಕಥೆಗಳು ಬಹು ಭಾಗ್ಯಶಾಲಿಯಾಗಿದ್ದುವು. ಅವುಗಳಲ್ಲಿ ಮೊದಲನೇದನ್ನು ನಾನು Family Herald ಇದಕ್ಕೆ ಕಳುಹಿಸಿದೆನು. ಕೆಲವು ದಿನಗಳಲ್ಲಿ ನನಗೆ ಒಂದು ಪತ್ರವು ಬಂತು. ಅದನ್ನು ತೆರೆದೊಡನೆಯೆ ಅದರೊಳಗಿಂದ ಒಂದು ಚೆಕ್ಕು ಹೊರಬಿತ್ತು. ಹಾ ದೈವವೇ! ಅಲ್ಲಿಂದನಂತರ ನಾನು ನನ್ನ ಲೇಖನಿಯ ಮೂಲಕ ಸಾಕಷ್ಟು ಹಣವನ್ನು ಸಂಪಾದಿಸಿದ್ದೇನೆ. ಆದರೆ ಮೊಟ್ಟಮೊದಲಾಗಿ ದೊರಕಿದ ಆ ಮೂವತ್ತು ಶಿಲ್ಲಿಂಗುಗಳು ನನಗೆ ಕೊಟ್ಟಷ್ಟು ಸಂತೋಷವು ಬೇರಾವ ಹಣವೂ ಕೊಡಲಿಲ್ಲ. ನಾನು ಮೊದಲ ಬಾರಿಗೆ ಸಂಪಾದಿಸಿದ ಹಣ ಅದಾಗಿದೆ. ನಾನು ಅದನ್ನು ಅರ್ಜಿಸಿದ ಹೆಮ್ಮೆಯು ನಾನೊಬ್ಬ ಲೇಖಕಿಯೆಂಬ ಹೆಮ್ಮೆಯನ್ನು ಹೆಚ್ಚಿಸಿತು. ನನ್ನ ಅಂದಿನ ಆ ಬಾಲ್ಯದ ಸಂತೋಷ ಮತ್ತು ಕಾರ್ಯತಃ ಸಾಧಿಸಿದ ದೈವಿಕ ಮನೋಭಾವದಿಂದ ನನಗೆ ಆ ಹಣ

ಏನನ್ನು ದೊರಕಿಸಿಕೊಟ್ಟ ದೇವರಿಗೆ ಮೊಣಕಾಲೂರಿ ವಂದಿಸಿದೆನು. ಇಲ್ಲಿದೆ ನಾನು ಇನ್ನೂ ಹಲವು ಚಿನ್ನದ ನಾಣ್ಯಗಳನ್ನು ಸಂಪಾದಿಸಿ ನನ್ನ ಭಂಡಾರವನ್ನು ನಾನೇ ಸಲಹುವೆನೆಂದು ಊಹಿಸಿಕೊಂಡೆನು. ಇದು ನನ್ನ ಸ್ವಂತ ಹಣ ಎಂದು ನಾನು ಊಹಿಸಿದೆನಲ್ಲದೆ ಇದರೊಡನೆಯೇ ಒಂದು ಸ್ವತಂತ್ರ ಮನೋಭಾವವೂ ನನ್ನಲ್ಲಿ ಸಂತೋಷದಿಂದ ಉಕ್ಕಿ ಬಂದಿತು. ಆಂಗ್ಲ ಕಾನೂನಿನ ಸೌಲಭ್ಯವನ್ನೂ ಅವಿವಾಹಿತ ಸ್ತ್ರೀಗೆ ಇದು ಇತ್ತ ಉಚ್ಚಸ್ಥಾನವನ್ನೂ ಕುರಿತಾಗಿ ಆವರೆಗೆ ನಾನು ತಿಳಿದಿರಲಿಲ್ಲ. ವಿವಾಹವಾದ ಸ್ತ್ರೀಯು ಕಾನೂನು ಬದ್ಧವಾಗಿ ಸಂಪಾದಿಸಿದೆಲ್ಲಾ ಅವಳ ಪತಿಗೆ ಸೇರಿದ್ದೆಂದೂ ಅವಳು ಸ್ವತಂತ್ರವಾಗಿ ಏನೂ ಇಟ್ಟುಕೊಳ್ಳಲಾಗದೆಂದೂ ಇದ್ದ ನಿಯಮವು ನನಗೆ ಅರ್ಥವಾಗಲಿಲ್ಲ. *

ನನಗಂತೂ ಹಣವು ಆಗ ಬೇಕಾಗಿರಲಿಲ್ಲ. ಇತರರಿಗೆ ಕೊಡಲಿಕ್ಕೆ ನಾನು ಏನಾದರೂ ಸ್ವಂತವಾಗಿ ಇಟ್ಟುಕೊಳ್ಳುತ್ತೇನೆಂಬುದರ ಬಗ್ಗೆ ನಾನು ಸಂತೋಷಪಡುತ್ತಿದ್ದೆನಾದರೂ ಹಾಗೆ ನಾನು ಇಟ್ಟುಕೊಳ್ಳುವಂತಿದ್ದು ಸಹ ನನ್ನ ಸ್ವಂತವಲ್ಲವೆಂದು ತಿಳಿದಾಗ ನಿಜವಾಗಿಯೂ ನನಗೆ ದಂಗು ಬಡಿದಂತಾಯಿತು.

ಅಲ್ಲಿಂದ ಮೊದಲ್ಗೊಂಡು ನಾನು ಅದೇ ಪತ್ರಿಕೆಗೆ ಕಳುಹಿಸಲ್ಪಟ್ಟ ಕಥೆಗಳ ಮೂಲಕವಾಗಿ ಕೆಲವು ಪೌಂಡುಗಳನ್ನು ಸಂಪಾದಿಸುತ್ತಲೇ ಇದ್ದೆನು. ಇಂದಿನ ಬಡ ಲೇಖಕರಿಗೆ ಆ Family Herald ಪತ್ರಿಕೆಯು ಅತಿ ಪ್ರಿಯವಾಗಿ ಕಾಣಿಸಿಕೊಂಡಿತ್ತೆಂದು ಹೇಳಲು ಇಚ್ಛಿಸುತ್ತೇನೆ. ಒಂದು ಲೇಖನವನ್ನು ಅವರು ಸ್ವೀಕರಿಸಿದ ಮೇಲೆ ಅದನ್ನು ಬೇಗನೆ ಮುದ್ರಿಸುವರೋ ಇಲ್ಲವೋ, ಲೇಖಕರಿಗೆ ಅದರ ಬಾಬ್ತು ಹಣವನ್ನು ಆ ಪತ್ರಿಕೆಯು ಬೇಗನೆ ಕೊಡುತ್ತದೆ. ಅದರಂತೆ ನನ್ನ ಮೊದಲ ಲೇಖನವು ನನಗೆ ಚೆಕ್ಕನ್ನು ಕಳುಹಿಸಿದನಂತರ ಕೆಲವು ವಾರಗಳ ವರೆಗೂ ಪ್ರಕಟವಾಗಿರಲಿಲ್ಲ. ಇತರರ ವಿಚಾರದಲ್ಲೂ ಆ ಪತ್ರಿಕೆಯು ಅದೇ ರೀತಿಯಾಗಿ ವ್ಯವಹರಿಸುತ್ತಿತ್ತು. ಈ ಚಿಕ್ಕ ಗೆಲುವಿಂದ ಪ್ರೋತ್ಸಾಹಗೊಂಡು ನಾನು ಒಂದು ಕಾದಂಬರಿಯನ್ನು ಬರೆಯಲು ಆರಂಭಿಸಿದೆನು. ಅದು ಬಹು ಕಾಲ ತೆಗೆದುಕೊಂಡರೂ ಅದನ್ನು ಕಡೆಗಂತೂ ಮುಗಿಸಿ Family Herald ಇದಕ್ಕೆ ಕಳುಹಿಸಿದೆನು. ಆದರೆ ಆ ನನ್ನ ಅಲ್ಪ ಪ್ರಯತ್ನವು ಒಂದು ಪತ್ರದೊಡನೆ ಹಿಂದಕ್ಕೆ ಬಂದಿತು. ಆ ನನ್ನ ಬರಹವು ತುಂಬಾ ರಾಜಕೀಯವಾಗಿದೆಯೆಂದೂ ಅವರ ಪತ್ರಿಕೆಗೆ ಅದು ಅಸಂಗತವೆಂದೂ, ಆದರೆ ಅದೇ ರೀತಿ ಶುದ್ಧ ಸಾಮಾಜಿಕ ಕಾದಂಬರಿಯನ್ನು ಬರೆದರೆ ಅದನ್ನು

---

* ಈ ಅನಿಷ್ಟ ಕಾನೂನು ಅನಂತರ ಬದಲಾವಣೆಯಾಯಿತಲ್ಲದೆ, ವಿವಾಹಿತ ಸ್ತ್ರೀಯು ಓರ್ವ ನಾಗರಿಕಳೆಂದೂ ಅವಳೋರ್ವ ಚರ-ಸೊತ್ತುವುಳ್ಳವಳೆಂದೂ ವಿಧಿಸಲಾಯಿತು.

ಸ್ವೀಕರಿಸುವೆವು, ಎಂದೂ ಬರೆದಿದ್ದರು. ಆದರೆ ಅಕ್ಷರಶಃ ನಾನು ತಾತ್ವಿಕ ವಿಚಾರಗಳಲ್ಲಿ ನಿಗೂಢವಾದ ಸಂದೇಹಗಳಿಗೊಳಗಾಗಿದ್ದುದರಿಂದ ಸಾಮಾಜಿಕ ಕಾದಂಬರಿಯನ್ನು ಬರೆಯಲು ನನಗೆ ಅವಕಾಶವೇ ಇಲ್ಲದಾಯಿತು.

ನನ್ನ ದೇಶದ ಸಾಹಿತ್ಯಕ್ಕೆ ತತ್ವಜ್ಞಾನ ಸಂಬಂಧವಾದ ಒಂದು ಕಿರುಹೊತ್ತಗೆಯನ್ನು ಅರ್ಪಿಸಿದೆನು. ಅದರ ಶಿರೋನಾಮವು ಈಗ ನನಗೆ ಮರೆತುಹೋಗಿದೆ. ಉಪವಾಸವನ್ನು ಕೈಗೊಳ್ಳುವವನು ಎಲ್ಲಾ ನಿಷ್ಠಾವಂತ ಕ್ರೈಸ್ತರ ಮೇಲೆ ತೋರಿಸತಕ್ಕ ಕರ್ತವ್ಯವನ್ನು ಕುರಿತು ಪ್ರತಿಪಾದಿಸಲಾದ ಆ ಕೃತಿಯು ಭಾವದಲ್ಲಿ ಒಂದೇ ಪಕ್ಷವನ್ನು ಸಮರ್ಥಿಸುವಂತೆ ಇತ್ತು.

ಜನವರಿ 1869 ರಲ್ಲಿ ನನ್ನ ಪುಟ್ಟ ಮಗನು ಹುಟ್ಟಿದನು. ಅದಕ್ಕೆ ಮುಂಚೆ ನಾನು ತುಂಬಾ ಅಸ್ವಸ್ಥಳಾಗಿದ್ದೆನು. ಇದೀಗ ಈ ಚಿಕ್ಕ ಕೂಸಿನೊಡನೆ ನನ್ನ ಸಮಯವೆಲ್ಲ ವಿನಿಯೋಗವಾಯಿತು. ಹಾಗಾಗಿ ನಾನು ಕಾಗದ ಮತ್ತು ಲೇಖನಿಯೊಡನೆಗೂಡಿ ಸಾಹಿತ್ಯ ಕಾರ್ಯಕಲಾಪಗಳಲ್ಲಿ ನಿರತಳಾಗುವುದು ಕೆಲಕಾಲ ನಿಂತಿತು. ಮಗುವು ನನ್ನ ಜೀವಕ್ಕೆ ಒಂದು ಹೊಸ ಹುಮ್ಮಸ್ಸನ್ನು ಮತ್ತು ಆನಂದವನ್ನೀಯಿತು. ಒಂದು ದಾದಿಯನ್ನು ನೇಮಿಸಲು ನಮಗೆ ಅಸಾಧ್ಯವಾಗಿದ್ದುದರಿಂದ ಈ ಪುಟ್ಟ "ವೀರ"ನ ಸಲುವಾಗಿ ನಾನಾಗಿ ಎಷ್ಟೋ ಹೆಚ್ಚು ದುಡಿಯಬೇಕಾಗಿತ್ತು. ಮಗುವಿನ ತೊಟ್ಟಿಲು ಬಳಿ ಓದುತ್ತಾ ಕುಳಿತಾಗ ನನ್ನ ದೇಹಶಕ್ತಿಯು ಉತ್ತೇಜಿಸಿ ಸಂತೃಪ್ತವಾದಂತಿರುತ್ತಿತ್ತು. ಅಲ್ಲದೆ ಈ ಕೂಸುವಿನ ಬರುವಿಕೆಯು ನಾನು ನನ್ನ ಮಾತೆಯನ್ನು ಕಳೆದುಕೊಂಡ ದುಃಖವನ್ನು ಶಮನಗೊಳಿಸಿದಂತಾಯಿತು.

ನನ್ನ ಮಗ ಡಿಗ್ಬಿ ಬಿಸೆಂಟ್ ಇವನು ಜನಿಸಿದ ನಂತರದ ಎರಡು ವರ್ಷಗಳ ಕಾಲದ ವಿಚಾರವಾಗಿ ಸೂಕ್ಷ್ಮದಲ್ಲಿ ಹೇಳಿ ಮುಗಿಸುತ್ತೇನೆ. 1870 ರ ಆಗಸ್ಟಿನಲ್ಲಿ ನನ್ನ ಮಗನ ಸಹೋದರಿಯು ಜನನವಾಯಿತು. ನನ್ನ ದೇಹಾರೋಗ್ಯವು ಚೆನ್ನಾಗಿಲ್ಲದ್ದರಿಂದ ನಾನು ನಿಧಾನವಾಗಿ ಮತ್ತು ಅಸಹನೀಯವಾಗಿ ಕಷ್ಟದಿಂದ ಚೇತರಿಸಿಕೊಳ್ಳಬೇಕಾಯಿತು.

ನನ್ನ ಮಗ ಡಿಗ್ಬಿಯು ಚುರುಕು ಮರಿಯಾಗಿ ಆರೋಗ್ಯದಲ್ಲಿದ್ದಾಗ ನನ್ನ ಪುಟ್ಟ ಮಗಳಾದರೋ ತಾಯಿಯ ಮನೋದ್ವೇಗದ ನಿಮಿತ್ತವಾಗಿ ಅವಧಿಗೆ ಮುಂಚೆಯೇ ಬಹು ಕೃಶವಾದ ದೇಹದಿಂದ ಹುಟ್ಟಿದಳು. 1871 ರ ವಸಂತ ಕಾಲದಲ್ಲಿ ಇಬ್ಬರು ಮಕ್ಕಳೂ ನಾಯಿಕೆಮ್ಮಿಲು (Whooping cough) ಇದಕ್ಕೆ ಒಳಗಾದರು. ಪರಿಣಾಮವಾಗಿ ಮಗಳು ಮೇಬಲ್ (Mable) ಇವಳ ನಿತ್ರಾಣ ಜೀವಕ್ಕೆ ಅದು ಇನ್ನಷ್ಟು ಬಾಧಕ

ಕರವಾಗಿ ತೋರಿತು. ಅವಳು ಅಂಥ ಸರಳಿಕೆಗೊಳಗಾಗಲು ಇನ್ನೂ ಚಿಕ್ಕ
ವಳಾಗಿದ್ದಳು. ಕೆಲವು ದಿನಗಳಲ್ಲಿ ಅವಳು ಗಂಟಲು ರೋಗಕ್ಕೂ ಆದರನಂ
ತರ ಅವಳ ಶ್ವಾಸಕೋಶಗಳ ರಕ್ತವೇರುವಿಕೆಗೂ ಒಳಗಾದಳು. ಹಲವು
ವಾರಗಳವರೆಗೂ ಅವಳು ಪ್ರತಿ ಗಂಟೆಗೂ ಸಾವಿನ ಸನಿಹದಲ್ಲಿಯೇ
ಇದ್ದಳು. ಅವಳನ್ನು ಬೆಚ್ಚಗಿರಿಸಲು ಬೆಂಕಿಯ ಸುತ್ತ ಪರದೆಯನ್ನು
ಕಟ್ಟಿ ಅವಳ ಉಸಿರಾಟಕ್ಕೆ ಅನುಕೂಲಿಸುವಂತೆ ಏರ್ಪಡಿಸಿದ್ದೆವು. ಅಲ್ಲಿ
ನಾನು ಹಗಲಿರುಳು ಆ ಬೇಸರಕ್ಕೀಡಾದ ದಿನಗಳಲ್ಲಿ ನರಳುತ್ತಿದ್ದ ಮಗು
ವನ್ನು ನನ್ನ ಮೊಣಕಾಲುಗಳಲ್ಲಿರಿಸಿ ಕಾಯುತ್ತಿದ್ದೆನು. ನನ್ನ ಇಬ್ಬರೂ ಶಿಶುಗಳ
ನ್ನು ನಾನು ವಿಶೇಷ ಪ್ರೀತಿಸಿದ್ದೆನು. ಅವರ ಅತಿ ಕೋಮಲವಾದ ಪ್ರೀತಿಯು
ನನ್ನ ನೊಂದ ಹೃದಯವನ್ನು ತಣಿಸಿತು. ಅವರ ಆ ಪುಟ್ಟ ಕಾಲ್ಗಳು
ತಿಂಗಳುಗಳಲ್ಲಿ ನನ್ನಲ್ಲಿ ಉಂಟಾದ ಆ ದುಃಖವನ್ನು ಪರಾಮರ್ಶಿಸಿ ನೋಡ
ಲಿಕ್ಕೆ ಶಕ್ಯವಾಗಿರಲಿಲ್ಲ. ಆಗ ಆ ಹಬೆ ತುಂಬಿದ ಚಿಕ್ಕ ಡೇರೆ ಮಾತ್ರ
ನನ್ನ ಲೋಕವಾಗಿತ್ತು. ಅಲ್ಲಿ ನಾನು ಏಕಾಂಗಿಯಾಗಿ ನನ್ನ ಮಗುವಿಗಾಗಿ
ಸಾವಿನೊಡನೆ ಹೋರಾಡಿದೆನು. ಮಗುವು ಗುಣಮುಖವಾಗುವ ಸಂಭವ
ವಿಲ್ಲವೆಂದೂ ಇನ್ನೊಂದು ಬಾರಿ ಕೆಮ್ಮಲು ಬಂದಾಗ ಅದರಿಂದ ದಣಿದು
ಅದು ಸಾಯುವುದೆಂದೂ ವೈದ್ಯನು ಹೇಳಿದನು. ಅದಕ್ಕಿಂತಲೂ ಘೋರ
ದಾರುಣವಾದ ವಿಚಾರವೆಂದರೆ ಮಗುವಿನ ಗಂಟಲು ಕಟ್ಟಿ ಬಂದಿರಲು
ಹನಿ ಹಾಲನ್ನು ಸಹ ಕುಡಿಯುತ್ತಿಲ್ಲದೆ ಆ ನೋವು ಸಾಯುತಿರುವ
ಮಗುವಿಗೆ ಇನ್ನಷ್ಟು ಕ್ರೂರವಾಗಿ ತೋರ್ಪಡಿಸಿಕೊಂಡಿತು. ಕಡೆಗೆ ಒಂದು
ದಿನ ಬೆಳಿಗ್ಗೆ ಆ ಮಗುವು ಆ ದಿನಾಂತ್ಯದೊಳಗಾಗಿ ಅಗಲುವುದೆಂದು
ವೈದ್ಯನು ಹೇಳಿದನು. ಮಗುವಿನ ದೇಹವು ಪಾರ್ಶ್ವ ನೋವಿನ
ತುತ್ತು ಒಂದರಿಂದ ಊದಿದ್ದುದರಿಂದ ಎದೆಯ ನರಿಯ ಮೂಲಕ ಉಸಿ
ರು ಹೋಗುತ್ತಿದ್ದ ಕಾರಣದಿಂದ ನಾನು ಬಹು ಉದ್ವೇಗದಿಂದ ಅವನನ್ನು
ಕರೆಸಿದೆನು. ಅವನಿದ್ದಾಗಲೇ ಮಗುವಿನ ಕೆಮ್ಮಲು ಆರಂಭವಾಯಿತು.
ನಾನು ಅದೇ ಕಡೆಯ ಕೆಮ್ಮೆಂದು ಭಾವಿಸಿದ್ದೆನು. ವೈದ್ಯನು ತನ್ನ
ಜೇಬಿನಿಂದ ಮೈಮರೆಸುವ ವಾಯು (Chloroform)ವಿನ ಒಂದು ಚಿಕ್ಕ
ಕುಪ್ಪಿಯನ್ನು ತೆಗೆದನು. ಅದರಿಂದ ಒಂದಿಷ್ಟು ಒಂದು ಚೂರು ಬಟ್ಟೆಗೆ
ಸುರಿದು ಅದನ್ನು ಮಗುವಿನ ಅಸ್ವಸ್ಥತೆಯನ್ನು ತಡೆಗಟ್ಟುವುದೆಂದೂ
ಬೇರೇನೂ ಹಾನಿಯನ್ನುಂಟುಮಾಡದೆಂದೂ ಅವನು ಹೇಳಿದನು. ನಾನಿನ್ನು
ಆ ಮಗುವನ್ನು ಪುನಃ ನೋಡಲಾರೆನೆಂದೂ ಕಳವಳದಿಂದ ಹೇಳುತ್ತಾ ಅ
ಲ್ಲಿಂದ ಹೊರಟು ಹೋದನು. ನನ್ನ ವೈವಾಹಿಕ ಜೀವನದಲ್ಲಿ ನನಗಿದ್ದ ಸುವರ್ಣ
ದಯಾಳು ಮಿತ್ರನೆಂದರೆ ಆ ವೈದ್ಯ Dr. Lauriston Winterbotham
ಇವನು. ಆ ಕಾಲೀನ ವೃತ್ತಿಗೆ ಸೇರಿದ್ದ ಹಲವರಂತೆ ಈ ವಿಂಟರ್‌ಬೊತಮ್
ಇವನು ಎಷ್ಟು ಒಳ್ಳೆಯವನೋ ಅಷ್ಟೇ ಚತುರನೂ ಆಗಿದ್ದ. ಅವನಲ್ಲಿ ವಿವೇಚ
ನಾಬುದ್ಧಿ ಮತ್ತು ಮಾನ ಇವೆರಡೂ ಕೂಡಿದ್ದುವು. ನಾವು ದಂಪತಿಗಳು ಬೋರ್ನ

ಹತ್ತಿಂದು 1978ರಲ್ಲಿ ಕರಾರು ಪತ್ರವನ್ನು ಬರೆದಾಗ ಅವನು ನನ್ನ ಮಾನ
ಸಿಕ ಗೊಂದಲವನ್ನು ಕುರಿತಾಗಿ ಸಾಕ್ಷ್ಯ ಹೇಳಲು ನಾವಿದ್ದ ಪಕ್ಷಕ್ಕೆ ಬಂದು
ನನಗೆ ಆ ದಾಂಪತ್ಯ ವಿಚ್ಛೇದನವನ್ನು ದೊರಕಿಸಿಕೊಡುವ ವರೆಗೂ ಆ
ವರೆಗೆ ನಾನು ಅನುಭವಿಸಿದ್ದ ವ್ಯಸನಕರ ಪರಿಸ್ಥಿತಿಯನ್ನು ಕುರಿತಾಗಿ
ಒಂದು ಮಾತನ್ನಾದರೂ ಅವನು ಯಾರೊಡನೆಯೂ ಹೇಳಿದ್ದಿಲ್ಲ.

ನನ್ನ ಮಗಳು ಮೇಬಲ್ ಹೀಗೂ ಬದುಕಿಕೊಂಡಳು, ಡಾ. ವಿಂಟ
ರ್‌ಬಾಟಮ್‌ನ ಸಮಯೋಚಿತ ಚಿಕಿತ್ಸೆಯಿಂದ ಅವಳು ಗುಣಮುಖ
ಳಾದಳೆಂದು ನಾನು ಭಾವಿಸುತ್ತೇನೆ, ಏಕೆಂದರೆ ಎಂದಾದರೂ ಕೆಮ್ಮಲು
ಇರುವ ಚಿಹ್ನೆಯು ತೋರಿಬಂದಾಗ ಅದನ್ನು ಉಪಯೋಗಿಸುತ್ತಾ ಇದ್ದ
ಮಗುವಿಗೆ ಆ ಬಾಧೆಯು ಪುನಃ ತಟ್ಟದಂತೆ ನೋಡಿಕೊಳ್ಳುತ್ತಿದ್ದೆನು, ಹ
ಲವು ಬಾರಿ ಉಸಿರುಕಟ್ಟಿ ಬಹುಮಟ್ಟಿಗೆ ದನಿಯು ಗಂಟಲು ವರೆಗೂ ಏ
ರಿ ಬಹು ಕಷ್ಟದಿಂದ ಗ್ಲಾನಿಸಪ್ಪ ಬಿಡುತ್ತಿದ್ದಾಗ ಮಗುವು ಇನ್ನು ಕ್ಷಣ
ಮಾತ್ರದಲ್ಲಿಯೇ ಕಣ್ಮರೆಯಾಗುವುದೆಂದು ಭಾವಿಸುತ್ತಿದ್ದೆನು, ಕೆಲವು
ವರ್ಷಗಳ ಕಾಲ ಹೀಗೆಯೇ ನರಳುತ್ತ ಕೃಶದೇಹಿಯಾದ ಮಗುವಿಗೆ
ನಲವಿನ ಶೋಷಣೆಯನ್ನೀಯುವ ಅವಶ್ಯಕತೆಯಿತ್ತು. ಅಂದಿನ
ದಿನಗಳ ಮನೋವೇದನೆಯು ಮಗುವಿಗಿಂತ ಅದರ ತಾಯಿಯಲ್ಲಿ
ವಿಶೇಷವಾಗಿ ತೋರ್ಪಟ್ಟು ಅವಳು ಕಂಗಾಲಾಗಿದ್ದಳು, ಮಗು
ವು ಎಂದು ಆರೋಗ್ಯವನ್ನು ಹೊಂದಿದಳೋ ಅಂದಿನಿಂದ ನಾನು
ಶರೀರಕ್ಕೆ ಸುಖವಿಲ್ಲದೆ ಮಲಗಿದೆನು, ಹಲವು ದಿನಗಳವರೆಗೂ
ನಾನು ವಳಿದೆ ಹಾಸಿಗೆ ಹಿಡಿದೆನು, ಆನಂತರ ಎರಡು ಮೂರು
ವರ್ಷ ಎರಡು ತಿಂಗಳ ಕಾಲ ಒಂದು ಹೋರಾಟವನ್ನು ನಡೆಸಿದೆ
ನು. ನನ್ನ ಜೀವವನ್ನೇ ಪಣಕ್ಕೊಟ್ಟು ನಡೆಸಿದ ಆ ಹೋರಾಟವು
ನನ್ನನ್ನು ಕ್ರೈಸ್ತಸಂಘದಿಂದ ಬಹಿಷ್ಕಾರಿಸಲು ನನ್ನನ್ನಾಗಿ ಪರಿವರ್ತಿ
ಸಿತು. ಮೊದಲ ಹತ್ತೊಂಬತ್ತು ತಿಂಗಳು ಆ ನರಕ ಸದೃಶ
ವಾದ ಅವಧಿಯು ಬಹು ದುಃಖದಾಯಕವಾದುದಾಗಿದ್ದು ಅದ
ನ್ನು ಇಂದು ಆಲೋಚಿಸಿದಾಗ ಸಿರಕೋಚಿಸುತ್ತಿದ್ದೇನೆ,
ಹೃತ್ಪೂರ್ವಕವಾದ ಧರ್ಮಶಕ್ತಿಯಿಂದ ಕೂಡಿದ್ದರೆ ಸಂದೇಹ
ಪ್ರಾಚೆಯ ಬಾಧೆಯು ತಪ್ಪಿದಾಗ ಆಗುವ ಮನೋದ್ವೇಗವು
ಅದನ್ನು ಅನುಭವಿಸಿದವರಿಗೆ ಮಾತ್ರ ಗೊತ್ತು. ಆ ನೋವಿಗೆ
ಸಮಾನವಾಗಿ ಅತ್ಯಂತ ಉಗ್ರವಾಗಿ, ಬಾಧಕರವಾಗಿ ಮತ್ತು
ಚಿಂತೆಯ ಭಾರದಿಂದ ದೇಹವೇ ಕುಸಿಯುವಂತಾಗಿದ್ದುದು
ಜೀವನದಲ್ಲಿ ಬೇರಾವುದೂ ಇರಲಿಲ್ಲ. ಅಂತಹ ಪರಿಸ್ಥಿತಿಯು
ಒಂದು ಹುಡುಗಿ ಮಹಿಳೆಗೆ ಸರ್ವವೂ ಮುಳುಗಿಹೋದಂತಾಗಿ
ಬದುಕಿನ ಸುಖ ಸಂತೋಷಗಳು ಚೆಲ್ಲಿರುವುದನ್ನು ಯಾವ ಚಂದ
ಮಾರುತವೂ ಮರೆಮಾಡದಂತೆ ನಾಶಪಡಿಸಿ ಇದೇ ಬಾಳ್ವೆಯನ್ನು

ಮನೋದ್ವೇಗದ ಭ್ರಾಂತಿಯಲ್ಲಿ ಉದ್ವಿಗ್ನತೆ ಉಂಟಾಗಿತ್ತು. ಗಂಭೀರವಾದ ಜ್ಞಾನಾನ್ವೇಷಣೆ ಮತ್ತು ನೈತಿಕ ವಾಙ್ಮಯದ ಉದಾತ್ತತೆಯು ಸಂದೇಹಗ್ರಸ್ತವಾದ ಪಾರಮಾರ್ಥಿಕ ವಿಚಾರದತ್ತ ಒಲಿಸಿದ್ದುದಲ್ಲದೆ ಬೇರಾವುದೂ ಇಲ್ಲ; ಏಕೆಂದರೆ ಉದಯ ಬಂದರೂ ಭೂಕಂಪವಾದಂತೆ ಕತ್ತಲ ಅಂತರಾಳವನ್ನು ಕದಡಿ ಕಡೆಗೆ ಇಡೀ ಅಸ್ತಿತ್ವವನ್ನೇ ಆ ಭಯಾವೇಶವು ಅಲುಗಾಡಿಸುತ್ತದೆ, ಬರಿದಾದ ನಭಾಂಗಣದಲ್ಲಿ ಜೀವವೇನೂ ಇಲ್ಲ; ಅಂಧಾಕಾರದ ಕಪ್ಪಿನಲ್ಲಿ ಪ್ರಕಾಶವಿಲ್ಲ; ಮೌನವನ್ನು ಭೇದಿಸಲು ಧ್ವನಿಯೂ ಇಲ್ಲ; ದಲಿತರ ರಕ್ಷಣೆಗೆ ಚಾಚಿದ ಕೈಗಳಿಲ್ಲ; ಆಗಿಂದಾಗ್ಗೆ ರೂಢಿಗೆ ಬಂದುದನ್ನು ಅನುಸರಿಸುವಂತೆ ಮನಸ್ಸಿಗೆ ಹೊಳೆದ ಮತಧರ್ಮವನ್ನು ಅವಲಂಬಿಸುವ ಮತ್ತು ಆಲೋಚಿಸಲಿಕ್ಕೆ ಪ್ರಯತ್ನಿಸದಿರುವ ಅಲ್ಪಮನಸ್ಕರು ನಾಸ್ತಿಕತೆಯು ಅಕ್ರಮ ಹಾಗೂ ಅನೈತಿಕ ಜೀವನದಿಂದುಬ್ಬಿದ್ದೆಂದು ಹೇಳುತ್ತಾರೆ. ಅವರ ಶ್ರೇಷ್ಠ ಹೃದಯದಲ್ಲಿ ಮತ್ತು ಅದಕ್ಕಿಂತಲೂ ಶ್ರೇಷ್ಠವಾದ ಮಾನಸಿಕ ಕಲ್ಪನೆಯಲ್ಲಿ ಧರ್ಮಾಭಿಮಾನದ ತೇಜೋಹೀನತೆಯು ಕತ್ತಲನ್ನು ಸೀಳಿ ಹೊರಗೆ ಬಂದು ಪ್ರಯಾಣಿಸುವುದನ್ನು ಅವರು ಊಹಿಸಿ ತಿಳಿಯಲು ಅಸಮರ್ಥರಾದರು. ಗಾಢಾಂಧಕಾರದ ಪಯಣದಲ್ಲಿ ಅನಿಷ್ಟವಾದ ಕತ್ತಲು ಅನಂತವಾದ ಶೂನ್ಯತೆಯ ಕಡೆಗೆ "ಲೋಕವನ್ನು ದೇವನು ನಿರ್ಮಿಸಿತೇ?" ಎಂದು ಕೇಳುತ್ತದೆ, "ಮಕ್ಕಳೇ, ನಿಮಗೆ ತಂದೆಯಿಲ್ಲ," ಎಂಬ ಪ್ರತಿಧ್ವನಿಯು ನಿಜವಾದುದೇ? ಎಲ್ಲವೂ ಕುರುಡು ನಿಸ್ಸೀಮ ಕತ್ತಲೆ? ಎಲ್ಲವೂ ತಮಗಿರುವಂತೆಯೇ ಬಿಂಬಿಸುವ ಮೌನ ನಕ್ಷತ್ರಗಳೇ? ಆದರೆ ನಮ್ಮ ಕಷ್ಟ ಸಂಕಷ್ಟಗಳಿಂದ ನೆ ವಿಹರಿಸುವ ಮತ್ತು ಅತಿ ಸುಂದರವಾದ ಅಪಹಾಸ್ಯದ ನಗುವು ನಮ್ಮ ಮನೋದ್ವೇಗದ ಕೂಗಿಗೆ ಪ್ರತ್ಯುತ್ತರವಾಗಿ ಪ್ರತಿಧ್ವನಿಸುವ ಆ ಸರ್ವಾಂತರ್ಯಾಮಿಯು ಆ ಇಂದ್ರಿಯ ನಿಗ್ರಹ ಶಕ್ತಿಯಿಂದ ಕೂಡಿದ ಗೋಳಗಳು ನಾವೇ? ಶ್ರೀಮತಿ ಹೆಮಿಲ್ಟನ್ ಕಿಂಗ್ ಇವರ ಈ ಮಹತ್ವದ ನುಡಿಗಳು ಅದೆಷ್ಟು ನಿಜವಾಗಿವೆ! —

"ಮುಂಜಾವದಿಂದ ಮುಂಜಾವದವರೆ ನಿತ್ಯವನೆ
ಕೆಲರನ್ನುವರು ಶಿಲುಬೆ ತಾನ್ ತಾಯ್ನೆಲದಿ ನಿಂ
ತಿಸದಾರಿಗೂ ಅಂಜದೆಯೆ ಇರಲವಳ ನ
ಯನಗಳು ಕೆಲು ತಾರೆಗಳೊಲು ಇರಿಕಪ್ಪು ಸಂಕ
ಟಗಳ ಕಂಡರದೆ ಅಗ್ನಿ ಕಿಡಿ ಸಿಡಿದ ಹಾದಿ
ಯ ಎಲೆಗಳಿಲದ ಕಪ್ಪ ರೆಂಬೆಗಳೋಲಾಡು
ತಲೆ ಕಳೆಯುತಿರೆ ನಿತ್ಯ ರಾತ್ರಿಯಲಿ ಕಾಲ್ ಹರಸು

ಉಡುಗೆ ತೊಡಿಗೆಗಳಿನಂತೆ ಮೃತ್ಯು ಕಣ್ಣಿಯು ದಾಳಿ
ಸರಿ ದಾರಿಯನು ಮುಚ್ಚಿದರು ಧೃವತಾರೆಯು
ತ್ತಲ ಮೊಗವನಿಟ್ಟು ದೋರದಂತು ಆ ನೋಟಕ್ಕೆ
ಕಾಲ್ಗಳವು ಅದಲ್ಲ ತಡೆತ್ತಡೆದಿಟ್ಟ ಹೊಂಚು
ಅಂಗವಿಕಲರಾಗಿಯೆ ಸಾಗಬೇಕಾ ನೀ
ಳ್ದಾರಿಯನು; ಹಗಲು ನಿಶೆಯಂದದೆನ್ನದೆಯೆ ನಡೆಯೆ
ಹಲವು ಸಲ ಮುಗಿಲವಿದಾ ಕತ್ತಲೆ ತಾರೆ
ಗಳೆ ಕಾಣದಿರಲಂತು ಹೋಗಲು ಇರುದು, ಅದುವೆ
ಜೀವ; ಜೀವನದ ರಹಸ್ಯ!

ಆಹಾ, ಹೀಗಿದ್ದರೂ ಸತ್ಯ ನಕ್ಷತ್ರದತ್ತ ಮೊಗವಿಟ್ಟಿರಲು ಆ ಹೊಳಪು ನನ್ನ ಎಂದೂ ಕೈಬಿಟ್ಟುಕೊಂಡಿದ್ದಿಲ್ಲ; ಅದು ಹೊಳೆಯುತ್ತಲಿರುವಾಗ ಇತರ ಮಿಂಚು ಬೇಕಾಗಿಲ್ಲವೋ ಅಂತೆಯೇ ನಂದಿ ಕಾಣೆಯಾಗುವವು.

ನಾನು ಹಲವು ತಿಂಗಳುಗಳ ಕಾಲ ನರಳುತ್ತಾ ಬಿದ್ದಿದ್ದಾಗ ನನ್ನ ಚಿಕ್ಕ ಮಗುವಿನ ಅರ್ಥವಿಲ್ಲದ ಯಾತನೆಯು ನನ್ನ ಕಣ್ಣಿಗೆ ಕಟ್ಟುವಂತಾಯಿತು, ಆಗ ನಾನು ಮಾನವರ ಕರುಣಾಳು ತಂದೆಯು ದೇವರು, ಎಂಬುದಾಗಿ ಇಟ್ಟಿದ್ದ ನನ್ನ ನಂಬಿಕೆಗೆ ಬಲವಾದ ಪೆಟ್ಟು ಬಿದ್ದಂತಾಯಿತು, ಬಡತನದಿಂದ ನರಳುತ್ತಿದ್ದವರನ್ನು ನಾನು ಸಂದರ್ಶಿಸುತ್ತಾ ಇದ್ದೆನು. ಅವರು ತಮ್ಮ ಜೀವಮಾನವೆಲ್ಲ ಕಷ್ಟಪಡುತ್ತ ಕಳೆದುದನ್ನು ನಾನು ಗುರುತಿಸಿಕೊಂಡಿದ್ದೆನು, ನಾನು ದೇವತೆಯಂತೆ ಕಂಡಿದ್ದ ನನ್ನ ಮಾತೆಯನ್ನು ಆ ಪಿಡುಗು ನಂಬಿದ ಒಬ್ಬ ವಕೀಲನು ಮೋಸಪಡಿಸಿದನು. ಅವನ ಮೂಲಕವಾಗಿ ಇತರರಿಗೆ ಸಲ್ಲಬೇಕಾಗಿದ್ದ ಹಣವನ್ನು ಅವನು ಕೊಡದಿದ್ದ ಕಾರಣದಿಂದ ನನ್ನ ತಾಯಿಯು ಸಾಲಗಾರ್ತಿಯಾಗಬೇಕಾಯಿತು. ಸಂತೋಷಪೂರ್ಣವಾಗಿದ್ದ ನನ್ನ ಜೀವನವು ನೋವಿನಿಂದ ಸವೆಯುತ್ತಲಿದ್ದ ನನಗೆ ಅಸಹ್ಯವೆಂದು ತೋರಿದ ದಾಸ್ಯಕ್ಕೆ ನಾನು ಬಲಿಗೀಗ ನನ್ನ ಜೀವನದ ವರ್ಷಗಳನ್ನೇ ಕಳೆದುಕೊಂಡಂತಾಗಿತ್ತು. ಅಷ್ಟೇ ಅಲ್ಲ, ನನ್ನ ನಿಸ್ಸಹಾಯಕವೂ ಕೋಮಲವೂ ಆದ ಕೂಸು ಬಹಳ ಕಾಲ ನರಳಿ ಕಡೆಗೆ ಕೃಶವಾಗಿ ಹೋಯಿತು. ಸರಾಗವಾಗಿ ಸಾಗಿದ ನನ್ನ ಹಿಂದಿನ ಜೀವನದ ಆ ಕಳೆಯು ನನ್ನ ಭ್ರಾಂತಿ ನಿವಾರಣಾ ಭಾವವನ್ನು ಇನ್ನಷ್ಟು ಅಧ್ಯಯನಕ್ಕೊಳಪಡಿಸಿತಲ್ಲದೆ ಇಷ್ಟು ಚಿಕ್ಕನೆ ಮತ್ತು ಇಷ್ಟು ಅತ್ಯಧಿಕ ಹರಿವಿಗೆ ಸಿದ್ಧನಾಗಿ ಎಡಹಿದ ನನ್ನನ್ನು ದಿಗ್ಭ್ರಾಂತಳನ್ನಾಗಿ ಮಾಡಿತು, ನನ್ನ ಹಿಂದಿನ ಧಾರ್ಮಿಕ ಮನೋಭಾವವೇ ಇಂದಿನ ನನ್ನ ಕಷ್ಟಕ್ಕೆ ವೈರಿಯಾಯಿತು. ನಾನು ಕ್ರೈಸ್ತನಲ್ಲಿ

ಇದ್ದ ಆ ಹಳೆಯ ವಿಶ್ವಾಸ, ಧರ್ಮವನ್ನು ನಡೆಸುತ್ತಿರುವ ಆ ದೇವನಲ್ಲಿ ನಾ
ನಿಟ್ಟ ನಿಶ್ಚಲ ಭಕ್ತಿ, ನಿರಂತರವೂ ನಾನು ಅವನಿಗೆ ಸಲ್ಲಿಸುತ್ತಿದ್ದ ಪ್ರಾರ್ಥ
ನೆ ಮತ್ತು ಅವನು ನನ್ನ ಮುಂದೆಯೇ ಇರುವನೆಂಬ ನನ್ನ ಅನುಭ
ವವೆಲ್ಲವೂ ಈಗ ನನಗೆ ವಿರೋಧವಾಗಿ ನಿಂತವು. ನಾನು ಇಟ್ಟಿದ್ದ
ಆ ವಿಶ್ವಾಸದ ಅತ್ಯಂತ ನಿಶ್ಚಲತೆಯನ್ನು ಅದೇ ಎತ್ತರಕ್ಕೆ ಸಮನಾಗಿ
ಆ ನನ್ನ ವಿಶ್ವಾಸವನ್ನು ಕಳೆದುಕೊಂಡು ಹೊಂದಿದ ನನ್ನ ನಿರಾಶಾಮ
ಯವಾದ ಹೃದಯಾಘಾತದಲ್ಲಿ ಕಾಣುತಿದ್ದೇನೆ, ನನಗೆ ದೈವವೆಂ
ಬುದು ಒಂದು ಕಲ್ಪನೆ ಮಾತ್ರವಲ್ಲ; ನಿಜವಾಗಿಯೂ ಅದು ಜೀವಂತ
ಶಕ್ತಿಯೆಂದೇ ಭಾವಿಸಿದ್ದೆನು. ನನ್ನ ಶಿಶುವಿನ ಯಾತನೆಯಲ್ಲಿ, ನನ್ನ
ಕಷ್ಟದಲ್ಲಿ, ಕಾಲದ ಹೊರೆಯಿಂದ ಕುಸಿದು ಬಿದ್ದ ನನ್ನ ತಾಯಿಯ
ದುಃಖದ ಬಾಳಿನಲ್ಲಿ ಮತ್ತು ಬಡತನದಿಂದ ನರಳಿದ ಸಾವಿರಾರು ಜ
ನರಲ್ಲಿ ತನ್ನ ಪ್ರಭಾವವನ್ನು ಬೀರಿದ್ದ ಮತ್ತು ನಾನು ಹೃತ್ಪೂರ್ವಕ
ವಾಗಿ ನಂಬಿದ್ದ ಆ ಜೀವಂತ ಶಕ್ತಿಯನ್ನೇ ದೂರೀಕರಿಸಿದ್ದೆನು. ಕರು
ಣಾಜನಕವಾದ ಜೀವನ ನಿರ್ಮಿಸಿದ ಲೋಕದ ಯಾತನೆ, ಮತ್ತು ಕ್ರೂ
ರತನ, ನನ್ನ ಏಳು ತಿಂಗಳ ಶಿಶುವಿಗೆ, ಅದೇ ರೀತಿಯಲ್ಲಿ ಎಷ್ಟೋ ತಿಳಿ
ಯದ ಅಜ್ಞಾನಿಗಳನ್ನು ನೋಯಿಸುವುದು; ಅನಂತವಾದ ಸೃಷ್ಟಿಗೆ
ತಲೆಕೆಳಗಾಗಲೂ ಪಾಲಿಯಾಗದ ನೋವು, ದುಃಖದಿಂದಾವೃತವಾದ
ಜಗತ್ತು, ನಿಸ್ತೇಜ ಹಾಗೂ ನಿರಾಶಾದಾಯಕವಾದ ನರಕ ಎಂದೆ
ಲಾದುವೆಲ್ಲಾ ನಾನು ದೇವರನ್ನು ನಂಬುತ್ತಾ ಇದ್ದಂತೆಯೇ ನನ್ನ
ನ್ನು ದಿಗ್ಭ್ರಾಂತಳನ್ನಾಗಿ ಮಾಡಿತು. ಭೂತ ಪ್ರೇತಗಳನ್ನು ನಂಬಿ
ಕೆದರುವುದರ ಬದಲಾಗಿ ನಾನು ದೇವರಲ್ಲಿ ವಿಶ್ವಾಸವಿಟ್ಟು ಅನಂ
ತರ (ಆ ಜೀವನನ್ನೇ) ತ್ಯಜಿಸಿದೆನು. ಆ ವರೆಗೂ ಸತತವಾಗಿ ಮತ್ತು
ಸಂದೇಹಕ್ಕೆ ಒಳಗಾಗದ ನನ್ನ ಸ್ವಾಭಾವಿಕ ಶಕ್ತಿಯೆಲ್ಲವೂ ಈಗ
ಆವೇಶಗೊಂಡು ಪ್ರತಿಭಟಿಸಿತು. ನಾನು ದೇವರಿಲ್ಲವೆಂದು
ಇನ್ನೂ ಹೇಳಲಿಲ್ಲವಾದರೂ (ಗುಡಿಗಳಲ್ಲಿ) ಮೊಣಕಾಲೂರುವು
ದನ್ನು ಬಿಟ್ಟೆನು.

ಹೀಗೆ ಮನೋದ್ವೇಗದಿಂದ ಕುದಿಯುತ್ತಿದ್ದಾಗ ಅದು ನನ್ನ
ಹೃದಯದಲ್ಲಿ ಕದಡುವಂತಾಗಲು ಒಮ್ಮೆ ನಾನು ಬಹು ದಿಟ್ಟ
ನಾದ ಒಬ್ಬ ಧರ್ಮಗುರುವನ್ನು ಕಂಡೆನು. ಅವನು ತನ್ನ ಸ್ನೇಹಾ
ಪೇಕ್ಷಣವಾದ ಯೋಗ್ಯರೀತಿಯಲ್ಲಿ ನನ್ನನ್ನು ಸಮಾಧಾನಗೊಳಿ
ಸಿದನು. ಮಗುವು ಸಾಯುತ್ತಿಯಲ್ಲಿ ಬಿದ್ದಾಗ ನನ್ನ ಪತಿ
ಫ್ರಾಂಕ್ ಬೆಸೆಂಟ್ ಇವನು ಆ ಗುರುವನ್ನು ಕರೆದುಕೊಂಡು ಬಂ
ದಿದನು. ಅವನು ಆಗ ಹೆಚ್ಚು ಮಾತಾಡಲಿಲ್ಲವಾದರೂ ಮಾರನೇ
ದಿನ, ಎಂದರೆ 1871ರ ಏಪ್ರಿಲ್ 21ರ ದಿನದಂದು ಈ ಕೆಳಗಿ
ನಂತೆ ಒಂದು ಪತ್ರವನ್ನು ಬರೆದನು:—

ನನ್ನ ನೆಚ್ಚಿನ ಶ್ರೀಮತಿ ಬೆಸೆಂಟ್, ನಿನ್ನೆ ದಿನ ನೀನು ತಾಳಿದ ನನ್ನ ಮನಸ್ಸಿನ ದುಗುಡತೆಯ ಮಟ್ಟಿಗೆ ನನಗೆ ಸಹಾಯ ಮಾಡಲಾಗಲಿಲ್ಲವೆಂಬುದನ್ನು ಬಹು ಬೇಸರದಿಂದ ತಿಳಿದಿರುವೆನು, ಅದು ನಿನ್ನ ದುಃಖದಲ್ಲಿ ಸಹಾನುಭೂತಿಯನ್ನು ನಾನು ತೋರಿಸಲಿಲ್ಲವೆಂಬುದಕ್ಕಲ್ಲವೆಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ, ಬದಲಾಗಿ ನಾನು ಆ ವಿಷಯದಲ್ಲಿ ನಿನಗಿಂತಲೂ ಹಿರಿದಾದ ಹಿಡಿತದ ಕಾರ್ಯವೆಂದು ಹೇಳಿದರೆ ಹಾಸ್ಯಕ್ಕಿತ್ತು ನಿಜವೆಂದೆನ್ನಬಹುದು, ಬಹುಮಟ್ಟಿನ ಸ್ವಭಾವದ ಯಾರೊಬ್ಬರೂ ದುಃಖದಲ್ಲಿದ್ದಾಗ ನಾನು ಮಧ್ಯೆ ಕೈ ಹಾಕುವುದಕ್ಕೆ ತುಂಬಾ ಅಂಜುತ್ತೇನೆ. ದುಃಖಿತ ಹೃದಯಕ್ಕೆ ಅದರ ಸ್ವಂತ ತಾಪನತಾಡಿಗಳಿವೆ. ಅಪರಿಚಿತರು ಅದರ ಗೊಡವೆಗೆ ಹೋಗಲಾರರು, ನಾನೀಗ ಅಂಥಾ ಒಂದು ಮನೋಭಾವವನ್ನು ಸಚೇತನಗೊಳಿಸುತ್ತಿರುವೆನೆಂಬುದೇ ನನ್ನ ಕಳವಳದ ಊಹೆಯಾಗಿದೆ, ಹೇಗೆಂದರೆ:

"ಸಾಮಾನ್ಯವಾಗಿರುವುದು ಸಾಮಾನ್ಯ ವಿಷಯದಲ್ಲಿ
ಲೀನವಾಗಿರುವುದು; ಬರಿದಾದ ಹೊಟ್ಟು ಅವ್ವ ಧಾ
ನ್ಯಕ್ಕೆಂದೇ ಎನಿಸಿಯುತ್ತಿರುವೆ!

ಔಪಚಾರಿಕವಾಗಿ ಸೂಚಿಸುವ ಸಂತಾಪವು ಬೈಬಲ್‌ನಿಂದ ಎತ್ತಿ ಹೇಳುವ ಔಪಚಾರಿಕ ಸೂಕ್ತಿಗಳು, ಮತ್ತು ಪ್ರಾರ್ಥನಾ ಸಭೆಗಳು ಮನಸ್ಸೋವೇದನೆಯನ್ನು ತಡೆಯಲು ಅಶಕ್ತವಾದದ್ದು ಮಟ್ಟಿಗೆ ಹೆಚ್ಚಿಸುವುದೆಂದು ನನ್ನ ಮನಸ್ಸಿಗೆ ತೋರುತ್ತದೆ. ಆದುದರಿಂದ ನಾನು ನಿನ್ನ ಮಟ್ಟಿಗೆ ಸೂಚಿಸಿದಂತೆ ಒಂದು ಮಾನವೀಯವಾದ ಭಕ್ತಿ ಶ್ರದ್ಧೆಯು ಇನ್ನೊಂದು ಅಂಥಾ ಮಾನವೀಯವಾದ ಭಕ್ತಿ ಶ್ರದ್ಧೆಯನ್ನು ಆಕ್ಷೇಪ ವಿಶ್ವಾಸದಿಂದ ನೋಡುವುದಲ್ಲದೆ ಅಂಥಾ ವಿಶ್ವಾಸಕ್ಕೆ ಯಾ ಮಹತ್ವದ ಬೇರೆ ಯಾವುದೂ ಇಲ್ಲವೆಂಬ ತತ್ವವನ್ನನುಸರಿಸಿ ನಾನು ವರ್ತಿಸಿದೆನು. ದೇವರು ಇತ್ತ ಬರವಣಿಗೆಗಳು, ಚಿಕ್ಕ ಮಕ್ಕಳಲ್ಲಿ ಕ್ರೈಸ್ತನಿಗೆ ಇರುವ ಪ್ರೀತಿ ಇತ್ಯಾದಿಗಳು ನಿಮಗೆ ಅವುಗಳಲ್ಲಿ ನಂಬಿಕೆ ಮತ್ತು ಮನಸ್ಸಿಗೆ ಶಾಂತಿಯನ್ನು ಇತ್ತವೆಯೆಂಬ ಶ್ರದ್ಧೆಯು ನನ್ನ ಹೃದಯಾಂತರಾಳದಲ್ಲಿ ಇರುವಷ್ಟೇ ನಿನ್ನಲ್ಲಿ ಇದೆಯೆಂದು ನಾನು ತಿಳಿದುದರಿಂದ ನಾನು ಎಲ್ಲಾ ವಿಚಾರಗಳನ್ನು ಇಲ್ಲಿ ಎತ್ತಿ ಹೇಳುವ ತೊಂದರೆಯನ್ನು ತೆಗೆದುಕೊಳ್ಳಲಿಲ್ಲ, ಆದರೆ ಅಂಥಾ ಹಿತವಚನಗಳ ಅವಶ್ಯಕತೆ ಇರುವವರೊಡನೆ ಮುಖತಃ ಮಾತಾಡುವಾಗ ಅಂಥವರಲ್ಲಿ ನನ್ನ ಪ್ರೀತಿ ವಿಶ್ವಾಸಗಳು ಕೂಡಲೇ ವಿಶಾಲ ಹಾಗೂ ಕೃತಜ್ಞತಾಪೂರ್ವಕವಾಗಿ ವಿಕಸಿತಗೊಳ್ಳುವುದರಿಂದ ನಾನು ಅವರೊಡನೆ ಸ್ವಾಭಾವಿಕವಾದ ರೀತಿಯಲ್ಲಿ ಮಾತಾಡಿ ಅವರಿಗೆ ಸಹಕರಿಸಿ ಆ ಮೂಲಕ ನಮ್ಮ ಪರಸ್ಪರ ಭಕ್ತಿ ವಿಶ್ವಾಸಗಳು ಆತ್ಮದಿಂದ ಆತ್ಮಕ್ಕೆ ಅದರಂತೆಯೇ ದಾರಿಯನ್ನು ಕಂಡುಕೊಳ್ಳಲಿ ಎಂದು ಆಶಿಸುತ್ತೇನೆ.

ಹೀಗೂ ನಾನು ಈ ಬಗೆ ಪ್ರಯತ್ನಿಸಿದ್ದರೂ ಅದನ್ನು ವ್ಯಕ್ತಗೊಳಿಸಲು ತಕ್ಕ ಶಬ್ದಗಳೇ ನನಗೆ ದೊರಕವು. ಹಾಗಿದ್ದರೂ ದೇವರ ಶುಭಸಂದೇಶಗಳನ್ನು ಪ್ರಚಾರಪಡಿಸುವ ಹರ್ಷ ಮೂಡಿಸುತ್ತೆ ನಾನು ಎಲ್ಲವೂ ಶುಭದಾಯಕವಾಗಿದೆಯೆಂದು ಬಹಳ ನಿಶ್ಚಯದಿಂದ ಹೇಳಬಯಸಲು ನನ್ನನ್ನು ಪ್ರೇರೇಪಿಸಿದೆ, ಕ್ರಿಸ್ತನ ಶಿಲುಬೆಯಾಕಾರದ ಚಿಕ್ಕ Cross ಇಲ್ಲದೆ ವೇದನೆಯನ್ನು ಬಗೆಹರಿಸಲು ಬೇರಾವ ಉಪಾಯವೂ ಇಲ್ಲ. ಆದರೆ ನನ್ನ ತಂದೆಯ ಆಸೀನದಲ್ಲಿ ಅದಕ್ಕಿಂತಲೂ ಅಮೂಲ್ಯವಾದ ಒಂದು ಪರಿಹಾರ ಮಾರ್ಗವಿದೆ, ಅದನ್ನು ಯಾವಾಗ ನಾವು ತಿಳಿದುಕೊಂಡೆವೋ ಆಗಲೇ ನಮ್ಮದೇ ಆಗುತ್ತದೆ. ನಾವು ನಮ್ಮ ಜೀವನಯಾತ್ರೆಯನ್ನು ಯಾವೆಡೆಗೆ ಸಾಗಿಸುತ್ತೇವೋ ಅಲ್ಲಿ, ಮತ್ತು ಗಾಢವಾದ ಕತ್ತಲಿಂದ ಕೂಡಿದ ಹೃದಯವನ್ನು ದಿವ್ಯಜ್ಯೋತಿಯಿಂದ ಎಲ್ಲಿ ಬೆಳಗಿಸುವುದೋ ಅಲ್ಲಿ ನಿನ್ನ ಮಗುವಿನ ನೋವಿಗೆ ಮತ್ತು ನಿನ್ನ ದುಃಖಕ್ಕೆ ವಿವರಣೆಯು ಇದ್ದೀತು. ಇದೀಗ ನೀನು ಅದನ್ನು ನೋಡದೆಯೇ ನಂಬಬೇಕಾಗಿದೆ, ಆದರೆ ಅದೇ ನಿಜವಾದ ನಂಬಿಕೆ ಎಂದು ತಿಳಿದುಕೋ:

“ಕಾಲದೆರೆಯಲ್ಲಿ ಹೊರಳುತ್ತಲೆ ಪಿಡಿದೆ ಕೇಳ್ ಆ
ಅನ್ಯದೆರೆಯಿಂದುಕ್ಕಿದಾ ನಿತ್ಯನಗುವ ಕಡೆಗೆ!

ನಿನಗೆ ಅಂತಾಗಲು ತಕ್ಕ ಶಕ್ತಿಯು ದೊರೆಯಲಿ ಎಂಬುದೇ ನಿನ್ನ ಪಾಲಿನ ಪ್ರಾರ್ಥನೆಯನ್ನು ನೆರವೇರಿಸುವ — ನಿನ್ನ ಬಹಳ ವಿಶ್ವಾಸಪಾತ್ರನಾದ — ಸಿ.ಜೆ.] ಡಬ್ಲ್ಯು. ಡಿ.”

ಇದೊಂದು ಮಹತ್ವದ ಪತ್ರವಾಗಿತ್ತು. ಆದರೆ ನನ್ನ ಮನೋದ್ವೇಗದ ಚಂಡಮಾರುತವು ಸುಲಭದಲ್ಲಿ ನಿಲ್ಲಲಾರದಷ್ಟು ವೇಗದಿಂದ ಬೀಸುತ್ತಿತ್ತು. ಫ್ರಾಂಕ್ ಬೆನೆಟ್ ಇವನು ಹೋಗಿ ಬಿಟ್ಟಿದ್ದನು. ಅವನು ಆಗ ಅಗಲುವ ಮುನ್ನ ಪ್ರಬಲವಾಗಿದ್ದನು ನಮ್ಮೊಳಗೆ ನಡೆಯುತ್ತ. ದೇವರಲ್ಲಿ ನನ್ನ ವಿಶ್ವಾಸವನ್ನು ಕಳೆದುಕೊಳ್ಳುತ್ತಾ, ಮಾನವನನ್ನು ನಂಬಿ ಜೀವಿಸಲು ಇನ್ನೂ ಕಲಿಯುವುದೇ ಇರುತ್ತ, ನಾನು ಅನ್ಯಾಯಕ್ಕೊಳಗಾಗಿ ನಿರ್ವಾಹವಿಲ್ಲದೆ ಆ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು ದಾರಿಯಿಲ್ಲದವಳಾಗಿದ್ದೆನು, ಅದರಿಂದ ಪಾರಾಗಲು, ಹಾಗಾದರೆ, ದಾರಿಯಿಲ್ಲವೇ? ಸರಿ! “ಒಂದು ದಾರಿ ಇದೆ”, ಎಂದು ನನ್ನ ಮನಸ್ಸಿಗೆ ಹೊಳೆಯುತ್ತ, ಆ ಮಾನ ಮತ್ತು ಭದ್ರತೆಯ ದ್ವಾರವು ಆ ಗೋರಿಯ ಹೆಬ್ಬಾಗಿಲು ನಾನು ನಿಚ್ಚಳದ ಶಾಂತಿ ಮತ್ತು ಕ್ಷೇಮದ ಆ ಮೋಹದೊಡಗೊಂಡು ನನ್ನ ಮುಂದೆ ತೆರೆಯಲ್ಪಟ್ಟಿತು. ನಾನಾದರೋ ಕಷ್ಟ ಪರಿಹಾರಕ್ಕೆ ದಾರಿಯುದೆಯೆಂದೂ ತನ್ನ ಮಗುವಿನ ಯಾತನೆಯನ್ನು ನಿಲ್ಲಿಸಿದ “ಕ್ಲೋರೋಫಾರ್ಮ್” ವಾಯುವನ್ನು ನಾನು ಮನೆಯ ಮಹಡಿಗೆ ಬೇಗ ಹಾಕಿದ್ದನ್ನು ನೆನೆಯುತ್ತಾ ಹತ್ತಾರಳಿಗೆ ಸಾಯಂಕಾಲದ ಆಕಾಶದತ್ತ ಎವೆಯಿಕ್ಕದೆ ನೋಡುತ್ತಾ,

ನಾನು ಮನೆಯ ಕೊನೆಯ ಕೋಣೆಯ ಕಿಟಕಿಯ ಬಳಿಯಲ್ಲಿ ನಿಂತಿದ್ದೆನು, ನಾನು ಮೇಲಿನ ಕೋಣೆಗೆ ಓಡಿಹೋಗಿ ಕಪ್ಪಿಯನ್ನು ಹೊರವಗೆದು ಮತ್ತೆ ಇಳಿದು ಬಂದು ಬೇಸಗೆಯ ಮುಸ್ಸಂಜೆಯ ವೇಳೆಯಲ್ಲಿ ಪುನಃ ಅದೇ ಕಿಟಕಿಯ ಹತ್ತಿರ ನಿಂತು ಹೋರಾಟವು ಮುಗಿದು ಮನಃಶಾಂತಿಯು ಸನ್ನಿಹಿತವಾಗುತ್ತಿದೆಯೆಂದು ಸಂತೋಷಪಟ್ಟೆನು. ನಾನು ಆ ಕಪ್ಪಿಯ ಮುಚ್ಚಳವನ್ನು ತೆರೆದು ನನ್ನ ತುಟಿಗೆ ಕಪ್ಪಿಯನ್ನೇರಿಸಿದಾಗ ಅದಾವುದೋ ಹೊರ ಎಡೆಯಿಂದ ಮೃದುವಾಗಿ ಮತ್ತು ಸ್ಪಷ್ಟವಾಗಿ ಹೇಳಿದ ನುಡಿಗಳನ್ನು ಕೇಳಿದೆನು, "ಎತ್ತಿ ಹಿಡಿಯುತ್ತಿ, ಹುತಾತ್ಮರಾಗುವ ಜನರನ್ನು ಕಂಡೂ ಹೇಡಿಯಾ, ಕೆಲವು ಅಲ್ಪಕಾಲದ ವರ್ಷಗಳ ಯಾತನೆಯನ್ನು ಸಹಿಸಲಾಗುವುದಿಲ್ಲವಲ್ಲ." ಎಂದು ಹೇಳಿದನ್ನಾಲಿಸಿ ನನ್ನಲ್ಲಿ ನಾಚಿಗೆಯು ಉಕ್ಕಿಬಂತು. ನನ್ನ ಕೈಯಲ್ಲಿದ್ದ ಕಪ್ಪಿಯನ್ನು ಅಲ್ಲಿಯೇ ನನ್ನ ಪಾದಗಳ ಬಳಿಯಿದ್ದ ಉದ್ಯಾನದ ಹಾದಿಗೆ ಎಸೆದೆನು. ಕ್ಷಣಮಾತ್ರದಲ್ಲಿಯೇ ನಾನು ಹೋರಾಡುವುದಕ್ಕೆ ಬಲಿಷ್ಠನಾಗಿರುವಂತೆ ತೋರಲು ಕೆಳಗೆ ಮೈಮರೆತು ಅಲ್ಲಿಯೇ ನೆಲದಲ್ಲಿ ಬಿದ್ದೆನು. ನನ್ನ ಜೀವನದ ತಾಪತ್ರಯಗಳಿಡೆಯಲ್ಲಿ ಇದೀಗ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಭಾವನೆಗಳೂ ಪುನರಾವರ್ತಿಸಿ ಉದಿಸಿದವು, ಆದರೆ ಅವು ಬರೀ ಕ್ಷಣಕಾಲಕ್ಕೆ ಮಾತ್ರ! ಹೇಗೂ ಅಂಥಾ ಭಾವನೆಗಳೂ ಬಲವಂತವಾದ ಆತ್ಮಕ್ಕೆ ತಕ್ಕುದಲ್ಲವೆಂದು ಅವನ್ನು ಅಂತೆಯೇ ಹತ್ತಿಕ್ಕಿದಾಯಿತು.

ನನ್ನ ಹೊಸ ಮಿತ್ರನಾದ ಶ್ರೀ 'ಡಿ' - ಇವನು ನನಗೆ ವಿಶೇಷ ಸಹಾಯಕನಾಗಿದ್ದನು. ನರಕದ ಕೊನೆಯಿಲ್ಲದ ಹಿಂಸೆಗಳು, ಕ್ರೈಸ್ತನು ಪರೋಕ್ಷವಾಗಿ ಮಾಡಿದ ತ್ಯಾಗ, ಬೈಬಲ್ ಧರ್ಮಗ್ರಂಥದಲ್ಲಿ ಅಬದ್ಧವಾದ ವಿಶ್ವಾಸ ಮತ್ತು ಈ ವರೆಗೂ ಅಂಗೀಕೃತವಾದ ಸಿದ್ಧಾಂತಗಳಲ್ಲಿ ನನ್ನ ಕಂಗೆಟ್ಟ ಆತ್ಮದಲ್ಲಿ ಹುಗಿದು, ಬೆಳೆದು ರಾಶಿಯಾಗಿದ್ದುವು, ಇವುಗಳ ಬಗ್ಗೆ ನಾನು ಶ್ರೀ 'ಡಿ' ಇವನನ್ನು ಪ್ರಶ್ನಿಸಿದಾಗ ಅವನು ಸಹನೆಯ ಅತಿ ಉತ್ಸಾಹದಿಂದ ಉತ್ತರಿಸಿದನು. ಅವನು ನನ್ನ ಪ್ರಶ್ನೆಗಳ ಬಗ್ಗೆ ಬೆಚ್ಚಲೂ ಇಲ್ಲ, ಕಠಿಣ ಭಕ್ತಿಯ ಪ್ರದರ್ಶನದಿಂದ ಹಳಿಯಲೂ ಇಲ್ಲ. ಬದಲಾಗಿ ಸಂದೇಹದ ತಾಪದಿಂದ ಸೊರಗಿದ್ದ ವ್ಯಕ್ತಿಗೆ ತುಂಬಾ ವಿವರಣೆಯುವಾಗಿ ಮತ್ತು ಮನಮುಟ್ಟುವಂತೆ ಅವನು ಉತ್ತರಿಸಿದನು. 1871 ರ ಬೇಸಗೆಯಲ್ಲಿ ಅವನು ಹಿಲ್ಟನ್‌ಹಾಮ್‌ನಿಂದ ಅಗಲಿದನು, ಆ ವರ್ಷದ ನವೆಂಬರ್ ತಿಂಗಳಲ್ಲಿ ಬರೆದ ಪತ್ರವು ನಾನು ಸಂಕಷ್ಟದಲ್ಲಿ ಬಿದ್ದು ಹೊರಳಾಡುತ್ತಿದ್ದ ಬಗೆಯು ಎಂತಿದ್ದಿತೆಂಬುದನ್ನು ತೋರಿಸುವುದು,

"ನೀನು ಒಂದು ಮಹತ್ವದ ಸೂತ್ರವನ್ನು ಮರೆತಿರುವೆ. ದೇವನೆಂದರೆ ದೇವರು ಶಿಕ್ಷಿಸುವಂಥವನು ಅಲ್ಲ; ಅವನಿಗೆ ಕಷ್ಟಪಡಲು ಸಾಧ್ಯವಿಲ್ಲ. ಮಾನವ ಪುತ್ರನಾಗಿ ಮಾನವ ಜನಾಂಗದ ಪ್ರತೀಕವಾಗಿ ಅವನು ಕಷ್ಟಪಟ್ಟಿರಬಹುದಲ್ಲದೆ ಕ್ರೈಸ್ತನು ದೈವತ್ವದಿಂದ ಕಷ್ಟಪಡಲಿಲ್ಲ. ಪಾಪಕ್ಕೆ ಹೇಸು, ಪಾಪಿಯನ್ನು ಪ್ರೀತಿಸು ಆ ರೀತಿ ಪಾ

ಪಶ್ಚಾತ್ತಾಪಿಗಳಿಗೂ ದೇವನು ಚಿರಂತನವಾಗಿ ದುಃಖವನ್ನುಂಟುಮಾಡುವನು, ಎಂಬುದಾಗಿ ಹೇಳಿದರೆ ಅದು ಸರಿಯೆನಿಸಬಹುದು. ಆದರೆ ಅದರಿಂದ ಕ್ರೈಸ್ತನು ಮಾನವ ಅವತಾರದಿಂದ ಬಂದು ಪಶ್ಚಾತ್ತಾಪದ ಅನುಭವವನ್ನು ಸಿದ್ಧಾಂತಯೋಗ್ಯವಾದ ಪರಮಾತ್ಮನ ಪಶ್ಚಾ ನೆಂದರೆ ಅದು ತಪ್ಪಾಗುವುದು.

೨) "ನಿನ್ನ ಪತ್ರದ ಕಡೆ ಭಾಗವನ್ನು ನೋಡಿ ನಾನು ನಿನಗೆ ಇಲ್ಲಿಂದ ಈ ಹಿಂದು ಬರೆದು ಕೊಡಬೇಕೆಂದು ನನ್ನ ಮನಸ್ಸಿಗೆ ಹೊಳೆಯುತ್ತ. ತನ್ನ ಮಕ್ಕಳಲ್ಲಿ ಹಲವರನ್ನು ದೇವರು, ದ್ವೇಷವಿಲ್ಲದ ಮಾನವರನ್ನು, ಜೀವಿಸದತೆ ಶಿಕ್ಷಿಸುತ್ತಿರುವನೆಂದು ನಾನು ಕಾರಣವಿಲ್ಲದೆ ಆರೋಪಿಸುತ್ತಿರುವೆನೆಂದು ನೀನು ಭಾವಿಸಬಹುದು! ನೀನು ಹೇಳುವುದೇನೆಂದರೆ ದೇವರು ಹಾಗೆ ಶಿಕ್ಷಿಸಲಾರನು, ಬದಲಾಗಿ ಅವನು ಶಿಕ್ಷಿಸಬೇಕಾಗಿಲ್ಲದವರನ್ನು ಅವನ ಅವರ ಕೈಗೆ ಒಂದು ಶಾಶ್ವತವನ್ನಿತ್ತು ಬಿಡಲಿಸುತ್ತಾನೆ. ಆದರೆ ಇದು ಕ್ರೈಸ್ತನ ಬೋಧನೆಗಿಂತ ತುಂಬಾ ವ್ಯತಿರಿಕ್ತವಾಗಿದೆಯೆಂದು ನನ್ನ ಮನಸ್ಸಿಗೆ ಹೊಳೆಯುತ್ತದೆ. ಕ್ರೈಸ್ತನು ಹೇಳಿದ ಶಾಶ್ವತ ಶಿಕ್ಷೆಯು ವಿವರವು Valley of Hinnom ಪ್ರಸಂಗದಲ್ಲಿ ಹೇಳಲ್ಪಟ್ಟಿರುವುದಕ್ಕೆ ಹೊರತು ಅನಾವಶ್ಯಕವಾಗಿರಬಹುದು, ಅಲ್ಲದೆ Dives ನ ಕಥೆಯೊಂದನ್ನು ಬಿಟ್ಟು ಇತರ ಕಲ್ಪನಾತ್ಮಕ ವಿವರಗಳು ಸತ್ತವರೆಲ್ಲರೂ ಪರಿಣಾಮವನ್ನುಂಟುಮಾಡುವ ನೈತಿಕ ತಿದ್ದುಪಾಟುಗಳಾಗಿವೆ. ತನ್ನ ಸೋದರರನ್ನು ರಕ್ಷಿಸಲಿಕ್ಕಾಗಿ Dives ನ ನಿಸ್ವಾರ್ಥ ಅಭಿಲಾಷೆಯನ್ನು ಕುರಿತು ಹೇಳುತ್ತಿದ್ದೇನೆ. ಇದನ್ನು ಕುರಿತಾಗಿ ಇರುವ ಅಭಿಪ್ರಾಯವನ್ನು ನಾನು ಹೆಚ್ಚು ನೋಡಿದಾಗ ಆ ಶಾಶ್ವತವಾದ ಶಿಕ್ಷೆಯು ವಿಷಯವಾಗಿ ಮಾತು ಎಷ್ಟು ನಿರಾಧಾರವಾದುದೆಂಬುದನ್ನು ತೋರಿಸುತ್ತದೆ. ಹೀಗೂ ಕುತರ್ಕವಾಗಿ ಕಂಡಿಲ್ಲವಾಗಿ ಇರುವುದಕ್ಕಿಂತ ನೀನು ನಂಬಬೇಕೆಂದು ಬೋಧಿಸುವ ಆ ದೇವರು ಎಷ್ಟೋ ಮೇಲ್ಮಟ್ಟದಲ್ಲಿರುವನೆಂದು ತಿಳಿದು ನೀನು ಉತ್ಸಾಹಿಯೂ ಕೃತಜ್ಞನೂ ಆಗಬೇಕೆಂದು ನನಗೆ ತೋರುತ್ತದೆ. ಇತ್ತೀಚೆಗೆ ನೀನು ಮಾರಿಸ್ ಇವನು ಬರೆದ "ವೇದೋಕ್ತಶಾಸ್ತ್ರವೆಂದರೇನು?" (What is Revelation?) ಇದರ ಗುಣಸಾರವನ್ನು ತಿಳಿದಿರಬಹುದು. (ನಿನ್ನ ಬಳಿಯಲ್ಲಿ ಅದರ ಇನ್ನೊಂದು ಭಾಗ ಇರಬಹುದೆಂದು ಊಹಿಸುತ್ತೇನೆ.) ಅದರಂತೆಯೇ ದೇವರ ಸತ್ಯವೇ ನಮ್ಮ ಸತ್ಯ; ಅವನ ಪ್ರೀತಿಯೇ ನಮ್ಮ ಪ್ರೀತಿ; ಅದು ಪರಿಪೂರ್ಣವೂ ದೋಷರಹಿತವೂ ಆಗಿದೆ. ದೇವರ ಪ್ರೀತಿ, ನ್ಯಾಯ ಇತ್ಯಾದಿ ನಮ್ಮದಕ್ಕಿಂತ ಎಷ್ಟೋ ಬೇರ್ಪಟ್ಟವೆಯೆಂದು ಡೀನ್ ಮ್ಯಾನ್ಸೆಲ್ (Dean Mansel) ಇವನು ನಿರೂಪಿಸುತ್ತಿ

ತ್ತಾನೆ ಶಪಿಸಿದ ನಿರಸ್ತಿಕತೆಗಿಂತ ಬೇರಾವುದೂ ಆಧುನಿಕ ತತ್ವಶಾಸ್ತ್ರವನ್ನು ತತ್ವಜ್ಞಾನದಲ್ಲಿ ಇಲ್ಲ - ತೀರಾ ಅಸಂಬದ್ಧವಾದ ವಾದಗಳಿಂದ ಮಿಲ್ ಮತ್ತು ಮಾರಿಸ್ ಇವರು ಆ ಅಭಿಪ್ರಾಯದ ವೈಚಾರಿಕತ್ವವನ್ನು ಚಿತ್ರಿಸಿದ್ದಾರೆ,

"3) ನೀನು ಅಮೋಘವಾದ ಹಲವು ವಿಷಯಗಳು ನಿನ್ನ ಹಿಂದಿನ ಜನ್ಮದ ಅನುಭವಗಳ ವಿಚಿತ್ರ ಮರೆಯುವಿಕೆಯಿಂದ, ಎಂದು ನಾನು ಊಹಿಸುತ್ತೇನೆ, ನೀನು ಕ್ರಿಸ್ತನನ್ನು ತಿಳಿದಿರುವೆಯಾದರೆ (ಅವನನ್ನು ತಿಳಿದಿದ್ದರೆ ಶಾಶ್ವತ ಜೀವವನ್ನು ಅರಿಯುತ್ತೀ), ಮತ್ತು ನೀನು ದೇವರನ್ನರಿತಿರುವೆ ಎಂದು ನಿಶ್ಚಯವಾಗಿ ನಾನು ಹೇಳಬಲ್ಲೆನಾದುದರಿಂದ ಕೆಲವು ಮಾನಸಿಕ ಗೊತ್ತುಗಳು, ಅದೇನಾ ನೀನು ಇಚ್ಛಿಸುವುದಾದರೆ ಇನ್ನೂ ಹಲವು ನೈತಿಕ ನಿಯಮಗಳು ಆ ಮಹಿಮಾತೀತನ ಮಹಿಮೆಯ ಪ್ರತೀತಿಯನ್ನು ತೋರಿದುದಕ್ಕಾಗಿ ಬರುತ್ತದೆಯೆಂದು ನೀನು ಸ್ಪಷ್ಟವಾಗಿ ಹೇಳುವೆಯಾ?

"ಹೇಗಿಲ್ಲಿರಲಿ? ಕ್ರಿಸ್ತನು ನಮ್ಮ ಒಲವಿಗೆ ಪಾತ್ರನಾದವನೆಂದೇ ನನ್ನ ತತ್ವಶಾಸ್ತ್ರದ ಮೂಲವಾಗಿದೆ. ಆದುದರಿಂದ ಬರೀ ಕಾರಣದಿಂದ ಅವನು ಉದಾತ್ತನೂ ಉದಾರಿಯೂ ಪ್ರಿಯನೂ, ಮೃದುಹೃದಯನೂ, ಸತ್ಯವಂತನೂ ಆಗಿದ್ದು ನಾನು ತಿಳಿದ ಮಟ್ಟಿಗೆ ಅವನು ಹೋಲಿಕೆರಹಿತನೂ ಆಗಿರುವವನು. ಬಹುಶಃ: ಸ್ವರ್ಗದಿಂದ ಬರುವ ಸಂತನು ಈ ನನ್ನ ನಿರೀಕ್ಷೆಗೆ ತಕ್ಕ ನಿಷ್ಕಲ್ಮಷ ಪ್ರೀತಿಯಿಂದ ಕೂಡಿದ ಸಿದ್ಧಾಂತಗಳನ್ನಲ್ಲದೆ ಕೇವಲ ಕಠೋರವೂ ಕ್ರೂರವೂ ಅಥವಾ ಅನ್ಯಾಯದಿಂದ ಕೂಡಿದುದೂ ಆದ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾದರೆ ಅವು ಕ್ರಿಸ್ತನದ್ದಲ್ಲವೆಂದು ತಿಳಿದು ನಾನು ಅದನ್ನು ಕೇವಲ ಕಟ್ಟುಮಾದರಿಯಿಂದ ತಿರಸ್ಕರಿಸುವೆನು. ಕ್ರಿಸ್ತನನ್ನು ತಿಳಿದು ಅದಕ್ಕನುವಾಗಿ ಹಲವು ಮತಧರ್ಮಗಳನ್ನು ಪರಿಶೀಲಿಸಿ ತಿಳಿಯಬೇಕು; ಆದರೆ ಅವುಗಳ ಮೂಲಕವಾಗಿ ದೇವರನ್ನು ತಿಳಿಯಬೇಕೆನ್ನಬೇಡ. ಹಾಗೆ ಅವನನ್ನು ತಿಳಿಯಲು ಹೋಗಿ ಕೊನೆಗೆ ನೀನು ಅವನನ್ನು ರಕ್ತವರ್ಣದ ಕನ್ನಡಿಯ ಮುಖಾಂತರವಾಗಿ ನೋಡುತ್ತೀಯೆಂದು ನಿನಗೆ ತಿಳಿದುಬಂದರೆ ಆಗ ಯಾರನ್ನೂ ದೂರುವುದು ಬೇಡ.

"ಪ್ರಗತಿಯನ್ನು ಸಹ ನಿರಾಶೆಗೀಡುಮಾಡುವ ಎಲ್ಲಾ ಭಯಾನಕ ಸಂದೇಹ ಮತ್ತು ಆಶಂಕೆಗಳಿಗೆ ವಿರೋಧವಾಗಿ ಈ ಯುಗಕ್ಕೆ ದೇವರಿಂದಿತ್ತ ಪ್ರತ್ಯೌಷಧಿಯೋ ಎಂಬಂತೆ ಇರುವ ಮಾರೀಸ್ ಇವನ ಕೃತಿಗಳನ್ನು (ಮತ್ತೆ) ಅದರಲ್ಲಿ ತೇಯ್ದುಹೋಗಿದ್ದೇನೆ.

ಒಂದು ಕಾಲದಲ್ಲಿ ಪವಿತ್ರವಾದುದೆಂದು ಪರಿಗಣಿಸಲ್ಪಟ್ಟಿದ್ದ ವಿಚಾರಗಳ ಮೇಲೆ ವಾದವೆಬ್ಬಿಸುವ ಈ ಕಾಲದಲ್ಲಿ ಹಲವರು

ಮೇಲೆ ಹೇಳಿದ ವಿಷಯಗಳಲ್ಲಿ ಹೊಸ ಬೆಳಕು ಹರಿಯುವುದನ್ನು ಕಂ
ಡು ಶಾಂತಿಯನ್ನು ಹೊಂದಿ ಕಡೆಗೆ ಆ ತಾತ್ವಿಕ ಸಿದ್ಧಾಂತಗಳನ್ನು
ನ್ಯಾಯ ಪ್ರೇಮಾದಿಗಳಿಂದ ಪ್ರಣೀತನಾದ ಪರಮಾತ್ಮನ ಆಜ್ಞೆ
ಗಳೆಂದು ಶಾಂತನಾಗಿರಬೇಕು. ನನಗೆ ಆ ರೀತಿ ಮಾಡಲಿಕ್ಕೆ ಆಗ
ಲಿಲ್ಲ. ಲೋಕದ ಸ್ಥಿತಿಯ ಬಗ್ಗೆ ಚಿಂತನಗೊಂಡು ಮಾನವ ಗಣದ
ಯಾತನೆಗೆ ಕಣ್ಣೀರಿಡು, ನಿಷ್ಠುರ ಘಟನೆಗಳು ನಡು, [illegible] ಯಾ
ರು, ದಯಾರಾದಿಯು ಯಾರು, ಎಂಬುದನ್ನು ನೋಡದೆ ಮಾನವ ಹೃದ
ಯವನ್ನು ಕತ್ತರಿಸುತ್ತಿರಲು ಇದನ್ನೆಲ್ಲ ಮನಸ್ಸಿನ ತಾಳಲಾರದಕ್ಕೆ ಹಿಡಿ
ದುದರಿಂದು ಪ್ರಯತ್ನಿಸಿ ಜ್ಞಾನಿಗಳನ್ನು ಒಪ್ಪಿಸಲಾಗದವರೊಡನೆ ವಾದ
ವಿವಾದಗಳಿಂದ ಸಮಾಗತ್ಯಲು ಮನಸ್ಸಿಗೆ ಆಘಾತವನ್ನುಂಟುಮಾಡು
ವಂತಿದೆ, ಮನಸ್ಸಿನ ಈ ವೇದನೆಯ ಪರಿಣಾಮವಾಗಿ ದೇಹಶಕ್ತಿ ಉ
ಡುಗಿ ಕಡೆಗೆ ಹಲವು ತಿಂಗಳು ಕಾಲ ಪೂರ್ಣ ನಿದ್ರೆಯಿಂದ ಕಂಗೆಟ್ಟು
ಬಿದ್ದೆನು. ಹಾಗಾಗಿ ತಲೆಬೇನೆಯಿಂದ ನಿದ್ದೆಗೆಟ್ಟು ಮರಗಿರುವಿನಂತೆ
ಹಾಯಾಗಿ ಬಿದ್ದು ಮೈಮರೆಯದೆ ಇದ್ದೆನಾದರೂ ಬೇರಾವುದರ ಲಕ್ಷ್ಯ
ವೂ ಇಲ್ಲದೆ ನಿರಂತರವಾಗಿ ಬಾಧಿಸುತ್ತಿದ್ದ ದೈಹಿಕ ಬೇನೆಯಾನಿಕ್ಕೆ ಸಿಂಗ
ಡಿಸು, ವೈದ್ಯರು ಎಲ್ಲಾ ವಿಧದ ಶುಶ್ರೂಷೆಯನ್ನು ನಡೆಸಿದರು. ಆದರೆ
ಸತತವಾಗಿ ಬಾಧಿಸುತ್ತಿದ್ದ ಆ ಬೇನೆಯು ಅವರ ಅಲ್ಪ ಪರಿಶ್ರಮವ
ನ್ನು ಎದುರಿಸಿತು, ಅವರು ನನ್ನ ತಲೆಗೆ ಹಿಮದ ಶಸ್ತ್ರಿಯನ್ನಿಟ್ಟು ತಂ
ಪುಗೊಳಿಸುತ್ತಿದ್ದರು. ಅಫೀಮನ್ನು (Opuim) ನನಗೆ ತಿನ್ನಿಸಿದ ಕಾ
ರಣ ನನ್ನ ತಲೆಶೂಲೆ ಶಾಂತವಾಗಿ ಕಂಗಾಲಾದೆನು. ತನ್ನ ಜೀವಾತನ ಮತ್ತು
ದಯೆಯಿಂದ ತಾನು ಏನೇನು ಮಾಡಬೇಕೋ ಅದನ್ನೆಲ್ಲ ಮಾಡಿದನು,
ಆದರೂ ವ್ಯರ್ಥವಾಯಿತು, ಕಡೆಗೆ ನೋವು ನನ್ನ ದೇಹವನ್ನು ಜ
ರ್ಜರಗೊಳಿಸಲಾಗಿ ಅವನು ನನ್ನ ಮನಸ್ಸನ್ನು ಬೇರೆಡೆ ತಿರುಗಿಸ
ಲೆಂದು ದೇಹಶಾಸ್ತ್ರ ಮತ್ತು ವಿಜ್ಞಾನ ಶಾಸ್ತ್ರಗಳನ್ನು ಕುರಿತಾದ
ಪುಸ್ತಕಗಳನ್ನು ತಂದು ಅವುಗಳನ್ನು ಓದಲೆಂದು ಬಲಾತ್ಕರಿ
ಸಿದನು, ತನ್ನ ಬಿಡುವಿಲ್ಲದ ಕೆಲಸದ ಮಧ್ಯೆ ಅವನು ಸಿಂಡು ಕಾ
ಲವಾದರೂ ನನ್ನೊಡನೆ ಕುಳಿತುಕೊಂಡು ಬಂದು ಶಾರೀರ ಶಾಸ್ತ್ರವ
ನ್ನು ಕುರಿತಾದ ಕಠಿಣ ವಿಚಾರಗಳನ್ನು ಕುರಿತಾಗಿ ಹೇಳುತ್ತಿದ್ದನು.
ನನ್ನ ಮಾನಸಿಕ ಬೇನೆಯು ಪ್ರವಾಹವು ಅಪಾಯಕರ ರೀತಿಯಲ್ಲಿ
ಹರಿಯುತ್ತಿದ್ದರೆ ವೇಗವನ್ನು ಬೇರೆಡೆಗೆ ತಿರುಗಿಸಿದರೆ
ಮಾತ್ರ ನಾನು ಸಿಕ್ಕುಗಾಗುವೆನೆಂದು ಅವನು ಅರಿತಿದ್ದನು, ಸಂ
ಶಯ ಮತ್ತು ಶೋಕಗಳ ಹಿರುಗಾಳಿಯಲ್ಲಿ ಸಿಲುಕಿ ತೊಳಲು
ತ್ತಾ ನಿಸ್ಸಹಾಯಕನಾಗಿ ಅವ ಎಳೆ ಹರಿಯದ ಹೀಗಾಗಿ ಶ್ರಮಿ
ಸಿದ ಅವನಿಂದಲಾಗಿ ನನ್ನ ಜೀವ ಮತ್ತು ಬುದ್ಧಿ ಸ್ವಮಿತವು ಉಳಿ
ಯಿತೆಂದು ನಾನು ಹಲವು ಬಾರಿ ಯೋಚಿಸಿದ್ದೇನೆ.

ನನ್ನ ದಾಂಪತ್ಯಕ್ಕೆ ಮನೋಭಾವದ ಮಹತ್ವವನ್ನು ನನ್ನ ಗೃಹಸ್ಥ ಜೀವನವನ್ನು ಇನ್ನಷ್ಟು ಸುಃಖಮಯವಾಗಿಸತೊಡಗಿತು ತಿಳಿಯಬಹುದಾಗಿದೆ. ಏಕೆಂದರೆ ತಾತ್ವಿಕ ವಿಚಾರಗಳ ಪ್ರೀತಿ ಮಾನಸಿಕ ಪ್ರವೃತ್ತಿ, ನೈತಿಕ ಸಮಸ್ಯೆಗಳು ಬಿಡದೆ ಅವುಗಳಿಗೆ ಸಮಾಧಾನವಿಲ್ಲದಂತಾಗಿಸುತ ಪತ್ನಿ ಗಿರಿಜೆಯವರಿಂದ ಕೃತಜ್ಞತಾಪೂರ್ವಕ ಮತ್ತೆಗೆ ಸಾಕಷ್ಟು ತಿಳುವಳಿಕೆಯಿಂದ ಕೂಡಿದ ಸಂದರ್ಭ ಮಾನವ ಜೀವನದ ಎರಡು ಕೋನಗಳು ವುದೆಂದರೆ ಅವರಿಗಿಂತ ತಿಳಿಗೇಡಿತನದ ವಿಚಾರ! ತನ್ನ ಕರ್ತವ್ಯಕಾರ್ಯಗಳ ದ ಬಗ್ಗೆ ಎಡೆಬಿಡದೆ ಕೊಳ್ಳುವ ಮಹಾಪ್ರಾಣಿಗಳಿಂದಲೂ ಬಿಡಲಾರದ ಸಮಸ್ಯೆಗಳ ಬಗ್ಗೆ ತಲೆಕೆಡಿಸಿಕೊಳ್ಳುವ ತನ್ನ ಪತಿಯ ನಿರ್ಧಾರವನ್ನು ಮತ್ತು ಸುಖವನ್ನು ಲಕ್ಷಿಸುವುದು ನಿಜವಾಗಿಯೂ ಹೆಣ್ಣಿನ ಕರ್ತವ್ಯವಾಗಬೇಕಿತ್ತು. ಹೆಣ್ಣೇ ಆಗಲಿ, ಗಂಡೇ ಆಗಲಿ, ಸಾಮಾಜಿಕ ವಿಷಯಗಳಲ್ಲಿ ತಲ್ಲೀನರಾಗುವವರು ವೈವಾಹಿಕ ಬಲಿಗೆ ಹೇಳಿಸಿರುವುದಲ್ಲದೆ ಕುಳ್ಳಿಯರು, ಏಕೆಂದರೆ ಅವರು ಗೃಹಸ್ಥ ಹಾಗೂ ಸನ್ಯಾಸ ಜೀವನವೆಂಬ ದ್ವಂದ್ವವಾಗಿರುವುದರಲ್ಲಿ ಸಮರ್ಥವಾಗಿ ತೊಳಲಾಡಲಾರರು, ಕಷ್ಟಗಳನ್ನು ಏಕಾಂಗಿಯಾಗಿ ಎದುರಿಸಬೇಕು; ಅತ್ಯುತ್ತ ವೈರಾಗ್ಯ ಮೋಹಕ್ಕೆ ಬೀಳದೆ ಅಂತೆಯೇ ಅತಿ ಪಾಲಾಗಿ ಅಸ್ಪೃಶ್ಯವಾಗಬೇಕು. ಹಾಗಲ್ಲದೆ ಆ ಪ್ರಾಣಿಯು ತನ್ನ ಇತರ ಭೂತಗಣಗಳೊಡನೆ ಗೂಡಿ ಅತ್ಯಂತ ಬೆರೆತು ಗೃಹಸ್ಥ ಜೀವನವನ್ನು ಕಲಕಬಾರದು. ಯೌವನದ ವೈಯಕ್ತಿಕ ದರ್ಶನ ಇದು ಎಂಬ ವಿಚಾರವು ಅವರ ಹೃದಯವನ್ನು ಕಲುಷಿತಗೊಳಿಸಿಲ್ಲವೆಂಬ ಹೆಸರೇ ಬರೆಹದಿಂದ ಕೂಡಿರುವ ಅವರ ದಾಂಪತ್ಯ ಜೀವನವು ಸುಖಮಯವಾಗಿಲಾರದು. ಅಂತಹವರು ತಮ್ಮ ಕೈಹಿಡಿದವನ ಅಥವಾ ಹಿಡಿದವಳ ಜೀವನಕ್ಕೂ ತಮ್ಮ ಜೀವನಕ್ಕೂ ಸಮಸ್ಯೆಗಳನ್ನು ತಂದುಕೊಳ್ಳುತ್ತಾರೆ. ಆ ತನ್ನ ಪತಿಯು ಸಾಂಪ್ರದಾಯಿಕವಾಗಿ ಬಂದ ಪರಂಪರೆಗಳ ಬಗ್ಗೆ ಲಕ್ಷ್ಯವಿಟ್ಟು ಬಹು ತೀವ್ರಗಾಮಿಯಾಗಿ ಹೊಂದಿ ಮಾಡುತ್ತದಲ್ಲಿ ಸಲುವಾಗಿ ತೊಳಲುವ ಹೆಣ್ಣನ್ನು ಅದುನಕೊಳ್ಳಬೇಕೆನಿಸಿದಾಗ ಪರಿಣಾಮವೇನೆಂದರೆ ಅವರಿಬ್ಬರ ಬಲಾಬಲ ಮತ್ತು ಸಹವಾಗುತ್ತಾ — ಇವುಗಳ ಪರೀಕ್ಷೆಯೇ ಆಗಿದೆ, ಹಾಗೆ ತೊಳಲಾಡುವ ಜೀವಿಯು ಉತ್ಕಂಠಿತವಾಗಿ ಬಿಡುತ್ತ ಜರ್ಝರಿತವಾಗಲು ಅದೇ ಕಂಗೆಟ್ಟು ದಾರಿಗಾಣದೆ ಸಾಂಸಾರಿಕ ಬಲೆಯನ್ನು ತುಂಡರಿಸಿ ಮಾನಸಿಕ ಸ್ವಾತಂತ್ರ್ಯವೆಂಬ ದೈವಸದೃಶ ಹಕ್ಕನ್ನು ಪ್ರತಿಪಾದಿಸಲು ತೊಡಗಿ ತನ್ನ ಸ್ವಬಲವನ್ನು ಮೀರಿ ಮೀರಿ ಹೆಣಗಾಡಿದರೂ ಸಾಲದು ಹೇಳಬೇಕಾದ ಪ್ರಸಂಗದಲ್ಲಿ "ಅಂತಾಗುವುದಿಲ್ಲ" ಎಂಬ ಸಾಹಸವನ್ನು ಪ್ರದ

ಕೇಳುವ ಸತ್ಯಾನ್ವೇಷಿಯೂ ಇದ್ದಾನೆ.

ನನ್ನ ಶಾರೀರಿಕ ತಾಪಗಳು ನಿವಾರಣೆಯಾದನಂತರ ನಾನು ನನ್ನ ಕಾರ್ಯಕ್ಷೇತ್ರದ ಬಗ್ಗೆ ನಿರ್ಧರಿಸಿದೆನು. ಗುಡಿಗಳಲ್ಲಿ ಬೋಧಿಸಲಾಗುತ್ತಿದ್ದುದಕ್ಕನುಸಾರವಾಗಿ ಕ್ರೈಸ್ತಮತವನ್ನು ಅನುಸರಿಸಲು ನಿಶ್ಚಯಿಸಿದೆನು. ಅದರಲ್ಲಿ ಹೇಳಿದ ಸೂತ್ರಗಳನ್ನು ಜಾಗರೂಕತೆಯಿಂದ ಸಂಪೂರ್ಣವಾಗಿ ಪರಿಶೀಲಿಸಿದೆನು; ಅದರಿಂದ ನಾನು ಸಾಕ್ಷ್ಯಾಧಾರಕವಾಗಿ ತಿಳಿಯದೇ ಇದ್ದುದನ್ನು ನಂಬಿಕೊಂಡಿರುವೆನೆಂದು ಯಾರೂ ಹೇಳುವಂತಿರಲಿಲ್ಲ; ಮತ್ತು ನನ್ನ ವಿಜ್ಞಾನದ ವ್ಯಾಪ್ತಿಯು ಬಹು ಚಿಕ್ಕದಾದರೂ ಉಳಿದ ವಿಷಯಗಳ ಬಗೆ ನನ್ನ ಶ್ರದ್ಧೆಯು ನನ್ನಲ್ಲಿ ಬಲವಾಗಿ ಬೇರೂರಿತ್ತು. ನಾಲ್ಕು ಪ್ರಾಮುಖ್ಯವಾದ ಸಮಸ್ಯೆಗಳು ನನ್ನಿಂದ ಪರಿಹರಿಸಲ್ಪಡಲು ತ್ವರಿತಗೊಳಿಸುತ್ತಿದ್ದರ ಪ್ರಯುಕ್ತ ಅವುಗಳ ಬಗ್ಗೆ ದುಡಿಯಲು ಪ್ರಾರಂಭಿಸಿದೆನು. ವಿಶೇಷವಾಗಿ ಬೆಳೆಯುತ್ತಿರುವ (ಮಿತಿ ಹೀನ) ಭೌತಿಕ ಮತ್ತು ವೈಜ್ಞಾನಿಕ ಪರಾಮರ್ಶೆಯೊಡನೆ ಹಿಂದಿನ ಕಾಲದ ಧಾರ್ಮಿಕ ವಿಶ್ವಾಸವನ್ನು ಪ್ರತಿಭಟಿಸಿ ಈ ಸಮಸ್ಯೆಗಳನ್ನು ಎದುರಿಸುವವರು ಎಷ್ಟು ಜನರಿದ್ದಾರೆ? ಅಯ್ಯೋ, ಹಲವು ಕೆನ್ಯೂಟರಿಗೆ (King Canute) ಅಲೆಗಳು ಅವರ ಪಾದಗಳ ಮೇಲೆಯೇ ಉಕ್ಕಿ ಹರಿಯುತ್ತವೆ. ಹೀಗೂ ಈ ನಾಲ್ಕು ಸಮಸ್ಯೆಗಳಾವುವೆಂದರೆ:—

1) ಸತ್ತ ನಂತರ ವಿಧಿಸಲ್ಪಡುವ ಶಿಕ್ಷೆಯು ನಿತ್ಯತೆ; 2) ಇಷ್ಟು ಪಾಪತಾಪಗಳೊಂದೊಡಗೂಡಿ ಈ ಲೋಕವನ್ನು ಸೃಷ್ಟಿಸಿದ ದೇವರನ್ನು ಅನ್ವಯಿಸಿ ಹೇಳುವ "ಒಳ್ಳೆಯತನ", ಮತ್ತು "ಪ್ರೇಮ" ಇವುಗಳ ಅರ್ಥ; 3) ಕ್ರೈಸ್ತರ ಪ್ರಾಯಶ್ಚಿತ್ತ ವಿಧಿಯ ಗುಟ್ಟು ಮತ್ತು ಕ್ರೈಸ್ತನ ಮೂಲಕವಾಗಿ ಕಷ್ಟಗಳನ್ನು ಕೊಟ್ಟು ಮತ್ತು ಪಾಪಗಳ ಮೂಲಕವಾಗಿ ಉತ್ತಮ ಗುಣಗಳನ್ನು ಕಾಣಿಸುವ ದೇವರ "ನ್ಯಾಯಶೀಲತೆ" 4) ಬೈಬಲ್‌ಗೆ ಕನ್ನಡಿಯಾಗುವಂತೆ "ಸ್ಫೂರ್ತಿ" ಎಂಬುದರ ಅರ್ಥ ಮತ್ತು ಅದರಲ್ಲಿ ಕಾಣುವ ದೋಷತೆಗಳು ಮತ್ತು ಅನೈತಿಕವಾದ ವಿವರಣೆಗಳೊಡನೆ ಆ ಲೇಖಕನ ಪರಿಪೂರ್ಣತೆಯೊಂದೊಡಗೂಡ ನಿರ್ಣಯವನ್ನು ಸರಿಗೂಡಿಸುವುದು.

ಹಿಂದಕ್ಕೆ ತಿರುಗಿ ನೋಡಿದಾಗ ದೈವತ್ವವನ್ನು ಕುರಿತಾದ ಆಳವಾದ ಸಮಸ್ಯೆಗಳನ್ನು, ಕ್ರೈಸ್ತನ ದೇವತ್ವವನ್ನು, ದೇವರ ಅಸ್ತಿತ್ವವನ್ನು ಅತ್ಯದ್ಭುತ ಅನಂತತೆಯನ್ನು ಇನ್ನು ಪ್ರಶ್ನಿಸದಂತೆ ತೋರುವುದಿಲ್ಲ. ಭಯಂಕರವಾದ ಆ ಮೊದಲ ಘರ್ಷಣೆಯ ನಂತರ ಮತ್ತು ಕಠೋರವಾದ ಯಾತನೆಯ ಸುಳಿಯಲ್ಲಿ ಸಿಲುಕಿದ ಮೊದಲ ರಭಸವಾದನಂತರ ಈ ಧಾರ್ಮಿಕ ವಿವೇಚನೆಯು ಎಷ್ಟು ನಿಯಮಾನುಸಾರವಾಗಿತ್ತು ಮತ್ತು ಅದರ ಬೆಳವಣಿಗೆಯು ಎಷ್ಟು ಕ್ರಮಬದ್ಧವಾಗಿತ್ತು ಎಂಬುದನ್ನು ನಾನು ನೋಡದೇ ಇರಲಿಕ್ಕೆ ಸಾಧ್ಯವೇ ಇಲ್ಲ. ಜ್ಞಾನಕ್ಕೆ, ನೀತಿಗೆ

ಮತ್ತು ಮನಸ್ಸಿಗೆ ಇದಾವುದಕ್ಕೂ ಸಂಬಂಧವಿಲ್ಲದ ಹೃದಯಕ್ಕೆ ತಟ್ಟುವ ಮತ್ತು ಗುರುಗಳು ಹೇಳುವ ಸಿದ್ಧಾಂತಗಳಿಗೆ ಜನರು ಮೊದಲು ಬಾರಿಗೆ ಮತ್ತು ಸ್ವಾಭಾವಿಕವಾಗಿ ವಿರೋಧಿಸಬಹುದಾದುದರಿಂದ ನಾನು ಆ ವಿಷಯಗಳನ್ನು ಪರಿಶೀಲಿಸಿ ತಿಳಿಯಲು ತೊಡಗಿದ್ದೇನೆ. ನೈತಿಕವಾಗಿ ಸ್ವಾತಂತ್ರ್ಯವನ್ನು ಪಡೆಯಲು ನಾನು ಪಟ್ಟುಕಡೆಗೆಂಬಂತೆ ನಾಸ್ತಿಕವಾದವನ್ನು ಅವಲಂಬಿಸಿದೆನು, ಬಲಾತ್ಕಾರದಿಂದ ಪಡೆಯುವ ನ್ಯಾಯ, ಮತ್ತು ಅವಮಾನಕ್ಕೊಳಗಾಗಿ ದೊರೆಯುವ ಹಕ್ಕು ನನ್ನನ್ನು ಅದಕ್ಕೆ ಪ್ರೇರೇಪಿಸಿತು. ನೈತಿಕವಾಗಿ ನಾನು ಅನಿಂದ್ಯನಾಗಲೂ ಕರ್ತವ್ಯ ತತ್ಪರನಾಗಲೂ ಆತ್ಮಾಭಿಮಾನದಿಂದ ತುಂಬಿದ್ದ ಜೀವನ ನಡೆಯಲೂ ಮಾಡಿಯೂ ಆಗಿದ್ದೆನು. ಹೀಗಿದ್ದ ಪರಿಸ್ಥಿತಿಯಲ್ಲಿ ನನ್ನ ಮನಸ್ಸಿಗೆ ಸಂದೇಹ ಬರುತ್ತಿತ್ತು. ನಾನು ಭದ್ರವಾಗಿ ಕಟ್ಟಿದ ಗೃಹಸ್ಥ ಜೀವನದ ಆವರಣಕ್ಕೊಳಗಾದಾಗ ಮತ್ತು ಸಮಾಜ ಸೇವೆ ಮತ್ತು ಸ್ವಾತಂತ್ರ್ಯ ಮನೋಭಾವಕ್ಕೆ ಅವಕಾಶವಿಲ್ಲದಿದ್ದಾಗ ನಾನು ಕ್ರೈಸ್ತಮತದ ಮೇಲೆ ನನಗಿದ್ದ ಅಭಿಮಾನವನ್ನೆಲ್ಲ ಕಳೆದುಕೊಂಡೆನು, ನನ್ನ ವಿದ್ಯೆ, ನನ್ನ ಮಾತಿನ ಆದರ್ಶ, ನನ್ನ ಚಂಚಲ ಮನಸ್ಸು, ಮತ್ತು ನನ್ನಲ್ಲಿಯೇ ನನಗುಂಟಾದ ಒಂದು ಬಗೆಯ ಅಪನಂಬಿಕೆಗಳೆಂಬ ಬೇಲಿಯು ನನ್ನನ್ನು ಬಾಹ್ಯ ಜಗತ್ತಿನ ದುಷ್ಪ್ರೇರಣೆಗಳಿಂದ ತಡೆದಿಟ್ಟಿತು, ಅವಹೇಳನಕ್ಕೊಳಗಾದ ಆತ್ಮದಲ್ಲಿ ಬೆಂದು ಕುದಿಯುತ್ತಿದ್ದ ಉದ್ವೇಗವು ನನ್ನನ್ನು ಮತ ವಿಚಾರದಲ್ಲಿ ಜೀವನ ಪ್ರತಿಗಾಮಿಯಂತೆಯೂ ಕಡೆಗೆ ದೇವರನ್ನೇ ನಂಬದ ನಾಸ್ತಿಕನನ್ನಾಗಿಯೂ ಮಾಡಿತು. ಇದನ್ನು ಈ ಬರೆಹದ ಮುನ್ನುಡಿಯಲ್ಲೇ ಒತ್ತಿ ಹೇಳುತ್ತಿರುವೆನು; ಏಕೆಂದರೆ ನಾಸ್ತಿಕರು ಅನೈತಿಕವಾದುದನ್ನು ಕೈಗೊಳ್ಳುವ ಇಚ್ಛೆಯಿಂದ ಮತ್ತು ಕೆಟ್ಟದ್ದನ್ನು ಮಾಡಬಹುದೆಂಬ ಪ್ರವೃತ್ತಿಯಿಂದ ಉಂಟಾದುದೆಂದು ಭಾವಿಸಿ ಆ ನಾಸ್ತಿಕವಾದವು ಹುಟ್ಟುವುದನ್ನು ಅದಕ್ಕೆ ವಿರೋಧವಾಗಿ ಕೂಗೆಬ್ಬಿಸಿದ ಮಾತ್ರಕ್ಕೆ ನಿಲ್ಲಿಸಲಾಗುವುದಿಲ್ಲ. ಯಾವ ಧಾರ್ಮಿಕವಾದವು ಇಂದಿನ ಭಿನ್ನಾಭಿಪ್ರಾಯಗಳನ್ನು ಎದುರಿಸಬೇಕೋ ಆ ವಾದವು ನಾಸ್ತಿಕತೆಯ ಕಲ್ಪನೆಯ ಉತ್ಪತ್ತಿ ಅಲ್ಲವಲ್ಲ; ಅದರ ಬದಲಾಗಿ ಅದು ಪ್ರಜ್ಞಾಪೂರ್ವಕವಾದ ವಿದ್ಯಾವಂತರ ಮತ್ತು ಮೇಧಾವಿಗಳ ವಿಚಾರಶೀಲ ಅವಿಶ್ವಾಸವಾಗಿದೆ. ಆದುದರಿಂದ ಅತ್ಯಂತ ಮಹತ್ವದ ದೈವಿಕ ತತ್ವಗಳಿಂದಲೂ ಭವ್ಯವಾದ ತತ್ವಶಾಸ್ತ್ರದ ಪ್ರಮಾಣಗಳಿಂದಲೂ ತನ್ನ ವಿರೋಧಿಯಂತೆ ಇದ್ದ ಆ ನಾಸ್ತಿಕತೆಯನ್ನು ಪ್ರತಿಭಟಿಸದಿದ್ದರೆ ಧಾರ್ಮಿಕವಾದವು ನಿಷ್ಫಲವಾಗಿ ಹೃದಯ ಹಾಗೂ ದೈವಭಕ್ತಿಯಿಂದ ಕೂಡಿದ ಎಲ್ಲ ಜನಾಂಗದ ಮೇಲೆ ಬೀರಿದ ಅದರ ಪ್ರಭಾವವನ್ನು ಕಳೆದುಕೊಳ್ಳುತ್ತದೆ.

ಅಧ್ಯಾಯ ೨೫.
ಸಂದೇಹದ ಬಿರುಗಾಳಿ!

ಮೇಲೆ ಬಾಹ್ಯವಾದ ಮತ್ತು "ಬ್ರಾಡ್ ಚರ್ಚ್" ಸಂಸ್ಥೆಯಿಂದ ಪ್ರಕಟವಾದ ಪುಸ್ತಕಗಳೊಡನೆ ಸಾಂಪ್ರದಾಯಿಕವಾದ ತತ್ವವಿಚಾರಗಳನ್ನು ಕುರಿತಾಗಿ ಓದುವುದರಲ್ಲಿಯೇ ನನ್ನ ಸಮಯದ ಬಹುಭಾಗವು ಕಳೆಯುತ್ತ, ಅಂಕಲ್ ಚಿತ್ತರಿನ ಹಿಂದಿನ ವ್ಯವಸಾಯ ಕೇಂದ್ರವಾದ ಮತ್ತು ಹೆಚ್ಚೇನೂ ಜನಸಂಖ್ಯೆಯಿಲ್ಲದ ಸಿಬ್ಸೀ (Sibsey) ಗ್ರಾಮಕ್ಕೆ ನಾವು ವರ್ಗವಾದ ಮೇಲೆ ನನಗೆ ಇನ್ನೂ ಹೆಚ್ಚು ಬಿಡುವಿತ್ತು. ನಾನು ರಾಬರ್ಟ್ಸನ್, ಸ್ಟಾಪ್‌ಫರ್ಡ್, ಬ್ರೂಕ್, ಸ್ಟ್ಯಾನ್ಲಿ, ಗ್ರೀನ್, ಮ್ಯಾಥ್ಯೂ ಆರ್ನಾಲ್ಡ್, ಲಿಡ್ಡನ್, ಮ್ಯಾನ್ಸೆಲ್ ಮತ್ತು ಹಲವರ ಗ್ರಂಥಗಳನ್ನು ಓದಿದಾಗ ನನ್ನ ನಾಸ್ತಿಕತೆಯು ಇನ್ನೂ ಹೆಚ್ಚು ಆಳಕ್ಕೆ ಬೇರೂರಿ ಬಿಟ್ಟಿತು. "ಬ್ರಾಡ್ ಚರ್ಚ್" ವಾಗ್ಮಿಗಳು ಸಮಸ್ಯೆಗಳನ್ನು ಪರಿಹರಿಸುವುದರ ಬದಲಾಗಿ ಅವು ಸಂದಿಗ್ಧ ವಿಷಯಗಳನ್ನು ವಿವರಿಸದೆ ಬಹು ಜಾಣತನದಿಂದ ಅವನ್ನೆಲ್ಲ ಬಿಟ್ಟು ಒಂದೇ ಬಗೆಯ ನಿರೂಪಣೆಯಲ್ಲಿ ಅದು ನಿರತವಾಗಿದೆ. ಇಲ್ಲಿ ಇರುತಕ್ಕ ಸಮಸ್ಯೆಯೇನೆಂದರೆ ಸರ್ವೋತ್ತಮನಾದ ದೇವನು ಇರುವನು ಎಂದಾದರೆ ತಾನು ಸೃಷ್ಟಿಸಿದ ಮಾನವ ಬಹು ಸಂಖ್ಯೆಯ ಜನವು ನಿರಂತರವೂ ದುಃಖ ದುರಂತಗಳಿಂದ ಸೊರಗಿ ಕೊರಗುವರೆಂಬುದನ್ನು ಮುಂಚೆಯೇ ತಿಳಿದೂ ಸಹ ಅವನು ಈ ಮಾನವ ವರ್ಗವನ್ನು ಹೇಗೆ ಸೃಷ್ಟಿಸಬಲ್ಲವನಾದನು? ಸರ್ವನ್ಯಾಯವಾದಿಯಾದ ದೇವನು ಇರುವನೆಂದಾದರೆ ಆ ಮಾನವವರ್ಗವು ತಾವಾಗಿಯೇ ಆರಿಸಿಕೊಳ್ಳದ ಮತ್ತು ತಮಗೆ ಬೇಡವಾದ ಶಾಶ್ವತ ಜೀವವನ್ನು ತಮಗೆ ತಿಳಿಯದೆಯೇ ಹೊತ್ತುಕೊಂಡು ಬಂದಿರುವಾಗ ಅಂಥ ನಿರಪರಾಧಿಗಳನ್ನು ಶಾಪಗಳಿಂದ ಅವನಾದರೋ ಏಕೆ ದಂಡಿಸಬೇಕು? ಪ್ರಾಮಾಣಿಕನೆಂದೆನ್ನಲಾದ ದೇವನು ನಿರಂತರವೂ ಹಿಳ್ಳಿಯದನ್ನು ಇಟ್ಟಿರುವಂತೆ ಕಟ್ಟಿದನ್ನು, ಕ್ರೈಸ್ತನ ಸ್ವರ್ಗದಲ್ಲಿ ನಿತ್ಯವೂ ಸೈತಾನ ಪ್ರಭಾವವೂ ಲೋಕದಲ್ಲಿ ಪಾಪಗಳೂ ಇರುವಂತೆಯೇಕೆ ವಿಧಿಸಿದನು? ಇವೆಲ್ಲ ರಹಸ್ಯ ವಿಚಾರಗಳಿಗಿಂತ ಹೀನವಾದುದು; ಅಂತರಂಗ ಅಭಿಮಾನ, ಅಕ್ರಮ ಮತ್ತು ದುಃಸ್ಥಿತಿಗಳಿಂದ ಬೆರೆದ ದೇವನು ಹೇಗೆ ಉತ್ತಮನಾಗಬಲ್ಲನೆಂಬುದೇ ನನ್ನ ಸಂದೇಹವಾಗಿದೆ. ದೇವನು ಜಗತ್ತಿನ ಚಿಂತೆ, ಹಾನಿ, ಕಷ್ಟಗಳ ಕಡೆಗೆ ಕಣ್ಣೆತ್ತಿ ನೋಡದೆ ಹೇಗೆ ತಟಸ್ಥನಾಗಿರಬಲ್ಲನು ಎಂಬ ಸಂದೇಹವೂ ಬಾಧಿಸುತ್ತದೆ. ಲೋಕದ ಕಷ್ಟನಷ್ಟಗಳ ಕಡೆಗೆ ಗಮನವಿಡದ ಕ್ರೂರಿಯು, ಅಸಮಾ ಅಪಾಯಗಳನ್ನು ತಡೆದಿರಲ-

ಲಸಮರ್ಥನಾದ ದುರ್ಬಲನೂ ಆಗಿ ಸೃಷ್ಟಿಕರ್ತನಿರುವನೆಂಬುದನ್ನು ನಂಬಲಿಕ್ಕೆ ಅತಿ ಪ್ರಯಾಸವಾಗಿದೆ. ಆ ಹಳೆ ಸಮಸ್ಯೆಯು ನನ್ನನ್ನು ಆಗಿಂದಾಗ್ಯೆ ಕಾಡುತ್ತಿತ್ತು, "ಲೋಕದ ಕೆಟ್ಟದನ್ನೆಲ್ಲ ದೇವನಿಂದ ಕಿತ್ತು ಹಾಕಲಿಕ್ಕೆ ಸಾಧ್ಯವಿದ್ದರೂ ಅವನು ಅಂತೆಸಗದೆ ಮೌನದಲ್ಲಿ ಕೂತಿ ಕೊಂಡರೆ ಅವನು ಒಳ್ಳೆಯವನಾಗಲಾರನು. ಕೆಡುಕುಗಳನ್ನು ತಡೆಯಲು ಅವನು ಇಚ್ಛಿಸಿದರೂ ಅವನಿಂದ ಹಾಗೆ ಮಾಡಲು ಸಾಧ್ಯವಿಲ್ಲವಾದರೆ ಅವನು ಸರ್ವಶಕ್ತನಾದ ಪರಮಾತ್ಮನಲ್ಲ"! ಹೀಗೆಯೋ ಚಿಂತಿಸುತ್ತಾ ಆ ಪ್ರಶ್ನೆಗಳಿಗೆ ಉತ್ತರವೇನೆಂದು ತಡಕರಿಯುತ್ತಾ, ಇರುತ್ತೇನೆ. ಈ ವಿಚಾರವಾಗಿ ಸ್ವಲ್ಪವಾದರೂ ಸಹಾಯ ದೊರೆತೀತೋ ಎಂದು ಅನೇಕರ ಗ್ರಂಥಗಳನ್ನೆಲ್ಲ ತಿರುವಿದೆನು. ಆದರೂ ನನಗೆ ಬೆಳಕು ತೋರದಾಯಿತು. ದೇವರ ಅಸ್ತಿತ್ವವನ್ನು ಕುರಿತಾಗಿ ಯಾವೊಂದು ಸಂಶಯವೂ ನನ್ನ ಮನಸ್ಸಿಗೆ ಆವಾಗ ಉದಿಸಿರಲಿಲ್ಲ.

ಶ್ರೀ 'ಡಿ' ಇವನು ನನಗೆ ಪತ್ರಗಳನ್ನು ಬರೆಯುತ್ತಲೇ ಇದ್ದನು. ಅವನ ಆತ್ಮಸಂತೃಪ್ತಿಗೆ ಒಯ್ದ ಆ ದಾರಿಗಾಗಿಯೇ ನನ್ನನ್ನೂ ಒಯ್ಯಲು ಅವನು ಯತ್ನಿಸಿದನು. ಹೇಗೂ ಅವನು ಈ ಸಮಸ್ಯೆಯನ್ನು ತನಗಾಗಿ ಹೇಗೆ ಪರಿಹರಿಸಿಕೊಂಡನೆಂಬುದಾಗಿ ತೋರಿಸುವ ಈ ಎರಡು ವಾಕ್ಯವೃಂದಗಳನ್ನು ಮಾತ್ರ ಇಲ್ಲಿ ಕೊಡುತ್ತಿದ್ದೇನೆ. ನನ್ನ ಅಭಿಪ್ರಾಯದಲ್ಲಿ ನಾನು ತಪ್ಪಿದ್ದೆನೆಂದು ಅವನು ಭಾವಿಸಿದ್ದಂತೆ ತೋರುವುದು:-

"ದೇವರನ್ನು ದು:ಖಕ್ಕೀಡು ಮಾಡುವ ಪಾಪ ಮತ್ತು ಅಪರಾಧ - ಇವೆರಡರಲ್ಲಿ ಸರ್ವ ಸಮರ್ಪಿತನಾದ ವ್ಯಕ್ತಿಯು ನಿರ್ಮಾಣಕ್ಕೆ ಪಾಪವೆಂಬುದರ ಅವಶ್ಯಕತೆಯುಳ್ಳದ್ದೇ ಇದೆಯೆಂಬುದು ನನ್ನ ಊಹೆಯಾಗಿದೆ. ವಿದ್ಯೆಯು ಹೇಗೋ ಹಾಗೆಯೇ ಒಂದು ಕಾರ್ಯಸಾಧನೆಗೆ ಪ್ರಯತ್ನಿಸುವಾಗ ಮಾನವನಿಗೆ ಅಹಿತ, ಅಧರ್ಮೀಯ ವಿಚಾರವೂ ಸಿಕ್ಕಬೇಕಾಗುತ್ತದೆ. ಡಿಗ್ಬಿಯು (Ann Digby) ಮೊದಲ ಬಾರಿಗೆ ಕಟ್ಟುವ ಅವನ ಕಾಗದದ ಮನೆ, ಅಥವಾ ಮೊಳದ ಚಿಕ್ಕ ಗುಡಿಸಲು ಬಿದ್ದು ಹೋದಾಗ ಅವನು ಹೇಗೆ ನಿರಾಶನಾಗಲಾರನೋ ಅದೇ ರೀತಿ ಲೋಕದ ಎಲ್ಲ ಪಾಪಗಳು ಮತ್ತು ಯಾತನೆಗಳು ದೇವರನ್ನು ಬೇಸರಕ್ಕೊಳಪಡಿಸಲಾರವು. ಎಲ್ಲರೂ ಅಪೇಕ್ಷಿಸುವ ನಿಷ್ಕಲ್ಮಷ ವ್ಯಕ್ತಿಯಲ್ಲಿರುವನೋ ಅವನ ಕಡೆಗೆ ದೇವರು ನೋಡುತ್ತಾನೆ.

"ಶ್ರೀಮತಿ ಬಸೆಂಟ್, ಅನ್ನೀ, ಹಾಗಲ್ಲ. ದೇವರ ಗುಟ್ಟನ್ನು ಅರಿಯುವ ನನ್ನ ಸಾಹಸವನ್ನು ಬಿಟ್ಟುಬಿಡಲಿಕ್ಕೆ ಅಥವಾ ಇತರರು ಹೇಳುವುದೇ ಸರಿಯೆಂದು ಒಪ್ಪಲಿಕ್ಕೆ ನನ್ನ ಮನಸ್ಸು ಇಚ್ಛಿಸದು. ಇದು ನನ್ನ ದೊಡ್ಡ ಯೋಗ್ಯತೆಯೆಂದು ಹೇಳಲಾರೆನು

ಆದರೆ ದೈವತ್ವದ ಅಪಾರ ಶಕ್ತಿಯಲ್ಲಿ ಮತ್ತು ಜಗತ್ತಿನ ನೈತಿಕ ಪಾವಿತ್ರ್ಯದಲ್ಲಿ ನನಗೆ ಅಂತಹ ವಿಶ್ವಾಸವಿದೆ, ನಾನು ಎರಡು ರಾತ್ರಿಗಳಿಗೆ ಹಿಂದೆ ಆರು ಕಳ್ಳರು ನನ್ನ ಮಿತ್ರರಾಗಿದ್ದರೆಂಬುದಾಗಿ ನಾನು ಕಂಡ ಭಯಂಕರ ಸ್ವಪ್ನವು ಎಷ್ಟರ ಮಟ್ಟಿಗೆ ನಿಜವಲ್ಲವೋ ಅದೇ ರೀತಿಯಲ್ಲಿ ಜನಪ್ರಿಯವಾದ ತತ್ವಶಾಸ್ತ್ರದಲ್ಲಿರುವ ಸತ್ಯ ನಿರೂಪಣೆಯಲ್ಲಿ ನನಗೆ ಯಾವ ಸಂಶಯವೂ ಇಲ್ಲವೆಂಬುದು ಖಚಿತವಾಗಿದೆ, ಅಂದಿನಿಂದ ಸತ್ಯದ ಎಡೆಯಲ್ಲಿ ನಾನು ಕಂಡ ಒಂದಿಷ್ಟು ಸತ್ಯದಲ್ಲಿರುವ ಪ್ರತಿಷ್ಠೆ ಮತ್ತು ಸ್ವತಂತ್ರ ಮನೋಭಾವದಿಂದ ನಾನು ಸಂತೋಷಗೊಂಡು ಕಾಣುತ್ತಾ ಇರುತ್ತೇನೆ, ಬಿಷಪ್ ಇರ್ವಿಂಗ್ ಇವರು ಸಂಪಾದಿಸಿದ Present-Day Papers - ಇದು ವಿಶೇಷ ಸಹಾಯಕವಾಗಿದೆಯೆಂಬುದನ್ನು ಕೇಳಿದ್ದೇನೆ, ಅವುಗಳಲ್ಲಿ ಹಲವು ಸಂದೇಹಗ್ರಸ್ತರಿಗೆ ಬರೆದುವುಗಳು, ನಾನು ಅವುಗಳನ್ನು ತರಿಸಿ ಓದಲು ಇಚ್ಛಿಸುತ್ತೇನೆ, ಹೇಗೂ ಸತ್ಯವು (ಬಹು ಸ್ವಲ್ಪ ಮಾತ್ರ ನಾವು ಅರಿಯಲಿಚ್ಛಿಸಿದರೂ) ಅದು ನಿನ್ನಲ್ಲಿ ಬೆಳೆಯುವುದು, ಸ್ವತಂತ್ರವಾಗಿ ಇರುವುದು; ನಿನ್ನ ದಾರಿಗೆ ಬೆಳಕನ್ನು ತೋರಿಸುವುದು, ಮತ್ತು ನಿನ್ನ ದುರಂತಕಾರಕವಾದ ಕಷ್ಟಗಳನ್ನು ಸಂಶಯಗಳನ್ನು ಅನಂತ ಕಾಲದಲ್ಲಿಯೇ ದೂರಮಾಡಿಸುವುದೆಂದು ಖಚಿತವಾಗಿಯೂ ಹೇಳಬಲ್ಲೆನು, ಎಂಥಾ ಸಂದರ್ಭದಲ್ಲೂ ನೀನು ಓದುವುದನ್ನು ಬಿಡಬೇಕೆಂದು ಹೇಳುವೆನು, ಆ ಹವ್ಯಾಸವನ್ನು ನಿನ್ನಿಂದ ಬಿಡಲಾಗುವುದಿಲ್ಲವೆಂಬುದನ್ನು ನಾನೂ ಒಪ್ಪುತ್ತೇನೆ, ಧರ್ಮಗ್ರಂಥಗಳ ಓದುವಿಕೆಯೂ ಅಂತಹ ಸಹಾಯಕವೂ ಮನಸ್ಸಿಗೆ ಶಾಂತಿಯನ್ನೀಯುವಂತದ್ದೂ ಆಗಿದೆ, ಮಾನಸಿಕ ಸಂದೇಹಕ್ಕೆ ತಲೂ ಗಹನವಾದ ಹೋರಾಟವು ಇದ್ದೇ ಇದೆ, ನಿನ್ನ ಬರವಣಿಗೆಯ ಕಡೇ ಎರಡು ಪುಟಗಳಲ್ಲಿ ನೀನು ಕೊಟ್ಟಿರುವ ಉದ್ಧರಿಸಿದ್ದ ನಿನ್ನ ಚಿಂತೆಯ ಬಗ್ಗೆ ನಾನು ಎಚ್ಚೆತ್ತಿದ್ದೇನೆ, ನಾನು ಅದನ್ನು ಓದಿದಾಗ ಇನ್ನಷ್ಟು ದುಃಖಿತನಾದೆನು, ಅಷ್ಟೇ ಅಲ್ಲ; ನನ್ನ ಜೀವನವು ಕಂಗೆಟ್ಟ ಕತ್ತಲಲ್ಲಿ ತೊಳಲುತ್ತ ಇದ್ದಾಗ ಇನ್ನು ನನಗೆ ಬೆಳಕನ್ನು ಕಾಣುವ ದಿನಗಳಿಲ್ಲವೆಂಬುದಾಗಿ ನಾನು ಚಿಂತಿಸಿದ್ದ ದಿನಗಳ ನೆನಪಾಯಿತು, ದೇವರ ದಯೆಯಿಂದ ಸುದಿನಗಳು ಬೆಂದೇ ಬಂದುವು; ಅಂತಾಗದೆ ಹೋಗಿದ್ದರೆ ನಾನು ಹೆಚ್ಚು ಕಾಲ ಬದುಕುತ್ತಲೇ ಇರಲಿಲ್ಲ! ಆದರೆ ನಿನಗೆ ದುರ್ದೆಸೆಯನ್ನು ಸಹಿಸಲು ಶಕ್ತಿಯಿದ್ದೇ ಇದೆ, ಬಹು ಅಪಾಯಕರವಾದ ದಿನಗಳು ಕಳೆದು ಹೋದುವೆಂದು ಊಹಿಸುತ್ತೇನೆ, ದುಃಸ್ವಪ್ನಗಳನ್ನು ಕಾಯಿಸದಾಗ ಸೊರಗಿಹಕ್ಕಿ ನಿತ್ಯ ಖಚಿತವಾದ ರಸವನ್ನು ಉಳಿಸುವುದಲ್ಲದೆ ಪ್ರಸ್ತುತವನ್ನಲ್ಲ ಎಂಬುದನ್ನು ನೀನು ತಿಳಿಯಬೇಕು, ಈ ಮಹತ್ತಾದ ವಿಷಯವನ್ನು ಕುರಿತು ನಿನಗೆ ಸಹಾಯಕವಾಗುವಂತೆ ಇನ್ನೂ ಬರೆಯಲಿಚ್ಛಿಸುವೆನಾದರೂ ನಾನು ನನ್ನ ದೊಡ್ಡ ಕಿಟಕಿಯ ಬದಿಯಲ್ಲಿ

ಕಾಣಿಸುತ್ತ ಕತ್ತಲಿನ ಮೇಲೆ ಬೀಳುವ ಛಾಯೆ, ಎಲೆಗಳ ಮೇಲೆ ಬೀಳುವ ಸೂರ್ಯಕಿರಣ ಮತ್ತು ಬಿರುಗಾಳಿಯು ಹಾರಿಸುವ ಉಕ್ಕಿಸುವ ಗುಲಾಬಿ ಹೂ ಮೊಗ್ಗಿನ ಮೃದುವಾದ ಕಾಂತಿಯನ್ನು ನೋಡುತ್ತಾ, ಎಲ್ಲವೂ ನಿರುಪಯೋಗತ್ವದಿಂದ ನಂಬಿದ್ದೇನೆ, "ದೇವರನ್ನು ನಂಬು; ಅವನಿಗಾಗಿ ತಾಳ್ಮೆಯಿಂದ ಕಾಯುತ್ತಿರು" ಎಂಬುದು ಬಲ್ಲವರ ಮಾತಾಗಿದೆ. ಆದರೆ ಕಲ್ಲು, ಎಲೆಗಳು, ಹೂವುಗಳು ಮತ್ತು ರವಿಕಿರಣಗಳನ್ನು ಆ ದೇವರೇ ಮಾಡಿದನು, ನಮ್ಮ ಮನಸ್ಸಿನ ತಂದೆಯೇ ಅವನು! ಇಂದಿಗೂ ಅಂದಿನ ಆ ಕೆಲವು ಬಲ್ಲವರ ನುಡಿಗಳು ಪ್ರಬಲ ತಾತ್ವಿಕವಾದವಾಗಿ ಅಗಾಧವಾಗಿ ಉಳಿದಿವೆ."

"ಬ್ರಾಡ್ ಚರ್ಚ್" ಗುಡಿಯ ಮತಬೋಧಕರಲ್ಲಿ ಕಂಡದಕ್ಕಿಂತ ಹೆಚ್ಚಾಗಿ ನಾನು ಗ್ರೇ (Grey) ಇವನಂಥ ಆಸ್ತಿಕವಾದಿಗಳಲ್ಲೂ ಮತ್ತು ಆರ್ನಾಲ್ಡ್ ಇವನಂಥ ಅನಿಶ್ಚಿತವಾದಿಯಲ್ಲೂ ಕಂಡಿದ್ದೇನೆ. ಆದರೆ ಇವೆಲ್ಲ ನಾನು ಹಿಂದೆ ನಂಬಿದ ಆಸ್ತಿಕವಾದವನ್ನು ಪುನಃ ಅವಲಂಬಿಸಲು ಇನ್ನಷ್ಟು ಅಸಾಧ್ಯವಾಗುವಂತೆ ಮಾಡುತ್ತಲೇ ಇತ್ತು. ಗುಡಿ ಪ್ರಾರ್ಥನೆಗಳು (Church services) ನನಗೆ ಪ್ರತಿವಾರದ ಸಂದು ಹಿಂಸೆಯಂತಾದವು; ಆದರೆ ಅಂತಾಗುತ್ತಾ ಇದ್ದರೂ ನಾನೊಬ್ಬ ಸಂಶಯಗ್ರಸ್ತನಾಗಿಯೇ ಇದ್ದೇನಾದುದರಿಂದ ಆ ಸಂದೇಹವನ್ನೆಲ್ಲ ನನ್ನಲ್ಲಿಯೇ ಇಟ್ಟುಕೊಂಡಿದ್ದೆನು, ನನ್ನ ಹಳೆಯ ಸಂಕಲ್ಪಗಳೆಲ್ಲ ಇನ್ನು ತೊಲಗಬಹುದೆಂದು ನಾನು ನಂಬಿದ್ದೆನು. ಹೀಗೆ ನಾನೇ ಅನಿಶ್ಚಿತ ಸ್ಥಿತಿಯಲ್ಲಿದ್ದಾಗ ಇತರರ ನಂಬಿಕೆಗಳನ್ನು ಕದಡಿಸುವ ಅಧಿಕಾರವು ನನಗೆ ಇರಲಿಲ್ಲ. ಬೇರೆಯವರು ಸಂದೇಹಗ್ರಸ್ತರಾಗಿದ್ದ ಅನಂತರ ಅವರು ಆಸ್ತಿಕ್ಯವನ್ನು ಮರಳಿ ಪಡೆದರು. ಸಂದೇಹಗ್ರಸ್ತನಿಗಾದರೋ ಮೌನವೇ ಕರ್ತವ್ಯವಾಗಿರಬೇಕು. ಕಂಗೆಟ್ಟವರು ತಮ್ಮ ಸಂಕಲ್ಪಗಳನ್ನು ತಮ್ಮಲ್ಲಿಯೇ ಇಟ್ಟುಕೊಳ್ಳುವುದು ಒಳ್ಳೆಯದಾಗಿದೆ.

ಹೀಗೆ ಮಾನಸಿಕ ಗೊಂದಲದಲ್ಲಿ ಸಿಲುಕಿ ಕಾತರಗೊಂಡಿದ್ದ ಆ ಬಳಲಿದ ತಿಂಗಳುಗಳಲ್ಲಿ ನಾನು ದೇವಸ್ಥಾನದ ಕೆಲಸ, ಖಾಯಿಲೆ ಬಿದ್ದವರ ಶುಶ್ರೂಷೆ, ಮತ್ತು ಬಡಜನರ ಕಷ್ಟ ಪರಿಹಾರದ ಬಗೆ ದುಡಿಯುತ್ತಾ ಸಂತೋಷ ಪಡುತ್ತಿದೆನು, ವ್ಯವಸಾಯ, ಹಣಕಾಸು ಮತ್ತು ಶಾಲೆಯ ವಿಷಯವಾಗಿ ನಾನು ಕಲಿತ ಕೆಲವು ವಿಷಯಗಳು ಅನಂತರದ ವರ್ಷಗಳಲ್ಲಿ ನನಗೆ ಬೇರೆಯಿಂದ ಜನಕ್ಕೆ ಬೋಧಿಸಲು

ಸಹಾಯಕವಾಯಿತು. ಜೋನ್ಸ್ ಟೈರ್ ಇವನ ಉತ್ಸಾಹ ಮತ್ತು ಶ್ರದ್ಧೆಯ ಫಲವಾಗಿ ಪ್ರಾರಂಭವಾದ ಈ ಕೂಲಿಗಾರರ ಚಳುವಳಿಯನ್ನು ಸುತ್ತಿನ ಗ್ರಾಮಗಳಲ್ಲಿ ಮಾಡಲಾರಂಭವಾದಾಗ ಬಡಜನರ ಪರಿಸ್ಥಿತಿಯನ್ನು ತಿಳಿದಿದ್ದ ನಾನು ಅವರ ಕೆಲಸ ಮತ್ತು ಹಕ್ಕನ್ನು ಮನ್ನಿಸಿ ನನ್ನ ಸರ್ವ ಸಹಕಾರವನ್ನೂ ಅವರಿಗೆ ನೀಡಲನುವಾದೆನು. ಹಿಂದು ಗುಡಿಸಲಿನಲ್ಲಿರುವ ನಾಲ್ಕು ಮಂದಿಯ ಜನವು ಹಿಂದೇ ಕೋಣೆಯಲ್ಲಿ ಮಲಗುವುದನ್ನು ಕಂಡುಹಿಡಿದೆನು. ಮುದುಕ, ಅವನ ಹೆಂಡತಿ, ಅವಿವಾಹಿತೆಯಾದ ಅಜ್ಜಿ, ಅವಿವಾಹಿತೆ ತಾಯಿ, ಚಿಕ್ಕ ಮಗು ಮತ್ತು ಮೂರು ಗಂಡಸರು ಕೂಡಿ ಒಟ್ಟಾಗಿ ಎಂಟು ಜನರು ಇಕ್ಕಟ್ಟಾದ ಮತ್ತು ಗಾಳಿ ಬೆಳಕು ಹೋಗದ ಕೋಣೆಯಲ್ಲಿ ತುಂಬಿಕೊಳ್ಳುತ್ತಿದ್ದರು. ಇತರ ಮನೆಗಳೂ ಕೇವಲ ಗುಡಿಸಲುಗಳಾಗಿ ಮಾತ್ರ ಉಳಿದವು ಹೋಗಿ ಅವುಗಳಗಿಂದ ಮಳೆ ಬಿದ್ದು ಸಂಧಿವಾತ ಮತ್ತು ಚಳಿಜ್ವರದಿಂದ ಕೂಡಿದ ಜನರ ಆಶ್ರಯಸ್ಥಾನವಾಗಿತ್ತು. ಬಡಜನರ ಈ ದಾರುಣ ಪರಿಸ್ಥಿತಿಯನ್ನು ನಿವಾರಿಸುವ ಬಗ್ಗೆ ನಾನು ಪ್ರಯತ್ನಿಸಿದೆ ಮತ್ತೇನನ್ನು ಮಾಡಲಿ? ಆದರೆ ಹೊಲದಲ್ಲಿ ದುಡಿಯುವವರ ಸಂಘವನ್ನು ರೈತರು ತೀವ್ರವಾಗಿ ಖಂಡಿಸಿದರು, ಅಲ್ಲದೆ ಆ ಸಂಘಕ್ಕೆ ಸೇರಿದವರಿಗೆ ಅವರು ಕೆಲಸವನ್ನೇ ಕೊಡದೆ ಇರುತ್ತಿದ್ದರು. ಅಂದಿನಿಂದ ನಿರ್ಧಾರನವು ಎಲ್ಲರಿಗೂ ಪಾಠವನ್ನು ಕಲಿಸುತ್ತಿತ್ತು. ಕೂಲಿಗಾರರ ಸಂಘದ ಸಭೆಗೆ ಹೋಗುವವರದ್ದು ಪಾಪಕಾರ್ಯವನ್ನು ಮಾಡಿದ ಮತ್ತು ಮನೆಗೆ ಹಿಂದಿರುಗುವಾಗ ಅದರ ವಿಷಯವಾಗಿ ಮಾತಾಡುವ ಮತ್ತೊಂದು "ಪಾಪ"ವನ್ನು ಮಾಡಿದ ಹರ್ಬ ವಿವಾಹಿತನೂ ಎರಡು ಮಕ್ಕಳಿಂದ ಕೂಡಿದ್ದವನೂ ಆದ ಹರ್ಬ ಯುವಕನಾಗಿದ್ದನು, ಅವನನ್ನು ಆ ಜಿಲ್ಲೆಯ ಯಾವನೊಬ್ಬ ರೈತನೂ ಕೆಲಸಕ್ಕೆ ಸೇರಿಸುತ್ತಿರಲಿಲ್ಲ, ಅವನು ದುಡಿಮೆಗೆಂದು ನಿರರ್ಥಕವಾಗಿ ಅಲೆದಾಡಿದನು, ಕಡೆಗೆ ತಲೆಗೆಟ್ಟಂತಾಗಿ ನಿಶ್ಶಕ್ತನಾಗಿ ಪ್ರಾರಂಭಿಸಿದನು. ಹಿಂದೇ ಹಿಂದು ಕೋಣೆಯೂ ಮತ್ತು ಅಡಿಗೆ ಮನೆಯು ಇಕ್ಕಟ್ಟಾದ ಹಿಂದು ಜಗಲಿಯಿಂದಲೂ ಕೂಡಿದ ಅವನ ಗುಡಿಸಲಿಗೆ ಹೋದಾಗ ಜ್ವರದಿಂದ ನರಳುವ ಅವನ ಹೆಂಡತಿಯನ್ನೂ ಅವನ ತೋಳಿನಲ್ಲಿ ಚಳಿಜ್ವರದಿಂದ ಕಂಗಾಲಾದ ಮಗುವೂ ಮತ್ತು ಹಾಸಿಗೆಯಲ್ಲಿ ಸತ್ತು ಬಿದ್ದಿದ್ದ ಅವಳ ಎರಡನೇ ಮಗುವನ್ನೂ ಕಂಡೆನು. ನಾನು ಮೇಲೆ ನೀಡಿದ ಪ್ರಶ್ನೆಗಳಿಗೆ ಅವಳು ತನ್ನ ಪತಿಗೆ ಉದ್ಯೋಗವೇನೂ ಇಲ್ಲದ್ದರಿಂದ ಅನ್ನನೀರಿಲ್ಲದೆ ಅವರು ಬಳಲಬೇಕಾಯಿತೆಂದು ತಿಳಿಯಲಾಯಿತು. ಆ ಸತ್ತ ಮಗುವನ್ನು ಅವಳು

ಹಾಸಿಗೆಯಲ್ಲಿಯೇ ಏಕೆ ಬಿದ್ದಿರುವೆ? ಅದೇಕೆಂದರೆ ಧ್ರುವದ ದಿಕ್ಕಿಗೆ
ಯನ್ನು ತಲುಪುವವರೆಗೂ ಅದನ್ನು ಹಾಕಲು ಬೇಕಿಲ್ಲ ಸ್ಥಳವಿ
ರಲಿಲ್ಲ. ಕಡೆಗೆ ಸಾಯಂಕಾಲದ ವೇಳೆಗೆ ಕಂಗೆಟ್ಟು ಬಿಸ
ನಾದ ಅವನು, ಜ್ವರದಿಂದ ಕೂಡಿದ ಅವನ ಹೆಂಡತಿ, ಅವ
ಳನ್ನು ಅಸ್ವಸ್ಥನಾಗಿದ್ದ ವನು ಮತ್ತು ಸತ್ತು ಹೋಗಿದ್ದ ಮಗುವ
ನ್ನು ಒಂದೇ ಹಾಸಿಗೆಯಲ್ಲಿ ಮಲಗಿದರು. ಕ್ರೈಸ್ತರು ಕೂಲಿಯ
ವರ ಸಂಘವನ್ನು ಬಹಿಷ್ಕರಿಸಿದರು; ಏಕೆಂದರೆ ಆ ಸಂಘವ
ನ್ನು ಅಂಗೀಕರಿಸಿದರೆ ಕೂಲಿಗಾರರಿಗೆ ಸಂಬಳವನ್ನು ಹೆಚ್ಚಿ
ಸಬೇಕಾಗುತ್ತದೆ; ಆದರೆ ಅದರ ಬದಲಾಗಿ ಗೈರ್ಹಾಜರಿಯಾಗಿದ್ದ
ಭೂಮಾಲೀಕನಿಗೆ ಸ್ವಲ್ಪ ಬಾಡಿಗೆ ಕೊಟ್ಟು, ಹೊಲದಲ್ಲಿ ದುಡಿದು
ಬೆಳೆಯುವವರಿಗೆ ಹೆಚ್ಚು ಸಂಬಳವನ್ನೀಯಬೇಕೆಂಬ
ವಿಷಯವು ಅವರ ಮನಸ್ಸಿಗೆ ಹೊಳೆಯದೇ ಹೋಯಿತು,
ಅವರನ್ನು ಧ್ವಂಸಿಸುವ ಹೊರೆಯನ್ನು ಹೊತ್ತಿದ್ದವರಿಗಿನ
ಯವಾದ ಮಾತುಗಳು ಮಾತ್ರ ಹಿಂದಕ್ಕೆ ದೊರೆಯುತ್ತಿದ್ದು
ವು. ಬೀದಿ ಕೆಲಸ ಮಾಡುವ ಮತ್ತು ಅವರ ಗಾಡಿಗಳನ್ನು
ಹಚ್ಚುವ ದುಡಿಮೆಗಾರರನ್ನು ಕ್ರೂರವಾಗಿ ಕಾಣುತ್ತಿದ್ದರು,
ಹೀಗೆ ಕ್ರೈಸ್ತರು ತಮ್ಮ ನಿಜವಾದ ಶತ್ರುಗಳನ್ನು ಮಿತ್ರರೆಂದೆ
ಣಿಸಿ ಕೂಲಿಗಾರರೊಡನೆ ಬೆರೆತು ತಮ್ಮ ಶಕ್ತಿಯನ್ನು ಬ
ಲಗೊಳಿಸಿ ವ್ಯವಸಾಯಗಾರರ ಹಿತವನ್ನು ಕಾಪಾಡುವುದರ
ಬದಲಾಗಿ ಅವರು ಕೂಲಿಗಾರರಿಗೆ ವಿರೋಧವಾಗಿ ಭೂಮಾಲೀ
ಕರ ಬೆನ್ನು ಹಿಡಿದು ಆ ರೀತಿಯಾಗಿ ಭ್ರಾತೃಘಾತಕವಾದ
ಜಗಳವೆಬ್ಬಿಸಿ ತಮ್ಮ ನಿಜವಾದ ಶತ್ರುಗಳೊಡನೆ ಹೋರಾಡಿ
ಪಡೆಯಬಹುದಾಗಿದ್ದ ಗೆಲುವನ್ನು ಕಳೆದುಕೊಂಡರು.
ಇದನ್ನೆಲ್ಲ ನೋಡಿ ನಾನು ಕೆಲವು ಪ್ರಯೋಜನಕರವಾದ
ಪಾಠಗಳನ್ನು ಕಲಿತೆನು, ಧಾರ್ಮಿಕ ವಿಚಾರದ ಬಗ್ಗೆ
ನಾನು ಬಹಳ ಗೊಂದಲದೊಳಗೆ ಸಂದೇಹದಿಂದ ಕಾದಿಯುತ್ತಿದ್ದಾ
ಗ ರಾಜಕೀಯ ವಿಚಾರಜ್ಞಾನವು ನನ್ನಲ್ಲಿ ಹೆಚ್ಚುತ್ತಾ ಬಂತು,

ಹೀಗಿದ್ದಾಗ ಆ ವರ್ಷದ ಬೇಸಿಗೆಯಲ್ಲಿ ಕತ್ತಲನ್ನು ಕೊರೆ
ದು ಅದೊಂದು ಆಶಾಕಿರಣವು ಮಿಂಚಿತು, ನಾನು ನನ್ನ ತಾಯಿ
ಯ ಬಳಿ ಲಂಡನ್ನಿನಲ್ಲಿ ಇದ್ದೆನು, ಒಂದು ಆದಿತ್ಯವಾರ ದಿನ ರೆವ
ರೆಂಡ್ ಚಾರ್ಲ್ಸ್ ವೋಯಿಸಿ (Rev. Charles Voysey) ಇವನು
ಬೋಧಿಸುತ್ತಿದ್ದ ಸೇಂಟ್ ಜಾರ್ಜ್ ಹಾಲ್ ಸಭಾಂಗಣದೊಳಗೆ ಹೋ
ದೆನು, ಅಲ್ಲಿ ಅವನು ಹೇಳುತ್ತಿದ್ದ ಮಾತುಗಳನ್ನು ಕೇಳಿ ಸಂ
ತೋಷಪಟ್ಟು ಅದರ ವಿಷಯವಾಗಿದ್ದ ಕೆಲವು ಕರಪತ್ರಗ
ಳನ್ನು ಹಿಗ್ಗಿನ ಕೋಣೆಯಿಂದ ಬೇಡಿಕೊಂಡು ಓದಿದೆನು. ನ

ಸ್ವಂತಿಕೆಯಿಂ ಮತನೋದ್ವೇಗಕ್ಕೊಳಗಾಗಿದ್ದ ಜನರು ಅಲ್ಲಿದ್ದರಲ್ಲದೆ ತುಂಬಾ ನಿಸ್ಪೃಹತೋಜ್ವಲವಾದಂತಾಗಿ ಅಸಹ್ಯಕಾರಕವಾಗಿದ್ದ ಸಿದ್ಧಾಂತಗಳನ್ನು ಅವರು ತೋರಿಸಿದ್ದರು. ಇನ್ನೊಂದು ಆದಿತ್ಯವಾರವೂ ಅದೇ ಗುಡಿಗೆ ಹೋದೆನು. ಪ್ರಾರ್ಥನಾ ಸಭೆಯ ನಂತರ ಜನರು ಸಾಲುಗಟ್ಟಿ ಶ್ರೀ ಮತ್ತು ಶ್ರೀಮತಿ ಜಾರ್ಜ್ ವ್ಹಾಯ್ಸ್ ಇವರಿಗೆ ನಮಿಸುತ್ತಾ, ಹಲವು ಅಪರಿಚಿತರು ಸಹ ಅವನೊಡನೆ ಉಪಚಾರಾರ್ಥವಾಗಿ ಒಂದೆರಡು ಮಾತುಗಳನ್ನಾಡುತ್ತಾ ಹೋಗುತ್ತಿದ್ದುದನ್ನು ನೋಡಿದೆನು, ಹಿಂದಕ್ಕೆ ಬಹು ಸಮಯ ಮನೋವ್ಯಾಕುಲತೆಗೊಳಗಾಗಿದ್ದ ನಾನು ಇದೀಗ ಕ್ರೈಸ್ತಮತದ ತೊಡಕುಗಳನ್ನೆಲ್ಲ ಬಿಡಿಸಿಕೊಂಡು ಪಾರಾದ ಈ ಧರ್ಮಗುರುವಿನೊಡನೆ ಮಾತಾಡಬೇಕೆಂಬ ಆಕಾಂಕ್ಷೆಗೊಳಗಾಗಿ ನಾನು ರೆವರೆಂಡ್ ವ್ಹಾಯ್ಸ್ ಇವನ ಬಳಿ ಸಾರಿದಾಗ "ನೀವು ಈ ದಿನ ಬೆಳಿಗ್ಗೆ ಹೇಳಿದ ವಿಷಯಗಳಿಗಾಗಿ ನಾನು ನಿಮಗೆ ವಂದನಲೇ ಬೇಕಾಗಿದೆ," ಎಂದು ಹೇಳಿದೆನು, ನಿಜವಾಗಿಯೂ ಹೇಳುವುದಾದರೆ ದೇವರು ಇರುವನೆಂಬುದನ್ನು ಖಚಿತವಾಗಿ ಯಾವ ಸಂದೇಹವನ್ನೂ ಆ ವರೆಗೂ ತಾಳದಿದ್ದ ನನಗೆ ಧರ್ಮಗುರು ವ್ಹಾಯ್ಸ್ ಇವನು "ದೇವರು ಎಲ್ಲಾ ಜನರನ್ನು ಸಮಾನವಾಗಿ ಪ್ರೀತಿಸುವನೆಂದೂ ಅವನು ಸೃಷ್ಟಿಸಿದುದರ ಮೇಲೆ ಹಾರ್ದಿಕವಾದ ತನ್ನ ಮಮತೆಯನ್ನು ಸದಾ ತೋರಿಸುವನೆಂದೂ ಹೇಳಿದ ಆ ಹಿತವಾಕ್ಯವನ್ನು ಕೇಳಿ ನಾನು ಆ ವರೆಗೂ ಕಷ್ಟಪಟ್ಟು ಅನುಭವಿಸುತ್ತಿದ್ದ ಸಂದೇಹ ಮತ್ತು ಮನೋದ್ವೇಗವೆಂಬ ಬಿರುಗಾಳಿಗೀಡಾದ ಸಾಗರದೆಡೆಯಲ್ಲಿ ನನಗೆ ಅದೇನೋ ಉಜ್ವಲವಾದೊಂದು ಮಿಂಚು ಹೊಳೆದಂತಾಯಿತು, ಇನ್ನೊಂದು ಆದಿತ್ಯವಾರ ದಿನ ನಾನು ಅವರನ್ನು ಕಂಡಾಗ ಶ್ರೀಮತಿ ವ್ಹಾಯ್ಸ್ ನನ್ನನ್ನು ಅವರ ಡಲ್ವಿಚ್ ಭವನಕ್ಕೆ ಆದರದಿಂದ ಸ್ವಾಗತಿಸಿದಳು. ಕ್ರೈಸ್ತಮತದಲ್ಲಿ ನನಗೆ ಅಸಹ್ಯತೆಯನ್ನುಂಟುಮಾಡಿದ ಕೊರತೆಗಳು ಅವರ ತತ್ವಪ್ರತಿಪಾದನೆಯಲ್ಲಿ ಇಲ್ಲದಿದ್ದುದನ್ನು ನಾನು ಕಂಡುಕೊಂಡೆನಲ್ಲದೆ ಅವರು ಧರ್ಮಶಾಸ್ತ್ರದ ಬಗ್ಗೆ ನನಗೆ ಹೊಸ ಹಾದಿಯನ್ನು ತೋರಿಸಿದರು. ನಾನು ಥಿಯೋಡರ್ ಪಾರ್ಕರ್ ಇವನ Discourse on Religion, ಫ್ರಾನ್ಸಿಸ್ ನ್ಯೂಮನ್, ಕುಮಾರಿ ಫ್ರಾನ್ಸಿಸ್ ಪವರ್ ಕೋಬ್ ಮತ್ತು ಇತರರ ಗ್ರಂಥಗಳನ್ನು ಓದಿದೆನು. ಪರಿಣಾಮವಾಗಿ ನನ್ನ ಮನಸ್ಸಿನಲ್ಲಿದ್ದ ಹಲವು ಊಹಾಪೋಹಗಳು ಕಡಿಮೆಯಾದುವು, ಸರ್ವಶಕ್ತನಾದ "ದುಷ್ಟರಾಕ್ಷಸ"ನೋರ್ವನಿರುವನೆಂಬ ಭಾವನೆಯು ನನ್ನಿಂದ ತೊಲಗಿತು. ದೇವರಲ್ಲಿ ನಾನಿಟ್ಟಿದ್ದ ವಿಶ್ವಾಸವನ್ನು ಕಲುಷಿತಗೊಳಿಸಿದ್ದ ಆ ಕಟ್ಟುಕಥೆಗಳೆಲ್ಲ ತೊಡೆದುಹಾಕಲ್ಪಟ್ಟುವಲ್ಲದೆ ದೈವಿಕವಾದುದು ನಿಜವೋ ಸುಳ್ಳೋ ಎಂಬುದಾಗಿ ನನ್ನ ಆತ್ಮವನ್ನು ಕದಡಿಸಿದ ಸಂದೇಹವೆಲ್ಲವೂ ಬಿಟ್ಟುಹೋದುವು. ಸೋವು, ಶಾಂತಿ, ಮತ್ತು

ಮಾನಸಿಕ ಅಂಧಕಾರದ ಬಾಧೆಯಿಂದೊಡಗೂಡಿದ್ದ ನನ್ನ ಸಂದೇಹವನ್ನೆಲ್ಲ ಕಡೇ ಬಾರಿಗೆ ಎಂಬಂತೆ ಕೊಡವಿ ಹಾಕಿದಾಗ ನನಗೆ ಹೇಳಿಕೊಳ್ಳುವಂತಿಕ್ಕಾಗದಿದ್ದರೂ ಸಂತೋಷವುಂಟಾಯಿತು; ಅದರೊಡನೆಯೇ ಅವು ನನ್ನ ಅಜ್ಞಾನದಿಂದುಂಟಾದ ಭ್ರಮೆಯಿಂದಲೂ ದೇವರ ಪೂರ್ಣ ಸ್ವರೂಪದ ಅರಿವು ಇಲ್ಲವೆಂದೂ ಊಹಿಸಿಕೊಂಡೆನು,

ಏಸುಕ್ರಿಸ್ತನ ದೇವತ್ವವನ್ನು ಕುರಿತಾದ ಸಿದ್ಧಾಂತವನ್ನು ಮತ್ತು ಅದರ ಬಗ್ಗೆ ಇರುವ ವಿಶ್ವಾಸವನ್ನು ನಿಜಕ್ಕೂ ಈವರೆಗೆ ವಿರೋಧಿಸಿದ್ದಿಲ್ಲ. ಆದರೆ ಆ ಕಾರ್ಯಕಾರಣ ಪರಂಪರೆಯು ಇಂದೀಗ ತೆರೆಯಲ್ಪಟ್ಟ ಸಾಂಪ್ರದಾಯಿಕ ನೀತಿಗಳೊಡನೆ ಮಾಯವಾಗಿದೆ, Broad Church - ಇಲ್ಲಿ ಹೇಳುವ ಬೋಧನೆಯೆಲ್ಲ ಏಸುವಿನ ದೇವತ್ವದ ಹಿತವನ್ನು ಮುಂದಿಟ್ಟು ಅವನ ದಿವ್ಯಾದರ್ಶವನ್ನು ಸಮರ್ಥಿಸಿದೆ. ಶಾಶ್ವತ ಶಿಕ್ಷೆ ಮತ್ತು ಅದರ ಬದಲಾಗಿ ವಿಧಿಸಲ್ಪಡುವ ಪ್ರಾಯಶ್ಚಿತ್ತವೂ ಅಲಕ್ಷ್ಯವಾದದ್ದೆಂದಾದ ಮೇಲೆ ಕ್ರಿಸ್ತನೆಂಬ ದೇವನ ಅವತಾರದ ವಿವಾದದ ವಿಷಯವಾಗಿ ಹೇಳಬೇಕಾದ್ದಿಲ್ಲ, ನಾನು ಓದುತ್ತಾ ಬಂದಂತೆ ಪೂರ್ವ ದೇಶಗಳ ಜನರು ಈ ಅವತಾರಗಳ ಬಗ್ಗೆ ಹೇಳಿದ್ದನ್ನೆಲ್ಲ ಪೂರ್ಣ ತಿಳಿದಿದ್ದೇನೆ. ಅಂತೆಯೇ ಎಲ್ಲಾ ಪುರಾತನ ಧರ್ಮಗಳೂ ದೇವರು ಅವತಾರವನ್ನೆತ್ತಿದ್ದು ನಿಜವೆಂಬುದನ್ನು ಸಾರಿದ್ದನ್ನು ಅರಿತಿದ್ದೇನೆ, ಆದುದರಿಂದ ನೈತಿಕವಾಗಿ ಅಸಹ್ಯವಾಗಿರುವ ವಿವರಗಳನ್ನು ಒಂದೆಡೆ ಇಟ್ಟು ನಂತರ ಕ್ರಿಸ್ತನ ಮತ ಪ್ರತಿಪಾದನೆಯ ಬಗ್ಗೆ ವಾದವೆಬ್ಬಿಸಲು ಹೆಚ್ಚಿನ ಅವಕಾಶವಾಯಿತು. ಆದರೆ ಪುರಾತನ ಸಂಪ್ರದಾಯಗಳಿಂದ ಈ ಅತಿ ಪ್ರಿಯವೂ ಸುಮಧುರವೂ ಆದ ಸಿದ್ಧಾಂತಗಳನ್ನು ಬೇರ್ಪಡಿಸುವುದರಿಂದ ಭಿನ್ನವಾಗಿ ನಾನು ನಿರಾಶೆಯಿಂದ ಸೊರಗಿದೆನು. ಮಾನವ ಮತ್ತು ದೇವ, ಉತ್ತಮ ವ್ಯಕ್ತಿ ಮತ್ತು ದೈವಿಕ ಶಕ್ತಿ, ಮತ್ತು ಮಾನವ ಹೃದಯ ಮತ್ತು ಸರ್ವಾಂತರ್ಯಾಮಿಯಾದ ದೈವವೆಂಬೀ ಸೂಕ್ತಗಳಲ್ಲಿ ತುಂಬಾ ಸಂತೃಪ್ತಿಯನ್ನುಂಟುಮಾಡುವ ಮತ್ತು ಉನ್ನತಿಗೇರಿಸುವ ಅಂಶಗಳು ಇವೆ. ಧರ್ಮದ ಕಲಾಸೌಂದರ್ಯಗಳೊಡನೆ ಏಸುವು ದೇವರ ರೀತಿಯಲ್ಲಿ ಕಾಣಿಸಿಕೊಂಡು ಅವುಗಳಲ್ಲಿ ಬೆರೆತಿದ್ದಾನೆ, ಏಸುವಿನಿಂದ ದೇವತ್ವವನ್ನು ಬೇರ್ಪಡಿಸಿದರೆ ಅದು ಸಂಗೀತ, ಚಿತ್ರಕಲೆ ಮತ್ತು ಸಾಹಿತ್ಯದಿಂದ ಬೇರ್ಪಟ್ಟಂತೆ ಎಂದು ತಿಳಿಯಬೇಕಿದೆ. ದೈವಿಕ ಶಿಶುವು ಅವನ ತಾಯಿಯ ತೋಳಿನಲ್ಲಿ, ದೈವಿಕ ವ್ಯಕ್ತಿಯು ಅವನ ಆವೇಶ ಹಾಗೂ ಅವನ ಗೆಲುವಿನಲ್ಲಿ ಕೂಡಿದ ಮಾನವ ಮಿತ್ರನೆನಿಸಿದ ದೈವವು ಸರ್ವಾಂತರ್ಯಾಮಿಯಾದ ಆ ಅದೃಶ್ಯಶಕ್ತಿಯಲ್ಲಿ ಲೀನವಾಗಿದೆ, ಸರ್ವ ರೀತಿಯಲ್ಲೂ ಕರುಣಾಮಯವಾದ ಸೌಂದರ್ಯದ ಮತ್ತು ಮಾನವಪ್ರೇಮದ

ಈ ಉತ್ಕೃಷ್ಟವಾದ ದೈವವು ಎಂದೋ ಸತ್ತ ಪುರಾತನ ದೇವತೆಗಳ ಜಾಗವನ್ನೆಂದಿರದತ್ತ ಹಾಯಬೇಕೆಂದು ಆ ನಿಷ್ಠುರವಾದ ಸತ್ಯ ದೇವತೆಯು ಅನಿವಾರ್ಯವಾಗಿಯೇ ಕೋರುವುದೆ?

ಇದಕ್ಕೇ ಅಲ್ಲ, ನಾನು ಕ್ರೈಸ್ತನು ದೇವರೆಂಬ ನಂಬಿಕೆಯನ್ನು ತೊರೆದರೆ ನಾನು ನಂಬಿದ್ದ ಕ್ರೈಸ್ತಮತವನ್ನೆ ತೊರೆಯಬೇಕಾಗುತ್ತದೆ. ಕ್ರೈಸ್ತನು ಮಾನವ ಹೃದಯದಲ್ಲಿ ಪಡೆದ ಸ್ಥಾನವನ್ನು ಅಲ್ಲಗಳೆದರೆ ನಾನು ಕ್ರೈಸ್ತಮತದವನೆಂದು ಕರೆದುಕೊಳ್ಳುವುದು ಕೇವಲ ಕಪಟವಾಗುತ್ತದೆ. ಆದುದರಿಂದ ಅಂಥಾ ನಿಷ್ಕಪಟ ಮನಸ್ಸಿನವನು ತನ್ನ ಮತವನ್ನು ತ್ಯಜಿಸಲೇ ಬೇಕಾದದ್ದು ಅವನ ಕರ್ತವ್ಯವಾಗಬೇಕಿದೆ. ನಾನು ಪೂರ್ಣ ಮತಬೋಧಕನ ಶಿಷ್ಯನಾಗಿದ್ದೆನು. ಹಾಗಿರುವಾಗ ನಾನು ಮತವನ್ನು ತ್ಯಜಿಸಿದರೆ ಅದರ ಪರಿಣಾಮವೇನಾಗುವುದು! ಸತ್ಯವನ್ನು ಶೋಧಿಸುವವನಿಂದ ಮನೋದ್ವೇಗವನ್ನು ಮಾತ್ರ ಬಹು ಕಠಿಣವಾದ ಬೆಲೆಗೆ ಈ ವರೆಗೆ ಪಡೆದುದಾಗಿದೆ. ಆದರೆ ಈಗ ಕ್ರೈಸ್ತನಲ್ಲಿಟ್ಟಿದ್ದ ವಿಶ್ವಾಸವನ್ನು ತ್ಯಜಿಸಿ ಬಾಹ್ಯವರ್ಣದ ಗೊಂದಲವು ಮಾನಸಿಕ ತಾಕಲಾಟಕ್ಕೆ ಸಿಲುಕಿದಾಗ ನನ್ನ ಜೀವನದಲ್ಲಿ ಅದು ಉಂಟುಮಾಡತಕ್ಕ ಪರಿಣಾಮವನ್ನು ಯಾರಿಂದ ತಾನೆ ಊಹಿಸಲಿಕ್ಕೆ ಸಾಧ್ಯವಿದೆ! ಈ ಬಗೆಯ ಕಳವಳವು ನನ್ನಲ್ಲಿ ಹೆಚ್ಚು ಸಮಯವಿರಲಿಲ್ಲವಾದರೂ ಅದು ಇದ್ದಷ್ಟು ವೇಳೆಯಲ್ಲಿ ಬಹು ಪ್ರಖರವಾಗಿಯೇ ಇತ್ತು. ಕ್ರೈಸ್ತನೆಂಬ ದೇವತೆಯ ಶಕ್ತಿಗೆ ಪರವಾಗಿ ಮತ್ತು ವಿರೋಧವಾಗಿ ಇದ್ದ ಸಾಕ್ಷ್ಯವನ್ನೆಲ್ಲ ಜಾಗರೂಕತೆಯಿಂದ ಪರಿಶೀಲಿಸಲು ನಿರ್ಧರಿಸಿದೆನು. ಪರಿಣಾಮವಾಗಿ ನನ್ನ ವಿಶ್ವಾಸವು ಇತರರನ್ನು ಅನುಸರಿಸುತ್ತ ನಾನು ಕ್ರೈಸ್ತನಾಗಿ ಉಳಿಯಲಿಲ್ಲ; ಬದಲಾಗಿ ಅನಿಶ್ಚಿತ ಭವಿಷ್ಯದ ಎದುರಿಗೆ ನಿಂತು ಮುಂಬರುವ ಮಾನಸಿಕ ತಾಕಲಾಟವೆಂತೆಂದು ನೆನೆಯುತ್ತೊಡಗಿದೆನು.

ಅದರಿಂದ ಹಾಗೆಯೇ ಒಂದು ಪ್ರಯತ್ನವನ್ನು ನಡೆಸಿದೆನು. ನನ್ನ ಪ್ರಶ್ನೆಗಳಿಗೆ ತಕ್ಕುದಾದ ಉತ್ತರಗಳು ದೊರೆಯಲಾರವು ಎಂದು ನಂಬಿ ನಾನು ಡಾ. ಪುಸ್ಸೀ ಇವನಿಂದ ಪರಿಹಾರವಾಗಬಹುದೋ ಎಂದು ಅವನ ನೆರವನ್ನು ಕೋರಿದೆನು. ಅವನಿಗೆ ಸೂಕ್ಷ್ಮವಾಗಿ ಪತ್ರವ್ಯವಹಾರವನ್ನು ಬೆಳೆಸಿದೆನು. ಲಿಡ್ಡನ್ನಿನ ಬ್ಯಾಂಪ್ಟನ್ ಭಾಷಣಗಳ ಆಧಾರದಿಂದ ನನಗೆ ಹೆಚ್ಚು ಪರಿಚಿತವಿದ್ದ ವಿಷಯದ ಮೇಲೆ ಪ್ರಶ್ನಿಸಿದ್ದೆನಲ್ಲದೆ ಕಡೆಗೆ ಅವನ ಆಹ್ವಾನದಂತೆ ಅವನನ್ನು ನೋಡುತ್ತೇನೆಂದು ಆಕ್ಸ್‌ಫರ್ಡಿಗೆ ಹೋದೆನು. ಅಲ್ಲಿ ನಿಲುವಂಗಿಯನ್ನು ಧರಿಸಿದ್ದನೂ ತೋರಿಕೆಯನೂ ಆಗ ಅನುಕೂಲತೆಯಿಂದ ಕೂಡಿದ ಸಾಧುವೇಷವನ್ನು ಕಂಡೆನು. ನೇರವಾಗಿ ನನ್ನನ್ನು ನೋಡುವ ಅವನ ತೀಕ್ಷ್ಣವಾದ

ಕ್ಷಣಿಕಗಳು ಅವನ ಜೀವನೋತ್ಸಾಹ ತೀವ್ರತೆಯೊಳಗಡಗಿದ್ದ ಶಕ್ತಿ ಮತ್ತು ಮಾರ್ದವವನ್ನು ಪ್ರತಿಬಿಂಬಿಸುತ್ತವೆ. ಆದರೆ ಆ ಮನೋಭಾವ ಚೌಕ ನನ್ನ ಮನೋದ್ವೇಗವನ್ನು ಶಮನಿಸಲು ತೋರಿದ್ದ ರೀತಿಯಲ್ಲಿ ತೃಪ್ತಿದ್ದನು, ಸತ್ಯವನ್ನು ಶೋಧಿಸಲು ಹಾತೊರೆಯುತ್ತ, ಸಂಶಯವೆಂಬ ಜೀರ್ಣಾವಸ್ಥೆಯ ಸಮುದ್ರದಲ್ಲಿ ಭದ್ರವಾದ ಒಂದು ಸ್ಥಳವನ್ನು ಹುಡುಕಲು ಪ್ರಯತ್ನಿಸುವವನಿಂದು ಅವನು ಯೋಚಿಸುವುದರ ಬದಲಾಗಿ ಏನೇನೋ ಅಪರಾಧವನ್ನೆಸಗಿ ಅನಂತರ ಪ್ರಾಯಶ್ಚಿತ್ತವನ್ನು ಬಯಸಿ ಬಿಷಪ್ ಗುರುವಿನ ಬಳಿಗೆ ಹೋಗಿ ಹೇಳಿಕೊಳ್ಳಲು ತುಂಬಾ ಕಷ್ಟವಿಲ್ಲ, ನಾಟಕಗಳ ಮತ್ತು ಮಿತ್ರನಡತೆಯಿಂದ ಬಂದ ಬಿಷಪ್ ಹೆಜ್ಞೆಂದು ಅವನು ಭಾವಿಸಿದನು, ಗುರುವಿನ ದೇವತಾ ಸ್ವರೂಪದ ವಿಚಾರವಾಗಿ ಅವನು ವಾದಾಸ್ಪದವಾಗಿಯಾದರೂ ಮಾತಾಡಲಾರನು. ನಾನು ಒಂದು ಸಮಸ್ಯೆಯನ್ನು ಕುರಿತು ಸಮರ್ಥನೀಯವಾಗಿ ಕೇಳಿದಾಗ "ನಿನ್ನ ನ್ಯಾಯಾಧೀಶನ ಬಗ್ಗೆ ನೀನು ಮಾತಾಡುತ್ತಿರುವೆ" ಎಂಬುದಾಗಿ ಬಹಳ ಸೂಕ್ತ ಧ್ವನಿಯಿಂದ ಕ್ರುದ್ಧನಾಗಿ ಹೇಳಿದನು, ಗುರುವಿನ ಗುಣದಲ್ಲಿ ಕೊರತೆಗಳೇನಾದರೂ ಇರಬಹುದೇ, ಎಂದು ಮೆಲ್ಲಗೆ ಸೂಚಿಸಿದ ಮಾತ್ರಕ್ಕೆ ಅವನು ಸಿಡಿದು ಹಾರುವವನಲ್ಲದೆ ತನ್ನ ಕೈಗಳನ್ನು ಎತ್ತಿ ನನ್ನ ಭಕ್ತಿಯನ್ನು ಪರೀಕ್ಷಿಸತೊಡಗಿದನು "ನೀನು ದೇವರನ್ನು ನಿಂದಿಸುತ್ತಿ! ಅಂಥ ಆಲೋಚನೆಯು ಭಯಂಕರ ಪಾಪವಾಗಿದೆ," ಎಂದನ್ನುವನು, ಅವನು ಈ ವಿಚಾರದಲ್ಲಿ ನನಗೆ ಯಾವುದಾದರೂ ಗ್ರಂಥಗಳ ಹೆಸರನ್ನು ಸೂಚಿಸುವನೇ? "ಇಲ್ಲ, ಇಲ್ಲ, ನೀನು ಹಾಗೆ ತುಂಬಾ ಓದಿರುವೆ. ನೀನು ದೇವರನ್ನು ಪ್ರಾರ್ಥಿಸಬೇಕು; ಪ್ರಾರ್ಥಿಸಬೇಕು," ಎಂದು ಹೇಳಿದನು, ನಾನು ಆಧಾರವಿಲ್ಲದ ವಿಚಾರಗಳನ್ನು ನಂಬುವುದಿಲ್ಲವೆಂದು ಅವನಿಗೆ ಮನವಿ ಮಾಡಿದಾಗ "ಯಾರೂ ಪ್ರತ್ಯಕ್ಷವಾಗಿ ನೋಡದಿದ್ದರೂ (ದೇವರನ್ನು) ನಂಬುತ್ತಾರೋ ಅಂಥವರು ಭಾಗ್ಯಶಾಲಿಗಳು" ಎಂದು ಹೇಳಿದನು, ನಾನು ಮುಂದುವರಿದು ಕೇಳಿದ ಪ್ರಶ್ನೆಗೆ "ಎಷ್ಟು ಮಕ್ಕಳೇ, ಒಂದಿಷ್ಟು ಶಿಸ್ತಿಲ್ಲದೆ ವರ್ತಿಸುವೆ! ಎಂಥಾ ಅಹಂಕಾರ!" ಎಂಬುದಾಗಿ ಗುರುಗುಟ್ಟಿದನು, ಅವನು ನನ್ನಲ್ಲಿ ನಿಜವಾದ ರೋಗದ, ದುರ್ಬಲತೆ, ನನ್ನ ನಿರ್ಧಾರದಲ್ಲಿ ಆಕಾಂಕ್ಷೆ, ಅವಿಶ್ವಾಸಿ ಕಾರಣದಿಂದ ವಿಶ್ವಾಸವನ್ನು ಸ್ಥಿರವಿಲ್ಲವೆಂಬ ನನ್ನ ಮನೋದಾರ್ಢ್ಯದಿಂದ ಕೂಡಿದ್ದ ನಾನು ಏನೇನೋ ಶಿಕ್ಷೆಗೆ ಗುರಿಯಾಗಿ ಇದೀಗ ಬಹಳ ವಿನಯದಿಂದ ಗುರುವಿನ ಉಪದೇಶವನ್ನು ಕೇಳಿಸಲು ಬಂದವನಾಗಿರಬಹುದೆಂದು ಅವನು ಭಾವಿಸಿದ್ದಿರಬಹುದು, ನಾನು ದೇವರನ್ನು ನಂಬುವೆನೆಂದು ಭಾವಿಸಿ ಅವನು ನನಗೆ ಪ್ರಾರ್ಥಿಸಲು ವ್ಯರ್ಥವಾಗಿ ಹೇಳಿದನು. ಧರ್ಮಾಭಿಮಾನದ ಅಧಿಕಾರಕ್ಕೆ ಕೇವಲ ಕುರುಡು ಅಭಿಮಾನದಿಂದ ವಿಧೇಯರಾಗ

ಬೇಕೆಂಬುದಾಗಿ ಅವನು ನನ್ನನ್ನು ವ್ಯರ್ಥವಾಗಿ ಒತ್ತಾಯಿಸಿದನು. ನಾನು ಯಾವ ಸಂದೇಹದ ದಾರಿಯನ್ನು ಹಿಡಿದು ಬಂದೆನೋ ಅಲ್ಲಿಗೆ ಅದೇ ದಾರಿಯನ್ನು ಹಿಡಿದು ಮುಂದುಮುಂದಕ್ಕೆಂದು ಹೋಗಲಿಲ್ಲ. ನಾನು ಯಾವುದನ್ನಾದರೂ ನಂಬಬೇಕಾದರೆ ನನಗೆ ಭದ್ರವಾದ ಆಧಾರವು ಬೇಕೇ ಬೇಕು. ಅವನಿಗೆ (Rev. Liddon) ಅವಿಶ್ವಾಸಿಯ ಮನಸ್ಸೊಪ್ಪೋಗದ ಪರಿಮಿತಿಯೆಂದು ತಿಳಿದಿರಲಿಲ್ಲ. ಸಂದೇಹದಿಂದುಂಟಾಗುವ ವೇದನೆಯ ಅನುಭವವೇ ಅವನಿಗಿಲ್ಲ. ವಿಶ್ವಧರ್ಮದ (Universal Church) ಸತ್ಯತೆಯ ಬಗ್ಗೆ ಅವಿಶ್ವಾಸವನ್ನು ತಾಳುವುದಕ್ಕಿಂತ ಆತ್ಮಹತ್ಯೆಯನ್ನು ಮಾಡಿಕೊಳ್ಳುವುದೇ ಹಿತವೆಂದು ಅವನು ಭಾವಿಸುವನು.

"ಸತ್ಯವನ್ನು ಪರಾಮರ್ಶಿಸುವ ಕೆಲಸ ನಿನ್ನದಲ್ಲ," ಎಂಬುದಾಗಿ ರೆವರೆಂಡ್ ಲಿಡ್ಡನ್ನನು ಕಠಿಣವಾಗಿಯೆ ಹೇಳಿದನು, "ಧರ್ಮಶಾಸ್ತ್ರದಲ್ಲಿ ಹೇಳಿದ ಸೂಕ್ತಿಗಳಲ್ಲಿರುವ ಸತ್ಯತೆಯಲ್ಲಿ ನಂಬಿಕೆಯನ್ನಿಟ್ಟು ಅದನ್ನು ಅಂಗೀಕರಿಸುವುದು ನಿನ್ನ ಕರ್ತವ್ಯವಾಗಬೇಕು. ನೀನು ಅದನ್ನು ತಿರಸ್ಕರಿಸಿದರೆ ಅದರ ಫಲಕ್ಕೆ ನೀನೆ ಭಾಗಿಯಾಗುವೆ. ಧರ್ಮಶಾಸ್ತ್ರವು ನಿನ್ನ ಅಂಗೀಕಾರಕ್ಕಾಗಿ ಏನನ್ನು ಇಡುವದೆಯೋ ಅದನ್ನು ನೀನು ಕರ್ತವ್ಯ ತತ್ಪರತೆಯಿಂದ ಅನುಸರಿಸಿದಾಗ ನಿನ್ನ ಜವಾಬ್ದಾರಿಕೆಯು ತಪ್ಪದಂತೆಯೇ ಸರಿ! ಸತ್ಯಮಾರ್ಗದಲ್ಲಿ ನಡೆಸಲು ದೈವಬಲವು ನಿರಂತರವೂ ಕ್ರೈಸ್ತಧರ್ಮದಲ್ಲಿದೆಯೆಂದು ದೇವರು ಆಶ್ವಾಸನೆಯನ್ನೀಯುವ ಅಲ್ಲವೆ?"

"ಆದರೆ ಯಾವ ಆಶ್ವಾಸನೆ ಮತ್ತು ಅದರ ಪ್ರಭಾವ ಎಂದು ಹೇಳುವಿಯೋ ಅವುಗಳ ಮೇಲೆಯೇ ನಾನು ಸಂದೇಹಗ್ರಸ್ತನಾಗಿದ್ದೇನೆ" ಎಂದು ನಾನು ಉತ್ತರಿಸಿದೆನು. ಇದನ್ನು ಕೇಳಿ ಅವನು ಸ್ತಂಭಿತನಾದನು. "ಪ್ರಾರ್ಥಿಸು, ಪ್ರಾರ್ಥಿಸು" ಎಂಬುದಾಗಿ ಹೇಳಿದನು, "ತಂದೆಯೆ, ಅವರನ್ನು ಕ್ಷಮಿಸು; ಅವರು ಏನನ್ನು ಮಾಳ್ಪರೋ ಅದು ಅವರಿಗೇನೇ ತಿಳಿಯದು."

ಧರ್ಮವನ್ನು ನಿಷ್ಠೆಯಿಂದ ಪಾಲಿಸಿದರೆ ನಾನು ಪಡೆಯಬಹುದಾದುದನ್ನು, ನನ್ನದೇ ಆದ ದಾರಿಯಲ್ಲಿ ನಡೆದರೆ ನಾನು ಕಳೆದುಕೊಳ್ಳುವುದನ್ನು ನಾನು ತಿಳಿದಿದ್ದರೂ ಸಹ ನಂಬಲು ಅಸಾಧ್ಯವಾದುದನ್ನು ನಂಬುತ್ತೇನೆಂದು ಹೇಳಿ ಆತ್ಮವಂಚನೆಯನ್ನು ಮಾಡುವುದು ಕಷ್ಟವೆಂದೂ ಸತ್ಯವನ್ನರಿಯುವ ನನ್ನ ಸಾಹಸದಲ್ಲಿ ನಾನು ನಿಷ್ಕಪಟನಾಗಿದ್ದೇನೆಂದೂ ನಿವೇದಿಸಿದೆನು.

"ಎಲ್ಲವನ್ನೂ ಕಳೆದುಕೊಳ್ಳುವೆ? ಹೋದು; ಸರಿ! ನೀನು ಈಗ ಮಾತ್ರವಲ್ಲ, ಅನಂತ ಕಾಲಕ್ಕೂ ಎಲ್ಲವನ್ನೂ ಕಳೆದುಕೊಳ್ಳುವವನಾಗುವೆ," ಎಂದು ಗುರುವು ಹೇಳಿದನು.

"ನಾನು ಕ್ಷಮಿಸಿಕೊಳ್ಳುವೆನೋ ಇಲ್ಲವೋ! ನಾನು ಸತ್ಯವಾದುದಾವುದೆಂಬುದನ್ನು ಕಂಡುಹಿಡಿಯಲೇ ಬೇಕು; ಅದನ್ನು ಕಂಡುಹಿಡಿಯುತ್ತೇನೆ, ನಾನು ಹಿಂದು ವಿಷಯವನ್ನು ಪೂರ್ತಿಯಾಗಿ ತಿಳಿಯದೆ ಅದನ್ನು ನಂಬಲಾರೆನು," ಎಂದು ಕ್ರೈಸ್ತಗುರು ಅಣ್ಣನಿಗೆ ಹೇಳಿದೆನು,

"ಯಾವುದನ್ನು ನಂಬಬೇಕು, ಯಾವುದನ್ನು ನಂಬಬಾರದು, ಎಂದು ದೇವರಿಗೆ ಪ್ರಶ್ನೆನ್ನು ಹಾಕಿ ವಾದಿಸುವ ಅಧಿಕಾರವು ನಿನಗಿಲ್ಲ, ನಿನ್ನಲ್ಲಿ ಜ್ಞಾನಮದವು ತುಂಬಾ ಇದೆ," ಎಂದು ಅವನಂದನು,

ನಾನು ನಿರಾಶೆಯಾಗಿ ನಿಟ್ಟುಸಿರುಗರೆದೆನು, ನನ್ನಲ್ಲಿ ಸ್ವಲ್ಪ ಮದವೆಂಬುದಿತ್ತು. ಆದರೆ ನನ್ನ ಹಠವಾದದಿಂದ ನಾನು ವಿಷಯದ ಗೂಢವನ್ನು ಅರಿಯದೆ ಯಾವುದನ್ನೂ ನಂಬಲಾರೆನೆಂಬ ಅಭಿಪ್ರಾಯದಿಂದ ನನ್ನ ಮನೋದ್ವೇಗವು ನಿವಾರಣೆಯಾಗಲಿಲ್ಲ, ನನ್ನ ಮಾನಸಿಕ ತಾಕಲಾಟಕ್ಕೆ ಯಾವ ಪರಿಹಾರವೂ ಸಿಗಲಿಲ್ಲ, ನಾನು ಹೇಗೂ ಅವನು ತೋರಿಸಿದ ಆ ವಿನಯಕ್ಕೆ ವಂದಿಸಿ ಅವನ ಸಮಯವನ್ನು ಕಳೆದೆನು ಎಂದೆನ್ನುತ್ತಾ ಅಲ್ಲಿಂದ ಎದ್ದು ಹೊರನಡೆದೆನು. ನಾನು ಧರ್ಮ (Church)ವನ್ನು ಎಲ್ಲರಿಗೂ ತಿಳಿದಂತೆಯೇ ತ್ಯಜಿಸಿ ನನ್ನ ಸಂಶಯಗಳನ್ನು ಗುಟ್ಟಾಗಿ ನಾನೇ ತೋಡಿಕೊಳ್ಳಬೇಕಾಗುತ್ತದೆಯೆಂದು ಅವನಿಗೆ ಆಗಲೇ ಹೇಳಿದ್ದೆನು. ಆಗ ಅವನ ಶಾಂತತೆಯು ಮೊದಲು ಬಾರಿಗೆಂಬಂತೆ ಎಚ್ಚೆತ್ತು ಕೆರಳಿತು!

"ನಿನ್ನ ಅವಿಶ್ವಾಸವನ್ನು ಕುರಿತು ನೀನು ಮಾತಾಡಿಕೊಳ್ಳುವುದಕ್ಕೆ ನಾನು ಅನುಮತಿಯನ್ನೀಯಲಾರೆನು," ಎಂದು ಅವನು ರೇಗುತ್ತಾ, "ಕ್ರೈಸ್ತನು ಯಾರ ಆತ್ಮವನ್ನು ಮೋಕ್ಷಕ್ಕೆಂದು ಪ್ರಾಣತ್ಯಾಗವನ್ನು ಮಾಡಿದನೋ ಆ ಕಳೆದುಹೋದ ಆತ್ಮದತ್ತ ನೀನು ಹೋಗುತ್ತಿರುವುದಾದರೆ ನಾನು ಬಿಡಲಾರೆನು," ಎಂದು ಅವನು ವಾದಿಸಿದನು.

ನಾನು ನನ್ನ ಅವಿಶ್ವಾಸದಿಂದ ಹಾಳಾಗುವ ಕಡೇ ಒಂದು ಸಂದರ್ಭವೂ ಕೈಬಿಟ್ಟಿತೆಂದು ಎಣಿಸಿ ಬೇಸರದಿಂದಲೇ ಅಲ್ಲಿಂದ ಎದ್ದು ನನ್ನ ದಾರಿ ಹಿಡಿದೆನು, ಹಾಗೆಯೆ, ಪಶ್ಚಾತ್ತಾಪ ಪಡುವವನಿಗೆ, ದೀನನಿಗೆ, ಸೇವಕನಿಗೆ, ತುಂಬಾ ವಿನಯದಿಂದ ದಯೆಯನ್ನು ಪ್ರದರ್ಶಿಸುವ ಈ ಕ್ರಿಸ್ತ ಮತಪ್ರಚಾರಕ ವರ್ಗದ ಪ್ರಭಾವವನ್ನೂ ನೋಡಿದೆನು. ಆದರೆ ಸಂಶಯವಾದಿಗೆ ಮತ್ತು ನಾಸ್ತಿಕನಿಗೆ ಆ ಧರ್ಮವು, ಆ ಗುರುವು ಉಕ್ಕಿನಂತೆ ಕಠಿಣವಾಗಿತ್ತು. ಬಹಿರಂಗವಾಗಿ ತಿಳಿದು ಬಂದ ಸತ್ಯತೆಯ ಬಗ್ಗೆ ಪ್ರಶ್ನೆಗಳಿಗೆ ಅವಕಾಶವಿಲ್ಲದಂತೆ ಅದು ಮುಚ್ಚಿರಲ್ಪಟ್ಟಿತ್ತು. ಮತಧರ್ಮ ನಿಯಮಗಳು ಪರಂಪರೆಯು ಮಾಡಿದ್ದ ವಿಚಾರಗಳ ಮೇಲೆ ಹೊಂದಿಕೊಂಡು ಅವು ವಾದಕ್ಕೆ ಎಡೆಗೊಡದೆ ಎಲ್ಲವನ್ನು ಬಲಾತ್ಕಾರಿಕವಾಗಿ ಅಡಗಿಸಲಾಗಿತ್ತು. ಹಲವು ಶತಮಾನಗಳಿಗೂ ಹಿಂದೆ,

ಮತ್ತು ಇತ್ತೀಚಿನ ವರೆಗೂ ಬಹು ಕಠಿಣವಾಗಿ ವರ್ತಿಸಿದ್ದ ಮತ್ತು ಪ್ರಚಾರಕರು ನಾಸ್ತಿಕರ ಬಗ್ಗೆ ನಿರ್ದಯತೆಯಿಂದ ವರ್ತಿಸಿದರು. ಅವರ ಮನಸ್ಸಿಗೆ ಗೂಢ ವಿಚಾರಗಳನ್ನು ತಿಳಿಯುವ ಕಾತುರತೆಯಿಂದ ಕೂಡಿದ್ದ ಧರ್ಮದ ಜಿಜ್ಞಾಸುಗಳೂ ಇದ್ದರು. ಕುರುಡು ಮತಾಭಿಮಾನಿಗಳಿಗೆ ನಾಸ್ತಿಕರಾದ ಜಿಜ್ಞಾಸುಗಳು ಅಂಟುಜಾಡ್ಯವನ್ನು ಹತ್ತಿಸುವಂತವರಾದರು. ಅಂಥ ನಾಸ್ತಿಕನಿಗೆ ದಯೆಯನ್ನು ತೋರಿಸುವುದೆಂದರೆ ಜನತೆಯು ಆತ್ಮವನ್ನು ವಂಚಿಸಿದಂತೆ ಎಂದು ಬಗೆದರು. "ದೇವರು ಒಂದು ಸತ್ಯವನ್ನು ದಯಾಶೀಲಿಯಾಗಿ ತೋರಿಸಿದ್ದಾನೆ; ಧರ್ಮನೀತಿಗೆ ಅದೇ ಮಾ ಸ್ವೀಕಾರ್ಹ ಶ್ರುತಿಯಾಗಿ ಶರಣಾಗಬೇಕಲ್ಲದೆ ಅದರ ಬಗ್ಗೆ ಪ್ರಶ್ನೆಯನ್ನೆತ್ತುವ ಅಧಿಕಾರವಿಲ್ಲ," ಎಂಬುದಾಗಿ ಅವರನ್ನುತ್ತಾರೆ. ಆದರೆ ಸತ್ಯವನ್ನು ಅರಿಯಲು ಹೋಗುವಾಗ, ಜ್ಞಾನವನ್ನು ಗಳಿಸಲು ಹಾತೊರೆಯುವಾಗ, ಮೇಧಾಶಕ್ತಿಯು ಭಾವನಾಪ್ರಪಂಚದ ಗಗನಾಂಗಣದಲ್ಲಿ ರೆಕ್ಕೆಗಳನ್ನೆಡೆಬಿಡದೆ ತಟಸ್ಥತ್ಯ ಸಂಚರಿಸುವಾಗ ಅವನಿಂದ ಧರ್ಮದ ಗುಟ್ಟನ್ನು ತಿಳಿಯಲು ತವಕಿಸಿ ಅದಕ್ಕೆ ಆಧಾರವೇನೆಂದು ಕೇಳುವಾಗ ತಕ್ಕ ವಿವರಣೆಯನ್ನು ಕೊಡಲಾಗದೆ ಅವಳ ಕಣ್ಣುಗಳು ಅವನನ್ನು ಕಲ್ಲಾಗಿಸುವಂತೆ ನೆಟ್ಟನೆ ನೋಡಿ ಆತಯೇ ಕಂಗೆಡಿಸುವುದು.

1872 ರ ಬೇಸಿಗೆಯಲ್ಲಿ ನಾನು ವಾಯ್ಸಿ (Charles Voysey) ಇವರ ಮೂಲಕವಾಗಿ ಶ್ರೀ ಮತ್ತು ಶ್ರೀಮತಿ ಸ್ಟುವರ್ಟ್ ಇವರನ್ನು ಮೊದಲ ಬಾರಿಗೆ ಭೇಟಿಯಾದೆನು. ಆವಾಗ ಪ್ರೊಫೆಸರ್ ಸ್ಟುವರ್ಟ್ ಇವನು ಸುಂದರವಾದ ಬಿಳಿ ಕೂದಲಿನಿಂದಲೂ ನೀರನ್ನು ಹೀರಿದ ಕಣ್ಣುರೆಪ್ಪೆಗಳೊಳಗಿಂದ ಗಡುಗಿನ ಕಣ್ಣುಗಳಂತೆ ಹೊಳೆಯುತ್ತಿದ್ದ ಕಣ್ಣಾಲಿಗಳಿಂದಲೂ ಕೂಡಿದ ಭವ್ಯ ಮುದುಕನಾಗಿದ್ದನು, ಈಗ ಅವನ ದೇಹವು ಸೊರಗಿದ್ದರೂ ಒಂದು ಕಾಲದಲ್ಲಿ ಅವನು ದೃಢಕಾಯನಾಗಿದ್ದನು, ಸಿಂಹದ ತಲೆಯಂತೆ ಇದ್ದ ಅವನು ತನ್ನ ದಿವ್ಯವಾದ ಶಿರ, ದೇಹಬಲ, ಮತ್ತು ಸೌಂದರ್ಯವನ್ನು ಪ್ರದರ್ಶಿಸಿದ ಭವ್ಯ ಶಿಕ್ಷಿತ ವ್ಯಕ್ತಿಯಾಗಿದ್ದನು. ಉತ್ತಮ ಕಾಲದಲ್ಲಿ ಐಶ್ವರ್ಯವಂತನಾಗಿ ಇತ್ತು ಅವನು ತನ್ನ ಯೌವನವನ್ನು ಲೋಕದ ಎಲ್ಲ ಕಡೆಗಳಲ್ಲೂ ಕಳೆದಿದ್ದನು, ಅನಂತರ ತನ್ನ ವಿವಾಹದ ನಂತರ ರೋಮ್ಯಾಗ್ರೇಟ್‌ನಲ್ಲಿ ನೆಲೆಸಿದನು; ಮತ್ತು ತನ್ನ ಮನೆಯನ್ನು ವೇದಬಾಹಿರರ ಕೇಂದ್ರವಾಗಿ ಮಾರ್ಪಡಿಸಿದನು, ಅವನ ಬಲಿಷ್ಠತೆಯಿಂದ ಅವನಿಂದ ನ್ಯಾಯವಾಗಿ ಕರೆಯಲ್ಪಡುತ್ತಿದ್ದ ಅವನ ಪತ್ನಿಯು ಸುಂದರಿಯೂ ಸಬಲಳೂ ನಿಷ್ಠೆಯೂ ಮನೋದಾರ್ಢ್ಯದಿಂದಲೂ ಕೂಡಿದ್ದು ಅವನ ಮಗಳೊಂದು ಎನಿಸುವಷ್ಟು ಕಿರಿಯವಳೆನಿಸಿ ಬೇಗ

ಹೊಗಳಿಕೆಯೂ ಅವಳಿಗೆ ಸರಿಯಾಗದು ಎಂಬಂತೆ ಅವಳು ತನ್ನ ಪತಿಗೆ ಅರ್ಹಳಾದ ಹೆಣ್ಣಾಗಿದ್ದಳು. ಹಲವು ವರ್ಷಗಳವರೆಗೆ ಸ್ಕಾಟ್ ಇವನು ಲೇಖನಗಳನ್ನು ಧಾರಾವಾಹಿಯಾಗಿ ಪ್ರತಿ ತಿಂಗಳು ಪ್ರಕಟಿಸಿದನು. ಅವೆಲ್ಲವೂ ವಿವಿಧ ರೀತಿಯಲ್ಲಿ ಬರೆಯಲ್ಪಟ್ಟಿದ್ದರೂ ಒಟ್ಟಾಗಿ ನಾಸ್ತಿಕ್ಯವನ್ನು ಪ್ರತಿಪಾದಿಸುತ್ತ. ಅದು ಉತ್ತಮವಾಗಿಯೂ ಯೋಗ್ಯ ವಿವರಣೆಯಿಂದಲೂ ಕೂಡಿ ಅದರ ಪ್ರತಿಪಾದನೆಯಲ್ಲಿ ಸ್ಕಾಟ್ ಇವನು ಇತರರಿಂದ ಬೇರ್ಪಟ್ಟಿರಲಿಲ್ಲವೆಂಬಂತೆ ಸಾಹಿತ್ಯ ನಡೆಯುತ್ತಿ ಉತ್ತೇಜಿಸಿದ್ದನು. ಅವನ ಕೆಲಸಗಾರರು ಅವನಿಗೆ ಇಚ್ಛಿಸಿದ್ದನ್ನು ಹೇಳಿದರೂ ಅವರು ತಮ್ಮದಾದುದನ್ನು ಒಳ್ಳೆಯ ಆಂಗ್ಲಭಾಷೆಯಲ್ಲಿ ಬರೆಯು ಬೇಕಿತ್ತು. ಅವನ ಪತ್ರವ್ಯವಹಾರಗಳು ಪ್ರಧಾನ ಮಂತ್ರಿಯಿಂದ ಮೊದಲ್ಗೊಂಡು ಕೆಳವರ್ಗದವರಿಗೂ ಸೇರಿ ಅಪಾರವಾಗಿದ್ದಿತು. ಹಲವು ಅಭಿಪ್ರಾಯ ಭೇದದಿಂದ ಕೂಡಿದ ಜನರು ಅವನನ್ನು ಭೇಟಿಯಾಗುತ್ತಿದ್ದುದರಿಂದ ಅವನ ಮನೆಯು ನಾಸ್ತಿಕವಾದಿಗಳು ಸೇರುವ ಕೇಂದ್ರವಾಗಿತ್ತು. ನೇಟಾಲ್‌ನ ಕೊಲೆನ್ಸೊ, ಎಡ್ವರ್ಡ್ ಮೈಟ್‌ಲ್ಯಾಂಡ್, ವನಿಸ್ಸಿಟಾರ್ಟ್ ನೀಲ್, ಚಾರ್ಲ್ಸ್ ಬ್ರೇ, ಸಾರಾ ಹೆನ್ನೆಲ್, ಹೀಗೆ ಹಲವು ಜನರು, ಕ್ರೈಸ್ತಗುರುಗಳು, ಸಾಮಾನ್ಯರು, ವಿದ್ಯಾವಂತರು ಮತ್ತು ಜ್ಞಾನಿಗಳು ಸತ್ಯಾನ್ವೇಷಣೆಯ ಮಮತೆಯಿಂದ ಮತ್ತು ಜನರಲ್ಲಿ ಸ್ವತಂತ್ರ ಭಾವವನ್ನು ಮೊಳಗಿಸುವ ಕಾತರತೆಯಿಂದ ಯಾವ ಆತಂಕವೂ ಇಲ್ಲದೆ ಅವನ ಮನೆಯಲ್ಲಿ ಒಟ್ಟುಗೂಡುತ್ತಿದ್ದರು. ಸ್ವತಂತ್ರ ಭಾವನೆಯನ್ನು ಕುರಿತು "ಶ್ರೀಮಾನ್ ಸ್ಕಾಟ್ ಇವನಿಗಾಗಿ ನಾನು ಕೆಲವು ದಿನಗಳನಂತರ ನನ್ನ ಮೊದಲ ಪ್ರಬಂಧವನ್ನು ಬರೆದೆನು, "ಸಜೀರೀತಿನ ವಸ್ತುವಿನ ದ್ವಿವಿಧತೆ" ಎಂಬ ವಿಷಯವಾಗಿ ಓದುವರ್ಗದವರವನ ಪತ್ರಿಯು ಬರೆದಿಲ್ಲನು. ನನ್ನ ಹೆಸರು ಬಲ್ಲಸತಿಕ್ಕೆ ನನ್ನದೇ ಆಗಿರಲಿಲ್ಲವಾದುದರಿಂದ ನಾನು ಬರೆದುದೆಲ್ಲವೂ ಅನಾಮಿಕವಾಗಿ ಇರಬೇಕೆಂದು ಒಪ್ಪಲಾಯಿತು,

ಇನ್ನೀಗ ಸಿಬ್ಸೀ (Sibsey)ಗೆ ಹಿಂದಿರುಗುವ ದಿನವು ಬಂತು. ರೆದರೊಡನೆಯೇ ದೇವಸ್ಥಾನಕ್ಕೆ ಹಾಜರಿಬೇಕಾದ ನಿಶ್ಚಿತ ಕಾರ್ಯಕಲಾಪಗಳ ಅವಶ್ಯಕತೆಯೂ ಇತ್ತು. ಇನ್ನೀಗ ನಾನು ಸಂಶಯವಿಟ್ಟಿದ್ದಿರಲಿಲ್ಲ. ಆಸ್ತಿಕ್ಯವನ್ನು ನಾನು ನಿರಾಕರಿಸಿದೆನು, ಅದರನಂತರ ಮೌನದಿಂದ ಇರುವ ಕಾಲವೂ ಕಳೆದಿತ್ತು. ನಾನು ಗುಡಿ ಪ್ರಾರ್ಥನೆಗಳಲ್ಲಿ ಭಾಗವಹಿಸಲು ಇಚ್ಛಿಸದೆನಾದರೂ

ದೇವರ ಕೆಲಸ ಕಾರ್ಯಗಳಲ್ಲಿ ಭಾಗವಹಿಸಿದ್ದಿಲ್ಲ; ಮತ್ತು ಪೂಜಾ ವಿಧಿಗಳಿಗೂ ಹಾಜರಾಗುತ್ತಿರಲಿಲ್ಲ, ಏಕೆಂದರೆ ಆ ವಿಧಿಗಳಲ್ಲಿ ಏನನ್ನು ಶಿವನ ದೇವತೆಯಿಂದು ಸಂಬಂಧಿಸಿದವನ್ನೂ ಅವನ ಮುಂದೆ ಪ್ರಾಯಶ್ಚಿತ್ತದ ಬಗ್ಗೆ ನಡೆಸುವ ಹರಕೆಗಳಲ್ಲೂ ನಾನು ವಿಶ್ವಾಸ ಇಡುತ್ತಿರಲಿಲ್ಲ. ಆ ಕಹಿಟನದ ಕಾರ್ಯಕ್ರಮದಲ್ಲಿ ಭಾಗವಹಿಸುವುದು ನನ್ನ ಬೇಕಾಗಿರಲಿಲ್ಲ, ಇದನ್ನು ಒಪ್ಪಲಾಗುತ್ತಿಲ್ಲದೆ ಹಿಂದು ಆದಿತ್ಯವಾರದ ಪೂಜಾವಿಧಿಯಿಂದ ನಾನು ಸಭೆಯಿಂದ ಎದ್ದು ಗುಡಿಯಿಂದ ಹೊರನಡೆದಾಗ ಅನುಭವಿಸಿದ ಮನೋವೇದನೆ ಮತ್ತು ತನು ಕಂಪಿಸುವನ್ನು ಈಗಿನ್ನೂಗೆ ನೆನೆಯುತ್ತಿದ್ದೇನೆ, ದೇವಸ್ಥಾನದ ಮುಖ್ಯ ವ್ಯವಸ್ಥಾಪಕರ ಬದಲಿಗೆ ಇರುವವನ (ಪತ್ನಿಯು ಸಭಾಧ್ಯಕ್ಷನೆಯನ್ನು ನಡೆಸಿದಾಗ ಅದು ಅವಳ ಹಕ್ಕಿಯು ನಡೆಸಿದಂತೆ ಎಂದು ಭಾವಿಸಲಾಗುತ್ತ. ನಾನಾದರೋ ಜನರ ದೃಷ್ಟಿಯು ನನ್ನ ಕಡೆಗೆ ಬೀಳುವಂತಾ ಕೆಲಸವನ್ನೇನೂ ಕೈಕೊಂಡುದಿಲ್ಲ; ಆದರೂ ನಾನು ಹೊರಗೆ ಹೋಗುವಾಗ ಎಲ್ಲರೂ ನನ್ನನ್ನು ನೋಡುತ್ತಿದ್ದಾರೆಂಬ ನನ್ನ ಅಂತರಂಗವೂ ನಾನು ಪೂಜೆಯಲ್ಲಿ ಭಾಗವಹಿಸದೇ ಇದ್ದುದೂ ಎಲ್ಲರ ನಿರಂತರ ಟೀಕೆಗೆ ಕಾರಣವಾಗಿ ನಾನು ಅಸ್ವಸ್ಥನಾಗುತ್ತಿದ್ದೆನು. ನಿಜವಾಗಿ ಹೇಳುವುದಾದರೆ ನಾನು ಅಸ್ವಸ್ಥನಾದೆನೆಂದೇ ಎಲ್ಲರೂ ಸ್ವಾಭಾವಿಕವಾಗಿ ಭಾವಿಸಿದರಲ್ಲದೆ ಎಲ್ಲರೂ ನನ್ನ ಬಳಿಗೆ ಬಂದು ನನ್ನ ಕ್ಷೇಮಲಾಭವನ್ನರಿಯುವಾಗ ನಾನು ನಾಚಿಕೆಯ ಮೌನದಿಂದ ಹಿಗ್ಗುತ್ತಿದ್ದೆನು. ಅವರೇನಾದರೂ ಪ್ರಶ್ನೆಗಳನ್ನು ಕೇಳಿದರೆ ಸತ್ಯನಿಷ್ಠೆಯಲ್ಲಿ ನಿರತರಾದವರಂತೆ ಧರ್ಮಕಾರ್ಯಗಳಲ್ಲಿ ಭಾಗವಹಿಸಲು ಅಸಮರ್ಥನೆಂದು ಹೇಳುತ್ತಿದ್ದೆನು, ಆದರೆ ಅದನ್ನು ಹೇಳುವ ಅವಶ್ಯಕತೆಯೇ ಇರಲಿಲ್ಲ, ಏಕೆಂದರೆ ಕರುಣೆ ಭಕ್ತಿಯಿಂದ ಕೂಡಿದ ಧರ್ಮಗುರುವಿನ ಹೆಂಡತಿಯು ಅನಾಗರಿಕ ಮನಸ್ಸಿಗೆ ಅದು ಹೊಳೆಯಲು ಬಹಳ ಸಮಯ ಬೇಕಾಗುತ್ತಿತ್ತು; ನಾನಾದರೋ ಎಲ್ಲಿ ನನ್ನನ್ನು ಪ್ರಶ್ನಿಸಲಿಲ್ಲವೋ ಅಲ್ಲಿ ನಾನಾಗಿ ಯಾವ ವಿಷಯವನ್ನೂ ಮುಂದಿಡಲು ಹೋಗಲಿಲ್ಲ.

ಈ ಅನುಭವದ ನಂತರ 1872ರ ಕ್ರಿಸ್‌ಮಸ್ ಹಬ್ಬದಂದು ಮತ್ತು ಅನಂತರ ಸಬ್ಲೀ ಗ್ರಾಮದಲ್ಲಿ ಬಂದು ಕಣ್ಣಿನ ವಿಷಮಶೀತ ಜ್ವರದ (typhoid) ಬಾಧೆಯು ಪ್ರಾರಂಭವಾಗಿ ಅಂತೆಯೂ ಹಬ್ಬಿತು, ಅಲ್ಲಿ ನಾಲ್ಕು ಚರಂಡಿಗಳು ಹಳೆ ಕಾಲದ

ಪರಿಸ್ಥಿತಿಯಲ್ಲಿಯೇ ಇದ್ದುದರಿಂದ ಈ ಅಂಟುಜಾಡ್ಯವು ಬೆಳೆಯುತ್ತ ಹೆಚ್ಚಿತು. ಜನಸಹವಾಸವನ್ನು ಮಾಡುವುದರಲ್ಲಿ ಸ್ವಾಭಾವಿಕವಾಗಿ ಪ್ರೀತಿಯನ್ನು ತಾಳಿದ್ದ ನನಗೆ ಈ ಅಂಟುರೋಗವು ಸೇವೆಗೆ ಹೆಚ್ಚು ಸದವಕಾಶವನ್ನು ಇತ್ತಂತಾಯಿತು; ಅಲ್ಲದೆ ಸೇವೆಯನ್ನು ಬಿಡಿ ಹಾಯಲಸ್ಸರ ಪತನಕ್ಕೆ ಸ್ವತಃ ಹೋಗಿ ಮಾಡುವ ಮತ್ತು ಎಲ್ಲರಿಂದಲೂ ಆಹ್ವಾನಿಸಲ್ಪಡುವ ಸಹಯೋಗವು ಒದಗಿತು. ಆಯಾಸದಿಂದ ತಾಯಂದಿರು ನಿದ್ರಿಸುತ್ತಿರಲು ನಾನು ಅವರ ಶಿಶುಗಳನ್ನು ಮುದ್ದಾಡಿಸುತ್ತಾ ನೋಡಿಕೊಳ್ಳುತ್ತಿದ್ದಾಗ ಅವರ ಕೈಗಳಿಗಿಂತ ಕೋಮಲವೂ ಚಮತ್ಕಾರಿಕವೂ ಆಗಿ ಅವರು ನಿದ್ದೆಯಿಂದ ಗಳಿಸುತ್ತಿದ್ದ ನಾಜೂಕಿನ ಕೈಗಳೂ ಇವೆಯೆಂದು ಊಹಿಸುವರೇ ಎಂಬುದಾಗಿ ನಾನು ಭಾವಿಸಿಕೊಳ್ಳುತ್ತಿದ್ದೆನು. ತಾಯ್ತನದ ಸ್ವಾಭಾವಿಕತೆಯು ನನ್ನನ್ನು ಉತ್ತಮ ಶುಶ್ರೂಷಕಳನ್ನಾಗಿ ಮಾಡುತ್ತಿತ್ತು; ಏಕೆಂದರೆ ಯಾರೇ ಆಗಲಿ, ಅವರ ಅಸ್ವಸ್ಥತೆಯು ಅಪಾಯಕಾರಕವಾಗಿದ್ದು, ಸಾಯುವ ಪರಿಸ್ಥಿತಿಯಲ್ಲಿದ್ದಾಗ ನನ್ನ ಸಹಾನುಭೂತಿಯು ತೀವ್ರತರವಾಗಿದೆಯೆಂದು ನನಗೆ ತೋರಿದರೆ, ನಾನು ಅಂಥವರನ್ನು ಇನ್ನಷ್ಟು ಉತ್ಸಾಹದಿಂದ ಚಿಕಿತ್ಸೆಗೊಳಿಸಲು ಯತ್ನಿಸುತ್ತಿದ್ದೆನು. ಹೆಜ್ಜೆ ಹೆಜ್ಜೆಗೂ ಸಾವಿನೊಡನೆ ಹೋರಾಡುವುದರಲ್ಲಿ ಮತ್ತು ಜೀವವನ್ನು ಉಳಿಸಿಕೊಳ್ಳಬೇಕೆಂಬುದಕ್ಕೆ ಮಾತ್ರ ಇಚ್ಛಿಸುತ್ತ, ತನ್ನ ಪ್ರಾಣವನ್ನು ಅಪರಿಮಿತವಾಗಿ ಪ್ರೀತಿಸುವ ಮತ್ತು ಬಲಿಷ್ಠವಾದ ಸಾವಿನೊಡನೆ ಹೋರಾಟ ನಡೆಸುವುದರಲ್ಲೂ ಚಿತ್ತಾಕರ್ಷಕವಾದ ಸ್ವಾರಸ್ಯವಿದೆ. ಬಡವ ಸಾಯಲಾರೆನು ಬದುಕಬೇಕೆಂಬ ಆಸೆಯೊಡನೆಯೆ ನರಳುತ್ತಿರುವಾಗ ಆ ದೃಶ್ಯವು ನಮಗೆ ಮನೋವೇದನೆಯನ್ನುಂಟುಮಾಡುತ್ತದೆ. ಆದರೆ ಬಡವ ಅಸಹಾಯಕನ ಕಡೆಗೆ ಬಗ್ಗೆ ಸಹಾನುಭೂತಿಯನ್ನು ತೋರುತ್ತಾ ಅವನನ್ನು ಸಾವಿನಿಂದ ತಪ್ಪಿಸುವಾಗಲೂ ಮತ್ತು ನಾವು ಅವನಿಗಾಗಿ ದುಃಖಿಸಿದರೂ ಅವನ ಜೀವವನ್ನು ಉಳಿಸಬೇಕೆಂಬ ಕುತೂಹಲವು ನಮ್ಮಲ್ಲಿ ಇದ್ದೇ ಇರುತ್ತದೆ. ಹೀಗೆ ಅಸಹನೀಯ ವೈರಿಯಾದ ಸಾವನ್ನು ಹಿಂದಿಕ್ಕಲು ಹೋರಾಡುವಾಗ ಆದಾಗಲೇ ನಾಶವಾಗಲಿದ್ದ ಜೀವವನ್ನು ಹಿಂದಕ್ಕೆ ತಂದು ಭೂಮಿಯಲ್ಲಿ ನಿಲ್ಲಿಸಿದಂತೆ ಯಮನು ಬಲವಾಗಿ ಹಿಡಿದಿದ್ದ ಅವನ ಕೊರಳನ್ನು ತನ್ನ ಹಸ್ತದಿಂದ ಕಳಚಿದಾಗ ಸಹ ನಾವು ಜಯಗಳಿಸಿದೆವು, ಬದುಕಿಸಿದೆವು ಎಂಬ ಸಂತೋಷವು ನಮ್ಮ ಮನಸ್ಸಿನಲ್ಲಿ ಉಂಟಾಗಿ ತೃಪ್ತಿಪಡುತ್ತ

1873ರ ಮಧ್ಯದಲ್ಲಿ ನನ್ನ ಭವಿಷ್ಯವನ್ನು ರೂಪಿಸಿದ್ದ ಒಂದು ಶಕ್ತಿಯು ನನ್ನಲ್ಲಿ ಗೋಚರವಾದಂತಾಯಿತು. ನಾನು

ನನ್ನ ಮೊದಲ ಭಾಷಣವನ್ನು ಸಿಖ್ಖರ ಗುಡಿಯ ಖಾಲೀ ಬೆಂಚುಗಳ ಸಾಲಿಗೆ ಮಾಡಿದೆನು. ಸಂದರ್ಭ ಸಿಕ್ಕಿದರೆ ನಾನು ಹೇಗೆ ಮಾತಾಡುವೆನೋ ಹಾಗೆಯೇ ಮತ್ತು ಬೋಧಿಸುವುದನ್ನು ಮಾಡುವೆನೋ ಎಂಬುದಾಗಿ ನನ್ನಲ್ಲಿ ಒಂದು ಬಗೆಯ ಹುಮ್ಮಸ್ಸಿನ ಆವೇಶವು ಹುಟ್ಟುತ್ತಿತ್ತು. ನಾನು ಹಲವು ವರ್ಷಗಳವರೆಗೂ ವೇದಿಕೆಗಳನ್ನೇ ಕಂಡಿರಲಿಲ್ಲ; ಆದರೆ ಮುಂದಕ್ಕೆ ನಾನು ಭಾಷಣಗಳನ್ನು ಮಾಡುವಂಥವನಾಗುವೆನೆಂಬ ಊಹೆಯೂ ಆಗ ಹುಟ್ಟಿರಲಿಲ್ಲ. ಆದರೆ ನನ್ನ ಮನೋದ್ವೇಗವನ್ನು ತೋರಿಸಿಕೊಳ್ಳಲು ಇಚ್ಛಿಸಿದ ಕಾರಣ ನುಡಿಗಳು ಹೃದಯಾಂತರಾಳದಿಂದ ಉಕ್ಕಿದುವು. ಆಗ ನನಗೆ ಹೇಳಲಿಕ್ಕೆ ಹೇರಳವಾಗಿ ವಿಚಾರಗಳು ಇವೆಯೆಂದೂ ಅವನ್ನು ಚೆನ್ನಾಗಿ ಹೇಳಬಲ್ಲೆನೆಂದೂ ವಿದಿತವಾಯಿತು. ಹಾಗಾಗಿ ದೊಡ್ಡದಾದ ಹಾಗೂ ಮಲಿನವಾದ ಗುಡಿಗೆ ಸ್ವಲ್ಪ ಸಂಗೀತವನ್ನು ಅಭ್ಯಸಿಸಲಿಕ್ಕೆಂದು ಹೋಗಿದ್ದಾಗ ವೇದಿಕೆಯನ್ನೇರಿ ಬೈಬಲನ್ನು ಓದಿ ಪಡೆದ ಸ್ಫೂರ್ತಿಯಿಂದ ನನ್ನ ಮೊದಲ ಭಾಷಣವನ್ನು ಏಕಾಂತದಲ್ಲಿ ನಿಂತು ಮಾಡಿದೆನು. ನಾನು ಭಾಷಣವನ್ನು ಮಾಡುತ್ತಾ ಬಂದಂತೆ ನನ್ನ ದನಿಯು ಗುಡಿಯ ಮೇಲ್ಛಾವಣಿಯಲ್ಲಿ ಪ್ರತಿಧ್ವನಿಸಲು ನನ್ನ ನುಡಿಗಳು ರಾಗ ಮತ್ತು ತಾಳಬದ್ಧವಾಗಿ ಕೇಳಿಸುತ್ತಿರುವಾಗ ನಾನು ಹೊಂದಿದ ಹುರುಪು, ಉತ್ಸಾಹ ಮತ್ತು ಸ್ಫೂರ್ತಿಯನ್ನು ನಾನು ಎಂದಿಗೂ ಮರೆಯೆನು. ಆ ಖಾಲಿಯಾದ ಹಾಗೂ ಮಲಿನವಾದ ಗುಡಿಯ ಸಾಲು ಪೀಠಗಳಲ್ಲಿ ಹಲವು ಜೀವಂತ ಮುಖಗಳು ಭಾಷಣವನ್ನು ಸಂತೋಷದಿಂದ ಮತ್ತು ಆದರದಿಂದ ಕೇಳುವುದನ್ನು ನೋಡಲಿಕ್ಕಾಗಿ ಆಗ ನಾನು ಇಚ್ಛಿಸಿದ್ದೆನು. ಹೀಗೆ ಅದು ಕನಸೋ ಎಂಬಂತೆ ಆ ಬರಿದಾದ ಹಜಾರವು ಜನದಿಂದ ತುಂಬಿದ್ದು ನನ್ನ ಭಾಷಣವನ್ನು ಆಲಿಸುವ ಮುಖಗಳು ಮತ್ತು ಕಾತರದ ಕಣ್ಣುಗಳನ್ನು ನಾನು ನೋಡುತ್ತಿರುವೆನೆಂದಾಗಲಿ, ಮಾತುಗಳು ನನ್ನ ತುಟಿಗಳಿಂದ ಹೊರಬಿದ್ದ ಆ ನನ್ನ ನುಡಿಗಳ ಧ್ವನಿಯೇ ಆ ಪುರಾತನ ಗುಡಿಯ ಕಂಬಗಳನ್ನು ಬಡಿದು ನನ್ನೆಡೆಗೆ ಪ್ರತಿಧ್ವನಿಸುತ್ತು, ಆ ವಾಕ್ಪ್ರವಾಹವು, ಅದು ನಿಜವಾಗಿಯೂ ಹಾಗಾಗಿದ್ದರೆ, ಅದು ನನ್ನಿಂದು ನಾನು ಚೆನ್ನಾಗಿ ತಿಳಿದಿದ್ದೆನು. ಆದರೆ ಅದು ಅಸಾಧ್ಯವೆಂದೂ ಎನಿಸುತ್ತು. ನನಗೆ ಸಾರ್ವಜನಿಕ ಸೇವೆಯನ್ನು ಮಾಡುವ ಅವಕಾಶವು ದೊರೆತರೆ ಮತ್ತು ನಾನು ಪ್ರತಿಪಾದಿಸುತ್ತಿರುವ ಸಂದೇಶವೇನಾದರೂ ಇದ್ದರೆ ನನಗೀಗ ಇಂಥಾದ ಕಂಠಸ್ವರವು ಒಂದು ಆಸ್ತಿಯಂತಾಗುವುದೆಂದು ಅನ್ನಿಸುತ್ತು.

ಹಲವು ತಿಂಗಳವರೆಗೂ ನನ್ನಲ್ಲುಂಟಾದ ಈ ಭಾವನೆಯು ನನ್ನಲ್ಲಿಯೇ ಗುಟ್ಟಾಗಿ ಇತ್ತು; ಆದರೆ ನಾನು ಆ ಖಾಲಿ

ಗುಡಿಯೊಳಗೆ ಒಬ್ಬಳೆ ಹೋಗಿ ನಿಂತು ಭಾಷಣವನ್ನು ಕೊಡುತ್ತಿದ್ದ ಪರಿಹಾಸಕ್ಕೆ ನಾನೇ ನಾಚುತ್ತಿದ್ದೆನು. ಅದು ಬರೀ ಮಕ್ಕಳಾಟಿಕೆಯ ಕೆಲಸವಾದರೂ ನಾನು ಹೊಸ್ತಾದ ನುಡಿಗಟ್ಟನ್ನು ಚಿತ್ರೋಪಾದಿ ಮೊದಲ ಬಾರಿಗೆ ಆ ರೀತಿ ಹೇಳಲಾರಂಭಿಸಿದ್ದು ಕಡೆಗೆ ಅದು ನನ್ನ ಜೀವನದಲ್ಲಿ ಅತಿ ಆಹ್ಲಾದವನ್ನುಂಟುಮಾಡುವ ವೃತ್ತಿಯಾಯಿತು. ವಾಗ್ಧಾರೆಯೊಂದಿಗೆ ರಭಸದಿಂದ ಅಸ್ಖಲಿತ ಹರಿಯುವಾಗ ಜನಸ್ತೋಮ ಮತ್ತೆ ಅದನ್ನು ಆಲಿಸುತ್ತಾ ಉಲ್ಲಸಿತವಾದುದನ್ನು ಉತ್ಸಾಹದಿಂದ ಆಸ್ವಾದಿಸುವುದೂ ವಿವಿಧ ಮುಖಭಂಗಿಯನ್ನಿಟ್ಟು, ಮಾತುಗಾರನ ವಿವಿಧ ವಾದಗಳನ್ನು ಒಪ್ಪಿ ಸಂತೋಷಿಸುವುದೂ, ಬಂಡೆಯ ಇರುಕಿನಿಂದ ಹರಿಯುವ ತೊರೆಯಂತೆ ಜನಸಮೂಹದ ಆಹ್ಲಾದಕರವಾದ ನಿನಾದದೊಡನೆ ಹರಿಯುವ ಭಾಷಣಕಾರನ ನುಡಿಸಾರಿಯ ಚೆಲುವನ್ನು ನೋಡುವುದೂ, ಆಲಿಸುತ್ತಾ ಕುಳಿತ ಸಹಸ್ರಾರು ಜನರ ಮೂಲಕವಾಗಿ ಅವನ ಭಾವನೆಯು ಪ್ರತಿಧ್ವನಿಸುವುದೆಂಬುದನ್ನು ಅರಿಯುವುದೂ, ಅದೇ ಹುಮ್ಮಸ್ಸಿನ ಸಾವಿರಾರು ಹೃದಯಗಳಲ್ಲಿ ದನಿಗೊಡಲು ಆ ಧ್ವನಿಯು ನನ್ನೆಡೆಗೆ ಮರುದನಿಗೊಟ್ಟಾಗ ಅವನಲ್ಲಿ ಅನುಭವಿಸಿದ ಆನಂದ ಇತರರಿಗೆ ಉಂಟಾಗಲು ಸಾಧ್ಯವಿಲ್ಲ. ಆವೇಶಕಾರಕವಾದ ಗೆಲುವಿಗಿಂತ ಅತ್ಯುಚ್ಚವಾದ ಮತ್ತು ಮಾನಸಿಕ ಉಲ್ಲಾಸದ ಸಾರವಾದ ಇಂಥ ನಿಸ್ವಾರ್ಥಕ್ಕಿಂತ ಭವ್ಯವಾದ ಸಂತೋಷವು ಜೀವನದಲ್ಲಿ ಬೇರೆ ಇದೆಯೇ?

ಕ್ರಿ. ಶ. 1873 ರಲ್ಲಿ ನನ್ನ ವೈವಾಹಿಕ ಜೀವನದ ಕಟ್ಟು ತುಂಡಾಯಿತು, ನಾನು ಬೇರೆ ನಿಶ್ಚಯವನ್ನು ಆ ಕಾರಣದಿಂದ ತೆಗೆದುಕೊಳ್ಳಲಿಲ್ಲ, ಆದರೆ ಸಮಾಜದಿಂದ ನಾನು ಬೇರ್ಪಟ್ಟು ನಿಂತುದು ಜನರ ಕಣ್ಣಿಗೆ ಎಡೆಗೊಟ್ಟಿತು. ಶ್ರೀ ಬೆಸೆಂಟ್ ಇವನ ಬಂಧುವೊಬ್ಬನು ನನ್ನ ಮತ ವಿರೋಧ ಭಾವವು ಬಹಿರಂಗವಾಗಿ ತಿಳಿದರೆ ಸಾಮಾಜಿಕ ಮತ್ತು ಧಾರ್ಮಿಕವಾಗಿ ಅಪಾಯವೆಬ್ಬದೆಯೆಂಬುದನ್ನು ಕುರಿತು ಉತ್ತೇಜಿಸಿಯೊಂದು ಹೇಳಿದನು. 1871 ರ ವೇಸಗೆಯಿಂದ ಕ್ಷೀಣವಾಗಲಾರಂಭವಾದ ನನ್ನ ಶರೀರವು ಯಥಾಸ್ಥಿತಿಗೆ ಬರಲೇ ಇಲ್ಲ, ಬದಲಾಗಿ ಈಗ ಇನ್ನಷ್ಟು ಕೆಟ್ಟಿತಲ್ಲದೆ ನಾನು ಜೀವಿಸಿದ ನಿಸ್ಸಹಾಯವು ನನ್ನಲ್ಲಿ ತೀವ್ರ ಹೃದಯವೇದನೆಗೂ ಕಾರಣವಾಯಿತು, ಕಡೆಗೆ 1873 ರ ಜುಲೈ ಅಥವಾ ಆಗಸ್ಟನಲ್ಲಿ ನಾನು ಕಷ್ಟವನ್ನು ಎದುರಿಸಬೇಕಾಯಿತು. ಕ್ರೈಸ್ತ ಮತದ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ನಾನು ಅನುಸರಿಸಬೇಕೆಂದೂ ಸಭಾವಿಧಿಗಳಲ್ಲಿ ಭಾಗವಹಿಸ

ಬೇಕೆಂದೂ ಹೇಳಿದರು. ನಾನು ಆ ಕೋರಿಕೆಯನ್ನು ನಿರಾಕರಿಸಿದೆನು. ಅದರನಂತರ ನಾನು ಈ ಎರಡರಲ್ಲಿ ಒಂದನ್ನು ಮಾತ್ರ ಅನುಸರಿಸಬೇಕಾಗಿತ್ತು. ಒಂದನೇದಾಗಿ ಧರ್ಮಸಭಾನಿಯಮಕ್ಕೆ ಒಳಪಡುವುದು, ಅಥವಾ ಗೃಹತ್ಯಾಗ ಮಾಡುವುದು. ಇದನ್ನೇ ಬೇರೊಂದು ಮಾತಿನಲ್ಲಿ ಹೇಳುವುದಾದರೆ ಒಂದೋ ಕಠಿಣತೆ, ಇಲ್ಲವೇ ಬಹಿಷ್ಕಾರ! ನಾನು ಈ ಎರಡನೇದನ್ನು ಪಾಲಿಸಲು ನಿರ್ಣಯಿಸಿದೆನು.

ಅದರನಂತರ ತುಂಬಾ ವ್ಯಸನಕ್ಕೀಡಾಗಬೇಕಾಗಿ ಬಂತು. ನನ್ನ ತಾಯಿಯು ದುಃಖದಿಂದ ಕಂಗೆಟ್ಟಳು. ಅವಳು ವಿಶಾಲವಾದ ಮತ್ತು ವ್ಯಕ್ತವಾಗಿ ತಿಳಿಯದ ಕ್ರೈಸ್ತ ಮತಾಭಿಮಾನವನ್ನು ಅವಳು ಇನ್ನಷ್ಟು ಸರಳವಾಗಿ ಹಿಡಿದಿರಲು ನಾನಾದರೋ ಅಂಥಾ ಅಭಿಮಾನದ ಕಠಿಣತನವನ್ನು ಪ್ರದರ್ಶಿಸದೆ ನಾಸ್ತಿಕತೆಯನ್ನು ಕೃತ್ಪೂರ್ವಕವಾಗಿ ಅಂಗೀಕರಿಸಿದೆನು. ಇಪ್ಪತ್ತೆರಡು ವರ್ಷ ಪ್ರಾಯದವನಾಗದೇ ಇದ್ದ ನಾನು ಮನೆಯನ್ನು ಬಿಟ್ಟು ಒರ್ವನೇ ಪಾಲಸದುದರಿಂದುಂಟಾಗುವ ಪರಿಸ್ಥಿತಿಯನ್ನು, ನನಗಿಂತಲೂ ವ್ಯಕ್ತವಾಗಿ ಅವಳು ಅರಿತಿದ್ದಳು. ಲೋಕವು ಎಷ್ಟು ಅಮಾನುಷವಾಗಿ ವರ್ತಿಸುತ್ತದೆಂದೂ, ಒರ್ವ ಎಲ್ಲಿ ಹೋಗಲಿ ಪರಕೀಯನಾಗಿದ್ದ ಮಾತ್ರಕ್ಕೆ ನಿಂದನೆಗೆ ಪಾತ್ರಳಾಗುವುದನ್ನೂ ಅವಳು ಅರಿತಿದ್ದಳು. ಆದರೆ ಗಂಡಸರು ಮತ್ತು ಹೆಂಗಸರು ಎಷ್ಟು ಕ್ರೂರಿಗಳಾಗಿಯೂ ಅವರ ನಾಲಗೆಯು ಅದೆಷ್ಟು ವಿಷಕಾರಕವಾಗಿಪ್ಪೆಂದೂ ಆಗ ನಾನು ತಿಳಿದೇ ಇರಲಿಲ್ಲ. ಅದನ್ನರಿಯದೆಯೇ ನಾನು ಅಪಾಯವಾದವುಗಳನ್ನು ಎದುರಿಸಿ ಬಳಲಿದೆನು. ಕೇವಲ ನಾಟಕೀಯವಾದ ನಿಲುವನ್ನು ಅನುಸರಿಸುವುದಕ್ಕಿಂತಲೂ ಇಂಥಾ ನಿಷ್ಠುರ "ಸಮಾಜದಲ್ಲಿ" ಜನರ ದೋಷಯುಕ್ತ ಮಾತುಗಳನ್ನು ಕೇಳುತ್ತಲೇ ಜೀವಿಸುವುದೇ ನನಗೆ ಒಪ್ಪದಂಥ ಗತಿಯಾಗಿತ್ತೆಂದು ನಿಷ್ಪವಾಗಿ ಹೇಳಬಲ್ಲೆನು.

ನನ್ನ ತಾಯಿಯು ಕಂಬನಿ ಮತ್ತು ಅವಳ ಮೊರೆಯನ್ನು ಎದುರಿಸಿ ಹೋರಾಡುವುದು ನನಗೆ ತುಂಬಾ ಕಠಿಣವಾಗಿಯೆ ಕಂಡಿತು. ಅವಳ ಮನಸ್ಸಿಗೆ ನೋವನ್ನುಂಟು ಮಾಡುವುದು ನನಗೆ ಅದಕ್ಕಿಂತ ಹತ್ತು ಪಾಲು ಹೆಚ್ಚಾಗಿ ಕ್ಷೋಭಕ್ಕೀಡಾಗಿಸುತ್ತು. ಕ್ರೌರ್ಯದ ಎದುರಿಗೆ ನಾನು ಉಕ್ಕಿನಂತೆ ಕಠಿಣಳಾಗಿದ್ದೆನು. ಆದರೆ ನಾನು ನನ್ನ ತಾಯಿಯನ್ನು ಮೀರಿ ಬೇರಾರನ್ನೂ ಈ ಭೂಮಿಯಲ್ಲಿ ಪ್ರೀತಿಸದೆ ಇದ್ದಾಗ ಅಂಥಾ ನನ್ನ ತಾಯಿ ನನ್ನ ಮುಂದೆ ಮೊಣಕಾಲೂರಿ ನಾನು ಧರ್ಮಪರಂಪರೆಯನ್ನು ಮೀರಿ ಹೋಗಬಾರದೆಂದು ಕೋರಿದಾಗ ಅಷ್ಟೇ ಕಠಿಣ ರೀತಿಯಲ್ಲಿ ವರ್ತಿಸಲು ನನಗೆ ಅಸಾಧ್ಯವಾಗಿ ಕಂಡುಬಂತು. ಅವಳನ್ನು ಆ ರೀತಿ ಶೋಕಭರಿತಳಾಗಿ ಮಾ

ಡುವುದು ಮಹಾಪರಾಧವೆಂದೇ ಭಾವಿಸಿದೆನು, ಹೀಗಿರುವಂತೆ ಬೆಳೆದಾದರವಳ ತಂದೆಯು ನನ್ನ ಮೊಕದ್ದಮೆಗಳನ್ನು ಮುಟ್ಟಿದಾಗ ನಾನೊಬ್ಬ ಕೊಲೆಪಾತಕಿಯಂತೆ ನನಗೆ ತೋರುತ್ತು, ಆದರೂ ನಾನು ಸತ್ಯಪ್ಪಗಾತಿಯಾಗಿ ಜೀವಿಸಲೆ? ನನ್ನ ತಾಯಿಗಾಗಿ ಅಂಥ ನಾಚಿಕೆಗೇಡಿನ ಪ್ರಸಂಗದಲ್ಲಿ ಬೀಳುವುದು ಅಸಾಧ್ಯ! ಅಂಥಾ ಕಾಲದ ಪ್ರೀತಿಯು ಪ್ರೇಮ ಹಾಗೂ ಸಂದಿಗ್ಧ ಪರಿಸ್ಥಿತಿಯಲ್ಲಿ ನನ್ನ ಸ್ತ್ರೀಯಸ್ವಾತಂತ್ರ್ಯವನ್ನೆ ಬಲವಾಗಿ ಅಪ್ಪಿಕೊಂಡಿತು, ಯಾರು ತಂದೆ ಮತ್ತು ತಾಯಿಯರನ್ನು ಸ್ವಾತಂತ್ರ್ಯಕ್ಕಿಂತಲೂ ಅತಿಶಯವಾಗಿ ಕಾಣುತ್ತಾರೋ ಅವನು ಅವರ ಪುತ್ರನೆನಿಸಲು ಅರ್ಹನಲ್ಲ; ಕಲ್ಲುಚೂರುಗಳು ಚೆಲ್ಲಿರುವ ನಿತ್ಯದ ಮಾರ್ಗವೇ ಬಾಳಿಗೆ ಬೆಳಕು ಮತ್ತು ಕೀರ್ತಿಯನ್ನು ~~ತಾಯುವುದು~~,

ಅಷ್ಟೇ ಅಲ್ಲ; ಇವೆರಡು ಮಕ್ಕಳಿದ್ದರು, ಆ ಪುಟ್ಟ ಕಂದಗಳು ನನ್ನನ್ನು ಕಾಡಿಸಿದ್ದರು; ನಾನು ಅವರಿಗೆ ತಾಯಿ, ದಾದಿ ಮತ್ತು ಒಡನಾಡಿಯೂ ಆಗಿದ್ದೆನು. ಅವರನ್ನು ಸಹ ನನ್ನ ತ್ಯಾಗಕ್ಕಾಗಿ ಬಿಟ್ಟುಕೊಡಬೇಕೇ? ಹೀಗೂ ಕೆಲಕಾಲ ಪ್ರಾರ್ಥನೆ ಅಂತಾಗಲಿಲ್ಲ. ನಾನು ಇಲ್ಲಿ ಹೇಳುವ ಅವಶ್ಯವಿಲ್ಲದ ಕಾರಣಗಳಿಂದ ನನ್ನ ಸೋದರನು ನನ್ನ ದಾಂಪತ್ಯ ವಿಚ್ಛೇದನವನ್ನು ಖಾಸಗಿಯಾಗಿ ಪಡೆಯುವುದರಲ್ಲಿ ಜಯಶಾಲಿಯಾದನು, ಅದರ ಬಗ್ಗೆ ಎಲ್ಲಾ ವ್ಯವಹಾರ ನಡೆದನಂತರ ನಾನು ನನ್ನ ಮಗಳು ಪ್ರೌಢಶಾಲೆಗೆ ಹೋಗಿದ್ದೆನಲ್ಲದೆ ನನ್ನ ಬಡತನದ ಬಾಳನ್ನು ಗೌರವಪ್ರದವಾದ ರೀತಿಯಲ್ಲಿ ನಡೆಸಲು ಬೇಕಾದಷ್ಟು ಮಾತ್ರ ಹಣವನ್ನು ಪ್ರತಿ ತಿಂಗಳು ಪಡೆಯುವಂತಾದೆನು, ಬಹಳ ದೊಡ್ಡ ಮೌಲ್ಯವನ್ನಿತ್ತು ಪಡೆದ ಸ್ವಾತಂತ್ರ್ಯದಿಂದ ಕಡೆಗೆ ನಾನೀಗ ಸ್ವತಂತ್ರಳೇ ಆದೆನು. ನಾನು ತುತ್ತು ಮಹಾಲಯವೆಂದರೆ ಗೃಹ, ಮಿತ್ರರು ಮತ್ತು ಸಾಮಾಜಿಕ ಸ್ಥಾನಮಾನಗಳು. ಅವುಗಳನ್ನೆಲ್ಲ ಕಳೆದುಕೊಂಡು ಪಡೆದ ಸ್ವಾತಂತ್ರ್ಯದಿಂದ ನಾನು ಮಾಡುವುದಾದರೂ ಏನೆಂದು ಚಿಂತಿಸತೊಡಗಿದೆನು, ನಾನು ನನ್ನ ನಾಸ್ತಿಕ ಮಿತ್ರರನ್ನು ಬಿಟ್ಟು ಸುಮ್ಮನೆ ಇದ್ದರೆ ನಾನು ನನ್ನ ಸೋದರನ ಜೊತೆಯಲ್ಲಿರಬಹುದಿತ್ತು. ಆದರೆ ನನ್ನ ಅಂಗಗಳನ್ನು ಪುನಃ ಸಂಕೋಲೆಯೊಳಗಡೆಗಿಸಿಕೊಳ್ಳಲು ನಾನು ಇಚ್ಛಿಸಲಿಲ್ಲ, ಅಲ್ಲದೆ ನಾನು ಯೌವನದ ಅನುಭವದಿಂದ ಏನಾದರೂ ಮಾಡಲೇ ಬೇಕೆಂದು ನಿರ್ಧರಿಸಿದೆನು. "ಏನಾದರೂ ಮಾಡಲೇ ಬೇಕು," ಎಂದು ಆಲೋಚಿಸಿ ಆ ನಿಮಿತ್ತವಾಗಿ ಹಲವು ಸಾರ್ವಜನಿಕ ಉದ್ಯೋಗ ವ್ಯವಸ್ಥಾಪಕರ (agencies) ಬಳಿಗೆ ಹೋ

ಗಲು ಅದು ಪ್ರಯೋಜನವಾಗದೇ ಹೋಯಿತು, ನಿಸ್ಸಹಾಯಕ ಹೆಂಗ
ಸರಿಗಾಗಿ ಕೊಡಲ್ಪಡುತ್ತಿದ್ದ ಹೊಲಿಗೆ ಕೆಲಸವನ್ನು ಕೆಲವು ದಿವಸಕ್ಕೆ
ಕೊಂಡು ನಾಲ್ಕುವರೆ ಶಿಲ್ಲಿಂಗ್‌ಗಳನ್ನು ಸಂಪಾದಿಸಿದೆನು, ನನ್ನ ಆ
ದಾಯವನ್ನು ಹೆಚ್ಚಿಸಲು ಬರ್ಮಿಂಗ್‌ಹಾಮಿನ ಒಂದು ಸಂಸ್ಥೆ
ಯು ಉಪಕಾರ ಸಹಾಯವಿತ್ತುದನ್ನು ಸದುಪಯೋಗಿಸಿದೆನು,
ಅದರ ಬಗೆ ಅವರು ಕೇಳಿದ ಶುಲ್ಕವನ್ನು ಆ employment
agency ಇದಕ್ಕೆ ಕಳುಹಿಸಲು ಆ ಜನ ಚಿಕ್ಕ ಗಾಜಿನ ಸೀಸೆ ಮ
ತ್ತು ಹಲವು ಚಿಕ್ಕ ಆಟದ ವಸ್ತುಗಳನ್ನು ನನ್ನ ಮಿತ್ರರಿಗೆಲ್ಲ
ಮಾರಾಟ ಮಾಡುವ ವಿಚಾರವಾಗಿ ವಿವರವಾಗಿ ಬರೆದರು. ತಿನ್ನ
ಲು ಕೊಳ್ಳುವ ಮತ್ತು ಗಾಜು ಸೀಸೆಗಳನ್ನು ಮತ್ತು ಇನ್ನೂ ಹಲ
ವು ಚಿಕ್ಕ ವಸ್ತುಗಳನ್ನು ಮಾರಾಟ ಮಾಡಲೆಂದು ಹೋಗು
ವುದು ನನಗೆ ಹಿಡಿಸದ ಕೆಲಸವಾದುದರಿಂದ ಅದನ್ನು ಬಿಟ್ಟೆ
ನು, ಹಾಗೆ ಇನ್ನೂ ಕೆಲವು ಪ್ರಯತ್ನಗಳು ವಿಫಲವಾದಾಗ ಒಂದು
ಹುದ್ದೆಯನ್ನು ಪಡೆಯಲು ಯತ್ನಿಸಿದೆನು. 'ಜಗತ್ತೆಂಬ ಸಿಂಪಿ
ಮೀನಿನ ಚಿಪ್ಪನ್ನು ಒಡೆಯಲು ಎಷ್ಟು ಕಷ್ಟವೋ ಅಷ್ಟೇ ಪ್ರಯಾ
ಸಕರ ಒಂದು ಯೋಗ್ಯ ಹುದ್ದೆಯನ್ನು ಪಡೆಯುವುದೆಂದು ಹಲ
ವರಂತೆ ನಾನೂ ಯೋಚಿಸಿದೆನು. ಹೇಗೂ ನನ್ನ ಪುಟ್ಟ ಮಗಳು,
ತಾಯಿ ಮತ್ತು ನಾನು ವಾಸಕ್ಕೆ ಒಂದು ಗೂಡಿನಂತಹ ಚಿಕ್ಕ ಮನೆ
ಯನ್ನು ಕಟ್ಟಲು ನಿರ್ಧರಿಸಿದೆನು. ಆ ಉದ್ದೇಶದಿಂದ ಮನೆಗೆ
ಮರಮುಟ್ಟು, ಸಾಮಾನುಗಳನ್ನು ಕೊಂಡುಕೊಳ್ಳಲು ನನಗೆ ಪ್ರತಿ
ತಿಂಗಳು ದೊರೆಯುತ್ತಿದ್ದ ಚಿಕ್ಕ ಸಂಬಳದಿಂದ ಸ್ವಲ್ಪ ಹಣವನ್ನು
ಉಳಿಸಲು ತೊಡಗಿದೆನು. ನಾನು Upper Norwood ಎಂಬಲ್ಲಿ
ನನಗೆ ತುಂಬಾ ಸಹಾಯಕನಾಗಿದ್ದ ಶ್ರೀ ಮತ್ತು ಶ್ರೀಮತಿ ಸ್ಕಾಟ್
ಇವರ ಮನೆಯ ಹತ್ತಿರ ಒಂದು ಚಿಕ್ಕ ವಸತಿಯನ್ನು ಕಂ
ಡೆನು. ಆ ಮನೆಯನ್ನು ವಸಂತಮಾಸದಲ್ಲಿ ಕೊಂಡುಕೊಳ್ಳಲು
ವ್ಯವಹರಿಸಿದೆನು, ಅನಂತರ ನನ್ನ ಅಜ್ಜಿ ಮತ್ತು ತಾಯಿಯ ಇ
ಬ್ಬರು ಸೋದರಿಯರು ವಾಸಿಸಿದ್ದ ಫೋಕ್‌ಸ್ಟನ್ (Folkstone)
ನಿಂದ ದೀರ್ಘವಾದೊಂದು ಆಹ್ವಾನ ಬಂದುದರಿಂದ ಅಲ್ಲಿಗೆ
ಹೋಗಿ ಏನಾದರೂ ಹುದ್ದೆಯನ್ನು ಪಡೆಯಬೇಕೆಂದು ನಿಶ್ಚಯಿ
ಸಿದೆನು, ಅನಂತರ ಅತ್ತೆಂದು ಕೆಲಸವನ್ನು ಹಿಡಿದೆನು. ಸ್ಥಳೀ
ಯ ಗುಡಿ ಪುರೋಹಿತರಿಗೆ ಸೇವಾದಾದಿಯು ಬೇಕಾಗಿದ್ದುದರಿಂ
ದ ನನ್ನ ತಾಯಿಯ ತಂಗಿಯು ಆ ಸ್ಥಾನಕ್ಕೆ ನನ್ನನ್ನು ತಾತ್ಕಾ
ಲಿಕವಾಗಿ ನೇಮಿಸಲು ಶಿಫಾರಸು ಮಾಡಿದಳು. ನನ್ನ ಮಗ
ಳು, ಮೇಬಲ್, ಇವಳನ್ನೂ ಜೊತೆಗೂಡಿ ನಾನು ಅಲ್ಲಿಗೆ ಹೋದೆನು,
ನನಗೆ ವಿಧಿಸಿದ್ದ ಕೆಲಸಕ್ಕೆ, ವಾಸಕ್ಕೆ, ಮನೆ ಮತ್ತು ಊಟ

ವನ್ನು ಕೊಡುತ್ತಿದ್ದರು. ಅಲ್ಲಿ ನಾನು ಮುಖ್ಯ ಅಡಿಗೆಯವಳೂ ಮನೆಯ ವ್ಯವಸ್ಥಾಪಿಕೆಯೂ ದಾದಿಯೂ ಆಗಿದ್ದುದರಿಂದ ನನ್ನ ಅಲ್ಪ ತಿಳುವನ್ನು ನಾನು ಉಳಿಸಿಕೊಳ್ಳಲು ಅನುಕೂಲವಾಯಿತು. ಹೇಗೂ ಆ ಕೆಲಸವನ್ನು ಬಹು ಕಾಲ ಮಾಡಲಾರೆನೆಂದು ಆಗಲೇ ಯೋಚಿಸಿದ್ದೆನು. ಬೇಯಿಸುವುದು, ಸುಡುವುದು ಎಲ್ಲಾ ಸರಿ! ನನ್ನ ಸಾರು ಇತ್ಯಾದಿ ಉತ್ತಮವಾಗಿರುತ್ತಿದ್ದುವು; ಆದರೆ ಒಲೆ ಹಂಡೆಗಳು, ಕಾದ ಪಾತ್ರೆಗಳು ಇತ್ಯಾದಿಗಳಿಂದ ಅಕಸ್ಮಾತ್ತಾಗಿ ಕೈ ಸುಟ್ಟು ಹೋಗಿ ಗುಳ್ಳೆಗಳು ಎಬ್ಬಿಸುತ್ತಿದ್ದುವು. ಅಡಿಗೆ ಮಾಡಿ ಅಭ್ಯಾಸವಿಲ್ಲದವಳಿಗೆ ಮಾಂಸವನ್ನು ಬೇಯಿಸುವ ಕೆಲಸ ಸಾಕಷ್ಟು ಉತ್ಸಾಹಕರವೆ! ಅಡಿಗೆಯ ಘರದಲ್ಲಿ ಅದು ಹೇಗೆ ರುಚಿಸುವುದೋ, ಬೇರೆ ಮಾಡಿ ಬೇಯಿಸಿದ್ದರಲ್ಲಿ ನೀರುಳ್ಳಿ ಮಾತ್ರ ಉಳಿಯುವುದೇನೋ ಎಂಬ ಕಳವಳಕ್ಕೀಡಾಗುತ್ತಿದ್ದೆನು. ಆ ಅಡಿಗೆಯ ವಿಷಯದ ಪುಸ್ತಕಗಳನ್ನು ನೋಡಿ ನಾನು ಬೇಯಿಸುತ್ತಿದ್ದರೂ ನನ್ನ ಅಡಿಗೆಯು ಸಾಧಾರಣ ಉತ್ತಮವಾಗಿರುತ್ತಿತ್ತು; ಆದರೆ ನನಗೆ ಮತ್ತು ಶಕ್ತಿ ಸಾಲದ್ದರಿಂದ ನಾನು ಬೇಗನೆ ಸುತ್ತುಮುತ್ತಲ ಕೆಲಸ, ಗುಡಿಸುವಿಕೆಯನ್ನೆಲ್ಲ ಮಾಡಲಿಕ್ಕಾಗುತ್ತಿರಲಿಲ್ಲ. ಹೇಗೂ ಆ ಕೆಲಸವೇ ಅಷ್ಟರಲ್ಲಿ ಕೊನೆಗೊಂಡಿತು. ನನ್ನ ವಿದ್ಯಾರ್ಥಿಗಳಲ್ಲಿ ಒಬ್ಬನು ಗಂಟಲು ರೋಗದಿಂದ ಸತ್ತುದರಿಂದ ನಾನು ಅಲ್ಲಿಂದ ನಂತರ ದಾದಿಯ ಕೆಲಸವನ್ನು ಮಾಡತೊಡಗಿದೆನು. ನನ್ನ ಮಕ್ಕಳನ್ನು ವಿಶೇಷವಾಗಿ ಪ್ರೀತಿಸಿದ್ದ ಅವಳ ಅಜ್ಜಿಯ ಬಳಿಗೆ ಕಳುಹಿಸಿದೆನು. ಅಜ್ಜಿಯು ಹಾರ್ದಿಕವಾಗಿ ತನ್ನ ಕರುಮಕ್ಕಳನ್ನು ಓಲೈಸುತ್ತ ಅವಳ ಬಳಿಗೂಡಲು ಮಗುವಿನ ಕೆಂಪು ಕೂದಲಿನ ಎಡೆಯಲ್ಲಿ ಮಿನುಗುತ್ತಾ ಅಮೋಘ ತಾರತಮ್ಯವನ್ನು ಪ್ರದರ್ಶಿಸುತ್ತ. ನನ್ನ ಮಗನು ಬೆಂಕಿಜ್ವರದಿಂದ ನರಳಿದಾಗ ನಾವು ಅವನನ್ನು ಇತರರಿಂದ ಬೇರ್ಪಡಿಸಲು ಮನೆಯ ಮಹಡಿಯಲ್ಲಿರಿಸಿದೆವು. ನೆಲಕ್ಕೆ ಹಾಸಿದ ಜಮಖಾನೆ ಮತ್ತು ಕಿಟಿಕಿ ಬಾಗಿಲುಗಳ ಪರದೆಗಳನ್ನೆಲ್ಲ ಕ್ಲೋರಿನ್ ಅನಿಲ ಮತ್ತು ಗಂಧಕದಿಂದ ತೊಳೆದು ಒಂದೆಡೆ ಇರಿಸಿ ಅದರೊಳಗೆ ನಾನು ನನ್ನ ಮಗನೊಡಗೂಡಿ ಅಡಗಿದೆನು. ಹೀಗೆ ಅವನ ಖಾಯಿಲೆಯು ಹಬ್ಬುವುದರ ಅಪಾಯವನ್ನು ತಡೆದಿದ್ದಾಗ ಮನೆಯಲ್ಲಿದ್ದವರೆಲ್ಲರೂ ಸುರಕ್ಷಿತವಾಗಿದ್ದರಲ್ಲದೆ ನಾನು ಆಪತ್ತಿಯಿಂದ ಎಂದಿನಂತೆ ನನ್ನ ಕೆಲಸಕ್ಕೆ ಪ್ರಾರಂಭಿಸಿದೆನು.

1874ರ ವಸಂತ ಕಾಲವು ಅಹ್ಲಾದತೆ ನಿಶ್ಚಿತವಾಯಿತು. ಕೆಲವು ವಾರಗಳಲ್ಲಿ ನನ್ನ ತಾಯಿ ಮತ್ತು ನಾನು ಜತೆಯಾಗಿ ಮನೆ ಮಾಡಿದೆವು. ಆ ಬಗೆ ನಾವು ಹೇಗೆ ಯೋಜನೆಯನ್ನು ಕೈಗೊಂಡೆವು ಮತ್ತು ಸನಿವೇಶಗಳನ್ನು ಹೇಗೆ ಸುಗಮವಾಗಿ ಹೊಂದಿದೆವು

ಎಂಬುದಕ್ಕೆ ನೀವು ಹಿಂದಿನ ಅನುಭವಗಳನ್ನು ಸ್ಮರಿಸಿದಿರಿ. ನನ್ನ ಮತಗಳ ವಿಷಯ ಬಗ್ಗೆ ನೀವು ಚರ್ಚಿಸಿ ಕಡೆಗೆ ಇಬ್ಬರೂ ಒಂದರಲ್ಲಿ ಬಾಲಿ ಗೊತ್ತಿರುವಂತೆ ತೀರ್ಮಾನಿಸಿದಿರಾದರೂ ಎಲ್ಲವೂ ಕಾರ್ಯರೂಪಕ್ಕೆ ಬಾರದ ಹಗಲುಗನಸುಗಳಾಗಿ ಉಳಿದುವು.

ನನ್ನ ತಾಯಿಯು ನಗರದತ್ತ ಹೋಗಿದ್ದಳು. ಹಿಂದಿರುಗುವಾಗಳಲ್ಲಿ ಅವಳು ತೀವ್ರ ಅಸ್ವಸ್ಥತೆಗೆ ಸಿಲುಕಿದ್ದಳೆಂದು ತಂತಿ ವಾರ್ತೆಯು ಬಂತು. ಆದ್ದರಿಂದ ನಾನು 'ಎಕ್ಸ್‌ಪ್ರೆಸ್' ರೈಲುಗಾಡಿಯಲ್ಲಿ ಪ್ರಯಾಣಿಸಿ ತ್ವರಿತವಾಗಿ ಹೋದು ಅವಳ ಹಾಸಿಗೆಯ ಬಳಿಯಲ್ಲಿ ಇರತೊಡಗಿದೆನು. ಸಾಯುತ್ತಲಿದ್ದ ಅವಳು ಮೂರು ದಿನಗಳ ಕಾಲ ಬದುಕಬಹುದಲ್ಲದೆ ಹೆಚ್ಚೇನೂ ಇಲ್ಲ, ಎಂದು ವೈದ್ಯನು ಹೇಳಿದನು. ನಾನು ಆ "ಮರಣದಂಡನೆ"ಯ ವರದಿಯನ್ನು ತಾಯಿಗೆ ಮುಟ್ಟಿಸಿ ಉಸುರಿದೆನು. ಅವಳಾದರೋ ತಾನು ಇದಾಗಲೇ ಸಾಯಲು ಆಗಲೆಂದು ತನಗೆ ತೋರುತ್ತದೆಯೆಂದು ನಿರ್ಧಾರಪೂರ್ವಕವಾಗಿ ಹೇಳಿದಳು. ಅವಳ ಆ ಹೇಳಿಕೆಯು ಸರಿಯೆನಿಸಿತು. ಅವಳು ಹೃದಯದ ಬೇನೆಗೆ ತುತ್ತಾಗಿ ನರಳುವಾಗ ನೋವಿನಿಂದ ಹೋರಾಡುತ್ತಲಿದ್ದ ಕಡೆಗೆ ಚಿಂತಾಜನಕ ಸ್ಥಿತಿಯ ಮಾತೆಯು ಹಿಂದಕ್ಕೆ ಸರಿಯುವಂತಿತ್ತು. ನಾನು ನಿದ್ರೆಯಿಲ್ಲದೆ ತುಂಬಾ ನಿಲುವಿಂದ ಹಗಲೂ ರಾತ್ರಿಯೂ ಅವಳನ್ನು ಉಪಚರಿಸಿದೆನು. ನನ್ನ ಜೀವನದಲ್ಲಿ ಬಹು ಪ್ರಿಯವಾದುದನ್ನು ನನ್ನ ವಿಧಿಯು ಅದೀಗ ನನಗೆ ಒದಗಿಸಿತು. ಅದರ ನಂತರ ಎರಡನೇ ಬಾರಿಗೆ ಮತ್ತೊಂದು ಸಂದಿಗ್ಧ ಪರಿಸ್ಥಿತಿ ಒದಗಿತಲ್ಲದೆ ಮತ್ತೊಮ್ಮೆ ಎಂಬಂತೆ ಅವಳ ಸ್ಥೈರ್ಯವನ್ನೂ ನನ್ನ ಪ್ರೀತಿಯೂ ಒಟ್ಟುಗೂಡಿ ಅವಳನ್ನು ಸಾವಿನಿಂದ ಪಾರಾಗಿಸಿತು. ಅವಳಾದರೋ ಸಾಯಲು ಇಚ್ಛಿಸಿರಲಿಲ್ಲ. ತನ್ನ ಪ್ರಾಣದ ಮೇಲೆ ಅವಳಿಗೆ ಬಲವತ್ತರವಾದ ವಿಶ್ವಾಸವಿತ್ತು. ನಾನು ಅವಳನ್ನು ಸಾಯಲಿಕ್ಕೆ ಬಿಡುತ್ತಿರಲಿಲ್ಲ. ಹೀಗೆ ನಾವಿಬ್ಬರೂ ಯಮನನ್ನು ದೂರವಿರಿಸಿದ್ದೆವು. ಕಡೆಗೆ ಜೊತೆಯಾದರ ಬಾಯಿತಿಗೆ ಅವಳು ತುತ್ತಾಗಲು ಅವಳ ಕಡೆಯ ನಿರ್ಣಯವಾಗಿಯೂ ನಿಶ್ಚಿತವಾಯಿತು.

ಆ ಸಮಯದಲ್ಲಿ ಹದಿನೆಂಟು ತಿಂಗಳುಗಳ ಕಾಲ ನಾನು ಹುಟ್ಟಿದಿದ್ದ ಕಡೇ ಬಾರಿಗೆ ಧಾರ್ಮಿಕ ಸಂಸ್ಕಾರ (Sacrament) ವನ್ನು ಸ್ವೀಕರಿಸಿದೆನು. ತಾನು ಸಾಯುವುದಕ್ಕಿಂತ ಮುಂಚೆ ಮತಬೋಧನೆಯನ್ನು ಮಾಡಲು (Communicate) ನನ್ನ ತಾಯಿ ತುಂಬಾ ಇಚ್ಛಿಸಿದ್ದಳು. ಆದರೆ ನಾನು ಅವಳನ್ನು ಗುಡಿಗೆ ಕರೆದುಕೊಂಡು ಹೋಗದೆ ಅಂದಿನ ಮತೀಯ ಬೋಧನೆಗೆ ಸಾಧ್ಯವಿರಲಿಲ್ಲ. "ಮೋಕ್ಷ ಪ್ರಾಪ್ತಿಗೆ ಹಾಗೆ ಬೋಧನೆಯನ್ನು ಪಡೆಯುವುದು ಅತ್ಯವಶ್ಯಕವೆಂದಾದರೆ ನಾನು ನನ್ನ ಪ್ರೀತಿಯ ಆಸೆಯನ್ನು

ಬಿಟ್ಟು ಅದನ್ನು ಪಡೆಯಲು ಇಚ್ಛಿಸಲಾರೆನು," ಎಂದು ಅವಳು ಖಂಡಿತವಾಗಿಯೇ ಹೇಳುತ್ತಿದ್ದಳು. "ನಾನು ಅವಳನ್ನು ಅಗಲಿ ರಕ್ಷಿಸಲ್ಪಡುವುದಕ್ಕಿಂತ ಅವಳೊಡನೆಯೇ ನಾಶವಾಗಬಯಸುವೆನು," ಎಂದುದಾಗಿ ತಾಯಿಯ ಉದ್ಗಾರವಾಗಿತ್ತು. ನನಗೆ ಚೆನ್ನಾಗಿ ತಿಳಿದಿದ್ದ ಬಿಷಪ್‌ಗಳಲ್ಲೊಬ್ಬನ ಬಳಿಗೆ ಹೋಗಿ ಇದನ್ನೆಲ್ಲ ಅವನ ಮುಂದೆ ಹೇಳಿಕೊಂಡೆನು. ನಾನು ನಿರೀಕ್ಷಿಸಿದಂತೆ ಅವನು ವಿಚ್ಛೇದನೆಯನ್ನು ಪಡೆಯಲು ನನ್ನನ್ನು ಬಿಡಲಿಲ್ಲ. ಒಂದು ಕ್ಷಣಕಾಲ ಪುನಃ ಪ್ರಯತ್ನಿಸಿದಾಗಲೂ ಅದು ವಿಫಲವಾಯಿತು. ಕಡೆಗೆ ಒಂದು ಆಲೋಚನೆಯು ಥಟ್ಟನೆ ಹೊಳೆಯಿತು. ನನ್ನ ತಾಯಿಯ ಆತ್ಮೀಯನಾದ ಡೀನ್ ಸ್ಟ್ಯಾನ್ಲಿಯು ಆಂಗ್ಲ ಧರ್ಮದ ವಿಷಯದಲ್ಲಿ ಬಹು ಪ್ರಭಾವಿತನೆಂಬುದಾಗಿ ಪ್ರಸಿದ್ಧನಾಗಿದ್ದನು. ನನಗೆ ಅವನ ಪರಿಚಯವಿರಲಿಲ್ಲ. ನಾನು ಅವನನ್ನು ಕೇಳುತ್ತೇನೆ, ಎಂದು ಭಾವಿಸಿದೆನು. ಹಾಗೆ ಕೇಳಿದರೆ ಅದು ನನ್ನ ಗಡಸುತನವೆಂದು ಆಲೋಚಿಸಬಹುದಾದರೂ ಅವನು ಬಹುಶಃ ಒಪ್ಪಬಹುದು! ಆದರೆ ನಾನು ನನ್ನ ಪ್ರೀತಿಯ ತಾಯಿಯ ಆತ್ಮಕ್ಕೆ ಶಾಂತಿಯನ್ನು ಬಯಸಲು ಏನನ್ನು ಮಾಡಲಿ? ಹೇಗೂ ನಾನು ಯಾರೊಡನೆಯೂ ಏನನ್ನೂ ಹೇಳಲಿಲ್ಲ. ಅಲ್ಲಿಂದ ವೆಸ್ಟ್‌ಮಿನಿಸ್ಟರ್‌ನ ಧರ್ಮಾಧಿಕಾರಿಯ ಡೀನರಿ (Deanery) ಗೆ ಹೋದೆನು. ಹಾಗೆ ಹೋಗಿ ಬಹಳ ಕಳವಳದಿಂದಲೇ ಧರ್ಮಗುರು ಎಲ್ಲಿದ್ದಾನೆಂದು ಕೇಳುತ್ತಾ ಬಹು ಖಿನ್ನ ಹೃದಯದಿಂದ ಒಬ್ಬ ಸೇವಕನನ್ನು ಅನುಸರಿಸಿ ಮಹಡಿಗೆ ಹೋದೆನು. ಸ್ವಲ್ಪ ಸಮಯದ ಮೇಲೆ ಆ ಗ್ರಂಥಭಂಡಾರದಲ್ಲಿ ಒಬ್ಬಳೇ ಇರುತ್ತಿರಲು ಧರ್ಮಗುರುವು ಅಲ್ಲಿಗೆ ಬಂದನು. ಅವನು ತನ್ನ ಸ್ಪಷ್ಟವಾದ ಕಣ್ಣುಗಳನ್ನು ಪ್ರಶ್ನಾರ್ಥಕವಾಗಿ ನನ್ನೆಡೆಗೆ ಬೀರುತ್ತಾ ನಿಂತಿದ್ದ ಆ ಕ್ಷಣಕಾಲದ ಸಂಭಾಷಣೆಯ ವೇಳೆಯಲ್ಲಿ ನಾನು ಹೊಂದಿದ ಸಮಾಧಾನದ ಸಂತೋಷ ಭಾವವು ನನ್ನ ಇಡೀ ಜೀವಮಾನದಲ್ಲಿ ಹೊಂದಿದ್ದೇ ಇಲ್ಲವೆಂದು ಭಾವಿಸುತ್ತೇನೆ.

ಬಹಳ ಮೆಲ್ಲಗೆ ತಡೆತಡೆದು ಮತ್ತು ಬಹುಶಃ ತುಂಬಾ ಅಸ್ಪಷ್ಟವಾಗಿಯಾದರೂ ಧೈರ್ಯದಿಂದ ಮತ್ತು ನಿಷ್ಕಪಟವಾದ ಸರಳತೆಯಿಂದ ನನ್ನ ಕೋರಿಕೆಯನ್ನು ಅವನ ಮುಂದಿಟ್ಟೆನು. ನನ್ನ ತಾಯಿಯು ಮರಣಶಯ್ಯೆಯಲ್ಲಿದ್ದಳು; ಮತ ಸಂಸ್ಕಾರವನ್ನು ಪಡೆಯಲೆಂದು ಅವಳು ತವಕಪಡುತ್ತಿದ್ದಳು; ಅದನ್ನು ನಾನು ಅವಳೊಡನೆ ಪಡೆಯದೆ ಅವಳು ಹೊಂದಲಾರೆನೆಂದು ಹೇಳುತ್ತಿದ್ದಳು! ನಾನಾದರೋ ಕ್ರೈಸ್ತಧರ್ಮದಲ್ಲಿ ವಿಶ್ವಾಸವಿಡಲಿಲ್ಲ. ಇವೆರಡು ಸಮಸ್ಯೆಗಳು ನನ್ನನ್ನು

ಪ್ರದರ್ಶನಿಯಲ್ಲಿ ಭಾಗವಹಿಸಲು ಬಿಡಲಿಲ್ಲವಾದುದರಿಂದ ನಿರಾಶೆಯ ಳಾಗಿ ನಾನು ಅವನ ಬಳಿಗೆ ಬಂದಿದ್ದೇನೆ. ಆ ರೀತಿ ಮಾಡ್ಲೆ ಹಾಯುವುದು ನಿಜಕ್ಕೂ ಕಷ್ಟಕರವಾದುದೆಂದು ನಾನು ತಿಳಿದಿರುವೆನಾದರೂ ನನ್ನ ತಾಯಿಯು ಹೇಗೂ ಸಾಯಲು ಬಿದ್ದಿದ್ದಾಳೆ!

ಹೀಗೆ ಹೇಳಲು ಅವನ ಮುಖವು ನಿಶ್ಚಯಾಯಿತು, "ನೀನು ಬಂದು ನನ್ನನ್ನು ಕಂಡುದು ಸರಿ," ಎಂದು ಅವನು ನಯವಾಗಿ ನಾದ ಮಯ ಕಂಠದಿಂದ ಉತ್ತರಿಸಿದನು, ಅವನ ನಿಟ್ಟದೃಷ್ಟಿಯು ನೀ ಲವು ಈಗ ತೀರಾ ದಿವ್ಯ ಹಾಗೂ ಸರಳವಾದ ರೀತಿಗೆ ಮಾರ್ಪಟ್ಟಿತು, "ಸರಿ, ನಾನು ಹೋಗಿ ನಿನ್ನ ತಾಯಿಯನ್ನು ಕಾಣುವೆನು. ನೀನು ನಿನ್ನ ಪರಿಸ್ಥಿತಿಯ ಬಗ್ಗೆ ಪ್ರಾರ್ಥನೆಯಾಗಿ ನನಗೆ ಹೇಳಿರುವಿಯೆಂಬುದರಲ್ಲಿ ಸಂಶಯಪಡಲಾರೆನು, ನಿನ್ನ ತಾಯಿಯ ಇಚ್ಛೆಯಂತೆ ವಿಧಿಯನ್ನು ನೆರವೇರಿಸಲು ತಕ್ಕುದಾದ ಹಾದಿಯಿದೆ" ಎಂದು ಅವನೆಂದನು.

ಅವನ ದಯಾಪೂರ್ಣ ನುಡಿಗೆ ಕೃತಜ್ಞತೆಯನ್ನು ಸೂಚಿಸಿ ಲು ನಾನು ಗದ್ಗದ ಕಂಠದಿಂದ ಕಾದಿದ್ದೆನು. ಅವನ ವಿಶ್ವಾಸದ ಮಾತುಗಳು ನನ್ನನ್ನು ಮೂಗನಾಗಿರಿಸಿತು, ಮನಸ್ಸಿನ ಕಾತರತೆ ಮತ್ತು ಅವನಿಂದ ಧಿಕ್ಕರಿಸಲ್ಪಡುವೆನೆಂಬ ಭಯವು ನನ್ನಿಂದ ಅಕಸ್ಮಾತ್ತಾಗಿ ತೊಲಗಲು ಆ ಭಾವನೋದ್ವೇಗವು ನನ್ನನ್ನು ನಿ ಶಕ್ತನ್ನು ಬಾಧಿಸಿತು, ಆದರೆ ಡೀನ್ ಸ್ಪೆನ್ಸಿಯು ನಾನು ಕೋರಿ ದ್ದಕ್ಕಿಂತ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನನಗೆ ಸಹಕರಿಸಿದ್ದನು, ಆ ದಿನ ಮಧ್ಯಾಹ್ನ ಬಂದು ನನ್ನ ತಾಯಿಯೊಡನೆ ಮೆಲ್ಲಗೆ ಸ್ವಲ್ಪ ಮಾತುಕತೆಯನ್ನಾಡಲು ಇಚ್ಛಿಸಿದನಲ್ಲದೆ ಅವನ! ಮರುದಿನ ಧರ್ಮಬೋಧೆಯನ್ನು ಮಾಡಲಿಕ್ಕೆ ಬರುವೆನೆಂದು ಹೇಳಿದನು.

"ಅಸ್ವಸ್ಥತೆಯಿಂದ ಕೊರಗುವವರಿಗೆ ಅಶುಚಿತರದ ಕ್ಷಣವು ನಿಜಕ್ಕೂ ಉತ್ಸಾಹವೀಯಲಾರದು. ಪ್ರದರ್ಶನಿಯು ನ್ನು ಮಾತ್ರವೇ ವಿಧಿ ಸಂಸ್ಕಾರವು ನಿನ್ನ ಮಮತೆಯ ಮಾ ತ್ತಿಗೆ ಆಯಾಸಕ್ಕೀಡಾಗಿರಬಹುದು. ಈ ದಿನ ನಾನು ಅವಳೊಡನೆ ಅರ್ಧ ಗಂಟೆ ಕಾಲ ಕಳೆದು ಪ್ರಾರ್ಥನಾಸಂಸ್ಕಾರ ವಿಧಿಯನ್ನು ನೆರವೇರಿಸಿದರೆ ಅದು ಅವಳಿಗೆ ಸುಖಕರವಾಗುವುದು," ಎಂ ದು ಅವನು ಅತಿ ವಿನೀತನಾಗಿ ಮತ್ತು ಬಹು ಆಲೋಚನಾಪರ ನಾಗಿ ಹೇಳಿದನು.

ಡೀನ್ ಸ್ಪೆನ್ಸಿಯು ಆ ದಿನ ಮಧ್ಯಾಹ್ನ ಬ್ರಾಂಕ್ಸ್‌ನಿಂದ ಬಂದು ಸುಮಾರು ಅರ್ಧ ಗಂಟೆ ಕಾಲ ನನ್ನ ತಾಯಿಯೊಡನೆ ಮಾ ತಾಡುತ್ತಾ ಇದ್ದು ಕಡೆಗೆ ನನ್ನ ಪರಿಸ್ಥಿತಿಯ ಬಗೆ ತಿಳಿಯಲು ಇ ಚ್ಛಿಸಿದನು. ನಡೆಸುದಿನಗಳು ಕೇವಲ ಮಾತು ನಂಬಿಕೆಗಳಿಗಿಂತ ಎತ್ತರವಾದುದೆಂದೂ ಕ್ರೈಸ್ತನ ನೈತಿಕ ಸೂತ್ರವನ್ನು ಪಾ

ಆಸಲು ಯತ್ನಿಸುವವರೆಲ್ಲರೂ ಶ್ರದ್ಧಾವಂತ ಕ್ರೈಸ್ತರೆಂಬುದನ್ನು ತಾನು ನಂಬುವೆನೆಂದೂ ಹೇಳಿದನು. ಏಸುವೇ ಪೂರ್ಣ ಸ್ವರೂಪನಾದ ದೇವರು ಎಂಬ ವಿಷಯದ ಬಗ್ಗೆ ಆವನು ಹೆಚ್ಚು ಪ್ರಸ್ತಾಪಿಸಲಿಲ್ಲ. ಒಂದು ರೀತಿಯಲ್ಲಿ "ಏಸುವು ದೇವರ ಮಗನು" ಆದರೆ ದೈವತ್ರಿಯ ನ್ನು ಸರಿಯಾಗಿ ತಿಳಿಯುವಾಗ ಈ ರೀತಿ ಕೆಲವು ವಿವರಣೆಗಳ ಬಗ್ಗೆ ವಾದಿಸುವುದು ತೀರಾ ನಿರರ್ಥಕವೆಂದೂ ಆ ಕಾರಣದಿಂದ ಶ್ರದ್ಧಾವಂತ ಭಕ್ತರನ್ನು ಅವಿಶ್ವಾಸಿಗಳಿಂದ ಬೇರ್ಪಡಿಸುವುದು ಅವಿವೇಕವಾದ ಕೆಲಸವೆಂದೂ ಹೇಳಿದನು. ದೇವರಲ್ಲಿ ಮತ್ತು ಮಾನವನಲ್ಲಿ ನಮ್ಮ ಕರ್ತವ್ಯದ ಬಗ್ಗೆ ಚಿಂತಿಸಬೇಕಾದ್ದೇ ಪ್ರಾಮುಖ್ಯವಾದ ವಿಷಯವೆಂದೂ ಅಂಥಾ ವಿಷಯಗಳಲ್ಲಿ ಆಸಕ್ತರಾಗಿರುವವರು ಪೂಜಿತ ಸಂಸ್ಕಾರಗಳಲ್ಲಿ ಇತರರಂತೆ ಭಾಗವಹಿಸಬಹುದೆಂದೂ ದೇವರಲ್ಲಿ ಪ್ರೀತಿ ಮತ್ತು ಮಾನವನಿಗಾಗಿ ಆತ್ಮತ್ಯಾಗ ಮಾಡುವುದೇ ಪ್ರಾಮುಖ್ಯವಲ್ಲದೆ ಒಂದು ಸಿದ್ಧಾಂತದ ಬಗ್ಗೆ ಬರೀ ನಂಬಿಕೆಯನ್ನಿಟ್ಟು ಮಾತ್ರಕ್ಕೆ ಅದೇ ಪರಿಪೂರ್ಣವಾದ ಭಕ್ತಿಯಾಗದೆಂದೂ ಹೇಳಿದನು. ಪವಿತ್ರವಾದ ಧರ್ಮಬೋಧನೆಯು ಬಿಷನೇ ಆದ ಪರಮಾತ್ಮನನ್ನು ಕಂಡುಹಿಡಿಯುವ ಸಾಧನೆಯಲ್ಲದೆ ಮಾನವರಲ್ಲಿ ಭಿನ್ನಾಭಿಪ್ರಾಯವನ್ನು ಹುಟ್ಟಿಸುವುದಕ್ಕಲ್ಲವೆಂದೂ ಧರ್ಮಸಂಸ್ಕಾರದ ಮೂಲಕವಾಗಿ ಜನತೆಯಲ್ಲಿ ಐಕ್ಯವನ್ನು ಬೆಳೆಸಲಿಕ್ಕಲ್ಲದೆ ಭಿನ್ನತೆಯನ್ನು ಹುಟ್ಟಿಸಲಿಕ್ಕಾಗಿ ಆದಿಗುರುವು ಇಟ್ಟಿಸಲಿಲ್ಲವೆಂದೂ ಆವನು ತನ್ನ ಮೃದುವಾದ ಕಂಠಸ್ವರದಿಂದ ಹಾರ್ದಿಕವಾಗಿ ಹೇಳಿದನು.

ಮರುದಿನ ಬಿಷಪ್ ಪ್ಯಾನ್ಲಿಯು ನನ್ನ ತಾಯಿಯ ಹಾಸಿಗೆಯ ಬಳಿಯಲ್ಲಿ ಇರುತ್ತ ಪವಿತ್ರ ಧರ್ಮವಿಧಿಯನ್ನು ನೆರವೇರಿಸಿದನು. ಆ ಪರಿಚಿತನೊರ್ವನು ನಮ್ಮಲ್ಲಿ ದಯೆಯುಳ್ಳ ಬಂಧು ಅವಳಿಗೆ ನೆರವೇರಿಸಿದ ವಿಧಿಯಿಂದ ಅವಳ ದಿವ್ಯ ಹಾಗೂ ಉದಾತ್ತವಾದ ಆತ್ಮವು ಸಂತೃಪ್ತಿಗೊಂಡುದನ್ನು ನೋಡಿದಾಗ ನಾನು ಅದರಲ್ಲಿ ವಿಭ್ರಮವಿಲ್ಲವೂ ಸಾರ್ಥಕವಾದಂತಾಯಿತು. ನನ್ನ ನಾಸ್ತಿಕವಾದದ ಬಗ್ಗೆ ಅವನು ತಾಳಿದ್ದ ಮನಸ್ತೋದ್ವೇಗವೆಲ್ಲವನ್ನೂ ತನ್ನ ನಯವಿನಯದ ಮಾತುಗಳಿಂದ ಆವನು ತೋರಗೊಡಿಸಿದನಲ್ಲದೆ ಹೃದಯವು ಸತ್ಯದಲ್ಲಿ ನೆಲೆಸಿದ್ದವರಿಗೆ ಇತರ ಭಿನ್ನಾಭಿಪ್ರಾಯಗಳ ಬಗ್ಗೆ ಯಾವ ರೀತಿಯಲ್ಲೂ ಕಳವಳಪಡಬೇಕಾದ ಅವಶ್ಯಕತೆಯಿಲ್ಲವೆಂಬುದನ್ನು ವ್ಯಕ್ತಪಡಿಸಿದನು. "ನಮ್ಮ ದೇವರು ಸತ್ಯದೇವತೆಯೆಂಬುದನ್ನು ನಂಬು. ಆ ಕಾರಣದಿಂದ ದೃಢ ವಿಶ್ವಾಸವನ್ನಿಟ್ಟು ಸತ್ಯಾನ್ವೇಷಣೆಯನ್ನು ಮಾಡಿದ್ದೇ ಆದರೆ ಅದು ಪರಮಾತ್ಮನಿಗೆ ಎಂದೂ

ಅಪ್ರಿಯವಾಗದು, ಎಂಬುದನ್ನು ಯಾವಾಗಲೂ ನೆನೆ," ಎಂದು ಅವನು ಹೇಳಿದ್ದನ್ನು ನನ್ನ ತಾಯಿ ನನಗೆ ಹೇಳಿದಳು.

ಇದಾದನಂತರ ಪುನಃ ಅವನು ಬಂದನು, ನನ್ನ ತಾಯಿಯನ್ನು ಭೇಟಿಯಾದನಂತರ ಅವನೊಡನೆ ಪುನಃ ದೀರ್ಘ ಪ್ರಸ್ತಾಪವು ನಡೆಯಿತು. ಇಂಗ್ಲೆಂಡಿನ ಧರ್ಮಾರಂಭದಲ್ಲಿ ಸಂಭವಿಸಿದ್ದನ್ನಿಟ್ಟು, ಅದರ ರೀತಿಗನುಸಾರವಾಗಿ ನಡೆಯಲಸಾಧ್ಯವಾಗುವಷ್ಟು ಅವನ ಮನಸ್ಸು ವಿಶಾಲವಾಗಿದೆಯಲ್ಲಾ, ಅದು ಹೇಗೆ ಎಂಬುದಾಗಿ ಸಂಭಾಷಣೆಯು ಮುಂದುವರಿದಂತೆ ಅವನನ್ನು ಪ್ರಶ್ನಿಸಿದೆನು. "ನಾನು ಕ್ರೈಸ್ತಸಂಘದ ಹೊರ ನಿಂತು ದೂಡಿಯುವುದಕ್ಕಿಂತಲೂ ಅದರ ಒಳಗೇನೇ ಇದ್ದು ಅದರ ವ್ಯಾಪಕತೆಗೆ ಶ್ರಮಿಸಿದರೆ ನಾನು ಧರ್ಮದ ಬಗ್ಗೆ ಹೆಚ್ಚಿನ ಸೇವೆಯನ್ನು ಮಾಡಿದಂತಾಗುತ್ತದೆಂದು ಭಾವಿಸುತ್ತಿದ್ದೇನೆ," ಎಂಬುದಾಗಿ ಅವನು ವಿನೀತನಾಗಿ ಹೇಳಿದನು, ವೆಸ್ಟ್‌ಮಿನಿಸ್ಟರ್‌ನಲ್ಲಿ ಧರ್ಮಾಧಿಕಾರಿಯಾಗಿ ಸ್ವತಂತ್ರವಾಗಿ ಶ್ರಮಿಸುವ ಅಪೂರ್ವ ಅವಕಾಶವನ್ನು ಪಡೆದು ಆ ಗುಡಿಯು (Abbey) ರಾಷ್ಟ್ರೀಯ ಸೇವೆಯನ್ನು ಇನ್ನಷ್ಟು ವ್ಯಾಪಕವಾಗಿ ಮಾಡಲು ಹೇಗೆ ಸಾಧ್ಯವಾಯಿತೆಂಬುದನ್ನು ಕುರಿತು ವಿವರಿಸಿದ್ದನು, ಆ ವೈಭವದ ಗುಡಿಯಲ್ಲಿ ಅವನು ತಾಳಿದ್ದ ಪ್ರೀತಿ ಮತ್ತು ಹೆಮ್ಮೆಯು ಅವನ ಮಾತಿನಲ್ಲಿ ಪ್ರತಿಬಿಂಬಿತವಾಗಿತ್ತು. ಹಿಂದಿನ ಪ್ರತಿಭಾಶಾಲಿ ಪರಿಚಯ, ಸಂಗೀತ, ಚಿತ್ರಕಲೆ ಮತ್ತು ವಾಸ್ತುಶಿಲ್ಪಗಳಲ್ಲಿ ಅವನು ಇಟ್ಟಿದ್ದ ಪ್ರೀತಿಯು ಇಂಗ್ಲೆಂಡಿನ ಪೂರ್ವಕಾಲದ ಚಾರಿತ್ರಿಕ ಧರ್ಮದ ಬಗ್ಗೆ ಬೇರೂರಿದ್ದ ಅವನ ಶ್ರದ್ಧೆಯು ವ್ಯಕ್ತವಾಗುತ್ತಿತ್ತು. ಅವನ ಜ್ಞಾನಶಕ್ತಿಯಲ್ಲ, ಬರೀ ಭಾವನಾಪ್ರವೃತ್ತಿ ಅವನನ್ನು ಪೂರ್ವ ದಿವಂಗತರವಾಗಿರಿಸದು. ಆದರೆ ಸುಸಂಸ್ಕೃತನಾದ ವಿದ್ವಾಂಸನಿಗೆ ಇರುವ ಅತಿ ಮೃದುವಾದ ಮನಸ್ಸಿನಿಂದ ಕೂಡಿದ್ದ ಅವನು ಹಳೆ ಸಂಪ್ರದಾಯಗಳನ್ನು ಹೊಸ ಕಾಲಾನುಗುಣ ಜನದ ಕೈಗೆ ಒಪ್ಪಿಸುವ ವಿಚಾರದ ಬಗ್ಗೆ ಕೊರಗಿದನು, ಸ್ವಭಾವಿಕವಾಗಿ ಸಭ್ಯನೂ ಸರಳ ಹೃದಯನೂ ಆದ ಅವನು ಕಾಲೇಜು ಮತ್ತು ದೇವಸ್ಥಾನದ ಸಭೆಗಳಲ್ಲಿ ಪಡೆದ ವಿದ್ಯೆಯಿಂದ ಇನ್ನಷ್ಟು ಮೆರುಗಾದ ವ್ಯಕ್ತಿಯೆನಿಸಿದ್ದನು, ಅವನ ನಡೆನುಡಿಗಳು ಉತ್ತಮವಾಗಿದ್ದು ಅವು ಅವನ ಉದಾತ್ತ ಹೃದನಗಳ ಪ್ರತೀಕವೆಂತಿದ್ದುವು, ಅವನ ಮಾನಸಿಕ ಶಕ್ತಿಯನ್ನು ಅವನ ವಿನೀತ ಗುಣಗಳು ಮರೆಮಾಡಿದ್ದುವು, ಡೀನ್ ಸ್ಟ್ಯಾನ್ಲಿಯ ಬಗ್ಗೆ ಜನವು ಕಠಿಣವಾಗಿ ಮಾತಾಡುತ್ತಿದ್ದುದನ್ನು ನಾನು ಹಲವು ಬಾರಿ ಕೇಳಿದ್ದೇನೆ. ಅವರ ಸಾತ್ವಿಕ ಗುಣವನ್ನು ಎದುರಿಸಲೆತ್ನಿಸಿದವನ್ನು ತಿಳಿದಿದ್ದೇನೆ. ಆದರೆ ನನ್ನ ಎದುರಿಗೆ ಅವನನ್ನು ಯಾರೂ ಎದುರಿಸಲಿಲ್ಲ. ಹಾಗಿದ್ದರೆ ಅವನಿಗಾದ ಅನ್ಯಾಯದ

ಬಗ್ಗೆ ವಿರೋಧವನ್ನು ಸೂಚಿಸಿ ಅವನು ನನಗೆ ಮಾಡಿದ ಅಪಾರ ಸಹಾಯದ ಸ್ವರ್ಣಾವಸರವಾಗಿ ನನ್ನಿಂದನು ಅಲ್ಪ ಸಹಾನುಭೂತಿಯನ್ನು ತೋರಿಸುವ ಅವಕಾಶವೂ ಒದಗಲಿಲ್ಲ. —

ಹೀಗೂ (ನನ್ನ ತಾಯಿಯ) ಕೊನೆಗಾಲವು ತೀವ್ರವಾಗಿ ಬಂದೇ ಬಂತು, ಉತ್ತಮ ಹವೆಯಿಂದ ಕೂಡಿದ ನಾರ್ವುಡ್ಡಿಗೆ ಅವಳನ್ನು ಕರೆದುಕೊಂಡು ಹೋಗಲು ನನ್ನದಾಗಿದ್ದ ಚಿಕ್ಕ ಮನೆಯ ಒಂದೆರಡು ಕೋಣೆಗಳನ್ನು ಅವಕ್ಕೆ ಬೇಕಾದ ಸಾಮಾನುಗಳನ್ನೆಲ್ಲ ಒದಗಿಸಿ ಸರಿಪಡಿಸಿದೆನು. ಒಂದು ಹಳೆ ಅಭದ್ರವಾದ ಗಾಡಿಯಲ್ಲಿ ಅವಳನ್ನು ಸಾಗಿಸಲು ಅನುಮತಿಯನ್ನು ಪಡೆದೆನು, ಮರುದಿನ ಸಾಯಂಕಾಲವೇ ಅವಳ ಪರಿಸ್ಥಿತಿಯು ಹಕ್ಕನೆ ಕೆಟ್ಟಿತು, ಅವಳನ್ನು ಹಾಸಿಗೆಗೆ ಏರಿಸಿ ವೈದ್ಯನಿಗೆ ತಂತಿಯನ್ನು ಕಳುಹಿಸಿದೆನು. ಅವನಿಂದ ಏನೂ ವಾಸಿ ಆಗಲಿಲ್ಲ. ನಾನು ಅವಳನ್ನು ಕೈ ಹಿಡಿದು ದೆಸೆಯಿಂದಲೂ ಅವಳಿಗೆಯೇ ಅರಿತಳು, ಕಡೆದಿನದ ವರೆಗೂ ನಿದ್ರಾಹೀನಳಾಗಿ ನನ್ನ ಏಕಾಂತ ಜೀವನದ ಬಗ್ಗೆ ಅವಳು ಚಿಂತಿಸುದ್ದಳು, "ನಾನು ನಿನ್ನನ್ನು ಏಕಾಂತವಾಗಿ ಬಿಟ್ಟು ಹೋಗುವೆನು" ಎಂದು ಆಗಿಂದಾಗ್ಯೆ ಹಲುಬಿದಳು, ಅವಳು ಗತಿಸಿದನಂತರ ನಾನು ಈ ಭೂಮಿಯಲ್ಲಿ ಏಕಾಂಗಿಯಾಗಿ ಉಳಿಯುವೆನು ಎಂದು ಆ ದುಃಖಾವೇಶದಲ್ಲಿ ನಿಜಕ್ಕೂ ನಾನು ಊಹಿಸಲಾರದವಳಾದೆನು,

ನನ್ನ ಪ್ರೇಮಕ್ಕೆ ಪಾತ್ರಳಾದ ನನ್ನ ಮಾತೆಯು ಇನ್ನೂ ಎರಡು ದಿನಗಳ ಕಾಲ ನನ್ನೊಡನೆ ಇದ್ದಳು. ನಾನು ಅವಳ ಜತೆಯಲ್ಲಿಯೇ ಒಂದು ನಿಮಿಷವಾದರೂ ಅವಳನ್ನು ಬಿಡದೆಯೇ ಇದ್ದೆನು, ಮೇ ತಿಂಗಳ 10 ರಂದು ಅವಳ ದೇಹಾಸ್ವಾಸ್ಥ್ಯವು ಮೃದುವಾದ ರೀತಿಯಲ್ಲಿ ಸ್ಥಿತಿ ತಪ್ಪಿದಂತಾಗಿ ಪರಿವರ್ತನೆಗೊಂಡಿತು, ಹಾಗಿದ್ದರೂ ಅವಳ ದಯಾಪೂರ್ಣ ಕಣ್ಣುಗಳು ಕಡೇ ಬಾರಿಗೆ ಮುಚ್ಚುವವರೆಗೂ ಕೊನೆಯಲ್ಲಿದ್ದ ನನ್ನ ಮೇಲೆಯೇ ಬಿದ್ದಿದ್ದುವು, ಸೂರ್ಯನು ನಭಾಂಗಣದಲ್ಲಿ ಮುಳುಗುವ ವೇಳೆಗೆ ಅವಳ ಶ್ವಾಸೋಚ್ಛ್ವಾಸವು ನಿಧಾನವಾಯಿತು, ಮೃತ್ಯುವಿನ ಮೌನವು ನಮ್ಮನ್ನು ಆವರಿಸಿತು; ಅವಳು ಇಹವನ್ನಗಲಿದಳು,

ಈ ಅಗಲುವಿಕೆಯಿಂದ ದಿಗ್ಭ್ರಾಂತಳಾಗಿ ಸ್ತಬ್ಧಳಾಗಿದ್ದ ನಾನು ಅನಂತರದ ಕೆಲವು ದಿನಗಳನ್ನು ಯಾಂತ್ರಿಕವಾಗಿ ತನ್ನಷ್ಟಕ್ಕೇ ಕಳೆದೆನು, ತಾಯಿಯ ಅಂತಿಮ ದೇಹವನ್ನು ನಾನು ಮತ್ತು ಅವಳ ಕಡೇ ಉಸಿರಿನ ತನಕವೂ ಸಮೀಪದಲ್ಲಿದ್ದ ಅವಳ ಪ್ರೀತಿಯ ಸೋದರಿಯೂ ಅಲ್ಲದೆ ಬೇರಾರನ್ನೂ ಮುಟ್ಟಲಿಕ್ಕೆ ಬಿಡಲಿಲ್ಲ. ವಸಂತ ಕಾಲದ ಮಳೆಯಿಂದ ತೊಯ್ದು ಮತ್ತು ಅವಳ ಪತಿಯೂ ಎಳೆ ಮಗನೂ ಒರಗಿದ್ದ ಕೆನ್ಸಲ್ ಗ್ರೀನ್ ಸ್ಮಶಾನಕ್ಕೆ ಅವಳ ದೇಹ

ವಸ್ತು ಶವದ ಪೆಟ್ಟಿಗೆಯಲ್ಲಿ ಮಲಗಿತ್ತು ಅದನ್ನು ಹಿಂಬಾಲಿಸಿದಾಗ ನಾವು ದಿಗ್ಭ್ರಾಂತರಾಗಿ ಒಳಗಣ್ಣಿನಿಂದ ನೋಡಿ ಅವಳೊಡನಿದ್ದವರಲ್ಲಿ ಆ ತಕ್ಷಣದ ಭಾವನೆಯಲ್ಲಿ ಇದ್ದೆವು. ನಮ್ಮ ಹಗಲಿನ ಗಂಟೆಗಳಲ್ಲಿ ಪ್ರತಿ ಕ್ಷಣವೂ ಕೊನೆಗೊಂಡಂತೆ ತೋರುತ್ತಿತ್ತು. ನಿದ್ರೆಯಿಲ್ಲದೆ ರಾತ್ರಿಗಳು ಕಳೆಯುತ್ತಿದ್ದ ನಮ್ಮ ಮನೆಯಲ್ಲಿ ಸಹ ಮೌನದಿಂದ ಗತಿಸಲಾರಂಭಿಸಿತು. ನನ್ನ ಮನೆಯು ನಿಜವಾಗಿಯೂ ಖಾಲಿ ಬಿದ್ದಂತಾಗಿ ಅದು ನನ್ನ ಭಾರವಾಯಿತು. ಕೋಣೆಗಳು ಸೂರ್ಯ ಕಿರಣಗಳಿಂದ ಬೆಳಗುತ್ತಿದ್ದರೂ ಅವಳು ಇಲ್ಲದ್ದರಿಂದ ತೀರಾ ಕತ್ತಲಾಗಿಯೇ ತೋರುತ್ತಿದ್ದವು ಆ ಖಾಲಿ ಗೋಡೆಗಳಿಂದ "ನೀನೊಬ್ಬಳೇ ಇರುವೆ," ಎಂಬ ಪ್ರತಿಧ್ವನಿ ಕೇಳಿಸುತ್ತಿತ್ತು.

ಆದರೆ ನನ್ನ ಚಿಕ್ಕ ಮಗಳ ಸುಂದರವಾದ ಮುಖವು ಮತ್ತು ನರ್ತನಮಾಡುವ ಪಾದಗಳು ಆ ಮೌನವನ್ನು ಭೇದಿಸಿದಾಗ ಅವಳ ಅಕ್ಕ ಹಾಡಿದ ಪ್ರೀತಿ ಪದಗಳು ಅವಳ ಧ್ವನಿಯ ಕೋಮಲತೆಗೆ ನನ್ನ ಹೃದಯವನ್ನು ವಿನಿಯೋಗಿಸುವಂತಾಗಿಸುತ್ತ, ಆ ಕಾಲದ ವಸಂತ ಮತ್ತು ಬೇಸಿಗೆ ಕಾಲಗಳಲ್ಲಿ ಜೀವನವು ಕಷ್ಟಕರವಾಗಿತ್ತು. ಉತ್ಪತ್ತಿಯೂ ಅಲ್ಪವಾಗಿತ್ತು. ಮತ್ತು ಉದ್ಯೋಗ ದೊರೆಯುವಿಕೆಯೂ ಕಷ್ಟವಿತ್ತು. ನಿಜವಾಗಿ ಹೇಳುವುದಾದರೆ ನನ್ನ ತಾಯಿಯು ಮೃತಳಾದನಂತರದ ಎರಡು ತಿಂಗಳ ಕಾಲವು ಬಹು ನಿರುತ್ಸಾಹಕರವಾದುದಾಗಿ ಅದು ನನಗೆ ಸಹಿಸಬಹುದಾದಷ್ಟು ಕಠಿಣ ಪರಿಸ್ಥಿತಿಗೊಳಪಡಿಸಿತು. ಕೋಲ್ಬೀ ರಸ್ತೆಯಲ್ಲಿದ್ದ ಚಿಕ್ಕ ಮನೆಯು ನನ್ನ ಚಿಕ್ಕ ಸಂಪಾದನೆಗೆ ದೊಡ್ಡದಾಗಿ ತೋರಿತು. ಒಂದು ಹುದ್ದೆಯನ್ನು ಪಡೆಯುವುದರಲ್ಲೂ ನಾನು ಜಯಶೀಲನಾಗಲಿಲ್ಲ. ಶ್ರೀ ಮತ್ತು ಶ್ರೀಮತಿ ಥಾಮಸ್ ಸ್ಕಾಟ್ ಇವರ ಸಕಾಲಿಕ ಸಹಾಯವು ನನಗೆ ದೊರಕದೇ ಹೋಗಿದ್ದರೆ ನಾನು ಹೇಗೆ ನನ್ನ ವ್ಯವಹಾರವನ್ನು ನಡೆಸುತ್ತಿದ್ದೆನೋ ತಿಳಿಯೆನು. ಈ ಅವಧಿಯಲ್ಲಿ ನಾನು ಸ್ವರ್ಗ, ಪಶ್ಚಾತ್ತಾಪ, ಪ್ರಾರ್ಥನೆ, ಮುಕ್ತಿ, ನಿರಂತರ ಶಿಕ್ಷೆ, ಮಕ್ಕಳಿಗಾಗಿ ಧಾರ್ಮಿಕ ವಿದ್ಯೆ, ಸ್ವಾಭಾವಿಕ ಹಾಗೂ ಅನ್ವೇಷಿತ ಧರ್ಮ ಎಂಬೀ ವಿಷಯಗಳ ಮೇಲೆ ಶ್ರೀ ಸ್ಕಾಟ್ ಇವರಿಗಾಗಿ ಕಿರುಹೊತ್ತಿಗೆಗಳನ್ನು ಬರೆದು ಅದರಿಂದ ಗಳಿಸಿದ ಸ್ವಲ್ಪ ದುಡ್ಡು ನನಗೆ ಅಮೂಲ್ಯವಾಗಿತ್ತು. ಅವರ ಮನೆಯು ನನಗೆ ಸದಾ ತೆರೆಯಲ್ಪಟ್ಟಿದ್ದುದರಿಂದ ಅದು ನನಗೆ ತುಂಬಾ ಸಹಾಯಕವಾಯಿತು. ಆ ಕಾಲದಲ್ಲಿ ನಾನು ಗಳಿಸುತ್ತಿದ್ದ ಅಲ್ಪ ಹಣವು ನನಗೆ ಮತ್ತು ನನ್ನ ಮಗಳಿಗೆ ಊಟದ ಖರ್ಚಿಗೆ ಸಾಕಾಗುತ್ತಿತ್ತಲ್ಲದೆ ಮೂವರಿಗೆ ಅದು ಸಾಕಾಗುತ್ತಿರಲಿಲ್ಲ. ನಾನು ಬ್ರಿಟಿಷ್ ವಸ್ತು ಪ್ರದರ್ಶನಾಲಯ (British Museum)ಕ್ಕೆ ಹೋಗಿ ದಿನವೆಲ್ಲಾ ಓದುತ್ತಾ ಕುಳಿತಿರುತ್ತಿದ್ದೆನು. ನಗರದಲ್ಲಿ ಮಧ್ಯಾಹ್ನ

ಊಟಮಾಡಲು ಇಚ್ಛಿಸಿದ್ದರೂ ಅಂಥಾ ಊಟವು ಎಲ್ಲರಿಗೂ ಸಾಲುವಂತೆ ನನ್ನಿಂದ ತಪ್ಪಿಸಿಕೊಳ್ಳುತ್ತಿತ್ತು. ನಾನು ಎರಡು ಸಾಯಂಕಾಲಗಳು ಸಿಟ್ಟಿನ್ ಸಂಗತಿಗಳ ಅತಿಶಯದಿಂದ ತಪ್ಪಿಹೋದರೆ ಶ್ರೀಮತಿ ಸ್ಕಾಟ್ ಇವಳು ತನ್ನ ಉಪ್ಪರಿಗೆಯ ಕೊಂಡಿಯಿಂದ ನನಗೆ ಏನೋ ಸಂಭವಿಸಿದೆಯೆಂಬ ಕುತೂಹಲದಿಂದ ಓಡಿಬರುತ್ತಿದ್ದಳು. ಹೀಗಾಗಿ ರಾತ್ರಿವೇಳೆಗೆ ದೊರಕುತ್ತಿದ್ದ ಊಟವು ಶಾರೀರಿಕವಾಗಿ ಉಪಯುಕ್ತವಾಗುತ್ತ. ಅದಿರಲಿ! ಇದನ್ನ ನಾನು ಬರೆಯಬಹುದೇ? 1879 ರಲ್ಲಿ ಥಾಮಸ್ ಸ್ಕಾಟ್ ಇವನು ಮೃತನಾದನು, ಆದರೆ ಅವನ ಮನೆಯವರ ನನ್ನ ಎಲ್ಲಾ ಸಂಕಷ್ಟದ ಕಾಲದಲ್ಲಿ ಆದರದಿಂದ ತೆರೆಯಲ್ಪಡುತ್ತಿತ್ತು. ಕೆಲವು ಸಾರಿ ನಾನು ಬ್ರಿಟಿಶ್ ವಸ್ತುಪ್ರದರ್ಶನಾಲಯದಲ್ಲಿ ದಿನವೆಲ್ಲಾ ಕಳೆಯುತ್ತ ಓದುತ್ತಾ ಸರಿಯಾಗಿ ಊಟವೂ ಇಲ್ಲದೆ ದಣಿದು ತುಂಬಾ ಬಳಲುತ್ತ ಇರುತ್ತಿದ್ದಾಗ ಉಪಾಹಾರವೂ ಸಿದ್ಧವೂ ಆದ ಅವನ ಬಳಿಗೆ ನಾನು ಹೋದಾಗ ಅವನು ಎಷ್ಟು ಕರುಣಾಮಯನಾಗಿ ನನ್ನನ್ನು ಕಾಣುತ್ತಿದ್ದನೆಂಬುದು ಅವನಿಗೆ ತಿಳಿಯುತ್ತಿರಲಿಲ್ಲ. ನನ್ನ ಏಕಾಂತ ಜೀವನವನ್ನು ತನ್ನ ಹಾರ್ದಿಕ ಕಂಠದಿಂದ "ಎಲ್ಲಿ ಪುಟ್ಟ ಮಹಿಳೆಯೇ, (Well, little lady) ಎಂದೆನ್ನುತ್ತಾ ಸ್ವಾಗತಿಸುತ್ತಿದ್ದಾಗ ನನಗೆ ಸಂತೋಷವಾಗುತ್ತು. ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಈ ಥಾಮಸ್ ಸ್ಕಾಟ್ ಇವನಿಗೊಬ್ಬನಿಗಲ್ಲದೆ ಮತ್ತಾವ ಜೀವಂತ ವ್ಯಕ್ತಿಗೂ ನಾನು ಕೊಡುತ್ತಿರಲಿಲ್ಲ.

ಅಲ್ಪ ಬೆಲೆಯ ಆಭರಣಗಳು ನನ್ನಲ್ಲಿ ಇದ್ದುವು, ನನಗೆ ಬೇಡವಾಗಿದ್ದ ಬಟ್ಟೆಗಳನ್ನೆಲ್ಲ ಎಷ್ಟು ಬೇಗನೋ ಅಷ್ಟು ಮಾರಿಬಿಟ್ಟೆನು. ನನಗೆ ಗುಟ್ಟಾಗಿ ಅನುಭೋಗಿಸಬೇಕಾದ್ದನ್ನೆಲ್ಲ ನನ್ನ ಮಗುವು ತಿಳಿಯದೇ ಇರುವ ಸೌಲಭ್ಯವನ್ನು ಹೊಂದಲಿಲ್ಲ. ನನ್ನ ಸೇವಿಕೆ ಮೇರಿಯು ಬಹು ಮೋಜಿನ ಸಂಗಾತಿಯಾಗಿದ್ದು ರಾವಲ್ಲು ಕ್ಕಿಗೆ ಇತ್ತು ಆ ಅಲ್ಪ ಹಣದಿಂದ ಇಡೀ ಮನೆಯನ್ನು ಚೊಕ್ಕವಾಗಿಯೂ ಪರಿಪೂರ್ಣವಾಗಿಯೂ ಇಡುತ್ತಿದ್ದಳು. ಆದರೆ ಒಳ್ಳೆಯದಕ್ಕಾಗಿ ಯಾರಿಗೂ ಸಂತೋಷವಾಗುತ್ತಿತ್ತು. ನನ್ನ ಹಿಂದಿನ ಕಷ್ಟದ ದಿನಗಳನ್ನು ಇಂದು ನೆನೆದಾಗ ನಾನು ಪಶ್ಚಾತ್ತಾಪಪಡಬೇಕಾಗಿಲ್ಲ, ನಾನು ಅಂಥಾ ಸಂದಿಗ್ಧ ಪರಿಸ್ಥಿತಿಯಿಂದ ಪಾರಾಗಿ ಉಳಿದೆನಲ್ಲಾ ಎಂದು ಸಂತೋಷಿಸುತ್ತಿದ್ದೇನೆ. ಏಕೆಂದರೆ ಆ ನನ್ನ ಕಷ್ಟದ ಜೀವನವು ನನ್ನಂತೆ ಬಳಲುತ್ತಿದ್ದವರ ಬಗ್ಗೆ ದಯೆಯನ್ನು ತೋರಿಸಲು ಕಲಿಸಿತು. ಸ್ವಲ್ಪ ಕಾಲಕ್ಕಾದರೂ ತಪ್ಪಿಸಲು ಸಾಧ್ಯವಾಗದೆ ಇರುವ, ತುಂಬಾ ವೇದನೆಗೆ ಕಾರಣವಾದ ಹಸಿವನ್ನು ಕುರಿತು ಸಪ್ಪೆ ಬಿದ್ದ ತುಟಿಗಳ ಮೂಲಕ "ನಾನು ಹಸಿದಿದ್ದೇನೆ," ಎಂಬ ಶಬ್ದಗಳಿರುವುದನ್ನು

ಎಂದೂ ನಾನು ಸಹಿಸಲಾರದಿದ್ದವಳಾಗಿದ್ದೆನು.

ನಿನ್ನ ನೆನಪಿಂದ ಮತ್ತು ಪ್ರಶಾಂತವಾದ ಹೃದಯವನ್ನು ಉತ್ಸಾಹದಲ್ಲಿಡಲು ಮಗುವೊಂದು ನನ್ನೊಡನಿದ್ದುದು ತುಂಬಾ ಹಿತಕಾರಿಯಾಯಿತು. ನಾನು ಕೆಲಸಮಾಡುವಾಗ ಅವಳು ನಿಂತ್ರಿಕ್ಕಳಾಗಿ ತಾನು ಗಟ್ಟಿ ಕಾಲ ಆಡುವಳು! ಆಗಿಂದಾಗ್ಗೆ ಅವಳು ಹೇಳುತ್ತಿದ್ದ ಒಂದೊಂದು ಮಾತುಗಳು ನನ್ನನ್ನು ಹರ್ಷಗೊಳಿಸಲು ಸಾಕಾಗಿತ್ತು. ಅವಳನ್ನು ಬಿಟ್ಟು ನಾನು ಎಲ್ಲಿಗಾದರೂ ಹೋಗುವುದು ದೂರವಾಗ ಅವಳು ಹೊಸ್ತಿಲಿಗೆ ಓಡಿಬಂದು ತನ್ನ ಸುಂದರ ತುಟಿಗಳಿಂದ Good Morning ಎಂಬುದಾಗಿ ಅನ್ನುವಳು. ಅನಂತರ ನಾನು ಹಿಂದಿರುಗುವುದನ್ನು ಅವಳು ಕಿಟಿಕಿಯ ಬಳಿ ಇದ್ದು ಕಾಯುತ್ತಾ ಇರುವಾಗ ಬಿಸಿಲು ತಾಗಿದ ಅವಳ ಪ್ರಫುಲ್ಲಿತವಾದ ಮುಖವೇ ಮೊದಲಾಗಿ ನನ್ನನ್ನು ಮನೆಗೆ ಸ್ವಾಗತಿಸುತ್ತಿತ್ತು. ಹಲವು ಬಾರಿ ನಾನು ಬೇಸತ್ತು ಹಸಿದು ಬಸವಳಿದು ಮನೆಗೆ ಹಿಂದಿರುಗುತ್ತಿದ್ದಾಗ ಆ ಪುಟ್ಟ ಮಗುವು ನನ್ನ ಬರುವಿಕೆಯನ್ನೇ ಕಾಯುತ್ತಾ ಇರುತ್ತಿದ್ದ ಆ ದೃಶ್ಯವು ನಾನು ನನ್ನ ಮುದ್ದು ಮಗಳಿಗೆ ಬೇಸರವಾಗುವ ರೀತಿಯಲ್ಲಿ ಜೋಲುಮುಖವನ್ನಿಟ್ಟುಕೊಳ್ಳಬಾರದೆಂಬುದನ್ನು ಜ್ಞಾಪಿಸುತ್ತಿತ್ತು. ಹೀಗೆ ಅವಳಿಗಾಗಿ ನಾನು ನನ್ನ ಮನೋದ್ವೇಗವನ್ನು ಕೃತಕ ಹಸನ್ಮುಖದಿಂದ ತೋರ್ಪಡಿಸಿಕೊಳ್ಳುತ್ತಿದ್ದ ನನ್ನ ಪ್ರಯತ್ನವು ನಮಗಿಬ್ಬರಿಗೂ ಸದಾ ಆನಂದವನ್ನೀಯುತ್ತಿತ್ತು. ಗುಂಗುರು ಕೂದಲು ಹಾಗೂ ಸ್ವರ್ಣವರ್ಣದ ಕೆಂಗೂದಲಿನ ಕಾಂತಿಪೂರ್ಣವಾದ ಕಣ್ಣುಗಳು, ತುಂಬು ಮುಗ್ಧತೆಯು, ನಿರ್ಮಲ ಹೃದಯದ ಮತ್ತು ಪ್ರೀತಿಯನ್ನು ಚೆಲ್ಲುವ ನನ್ನ ಮಗಳು ನನ್ನ ಬಾಳಿನಲ್ಲಿ ಇಂಪು, ತಂಪು ಮತ್ತು ಉತ್ಸಾಹವೇ ಆದಳು. ನೋವಿನಿಂದ ಬೆಂದು ತುಂಡು ತುಂಡಾಗಿದ್ದ ನನ್ನ ಹೃದಯದ ನರಗಳು ಈ ನನ್ನ ಪುಟ್ಟ ಜೀವಿಯನ್ನು ನಿಧಾನವಾಗಿ ಆವರಿಸಿ ಹಬ್ಬಿ ಬಿಡುವು. ಪ್ರೀತಿಗೆ ಮತ್ತು ಆ ಮಮತೆಯ ಕೋರಿಕೆಗೆ ಅವಳು ತನ್ನ ಹೃದಯವನ್ನು ಇತ್ತಳು. ಆ ರೀತಿಯಾಗಿ ನನ್ನ ಮಗಳು ನನ್ನ ಸ್ವಭಾವದ ಬಹಳ ಬಲವತ್ತಾದ ಕೋರಿಕೆಗೆ ತಕ್ಕ ಉತ್ಸಾಹವನ್ನಿತ್ತು ಬೆಳೆಸಿದಳು.

ಅಧ್ಯಾಯ ೬

ಚಾರ್ಲ್ಸ್ ಬ್ರಾಡ್ಲೋ.

ಆ ಹಲವು ತಿಂಗಳುಗಳ ಅವಧಿಯಲ್ಲಿ ನನ್ನ ಮಾನಸಿಕ ಜೀವನವು ಸ್ತಬ್ಧವಾಗಿದ್ದಿರಲಿಲ್ಲ, ನಿಧಾನವಾಗಿ ಮತ್ತು ಜಾಗರೂಕನಾಗಿ ನಾನು ನನ್ನ ದಾರಿಯನ್ನು ಹಿಡಿದು ಮುಂದುವರಿಯುತ್ತಿದ್ದೆನು. ಹಿಂದೆ ನಾನು ಸಾಂಸಾರಿಕ ಬಂಧನದಲ್ಲಿ ಸಿಲುಕಿದ್ದಾಗ ನಾನು ಕಳೆಯುತ್ತಿದ್ದ ಸಂತೋಷವು ಈಗ ನನ್ನ ಮಾನಸಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಹರಿಯಲಾರಂಭವಾಯಿತು, ಮೊದಲಾಗಿ ಹೇಳುವುದಿದ್ದರೆ ನನ್ನ ಊಹೆಯನ್ನು ಆಳವಾಗಿ ಪರಿಶೀಲಿಸುವ ಮತ್ತು ನಿಚ್ಚಳ ಮನಸ್ಸಿನಿಂದಲೂ ಪ್ರಾಮಾಣಿಕತೆಯಿಂದಲೂ ಪ್ರತಿಪಾದಿಸುವ ಸ್ವಾತಂತ್ರ್ಯವು ದೊರೆಯಿತು. ತುಂಬಾ ಕಷ್ಟಪಟ್ಟು ನಾನು ಆ ಸ್ವಾತಂತ್ರ್ಯವನ್ನು ಪಡೆದೆನು. ಹಾಗೆ ಬೆಲೆ ತೆತ್ತು ಪಡೆದ ಸ್ವಾತಂತ್ರ್ಯದಿಂದ ನಾನು ಆನಂದಿತನಾದೆನು, ಎಂದು ನಾನೇ ಹೇಳಿಕೊಳ್ಳುವ ಹಕ್ಕು ನನಗೆ ನಿಜವಾಗಿಯೂ ಇತ್ತು. ಶ್ರೀಮಾನ್ ಸ್ಕಾಟ್ ಇವರ ಅಮೂಲ್ಯ ಗ್ರಂಥಭಂಡಾರವು ನನ್ನ ಉಪಯೋಗಕ್ಕಾಗಿ ಇತ್ತು, ಅವರ ತೀಕ್ಷ್ಣ ವಾದಗಳು ನನ್ನ ಅಭಿಪ್ರಾಯಗಳನ್ನು ಎದುರಿಸುವವು, ನನ್ನ ಪ್ರತಿಪಾದನೆಗಳನ್ನು ವಿವೇಚಿಸುವವು ಮತ್ತು ಈವರೆಗೂ ಯಾರ ಯೋಚನೆಗೂ ಎಟುಕದಿದ್ದ ವಿಷಯಗಳ ಬಗ್ಗೆ ಮಾರ್ಗದರ್ಶಕವೂ ಆದುವು. ನಾನು ಹಿಂದೆಂದೂ ಕೈಗೊಳ್ಳದಿದ್ದುದಕ್ಕಿಂತ ಹೆಚ್ಚಾಗಿ ಓದಿದೆನು, ನನ್ನ ಓದುವಿಕೆಯು ಇತರರಿಗೆ ಬಾಧಕಕರವಾಗಬಹುದೆಂಬ ಭಯವೂ ಇಲ್ಲದೆ ಮುಂದುವರಿಯಿತು. "ಜೀವ ದೇವ" ವಲ್ಲದ್ದು ನನ್ನ ವಿಶ್ವಾಸವಲ್ಲದೆ ನನ್ನ ಹಿಂದಿನ ದೈವಿಕ ಭಾವವೆಲ್ಲವೂ ನನ್ನಲ್ಲಿ ಉಳಿದಿರಲಿಲ್ಲ. ಅವೆಲ್ಲವೂ ನಿಧಾನವಾಗಿ ಕರಗಿ ಹೋಗುತ್ತಲಿದ್ದವು, ಅಸ್ಪಷ್ಟವಾದುದು ಸೂತ್ರದಂತೆ ದೇವರು ಇದ್ದನಾದರೆ ಅವನು ತಾನಾಗಿ ನಿರ್ಮಿಸಿದ ಅತಿ ಉನ್ನತವಾದ ಜೀವಿಯಂತೆ ಅದರೂ ಒಳ್ಳೆಯ ಗುಣಗಳಿಂದ ಇರಬೇಕಾಗಿತ್ತು. ಹೀಗೆ "ಇರಬೇಕಾಗಿತ್ತು" ಎಂಬುದರಿಂದ ಪ್ರಾರಂಭಗೊಂಡು ನಾನು ಆ ವಿಚಾರದ ಬಗ್ಗೆ ಊಹಿಸಲಾರಂಭಿಸಿದೆನು. "ಅಸಾಧ್ಯವಾದುದು ಎಂದೆನಿಸಲ್ಪಟ್ಟವುಗಳಲ್ಲಿ ಮಾನವನು ಒಳ್ಳೆಯದನ್ನು ಉದಾತ್ತವಾದುದನ್ನು ಕನಸು ಕಾಣಬೇಕಾದುದೇ ಆಗಬೇಕಲ್ಲದೆ

ಅದೇ ತುಂಬಾ ಅಸಾಧ್ಯವಾದುದೆಂದೂ ಅವನ ನಿರ್ಮಾಣಶಕನು ತಾನು ಕನಸಿನಲ್ಲಿ ಎಣಿಸುವುದಕ್ಕಿಂತ ಸ್ವಲ್ಪಮಟ್ಟಿಗೆ ಉತ್ತಮನಲ್ಲದವನೂ ಉದಾತ್ತ ಗತ್ತಿನಿಂದ ಕೂಡಿರದವನೂ ಆಗಿರುವನೆಂಬುದನ್ನು ಸ್ಪಷ್ಟಪಡಿಸಲೇ ಬೇಕಾಗುತ್ತದೆ," ಎಂಬುದಾಗಿ ಕುಮಾರಿ ಫ್ರಾನ್ಸಿಸ್ ಪವರ್ ಕೋಬೆ ಇವಳು ಹೇಳಿದ್ದಾಳೆ. ನಮ್ಮನ್ನು ಸೃಷ್ಟಿಸಿದ ಸರ್ವಜ್ಞ ಸರ್ವಶಕ್ತನು ಇರುವನು ಎಂಬುದಾಗಿ ಖಂಡಿತವಾಗಿಯೂ ಹೇಳಬಲ್ಲೆವು ಎಂದೇ ನನ್ನ ಶ್ರದ್ಧೆಯಾಗಿದೆ, ಪರಮಾತ್ಮನೊಬ್ಬನು ಇರುವನೆಂದಾದರೆ ಅವನು ತಾನಾಗಿಯೇ ನಿರ್ಮಿಸಿದ ಅತಿ ಉನ್ನತ ಜೀವಿಗೂ ಮೇಲಾದವನಿರಬೇಕು; ಆದರೆ ಅಂಥಾ ಸರ್ವದೇವನಿರುವನೇ? "ನಾವು ದೇವರಲ್ಲಿಡುವ ವಿಶ್ವಾಸವು ಮಾನವನನ್ನು ಅವಲಂಬಿಸಿದೆ," ಎಂದು ಧರ್ಮಗುರು ಚಾರ್ಲ್ಸ್ ವಾಯ್ಸೀ (Rev. Charles Voysay) ಇವನು ಹೇಳುತ್ತಾನೆ, ಬೈಬಲನ್ನು ಗುಡಿಗಳನ್ನು ನಿರ್ಮಿಸಿದ ಮತ್ತು ಬಿಳಿಯ ಆಲೋಚನೆಗೂ ಶಿಲೆಗಳಿಗೂ ನಿರ್ದಿಷ್ಟ ರೂಪ ನೀಡುವವನು ಮಾನವನು, ಭೂಮಿಯಲ್ಲಿ ಎಲ್ಲ ಪರಮಶ್ರೇಷ್ಠ ಜ್ಞಾನದ ಭವ್ಯ ನಿರ್ಮಾಣಶಕನು ಮಾನವನು! ತತ್ವಶಾಸ್ತ್ರಕ್ಕೆಲ್ಲ ಪರಿಷ್ಕಾರ ತಂದಿರುವವನು ಮಾನವನು! ಅದೃಷ್ಟವೂ ಅಲ್ಲ, ಪ್ರಮಾದಾತೀತನೂ ಅಲ್ಲದ ಮಾನವನು ದೈವಿಕ ವಿಚಾರಗಳನ್ನು ರಚಿಸಲು ವಿಶ್ವಸನೀಯವಾದ ದೈವದತ್ತ ಮನಸ್ಸಿನಿಂದ ಕೂಡಿದವನೆಂದರೆ ಅವನೇ ಆಗಿರುವನು, ಮಾನವನ ವಿವೇಚನಾ ಶಕ್ತಿ, ಮನಸ್ಸಾಕ್ಷಿ ಮತ್ತು ಪ್ರೀತಿಯೇ ಅವನನ್ನು ಸೃಷ್ಟಿಸಿದ ಕರ್ತನ ಪ್ರತೀಕವಾಗಿದೆ, ಮಾನವನ ಮನಸ್ಸೆಂಬ ಕನ್ನಡಿಯಲ್ಲಿ ಪ್ರತಿಬಿಂಬಿತವಾದ ಅವನ ಛಾಯೆಯೇ ದೇವರು ಎಂದರೆ ಏನು? ಮಾನವನೇ ಸೃಷ್ಟಿಕರ್ತನು, ಅವನು ತಾನು ನಂಬಿದ ದೇವರ ಆವಿಷ್ಕಾರವೇ ಎಂದರೆ ಏನು?

ತುಂಬಾ ಸಾಧ್ಯವಾಗಿದ್ದರೂ ಅದರ ಪರವಾಗಿ ವಾದಿಸಲಸಾಧ್ಯವಾದ ಕ್ರೈಸ್ತ ಸಿದ್ಧಾಂತಗಳನ್ನು ನಿಕ್ಷೇಪಿಸಿದ್ದರೂ ಅಂಥಾ ಆಲೋಚನೆಗಳು ಮನಸ್ಸಿನಲ್ಲಿ ಮೂಡುವುದು ಅನಿವಾರ್ಯವಾದುದಾಗಿದೆ, ಮಾನವನನ್ನು ಆಲೋಚಿಸಲು ಒಮ್ಮೆ ಪ್ರೋತ್ಸಾಹಿಸಿದನಂತರ ಆ ಯೋಚನೆಗೆ ಮಿತಿಯನ್ನು ಕಲ್ಪಿಸುವುದಕ್ಕೆ ಯಾವ ಅಧಿಕಾರ ಬಲಕ್ಕೂ ಸಾಧ್ಯವಿಲ್ಲ. ಪರಂಪರೆಯಾಗಿ ನಂಬುತ್ತಾ ಬಂದ ವಿಚಾರಗಳನ್ನು ಒಮ್ಮೆ ಸಂಶಯದಿಂದ ಎದುರಿಸತೊಡಗಿದನಂತರ ಹಾಗೆ ಸಂದೇಹದಿಂದ ವಾದಿಸಬೇಕಾದ ಸಮಸ್ಯೆಗಳು ಜ್ಞಾನಾಂಗಣದಲ್ಲಿ ತೂಗುತ್ತಿರುವ ಗುರಾಣಿಯನ್ನು ಶನೈಃ ಶನೈಃ ಬಾಗಿಸುತ್ತಲೇ ಇರುತ್ತವೆ, ನನ್ನ ನಿಮ್ಮ ಮಟ್ಟಿಗಾದರೂ ಅದೇನೋ ನಿರ್ಣಯವಾದ ಪಾತ್ರ

ವರ್ಗಾವಿತ್ತು. ಬಹುಕಾಲ ಅದರ ಬಾಧೆಗೊಳಗಾಗಿ ಬಿಡುಗಡೆಯಾದ ನಂತರ ಬೌದ್ಧಿಕ ಕ್ಷೋಭೆ ಮತ್ತು ಮಾಂದ್ಯಕ್ಕೊಳಗಾದ ನನ್ನ ಮನಸ್ಸು ವಾಗ್ವಾದಗಳಲ್ಲಿ ಪಾಲುಗೊಳ್ಳಲು ಸಂತೋಷದಿಂದ ಮುಂದಕ್ಕೆ ಹಾರಿತು,

ಶ್ರೀ ಮಾನ್‌ಕ್ಯೂರ್ ಡಿ. ಕಾನ್‌ವೆ (Moncure D. Conway) ಇವರು ಬೋಧಿಸುತ್ತಿದ್ದ South Place Chapel ಇಲ್ಲಿಗೆ ಆಗಿಂದಾಗ್ಗೆ ಹೋಗುತ್ತಿದ್ದು ಅಲ್ಲಿ ನನ್ನ ಧಾರ್ಮಿಕ ಸಮಸ್ಯೆಗಳನ್ನು ಕುರಿತಾಗಿ ಹೆಚ್ಚಿನ ಅನುಭವವನ್ನು ಗಳಿಸಲು ಅವನೊಡನೆ ವಿಚಾರ ವಿನಿಮಯವನ್ನು ನಡೆಸುತ್ತಿದ್ದೆನು, Dean Mansel ಇವರ Bampton lectures ಇದನ್ನು ಪುನಃ ಓದಿದಾಗ ಅದು ನನ್ನನ್ನು ನಾಸ್ತಿಕವಾದದ ಕಡೆಗೆ ತಿರುಗಿಸಲು ದೊಡ್ಡ ಸಾಧನವಾಯಿತು, ಸರ್ ವಿಲಿಯಮ್ ಹ್ಯಾಮಿಲ್ಟನ್ ಇವರ ತತ್ವಶಾಸ್ತ್ರ ವಿಮರ್ಶೆಯನ್ನು ಮಿಲ್ ಇವರು ಪರಾಮರ್ಶಿಸಿದನು ಪುನಃ ಓದಿದೆನಲ್ಲದೆ Comte ಇವರ Philosophie Positive ಇದನ್ನು ಜಾಗರೂಕತೆಯಿಂದ ತಿರುವಿ ಹಾಕಿದೆನು, ಪರಿಣಾಮವಾಗಿ ಮಾನವನ ವಿಚಾರಶಕ್ತಿಯ ಮಿತಿಯನ್ನು ಅನಂತನೂ ಸರ್ವವ್ಯಾಪಿಯೂ ಆದ ದೇವರನ್ನು ಕುರಿತಾಗಿ ತಿಳಿಯಲು ಇರುವ ಅದರ ಅಸಮರ್ಥತೆಯನ್ನು ನಾನು ಕ್ರಮಕ್ರಮೇಣವಾಗಿ ಒಪ್ಪಿದೆನು, ಎಲ್ಲವನ್ನೂ ತಿಳಿದ ದೇವರಿಗೆ ನಾನು ಹೇಳಬೇಕಾದ್ದು ಏನೂ ಇಲ್ಲವೆಂದೂ ಸರ್ವೋತ್ತಮನಾದ ಅವನಿಗೆ ನಾನು ತಿಳಿಸಲು ಏನೂ ಇಲ್ಲವೆಂದೂ ಬಗೆದು ಪ್ರಾರ್ಥನೆಯನ್ನು ಮಾಡುವುದು ಅವಹೇಳನಕರವೂ ಅರ್ಥವಿಲ್ಲದ್ದೂ ಎಂದೆಣಿಸಿ ಅದನ್ನು ಬಿಟ್ಟೆನು, ಆದರೆ ನಿತ್ಯವೂ ಪ್ರಾರ್ಥಿಸದಿದ್ದರೆ ದೇವತ್ವದ ಭಾವನೆಯು ಮನಸ್ಸಿನಿಂದ ಅಗಲುತ್ತದೆ, ನಿಜವಾಗಿಯೂ ದೇವರು ಇಲ್ಲದ ಒಬ್ಬನ ಪ್ರಾರ್ಥನಾಶಕ್ತಿಯನ್ನು ದೇವನೆಂದು ಕಲ್ಪಿಸುವುದು ಅತಿರಿಕ್ತವಾದ ಕೆಲಸವಾಗುತ್ತದೆ. ನಮ್ಮ ಮೊರೆಯನ್ನು ಆಲಿಸಿ ಸ್ವರ್ಗದಿಂದ ಓಗೊಡುತ್ತಾ, ಮುಂಗಳಗಾದ, ತಂದೆಯ ಸ್ಪರ್ಶವಿಲ್ಲದ ಮತ್ತು ಮಾನವನ ಕರೆಯನ್ನು ಪ್ರತಿಧ್ವನಿಸದ ಆ ಲೋಕವು ಬರೀ ಭಾರೀ ವ್ಯಾಪಕ ಮಾತ್ರವೆಂದೆನಿಸುವುದು. ಸನಾತನಿಗಳು ಇತ್ತ ದೈವಿಕ ಭಾವವನ್ನು ಮೀರಿದ ಉನ್ನತವಾದ ನೀತಿಯನ್ನು ತಿಳಿಯಲು ಅಸಾಧ್ಯವಾದ ಕಾರಣದಿಂದ ಅದನ್ನು ಕುರಿತು ಪರಿಶೀಲಿಸುತ್ತಲೇ ಆ ಧರ್ಮದಿಂದ ಕಂಗೆಟ್ಟು ನಾನು ಕಡೆಗೆಯು ಬೇರ್ಪಟ್ಟೆನು,

ಒಮ್ಮೆ ನಾನು ಥಾಮಸ್ ಸ್ಕಾಟ್ ಇವರಿಗೆ ಹೇಳಿದೆನು: "ಮಿಸ್ಟರ್ ಸ್ಕಾಟ್, ದೇವರ ಮಹಿಮೆ ಮತ್ತು ಅಸ್ತಿತ್ವವನ್ನು ಕುರಿತು ಒಂದು ಪ್ರಬಂಧವನ್ನು ಬರೆಯಲೇ?"

ಮಿಸ್ಟರ್ ಸ್ಕಾಟ್ ನನ್ನನ್ನು ತೀವ್ರವಾಗಿ ನೋಡಿದನು. "ಎಲ್ಲಿ

ಎಲ್ಲಿ ಮಲಗಿರುವುದು, ನೀನು ಕಡೆಗಾದರೂ ಆ ಸಮತಾಸ್ಥಿತಿಯನ್ನು ಎದುರಿಸುವೆ. ಆ ಕಾಲವು ನಿನಗೆ ಬರುವುದೆಂದು ನಾನು ಅಪೇಕ್ಷಿಸುತ್ತೇನೆ; ಸರಿ, ಹೋಗಿ ಬರಿ," ಎಂದು ಹೇಳಿದನು.

ಈ ಪ್ರಬಂಧವು ಹಸ್ತಪ್ರತಿಯಾಗಿ ಉಳಿದಿದ್ದಾಗ ನನ್ನ ಮುಂದಿನ ಜೀವನವನ್ನೆಲ್ಲ ವರ್ಣರಂಜಿತವಾಗಿ ಮಾಡುವಂಥಾ ಘಟನೆಯೊಂದು ನಡೆಯಿತು. ನಾನು ಚಾರ್ಲ್ಸ್ ಬ್ರ್ಯಾಡ್ಲೋಯವರನ್ನು ಎದುರುಗೊಂಡೆನು.

ತುಂಬಾ ಆಹ್ಲಾದಕರವಾದ ಮತ್ತು ಬಹುಕಾಲ ಇರುವಂಥ ಗೆಳೆತನವನ್ನು ನಾನು ಹೊಂದಿದ್ದುದರ ಪೈಕಿ ನಾನು ಬರುತ್ತಲಿದ್ದಾಗ ನನ್ನಲ್ಲಿ ದಯೆ ಇಟ್ಟು ಮನ್ನಿಸಿದ ಕೆಲವೇ ಹಿತೈಷಿಗಳ ಪೈಕಿ ಒಬ್ಬರಾದ ಶ್ರೀಮತಿ ಕಾನ್‌ವೆ ಮತ್ತು ಅವಳ ಪತಿಯು ಚಳಿಗಾಲದ ಆರಂಭದ ಒಂದು ದಿನ ಮಾತಾಡುತ್ತಾ ಇದ್ದಂತೆಯೇ Old Street-ಇದರ ಬಳಿಯಿದ್ದ Hall of Science ಇಲ್ಲಿಗೆ ಹೋಗಿದ್ದೀಯೇ, ಎಂದು ಕೇಳಿದಳು. ನಾನಾದರೋ ಕೇವಲ ಅವಿವೇಕಿಯಾಗಿ ಇತರ ಜನರಲ್ಲಿ ಸಾಮಾನ್ಯವಾಗಿ ಇರುವ ಪಕ್ಷಪಾತವನ್ನರಿತಿದ್ದು ಕಡೆಗೆ ಅಜ್ಞಾನದ ಅಚಾತುರ್ಯದಿಂದ, "ಇಲ್ಲ, ನಾನು ಅಲ್ಲಿಗೆ ಹೋಗಲೇ ಇಲ್ಲ; ಶ್ರೀ ಬ್ರ್ಯಾಡ್ಲೋ ಇವನೊಬ್ಬ ಪ್ರಬಲ ಭಾಷಣಕಾರನಲ್ಲವೇ?" ಎಂಬುದಾಗಿ ನಾನು ಕೇಳಿದೆನು.

"ನಾನು ಕೇಳಿದ ಸ್ಯಾಕ್ಸನ್ ಇಂಗ್ಲಿಷ್ ಭಾಷೆಯಲ್ಲಿ ಜಾನ್ ಬ್ರೈಟ್ ಇವನನ್ನುಳಿದು ಉತ್ತಮ ಮಾತುಗಾರರು ಇದ್ದರೆ ಅವನೇ ಆಗಿರುವನು. ಜನಸಂದಣಿಯಲ್ಲಿ ಅವನ ವಾಗ್ಬಲವು ಅಗಾಧವಾದುದು. ನೀನು ಒಪ್ಪಿದರೂ ಒಪ್ಪದಿದ್ದರೂ ಅವನು ಮಾತಾಡುವುದನ್ನು ಕೇಳಲೇ ಬೇಕು," ಎಂದು ಅವಳು ಉತ್ತರಿಸಿದಳು.

ಬ್ರಿಟಿಷ್ ಗ್ರಂಥಭಂಡಾರದಲ್ಲಿ (Museum Library) ಓದುತ್ತಾ ಇದ್ದಾಗ ಕೆಲ ಆಧ್ಯಾತ್ಮ ಸಾಹಿತ್ಯದ ಕೃತಿಕರ್ತರಿಗೆ ವಿರೋಧವಾದ ಅಥವಾ ದೃಶ್ಯಾತೀತವಾದ ವಿಚಾರಗಳ ಬಗ್ಗೆ ಇರುವ ಪ್ರಕಟಣೆಗಳಿಗೆ ಸಂಬಂಧಿಸಿ ಎಡ್ವರ್ಡ್ ಟ್ರೂಲೋವ್ ಇವನ ಹೆಸರನ್ನು ಕೇಳಿದ್ದರಿಂದ ಆ ಕೃತಿಗಳನ್ನು ಹುಡುಕುತ್ತಾ, ಆ ವರ್ಷದ ಜುಲೈ ತಿಂಗಳಲ್ಲಿ ನಾನು ಹೈ ಹಾಲ್ಬೋರ್ನ್ ಬೀದಿಯ ೨೫೬ನೇ ಅಂಗಡಿ ಮನೆಗೆ ಹೋದೆನು. ಅಲ್ಲಿಯೇ National Reformer ಎಂಬುದಾಗಿದ್ದ ಒಂದು ಪ್ರಸಾರದ ಶಿರೋನಾಮದಿಂದ ಆಕರ್ಷಿತಳಾಗಿ ಅದನ್ನು ಕೊಂಡುಕೊಂಡೆನು. ಹಿಂದಕ್ಕೆ ವಿಕ್ಟೋರಿಯಾ ನಿಲ್ದಾಣಕ್ಕೆ ಹಿಂತಿರುಗುತ್ತಿದ್ದಾಗ ನಾನು ಅದನ್ನು ಬಸ್ಸಿನಲ್ಲಿ ಇರುತ್ತ ಓದುತ್ತಾ ಅದರಲ್ಲಿ ಮಗ್ನಳಾದೆನು. ಅದು ಅತ್ಯುತ್ತಮವಾಗಿ ಕಂಡಿತು

ಬಂತಲ್ಲದೆ ನಾನು ಅದರಿಂದ ತುಂಬಾ ಸಂತೋಷಗೊಂಡು ನನ್ನಷ್ಟಕ್ಕೆ ಆನಂದಿಸಿದೆನು. ಅನಂತರ ನಾನು ತಲೆಯೆತ್ತಿ ನೋಡಿದಾಗ ಅದೇನೋ ಬಹು ಕಳವಳಗೊಂಡವನಂತೆ ಒಬ್ಬ ಯುವಕನು ನನ್ನೆಡೆಗೇ ನೋಡುತ್ತಿದ್ದನು. ಕೀಳ್ವಸ್ತ್ರವನ್ನು ಧರಿಸಿ ಸಪ್ಪೆಯಾಗಿ ತೋರುವ ಎಳೆ ಹುಡುಗನು ನಾಸ್ತಿಕತೆಯನ್ನು ಕುರಿತಾದ ಪತ್ರಿಕೆಯನ್ನು ಓದುತ್ತಿರುವುದನ್ನು ಕಂಡು ಅವನು ನಿಜವಾಗಿಯೂ ಆಶ್ಚರ್ಯಚಕಿತನಾದನು. ಅವನು ಪತ್ರಿಕೆಯನ್ನೇ ನೋಡುತ್ತಿದ್ದ ಕಾರಣದಿಂದ ನಾನು ನನ್ನ ದುಪ್ಪಟದ ಚೀಲವನ್ನು ತೆರೆದಿಟ್ಟು ಅದನ್ನು ಅವನಿಗೆ ಓದಲಿಕ್ಕೆಂದು ಕೊಡಲು ನನ್ನ ಮನಸ್ಸು ಪ್ರೇರೇಪಿಸಿತು,

ನಾನು ನನ್ನ ನಿಕಟ ಸಂಬಂಧವನ್ನು ಅದರೊಡನೆ ಬೆಳೆಸಲು ಕಾರಣವಾದ ಆ ಪತ್ರಿಕೆಯ ಮೊದಲನೇ ಪ್ರತಿಯು 1874 ರ ಜುಲೈ 19 ರದ್ದಾಗಿತ್ತು. ಅದರಲ್ಲಿ ನಾರ್ತಂಪ್ಟನ್ನಿನ ಶ್ರೀ ಆರ್ನಾಲ್ಡ್ ಎಂಬುವನು ಚಾರ್ಲ್ಸ್ ಬ್ರಾಡ್ಲೆಯನ್ನು ಟೀಕಿಸಿ ಬರೆದ ಎರಡು ದೀರ್ಘ ಪತ್ರಗಳಲ್ಲದೆ ಅದಕ್ಕೆ ಬ್ರಾಡ್ಲೆಯು ಸೂಕ್ತವಾಗಿ ಬರೆದ ಉತ್ತರವೂ ಇತ್ತು. ಅದರಲ್ಲಿ National Secular Society ಇದರ ವಿಷಯವಾಗಿ ಒಂದು ಲೇಖನವೂ ಇತ್ತು. ಸ್ವತಂತ್ರ ಭಾವನೆಯನ್ನು ಪ್ರತಿಪಾದಿಸುವುದಕ್ಕೆ ಹಾಗೆ ಒಂದು ಸಂಸ್ಥೆಯು ಇದೆಯೆಂದು ಆಗ ನನಗೆ ತಿಳಿಯಿತು. ಹಾಗೊಂದು ಸಂಸ್ಥೆಯು ಇದ್ದರೆ ನಾನು ಅದಕ್ಕೆ ಸೇರಬೇಕೆಂದು ನನಗೆ ಅನ್ನಿಸಿತು, ಅಲ್ಲದೆ ಆ National Reformer ಇದರ ಸಂಪಾದಕನಿಗೆ ಒಂದು ಚಿಕ್ಕ ಪತ್ರವನ್ನು ಬರೆದು ಆ ಸಂಸ್ಥೆಗೆ ಸೇರುವ ಮುನ್ನ ಒಬ್ಬ ವ್ಯಕ್ತಿಯು ನಾಸ್ತಿಕವಾದವನ್ನು ನಂಬಬೇಕೋ ಎಂಬುದಾಗಿ ಕೇಳಿದೆನು, ಅದಕ್ಕೆ ಅವನ ಉತ್ತರವನ್ನು ಆ ಪತ್ರಿಕೆಯಲ್ಲಿ ಹೀಗೆ ಕೊಡಲಾಗಿತ್ತು:-

"ಎಸ್. ಈ: National Secular Society ಇದಕ್ಕೆ ಸದಸ್ಯರಾಗಲು ಜೂನ್ ತಾ. 14 ರ National Reformer ಪತ್ರಿಕೆಯಲ್ಲಿ ಹೇಳಿದ ನಾಲ್ಕು ಸೂತ್ರಗಳನ್ನು ನಿಜವಾಗಿಯೂ ಒಪ್ಪಿ ಸ್ವೀಕರಿಸಬೇಕು. ನಾಸ್ತಿಕವಾದಿಯೆಂದು ಹೇಳಿಕೊಳ್ಳದೆ ಯಾರೂ ಈ ಸೂತ್ರಗಳಿಗೆ ಒಪ್ಪಿ ಸದಸ್ಯರಾಗಬಹುದು, ರೋಮನ್ ಕ್ಯಾಥೋಲಿಕ್ ಪಂಥದಲ್ಲಿ ಅಧಿಕಾರಯುಕ್ತವಾಗಿ ಹೇಳಿದ ಸಿದ್ಧಾಂತಗಳನ್ನು ಕಣ್ಮುಚ್ಚಿಕೊಂಡು ಒಪ್ಪುವುದರ, ಮತ್ತು ಕಾರಣವಿಲ್ಲದೆ ಧಾರ್ಮಿಕ ಸೂತ್ರಗಳನ್ನು ಸ್ವೀಕರಿಸುವುದರ ಮತ್ತು ನಮ್ಮ ವಾದವು ಸಕಾರಣವಾಗಿ ಎತ್ತಿ ನಿಲ್ಲಿಸಬೇಕೆಂಬುದರ ಬಗ್ಗೆ ನಾವು ನಿಜವಾಗಿಯೂ ತೃಪ್ತಿಗೊಂಡವರಲ್ಲ. ಈ ಸಂಸ್ಥೆಯ ನಿಯಮಗಳನ್ನು ಪುನಃ ನೋಡಿ ನೀವು ಸದಸ್ಯರಾಗಿ ಸೇರಬಹುದು. ನಮ್ಮ ಆಹ್ವಾನವನ್ನು ಪುನಃ ನಿಮ್ಮ ಮುಂದಿಡುತ್ತಿದ್ದೇವೆ."

ನಾನು ನನ್ನ ಹೆಸರನ್ನು ಒಬ್ಬ ಸಕ್ರಿಯ ಸದಸ್ಯೆ

ಯಾಗಿ ಸೇರಿಸಿದೆನು. ಆಗಸ್ಟ್ ತಿಂಗಳ 9 ರ National Reformer
ನಲ್ಲಿ ನನ್ನ ಹೆಸರು ಪ್ರಕಟವಾಯಿತು. ಲಂಡನ್ನಿನ ಸಭಾಸದರು ಆದಿ
ತ್ಯವಾರ ಸಾಯಂಕಾಲ Hall of Science ನಲ್ಲಿ ಶ್ರೀ ಬ್ರ್ಯಾಡ್ಲಾ ಅವ
ನಿಂದ ತಮ್ಮ ಪ್ರವೇಶಪತ್ರಿಕೆಗಳನ್ನು ಪಡೆಯಬಹುದೆಂದು ತಿಳಿ
ಸಿದ್ದರಿಂದ ನಾನು ಆ ದಿನ ಅಲ್ಲಿಗೆ ಹೋದೆನಲ್ಲದೆ 1874 ರ ಆಗಸ್ಟ್
ಎರಡನೇ ದಿನ ನಾನು ಸ್ವತಂತ್ರವಾದಿಗಳ ಸಭೆಗೆ ಮೊದಲ ಬಾರಿಗೆ ಸೇ
ರಿದೆನು.

ಆ ಸಭಾಂಗಣವು ಜನರಿಂದ ಕಿಕ್ಕಿರಿದು ತುಂಬಿತ್ತು; ಅವ
ರ ಉಸಿರು ಕಟ್ಟುವಂತಾಗಿತ್ತು. ಆ ವೇಳೆಗೆ ಭಾಷಣಕಾರ ಕಾರ್ಯ
ಕ್ರಮವನ್ನು ಹೇಳಿದಾಗ ಜನರು ಒಂದೇ ಸಮನೆ ಕೈಚಪ್ಪಾಳೆ
ದನಿಗರೆದರು. ಹಾಗೆ ಆದರದ ಆಹ್ವಾನವಿತ್ತಾಗ ಬಿಳಿಯ ನೀಳ
ವಾದ ವ್ಯಕ್ತಿಯು ಹಜಾರದ ಕಡೆಯಿಂದ ಬೇಗನೆ ವೇದಿಕೆಯನ್ನೇ
ರಿ ಜನರ ಸ್ವಾಗತಕ್ಕೆ ಉತ್ತರವಾಗಿ ಸ್ವಲ್ಪ ಬಾಗಿದನು. ಚಾರ್ಲ್ಸ್
ಬ್ರ್ಯಾಡ್ಲಾಯೇ ತನ್ನ ಪೀಠದಲ್ಲಿ ಇರುತನು, ಆಶ್ಚರ್ಯದಿಂದ ಮತ್ತು
ಅವನ ವ್ಯಕ್ತಿತ್ವಕ್ಕೆ ಮಾರುಗೊಂಡು ಆದರದಿಂದ ನಾನು
ಅವನನ್ನೇ ನೋಡಿದೆನು. ಗಂಭೀರ, ಮೌನ, ಸ್ವಚ್ಛ ಮತ್ತು ಬಲ
ವತ್ತಾದ ಮುಖ, ದೊಡ್ಡ ತಲೆ, ತೀಕ್ಷ್ಣ ಕಣ್ಣುಗಳು, ಅಗಲವಾದ
ಉದ್ದಗಲದಿಂದ ಕೂಡಿದ ಹಣೆಯಿಂದ ವಿರಾಜಿಸಿದ ಆ ವ್ಯ
ಕ್ತಿಯನ್ನು ನಾನು ಆಡಂಬರದ ಜಿಹ್ವಾವಲ್ಲಭಗಾರನಾಗ ಜ್ಞಾನಕಿಸ
ತೀವ್ರಗಾಮಿಯೂ ಎಂಬುದಾಗಿ ವರ್ಣಿಸಿದೆನು?

ಸ್ಪಷ್ಟ ಮತ್ತು ಶಾಂತ ಇವರ ಕತೆಯಿಂದ ಪ್ರಾರಂಭ
ಗೊಂಡು ಆದರೆ ಸಾವಧಾನವಾಗಿ ಏರಿತು ಸರಳವಾಗಿ ಪ್ರ
ತಿಪಾದಿಸುತ್ತಾ ಭಾಷಣವನ್ನು ಪ್ರಾರಂಭಿಸಿದನು. ಅನಂತರ
ವಿಷಯದಿಂದ ವಿಷಯಕ್ಕೆ ನಿರರ್ಗಳವಾಗಿ ಹರಿದಂತೆ ಅವನ
ಕಂಠಧ್ವನಿಯೇರಿ ಅದರ ಪ್ರತಿಧ್ವನಿಯು ಕಹಳೆಯ ಧ್ವನಿ
ಯಂತೆ ಆ ಸಭಾಂಗಣದ ಸುತ್ತಲೂ ಬಾರಿಸುತಿತ್ತು. ಅ
ವನು ಮಾತಾಡುತ್ತಿದ್ದ ವಿಷಯದಲ್ಲಿ ಅವನು ತೋರಿದ
ಕಾಳಜಿಯಿಂದ ಅವನು ಅದನ್ನು ಹೇಗೆ ಪ್ರತಿಪಾದಿಸುತ್ತಿದ್ದ
ನೆಂಬುದನ್ನು ನಾನು ಪರೀಕ್ಷಿಸುತ್ತಿದ್ದೆನು. ಅವನ ಬುದ್ಧಿ
ಯು ಎಷ್ಟು ಗಂಭೀರವೋ ಅದೇ ಪ್ರಮಾಣದಲ್ಲಿ ಅವನ
ಜ್ಞಾನವೂ ಅಗಾಧವಾಗಿತ್ತು. ಅವನ ವಾಕ್ಚಾತುರಿ, ಹಾಸ್ಯ
ಪ, ವ್ಯಂಗ್ಯ, ಕರುಣೆ, ಸ್ಫೂರ್ತಿ ಎಲ್ಲವೂ ಕ್ಷಣಕ್ಷಣದ ಮನ
ದಲ್ಲಿರುವ ಮೂಢನಂಬಿಕೆಯನ್ನು ಪ್ರತಿಭಟಿಸುತ್ತಿತ್ತು
ಲ್ಲದೆ ಆ ಮಹಾನುಭಾವಿಯು ಅವನ ವಾಗ್ಝರಿಕ್ಕೆ ಮಾರು
ಹೋಗಿ ಮೌನವಾಗಿ ಉಸಿರುಗಟ್ಟಿಯುತ್ತಾ ಕುಂತೆಯೇ ನಿ

ಧ್ವನಿ ಕೇಳುತ್ತಿದ್ದಿತು. ಅವನ ಬಾಹ್ಯನೋಟ ಮುಂದುವರಿಯುತ್ತಾ ಇದ್ದಂತೆಯೇ ಬಹು ಭಯಂಕರ ಕರ್ತಾರನು ಆ ಮಾನವನನ್ನು ಪೀಡಿಸುತ್ತಲಿದೆ ಜನರ ಉತ್ಸಾಹಕರವಾದ ಅಭಿನಂದನಾ ಘೋಷವು ಆ ಸ್ತುತಿಯನ್ನು ತಣಿಸಿತು.

ಅನಂತರ ಚಾರ್ಲ್ಸ್ ಬ್ರಾಡ್ಲೆಯು ತನ್ನ ಕೈಯಲ್ಲಿ ಕೆಲವು ಪ್ರಸಿದ್ಧ ಚಿತ್ರಗಳನ್ನು ಹಿಡಿದುಕೊಂಡು ಸಭಾಂಗಣದ ಮಧ್ಯೆ ನಡೆದು ಬಂದನು, ನನ್ನದನ್ನು ನನ್ನ ಕೈಗೆ ಕೊಡುತ್ತಾ, "ಶ್ರೀಮತಿ ಬ್ರೌನಿಂಗ್?" ಎಂಬುದಾಗಿ ಪ್ರಶ್ನಿಸಿದನು. ಅದರನಂತರ ನಾನು ನಾಸ್ತಿಕವಾದದ ಬಗ್ಗೆ ಕೇಳಿದ ಪ್ರಶ್ನೆಗೆ ಅವನು ಆ ವಿಚಾರವಾಗಿ ನನ್ನೊಡನೆ ಮಾತಾಡಲು ಇಚ್ಛಿಸುವೆನೆಂದೂ ಅದಕ್ಕಾಗಿ ಸಮಯವನ್ನು ನಿಶ್ಚಯಿಸಬೇಕೆಂದೂ ಹೇಳುತ್ತಾ ಅವನು ತನ್ನ ಬಾಹ್ಯದ ವೇಳೆಗೆ ಉಪಯೋಗಿಸುವ ಪತ್ರಕ್ರಮವೊಂದನ್ನು ನನ್ನ ಕೈಗೆ ಇತ್ತನು, ನನ್ನನ್ನು ಎಂದೂ ಕಾಣದಿದ್ದ ಅವನು ನೇರವಾಗಿ ನನ್ನ ಬಳಿಗೆ ಬಂದು ಮಾತಾಡಬೇಕಾದರೆ ನನ್ನನ್ನು ತಿಳಿದಿದ್ದು ಹೇಗೆ ಎಂಬುದಾಗಿ ಅವನನ್ನೇ ಹಲವು ದಿನಗಳನಂತರ ಕೇಳಿದೆನು, ಆಗ ಅವನು ನಕ್ಕನು; ಅಲ್ಲದೆ ತಾನು ಹೇಗೆ ತಿಳಿದನೋ, ತನಗೆ ಗೊತ್ತಿಲ್ಲ ಎಂದೂ ಹೇಳಿದನು. ಹೇಗೂ ಎಲ್ಲರನ್ನೂ ನೋಡುತ್ತಾ ಬಂದಂತೆ ನೀನೇ ಆ ಬ್ರೌನಿಂಗ್ ಎಂಬುದು ಖಚಿತವಾಯಿತು, ಎಂದು ಅವನಂದನು.

ಹೀಗೆ ಆ ದೊಡ್ಡ ಸಭಾಂಗಣದಲ್ಲಿ ನಡೆದ ಮೊದಲ ಭೇಟಿಯು ಅವನು ಸಾಯುವ ವರೆಗೂ ನಮ್ಮಿಬ್ಬರೊಳಗೆ ಇದ್ದ ಪ್ರಬಲ ಮಿತ್ರತ್ವವಾಗಿ ಬೆಳೆಯಿತಲ್ಲದೆ ನನಗಾದರೋ ಅವನು ಅಗಲಿದ್ದರೂ ಆ ಸಾವಿನ ಹೆದ್ದಾರಿಯ ಮೂಲಕವಾಗಿ ಆ ಅನ್ಯೋನ್ಯ ವಿಶ್ವಾಸವು ಇಂದಿಗೂ ನಮ್ಮನ್ನು ಒಟ್ಟುಗೂಡಿಸಿದಂತೆ ಮಾಡಿದೆ, ನಾವು ಅಪರಿಚಿತರಂತೆ ಅಲ್ಲ. ಮೊದಲ ಬಾರಿಗೆ ಎದುರುಗೊಂಡಾಗ ಪರಿಚಿತರಂತೆಯೇ ಮಾತಾಡಿದೆವು, ಬೇಗನೆ ಅನ್ಯೋನ್ಯವಾಗಿ ತಿಳಿದುಕೊಂಡೆವು. ನಮ್ಮ ಕಣ್ಣುಗಳು ಅತ್ಯುತ್ತಮ ಎಂಬಂತೆ ಕಾತರದಿಂದ ನಮ್ಮನ್ನು ನೋಡುತ್ತಿದ್ದುವು, ಈ ರೀತಿ ಪ್ರಶ್ನೆ ಉದಿಸದ ಗೆಳೆತನವು ಹಿಂದಿನ ಜನ್ಮಗಳಲ್ಲಿ ಬಹು ಆತ್ಮೀಯತೆ ತಮ್ಮೊಳಗೆ ಇದ್ದಿದ್ದರ ಪರಿಣಾಮವೆಂದು ಈಗ ತಿಳಿಯುತ್ತೇನೆ. ಅನಂತರ ಆ ಆಗಸ್ಟ್ ತಿಂಗಳ ಆ ದಿನದಿಂದ ನಾವು ಆ ಪುರಾತನ ಗೆಳೆತನವನ್ನು ಮುಂದುವರಿಸಿದಲ್ಲದೆ ಹೊಸತಾಗಿ ಈಗ ಬೆಳೆದಿದ್ದೇನೂ ಅಲ್ಲ. ಇದೇ ರೀತಿ ಮತ್ತೊಂದಿನ

ಜನ್ಮಗಳಲ್ಲೂ ನಾವು ಬೇರೆಯಾಗುವೆವು. ನಾವು ಹೀಗೆ ನೇರವಾದ ರೀತಿಯಲ್ಲಿಯೇ ಆಗಲೂ ಅನ್ಯೋನ್ಯ ನೇರವಾಗುವೆವು. ಅವನ ನಿಷ್ಕಲ್ಮಷ ಗೆಳೆತನಕ್ಕೆ ನಾನು ಎಷ್ಟು ಆಭಾರಿಯಾಗಿದ್ದೇನೆಂಬುದನ್ನು ನಾನು ಯಾವಾಗಲೂ ಬರೆದಿರುವಂತೆ ಈಗಲೂ ಬರೆಯಲು ಇಚ್ಛಿಸುತ್ತೇನೆ. ಅವನ ಮಿತ್ರತ್ವವು ಎಷ್ಟು ಆಗಾಧವಾಗಿತ್ತೆಂಬುದು ನನಗೆ ಹೇಳಲಿಕ್ಕೆ ಸಾಧ್ಯವಿಲ್ಲ. ಅವನ ಬಹು ಒಳ್ಳೆಯ ಮಾತುಗಳು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ.

"ನೀನು ಸರಿಯೆಂದು ನಂಬಿದ ವಿಷಯದ ಮೇಲೆ ಅದಕ್ಕೆ ವಿರೋಧವಾಗಿ ಯಾವ ಅಭಿಪ್ರಾಯವಿದೆಯೆಂದು ತಿಳಿಯದೆ ನೀನು ನಿನ್ನ ಅಭಿಪ್ರಾಯವನ್ನು ಆ ವಿಷಯದ ಮೇಲೆ ಪ್ರತಿಪಾದಿಸುವುದು ಸರಿಯಲ್ಲ.

"ಒಂದು ವಿಷಯದ ಮೇಲೆ ಪ್ರಬಲ ಜ್ಞಾನಿಗಳು ಏನು ಹೇಳಿದ್ದಾರೆ ಎಂಬುದನ್ನು ತಿಳಿಯದೆ ನೀನು ಅದನ್ನು ಚೆನ್ನಾಗಿ ತಿಳಿದಿರುವೆಯೆಂದು ಹೇಳಿದರೆ ಅದು ಸಾಧುವಾಗದು.

"ಸಾರ್ವಜನಿಕ ಕೆಲಸಗಾರನು ಮಾತಾಡುವುದಕ್ಕಿಂತ ಹೆಚ್ಚಾಗಿ ಅವನು ಮನೆಯಲ್ಲಿ ಕುಳಿತುಕೊಂಡು ತಾನು ಮಾಡಬೇಕಾದ್ದರ ಬಗ್ಗೆ ಆಲೋಚಿಸದೆ ಅವನು ಸಾರ್ವಜನಿಕ ಕೆಲಸಕ್ಕೆ ತೊಡಗಬಾರದು.

"ನೀನಾಗಿಯೇ ನಿನ್ನ ಕಠಿಣವಾದ ನ್ಯಾಯಾಧೀಶನಾಗು; ನಿನ್ನ ಮಾತನ್ನು ನೀನೇ ಆಲಿಸು. ನೀನೇ ಅದನ್ನು ವಿಮರ್ಶಿಸು; ನಿನ್ನ ವಿಷಯವಾದ ಟೀಕೆಗಳನ್ನು ನೀನೇ ಓದು, ಮತ್ತು ಅದರಲ್ಲಿ ಎಷ್ಟರ ಮಟ್ಟಿಗೆ ಸತ್ಯವಿಚಾರವಿದೆಯೆಂದು ಪರಿಶೀಲಿಸು.

"ನೀನು ನಿನ್ನ ಅಭಿಪ್ರಾಯಗಳ ಪ್ರತಿಧ್ವನಿಯನ್ನೇ ನಿಚ್ಚತ್ತ ಸಮಯವನ್ನು ಕೇಳುವುದು ಬೇಡ. ನೀನು ಒಪ್ಪದೇ ಇರುವ ವಿಷಯಗಳ ಮೇಲೂ ಇತರರು ಏನು ಹೇಳಿದರೆಂಬುದನ್ನು ತಿಳಿ. ಆಗ ನೀನು ಸುಲಭದಲ್ಲಿ ತಿಳಿಯಲಾಗದ ಸತ್ಯತೆಯನ್ನು ಕಾಣುವೆ."

ನಾವು ಬಹಳ ಕಾಲ ಒಡನೆಯೇ ಇದ್ದಾಗ ಅವನ ನನಗೆ ಹರ್ಷ ಖಂಡಿತವಾದಿಯಾಗಿಯೂ ಮೃದುವಾಗಿಯೂ ನನ್ನ ವಿಚಾರ ವಿನಿಮಯಗಳನ್ನು ವಿಮರ್ಶಿಸುತ್ತಿದ್ದನು. ನಮ್ಮ ಕಾಲದಲ್ಲಿ ಇರುವವರೆಲ್ಲರಿಗಿಂತಲೂ ನಾವು ಹೆಚ್ಚು ವಿದ್ಯೆ ಬುದ್ಧಿಯಿಂದ ಕೂಡಿರುವಾಗ ನಮ್ಮನ್ನು ಪ್ರಶಂಸಿಸುತ್ತಾ ಜನರು ಹದ್ದು ಮೀರಿ ನಮ್ಮ ಗುಣಗಾನ ಮಾಡುತ್ತಾ ಇರುವುದನ್ನು ಕೇಳುವುದು ಸುಲಭವೇ ಸರಿ. ಆದರೆ ಕ್ರಿಸ್ತಸಂಘದವರಿಂದ ಅದೇ ರೀತಿಯಲ್ಲಿ ನಿಂದನೆಯನ್ನು ಅವಹೇಳನವನ್ನು ನಾವು ಸಹಿಸಿದ್ದೇವೆ.

ಈ ಕಾರಣದಿಂದ ನಾವೇ ನಮ್ಮನ್ನು ಶೋಧಿಸುವುದಕ್ಕೆ ಸರಿಯಾದ ನ್ಯಾಯವಾದಿಗಳಾಗಬೇಕು. ನಾವು ಬೋಧಿಸುವ ಎಲ್ಲ ವಿಷಯಗಳೂ ನಮಗೆ ತಿಳಿದಿವೆಯೆಂಬುದರ ಬಗ್ಗೆ ನಾವು ವಿಶ್ವಾಸವಿಡಬೇಕು, ಎಂದು ಬ್ರ್ಯಾಡ್ಲೆಯು ಹೇಳುತ್ತಿದ್ದನು, ನನ್ನ ದೈವದತ್ತ ವಾಕ್ಪ್ರವಾಹವು ಸಮಯದಲ್ಲಿ ಇತರರನ್ನು ಒಪ್ಪಿಸಲು ಸಹಾಯಕವಾಗುತ್ತದೆಂದು ತಿಳಿದಿದ್ದ ನನ್ನ ಭಾವನೆಯು ನಿರರ್ಥಕವೆಂದು ತೋರಿಸಿ ನನ್ನನ್ನು ಅದರಿಂದ ರಕ್ಷಿಸಿದನು. ನಾನು ಸ್ವಲ್ಪ ಸ್ಫೂರ್ತಿ ಹೊಂದಿ ಮಾತಾಡಿದಾಗ ಜನರ ಪ್ರಶಂಸೆಯನ್ನು ಸಮಯದಲ್ಲಿ ಪಡೆಯುತ್ತಿದ್ದೆನು, ಆದರೂ ನನ್ನ ಕೆಲವು ವಾದದ ವಿರೋಧ ಅವನ ಟೀಕೆ, ನನ್ನ ಕೆಲವು ಅಭಿಪ್ರಾಯಗಳ ಮೇಲೆ ಅವನ ಪ್ರತಿಭಟನೆ, ಅವನ ಅನುಭವ ಬಲದ ನ್ಯಾಯ ಪ್ರತಿಪಾದನೆ, ಇತ್ಯಾದಿ ನನಗೆ ಅಮೂಲ್ಯ ಕಾಣಿಕೆಗಳಾಗಿದ್ದವು, ನಾನು ಮಾಡಿದ ಕೆಲಸದಲ್ಲಿ ಏನಾದರೂ ಸತ್ವಸಾರವಿದ್ದರೆ ಅದೆಲ್ಲವೂ ಹೆಚ್ಚಾಗಿ ಅವನಿಂದ ಮಾರ್ಗದರ್ಶಕವಾದ ಮತ್ತು ಅತಿ ತೀವ್ರಗಾಮಿಯಾಗದಂತೆ ತಡೆದಿಟ್ಟಿದ್ದ ಆ ಪ್ರಭಾವದ ಕಾರಣದಿಂದಲೇ ಆಗಿದೆ.

ಅವನ (ಚಾರ್ಲ್ಸ್ ಬ್ರ್ಯಾಡ್ಲೆ) ಸ್ವಂತ ಜೀವನದಲ್ಲಿದ್ದ ಮಾನವೀಯತೆಯಾದ ಗುಣವೆಂದರೆ ಅವನು ತೋರಿಸುತ್ತಿದ್ದ, ಅದರಲ್ಲೂ ಅವನು ಹೆಂಗಸರಿಗೆ ತೋರಿಸುತ್ತಿದ್ದ ಸೌಜನ್ಯತೆಯೇ ಆಗಿತ್ತು. ಈ ಬಹಿರಂಗವಾದ ನಯವಿನಯವು ಅವನ ದಿಟ್ಟತನದ ವ್ಯಕ್ತಿತ್ವದಲ್ಲಿ ಬಹು ಹಾರ್ದಿಕವಾಗಿ ಪ್ರದರ್ಶಿತವಾಗುತ್ತಿತ್ತು. ಈ ಗುಣವು ವಿದೇಶೀಯರದಲ್ಲದೆ ಆಂಗ್ಲೇಯರಿಗೆ ಸೇರಿದ್ದಲ್ಲ; ಏಕೆಂದರೆ ಇಂಗ್ಲಿಷ್ ಜನವು ನ್ಯಾಯಾಸ್ಥಾನದ ಬಳಿಗೆ ಹೋಗುವಾಗ ಮಾತ್ರ ದೈನ್ಯತೆಯನ್ನು ತೋರಿಸುವರಲ್ಲದೆ ಅವರು ಸೌಜನ್ಯದಲ್ಲಿ ಇತರರಂತೆ ಅಲ್ಲ. ಆದುದರಿಂದ ಬ್ರ್ಯಾಡ್ಲೆಯು ಈ ವಿನೀತ ಗುಣವು ಅವನ ವ್ಯಕ್ತಿತ್ವಕ್ಕೆ ಕಳೆಯೇರಿಸುತ್ತಿತ್ತು. ಹೀಗೆ ಆಂಗ್ಲ ಜನದಲ್ಲಿಲ್ಲದ ಈ ಉತ್ತಮ ಗುಣಗಳು ಅವನಲ್ಲಿ ಹೇಗೆ ಮೊಳೆಯಿತೆಂದು ಅವನನ್ನೇ ಒಮ್ಮೆ ಕೇಳಿದೆನು, ಆಗ ಅವನು ತನ್ನ ಟೋಪಿ (hat)ಯನ್ನು ಮೇಲಕ್ಕೆ ಹಿಡಿದು ತನ್ನ ಸೇವಕಿಯನ್ನು ಏನಾದರೊಂದು ಕೇಳುವನು. ಅಥವಾ ಓರ್ವ ಹೆಂಗಸಿಗೆ ಕೈನೀಡಿ ಅವಳನ್ನು ಗಾಡಿಯಲ್ಲಿ ಕೂರಿಸುವನು. ಅನಂತರ ಸ್ವಲ್ಪ ನಗುತ್ತಾ ಮತ್ತು ಸ್ವಲ್ಪ ಪರಿಹಾಸ್ಯವನ್ನು ಬೀರುತ್ತಾ ತಾನು ಇಂಗ್ಲೆಂಡಿನಲ್ಲಿ ಮಾತ್ರ ಓರ್ವ ಸಮಾಜವಾದಿಯೆಂದು ಹೇಳುವನು. ಫ್ರಾನ್ಸ್, ಸ್ಪೈನ್

ಇಟಲಿಗಳಲ್ಲಿ ಸಮಾಜದ ಉನ್ನತ ವರ್ಗದ ಜನರಿಂದ ಯಾವಾಗಲೂ ಸ್ವಾಗತಿಸಲ್ಪಟ್ಟು ಅವರ ಆದರಕ್ಕೆ ಪಾತ್ರನಾಗಿರುವೆನೆಂದೂ ತಾನು ತಿಳಿಯುವುದೇ ಆ ವಿದೇಶೀಯ ಜನದ ಸಭ್ಯತೆಯನ್ನು ತಾನು ಹೊಂದಿರಲಿಕ್ಕೆ ಸಾಕು, ಎಂದೂ ಹೇಳುವನು. ಅಷ್ಟೇ ಅಲ್ಲ, ಸಾಮಾಜಿಕ ಸ್ಥಾನಮಾನಗಳ ಬಗ್ಗೆ ಎದ್ದ ಪ್ರಶ್ನೆಗಳಿಗೆ ಅವನು ಚಿತ್ತ ನಿಗವಿಟ್ಟುದೇ ಇಲ್ಲ; ದೊಡ್ಡ ಪ್ರಭುವೇ ಆಗಲಿ, ಸಾಮಾನ್ಯ ಕೂಲಿಗಾರನೇ ಆಗಲಿ, ಬ್ರ್ಯಾಡ್ಲೆಗೆ ಎಲ್ಲರೂ ಸಮವಾಗಿದ್ದರು. ಜನರು ತಮ್ಮೊಳಗೆ ನಿರ್ಮಿಸಿಕೊಳ್ಳುತ್ತಿದ್ದ ಪ್ರತಿಷ್ಠೆಗಳನ್ನು ಕುರಿತು ಅವನು ಎಂದೂ ಲಕ್ಷಿಸಿದ್ದೇ ಇಲ್ಲ!

Hall of Science ನಲ್ಲಿ ನಾನು ಮೊದಲ ಬಾರಿಗೆ ಚಾರ್ಲ್ಸ್ ಬ್ರ್ಯಾಡ್ಲೆಯನ್ನು ಭೇಟಿಯಾಗಿ ಒಂದೆರಡು ದಿನಗಳನಂತರ ಕಮರ್ಷಿಯಲ್ ರಸ್ತೆಯ ಟರ್ನರ್ ಬೀದಿಯ ಅವನ ಮನೆಯಲ್ಲಿ ಪುಸ್ತಕಗಳಿಂದ ತುಂಬಿದ್ದ ಚಿಕ್ಕ ಕೋಣೆಯೊಳಗೆ ಅವನು ಆದರದಿಂದ ಬೀಳ್ಕೊಟ್ಟು ಕಾಣುತ್ತಿದ್ದ ಆ ವೇಳೆಗೆ ಅಲ್ಲಿ ನಾನು ಅವನೊಡನೆ ಮೊದಲ ಸಂಭಾಷಣೆಯನ್ನು ನಡೆಸಿದೆನು, ಕ್ರೈಸ್ತರ ಹಿಂಸಾಕೃತ್ಯದ ಕಾರಣದಿಂದ ತನ್ನ ವ್ಯಾವಹಾರಿಕ ಕ್ಷೇತ್ರದಲ್ಲಿ ಸೋಲನ್ನು ಅನುಭವಿಸಿದನೆಂದೂ, ಕಡೆಗೆ ದಿವಾಳಿಯಾಗುವುದರಿಂದ ಪಾರಾಗಲು ಅವನು ತನ್ನ ಪುಸ್ತಕಗಳನ್ನುಳಿದ ಇತರ ಸಾಮಾನುಗಳನ್ನೆಲ್ಲ ಮಾರಿ ತನ್ನ ಹೆಂಡತಿ ಮತ್ತು ಹೆಣ್ಣು ಮಕ್ಕಳನ್ನು ತನ್ನ ಮಾವನ ಮನೆಗೆ ಕಳುಹಿಸಿ ಆ ಟರ್ನರ್ ಬೀದಿಯಲ್ಲಿ ಎರಡು ಕೋಣೆಗಳನ್ನು ಹಿಡಿದು ಅತ್ಯಲ್ಪ ಖರ್ಚಿನಿಂದ ಜೀವನವನ್ನು ನಡೆಸುತ್ತಿರುವನೆಂದೂ ಆನಂತರ ತಿಳಿದೆನು. ಅವನು ಇತರರಿಂದ ಪಡೆದ ಸಾಲವನ್ನು, ರಾಜಕೀಯ ಮತ್ತು ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಪಡೆದ ಹಣವನ್ನೆಲ್ಲ ಹೇಗಾದರೂ ಹಿಂದಿರುಗಿ ಕೊಡಲೇ ಬೇಕೆಂದೂ ಪಣ ತೊಟ್ಟಿದ್ದನು, ನಾನು "On the Nature and Existence of God" ಎಂಬುದಾಗಿ ಬರೆದಿದ್ದ ನನ್ನ ಪ್ರಬಂಧದ ಹಸ್ತಪ್ರತಿಯನ್ನು ಹಿಡಿದುಕೊಂಡಿದ್ದೆನು, ನಮ್ಮ ಮಾತುಕತೆಗೆ ಅದೇ ಆಧಾರವಾಯಿತು, ನಾವು ಮಾತಾಡುತ್ತಾ ಇದ್ದಂತೆ ನಮ್ಮ ಅಭಿಪ್ರಾಯಗಳಿಗೆ ಹೆಚ್ಚೇನೂ ವ್ಯತ್ಯಾಸವಿಲ್ಲವೆಂಬುದು ತೋರಿ ಬಂತು, "ನಾಸ್ತಿಕವಾದವೇನೆಂದು ತಿಳಿಯುವುದಕ್ಕೆ ನೀನು ಅದನ್ನು ಕುರಿತು ಆಲೋಚಿಸಿರುವೆ," ಎಂದು ಅವನು ಹೇಳಿದನು. "ದೇವರು ಇಲ್ಲ" ಎಂದು ನಾಸ್ತಿಕರು ಹೇಳುವ ಅಸಹ್ಯವಾದ ಕೊರತೆಯನ್ನು ಮಾತ್ರ ನಾನು ಈ ಪ್ರಬಂಧದಲ್ಲಿ 'ಬದಲಾಯಿಸಿ ಆ ತಿರಸ್ಕೃತ ನುಡಿಯ ಸ್ಥಾನದಲ್ಲಿ ಬ್ರ್ಯಾ

ಷ್ಟೆಯು ಫಲಿಸುವಂತೆ ಬೇರೊಂದು ಅಂಶವನ್ನು ಸೇರಿಸಬೇಕು, ನನ್ನ ಜೀವನದ ಈ ಮಜಲಿನ ವೇಳೆಗೆ ನಾನು ನಾಸ್ತಿಕವಾದಿಯಾಗಿ ಸ್ಥಾಪಿಸಿದ್ದ ವಿಚಾರವನ್ನು ಕುರಿತು ವ್ಯಕ್ತವಾಗಿ ಹೇಳಬೇಕಿದೆ, ಹಾಗಲ್ಲದಿದ್ದರೆ ನಾನು ತತ್ವಜ್ಞಾನಿ(Theosophist)ಯಾಗಿ ಮಾರ್ಪಟ್ಟ ರೀತಿಯೆಂತೆಂಬುದನ್ನು ವಿಶದವಾಗಿ ಹೇಳಿದಂತಾಗುವುದಿಲ್ಲ, ಈ ಎಲ್ಲಾ ವಿಚಾರವು ನನ್ನನ್ನು ಆಧ್ಯಾತ್ಮ ವಿದ್ಯೆಯ ಕಡೆಗೆ ಒಯ್ಯುವುದು, ಕೆಲವು ಓದುಗರಿಗೆ ಈ ವಿಷಯಗಳು ಕೇವಲ ಬೂಟಕತೆಯಂತೆ ತೋರೀತು, ಆದರೆ ಆತ್ಮದ ವಿಕಾಸವು ಹೀಗಾಗುವುದರಿಂದ ಯಾರಾದರೂ ತಿಳಿದುದಾದರೆ ಅಂದಿನವನು ಆತ್ಮವು ಅದರ ಉತ್ಕ್ರಾಂತಿಯ ಸಮಯದಲ್ಲಿ ಎದುರಿಸುವ ಸಮಸ್ಯೆಯನ್ನೆ ಎದುರಿಸಬೇಕಾಗುತ್ತದೆ. ತತ್ವವಾದಿಯಾದ ನಾಸ್ತಿಕನನ್ನು ತುಂಬಾ ಅವಿಚಾರದಿಂದ ಕಾಣುವುದರಿಂದ ವಿಷಯಗಳನ್ನು ಸುವ್ಯಕ್ತವಾಗಿ ನಿರೂಪಿಸಬೇಕಾದ ಅವಶ್ಯಕತೆಯಿದೆ, ತತ್ವಜ್ಞಾನಿಯು ಅದನ್ನು ಓದಿದಾಗ ಮಾನವನು ಇನ್ನೂ ತಿಳಿಯಲು ಇರುವ ಅತಿ ಉನ್ನತವಾದ ಆತ್ಮವಿದ್ಯೆಯನ್ನು ಪ್ರತಿಪಾದಿಸುವ ಆ ಜ್ಞಾನಾಧಿಕ್ಯವನ್ನು ತಾನು ನಂಬಿದ್ದ ಆ ಬ್ರಹ್ಮವಿದ್ಯಾಶಾಸ್ತ್ರವು ಅದೆಷ್ಟು ಗಂಭೀರವಾಗಿ ಪ್ರತಿಪಾದಿಸಿದೆಯೆಂಬುದನ್ನರಿಯುವನು,

ನನ್ನ ಹಿಂದಿನ ನೆನಪುಗಳನ್ನು ಇಂದಿನ ಅಭಿಪ್ರಾಯಗಳಿಂದ ಮಿಶ್ರಗೊಳಿಸದೆ ನಾನು ನಾಸ್ತಿಕತೆಯನ್ನಪ್ಪಿದಾಗ ಬರೆದ ಲೇಖನಗಳಲ್ಲಿ ಹೇಳಿದ್ದನ್ನೆ ಇಂದೂ ಹೇಳುತ್ತಿರುವೆನಲ್ಲದೆ ಅದೇ ತತ್ವವನ್ನು ಮುಂದಕ್ಕೂ ಅನುಸರಿಸುವೆನು, ಆದುದರಿಂದ ನಾನು ಇಂದು ಹೇಳುತ್ತಿರುವುದನ್ನು ಸಮಗಟ್ಟಲು ಅಂದಿನ ನನ್ನ ಪ್ರತಿಪಾದನೆಗಳನ್ನು ಮಿಶ್ರಗೊಳಿಸುವೆನೆಂದು ಯಾರೂ ಆರೋಪಿಸಬಾರದು.

ಭಾಗ - A 12.74

ಆನಿ ಬೆಸೆಂಟ್.

(ಆತ್ಮಚರಿತ್ರೆ - ಭಾಷಾಂತರ)

ಮೊದಲ ಭಾಗ.

ಡಿ. ಎಸ್. ಮಠತ್ರೆಕ್ಷಾ.
ವಿಸ್ತ್ರವರ್ ಕೈನಶಾ.
1970.

ಎಲ್ಲ ಹಕ್ಕುಗಳೂ ಕಾಯ್ದಿಡಲ್ಪಟ್ಟಿವೆ.